# ರಾಜಾಮಲಯಸಿಂಹ

(ಎರಡನೆಯ ಭಾಗ)

★

ಶ್ರೀ ಶ್ರೀನಿವಾಸಾಚಾರ್ಯ

★

ಅಶೋಕ ಸಾಹಿತ್ಯ, ಬೆಂಗಳೂರು-2

UNIVERSAL
LIBRARY
OU_200340
UNIVERSAL
LIBRARY

OSMANIA UNIVERSITY LIBRARY

Call No. K 83 Accession No. K 4462

Author S77R Vol. III

Title

This book should be returned on or before the date last marked below.

'ಅಶೋಕ ಸಾಹಿತ್ಯ'ದಲ್ಲಿ ಪ್ರಥಮ ಪ್ರಕಟಣೆ 1954
(Copy Right : ANAND BROTHERS, Bangalore)

ಮುಖಚಿತ್ರ
ಎಂ. ಟಿ. ವಿ. ಆಚಾರ್ಯ

ಮಾರಾಟದ ಪೂರ್ಣ ಹಕ್ಕುದಾರರು:
ಸ್ಟ್ಯಾಂಡರ್ಡ್ ಬುಕ್ ಡಿಪೋ
ಅವೆನ್ಯೂ ರೋಡ್ : : ಬೆಂಗಳೂರು-2

ಮುದ್ರಣ
ಹೆಚ್. ಎಸ್. ಸುಬ್ಬರಾವ್
ಚೇತನಾ ಪ್ರಿಂಟರ್ಸ್, ಗಾಂಧಿನಗರ,
ಬೆಂಗಳೂರು-2

|| ಶ್ರೀ ||

# ರಾಜಾಮಲಯಸಿಂಹ

## ಇಪ್ಪತ್ತೆಂಟನೆಯ ಅಧ್ಯಾಯ

### ಫಲಾಹಾರ

ಸುಖಾವಾಸವೆಂಬುದು ಅಮರಪುರದಲ್ಲಿ ಒಂದು ದೊಡ್ಡ ಮನೆ. ಅದನ್ನು ರಾಜಸಿಂಹನು ಕಟ್ಟಿಸಿ ಅಲ್ಲಿ ವಾಸಮಾಡುತ್ತಿದ್ದನು. ಮುಂಭಾಗದಲ್ಲಿ ರಾಜಬೀದಿ; ಮಿಕ್ಕ ಮೂರು ಕಡೆಗಳಲ್ಲಿ ತೋಟ; ಅವನ ಪತ್ನಿಯಾದ ರಾಧಾಬಾಯಿಯ ಜಾಣ್ಮೆಯಿಂದ ಮನೆಯೂ ತೋಟವೂ ನೋಡುವವರೆಲ್ಲರಿಗೂ ಆನಂದವನ್ನುಂಟುಮಾಡುವಂತೆ ಅಚ್ಚು ಮೆಚ್ಚಾಗಿದ್ದುವು.

ಉದಯಸಿಂಹನು ಒಬ್ಬನೇ ಮಗನಾದುದರಿಂದ ತಂದೆತಾಯಿಗಳು ಅವನನ್ನು ಅತಿ ಪ್ರೀತಿಯಿಂದ ಸಾಕುತ್ತಲಿದ್ದರು. ಶ್ರೀಮಂತರಾದುದರಿಂದ ಅವನು ಕೇಳುವಷ್ಟು ಧನವನ್ನು ಕೊಟ್ಟು, ಅವನ ಇಷ್ಟದಂತೆ ಬಿಟ್ಟಿದ್ದರು. ಇದೂ ಅಲ್ಲದೆ, ಅವನ ಸ್ನೇಹಿತರು ಧಾರಾಳವಾಗಿ ಬಂದು ಹೋಗುವುದಕ್ಕೆ ಅನುಕೂಲವಾಗಿ ನಾಲ್ಕು ಕೊಟ್ಟಡಿಗಳನ್ನು ಬಿಟ್ಟು ಕೊಟ್ಟಿದ್ದರು.

ಉದಯಸಿಂಹನ ಕೊಟ್ಟಡಿಯಿಂದ ತೋಟಕ್ಕೆ ಹೋಗುವುದಕ್ಕೂ ತೋಟದಿಂದ ಹೆಬ್ಬಾಗಿಲನ್ನು ತೆರೆಯದೆ ಹೊರಗೆ ಹೋಗುವುದಕ್ಕೂ ಎರಡು ದಿಡ್ಡಿಬಾಗಿಲುಗಳಿದ್ದುವು. ಒಂದು ಬಾಗಿಲಿನಿಂದ ಮತ್ತೊಂದು ಬಾಗಿಲವರೆಗೆ ಮಾಡಿದ್ದ ಸಣ್ಣ ಕಾಲುಹಾದಿಯ ಉದ್ದಕ್ಕೂ ಎರಡು ಕಡೆಯಲ್ಲಿಯೂ ಕಲ್ಲುಕಂಬಗಳನ್ನು ನಿಲ್ಲಿಸಿ, ಅವುಗಳ ಮೇಲೆ ಕಬ್ಬಿಣದ ಕಂಬಿಗಳನ್ನು ಹಾಕಿ, ಆ ಕಂಬಗಳ ಮೇಲೆ ಅಲಂಕಾರಕ್ಕಾಗಿ ವಾಸನೆಯಾಗಿಯೂ ಮನೋಹರವಾಗಿಯೂ ಇರುವ ಹೂಬಳ್ಳಿಗಳನ್ನು ಹಬ್ಬಿಸಿದ್ದರು, ಅವು ದಪ್ಪವಾಗಿ ಬೆಳೆದಿದ್ದುದರಿಂದ ಇತರರಿಗೆ ಆ ದಾರಿಯಲ್ಲಿ ಓಡಾಡುವವರು ಕಾಣುತ್ತಿರಲಿಲ್ಲ. ಈ ಎರಡು ಬಾಗಿಲುಗಳ ಬೀಗದ ಕೈಗಳು ಉದಯಸಿಂಹನ ಅಂತರಂಗನಾದ ಸೂಕ್ಷ್ಮಬುದ್ಧಿ ಎಂಬ ಊಳಿಗದವನ ಹತ್ತಿರ ಇರುತ್ತ, ರಾತ್ರಿಯಲ್ಲಿ ಸ್ವೈರಿಣಿಯರಾದ ರಮಣಿಯರು ತಮ್ಮ ಸುಸ್ವರದಿಂದ ಕೂಗಿದ ಹೊರತು ಆ ಬಾಗಿಲುಗಳು ತೆರೆಯಲ್ಪಡುತ್ತಿರಲಿಲ್ಲ.

ಮಲಯಸಿಂಹನು ಬರುವನೆಂದು ಉದಯಸಿಂಹನು ಕೈಲಾದವರೆಗೂ ಆ ಕೊಟ್ಟಡಿಗಳನ್ನು ಅಲಂಕರಿಸಿದ್ದನು. ಅವನ ಆಗಮನವು ಸಮಿಾಪಿಸುತ್ತ ಬಂದಹಾಗೆಲ್ಲಾ ಇವನ ಏರ್ಪಾಡುಗಳು ಪೂರೈಸುತ್ತ ಬಂದುವು. ಉದಯ ಸಿಂಹನಿಗೆ ಶ್ರಾವಣಶುದ್ಧನವಮಿಯ ದಿನವೆಲ್ಲಾ ಫಲಾಹಾರದ ಪದಾರ್ಥಗಳನ್ನು ಒದಗಿಸಿಕೊಳ್ಳುವುದರಲ್ಲಿಯೇ ಆಯಿತು. ದಶಮಿಯ ದಿನ ಬೆಳಿಗ್ಗೆ ಮಲಯ ಸಿಂಹನ ಜತೆಯಲ್ಲಿರಲು ತಕ್ಕ ಸ್ನೇಹಿತರು ಕೆಲವರನ್ನು ಕರೆಯುವುದಕ್ಕೆ ಸುಮಾರು ಎಂಟುಗಂಟೆಯವರೆಗೆ ಹೋಗಿದ್ದು ಸತ್ಕಾರಕ್ಕೆ ಸಿದ್ಧಪಡಿಸಿ ಕೊಂಡನು.

ಬೆಳಿಗ್ಗೆ ಸುಮಾರು ಒಂಭತ್ತುವರೆ ಗಂಟೆಯ ಸಮಯದಲ್ಲಿ ಸೂಕ್ಷ್ಮ ಬುದ್ಧಿಯು ಆ ದಿನ ಬಂದ ವೃತ್ತಾಂತ ಪತ್ರಿಕೆಗಳನ್ನೂ ಕಾಗದಗಳನ್ನೂ ತಂದು ಉದಯಸಿಂಹನಿಗೆ ಕೊಟ್ಟನು. ಅವನು ಪತ್ರಿಕೆಗಳನ್ನೆಲ್ಲಾ ಮೇಜಿನಮೇಲೆ ಇಟ್ಟು ವಾಸನೆ ಹಚ್ಚಿ ಹೆಂಗಸರು ಬರೆದಿದ್ದಂತಿದ್ದ ಎರಡು ಕಾಗದಗಳನ್ನು ಮೊದಲು ತೆಗೆದು ಓದಿ, ಕಿಂಕರನನ್ನು ಕುರಿತು "ಎಲೋ ಸೂಕ್ಷ್ಮಬುದ್ಧಿ! ತಾರಾಬಾಯಿಗೆ ಬೇಕಾದ ಪದಾರ್ಥಗಳನ್ನು ಅಂಗಡಿಯಿಂದ ತಂದುಕೊಡು. ಈ ರಾತ್ರೆ ಎಂಟುಗಂಟೆಗೆ ಅಲ್ಲಿಗೇ ಊಟಕ್ಕೆ ಬರುವೆನೆಂದು ಹೇಳು. ವಿಲಾ ಸಿನಿಯ ಪರಿಚಾರಕನೊಡನೆ ಅವನ ಒಡತಿಯ ಇಷ್ಟದಂತೆ ಈ ರಾತ್ರೆ ನಾಟಕಕ್ಕೆ ಒಂಭತ್ತು ಗಂಟೆಗೆ ಬರುವೆನೆಂದು ಹೇಳಿ ಕಳುಹಿಸು," ಎಂದನು.

"ಮಹಾಸ್ವಾಮಿಾ! ಅಪ್ಪಣೆ; ಫಲಹಾರವು ಎಷ್ಟು ಹೊತ್ತಿಗೆ?"

"ಹತ್ತುಗಂಟೆಗೆ. ತಾಯಿಯವರು ಏನಮಾಡುತ್ತಲಿದ್ದಾರೆ?"

"ನೋಡಿಬರುವೆನು."

"ಹಾಗೆಯೇಮಾಡು; ಬರುವಾಗ ನಾನು ಕೇಳಿದೆನೆಂದು ಹೇಳಿ ಚಿನ್ನದ ದೊಡ್ಡ ತಾಂಬೂಲದ ತಟ್ಟೆಯನ್ನು ತೆಗೆದುಕೊಂಡು ಬಾ."

ಬಳಿಕ ಉದಯಸಿಂಹನು ಗಡಿಯಾರವನ್ನು ನೋಡಿ ಮಲಯಸಿಂಹನ ಆಗಮನಕ್ಕೆ ಇನ್ನೂ ಸಾವಕಾಶವಿರುವುದೆಂದು ತಿಳಿದು ವೃತ್ತಾಂತ ಪತ್ರಿಕೆ ಗಳನ್ನು ಒಂದೊಂದಾಗಿ ಬಿಚ್ಚಿನೋಡಿ, ತಾನು ಕೇಳಿದ್ದ ಪ್ರಸಿದ್ಧವಾದ ಹಲ್ಲು ಪುಡಿಯ ಪ್ರಕಟನೆಯು ಅವುಗಳಲ್ಲಿ ಇಲ್ಲದಿರುವುದನ್ನು ಕಂಡು "ಏಕೋ ಬರುಬರುತ್ತ ಈ ಪತ್ರಿಕೆಗಳು ದರಿದ್ರಗಳಾಗಿ ಹೋದುವು" ಎಂದು ಅವುಗಳ ನ್ನೆಲ್ಲಾ ಒಂದು ಕಡೆ ಬಿಸುಟನು.

ಈ ವೇಳೆಗೆ ಸರಿಯಾಗಿ ಆಳು, "ದಮನಕರು ಬಂದರು" ಎಂದನು; ಕೂಡಲೇ ಆತನೂ ಒಳಕ್ಕೆ ಬಂದನು. ಅವನು ಮೂವತ್ತು ವಯಸ್ಸಿನವನು; ತೆಳ್ಳಗೆ ಉದ್ದವಾಗಿದ್ದನು; ನಡೆನುಡಿಗಳು ರಾಜ್ಯಾಂಗದಲ್ಲಿ ಆತನಿದ್ದ ಮಹತ್ವ ದವಿಯವನ್ನು ತೋರುತ್ತಿದ್ದುವು. ಅವನು ಒಳಗೆ ಬರುತ್ತಲೆ ಉದಯಸಿಂಹನು "ಓಹೋ ದಮನಕ! ಇದೇನು? ಯಾವಾಗಲೂ ಕಡೆಯಲ್ಲಿ ಬರತಕ್ಕವನು ಈ ದಿನ ಎಲ್ಲರಿಗೂ ಮೊದಲು ಬಂದೆ? ನಿಮ್ಮ ಪ್ರಧಾನನು ಕೆಲಸದಿಂದ ನಿವೃತ್ತ ನಾದನೋ?" ಎನ್ನಲು

"ಅಯ್ಯಾ! ನನಗೆ ಬಹಳ ಹಸಿವು, ಆದಕ್ಕಾಗಿ ಜಾಗ್ರತೆಯಾಗಿ ಬಂದೆನು ನಮ್ಮ ಯಜಮಾನನ ಅಧಿಕಾರಕ್ಕೆ ಚ್ಯುತಿಯಿಲ್ಲವೆಂದು ತಿಳಿ. ಅವನು ಯಾವಾ ಗಲೂ ವೇಗವಾಗಿ ನಡೆಯುತ್ತಲಿದ್ದರೂ ಮುಗ್ಗರಿಸಿ ಕೆಳಗೆ ಬೀಳನು"

"ಪಕ್ಕದ ರಾಜ್ಯದ ಅರಸಾದ ದಾನಚರಣನನ್ನು ಓಡಿಸುವ ಪ್ರಯತ್ನ ವೇನಾಯಿತು?"

"ಅವನನ್ನು ನಾವು ಓಡಿಸಲಿಲ್ಲ. ಅತ್ತಲಿಂದ ಸೆರೆತಂದು ಇತ್ತ ಒಂದು ಭದ್ರವಾದ ಕೋಟೆಯಲ್ಲಿ ಮೂರು ದಿನಗಳ ಮುಂಚೆ ಇರಿಸಿ ಹಿಂದೆ ರಾಜ್ಯವಾಳು ತ್ತಿದ್ದ ರಾಜಪಿಂಡೆಯವನೊಬ್ಬನನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿದೆವು."

"ದುರ್ಮತಿಗೆ ಈ ಸಮಾಚಾರವು ಹೇಗೋ ಗೊತ್ತಾಗಿ ಅದರಿಂದ ವಿಶೇಷ ಲಾಭವನ್ನು ಸಂಪಾದಿಸಿದನೆಂದು ಹೇಳುತ್ತಾರೆ; ಅದು ನಿಜವೋ?"

"ನಿಜ. ಅವನಿಗೆ ಇಂತಹ ಸಮಾಚಾರಗಳು ಹೇಗೋ ಪ್ರಧಾನನಿಗಿಂತ ಮೊದಲು ತಿಳಿದು ತನ್ನ ಹತ್ತಿರ ಇದ್ದ ದಾನಚರಣನ ಪತ್ರಗಳನ್ನು ಮಾರಿ ಇದುವರೊ ಬೆಲೆಯಾಗದೆ ಇದ್ದ ಹಳೆಯ ರಾಜರ ಪತ್ರಗಳನ್ನು ಕೊಂಡು ಎರಡು ಲಕ್ಷ ವರಹಗಳನ್ನು ಸಂಪಾದಿಸಿದನು."

"ಅದರಲ್ಲಿ ನಿನಗೇನೂ ಪ್ರಯೋಜನವಾಗಲಿಲ್ಲವೋ?"

"ನನಗೇನು ಪ್ರಯೋಜನ" ಎಂದು ದಮನಕನು ಉದಯಸಿಂಹನ ಮುಖವನ್ನು ದೃಷ್ಟಿಸಿ ನೋಡಿದನು.

"ನಿನ್ನ ಅಂಗಿಯಮೇಲೆ ಹಾಕಿಕೊಂಡಿರುವ ಬಿರುದಿನ ಬಿಲ್ಲೆಯೇ ನಿನ ಗಾದ ಪ್ರಯೋಜನವನ್ನು ವ್ಯಕ್ತಪಡಿಸುತ್ತದೆ."

"ಇದೇನು ಹಣಕಾಸಿಲ್ಲದ ಬರಿಯ ಅಲಂಕಾರ.?"

"ಇಂತಹ ಅಲಂಕಾರಕ್ಕಾಗಿಯೇ ಜನರು ಎಷ್ಟೋ ಹಣವನ್ನು ವೆಚ್ಚಮಾಡಿ ಸರ್ಕಾರದ ಉದ್ಯೋಗಸ್ಥರ ಬಳಿಗೆ ಹೋಗಿ, ನಿಹೀನವಾದ ಸೇವಾ ವೃತ್ತಿಯನ ಕೂಡ ಮಾಡುವರು" ಎಂದು ಉದಯಸಿಂಹನು ಹೇಳುತ್ತಲಿರುವಾಗ, ಆ ಪಟ್ಟಣದ ಮುಖ್ಯ ಪತ್ರಿಕಾಸಂಪಾದಕನಾದ ಭದ್ರಸಿಂಹನು ಬಂದನು. ಅವನು ಉದಯಸಿಂಹ ದಮನಕರಿಬ್ಬರೇ ಇದ್ದುದನ್ನು ನೋಡಿ, "ನನಗೆ ಹಸಿವಾಗುತ್ತ ಲಿದೆ, ಎಷ್ಟು ಹೊತ್ತಿಗೆ ಫಲಾಹಾರ ಮಾಡುವೆವು?" ಎಂದು ಉದಯಸಿಂಹ ನನ್ನು ಕೇಳಿದುದಕ್ಕೆ, "ಹತ್ತು ಗಂಟೆಗೆ," ಎಂದನು.

"ಅದುವರೆಗೆ ಕಾಯಬೇಕೇ ?"

"ಎಲೋ ಭದ್ರಸಿಂಹ! ದಮನಕನ ಪ್ರತಿಕಕ್ಷಿಯಾಗಿದ್ದೂ ನೀನೂ ಅವನಂತೆ ಹೊತ್ತಾಗುತ್ತದೆಂದು ವಿಷಾದಪಡುತ್ತೀಯಾ? ಅವನು ಹಾಗಿದ್ದರೆ ನೀನು ನ್ಯಾಯವಾಗಿ ಉತ್ಸಾಹದಲ್ಲಿರಬೇಕು."

"ಪ್ರತಿಕಕ್ಷಿಯಾಗಿದ್ದರೂ ಅವನಂತೆ ನಾನೂ ಮನುಷ್ಯನೇ. ಹಸಿವನ್ನು ತಡೆಯಲು ಯಾರಿಂದ ಸಾಧ್ಯ? ಈ ದಿನ ಮಧ್ಯಾಹ್ನ ಅರ್ಥಶಾಸ್ತ್ರ ಪರಿಣತ ನಾದ ದುರ್ಮತಿಯು ಧನಾರ್ಜನೆಯ ವಿಚಾರವಾಗಿ ಉಪನ್ಯಸಿಸುವನಂತೆ; ಆ ಉಪನ್ಯಾಸದ ಗುಣದೋಷಗಳನ್ನು ವಿಚಾರಮಾಡಿ ನನ್ನ ಪತ್ರಿಕೆಯಲ್ಲಿ ಪ್ರಕಟಿಸಬೇಕು. ಆದುದರಿಂದ ಬೇಗ ಹೋಗಬೇಕು."

"ಅವನಿಗೆಲ್ಲಿಯ ಶಾಸ್ತ್ರಪರಿಚಯ? ಅದೃಷ್ಟವಿದ್ದುದರಿಂದ ಐಶ್ವರ್ಯ ವಂತನಾದನು; ಐಶ್ವರ್ಯಕ್ಕಾಗಿ ಅವನಿಗೆ ಆ ಬಿರುದು ಬಂದಿತು" ಎಂದು ದಮನಕನು ಹೇಳಲು, ಭದ್ರಸಿಂಹನು "ಅದಕ್ಕಾಗಿಯೇ 'ಪರಿಣತನು' ಎಂದು ನಾನು ಮರ್ಯಾದೆಯಿಂದ ಹೇಳಿದುದು" ಎಂದನು.

"ಅಪ್ಪಾ ಭದ್ರಸಿಂಹ! ಅವನ ಮಗಳನ್ನು ನನಗೆ ಮದುವೆಮಾಡಿ ಕೊಡುವುದಾಗಿ ಏರ್ಪಾಡು ನಡೆಯುತ್ತಲಿದೆ. ನನ್ನ ಮಾವನನ್ನು ನೀನು ಪರಿಹಾಸ್ಯಮಾಡಬಹುದೇ? ಇದೂ ಅಲ್ಲದೆ ಅವನು ನಿನ್ನ ಕಕ್ಷಿಗೇ ಸೇರಿದವನು."

"ನಿಜ, ನಿಜ; ದುರ್ಮತಿಯು ಮಗಳಿಗೆ ಎರಡು ಲಕ್ಷ ವರಹಗಳ ಸ್ತ್ರೀಧ ನವನ್ನು ಕೊಡುತ್ತಾನಂತೆ; ಅದಕ್ಕಾಗಿ ಆ ದುಂದುಭಿಯನ್ನು ನೀನು ಮದುವೆ

ಟುಗುವುದಾಗಿ ಊರೆಲ್ಲ ವರ್ತಮಾನವಿದೆ. ಅವನು ಹಣವನ್ನೇನೋ ತುಂಬ ಸಂಪಾದಿಸಿದ್ದಾನೆ; ದೊರೆಗೆ ವಿಶೇಷವಾಗಿ ಸಾಲಕೊಟ್ಟಿರುವುದರಿಂದ ಅನೇಕ ಮರ್ಯಾದೆಗಳೂ ಬಿರುದುಗಳೂ ಬಂದಿವೆ; ಆದರೂ ಅವನನ್ನು ದೊಡ್ಡ ಮನುಷ್ಯನೆಂದು ಯಾರುತಾನೇ ಗಣಿಸುವರು ?''

"ಅವನು ಹೇಗಿದ್ದರೇನು ? ನಾನು ಅವನ ಮಗಳನ್ನು ಮದುವೆಯಾಗುವೆನಲ್ಲದೆ ಅವನನ್ನು ಜೇರೆ ಮದುವೆಯಾಗುವುದಿಲ್ಲ. ಎರಡು ಲಕ್ಷ ವರಹಗಳು ಸಿಕ್ಕುವುದಾದರೆ ಯಾರು ತಾನೇ ಅವಳನ್ನು ತಿರಸ್ಕರಿಸುವರು ?

ಆಗ ದಮನಕನು ಉದಯಸಿಂಹನನ್ನು ನೋಡಿ ''ಭದ್ರಸಿಂಹನ ಮಾತನ್ನು ನೀನು ಕೇಳಬೇಡ. ಈ ಕಾಲದಲ್ಲಿ ಹಣವೇ ಮುಖ್ಯ. ಅದೊಂದಿದ್ದರೆ ದಡ್ಡನು ಬುದ್ಧಿಮಂತನು; ನೀಚನು ದೊಡ್ಡವನು; ಕಳ್ಳನು ಯೋಗ್ಯನು; ಜಾರೆಯರು ಪತಿವ್ರತೆಯರು.

ಪಣಮುಳ್ಳನನೆ ಕುಲೀನಂ ।
ಗುಣಿ ರೂಪಾಢ್ಯಂ ಸಮಸ್ತವಿದ್ಯಾನಿಪುಣಂ ॥
ಎಣಿಸಲ್ ವಾಗ್ಮಿಯುಮಾತನೆ ।
ಗುಣಮೆಲ್ಲಂ ಜಗದೆ ಪಣಮನಾಶ್ರಯಿಸಿರ್ಕುಂ ॥

ಎಂದಲ್ಲವೆ ಭರ್ತೃಹರಿಯು ಹೇಳಿರುವನು'' ಎನ್ನಲು, ಭದ್ರಸಿಂಹನು,

''ಗುಣ, ನಡತೆ, ಆಚಾರ ವ್ಯವಹಾರ, ಸತ್ಯ, ಇವುಗಳಿಲ್ಲದೆ ಬರಿಯ ಹಣವುಳ್ಳವನ ಜನ್ಮವನ್ನು ಸುಡಬೇಕು. ಅಂಥವನ ಮಗಳನ್ನು ಹಣಕ್ಕಾಗಿ ಮದುವೆಯಾಗುವುದಕ್ಕಿಂತಲೂ, ದುಡ್ಡಿಲ್ಲದ ಶೀಲವಂತನ ಮಗಳನ್ನು ಮದುವೆಯಾಗಿ ಭಿಕ್ಷಬೇಡಿ ಜೀವಿಸುವುದು ಮೇಲು'' ಎಂದನು.

"ಅದಿರಲಿ; ದುರ್ಮತಿಯ ಮಗಳನ್ನು ದುಂದುಭಿಯೆಂದೆಯಲ್ಲಾ, ಅದೇನು ಅವಳ ಹೆಸರೋ ?''

"ಅವಳ ತಂದೆಯು ಅವಳಿಗೆ ವಿಲಾಸಿನಿ ಎಂದು ಹೆಸರಿಟ್ಟಿದಾನೆ; ಆದರೆ ದುರ್ಮತಿಯಾದ ಬಳಿಕ ದುಂದುಭಿ ತಾನೆ!''

ಈ ವೇಳೆಗೆ ''ಮಹಾಸ್ವಾಮಿ! ಚಿತ್ರಸೇನ ಜಯವೀರರು ಬಿಜಯ ಮಾಡಿದರು'' ಎಂದು ಆಳು ಸೂಚಿಸಲು, ಉದಯಸಿಂಹನು "ಜಯವೀರನಾರು?" ಎಂದು ಯೋಚಿಸುವುದರಲ್ಲಿಯೇ ಚಿತ್ರಸೇನನು ಬಂದು,

"ಅಪ್ಪಾ ಉದಯ, ನಿನ್ನ ಸ್ನೇಹಿತನೆಂದು ನೀನು ನನ್ನನ್ನು ಕರೆದೆ; ನಾನು ಜತೆಯಲ್ಲಿ ನನ್ನ ಸ್ನೇಹಿತ ಜಯವೀರನನ್ನು ಕರೆದುಕೊಂಡು ಬಂದೆನು; ಇವನು ನನ್ನ ಪ್ರಾಣವನ್ನು ಕಾಪಿಟ್ಟವನು" ಎಂದನು.

''ನಿನ್ನ ಸ್ನೇಹಿತನು ನಮಗೆಲ್ಲರಿಗೂ ಸ್ನೇಹಿತನೇ'' ಎಂದು ಎಲ್ಲರೂ ಎದ್ದು ಜಯವೀರನಿಗೆ ತಕ್ಕ ಮರ್ಯಾದೆಯನ್ನು ಮಾಡಿ ಪಕ್ಕದಲ್ಲಿ ಕುಳ್ಳಿರಿಸಿಕೊಂಡರು.

"ಏನಪ್ಪಾ ಚಿತ್ರಸೇನ ಇವನು ನಿನ್ನ ಪ್ರಾಣವನ್ನು ಕಾಪಿಟ್ಟನೆಂದು ಹೇಳಿದೆಯಲ್ಲಾ, ಅದೇನು?" ಎಂದು ಭದ್ರಸಿಂಹನು ಕೇಳಲು, ಜಯವೀರನು,

"ಅಂತಹ ದೊಡ್ಡ ಕಾರ್ಯವಾವುದೂ ಇಲ್ಲ; ಚಿತ್ರಸೇನನು ಉತ್ತಮಪುರುಷ ನಾದುದರಿಂದ ತೃಣವನ್ನೂ ಪರ್ವತವನ್ನಾಗಿ ಮಾಡಿ ಹೇಳಿರುವನು'' ಎಂದನು.

"ಅಪ್ಪಾ ಭದ್ರ! ನಡೆದ ಸಂಗತಿಯನ್ನು ಹೇಳುತ್ತೇನೆ. ನಾನು ಉತ್ತಮ ಪುರುಷನೋ ಇವನು ಉತ್ತಮ ಪುರುಷನೋ ನೀನೇ ಹೇಳು. ನಮ್ಮ ಸೈನ್ಯಕ್ಕೂ ಪಿಂಡಾರ ಸೈನ್ಯಕ್ಕೂ ಈಚೆಗೆ ಯುದ್ಧ ನಡೆದ ಸಂಗತಿಯನ್ನು ನೀನು ಬಲ್ಲೆಯಷ್ಟೆ; ಆ ಯುದ್ಧದಲ್ಲಿ ನಾವಿಬ್ಬರೂ ಜತೆಯಲ್ಲಿಯೇ ಇರುತ್ತಲಿದ್ದೆವು. ಒಂದಾನೊಂದು ದಿನ ಏಳೆಂಟು ಪಿಂಡಾರರನ್ನು ನಾನೊಬ್ಬನೇ ತರುಬಿಕೊಂಡು ಹೋದಾಗ ಅವರಲ್ಲಿ ಒಬ್ಬನು ನನ್ನ ಮೇಲೆ ತುಪಾಕಿಯನ್ನು ಹಾರಿಸಿದನು. ಧೈವಾಧೀನದಿಂದ ನನ್ನ ಕುದುರೆಗೆ ಗುಂಡು ತಗಲಿ ಅದು ಸತ್ತು ಬೀಳಲು, ನಾನೂ ಕೆಳಗೆ ಬಿದ್ದೆನು. ನನ್ನ ಬಲಗಾಲು ಕುದುರೆಯ ಅಡಿಗೆ ಸಿಕ್ಕಿ ಜಜ್ಜಿ ಹೋಯಿತು. ಕಷ್ಟದಿಂದ ಏಳುವುದರೊಳಗಾಗಿ, ಆವರು ನನ್ನನ್ನು ಸುತ್ತಿ ಕೊಂಡು ತಮ್ಮ ಕತ್ತಿಗಳನ್ನೆತ್ತಿ ನನ್ನ ತಲೆಯಮೇಲೆ ಬಿಡುವುದರೊಳಗಾಗಿ ಇವನು ಎಲ್ಲಿಂದಲೋ ಓಡಿ ಬಂದು ಅವರ ಕೈಗಳನ್ನು ಒಂದೇ ಪೆಟ್ಟನಲ್ಲಿ ಕಡಿದು ನನ್ನನ್ನು ಎತ್ತಿಕೊಂಡು ಹೋಗಿ ನಮ್ಮ ಸೈನ್ಯದಲ್ಲಿ ಬಿಟ್ಟನು. ಆ ವೇಳೆಯಲ್ಲಿ ಇವನು ಬಾರದಿದ್ದರೆ ನಾನು ಯಮಪಟ್ಟಣವನ್ನು ಸೇರುತ್ತಲಿದ್ದೆನು."

ಚಿತ್ರಸೇನನು ಹೀಗೆನ್ನುತಲೆ, ಜಯವೀರನು "ಅಂದು ಮಾರ್ಗಶಿರ ಶುದ್ಧ ಪಂಚಮಿ; ಹಿಂದೆ ನನ್ನ ತಂದೆಯವರು ತಮ್ಮ ಹಡಗುಗಳೆಲ್ಲಾ ಮುಳುಗಿ, ಹಣವನ್ನಿಟ್ಟದ್ದ ಧನಾಗಾರಗಳೆಲ್ಲಾ ದಿವಾಳಿಯಾಗಿ, ಮಾಡಿದ ಸಾಲಗಳನ್ನು ಹರಿಸಲಾರದೆ, ಮಾನ ಕಳೆದು ಕೊಂಡಿರುವುದಕ್ಕಿಂತಲೂ ಪ್ರಾಣ ಬಿಡುವುದೇ ಲೇಸೆಂದು ಪ್ರಾಣಬಿಡಲು ಸಿದ್ಧರಾಗಿದ್ದಾಗ, ಯಾವನೋ ಒಬ್ಬ ಮಹಾತ್ಮನು

ಯಾರಿಗೂ ತಿಳಿಯದಂತೆ ಸಾಲವನ್ನೆಲ್ಲಾ ತೀರಿಸಿ ವಿಪತ್ತಿನಿಂದ ಉದ್ಧರಿಸಿ ಸಹಾಯಮಾಡಿದನು. ಆದುದರಿಂದ ಪ್ರತಿವರ್ಷವೂ ಆ ದಿನ ನಾನು ಯಾವುದಾದರೂ ಒಂದು ಒಳ್ಳೆಯ ಕೆಲಸವನ್ನು ಮಾಡಬೇಕೆಂದು ಸಂಕಲ್ಪಿಸಿದ್ದೇನೆ" ಎಂದನು.

"ಅಂತಹ ಮಹಾಪುರುಷನಾರಪ್ಪ!" ಎಂದು ಎಲ್ಲರೂ ಕೇಳಲು

"ಅವನಾವನೋ ಗೊತ್ತಿಲ್ಲ".

"ಉಪಕಾರಮಾಡಿದರೆ ಹೀಗೆ ಮಾಡಬೇಕು" ಎಂದು ಎಲ್ಲರೂ ಆಶ್ಚರ್ಯಪಟ್ಟರು

ಆಗ ಭದ್ರಸಿಂಹನು ಉದಯಸಿಂಹನನ್ನು ನೋಡಿ "ಏನಪ್ಪಾ! ನನಗೆ ಹಸಿವು ಎಂದರೆ ಕಥೆಗಳನ್ನು ಹೇಳಿ ಕಾಲಹರಣ ಮಾಡುತ್ತಿರುವುದನ್ನು ನೋಡಿದರೆ ಇನ್ನೂ ಫಲಾಹಾರಕ್ಕೆ ಸಿದ್ಧವಾಗಿಲ್ಲವೆಂದು ತೋರುತ್ತದೆ''ಎಂದನು. ಅದಕ್ಕೆ ಉದಯಸಿಂಹನು "ಇನ್ನೂ ಹತ್ತು ಗಂಟೆಯಾಗಿಲ್ಲ; ನನ್ನನ್ನು ರಕ್ಷಿಸಿದವನೊಬ್ಬ ಮಹಾಪುರುಷನು ಹತ್ತು ಗಂಟೆಗೆ ಸರಿಯಾಗಿ ಇಲ್ಲಿಗೆ ಬರುವೆನೆಂದು ಹೇಳಿದ್ದಾನೆ. ಅದುವರೆಗೆ ಆ ಕಥೆಯನ್ನು ಹೇಳುತ್ತೇನೆ ಕೇಳು'' ಎನ್ನಲು, ದಮನಕನು "ಇಂತಹ ಉಪಕಾರಿಗಳಿಗೆ ನಮ್ಮ ರಾಜನು ವರ್ಷಕ್ಕೊಮ್ಮೆ ಒಂದು ಬಹುಮಾನವನ್ನು ಕೊಡುವ ಏರ್ಪಾಡು ಮಾಡಿದ್ದಾನೆ; ಈ ವರ್ಷ ಆ ಬಹುಮಾನಕ್ಕೆ ಇಬ್ಬರಿರುವುದರಿಂದ ಅದನ್ನು ಯಾರಿಗೆ ಕೊಡುವುದು ?'' ಎಂದನು.

ಒಡನೆಯೇ ಭದ್ರಸಿಂಹನು "ನಿಮ್ಮ ರಾಜನು ಕೊಡುವುದು ತಿಳಿದೇ ಇದೆ; ಯಾವನೋ ಒಬ್ಬ ಅಯೋಗ್ಯನಿಗೆ ತಾನೇ'' ಎನ್ನಲು, ಎಲ್ಲರೂ ಗೊಳ್ ಎಂದು ನಕ್ಕರು.

"ನಿನ್ನ ಪ್ರಾಣದಾತನು ಎಲ್ಲಿಂದ ಬರುವನು" ಎಂದು ದಮನಕನು ಕೇಳಲು ಉದಯಸಿಂಹನು,

"ಅವನು ಆಗ ಇಂದ್ರಪ್ರಸ್ಥದಲ್ಲಿದ್ದನು, ಈಗೆಲ್ಲಿದಾನೆಯೋ ಕಾಣೆ" ಎಂದನು.

"ಅವನು ಬರುವುದು ಖಂಡಿತವೋ ?''

''ಖಂಡಿತವಾಗಿಯೂ ಬರುತ್ತೇನೆಂದು ಹೇಳಿದ್ದಾನೆ:"

"ಅವನ ಕಥೆಯು ನನ್ನ ಪತ್ರಿಕೆಯಲ್ಲಿ ಪ್ರಕಟಿಸಲು ಸ್ವಾರಸ್ಯವಾಗಿದ್ದರೆ

ಹೇಳು" ಎಂದು ಭದ್ರಸಿಂಹನು ಕೇಳಲು,

"ಕಥೆಯನ್ನು ಕೇಳಿದಮೇಲೆ ಸ್ವಾರಸ್ಯವೋ ಇಲ್ಲವೋ ನಿಮಗೆ ಗೊತ್ತಾಗುವುದು."

"ಹಾಗಾದರೆ ಸರಿ."

"ಇಂದ್ರಪ್ರಸ್ಥದ ಉತ್ಸವಕ್ಕೆ ನಾನು ಹೋಗಿದ್ದಾಗ——"

"ಅದನ್ನು ನಾವು ಬಲ್ಲೆವು."

"ಅಲ್ಲಿ ನಾನು ಕಳ್ಳರ ಕೈಗೆ ಸಿಕ್ಕಿಬಿದ್ದುದು ನಿಮಗೆ ತಿಳಿಯದು."

"ಇಂದ್ರಪ್ರಸ್ಥದಲ್ಲಿ ಕಳ್ಳರೇ ಇಲ್ಲ" ಎಂದು ದಮನಕನು ಹೇಳಲು, ಉದಯಸಿಂಹನು

"ಇಲ್ಲದೆ ಏನು ಅನೇಕರಿದ್ದಾರೆ."

"ಅಡಿಗೆಯವನು ಬಡಿಸಿದ ಅರಬೆಂದ ಪದಾರ್ಥವನ್ನು ತಿಂದು ಅಜೀರ್ಣವಾಗಿದ್ದುದರಿಂದ ನೀನು ಎಲ್ಲಿಯೋ ಕಳ್ಳರಿಗೆ ಸಿಕ್ಕಿ ಬಿದ್ದಂತೆ ಕನಸನ್ನು ಕಂಡಿರಬಹುದು."

"ನಾನು ಹೇಳುವುದರಲ್ಲಿ ಎಳ್ಳಷ್ಟಾದರೂ ಸುಳ್ಳಿಲ್ಲ. ಕಳ್ಳರು ನನ್ನನ್ನು ಹಿಡಿದುಕೊಂಡು ಹೋಗಿ ತಮ್ಮ ಯಜಮಾನನಿಗೆ ಒಪ್ಪಿಸಲು, ಅವನು 'ನಾಳೆಯ ಬೆಳಗಾಗುವುದರೊಳಗಾಗಿ ಆರುಸಾವಿರ ವರಹಗಳು ನನ್ನ ಕಯ್ಯಿಗೆ ಬಂದರೆ ಸರಿ; ಇಲ್ಲವಾದರೆ ನಿನ್ನನ್ನು ಪ್ರಾಣದೊಂದಿಗೆ ಬಿಡುವುದಿಲ್ಲ' ಎಂದು ಹೇಳಿದನು. ಆ ಕಳ್ಳರ ಯಜಮಾನನಲ್ಲಿ ಆಡುವುದೊಂದು ಮಾಡುವುದೊಂದಿಲ್ಲವಾದುದರಿಂದ ನಾನು ಒಡನೆಯೇ ವೀರಸಿಂಹನಿಗೆ ಒಂದು ಕಾಗದವನ್ನು ಬರೆದೆನು."

"ವೀರಸಿಂಹನು ಅಷ್ಟು ಹಣವನ್ನು ತೆತ್ತು ನಿನ್ನನ್ನು ಬಿಡಿಸಿಕೊಂಡನೋ?"

"ಇಲ್ಲ ವೀರಸಿಂಹನು ನಾನು ಈಗ ನಿರೀಕ್ಷಿಸುತ್ತಲಿರುವ ಮಹಾತ್ಮನನ್ನು ಕರೆದುಕೊಂಡು ಬಂದನು."

"ಓಹೋ. ಅವನೇನು ಭೀಮಸೇನನೋ! ತನ್ನ ಗದೆಯಿಂದ ಕಳ್ಳರನೆಲ್ಲಾ ಸದೆದು ನಿನ್ನನ್ನು ಬಿಡಿಸಿಕೊಂಡು ಬಂದನೋ?"

"ಅವನು ಭೀಮಸೇನನೂ ಅಲ್ಲ, ಅವನಲ್ಲಿ ಗದೆಯೂ ಇಲ್ಲ; ನನ್ನಂತೆಯೇ ಅವನೂ ಮನುಷ್ಯನೇ, ಅದರೂ ಅವನು ಕಳ್ಳರ ಯಜಮಾನನ ಸಂಗಡ ಒಂದೆರಡು ಮಾತನ್ನಾಡಲು ನನಗೆ ಬಂಧವಿಮೋಚನೆಯಾಯಿತು."

"ಆಮೇಲೆ ಆ ಕಳ್ಳನು ನಿನ್ನ ರಕ್ಷಕನಲ್ಲಿ ಅಪರಾಧ ಕ್ಷಮಾಪಣೆಯನ್ನು ಮಾಡಿಕೊಂಡನೋ?"

"ಹೂಂ."

"ನಿನ್ನ ರಕ್ಷಕನ ಹೆಸರೇನು?"

"ರಾಜಾಮಲಯಸಿಂಹ."

"ಅಂತಹ ರಾಜನು ಇದ್ದರೆ ನನಗೆ ಗೊತ್ತಿರಬೇಕು, ಆ ಹೆಸರಿನವನು ಯಾವನೂ ಇಲ್ಲ" ಎಂದು ದಮನಕನು ಹೇಳಿದನು. ಚಿತ್ರಸೇನನು "ನನಗೆ ಎಲ್ಲಾ ರಾಜರ ಹೆಸರುಗಳೂ ಗೊತ್ತು; ಆದರೂ ಅಂತಹ ಹೆಸರನ್ನು ಎಂದೂ ಕೇಳಿದುದಿಲ್ಲ. ಅವನ ವಿಷಯವನ್ನು ಯಾರಾದರೂ ಬಲ್ಲಿರೋ" ಎಂದನು. ಆಗ ಜಯವೀರನು "ನಾನು ಸ್ವಲ್ಪ ಕೇಳಿ ಬಲ್ಲೆ; ನಾವಿಕ ಸೈಂಧವನೆಂಬವನೊಬ್ಬನು ಮಲಯದ್ವೀಪವನ್ನು ಬೆಲೆಗೆ ಕೊಂಡು ಅಲ್ಲಿಯ ಗುಹೆಯೊಂದನ್ನು ತನ್ನ ವಾಸಕ್ಕೆ ಅನುಕೂಲವಾಗಿ ಮಾಡಿಕೊಂಡಿದ್ದಾನೆಂದು ನಮ್ಮ ನಾವಿಕನೊಬ್ಬನು ಹೇಳಿದ್ದನು- ಬಹುಶಃ ಅವನು ಆ ದ್ವೀಪಕ್ಕೆ ರಾಜನಾಗಿರಬಹುದು"ಎಂದನು.

"ಹಾಗಾದರೆ ಅವನು ಬಲು ಹಣಗಾರನಾಗಿರಬೇಕು."

"ಅಪ್ಪಾ ದಮನಕ! ನೀನು ಯವನಯಾಮಿನೀವಿನೋದಗಳಲ್ಲಿ ಅಲ್ಲಿಬಾಬನ ಕಥೆಯನ್ನು ಕೇಳಿ ಬಲ್ಲೆಯೋ"ಎಂದು ಉದಯಸಿಂಹನು ಕೇಳಲು, "ಇದೇನು ಮಾತು? ಪಾಠಶಾಲೆಗೆ ಹೋಗುವ ಪ್ರತಿಯೊಬ್ಬ ಸಣ್ಣ ಹುಡುಗನೂ ಅದನ್ನು ಬಲ್ಲನು" ಎಂದನು.

"ಇವನಿಗೂ ಅಲ್ಲಿಬಾಬನಿಗೆ ಸಿಕ್ಕಿದಂತೆ ಒಂದು ಗುಹೆಯೂ ಅಪರ ತುಂಬ ಧನವೂ ಸಿಕ್ಕಿರುವುವು."

'ನೀನು ಆ ಗುಹೆಯನ್ನು ನೋಡಿದ್ದಿಯೋ?'

"ನಾನು ನೋಡಿಲ್ಲ, ವೀರಸಿಂಹನು ನೋಡಿದ್ದಾನೆ. ನಿಮ್ಮ ಧರ್ಮಕ್ಕೆ ಆ ರಾಜನಮುಂದೆ ಎಲ್ಲಿಯಾದರೂ ಈ ಪ್ರಸ್ತಾಪವನ್ನು ಮಾಡೀರಿ, ಜೋಕೆ. ಕಣ್ಣನ್ನು ಕಟ್ಟಿ ವೀರಸಿಂಹನನ್ನು ಆ ಗುಹೆಯೊಳಗೆ ಕರೆದುಕೊಂಡು ಹೋಗಿದ್ದರಂತೆ" ಎಂದು ಪ್ರಾರಂಭಿಸಿ ಅವನು ಅಲ್ಲಿ ಅನುಭವಿಸಿದುದನ್ನೂ, ಅನಂತರ ಇಂದ್ರಪ್ರಸ್ಥದಲ್ಲಿ ನಡೆದುದನ್ನೂ ಆದ್ಯೋಪಾಂತವಾಗಿ ಹೇಳಿದನು. ಆಗ "ಉದಯಸಿಂಹನಿಗೇನಾದರೂ ಹುಚ್ಚು ಹಿಡಿಯಿತೋ" ಎಂದು ಅವರೆಲ್ಲರೂ

ಅವನ ಮುಖವನ್ನು ನೋಡುತ್ತಿರಲು, ಜಯವೀರನು "ನಮ್ಮ ನಾವಿಕನಿಂದ ನಾನೂ ಹೀಗೆಯೇ ಕೇಳಿದ್ದೆನು" ಎಂದನು.

"ಸ್ವಾಮಿ ಜಯವೀರರೆ! ನೀವಿಲ್ಲದಿದ್ದರೆ ಇವರು ನನ್ನನ್ನು ಹುಚ್ಚನೆಂದೇ ಹೇಳಿಬಿಡುತ್ತಲಿದ್ದರು" ಎಂದು ಉದಯಸಿಂಹನು ಹೇಳಲು, ದಮನಕನು "ನಾನು ಅದನ್ನು ನಂಬುವುದಿಲ್ಲ; ಅದು ಹಾಗಿರಲಿ. ಆ ಯವನದೇಶದ ಯುವತಿಯನ್ನು ನೋಡಿದೆಯೋ?" ಎನ್ನಲು ಉದಯಸಿಂಹನು "ಒಂದುದಿನ ಅವಳನ್ನು ನಾಟಕಶಾಲೆಯಲ್ಲಿ ನೋಡಿದ್ದೆನು. ಅವನ ಮನೆಗೆ ಊಟಕ್ಕೆ ಹೋಗಿದ್ದಾಗ ಅಲ್ಲಿ ಅವಳ ಸಂಗೀತವನ್ನುಕೂಡ ಸ್ವಲ್ಪ ಕೇಳಿದೆನೆಂದು ಆಗಲೇ ಹೇಳಲಿಲ್ಲವೇ"ಎಂದನು.

"ನಿಮ್ಮ ರಾಜನೂ ನಮ್ಮಂತೆಯೇ ಊಟಮಾಡುತ್ತಾನೆ."

"ಅವನು ಸ್ವಲ್ಪವೇ ಊಟಮಾಡುತ್ತಾನೆ."

"ಹಾಗಾದರೆ ಅವನು ಒಂದು ಪಿಶಾಚಿ."

"ಇಂದ್ರಪ್ರಸ್ಥದ ಗಂಗಾಬಾಯಿಯೂ ಹೀಗೆಯೇ ಹೇಳಿದಳು."

"ಸರಿ ಸರಿ. ಈಗ ಅವನ ಸಮಾಚಾರ ಗೊತ್ತಾಯಿತು. ದೊಡ್ಡ ಕಣ್ಣು; ಅದರತಾರಕೆಯನ್ನು ಇಷ್ಟಬಂದಂತೆ ದೊಡ್ಡದನ್ನೂ ಸಣ್ಣದನ್ನೂ ಮಾಡುವನು. ಮುಖವು ಸ್ವಲ್ಪ ಉದ್ದ; ಅಗಲವಾದ ಹಣೆ; ಸೀಸದಬಣ್ಣ; ಕಪ್ಪು ಕೂದಲು; ಬಿಳಿಯ ಹಲ್ಲು; ವಿಪರೀತ ವಿನಯ; ಇದೆಲ್ಲಾ ನಿಜ ತಾನೆ''ಎಂದು ದಮನಕನು ಕೇಳಲು, ಉದಯಸಿಂಹನು "ಭಲಾ, ಭಲಾ! ಅವನನ್ನು ಬಹು ಸರಿಯಾಗಿ ವರ್ಣಿಸಿದೆ"ಎಂದನು.

"ಅವನಿಗೆ ತಲೆಯಲ್ಲಿ ಕೊಂಬಿರುವುದೋ" ಎಂದು ಒಬ್ಬನೂ "ಅವನಿಗೆ ಹಜ್ಜೆಗಳು ಹಿಂದಿರುಗಿರುವುವೋ"ಎಂದು ಒಬ್ಬನೂ, "ಅವನು ಭೂಮಿಯಲ್ಲಿ ನಡೆಯುವನೋ ಅಥವಾ ಗಾಳಿಯಲ್ಲಿ ಹಾರುವನೋ"ಎಂದು ಮತ್ತೊಬ್ಬನೂ ಕೇಳಲು ಉದಯಸಿಂಹನು "ನೀವೆಲ್ಲರೂ ಅವನನ್ನು ನೋಡದಿರುವುದರಿಂದ ಈಗ ಹೀಗೆ ಹಾಸ್ಯಮಾಡುತ್ತೀರಿ; ನೋಡಿದಾಗ ನೀವೇ ಆಶ್ಚರ್ಯಪಡುತ್ತೀರಿ" ಎಂದನು.

ಆಗ ಚಿತ್ರಸೇನನು "ನೀವುಗಳೆಲ್ಲಾ ಹೇಳುವುದು ಹಾಗಿರಲಿ; ಆ ಕಳ್ಳನ ಸಹವಾಸವಿಲ್ಲದಿದ್ದರೆ ಅವನು ನಿಜವಾಗಿಯೂ ದೊಡ್ಡ ಮನುಷ್ಯನೆಂದು ನಾನು ಹೇಳುತಲಿದ್ದೆ"ಎಂದನು.

‘‘ಕಳ್ಳರೂ ಸುಳ್ಳು, ಪಿಶಾಚನೂ ಸುಳ್ಳು, ರಾಜನೂ ಸುಳ್ಳು; ಇವುಗಳನ್ನೆಲ್ಲಾ ನೀನು ಸ್ವಪ್ನದಲ್ಲಿ ಕಂಡುದೇ ಹೊರತು ಮತ್ತೆ ಬೇರೆ ಇಲ್ಲ. ಇದೋ ಗಡಿಯಾರದಲ್ಲಿ ಹತ್ತುಗಂಟೆ ಬಡಿಯುತ್ತಿದೆ; ಫಲಾಹಾರವಾಗಿದ್ದರೆ ಕೊಡು; ಇಲ್ಲವಾದರೆ——”ಎಂದು ದಮನಕನು ಹೇಳುವುದರೊಳಗಾಗಿಯೇ, ‘‘ರಾಜಾ ಮಲಯಸಿಂಹರು ಬಿಜಯಮಾಡಿಸಿದರು” ಎಂದು ಆಳು ಹೇಳಿದನು. ಆ ಹೆಸರನ್ನು ಕೇಳುತ್ತಲೆ ಎಲ್ಲರೂ ಬೆಚ್ಚಿಬಿದ್ದರು.

ಮಲಯಸಿಂಹನು ಮುಗುಳುನಗೆಯನ್ನು ಬೀರುತ್ತ ಒಳಗೆ ಬಂದು ಉದಯಸಿಂಹನೊಡನೆ ಕುಶಲಪ್ರಶ್ನೆಯನ್ನು ಮಾಡಿ ‘‘ನಾನು ಬರುವುದು ಅರ್ಧನಿಮಿಷ ಸಾವಕಾಶವಾಯಿತು; ಕ್ಷಮಿಸಬೇಕು. ಐನೂರು ಮೈಲಿಗಳ ದೂರ ಒಂದೇಸಾರಿ ಪ್ರಯಾಣಮಾಡುವುದು ಬಾಯಮಾತೇ”ಎಂದನು.

‘‘ಐನೂರು ಮೈಲಿಗಳೇ!”ಎಂದು ಎಲ್ಲರೂ ಆಶ್ಚರ್ಯಪಟ್ಟರು.

“ಸ್ವಾಮಿ ರಾಜರೇ, ನನ್ನ ಸ್ನೇಹಿತರಾದ ದೊಡ್ಡ ಮನುಷ್ಯರನ್ನು ತಮ್ಮ ಜತೆಯಲ್ಲಿ ಫಲಹಾರ ಮಾಡಲು ಕರೆದೆನು. ತಮ್ಮ ಅಪ್ಪಣೆಯನ್ನು ನಿರೀಕ್ಷಿಸಿ ಅವರ ಪರಿಚಯವನ್ನು ತಮಗೆ ಮಾಡಿಕೊಡುವೆನು. ಇವರೇ ದಮನಕರು, ಇಲ್ಲಿಯ ಪ್ರಧಾನನಿಗೆ ದಕ್ಷಿಣಭುಜವೆಂದೆನಿಸಿಕೊಂಡಿದ್ದಾರೆ; ಇವರು ಈ ಪಟ್ಟಣದಲ್ಲಿ “ಸಿಂಹನಾದ” ವೆಂಬ ಮುಖ್ಯ ಪತ್ರಿಕಾಪ್ರಕಾಶಕರಾದ ಭದ್ರ ಸಿಂಹರು, ಇವರ ಪತ್ರಿಕೆಯೆಂದರೆ ರಾಜಾಂಗವು ಗಡಗಡನೆ ನಡುಗುವುದು; ಇವರು ಶ್ರೀಮಂತರಲ್ಲಿ ಅಗ್ರೇಸರರಾದ ಚಿತ್ರಸೇನರು, ಬಲು ದೊಡ್ಡ ವಂಶಕ್ಕೆ ಸೇರಿದವರು; ಇವರು ಧನಕೋಟಿಯವರ ಕುಮಾರ ಜಯವೀರರು, ಯುದ್ಧ ದಲ್ಲಿ ನಿಪುಣರು.’’ ಹೀಗೆಂದು ಅವರವರ ಹೆಸರನ್ನು ಹೇಳಿದಾಗೆಲ್ಲಾ ಅವರವರಿಗೆ ಸುಮ್ಮನೆ ಕೈ ಮುಗಿಯುತ್ತಲಿದ್ದ ಮಲಯಸಿಂಹನು ಜಯವೀರನ ಹೆಸರನ್ನು ಕೇಳಿನಗುತ್ತ, “ಓಹೋ, ನೀವು ಈಗಿನ ದೊರೆಯ ಸೈನ್ಯವನ್ನು ಸೇರಿದ್ದೀರೋ’’ ಎಂದನು.

“ಇವರು ಉತ್ಕೃಷ್ಟ ಹೃದಯರೂ ಧೈರ್ಯಶಾಲಿಯೂ ಆದುದರಿಂದ ಸೈನ್ಯದಲ್ಲಿ ಸೇರಿರುವುದು ನ್ಯಾಯವೇ’’ ಎಂದು ಉದಯಸಿಂಹನು ಹೇಳಲು, ಜಯವೀರನು “ಇಷ್ಟು ಸ್ತೋತ್ರಕ್ಕೆ ನಾನು ಅರ್ಹನಲ್ಲ; ದಯವಿಟ್ಟು ತಾವು ಸುಮ್ಮನಿರಬೇಕು’’ ಎಂದನು.

ಉದಯಸಿಂಹನು "ಕ್ಷಮಿಸಿ'' ಎಂದು ಹೇಳಿ, ಮಲಯಸಿಂಹನ ಕಡೆಗೆ ತಿರುಗಿ "ಇವರು ಚಿತ್ರಸೇನನಿಗೆ ಮಹೋಪಕಾರವನ್ನು ಮಾಡಿದರು'' ಎಂದು ಆ ವಿಷಯವನ್ನು ವಿಶದವಾಗಿ ಹೇಳಲು, ಮಲಯಸಿಂಹನು "ಸಂತೋಷ; ಹಾಗೆ ಉಪಕಾರ ಮಾಡುತ್ತಿದ್ದರೆ ದೇವರು ತಕ್ಕ ಪ್ರತ್ಯುಪಕಾರವನ್ನು ಮಾಡದೆ ಇರಲಾರನು" ಎಂದನು.

ಆಗ ಭದ್ರಸಿಂಹನು ಚಿತ್ರಸೇನನನ್ನು ಕುರಿತು "ಈ ರಾಜನಿಗೆ ಉದಯಸಿಂಹನ ಮಾತಿನಲ್ಲಿ ಅನುಮಾನವಿರುವಂತೆ ಕಾಣುತ್ತದೆ, ಅದೇತಕ್ಕೆ'' ಎಂದು ಕೇಳಲು, ಅವನು ''ಜಯವೀರನ ವಿಷಯವಾವುದೂ ತಿಳಿಯದಾದುದರಿಂದ ಅವನು ಹಾಗೆ ಹೇಳಿರಬಹುದು ; ಸಾಧಾರಣವಾಗಿ ಒಬ್ಬ ಮನುಷ್ಯನ ಮುಖವನ್ನು ನೋಡಿದರೆ ಅವನ ಗುಣಾವಗುಣಗಳನ್ನೂ, ಸಂಗಡ ಕೆಲವು ಮಾತನ್ನಾಡಿದರೆ ಯೋಗ್ಯತೆಯನ್ನೂ, ಕಂಡುಹಿಡಿಯಬಹುದು. ಈ ರಾಜನನ್ನು ನೋಡಿದರೆ ಉದಯಸಿಂಹನು ಹೇಳುತ್ತಿದ್ದುದೆಲ್ಲಾ ನಿಜವೆಂದೇ ತೋರುತ್ತದೆ ; ಏನಪ್ಪಾ ಜಯವೀರ, ಈ ವಿಷಯದಲ್ಲಿ ನಿನ್ನ ಅಭಿಪ್ರಾಯವೇನು'' ಎಂದನು ;

''ಮಲಯಸಿಂಹನು ದೊಡ್ಡ ಮನುಷ್ಯ ; ನಿಷ್ಕಪಟಿ."

ಈ ವೇಳೆಗೆ ಸೂಕ್ಷ್ಮಬುದ್ಧಿಯು ಬಂದು "ಫಲಾಹಾರಕ್ಕೆ ಎಲ್ಲವೂ ಸಿದ್ಧವಾಗಿದೆ" ಎಂದು ಸೂಚಿಸಲು, ಉದಯಸಿಂಹನು ಎಲ್ಲರಿಗೂ ಕೈ ಕಾಲುಗಳಿಗೆ ನೀರು ಕೊಟ್ಟು ಭೋಜನಶಾಲೆಗೆ ಕರೆದುಕೊಂಡು ಹೋಗಿ, ಕುಳ್ಳಿರಿಸಿದನು. ಆಗ ಮಲಯಸಿಂಹನು ಎಲ್ಲರನ್ನೂ ನೋಡಿ, "ನನ್ನದೊಂದರಿಕೆ ; ನಾನು ಪರದೇಶದವನು, ಇತ್ತಕಡೆ ಎಂದೂ ಬಂದವನಲ್ಲ ; ಇಲ್ಲಿಯ ಆಚಾರ ವ್ಯವಹಾರ ಸಂಪ್ರದಾಯಗಳಾವುವೂ ತಿಳಿಯವು ; ಏನಾದರೂ ಲೋಪವಾದರೆ ತಾವುಗಳು ಕ್ಷಮಿಸಬೇಕು" ಎಂದು ವಿನಯದಿಂದ ಕೇಳಿಕೊಂಡನು.

ಭದ್ರಸಿಂಹನು ಈ ಮಾತನ್ನು ಕೇಳಿದ ಒಡನೆಯೇ ದಮನಕನನ್ನು ನೋಡಿ "ಇವನು ದೊಡ್ಡ ಮನುಷ್ಯನಲ್ಲದಿದ್ದರೆ ಈ ಮಾತು ಹೊರಡುತ್ತಿರಲಿಲ್ಲ" ಎನ್ನಲು, ಅವನು "ಇವನ ದೇಶದಲ್ಲಿಯೋ" ಎಂದು ಕೇಳಿದನು. "ಅದೇನು ಹಾಗೆನ್ನುತ್ತಿ ? ದೊಡ್ಡಮನುಷ್ಯನು ಎಲ್ಲೆಲ್ಲಿಯೂ ದೊಡ್ಡಮನುಷ್ಯನೇ" ಎಂದನು.

"ಅತಿ ವಿನಯಂ ಧೂರ್ತಲಕ್ಷಣಂ, ಎಂಬ ಗಾದೆಯು ನನಗೆ ಜ್ಞಾಪಕಕ್ಕೆ ಬರುತ್ತದೆ."

"ಈ ಮಾತಿಗೆ ನಾನೊಪ್ಪುವುದಿಲ್ಲ."

ಉದಯಸಿಂಹನು ಮಲಯಸಿಂಹನನ್ನು ಕುರಿತು ನಾನು ಆದರಪೂರ್ವಕ ಅರ್ಪಿಸುವ ಇವುಗಳನ್ನು ತಾವು ದಯೆ ಮಾಡಿ ಸ್ವೀಕರಿಸಬೇಕು" ಎಂದು ಪ್ರಾರ್ಥಿಸಲು, ಅವನು "ಸ್ವಾಮಿ, ನನ್ನ ಸಮಾಚಾರವನ್ನು ನೀವು ಅರಿಯಿರಾ ? ಇದೇನು ಹೀಗೆ ಹೇಳುತ್ತೀರಿ ? ಸರ್ವದಾ ಪ್ರಯಾಣ ಮಾಡುತ್ತಿರುವವನು ಯಾವ ತಿಂಡಿ ಸಿಕ್ಕಿದರೂ ತಿನ್ನಬೇಕು, ಇಲ್ಲದಿದ್ದರೆ ಉಪವಾಸ ಮಾಡಬೇಕು ; ಹಾಗೆ ಮಾಡದಿದ್ದರೆ ಹೇಗಾದೀತು ? ನಾನು ಮೊನ್ನೆಯ ದಿನ ಊಟ ಮಾಡಿದವನು' ಎಂದನು.

"ಏನಾದರೂ ಅಲ್ಪಾಹಾರವಾಗಿರಲಾರದೇ'' ಎಂದು ದಮನಕನು ಕೇಳಲು, "ಇಲ್ಲ, ಇಲ್ಲ; ಸುಮ್ಮನೆ ಬಂಡಿಯಲ್ಲಿ ನಿದ್ದೆ ಮಾಡಿದೆನು'' ಎಂದನು. "ಹಸಿವಿರುವಾಗ ನಿದ್ದೆ ಬರುತ್ತದೆಯೋ" ಎಂದು ಜಯವೀರನು ಮಾಡಿದ ಪ್ರಶ್ನೆಗೆ "ಹಸಿದಿದ್ದರೂ, ಮಾಡುವುದಕ್ಕೆ ಕೆಲಸವಿಲ್ಲಗಿದ್ದರೂ, ಇರುವ ಕೆಲಸವನ್ನು ಮಾಡುವುದಕ್ಕೆ ಮನಸ್ಸಿಲ್ಲದಿದ್ದರೂ, ನಾನು ನಿದ್ದೆ ಮಾಡುವ ಪದ್ಧತಿ'' ಎಂದನು.

"ಮನಸ್ಸಿಗೆ ತೋರಿದಾಗ ನಿದ್ದೆಮಾಡುವುದು ಹೇಗೆ ? ಏನಾದರೂ ಉಪಾಯವುಂಟೋ ?''

"ಉಂಟು."

"ಈಗ ತಮ್ಮಲ್ಲಿದ್ದರೆ ನನಗೆ ತೋರಿಸಲಾದೀತೇ'' ಎಂದು ಜಯವೀರನು ಕೇಳಲು ಮಲಯಸಿಂಹನು ಚಿನ್ನದ ಕಟ್ಟೂ ಮುಚ್ಚಳವೂ ಇದ್ದ ಪಚ್ಚೆಯ ಸಣ್ಣ ಬುರುಡೆಯುನ್ನು ಅವನಿಗೆ ಕೊಟ್ಟನು. ಅದು ನಿಂಬೆಯ ಹಣ್ಣಿನ ಗಾತ್ರವಿದ್ದ ಅತ್ಯುತ್ಕೃಷ್ಟವಾದ ಪಚ್ಚೆಯಾಗಿದ್ದುದರಿಂದ ಅದನ್ನು ನೋಡಿ ಎಲ್ಲರೂ ಬೆರಗಾದರು.

''ಇವರಲ್ಲಿರುವ ಔಷಧಿಯ ಹೆಸರೇನು ? "ಎಂದು ದಮನಕನು ಕೇಳಿದುದಕ್ಕೆ, ಮಲಯಸಿಂಹನು "ಅದರ ಹೆಸರು 'ಕಲ್ಪವಲ್ಲೀಚೂರ್ಣ' ; ಅದರ ಗುಣವನ್ನು ಉದಯಸಿಂಹರ ಗೆಳೆಯರಾದ ವೀರಸಿಂಹರು ಬಲ್ಲರು" ಎಂದನು.

ಅದಕ್ಕೆ ಉದಯಸಿಂಹನು "ಅಹುದು, ಅಹುದು; ಅವನು ಇದರ ವಿಷಯವನ್ನು ನನಗೊಂದು ಸಾರಿ ತಿಳಿಸಿದ್ದನು" ಎಂದನು.

"ಇಂತಹ ಔಷಧವನ್ನು ಮಾಡುವರಾರು ?-ನಿಮ್ಮ ಪರಿಚಾರಕರೋ ?"

"ನಾನು ಇವುಗಳನ್ನು ಅವರಿಂದ ಮಾಡಿಸುವುದಿಲ್ಲ. ನನಗೆ ಪದಾರ್ಥ ಶಾಸ್ತ್ರದ ಪರಿಚಯವು ಸ್ವಲ್ಪ ಇರುವುದರಿಂದ ನಾನೇ ಮಾಡುವೆನು."

ದಮನಕನು ಆ ಪಚ್ಚೆಯ ಬುರುಡೆಯನ್ನು ನೋಡಿ "ನಾನು ಬಹು ರತ್ನಗಳನ್ನು ನೋಡಿದ್ದೇನೆ, ಆದರೆ ಇಂತಹ ಪಚ್ಚೆಯನ್ನು ಎಂದೂ ಎಲ್ಲಿಯೂ ನೋಡಿಲ್ಲ. ಇನ್ನೂ ಇಂಥವು ತಮ್ಮಲ್ಲಿ ಇವೆಯೋ" ಎಂದು ಕೇಳಲು ಮಲಯಸಿಂಹನು "ನನ್ನಲ್ಲಿ ಮೂರು ಇದ್ದುವು, ಅವುಗಳಲ್ಲಿ ಒಂದನ್ನು ಒಬ್ಬ ಸುಲ್ತಾನನಿಗೆ ಕೊಟ್ಟೆನು ; ಇನ್ನೊಂದನ್ನು ಇಂದ್ರಪ್ರಸ್ಥದ ರಾಜನಿಗೆ ಕೊಟ್ಟೆನು; ಇದನ್ನು ಈ ಔಷಧಿಯನ್ನಿಡುವ ಬುರುಡೆಯನ್ನಾಗಿ ಮಾಡಿಸಿದೆನು. ಹೀಗೆ ಮಾಡಿಸಿದುದರಿಂದ ಪಚ್ಚೆಯ ಬೆಲೆಯು ಕಡಿಮೆಯಾಯಿತು ; ಆದರೂ ನನಗೆ ಈ ಕೆಲಸಕ್ಕೆ ಅನುಕೂಲವಾಗಿದೆ," ಎಂದನು. ಅದನ್ನು ಕೇಳಿ ಎಲ್ಲರೂ ಆಶ್ಚರ್ಯಪಟ್ಟು ಮಲಯಸಿಂಹನ ಮುಖವನ್ನು ನೋಡಿದರು.

"ನಿಮ್ಮಿಂದ ಈ ಪಚ್ಚೆಗಳನ್ನು ತೆಗೆದುಕೊಂಡ ಅರಸರಿಬ್ಬರೂ ನಿಮಗೇನು ಕೊಟ್ಟರು ?" ಎಂದು ದಮನಕನು ಕೇಳಲು, ಅವನು "ಸುಲ್ತಾನನು ಬಂದಿಯವಳನ್ನೂ, ರಾಜನು ಒಬ್ಬನ ಪ್ರಾಣವನ್ನೂ ಕೊಟ್ಟನು. ನನ್ನ ಆಯುಸ್ಸಿನಲ್ಲಿ ನಾನೂ ಒಂದಾವೃತ್ತಿ ಸಿಂಹಾಸನಾಧಿಪತಿಗಳು ಮಾಡುವ ಕೆಲಸವನ್ನು ಮಾಡಿದೆ" ಎಂದನು.

ಆಗ ಉದಯಸಿಂಹನು "ನನ್ನ ಪ್ರಾಣವನ್ನು ಉಳಿಸಿದುದು" ಎನ್ನಲು ಮಲಯಸಿಂಹನು "ನೀವು ಆ ಪ್ರಸ್ತಾಪವನ್ನು ಮಾಡುವುದಿಲ್ಲವೆಂದು ಹೇಳಿ ಬಿಟ್ಟು ಈಗ ಮರಳಿ ಅದನ್ನು ಎತ್ತುವುದು ನ್ಯಾಯವೊ" ಎಂದನು.

"ನಾನು ಹಾಗೆ ಹೇಳಿರಲಿಲ್ಲ; ನಿಮ್ಮಿಂದ ಉಪಕಾರ ಹೊಂದಿದ್ದ ಇನ್ನಾರಾದರೂ ಹೇಳಿರಬಹುದು. ಆ ಲುಂಗಿಬಂಪನಿಗೆ ತಮ್ಮಲ್ಲಿ ಅಷ್ಟು ಭಯ ಭಕ್ತಿ ಹೇಗೆ ಉಂಟಾಯಿತು"

"ಅವನು ಚಿಕ್ಕವನಾಗಿ ಕುರಿಗಳನ್ನು ಕಾಯುತ್ತಲಿದ್ದಾಗ ನನಗೆ ಸರಿಯಾದ ದಾರಿಯನ್ನು ತೋರಿಸಿದ್ದನು ; ಅದಕ್ಕಾಗಿ ಅವನಿಗೆ ಬಹುಮಾನ

ಮಾಡಿದ್ದೆನು. ಕೆಲವು ವರ್ಷಗಳ ಮೇಲೆ ಪುನಃ ನಾನೂ ಅವನೂ ಕಲೆತಾಗ ಅವನು ಹಿಂದಿನ ಸಮಾಚಾರವನ್ನು ಮರೆತು ನನ್ನನ್ನು ಹಿಡಿಯಲು ಪ್ರಯತ್ನ ಪಟ್ಟನು; ಆದರೆ ನಾನು ಅವನನ್ನೂ ಅವನ ಕಡೆಯ ಕೆಲವರನ್ನೂ ಹಿಡಿದು, ರಾಜನ ವಶಕ್ಕೆ ಕೊಡುವುದಕ್ಕೆ ಬದಲಾಗಿ ಮನ್ನಿಸಿ ಬಿಟ್ಟುಬಿಟ್ಟೆನು. ಅದಕ್ಕಾಗಿ ಅವನು ನನ್ನನ್ನು ಗೌರವಿಸುತ್ತಾನೆ.''

ಅದಕ್ಕೆ ಭದ್ರಸಿಂಹನು "ಇನ್ನು ಮುಂದೆ ಯಾವಾಗಲೂ ಇಂತಹ ಅಕ್ರಮ ಗಳನ್ನು ಮಾಡುವುದಿಲ್ಲವೆಂದು ಮಾತು ತೆಗೆದುಕೊಂಡು ಬಿಟ್ಟರೋ ?"ಎನ್ನಲು

"ಹಾಗೆ ಮಾಡಲಿಲ್ಲ; ನನ್ನ ಗೋಜಿಗೂ ನನ್ನ ಕಡೆಯವರ ಗೋಜಿಗೂ ಬರುವುದಿಲ್ಲವೆಂದು ಪ್ರತಿಜ್ಞೆಯನ್ನು ಮಾಡಿಸಿ ಬಿಟ್ಟುಬಿಟ್ಟೆನು. ನೀವೆಲ್ಲಾ ಉಪಕಾರಿಗಳು; ನಿಮಗೆ ಇದು ವಿಚಿತ್ರವಾಗಿ ತೋರಬಹುದು. ನನಗೆ ಅಪಕಾರವನ್ನು ಮಾಡಿದವರಿಗೆ ನಾನು ಏತಕ್ಕೆ ಉಪಕಾರವನ್ನು ಮಾಡಬೇಕು?" ಎಂದನು.

ಆಗ ದಮನಕನು ''ಭಲಾ, ಭಲಾ! ಆತ್ಮಾಭಿಮಾನೋಪದೇಶ ಮಾಡುವ ವರು ಇಲ್ಲಿ ಯಾರೂ ಇರಲಿಲ್ಲ'' ಎಂದುದಕ್ಕೆ, ಮಲಯಸಿಂಹನು

''ಈ ಲೋಕದಲ್ಲಿ ಆತ್ಮಾಭಿಮಾನಿಯಲ್ಲದವನೇ ಇಲ್ಲ; ನೀವೆಲ್ಲರೂ ಬಾಯಲ್ಲಿ ಹೇಳದಿದ್ದರೂ ಕೆಲಸದಲ್ಲಿ ತೋರಿಸುವಿರಿ."

"ಇದೀಗ ಸರಿಯಾದ ಮಾತು; ಆದರೆ ನೀವು ಮಾಡಿಕೊಂಡಿರುವ ಸಿದ್ಧಾಂತಕ್ಕೆ ವಿರೋಧವಾಗಿ ನೀವೇ ಆಗಾಗ ನಡೆಯುವಂತಿದೆ"ಎಂದು ಜಯ ವೀರನು ಹೇಳಲು, ಮಲಯಸಿಂಹನು ಜಯವೀರನ ಮುಖವನ್ನು ದೃಷ್ಟಿಸಿ ನೋಡಿ ''ಅದು ಹೇಗೆ" ಎಂದನು.

"ಉದಯಸಿಂಹನನ್ನು ತಾವು ಕಾಪಿಟ್ಟುದು ನೀವು ಹೇಳಿದುದಕ್ಕೆ ವಿರೋಧವಲ್ಲವೇ" ಎಂದು ಜಯವೀರನು ಕೇಳಲು, ಉದಯಸಿಂಹನು

"ಸ್ವಾಮಿ ಮಲಯಸಿಂಹರೇ, ನಿಮ್ಮಲ್ಲಿರುವ ಗುಣಗಳನ್ನು ಮುಚ್ಚಿ ಕೊಂಡು ಇಲ್ಲದೆ ಇರುವ ದೋಷಗಳನ್ನು ಆರೋಪಿಸಿಕೊಂಡು ಮಾತನಾಡು ತ್ತೀರಿ, ಅದನ್ನು ನಾನು ಒಪ್ಪುವುದಿಲ್ಲ"ಎನ್ನಲು, ರಾಜನು

''ಇಂದ್ರಪ್ರಸ್ಥದಲ್ಲಿ ನಿಮ್ಮ ಪೇಚಾಟವನ್ನು ನೋಡಿ ಸಹಿಸಲಾರದೆ ನಿಮಗೆ ಸ್ಥಳವನ್ನೂ ಬಂಡಿಯನ್ನೂ ಮಾಡಿಕೊಟ್ಟು, ನಿಮ್ಮನ್ನು ಅತಿಥಿಗಳಂತೆ

ಭಾವಿಸಿದ್ದು, ಆ ಕಳ್ಳನ ಕೈಯಲ್ಲಿ ನಿಮ್ಮನ್ನು ಸಿಕ್ಕಿಸಿಬಿಡುವುದು ಉಚಿತವೇ? ಹೀಗೆ ಮಾಡುವುದರಲ್ಲಿ ನನಗೆ ಪ್ರಯೋಜನವೂ ಇದ್ದಿತು."

"ತಮಗೆ ಪ್ರಯೋಜನವೇನು ?"

"ನಿಮ್ಮ ಸ್ನೇಹವಿಲ್ಲದಿದ್ದರೆ ಈ ದೊಡ್ಡ ಮನುಷ್ಯರ ಸ್ನೇಹವು ನನಗೆ ಹೇಗೆ ಆಗುತ್ತಲಿದ್ದಿತು"

ಇಷ್ಟು ಹೊತ್ತಿಗೆ ಫಲಾಹಾರವು ಮುಗಿಯಿತು. ಎಲ್ಲರೂ ಎದ್ದು ತಮ್ಮ ತಮ್ಮ ಮೊದಲಿನ ಸ್ಥಾನಗಳಲ್ಲಿ ಬಂದು ಕುಳಿತರು. ತಾಂಬೂಲವನ್ನು ಎಲ್ಲರಿಗೂ ಕೊಡುತ್ತಲಿರುವಾಗ ಉದಯಸಿಂಹನು "ನಾನು ಬ್ರಹ್ಮಚಾರಿ; ಈ ಮನೆಯಲ್ಲಿರುವ ನನ್ನ ಕೊಟ್ಟಡಿಗಳಲ್ಲಿ ರಾಜರಿಗೆ ಅನುಕೂಲವಾದರೆ ಸಂತೋಷ; ಹಾಗೆ ಆಗದಿದ್ದರೆ ಎಲ್ಲಿ ಬಿಡಾರವನ್ನು ಮಾಡೋಣ ?" ಎಂದು ತನ್ನ ಸ್ನೇಹಿತರನ್ನು ಕೇಳಲು, ಮಲಯಸಿಂಹನು "ನೀವು ಇಂದ್ರಪ್ರಸ್ಥದಲ್ಲಿದ್ದಾಗ ನಿಮಗೆ ಜಾಗ್ರತೆಯಾಗಿಯೇ ಮದುವೆಯಾಗುವುದೆಂದು ಹೇಳಿದಂತೆ ನನಗೆ ನೆನಪಿದೆ; ಇನ್ನೂ ಆಗಲಿಲ್ಲವೋ ?" ಎಂದನು.

"ಇನ್ನೂ ಆಗುವುದರಲ್ಲಿಯೇ ಇದೆ."

"ಏರ್ಪಾಡು ಆಗುತ್ತಲಿದೆ ಎಂದರೆ ಆಯಿತೆಂದೇ ಹಣವಂತರಲ್ಲಿ ಲೆಕ್ಕ." ಎಂದು ದಮನಕನು ಹೇಳಲು, ಉದಯಸಿಂಹನು

"ಹಾಗೆ ಹೇಳುವುದು ತಪ್ಪು" ಎಂದನು.

ಆಗ ಮಲಯಸಿಂಹನು "ಕನ್ಯೆಯು ಒಬ್ಬ ಶ್ರೀಮಂತನ ಮಗಳೆಂದು ನೀವು ಹೇಳಿದಂತೆ ಜ್ಞಾಪಕವಿದೆ" ಎನ್ನಲು,

"ಅಹುದು, ದುರ್ಮತಿಗಳ ಮಗಳು" ಎಂದನು.

"ಅವನು ಈಚೆಗೆ ಶ್ರೀಮಂತನಾದವನು."

"ಆದರೇನು ? ನಾನು ಕೇಳಿದುದರಲ್ಲಿ ಆತನು ಉದಯಸಿಂಹರಂತೆ ವಂಶಪಾರಂಪರ್ಯವಾಗಿ ಶ್ರೀಮಂತನಲ್ಲದಿದ್ದರೂ ಸ್ವಸಾಮರ್ಥ್ಯದಿಂದ ವಿಶೇಷ ಧನವನ್ನು ಸಂಪಾದಿಸಿ ಈ ರಾಜ್ಯಕ್ಕೆ ಬಹು ಉಪಕಾರವನ್ನು ಮಾಡಿ ಅನೇಕ ಬಿರುದಗಳನ್ನು ಸಂಪಾದಿಸಿದ್ದಾನೆಂದು ತಿಳಿಯಬಂದಿದೆ" ಎಂದು ಮಲಯಸಿಂಹನು ಹೇಳಲು, ಭದ್ರಸೇನನು

"ಬಹು ಉಪಕಾರ! ಬಹು ಕಷ್ಟಪಟ್ಟು ಸಂಪಾದಿಸಿದ ಬಿರುದುಗಳು!" ಎಂದನು.

"ಅಲ್ಪನಿಗೆ ಐಶ್ವರ್ಯಬಂದರೆ ಅರ್ಧರಾತ್ರಿಯಲ್ಲಿ ಕೊಡೆ ಹಿಡಿದ ಎಂಬ ಗಾದೆಗೆ ಸರಿಯಾಗಿ ನಮ್ಮ ದುರ್ಮತಿಯು ಯಾವಾಗಲೂ ಎಲ್ಲರಿಗೂ ತಿಳಿಯುವಂತೆ ತನ್ನ ಬಿರುದುಗಳನ್ನು ಧರಿಸಿಕೊಳ್ಳುತ್ತಿರುವನು".

"ಅಪ್ಪಾ ದಮನಕ, ನನಗೆ ಮಾವನಾಗುವವನನ್ನು ನೀನು ನನ್ನ ಮುಂದೆ ಹೀಗೆನ್ನುವುದು ಸರಿಯೇ?" ಎಂದು ಹೇಳಿ ಉದಯಸಿಂಹನು ಮಲಯಸಿಂಹನನ್ನು ನೋಡಿ, "ನೀವು ಈಗಾಡಿದ ಮಾತಿನಿಂದ ದುರ್ಮತಿಯನ್ನು ಬಲ್ಲಿರೆಂದು ತೋರುತ್ತದೆ" ಎಂದನು.

"ನಾನು ಅವರನ್ನು ನೋಡಿಲ್ಲ; ಆದರೂ ಶೀಘ್ರದಲ್ಲಿಯೇ ಅವರ ಪರಿಚಯವನ್ನು ಮಾಡಬೇಕಾದ ಸಂಭವವಿದೆ".

"ಅದೇನು?"

"ಧನಾಗಾರಪತಿ ನಂದಕುಮಾರರ ಬಳಿ ನನ್ನ ಹಣವು ಇರುವುದು. ಇಲ್ಲಿ ನನ್ನ ವೆಚ್ಚಕ್ಕಾಗಿ ಸ್ವಲ್ಪ ಹಣವನ್ನು ಶ್ರೀಮಂತ ದುರ್ಮತಿಗಳಲ್ಲಿ ಇಡುವಂತೆ ಹೇಳಿದ್ದೆನು" ಎಂದು ಹೇಳಿ ಜಯವೀರನ ಮುಖವನ್ನು ನೋಡಲು, ಅವನು "ನಂದಕುಮಾರ" ಎಂಬ ಹೆಸರನ್ನು ಕೇಳಿ, ಬೆಚ್ಚಿ, "ಸ್ವಾಮಿಾ, ಮಲಯಸಿಂಹರೇ! ನಂದಕುಮಾರನನ್ನು ನೀವು ಬಲ್ಲಿರೋ?" ಎಂದು ಕೇಳಿದನು.

"ಬಲ್ಲೆ, ಏತಕ್ಕೆ?"

"ಅವರು ಹಿಂದೆ ನಮಗೆ ಬಹು ಉಪಕಾರವನ್ನು ಮಾಡಿದ್ದಾರೆ. ನನ್ನ ತಂದೆಯವರು ಸಾಯುವ ವರೆಗೆ ಅವರ ಉಪಕಾರಸ್ಮರಣೆಯನ್ನೇ ಮಾಡುತ್ತಲಿದ್ದು ನನ್ನನ್ನು ಕರೆದು ಆ ಉಪಕಾರಿಯನ್ನು ಕಂಡು ವಂದಿಸುವಂತೆ ಹೇಳಿದರು. ಎಷ್ಟೆಷ್ಟು ಕೇಳಿದರೂ ಏನು ಕಾರಣದಿಂದಲೋ ತಮಗೆ ಆ ಸಂಗತಿಯೇ ಗೊತ್ತಿಲ್ಲವೆಂದು ಅವರು ಹೇಳಿಬಿಟ್ಟರು".

ಮಲಯಸಿಂಹನು ಮುಗುಳುನಗೆಯೊಡನೆ "ಕಾರಣವೇನು? ತಿಳಿದೇ ಇದೆ. ಉತ್ತಮಪುರುಷರು ತಾವು ಮಾಡಿದ ಉಪಕಾರವನ್ನು ಎಂದಿಗೂ ಹೇಳಿಕೊಳ್ಳರು" ಎಂದನು.

ಆಗ ಉದಯಸಿಂಹನು "ಮಧ್ಯೆ ಏನೇನೋ ಪ್ರಸ್ತಾಪಗಳು ಬಂದು ರಾಜರಿಗೆ ಅನುಕೂಲವಾದ ಮನೆಯ ಸಂಗತಿಯೇ ಮರೆತು ಹೋಯಿತು" ಎನ್ನಲು, ಅವರವರು ಅವರವರಿಗೆ ತಿಳಿದಿದ್ದ ಮನೆಗಳ ಅನುಕೂಲಪ್ರತಿಕೂಲಗಳನ್ನು ಹೇಳಿದರು. ಜಯವೀರನು ಸುಮ್ಮನಿರಲು, ಚಿತ್ರಸೇನನು "ನೀನೇಕೆ ಸುಮ್ಮನಿದ್ದೀಯೋ? ಅನುಕೂಲವಾದ ಮನೆ ಯಾವುದಾದರೂ ನಿನಗೆ ತಿಳಿದಿದ್ದರೆ ಹೇಳಬಾರದೇ" ಎಂದು ಹೇಳಿದುದಕ್ಕೆ, ಅವನು

"ನನ್ನ ಮನೆಯು ದೊಡ್ಡದಾಗಿ ಅನುಕೂಲವಾಗಿದ್ದರೂ ನನ್ನ ತಂಗಿಯೂ ಅವಳ ಗಂಡನೂ ಒಂದು ಭಾಗದಲ್ಲಿರುವುದರಿಂದ ಸಂಕೋಚಪಟ್ಟೆನು. ಅದರಿಂದ ರಾಜರಿಗೆ ಯಾವ ಅನಾನುಕೂಲವೂ ಇಲ್ಲದಿದ್ದರೆ ಅವಶ್ಯಕವಾಗಿ ಅವರು ಅಲ್ಲಿಗೆ ಬರಬಹುದು"

ಇದನ್ನು ಕೇಳಿ ಮಲಯಸಿಂಹನು "ನಿಮಗೆ ತಂಗಿಯೊಬ್ಬಳಿರುವಳೋ?"

"ರತ್ನಾಂಬೆಯೆಂಬುವಳೊಬ್ಬಳುಂಟು"

"ಮದುವೆಯಾಗಿದೆಯೋ?"

"ಹೂಂ, ಒಂಭತ್ತು ವರ್ಷಗಳಾದುವು".

"ಗಂಡ ಹೆಂಡಿರು ಸುಖವಾಗಿದ್ದಾರೆಯೋ?"

"ಮನುಷ್ಯರು ಎಷ್ಟು ಮಟ್ಟಿಗೆ ಸುಖವಾಗಿರಬಹುದೋ ಅಷ್ಟುಮಟ್ಟಿಗೆ ತಮ್ಮ ಅನುಗ್ರಹದಿಂದ ಸುಖವಾಗಿದ್ದಾರೆ. ರತ್ನಾಂಬೆಯ ಗಂಡನು ಕಷ್ಟಕಾಲದಲ್ಲಿ ನಮ್ಮನ್ನು ಕೈ ಬಿಡಲಿಲ್ಲ. ಅವನು ಯೋಗ್ಯನು."

ಆಗ ಉದಯಸಿಂಹನು ಜಯವೀರನನ್ನು ಕುರಿತು, "ಅಯ್ಯಾ, ಒಂದು ಮಾತು. ರಾಜರು ಅಮರಪುರವನ್ನು ನೋಡಲು ಬಂದಿದ್ದಾರೆ; ಅವರನ್ನು ನಿಮ್ಮ ಕೊಂಪೆಯಲ್ಲಿ ಸೇರಿಸಬೇಡಿರಿ" ಎಂದುದಕ್ಕೆ, ಅವನು

"ಅವರಿಗೆ ಇನ್ಯಾವ ಮನೆಯೂ ಸಿಕ್ಕದೆ ಅದು ಅನುಕೂಲವಾದರೆ ಇರಲಿ ಎಂದು ಹೇಳಿದೆ."

ಮಲಯಸಿಂಹನು ಜಯವೀರನನ್ನು ನೋಡಿ "ನಿಮ್ಮ ತಂಗಿಭಾವಂದಿರ ಪರಿಚಯವನ್ನು ಮಾಡಿಕೊಟ್ಟರೆ ಸಾಕು; ನಾನು ಅವರನ್ನು ನೋಡಿ ಸಂತೋಷಪಡುವೆನು. ನನ್ನ ಮನೆಯು ಆವಾಗಲೇ ಸಿದ್ಧವಾಗಿದೆ"

"ಅದು ಹೇಗೆ?"

‘‘ನನ್ನ ಪರಿಚಾರಕನನ್ನೂ ಕಯ್ಯಾಳನ್ನೂ ಒಂದು ವಾರ ಮುಂದಾಗಿಯೇ ಇಲ್ಲಿಗೆ ಕಳುಹಿಸಿದ್ದೆನು. ನಾನು ಇಲ್ಲಿಗೆ ಬರುವಾಗ, ದಾರಿಯಲ್ಲಿ ಕಾದಿದ್ದು, ಅವರು ಮಾಡಿರುವ ಮನೆಯ ಸನ್ನಿವೇಶವನ್ನು ಗುರುತು ಹಚ್ಚಿದ ಈ ಚೀಟಿಯನ್ನು ಕೊಟ್ಟರು. ಇದನ್ನು ಓದಿ ನೋಡಿ’’ ಎಂದು ಆ ಚೀಟಿಯನ್ನು ಉದಯಸಿಂಹನ ಕೈಯಲ್ಲಿ ಕೊಟ್ಟನು.

“ಇದೀಗ ಏರ್ಪಾಡಿನ ಕ್ರಮ” ಎಂದು ಭದ್ರಸಿಂಹನು ಹೇಳಲು, ಚಿತ್ರಸೇನನು

“ಅದು ರಾಜರ ಏರ್ಪಾಡು” ಎಂದನು.

“ಹಾಗಾದರೆ ನಿಮ್ಮ ಮನೆಯೇ ನಿಮಗೆ ಇನ್ನೂ ಗೊತ್ತಿಲ್ಲವೋ” ಎಂದು ಕೇಳಲು ಮಲಯಸಿಂಹನು

“ಹೊತ್ತಾಗಿ ಹೋಗಿದ್ದುದರಿಂದ ನೆಟ್ಟಗೆ ಇಲ್ಲಿಗೇ ಬಂದೆನೆಂದು ಮೊದಲೇ ಹೇಳಲಿಲ್ಲವೇ’’

ಇದನ್ನು ಕೇಳಿ ಎಲ್ಲರೂ ಒಬ್ಬರ ಮುಖವನ್ನೊಬ್ಬರು ನೋಡಿಕೊಂಡು “ಇವನು ಹಾಸ್ಯ ಮಾಡುತ್ತಾನೋ, ನಿಜವಾಗಿಯೇ ಹೇಳುತ್ತಾನೋ? ನಮ್ಮೊಂದಿಗೆ ಸುಳ್ಳಾಡಿ ಇವನಿಗೇನು ಪ್ರಯೋಜನ” ಎಂದು ಆಲೋಚಿಸಿದರು.

ಭದ್ರಸಿಂಹನು ಮಿಕ್ಕವರನ್ನು ನೋಡಿ “ಹಾಗಾದರೆ ನಮ್ಮಿಂದಾಗುವ ಅಲ್ಪ ಸ್ವಲ್ಪ ಕೆಲಸಗಳನ್ನು ಇವರಿಗೆ ಮಾಡಿಕೊಡೋಣ. ನಾನು ಪತ್ರಿಕೆಯ ಪ್ರಕಾಶಕನಾದುದರಿಂದ, ಈ ಪಟ್ಟಣದ ನಾಟಕಶಾಲೆಗಳನ್ನೂ, ನೋಡಲು ಯೋಗ್ಯವಾದ ಇತರಸ್ಥಳಗಳನ್ನೂ ಇವರಿಗೆ ತಿಳಿಸುವೆನು’’ ಎಂದನು.

‘‘ತಮಗೇಕೆತೊಂದರೆ? ಮೊದಲೇ ನಾನು ನನ್ನ ಮನೆವಾರ್ತೆಯವನಿಗೆ ಊರಿನಲ್ಲಿರುವ ಪ್ರತಿಯೊಂದು ನಾಟಕಶಾಲೆಯಲ್ಲಿಯೂ ಒಂದೊಂದು ಸ್ಥಳವನ್ನು ಗೊತ್ತುಮಾಡುವಂತೆ ಹೇಳಿದ್ದೇನೆ’’ ಎಂದು ಮಲಯಸಿಂಹನು ಹೇಳಿದನು.

“ನಿಮ್ಮ ಮನವಾರ್ತೆಯವನಿಗೆ ಈ ಊರಿನ ಪರಿಚಯವುಂಟೋ” ಎಂದು ದಮನಕನು ಕೇಳಿದುದಕ್ಕೆ,

“ಇಲ್ಲ; ಇವನೂ ನನ್ನಂತೆಯೇ ಈ ಪಟ್ಟಣಕ್ಕೆ ಇದೇ ಮೊದಲು ಬಂದುದು; ಆದರೆ, ಅವನು ಮೊದಲು ಸಿಪಾಯಿಯಾಗಿದ್ದು ಅನಂತರ ಕಳ್ಳ

ವ್ಯಾಪಾರಿಯಾಗಿದ್ದು, ಕೊನೆಗೆ ನನ್ನಲ್ಲಿ ಬಂದು ಸೇರಿದ್ದಾನೆ. ಅವನಿಗೆ ತಿಳಿಯದೇ ಇರುವುದು ಯಾವುದೂ ಇಲ್ಲ".

"ಈ ಯೋಗ್ಯನನ್ನು ನೀವು ಮನವಾರ್ತೆಗೆ ಇಟ್ಟುಕೊಂಡಿರುವುದರಲ್ಲಿ ನಿಮಗೆ ವರ್ಷಕ್ಕೆ ಎಷ್ಟು ಲಾಭ?"

"ಕದಿಯುವ ವಿಷಯದಲ್ಲಿ ಎಲ್ಲರೂ ಒಂದೇ".

"ನಿಮಗೆ ಮನೆಯೂ ಪರಿಚಾರಕರೂ ಎಲ್ಲರೂ ಸಿದ್ಧವಾಗಿದ್ದ ಮೇಲೆ ಒಬ್ಬ ಉಪಪತ್ನಿ ಬೇಕಲ್ಲವೇ'' ಎಂದು ಚಿತ್ರಸೇನನು ಕೇಳಲು, ಉದಯಸಿಂಹನು ಆ ಯವನದೇಶದ ಯುವತಿಯನ್ನು ನೆನೆಸಿಕೊಂಡು ಮಲಯಸಿಂಹನ ಮುಖವನ್ನು ನೋಡಿ ನಕ್ಕನು. ಆಗ ಮಲಯಸಿಂಹನು

"ಅವಳೂ ಸಿದ್ಧವಾಗಿದ್ದಾಳೆ. ನಾನೊಬ್ಬ ಬಂದಿಯವಳನ್ನು ಜೆಲೆಗೆ ಕೊಂಡಿದ್ದೇನೆ" ಎನ್ನಲು, ದಮನಕನು,

"ಈ ರಾಜ್ಯದಲ್ಲಿ ಬಂದಿಯವಳನ್ನು ಇಟ್ಟುಕೊಳ್ಳಕೂಡದೆಂಬ ಕಟ್ಟಳೆಯುಂಟು. ಅವಳು ಈ ರಾಜ್ಯಕ್ಕೆ ಕಾಲಿಟ್ಟಾಗಲೇ ಅವಳ ಸೆರೆಯು ತೊಲಗಿ ಹೋಗುವುದು"

"ಅವಳಿಗೆ ಆ ಸಮಾಚಾರವನ್ನು ಹೇಳುವವರಾರು?"

"ಯಾರಾದರೂ ಸರಿಯೆ.''

"ಅವಳು ಹೊರಗೆ ಬರುವುದೇ ಇಲ್ಲವಲ್ಲಾ?"

"ಹಾಗಾದರೆ ಕಷ್ಟ" ಎಂದು ದಮನಕನು ಹೇಳಲು, ಭದ್ರಸಿಂಹನು

"ಅವಳನ್ನು ಯಾವಾಗಲೂ ಸೆರೆಯಲ್ಲೇ ಇಟ್ಟಿರುವಿರೋ?''

"ಸ್ವಾಮಿ! ನಾನು ಅಷ್ಟು ಕ್ರೂರಿಯಲ್ಲ. ನನ್ನಲ್ಲಿರುವುದಕ್ಕೆ ಒಪ್ಪಿದರೆ ಇರಬಹುದು, ಇಲ್ಲವಾದರೆ ಬೇಕಾದ ಕಡೆ ಹೋಗಬಹುದು. ಅವಳಿಗೆ ನನ್ನ ಬಳಿ ಯಾವ ವಿಷಯದಲ್ಲಿಯೂ ಕೊರತೆಯಿಲ್ಲದಿರುವುದರಿಂದ ಅವಳು ನನ್ನನ್ನು ಬಿಟ್ಟು ಹೋಗಲು ಇಷ್ಟಪಡಳು''.

ಆಗ ಹೊತ್ತಾಯಿತೆಂದು ದಮನಕನು ಮೊದಲು ಹೊರಟನು. ಅವನನ್ನು ಕಳುಹಿಸಿಕೊಡಲು ಉದಯಸಿಂಹನು ತಲೆಬಾಗಿಲಿಗೆ ಬಂದಾಗ, "ಅಪ್ಪಾ ಉದಯ, ಇವನಾರೋ ಒಬ್ಬ ಅಸಾಧ್ಯನೆಂದು ಕಾಣುತ್ತದೆ. ನಾನು ಪ್ರಧಾನನ ಬಳಿಗೆ ಹೋಗಿ ಇವನ ಸಮಾಚಾರವನ್ನು ತಿಳಿಸಿ, ಪೋಲೀಸಿನವರ

ಮೂಲಕ ಇವನ ಪೂರ್ವೋತ್ತರವನ್ನು ತಿಳಿಯುವೆನು'' ಎಂದು ಹೇಳಿ ಹೊರಟನು.

"ದುರ್ಮತಿಯ ಉಪನ್ಯಾಸಕ್ಕೆ ಹೋಗಿ ಅದರ ವಿಷಯವಾಗಿ ನನಗೆ ತೋರಿದುದನ್ನು ಪತ್ರಿಕೆಯಲ್ಲಿ ಬರೆಯಬೇಕೆಂದಿದ್ದೆನು; ಈಗ ನಾನಲ್ಲಿಗೆ ಹೋಗಲಾರೆನು. ಈ ರಾಜನ ಸಮಾಚಾರವು ಅದಕ್ಕಿಂತಲೂ ಸೊಗಸಾಗಿರುವುದರಿಂದ ಇದನ್ನೇ ಪ್ರಕಟಿಸುವೆನು'' ಎಂದು ಭದ್ರಸಿಂಹನು ಹೊರಟನು.

ಚಿತ್ರಸೇನನು ಜಯವೀರನನ್ನು ಕುರಿತು "ನಾವೂ ಹೋಗೋಣ ಬಾ'' ಎನ್ನಲು, ಅವನು "ಮಲಯಸಿಂಹರಿಗೆ ನನ್ನ ಮನೆಯ ವಿಳಾಸವನ್ನು ತಿಳಿಸಿ ಬರುವೆನು" ಎಂದು ಹೇಳಿ ಅದನ್ನು ಒಂದು ಚೀಟಿಯಲ್ಲಿ ಗುರುತು ಹಚ್ಚಿಕೊಟ್ಟು, ಚಿತ್ರಸೇನನ ಜತೆಯಲ್ಲಿ ಹೊರಟನು.

---

# ಇಪ್ಪತ್ತೊಂಬತ್ತನೆಯ ಅಧ್ಯಾಯ

## ಸಂದರ್ಶನ

ಅತಿಥಿಗಳೆಲ್ಲರೂ ಹೊರಟು ಹೋದ ಮೇಲೆ ಉದಯಸಿಂಹನು ತಾನು ವಾಸವಾಗಿರುವ ಭಾಗವನ್ನು ಮಲಯಸಿಂಹನಿಗೆ ತೋರಿಸಬೇಕೆಂದು ಅವನನ್ನು ಮೊದಲು ತನ್ನ ಮುಖ್ಯವಾದ ಕೊಟ್ಟಡಿಗೆ ಕರೆದುಕೊಂಡು ಹೋದನು. ಅದರಲ್ಲಿ ಬಹುಕಾಲದಿಂದ ಕಷ್ಟಪಟ್ಟು ವಿಶೇಷದ್ರವ್ಯವನ್ನು ವೆಚ್ಚಮಾಡಿ ಅಪೂರ್ವವಾದ ಪದಾರ್ಥಗಳನ್ನು ಶೇಖರಿಸಿ ಇಟ್ಟಿದ್ದನು. ಆ ಪದಾರ್ಥಗಳ ವಿಷಯವಾಗಿ ತನಗೆ ತಿಳಿದಷ್ಟು ಮಲಯಸಿಂಹನಿಗೆ ತಿಳಿಯದೆಂದು ಉದಯಸಿಂಹನು ಪ್ರತಿಯೊಂದು ಪದಾರ್ಥಗಳ ವಿಷಯವನ್ನೂ ವಿವರವಾಗಿ ಹೇಳತೊಡಗಿದನು. ಮಲಯಸಿಂಹನು ಪುರಾಣ, ವಸ್ತುಶಾಸ್ತ್ರ, ಧಾತುವಿದ್ಯೆ ಪ್ರಾಣಿಶಾಸ್ತ್ರಗಳಲ್ಲಿ ಪ್ರವೀಣನಾಗಿದ್ದುದರಿಂದ ಕಂಡೊಡನೆಯೇ ಪ್ರತಿಯೊಂದು ಪದಾರ್ಥದ ವೃತ್ತಾಂತವನ್ನೂ ಆಮೂಲವಾಗಿ ಹೇಳತೊಡಗಿದನು. ಇದನ್ನು ನೋಡಿ ಉದಯಸಿಂಹನು "ಇವನಿಗೆ ತಿಳಿಯದ ಸಮಾಚಾರವೇ ಇಲ್ಲವಲ್ಲಾ" ಎಂದು ಆಶ್ಚರ್ಯಪಟ್ಟು, ಅಲ್ಲಿಂದ ತನ್ನ ಶಯ್ಯಾಗೃಹಕ್ಕೆ ಕರೆದುಕೊಂಡು ಹೋದನು.

ಆ ಗೃಹದ ಸೊಬಗನ್ನು ನೋಡಿ ಮಲಯಸಿಂಹನು ಸಂತೋಷಪಟ್ಟು, ಅಲ್ಲಿ ಕಟ್ಟಿದ್ದ ಒಂದು ಚಿತ್ರಪಟವನ್ನು ನೋಡಿ ಭ್ರಮಿಸಿ ನಿಂತನು. ಅದು ಸುಮಾರು ಇಪ್ಪತ್ತೈದು ಇಪ್ಪತ್ತಾರು ವಯಸ್ಸುಳ್ಳ ಒಬ್ಬ ಅನ್ಯದೇಶದ ತರಳೆಯ ಚಿತ್ರ. ಆ ತರಳೆಯು ಸಮುದ್ರತೀರದಲ್ಲಿ ನಿಂತು ಕಡಲನ್ನು ನೋಡುತ್ತ, ಯಾರ ಆಗಮನವನ್ನೋ ನಿರೀಕ್ಷಿಸುತ್ತಲಿರುವಂತೆ ತೋರುತ್ತಲಿದ್ದಿತು; ಉಡಿಗೆ ತೊಡಿಗೆಗಳಿಂದ ಅವಳು ಅಂಬಿಗರವಳೆಂದು ಬೋಧೆಯಾಗುತ್ತಲಿದ್ದಿತು. ಮಲಯಸಿಂಹನು ಆ ಚಿತ್ರವನ್ನು ನೋಡಿ ವ್ಯಸನಾಕ್ರಾಂತನಾದನು; ದೈವಾಧೀನದಿಂದ ಆ ಕೊಟ್ಟಡಿಯು ಸ್ವಲ್ಪ ಕತ್ತಲೆಯಾಗಿದ್ದುದರಿಂದ ಉದಯಸಿಂಹನಿಗೆ ಇವನ ವ್ಯಸನವು ಗೊತ್ತಾಗಲಿಲ್ಲ. ಮಲಯಸಿಂಹನು ಹಾಗೆಯೇ ಸ್ವಲ್ಪ ಸಮಾಧಾನವನ್ನು ಮಾಡಿಕೊಂಡು, "ಅಯ್ಯಾ ಉದಯಸಿಂಹ, ನಮ್ಮ ದೇಶದಲ್ಲಿ ಮದುವೆಯಿಲ್ಲದ ತರುಣರು ತಾವು ಮೋಹಿಸಿರುವ ಕಾಂತೆಯರ ಚಿತ್ರಗಳನ್ನು ಬರೆಯಿಸಿ ಶಯ್ಯಾಗೃಹದಲ್ಲಿ ಕಟ್ಟಿಕೊಳ್ಳುವ ಪದ್ಧತಿ; ಇಲ್ಲಿಯೂ ಅದೇ ಪದ್ಧತಿಯಿರುವಂತೆ ಇದೆ. ಈ ಯುವತಿಯ ಸೌಂದರ್ಯವು ಯೋಗಿಗಳ ಮನಸ್ಸನ್ನೂ ಕೂಡ ಸೆಳೆಯುವುದು" ಎಂದನು.

"ಸ್ವಾಮಿ ರಾಜರೇ, ನನ್ನ ತಾಯಿಯನ್ನು ತಾವು ನೋಡಿದ್ದರೆ ಈ ತಪ್ಪು ಮಾಡುತ್ತಿರಲಿಲ್ಲ. ಇಗೋ ಇದರ ಎದುರಿಗೆ ಇರುವ ಚಿತ್ರವನ್ನು ನೋಡಿ".

"ಅದು ಯಾರದು ?"

"ಅದು ನನ್ನ ತಂದೆಯದು".

"ಈ ಎರಡು ಚಿತ್ರಗಳೂ ಅವರ ಪ್ರಾಯಕಾಲದಲ್ಲಿ ಬರೆಸಿದಂತೆ ತೋರುತ್ತದೆ".

"ಇಲ್ಲ. ಇವನ್ನು ಬರೆಯಿಸಿ ಈಗ ಐದು ವರ್ಷವಾಯಿತು. ನನ್ನ ತಂದೆಯು ಊರಲ್ಲಿಲ್ಲದ ವೇಳೆಯಲ್ಲಿ, ನನ್ನ ತಾಯಿಯು ಇವುಗಳನ್ನು ಬರೆಯಿಸಿ ಅವರು ಬರುತ್ತಲೆ ತೋರಿಸಿದಳು. ಅವರು ಇವುಗಳನ್ನು ನೋಡಿ ಅಸಮಾಧಾನಪಟ್ಟುದರಿಂದ ಅವರ ಕಣ್ಣಿಗೆ ಬೀಳದಂತೆ ಕಟ್ಟಿಕೊಂಡಿರಲು ಇವುಗಳನ್ನು ನನಗೆ ಕೊಟ್ಟಳು. ನನ್ನ ತಂದೆಯು ಇಲ್ಲಿಗೆ ಬರುವುದೇ ಇಲ್ಲ; ತಾಯಿಯು ಮಾತ್ರ ಆಗಾಗ ಬರುವುದುಂಟು. ಅವಳು ಬಂದಾಗೆಲ್ಲಾ ಇದನ್ನು ನೋಡದೆ

ಇರುವುದಿಲ್ಲ; ನೋಡಿದಾಗೆಲ್ಲಾ ಸಂಕಟಪಡದೆ ಇರಳು. ಏಕೆಂದು ಕೇಳಿದರೆ ಅಳುವಳು; ಇದೊಂದು ವಿನಾ, ಮಿಕ್ಕ ವಿಷಯಗಳಲ್ಲೆಲ್ಲಾ ಅವರಿಬ್ಬರೂ ಹೊಂದಿಕೊಂಡಿರುವರು."

ಉದಯಸಿಂಹನು ಹೀಗೆ ಹೇಳುತ್ತಲೆ, ಈ ಮಾತನ್ನಾಡುವುದರಲ್ಲಿ ಇವನ ಅಂತರಂಗಾಭಿಪ್ರಾಯವೇನಿರಬಹುದೆಂದು ಮಲಯಸಿಂಹನು ಅವನ ಮುಖ ವನ್ನು ಗುರ್ತಿಸಿ ನೋಡಿ ಅವನು ಅದನ್ನು ಸಹಜವಾಗಿ ಆಡಿದುದು ಎಂದು ತಿಳಿದನು.

"ಅಯ್ಯಾ ರಾಜರೇ, ಇದೇ ನನ್ನ ಮನೆ, ಇವುಗಳೇ ನನ್ನ ವಸ್ತುಗಳು; ಇವೆಲ್ಲವನ್ನೂ ತಮ್ಮದೆಂತಲೇ ಭಾವಿಸಿ ಇಷ್ಟಾನುಸಾರ ಉಪಯೋಗಿಸಿಕೊಳ್ಳ ಬಹುದು. ತಮ್ಮ ವಿಷಯವಾಗಿ ಇಂದ್ರಪ್ರಸ್ಥದಿಂದಲೇ ನನ್ನ ತಂದೆಗೆ ಬರೆದು ಇದ್ದೆನು; ಇಂದು ಬೆಳಿಗ್ಗೆ ತಾವು ಇಲ್ಲಿಗೆ ಬಿಜಯಮಾಡಿಸುವಿರೆಂಬು ದನ್ನು ತಿಳಿಸಿದ್ದೆನು. ಅವರು ಬಹುಶಃ ತಮ್ಮ ಆಗಮನವನ್ನು 'ಇದಿರು ನೋಡುತ್ತಲಿರಬಹುದು; ಅಲ್ಲಿಗೆ ಹೋಗೋಣವೊ?"

ಕೂಡಲೇ ಮಲಯಸಿಂಹನು ರಾಧಾಬಾಯಿಯನ್ನೂ ಅವಳ ಗಂಡನನ್ನೂ ನೋಡುವುದರಲ್ಲಿ ತನಗಿದ್ದ ಅಭಿಪ್ರಾಯವೊಂದನ್ನೂ ಹೊರಪಡಿಸದೆ, ಮರ್ಯಾದೆ ಗಾಗಿ ಮಾಡಬೇಕಾದುದನ್ನು ಮಾಡುವವನಂತೆ ಸುಮ್ಮನಿದ್ದನು. ಆಗ ಉದಯಸಿಂಹನು ಒಬ್ಬ ಸೇವಕನನ್ನು ಕರೆದು "ರಾಜಾಮಲಯಸಿಂಹರು ತಮ್ಮ ದರ್ಶನಾರ್ಥವಾಗಿ ಬರುವರು ಎಂದು ನನ್ನ ತಂದೆ ತಾಯಿಗಳಿಗೆ ತಿಳಿಸು" ಎಂದು ಹೇಳಿ, ಮಲಯಸಿಂಹನನ್ನು ಕರೆದುಕೊಂಡು ಹೋದನು.

ಅಲ್ಲಿ ಸುಮಾರು ಮೂವತ್ತೈದು ವಯಸ್ಸುಳ್ಳ, ಸೇನಾಪತಿಯಂತೆ ಮೆರೆಯುತ್ತಲಿದ್ದವನೊಬ್ಬನ ಒಂದು ಚಿತ್ರಪಟವು ಕಟ್ಟಿದ್ದಿತು. ಅದು ಯಾರ ಚಿತ್ರವೆಂದು ಮಲಯಸಿಂಹನು ಕೇಳಲು, ಉದಯಸಿಂಹನು "ನನ್ನ ತಂದೆ ಯವರ ಚಿತ್ರ. ಅವರು ಅನೇಕ ಯುದ್ಧಗಳನ್ನು ಮಾಡಿ ಜಯವನ್ನು ಹೊಂದಿದ್ದ ಕಾರಣ ಸ್ವದೇಶದಲ್ಲಿಯೂ ಯವನದೇಶದಲ್ಲಿಯೂ ಅನೇಕ ಬಹುಮಾನಗಳನ್ನು ಹೊಂದಿರುವರು" ಎಂದನು.

"ಹಾಗೋ," ಎಂದು ಮಲಯಸಿಂಹನು ಆ ಚಿತ್ರವನ್ನು ವಿಶೇಷವಾಗಿ ನೋಡುತ್ತಲಿರುವಾಗ, ಸುಮಾರು ನಲವತ್ತು ನಲವತ್ತೈದು ವಯಸ್ಸುಳ್ಳವ

ನೊಬ್ಬನು ಇದಿರು ಕಡೆಯ ಬಾಗಿಲನ್ನು ತೆರೆದುಕೊಂಡು ಒಳಗೆ ಬಂದನು. ಆಗ ಉದಯಸಿಂಹನು "ಅಪ್ಪಾಜೀ! ಇವರು ನನ್ನ ಆಪತ್ಕಾಲದಲ್ಲಿ ಸಹಾಯಮಾಡಿದ ಮಹಾನುಭಾವರಾದ ರಾಜಾಮಲಯಸಿಂಹರು" ಎಂದನು.

ರಾಜಸಿಂಹನು ಮಲಯಸಿಂಹನಿಗೆ ವಂದಿಸಿ "ಸ್ವಾಮಿಾ, ನೀವು ನಮ್ಮ ವಂಶವನ್ನು ಉದ್ಧಾರಮಾಡಿದ ಉಪಕಾರಕ್ಕಾಗಿ ನಾನು ಕೃತಜ್ಞನಾಗಿದೇನೆ" ಎಂದು ಹೇಳಿ ಒಂದು ಆಸನವನ್ನು ತೋರಿಸಿ ತಾನು ಗವಾಕ್ಷಿಯ ಇದುರಿಗೆ ಇದ್ದ ಆಸನದಲ್ಲಿ ಕುಳಿತನು. ಮಲಯಸಿಂಹನು ಕಿಟಕಿಗೆ ಹಾಕಿ ಅರ್ಧ ಎಳೆದಿದ್ದ ತೆರೆಯ ಮರೆಯಲ್ಲಿ ಸ್ವಲ್ಪ ಕತ್ತಲೆಯಾಗಿದ್ದ ಕಡೆಗೆ ಆಸನವನ್ನು ಎಳೆದುಕೊಂಡು ಕುಳಿತು, ರಾಜಸಿಂಹರ ಮುಖವನ್ನು ಚೆನ್ನಾಗಿ ನೋಡಿ, ಅವನು ಸುಖವಾಗಿರುವನಂತೆ ತೋರಿದರೂ ಸುಖಿಯಲ್ಲವೆಂದು ತಿಳಿದು ಕೊಂಡನು.

"ರಾಧಾಬಾಯಿಯು ಇನ್ನೇನು ಬರಬಹುದು" ಎಂದು ರಾಜಸಿಂಹನು ಹೇಳಲು, ಮಲಯಸಿಂಹನು "ಮಹಾಸ್ವಾಮಿ! ನನ್ನ ಪುಣ್ಯಕ್ಕೆ ಎಣೆಯೇ ಇಲ್ಲ; ತಮ್ಮ ಶೌರ್ಯ ಶಕ್ತಿಬಲ ಐಶ್ವರ್ಯಗಳನ್ನೂ ಗುಣಾತಿಶಯಗಳನ್ನೂ ವಿಶೇಷವಾಗಿ ಕೇಳಿದ್ದೆನು; ತಮ್ಮ ಯಶಸ್ಸು ಲೋಕಪ್ರಸಿದ್ಧವಾದುದು. ನಾನು ಅಮರಪುರಕ್ಕೆ ಬಂದ ದಿನವೇ ತಮ್ಮಂಥ ಪುಣ್ಯಪುರುಷರ ದರ್ಶನ ವಾದುದು ಬಹು ಶ್ರೇಯಸ್ಕರ. ತಾವು ಕಳಿಂಗದೇಶದವರೆಂದು ಕೇಳಿಬಲ್ಲೆ; ಅಲ್ಲಿಯೂ ಯವನದೇಶದಲ್ಲಿಯೂ ತಾವು ಮಾಡಿದ ಸಾಹಸಗಳಿಗೆ ತಮಗೆ ಸೈನ್ಯಾಧೀಶಪದವಿಯು ಬರಬೇಕಾಗಿದ್ದಿತು; ಕೊಡದೇ ಇದ್ದುದು ಅನ್ಯಾಯ ವಲ್ಲವೇ?"

"ನಾನು ಈಚೆಗೆ ಯುದ್ಧಪ್ರಸಕ್ತಿಯನ್ನೇ ಬಿಟ್ಟುಬಿಟ್ಟೆನು; ಬಿಡದೆ ಇದ್ದಲ್ಲಿ ನೀವು ಹೇಳಿದಂತೆ ಸೈನ್ಯಾಧೀಶನಾಗಬಹುದಾಗಿದ್ದಿತು. ಸಾಧಾರಣ ವಾಗಿ ರಾಜರಿಗೆ ಮರೆವು ಹೆಚ್ಚು. ಇಪ್ಪತ್ತು ವರ್ಷಗಳು ಸೈನ್ಯದಲ್ಲಿ ಕೆಲಸ ಮಾಡಿ ಜಯಶೀಲನಾಗಿದ್ದರೂ, ಪಟ್ಟ ಶ್ರಮಕ್ಕೆ ತಕ್ಕ ಪ್ರಯೋಜನವಿಲ್ಲದಿದ್ದರೆ ಹೇಗೆ ತಾನೇ ಜಿಗುಪ್ಸೆ ಹುಟ್ಟದು? ರಾಜನು ಸಚಿವನಾಗಿರಬೇಕೆಂದು ಬಲಾತ್ಕರಿಸಿದುದರಿಂದ ಈಗ ಸಚಿವನಾಗಿರುತ್ತೇನೆ; ಹೆಚ್ಚಾಗಿ ಕೆಲಸವಿಲ್ಲದುದ ರಿಂದ ವ್ಯವಹಾರೋಪಯುಕ್ತವಾದ ವಿದ್ಯೆಗಳನ್ನು ಕಲಿಯುತ್ತಲಿದ್ದೇನೆ."

" ಸ್ವಾಮಿಾ! ತಾವು ಆಗರ್ಭಶ್ರೀಮಂತರಾಗಿದ್ದು, ಅನಾಮಧೇಯನಂತೆ ಸೈನ್ಯದಲ್ಲಿ ಕಾಲಾಳಾಗಿ ಸೇರಿ, ಕ್ರಮಕ್ರಮವಾಗಿ ಉನ್ನತಪದವಿಯನ್ನು ಹೊಂದಿ, ಕೊನೆಗೆ ರಾಜನಿಗೆ ಎರಡನೆಯ ಸಚಿವರಾಗಿ ಸಭೆಯನ್ನು ಅಲಂಕರಿಸುತ್ತಲಿದ್ದರೂ, ಲೋಕೋಪಕಾರ ವಿದ್ಯೆಯನ್ನು ಕಲಿಯಲು ಪ್ರಾರಂಭಿಸಿದುದು ಶ್ಲಾಘ್ಯವೇ ಸರಿ."

ಈ ರೀತಿ ಯಾರನ್ನೂ ಎಂದೂ ಸ್ತೋತ್ರಮಾಡದ ಮಲಯಸಿಂಹನು ತನ್ನ ತಂದೆಯನ್ನು ಸ್ತೋತ್ರಮಾಡಿದುದನ್ನು ಕಂಡು, ಉದಯಸಿಂಹನಿಗೆ ಆಶ್ಚರ್ಯವುಂಟಾಯಿತು; ಈ ಸ್ತೋತ್ರದಿಂದ ರಾಜಸಿಂಹನಿಗೆ ಸ್ವಲ್ಪ ಅಸಮಾಧಾನವಾಯಿತೆಂದು ತಿಳಿದು, ಮಲಯಸಿಂಹನು " ನಮ್ಮ ದೇಶದವರು ಹೀಗೆ ಮಾಡಲರಿಯರು. ಅಲ್ಪಸಂತೋಷಿಗಳಾದುದರಿಂದ ತಮ್ಮ ಜೀವನಕ್ಕೆ ಸ್ವಲ್ಪಮಟ್ಟಿಗೆ ಅನುಕೂಲವಾದರೂ ಅವರು ವೃಥಾಕಾಲಹರಣ ಮಾಡುವರೇ ಹೊರತು ಉಪಯೋಗವಾದ ಕೆಲಸವನ್ನು ಮಾಡುವುದಿಲ್ಲ '' ಎಂದನು.

" ಮಲಯಸಿಂಹರೇ! ನಿಮ್ಮ ಯೋಗ್ಯತೆಗೆ ಆ ದೇಶವು ಪ್ರಯೋಜನವಿಲ್ಲ; ಅಮರದೇಶದಲ್ಲಿ ಬಂದಿದ್ದರೆ ನಮ್ಮ ರಾಜನು ಇಲ್ಲಿಯವರನ್ನು ಪುರಸ್ಕರಿಸದಿದ್ದರೂ ಅನ್ಯದೇಶದವರಿಗೆ ವಿಶೇಷವಾಗಿ ಮರ್ಯಾದೆ ಮಾಡುವನು " ಎಂದು ರಾಜಸಿಂಹನು ಹೇಳಲು, ಉದಯಸಿಂಹನು

" ಅಪ್ಪಾಜೀ! ಮಲಯಸಿಂಹರ ಸಮಾಚಾರ ನಿಮಗೆ ತಿಳಿಯದು; ಅವರಿಗೆ ಮರ್ಯಾದೆಯೆನ್ನುವುದು ತೃಣಪ್ರಾಯ "

" ಇದೀಗ ಸತ್ಯವಾದ ಮಾತು; ಉದಯಸಿಂಹರು ನನ್ನ ಪ್ರಕೃತಿಯನ್ನು ಚೆನ್ನಾಗಿ ಬಲ್ಲರು " ಎಂದು ಮಲಯಸಿಂಹನು ನಗುತ್ತ ಹೇಳಿದನು.

ರಾಜಸಿಂಹನು ಇವರಿಂದ ಸುಪ್ರೀತನಾಗಿ ಮಲಯಸಿಂಹನಿಗೆ ಬೇಕಾದ ಉಪಚಾರೋಕ್ತಿಗಳನ್ನು ಹೇಳಿದಂತಾಯಿತೆಂದು ಭಾವಿಸಿ

'' ನಾನು ಈಗ ಆಸ್ಥಾನಕ್ಕೆ ಹೋಗಬೇಕಾಗಿದೆ; ನಿಮಗೆ ಪಯಣದಿಂದ್ಲ ಆಯಾಸವಾಗಿಲ್ಲದಿದ್ದರೆ ನಿಮ್ಮನ್ನೂ ಜೊತೆಯಲ್ಲಿ ಕರೆದುಕೊಂಡು ಹೋಗಬೇಕೆಂದಿದ್ದೇನೆ "

" ಸ್ವಾಮಿಾ! ರಾಜಸಿಂಹರೇ ಮತ್ತೊಂದು ವೇಳೆಯಲ್ಲಿ ನನ್ನನ್ನು ಕರೆದುಕೊಂಡು ಹೋದರೆ ಅಗತ್ಯ ಬರುತ್ತೇನೆ. ಬಹುದೂರ ಪಯಣಮಾಡಿ

ಬಂದು ತಮ್ಮ ಮಂದಿರದಲ್ಲಿ ಇಳಿದು ಇನ್ನೂ ಅತ್ತಿತ್ತ ಕದಲದೆ ಇದ್ದೇನೆ; ಇದಲ್ಲದೆ ರಾಧಾಬಾಯಿಯವರ ಸಂದರ್ಶನವು ಇನ್ನೂ ನನಗೆ ಆಗಲಿಲ್ಲ"

ಆ ವೇಳೆಗೆ ಸರಿಯಾಗಿ ರಾಧಾಬಾಯಿಯು ತನ್ನ ಕೊಟ್ಟಡಿಯ ಬಾಗಿಲನ್ನು ತೆರೆದು ಎರಡು ಕೈಗಳಿಂದ ಎರಡು ನಿಲುವನ್ನೂ ಹಿಡಿದುಕೊಂಡು ನಿಂತು, ಮಲಯಸಿಂಹನನ್ನು ನೋಡುತ್ತಲಿದ್ದಳು. ಪ್ರಾಯಶಃ ಅವಳು ಮಲಯಸಿಂಹನ ಧ್ವನಿಯನ್ನೂ ಮಾತುಗಳನ್ನೂ ಕೇಳಿರಬಹುದು. ಅವನನ್ನು ನೋಡಿದ ಕೂಡಲೇ ಅವಳು ತನ್ನ ಎರಡು ಕೈಗಳನ್ನೂ ಜೋಲುಬಿಟ್ಟು ಕಳೆಗುಂದಿ ಕಂಬದಂತೆ ನಿಂತುಬಿಟ್ಟಳು.

ಅವಳ ಸ್ಥಿತಿಯನ್ನು ನೋಡಿ, ಉದಯಸಿಂಹನು "ಅಮ್ಮಾ, ಇದೇನು? ನಿನಗೆ ದೇಹದಲ್ಲಿ ಸ್ವಸ್ಥವಿಲ್ಲವೇ" ಎಂದು ಕೇಳಲು "ಅಪ್ಪಾ, ಮಗನ ಪ್ರಾಣವನ್ನು ಉಳಿಸಿ ಮಹೋಪಕಾರ ಮಾಡಿದ ಪುರುಷನನ್ನು ಮೊದಲು ನೋಡುವಾಗ ಯಾವ ತಾಯಿಗೆ ತಾನೇ ಚಿತ್ತವಿಕಾರವಾಗದು" ಎಂದು ಹೇಳಿ ಮಲಯಸಿಂಹನನ್ನು ನೋಡಿ "ಸ್ವಾಮಿ! ತಮ್ಮ ಸಹಾಯವಿಲ್ಲದಿದ್ದರೆ ನಮ್ಮ ವಂಶವು ನಿರ್ವಂಶವಾಗುತ್ತಲಿದ್ದಿತು. ಉದಯಸಿಂಹನನ್ನು ತಮ್ಮ ಮಗನಂತೆ ಭಾವಿಸಿ ಕಾಪಿಟ್ಟ ಉಪಕಾರಕ್ಕಾಗಿ ನಾವೆಲ್ಲರೂ ಕೃತಜ್ಞರಾಗಿರುವೆವು" ಎಂದು ತಲೆಬಾಗಿದಳು.

ಅವಳನ್ನು ನೋಡಿ ಅವಳ ಮಾತನ್ನು ಕೇಳುತ್ತಲೆ ಮಲಯಸಿಂಹನಿಗೂ ಚಿತ್ತವಿಕಾರವುಂಟಾಯಿತು. ಹಾಗೆಯೇ ಸಮಾಧಾನಮಾಡಿಕೊಂಡು ಆಸನದಿಂದೆದ್ದು "ಯಾವನಾದರೂ ಒಬ್ಬನು ಅಪಾಯದಲ್ಲಿರುವಾಗ ಅದನ್ನು ತಪ್ಪಿಸುವುದು ಪ್ರತಿಯೊಬ್ಬನಿಗೂ ಕರ್ತವ್ಯವಾಗಿದೆ. ಹೀಗಿರುವಲ್ಲಿ ನನ್ನ ಈ ಅಲ್ಪ ಕಾರ್ಯವು ಅಷ್ಟು ಸ್ತೋತ್ರಾರ್ಹವಾದುದಲ್ಲ" ಎಂದನು.

"ಇಂತಹ ಸಖನು ನನ್ನ ಮಗನಿಗೆ ಸಿಕ್ಕಿದುದು ನಮ್ಮ ಅದೃಷ್ಟವೇ ಸರಿ" ಎಂದು ಕಣ್ಣಲ್ಲಿ ನೀರ ತಂದುಕೊಂಡಳು. ರಾಜಸಿಂಹನು ಮಗನನ್ನು ನೋಡಿ "ನಿನ್ನ ತಾಯಿಗೆ ಮೈ ಸ್ವಸ್ಥವಿಲ್ಲವೆಂದು ತೋರುತ್ತದೆ; ನೋಡಿಕೋ. ನಾನು ಹೋಗಿಬರುವೆನು" ಎಂದು ಹೇಳಿ ಮಲಯಸಿಂಹನ ಅಪ್ಪಣೆಯನ್ನು ಪಡೆದು ಹೊರಟುಹೋದನು.

ಅನಂತರ ರಾಧಾಬಾಯಿಯು ಮೆಲ್ಲಗೆ ಬಂದು ತನ್ನ ಗಂಡನು ಕುಳಿತಿದ್ದ ಆಸನದಲ್ಲಿ ಕುಳಿತು ಮಲಯಸಿಂಹನನ್ನೂ ಕುಳಿತುಕೊಳ್ಳುವಂತೆ ಹೇಳಿ, "ಸ್ವಾಮಿ ರಾಜರೇ, ಈ ದಿನ ಇಲ್ಲಿ ವಿಶ್ರಮಿಸಿಕೊಂಡು ನಮ್ಮ ಮನಸ್ಸಂತೋಷ ಪಡಿಸಬೇಕು," ಎಂದಳು.

"ನಿಮ್ಮ ಮನೆಯಲ್ಲಿರುವುದು ನನಗೇನೋ ಗೌರವವೇ ಸರಿ; ಆದರೂ ಬಹುದೂರ ಪ್ರಯಾಣಮಾಡಿ ನೆಟ್ಟಗೆ ನಿಮ್ಮ ಮನೆಗೇ ಬಂದೆನಾದುದರಿಂದ ನನ್ನ ಜನಗಳು ಮನೆ ಮುಂತಾದುದನ್ನು ಮಾಡಿದರೋ ಇನ್ನೂ ಗೊತ್ತಾಗಲಿಲ್ಲ; ಆದುದರಿಂದ ನಿಲ್ಲುವುದಕ್ಕಾಗುವುದಿಲ್ಲ. ಕ್ಷಮಿಸಬೇಕು" ಎಂದು ಮಲಯ ಸಿಂಹನು ಹೊರಡಲು, ಉದಯಸಿಂಹನು "ಸ್ವಾಮಿ, ತಮಗೆ ಅನುಕೂಲವಾದ ಬಂಡಿಯು ಸಿಕ್ಕುವವರಿಗೆ ನನ್ನ ಬಂಡಿಯನ್ನು ತಾವು ಉಪಯೋಗಿಸಿಕೊಳ್ಳ ಬಹುದು" ಎಂದನು.

"ಇಷ್ಟು ಹೊತ್ತಿಗೆ ಭದ್ರಕನು ಬಹುಶಃ ಒಂದು ಕುದುರೆ ಬಂಡಿಯನ್ನು ಕ್ರಯಕ್ಕೆ ತೆಗೆದಿರಬಹುದು" ಎಂದು ಹೇಳಿ ಬೀದಿಯ ಕಡೆ ತಿರುಗಲು ಅಲ್ಲಿ ಎರಡು ಕುದುರೆಯ ಬಂಡಿಯೊಂದು ಸಿದ್ಧವಾಗಿ ನಿಂತಿದ್ದಿತು. ಆ ಬಂಡಿಯನ್ನೂ ಕುದುರೆ ಗಳನ್ನೂ ನೋಡಿ ಉದಯಸಿಂಹನು ಆಸೂಯಾಪರನಾಗಿ, "ಈ ಕುದುರೆ ಗಳನ್ನೂ ಬಂಡಿಯನ್ನೂ ನೋಡಿ ಆಸೆಪಟ್ಟು ಯುವರಾಜನು ನೆನ್ನೆಯ ದಿನ ಏಳು ಸಾವಿರ ವರಹಗಳಿಗೆ ಕೇಳಿದ್ದನು; ಮಾಲಿಕನು ಹತ್ತು ಸಾವಿರ ವರಹ ಗಳಿಗೆ ಒಂದು ಕಾಸು ಕಡಿಮೆಯಾದರೂ ಕೊಡುವುದಿಲ್ಲವೆಂದು ಹೇಳಿಬಿಟ್ಟನು" ಎಂದನು.

"ಹಣವು ಎಷ್ಟು ವೆಚ್ಚವಾದರೂ ಆಗಲಿ, ಅನುಕೂಲವಾಗುವುದು ಮುಖ್ಯ" ಎಂದು ಹೇಳಿ ಮಲಯಸಿಂಹನು ಬಂಡಿಯಲ್ಲಿ ಕುಳಿತು,

"ಅಯ್ಯಾ ಉದಯಸಿಂಹರೇ, ನಾಳೆ ಒಂದು ದಿನ ಸಾವಕಾಶವಾದರೆ ನಾನು ಮಾಡಿರುವ ಕುಟೀರವನ್ನು ನಿಮ್ಮ ಆಗಮನಕ್ಕೆ ತಕ್ಕಮಟ್ಟಿಗೆ ಅಲಂಕರಿಸಿ ತಮ್ಮನ್ನು ಬರಮಾಡಿಕೊಳ್ಳುವೆನು"

"ಸ್ವಾಮಿ, ಯಾವ ಕುಟೀರವನ್ನಾದರೂ ಒಂದು ದಿನದಲ್ಲಿ ಅರಮನೆ ಯನ್ನಾಗಿ ಮಾಡುವ ಶಕ್ತಿಯೂ ಯುಕ್ತಿಯೂ ನಿಮ್ಮಲ್ಲಿ ನೆಲೆಗೊಂಡಿವೆ. ಕೆಲವರು ಯಾವುದಾದರೂ ಒಂದು ಯಕ್ಷಿಣಿಯ ಸಹಾಯದಿಂದ ಅನೇಕ ಕೆಲಸ

ಗಳನ್ನು ಮಾಡುವರು ; ತಾವು ಅಂತಹ ಸಹಾಯವಾವುದೂ ಇಲ್ಲದೆ ಅದಕ್ಕಿಂತ ಹೆಚ್ಚಾಗಿ ಮಾಡಬಲ್ಲಿರಿ''

ಅದಕ್ಕೆ ಮಲಯಸಿಂಹನು ನಗುತ್ತ ''ನೀವು ಈ ವರ್ತಮಾನವನ್ನು ಈ ಪಟ್ಟಣದಲ್ಲಿ ಹರಡಿದರೆ ಅದು ಇಲ್ಲಿಯ ರಮಣಿಯರಿಗೆ ಚಿತ್ತಕ್ಷೋಭೆಯನ್ನುಂಟು ಮಾಡುವುದು" ಎಂದು ಹೇಳಿ ಹೊರಟು ಹೋದನು.

ಉದಯಸಿಂಹನು ಪುನಃ ತಾಯಿಯ ಬಳಿಗೆ ಬಂದನು. ಅವಳು ಚಿಂತಾಕ್ರಾಂತೆಯಾಗಿದ್ದುದನ್ನು ನೋಡಿ,

''ಅಮ್ಮಾ. ನಿನ್ನ ಮುಖವೇಕೆ ಇಂದು ವಿವರ್ಣವಾಗಿದೆ ?"

''ಅಪ್ಪಾ ಮಗೂ! ಇದನ್ನು ನಿನ್ನ ತಂದೆಯು ನೋಡಿ ನಿನ್ನನ್ನೇನಾದರೂ ಕೇಳಿದರೋ"

''ಅಮ್ಮಾ, ಅವರೇನೋ ಅದನ್ನು ನೋಡಿದರು. ನಿನಗೆ ಸ್ವಸ್ಥ ವಿಲ್ಲವೆಂದು ಹೇಳಲಿಲ್ಲವೆ ?"

''ಅದು ಹೋಗಲಿ. ಈ ರಾಜಾಮಲಯಸಿಂಹನಾರು ?"

''ಮಲಯದ್ವೀಪದ ರಾಜನೆಂದು ಅವನು ಹೇಳಿಕೊಳ್ಳುತ್ತಾನೆ. ಆ ದ್ವೀಪವು ನಿರ್ಮಾನುಷ್ಯವಾದುದೆಂತಲೂ, ಬರೆಯ ಬಂಡೆಯ ನೆಲವೆಂತಲೂ, ಕಡಲಗಳ್ಳರೂ ಕಳ್ಳವ್ಯಾಪಾರಿಗಳೂ ಆಗಾಗ ಬಂದು ತಂಗುವ ಸ್ಥಳವೆಂತಲೂ ವೀರಸಿಂಹನು ಹೇಳುತ್ತಿದ್ದನು. ಈ ರಾಜನು ಕಳ್ಳನೋ ಕಳ್ಳ ವ್ಯಾಪಾರಿಯೋ ತಿಳಿಯದು. ಹಣವಿರುವುದರಿಂದ ದಾನಧರ್ಮಗಳನ್ನು ವಿಶೇಷವಾಗಿ ಮಾಡುತ್ತಾನೆ ; ನೋಡಿದವರೆಲ್ಲಾ ಅವನ ಗುಣವನ್ನೂ ನಡತೆಯನ್ನೂ ಶ್ಲಾಘಿಸುವರು."

''ನಾನು ನೋಡಿದವರೆಗೂ ನೀನು ಹೇಳುವಂತೆ ಅವನ ಗುಣ ನಡತೆಗಳು ಶ್ಲಾಘ್ಯವಾಗಿಯೇ ಇವೆ."

''ಅಮ್ಮಾ. ನಾನೂ ಅನೇಕ ದೇಶಗಳನ್ನು ಸುತ್ತಿ ಅನೇಕ ದೊಡ್ಡ ಮನುಷ್ಯರಲ್ಲಿ ಕಲೆತು ಅವರ ಔದಾರ್ಯವನ್ನೂ ನಡತೆಗಳನ್ನೂ ನೋಡಿದ್ದೇನೆ ; ಹೀಗಿರುವವರನ್ನು ಎಲ್ಲಿಯೂ ನೋಡಲಿಲ್ಲ"ಎಂದುಉದಯಸಿಂಹನು ಹೇಳುತ್ತಲೆ, ರಾಧಾಬಾಯಿಯು ಸ್ವಲ್ಪ ಯೋಚಿಸಿ

‘‘ಅಪ್ಪಾ ಮಗೂ, ನೀನೇನೂ ಚಿಕ್ಕವನಲ್ಲ; ಇವಲ್ಲದೆ ನಿನ್ನ ವಯಸ್ಸಿಗೆ ಹೆಚ್ಚಾದ ಬುದ್ಧಿಯನ್ನೂ ವಿವೇಕವನ್ನೂ ಪಡೆದಿದ್ದೀಯೆ. ನಿನ್ನ ಮೇಗಣ ಪ್ರೀತಿಯಿಂದ ಒಂದು ಮಾತನ್ನು ಕೇಳುತ್ತೇನೆ; ಸರಿಯಾಗಿ ಬದಲನ್ನು ಹೇಳು. ಮಲಯಸಿಂಹನನ್ನೂ ಅವನ ನಡತೆಯನ್ನೂ ನೀನು ವಿಶೇಷವಾಗಿ ನೋಡಿರಬಹುದು ಅವನು ನಿಜವಾಗಿಯೂ ದೊಡ್ಡ ಮನುಷ್ಯನೋ ?’’

‘‘ಅಮ್ಮಾ, ಅವನು ದೊಡ್ಡ ಮನುಷ್ಯನೋ ಅಲ್ಲವೋ ನನಗೆ ತಿಳಿಯದು; ನಡತೆಯೇನೋ ಒಳ್ಳೆಯದು. ನೋಡಿದವರೆಲ್ಲರೂ ಅವನನ್ನು ದೊಡ್ಡ ಮನುಷ್ಯನೆಂದೇ ಹೇಳುತ್ತಾರೆ.’’

‘‘ನಿನ್ನ ನಿಜವಾದ ಅಭಿಪ್ರಾಯವೇನು ?’’

‘‘ಅವನ ವಿಷಯದಲ್ಲಿ ನನಗೆ ಇನ್ನೂ ಯಾವ ಅಭಿಪ್ರಾಯವೂ ಉಂಟಾಗಿಲ್ಲ. ಅವನ ಸ್ಥಿತಿಯನ್ನು ನೋಡಿ ‘ಪೂರ್ವ ಜನ್ಮದಲ್ಲಿ ಯಾರೋ ಅವನನ್ನು ಹಿಂಸೆಪಡಿಸಿ ಕೊಂದುಹಾಕಿರಬಹುದು. ಆದುದರಿಂದಲೇ ಈಗ ಅವನು ಅವರನ್ನು ಶಿಕ್ಷಿಸುವುದಕ್ಕಾಗಿ ಮನುಷ್ಯವೇಷವನ್ನು ತಾಳಿ ವಿಶೇಷ ದ್ರವ್ಯವನ್ನು ಸಂಪಾದಿಸಿ ದೊಡ್ಡವನಾಗಿರಬಹುದು’ ಎಂದ ವೀರಸಿಂಹನು ಹೇಳಿದ್ದನು.’’

ಇದನ್ನು ಕೇಳುತ್ತಲೆ ರಾಧಾಬಾಯಿಯು ಗಡಗಡನೆ ನಡುಗಿ ಸ್ವಲ್ಪ ಹೊತ್ತು ಸುಮ್ಮನಿದ್ದು,

‘‘ಅವನ ವಯಸ್ಸೇನು’’

‘‘ಸುಮಾರು ಮೂವತ್ತೈದು ಮೂವತ್ತಾರು ಇರಬಹುದು;’’

‘‘ಅಷ್ಟು ಸ್ವಲ್ಪ ವಯಸ್ಸಿರಲಾರದು.’’

‘‘ಅದರಲ್ಲಿ ಏನೂ ಸಂದೇಹವಿಲ್ಲ. ಅವನು ಅನೇಕಾವೃತ್ತಿ ಇಂಥಿಂಥ ವಯಸ್ಸಿನಲ್ಲಿ ಇಂಥಿಂಥ ಕೆಲಸಗಳನ್ನು ಮಾಡಿದೆನೆಂದು ನನ್ನೊಂದಿಗೆ ಹೇಳಿರುವನು; ಅದನ್ನೆಲ್ಲಾ ನಾನು ಜ್ಞಾಪಕವಿಟ್ಟುಕೊಂಡು ತಾಳೆ ನೋಡಿದಾಗ ಅವನ ವಯಸ್ಸಿನಲ್ಲಿ ಯಾವ ತಪ್ಪೂ ನನಗೆ ಸಿಕ್ಕಲಿಲ್ಲ. ಇದಲ್ಲದೆ, ಅವನ ಕಣ್ಣಿನ ಹೊಳಪೂ. ಸುಕ್ಕಿಲ್ಲದ ಹಣೆಯೂ ಕರಿಯ ಕೂದಲೂ ಯೌವನವನ್ನು ಸೂಚಿಸುತ್ತಲಿದೆ.’’

ರಾಧಾಬಾಯಿಯು ತಲೆಯನ್ನು ತಗ್ಗಿಸಿಕೊಂಡು ಕಣ್ಣೀರನ್ನು ಸುರಿಸುತ್ತ,

‘‘ಮಗೂ, ಆ ರಾಜನು ನಿನ್ನನ್ನೇನೋ ಕಾಪಿಟ್ಟನು; ಅವರ ಸ್ನೇಹದಿಂದ ನಿನಗೆ ಮೇಲಾಗುವುದೋ ?’’

‘‘ಅದರಿಂದ ನನಗೇನೂ ಅಪಾಯವಾಗುವುದಿಲ್ಲ.”

‘‘ಏನೂ ತೋರಲಿಲ್ಲ. ನೀನು ವಿವೇಕಿ, ಆದರೂ ಪ್ರೀತಿಯಿಂದ ನಾನು ಹೇಳುವ ಮಾತನ್ನು ಕೇಳು. ಅವನ ವಿಷಯದಲ್ಲಿ ಬಲು ಎಚ್ಚರಿಕೆಯಿಂದಿರು.’’

‘‘ಅಮ್ಮಾ, ಅವನು ಜೂಜಾಡುವವನಲ್ಲ, ಕುಡಿಯುವವನಲ್ಲ, ವಿಶೇಷ ದ್ರವ್ಯವನ್ನು ಸಂಪಾದಿಸಿರುವುದರಿಂದ ಸಾಲವನ್ನೂ ಮಾಡುವವನಲ್ಲ; ಹೀಗಿರುವಲ್ಲಿ ಆವನಿಂದ ನಮಗೇನು ಭಯ ?’’

‘‘ಅದೇನೋ ಸರಿ. ನಿನ್ನ ಪ್ರಾಣವನ್ನು ಕಾಪಿಟ್ಟವನು ನಿನಗೆ ಯಾವ ಅಪಾಯವನ್ನೂ ಮಾಡಲಾರನು. ನಿಮ್ಮಪ್ಪನ ವಿಷಯದಲ್ಲಿ ಅವನು ಹೇಗಿದ್ದನು ?”

‘‘ಅವನು ನಮ್ಮಪ್ಪನ ಸಂಗಡ ಮಾತನಾಡುತ್ತಲಿದ್ದಾಗ ಮಧ್ಯೆ ಮಧ್ಯೆ ಯಥೋಚಿತವಾಗಿ ಸ್ತೋತ್ರವನ್ನು ಮಾಡುತ್ತಲಿದ್ದುದರಿಂದ ಅವರು ಸಂತೋಷಪಟ್ಟುಕೊಂಡು ಹೋದರು’’ಎನ್ನಲು ರಾಧಾಬಾಯಿಯು ಆಲೋಚನಾಪರಳಾಗಿ ನಿದ್ದೆ ಬಂದವಳಂತೆ ಕಣ್ಣುಗಳನ್ನು ಮುಚ್ಚಿಕೊಂಡಳು. ಉದಯಸಿಂಹನು ಅವಳಿಗೆ ನಿದ್ದೆ ಬಂದಿತೆಂದು ತಿಳಿದು ಮೆಲ್ಲಗೆ ಎದ್ದು ಹೊರಗೆ ಬಂದು ಸದ್ದಾಗದಂತೆ ಬಾಗಿಲನ್ನು ಮುಚ್ಚಿಕೊಂಡು ಲಾಯಕ್ಕೆ ಹೋಗಿ ಮಲಯಸಿಂಹನ ಕುದುರೆಗಳ ಅಂದವನ್ನು ನೆನೆಸಿಕೊಂಡು ಸಂಕಟಪಡುತ್ತಿದ್ದನು.

---

# ಮೂವತ್ತನೆಯ ಅಧ್ಯಾಯ

## ಮುಯ್ಯಿಗೆ ಮುಯ್ಯಿ

ದೊಡ್ಡ ಮನುಷ್ಯರು ಇರುವ ಶ್ರೇಣಿಯೊಳಗೆ ಮಲಯಸಿಂಹನ ಕಡೆಯವರು ಆವರಣವುಳ್ಳ ಸೌಧವೊಂದನ್ನು ಸಿದ್ಧಪಡಿಸಿದ್ದರು. ಅದರ ಉದ್ಯಾನದಲ್ಲಿ ಬಗೆಬಗೆಯ ಹೂಗಿಡಗಳೂ, ಅಪೂರ್ವವಾಗಿಯೂ ಮನೋಹರವಾಗಿಯೂ ಇರುವ ಮರಗಳೂ, ಕುಳಿತುಕೊಳ್ಳುವ ಆಸನಗಳೂ, ಲತಾಗೃಹಗಳೂ

ಇದ್ದುವು. ಉದಯಸಿಂಹನ ಮನೆಯಿಂದ ಆರು ನಿಮಿಷಗಳೊಳಗೆ ಮಲಯಸಿಂಹನು ತನ್ನ ಮನೆಗೆ ಬಂದು ಸೇರಿದನು. ಆ ದಾರಿಯಲ್ಲಿ ಕುದುರೆ ಸವಾರಿಯನ್ನು ಮಾಡಿಕೊಂಡು ಹೋಗುತ್ತಲಿದ್ದ ಶ್ರೀಮಂತರ ಮಕ್ಕಳು ಮಲಯಸಿಂಹನ ಕುದುರೆಗಳನ್ನು ಕಂಡು ಇಂತಹ ಬಂಡಿಯನ್ನೂ ಕುದುರೆ ಗಳನ್ನೂ ನಾವೆಂದೂ ಕಾಣೆವು. ಇವುಗಳಿಗೆ ಯಾವ ಭಾಗ್ಯಶಾಲಿಯು ಸ್ವಾಮಿಯೋ ನೋಡಬೇಕೆಂಬ ಕುತೂಹಲದಿಂದ, ತಮ್ಮ ಕುದುರೆಗಳನ್ನು ವೇಗವಾಗಿ ಓಡಿಸಿಕೊಂಡು ಆ ಬಂಡಿಯ ಹಿಂದೆಯೇ ಬಂದರು. ಆದರೆ ಬಂಡಿಯು ಎಲ್ಲಿಯೂ ನಿಲ್ಲದೆ ನೆಟ್ಟಗೆ ಆವರಣವನ್ನು ಹೊಕ್ಕು ಮನೆಯ ಬಾಗಿಲ ಮುಂದೆ ನಿಂತುದರಿಂದ ಇವರೆಲ್ಲರೂ ಆಶಾಭಂಗದಿಂದ ತಮ್ಮ ತಮ್ಮ ದಾರಿಯನ್ನು ಹಿಡಿದುಕೊಂಡು ಹೋದರು.

ಯಜಮಾನನು ಸುಖವಾಗಿ ಊರಿಗೆ ಬಂದು ಸೇರಿದನೆಂಬ ಸಂತೋಷ ದಿಂದ ತಲೆಬಾಗಿಲಲ್ಲಿ ನಿಂತಿದ್ದ ವಾಮನಭಟ್ಟನು ನಗುಮೊಗದೊಡನೆ ಬಂಡಿಯ ಬಳಿಗೆ ಬಂದು ಒಳಗೆ ಕರೆದುಕೊಂಡು ಹೋದನು. ಕೂಡಲೇ ಭದ್ರಕನು ಮಲಯಸಿಂಹನನ್ನು ಕಾಣಿಸಿಕೊಂಡು,

"ಮಹಾಸ್ವಾಮಿಾ, ಇದೇ ತಮಗೋಸ್ಕರ ಮಾಡಿದ ಮನೆ, ಇದನ್ನು ಪರಾಂಬರಿಸಬೇಕು"

ಎಂದು ಹೇಳಿ, ಯಜಮಾನನಿಗೆ ಮನೆಯನ್ನೆಲ್ಲಾ ತೋರಿಸಿದನು. ಎಲ್ಲವನ್ನೂ ನೋಡಿ ಮಲಯಸಿಂಹನು,

"ಮನೆಯೇನೋ ಅನುಕೂಲವಾಗಿದೆ, ನಡುಮನೆಗೆ ಹಾಸಿರುವ ಕಲ್ಲುಗಳು ಈಗಿನ ಕಾಲಕ್ಕೆ ತಕ್ಕಂತೆ ಅಂದವಾಗಿಲ್ಲ; ಅವುಗಳನ್ನು ಕೀಳಿಸಿ ಪಂಚರಂಗೀ ಕಲ್ಲುಗಳನ್ನು ನಾಳೆಯೇ ಹಾಸಿಸಿ ಬಿಡು, ನಾನು ಈ 'ಊರಿಗೆ ಬಂದ ಸುದ್ದಿಯನ್ನು ಧನಾಗಾರಪತಿ ಶ್ರೀಮಂತ ದುರ್ಮತಿಯವರಿಗೆ ತಿಳಿಸಿ ದೆಯೋ? ನಾನು ಹೇಳಿದ್ದ ದಳ್ಳಾಳಿಯು ಬಂದಿರುವನೋ?"

"ಮಹಾಸ್ವಾಮಿಾ! ಅಪ್ಪಣೆಯಾದಂತೆ ದುರ್ಮತಿಯವರಿಗೆ ತಮ್ಮ ಆಗಮನವನ್ನು ಆಗಲೇ ತಿಳಿಸಿದೆನು; ದಳ್ಳಾಳಿಯನ್ನೂ ಕರೆದುಕೊಂಡು ಬಂದಿದ್ದೇನೆ. ಅವನು ಇಲ್ಲಿರುವನು" ಎಂದು ಹೇಳಿ ಯಜಮಾನನ ಅಪ್ಪಣೆಯನ್ನು ನಿರೀಕ್ಷಿಸುತ್ತ ಅಲ್ಲಿಯೇ ನಿಂತನು. ಮಲಯಸಿಂಹನು ದಳ್ಳಾಳಿಯನ್ನು ಕರೆಸಿ

" ಏನಪ್ಪಾ, ಆ ಮನೆಯ ಕ್ರಯಪತ್ರವು ಸಿದ್ಧವಾಗಿದೆಯೋ "

" ಮಹಾಸ್ವಾಮಿಾ, ಸಿದ್ಧವಾಗಿದೆ "

" ಆ ಮನೆ ಇರುವುದೆಲ್ಲಿ ?"

ದಳ್ಳಾಳಿಯು ಆಶ್ಚರ್ಯದಿಂದ "ಮಹಾಸ್ವಾಮಿಾ! ಮನೆಯನ್ನು ಕೊಂಡುಕೊಳ್ಳುವವರು ಅದು ಇಂತಹಕಡೆಯಿದೆ ಎಂದು ತಿಳಿಯಬೇಡವೆ ?" ಎಂದನು.

ಅದಕ್ಕೆ ತಾನು ಮಾಡಿದ ಪ್ರಶ್ನೆಯು ಸ್ವಲ್ಪ ಪೆಚ್ಚಾಯಿತೆಂದು ತಿಳಿದು ಮಲಯಸಿಂಹನು " ಅಪ್ಪಾ ! ನಾನು ಈ ಊರಿನವನಲ್ಲ, ಈ ಊರನ್ನು ಎಂದೂ ನೋಡಿದವನಲ್ಲ; ಈಗತಾನೇ ಬಂದಿದ್ದೇನೆ. ಅದಕ್ಕಾಗಿ ಹಾಗೆ ಕೇಳಿದೆನು."

" ಹಾಗಾದರೆ ಸರಿ, ಮಹಾಸ್ವಾಮಿಾ! ಆ ಮನೆಯು ಇಲ್ಲಿಗೆ ಸುಮಾರು ಮುನ್ನೂರು ಗಜಗಳ ದೂರದಲ್ಲಿರುವ ಸಂಪಿಗೆಯ ವನದಲ್ಲಿದೆ" ಎಂದು ಹೇಳಿದ ಮಾತನ್ನು ಕೇಳಿ ಭದ್ರಕನು ಸ್ವಲ್ಪ ಬೆಪ್ಪಾದನು. ಅದನ್ನು ಮಲಯಸಿಂಹನು ಕಂಡೂ ಕಾಣದವನಂತೆ ದಳ್ಳಾಳಿಯನ್ನು ಕುರಿತು " ಅಷ್ಟು ಸಮಿಾಪವಾಗಿದ್ದರೆ ಅದು ಊರ ಹೊರಗಿರಲಾರದು "

" ಮಹಾಸ್ವಾಮಿಾ ! ಇಲ್ಲ."

" ಅಂತಹ ಮನೆಯನ್ನು ಏತಕ್ಕೆ ಗೊತ್ತುಮಾಡಿದೆ" ಎಂದು ಮಲಯ ಸಿಂಹನು ಭದ್ರಕನನ್ನು ಕೇಳಲು, ಅವನು

" ಅದನ್ನು ನಾನು ಗೊತ್ತುಮಾಡಲಿಲ್ಲವಲ್ಲಾ, ದಯೆಮಾಡಿ ಜ್ಞಾಪಿಸಿ ಕೊಂಡರೆ —————",

ಎನ್ನುವಷ್ಟರಲ್ಲಿಯೇ ಮಲಯಸಿಂಹನು

" ಓಹೋ! ಈಗ ಜ್ಞಾಪಕಕ್ಕೆ ಬಂದಿತು; ಯಾವುದೋ ಒಂದು ವೃತ್ತಾಂತಪತ್ರಿಕೆಯಲ್ಲಿ ಓದಿ ಮೋಸಹೋದೆನು" ಎಂದನು.

ಆ ವೇಳೆಗೆ ಭದ್ರಕನು ಸ್ವಲ್ಪ ಎಚ್ಚತ್ತು " ಮಹಾಸ್ವಾಮಿಾ ! ಈಗಲೂ ಅಪ್ಪಣೆಯಾದರೆ ಊರ ಹೊರಗೆ ಅನುಕೂಲವಾದ ಒಂದು ಮನೆಯನ್ನು ಮಾಡುವೆನು" ಎಂದು ಹೇಳಲು, ದಳ್ಳಾಳಿಯು ತನಗೆ ಬರುವ ಲಾಭವು ಎಲ್ಲಿ ತಪ್ಪಿಹೋಗುವುದೋ ಎಂದು ತಟ್ಟನೆ "ಮಹಾಸ್ವಾಮಿಾ! ಈ ಮನೆಯು

ಊರೊಳಗಿದ್ದರೂ ದೊಡ್ಡ ಸಂಪಿಗೆಯ ವನದ 'ಮಧ್ಯೆ ಇರುವುದರಿಂದ ಊರ ಹೊರಗಿದ್ದಂತೆಯೇ ಏಕಾಂತವಾಗಿ ಅನುಕೂಲವಾಗಿರುವುದು. ಇದಲ್ಲದೆ ತಮಗೋಸ್ಕರ ತುಂಬ ಶ್ರಮಪಟ್ಟು ಕ್ರಯಪತ್ರವನ್ನು ಸಿದ್ಧಪಡಿಸಿದ್ದೇನೆ" ಎಂದನು.

ಭದ್ರಕನು ಏನನ್ನೋ ಹೇಳಲು ತೊಡಗಿದನು; ಅಷ್ಟರಲ್ಲಿಯೇ ಮಲಯಸಿಂಹನು ದಳ್ಳಾಳಿಯಿಂದ ಕ್ರಯಪತ್ರವನ್ನು ತೆಗೆದುಕೊಂಡು ಓದಿ ನೋಡಿ, "ಭದ್ರಕಾ, ಇವನಿಗೆ ಐವತ್ತು ಸಾವಿರ ವರಹಗಳನ್ನು ಕೊಟ್ಟು ಕಳುಹಿಸು" ಎಂದನು. ಅದನ್ನು ಕೇಳಿ ದಳ್ಳಾಳಿಯು "ಮಹಾಸ್ವಾಮಿಾ! ನನಗೆ ಬರಬೇಕಾದುದು ಒಟ್ಟು ನಲವತ್ತೈದು ಸಾವಿರ ವರಹಗಳು" ಎನ್ನಲು, ರಾಜನು "ಅಪ್ಪಾ, ನೀನು ಸತ್ಯವಾದಿ, ನಿನ್ನ ಸತ್ಯಕ್ಕಾಗಿಯೂ ಶ್ರಮಕ್ಕಾಗಿಯೂ ಐದು ಸಾವಿರ ವರಹಗಳನ್ನು ಉಚಿತವಾಗಿ ಕೊಟ್ಟಿರುವೆನು; ಹೋಗು" ಎಂದು ಹೇಳಿ ಕ್ರಯಪತ್ರವನ್ನು ಪೆಟ್ಟಿಗೆಯಲ್ಲಿಟ್ಟುಕೊಂಡು ಅವನನ್ನು ಕಳುಹಿಸಿ ಕೊಟ್ಟನು.

ಇವನಂತಹ ಉದಾರಿಯನ್ನು ನಾನೆಲ್ಲಿಯೂ ಕಂಡಿಲ್ಲವೆಂದು ದಳ್ಳಾಳಿಯು ಅವನನ್ನು ಬಹುವಾಗಿ ಸ್ತೋತ್ರಮಾಡುತ್ತ ಭದ್ರಕನ ಹಿಂದೆ ಹೊರಟನು. ಇಬ್ಬರೂ ಹೋದ ಅನಂತರ ಮಲಯಸಿಂಹನು ತಾನು ಪುಸ್ತಕದಲ್ಲಿ ಗುರುತು ಮಾಡಿಕೊಂಡಿದ್ದ ಮನೆಯೂ ಕ್ರಯಪತ್ರದಲ್ಲಿ ಕಾಣಿಸಿರುವ ಮನೆಯೂ ಒಂದೇ ಎಂಬುದನ್ನು ದೃಢಪಡಿಸಿಕೊಳ್ಳಲು ತನ್ನ ಪೆಟ್ಟಿಗೆಯಿಂದ ಪತ್ರವನ್ನೂ ಪುಸ್ತಕವನ್ನೂ ತೆಗೆದು ಹೋಲಿಸಿನೋಡಿ ತೃಪ್ತಿಪಟ್ಟು "ಭದ್ರಕನು ಹಿಂದೆ ಧರ್ಮಭೀತಿಯಿಂದ ಮಾಡಿದ್ದ ಒಪ್ಪಿಗೆಯನ್ನು ನಂಬಿ ಮುಂದಿನ ಕೆಲಸವನ್ನು ನಡೆಸಬೇಕಾಗಿದೆ; ಆ ಒಪ್ಪಿಗೆಯು ನಿಜವೋ ಸುಳ್ಳೊ ಜಾಗ್ರತೆಯಾಗಿಯೇ ನಿಶ್ಚಯಿಸುವೆನು" ಎಂದು ಯೋಚಿಸಿ, ಭದ್ರಕನನ್ನು ಕರೆದು "ರಾತ್ರಿಯೂಟ ವಾದ ಕೂಡಲೆ ಸಂಪಿಗೆಯ ವನದ ಮನೆಯನ್ನು ನೋಡುವುದಕ್ಕೆ ಹೋಗು ತ್ತೇನೆ, ಆ ವೇಳೆಗೆ ಬಂಡಿಯನ್ನು ಸಿದ್ಧಪಡಿಸು; ಇಬ್ಬರೂ ಹೋಗೋಣ" ಎಂದನು.

"ಮಹಾಸ್ವಾಮಿಾ! ನಾನೂ —— ಅಲ್ಲಿಗೆ —— ಬರಬೇಕೇ" ಎಂದು ಭದ್ರಕನು ಭೀತಿಯಿಂದ ತೊದಲುತ್ತ ಕೇಳಿದುದಕ್ಕೆ ಮಲಯಸಿಂಹನು

"ಏನು! ನಾನಿರುವ ಕಡೆ ನೀನಿರಬೇಕು, ನಾನು ಹೋಗುವ ಕಡೆ ನೀನೂ ಹೋಗಬೇಕು" ಎಂದನು. ಆ ಮಾತನ್ನು ಕೇಳಿ ಭದ್ರಕನು ಏನನ್ನೂ ಹೇಳದೆ ಸುಮ್ಮನಿರಲು, ಮಲಯಸಿಂಹನು

"ಭದ್ರಕಾ, ಇಂದು ನಿನಗೆ ಬುದ್ಧಿ ಸರಿಯಾಗಿಲ್ಲವೆಂದು ತೋರುತ್ತದೆ; ನೀನು ಕುಡಿಯುವುದಿಲ್ಲನೆಂದು ನನ್ನ ಸಂಗಡ ಸುಳ್ಳು ಹೇಳಿದಂತೆ ಕಾಣುತ್ತದೆ"

"ಮಹಾಸ್ವಾಮಿ! ನಾನು ಸುಳ್ಳನ್ನಾಡಲಿಲ್ಲ. ನನಗೆ ಆ ದುರಭ್ಯಾಸವೇ ಇಲ್ಲ."

"ಹಾಗಾದರೆ ಇದೇಕೆ ಹೀಗಿದ್ದೀಯೇ? ನಾನು ಹೇಳಿದುದು ನಿನಗೆ ತಿಳಿಯಲಿಲ್ಲವೋ" ಎಂದು ಗದ್ದರಿಸಿಕೊಳ್ಳಲು, ಭದ್ರಕನು ಒಂದೇ ಹಾರಿನಲ್ಲಿ ಲಾಯವನ್ನು ಸೇರಿ ಬಂಡಿಯನ್ನು ಸಿದ್ಧಪಡಿಸಿರುವಂತೆ ಹೇಳಿ ಬಂದನು.

ಊಟವಾದ ಮೇಲೆ ಮಲಯಸಿಂಹನೂ ಭದ್ರಕನೂ ಬಂಡಿಯಲ್ಲಿ ಕುಳಿತು ಹೊರಟರು. ಬಂಡಿಯು ಹೊರಟಾಗಲೇ ಭದ್ರಕನಿಗೆ ಮನಸ್ಸಿನಲ್ಲಿ ಒಂದು ವಿಧವಾದ ಕಳವಳವುಂಟಾಯಿತು; ಸಂಪಿಗೆಯ ವನವು ಹತ್ತಿರವಾದ ಹಾಗೆಲ್ಲಾ ಅವನ ಕಳವಳವು ಹೆಚ್ಚುತ್ತ ಬಂದಿತು. ಬಂಡಿಯು ಮನೆಯ ಮುಂದೆ ನಿಂತ ಕೂಡಲೆ ಮಲಯಸಿಂಹನು ಕೆಳಗೆ ಇಳಿದು ಭದ್ರಕನನ್ನು ಮುಂದಿಟ್ಟುಕೊಂಡು ಹೊರಟನು. ಭದ್ರಕನು ಬಾಯಲ್ಲಿ ಏನನ್ನೋ ಗೊಣಗುತ್ತ, ಅನುಮಾನಿಸಿ ಅನುಮಾನಿಸಿ, ಮೆಲ್ಲಮೆಲ್ಲಗೆ ಮುಂದೆ ಹೋಗುತ್ತಲಿದ್ದನು. ಮನೆಯ ತಲೆಬಾಗಿಲನ್ನು ಸೇರುವ ವೇಳೆಗೆ ಅವನ ಮುಖವು ಬೆವತು ನೀರು ಹರಿಯುತ್ತಿದ್ದಿತು.

"ಬಾಗಿಲನ್ನು ತಟ್ಟಿ ಒಳಗಿರುವ ಆಳನ್ನು ಎಚ್ಚರಿಸು" ಎಂದು ಮಲಯಸಿಂಹನು ಹೇಳಲು, ಭದ್ರಕನು ಎಷ್ಟು ಪ್ರಯತ್ನಮಾಡಿದರೂ ಮುಂದೆ ಹೋಗಲು ಕಾಲು ಏಳಲೇ ಇಲ್ಲ, ಕೈಗಳು ಸೇದಿಕೊಂಡಂತಾದುವು. ಯಜಮಾನನು ಕೋಪಿಸಿಕೊಳ್ಳುವನೆಂಬ ಭಯದಿಂದ ಅವನು ಅತಿ ಸಾಹಸದಿಂದ ಬಾಗಿಲನ್ನು ತಟ್ಟಲು ಒಳಗಿದ್ದ ಆಳು "ಯಾರದು?" ಎಂದನು.

"ರಾಜಾಮಲಯಸಿಂಹರು ಕ್ರಯಕ್ಕೆ ಕೊಂಡು ಈ ಮನೆಯನ್ನು ನೋಡಬೇಕೆಂದು ಬಿಜಯಮಾಡಿದ್ದಾರೆ" ಎಂದು ಭದ್ರಕನು ನಡುಗುತ್ತ ಹೇಳಲು, ಅವನ ಅವಸ್ಥೆಯನ್ನು ನೋಡುತ್ತಲಿದ್ದ ಮಲಯಸಿಂಹನು ಇವನ

ರೀತಿಯನ್ನು ನೋಡಿದರೆ ಇವನು ಹಿಂದೆ ಹೇಳಿದ್ದುದು ನಿಶ್ಚಯವೆಂದು ತೋರುತ್ತಲಿದೆ; ಆದರೂ ಇನ್ನೂ ಪರೀಕ್ಷಿಸಿ ನೋಡೋಣವೆಂದು ಯೋಚಿಸುತ್ತಲಿರುವಾಗ, ಒಳಗಿದ್ದ ಆಳು ಬಾಗಿಲನ್ನು ತೆರೆದು "ಮಹಾಸ್ವಾಮಿ, ಈ ಮನೆಗೆ ಈಗ ತಾವು ಯಜಮಾನರಾದಿರೆಂಬುದನ್ನು ದ ಳ್ಳಾ ಳಿ ಯು ನನಗೆ ಹೇಳಿ ಹೋದನು" ಎಂದು ಹೇಳಿ ಅಡ್ಡಬಿದ್ದು,

"ಮಹಾಸ್ವಾಮಿ, ಹಿಂದೆ ಇದ್ದ ಯಜಮಾನರು ನನ್ನನ್ನು ಕಾಪಿಟ್ಟುಕೊಂಡು ಬಂದಂತೆಯೇ ತಾವೂ ಪಾದಸೇವಕನನ್ನು ಕಾಪಿಟ್ಟುಕೊಂಡು ಬರಬೇಕು."

"ಈ ಮನೆಯು ಹಿಂದೆ ಯಾರದು ?"

"ಇದು ಶ್ರೀಮಂತ ಶಾಂತವೀರರ ಮನೆ."

"ಓಹೋ ! ಹಾಗೋ ? ಆ ಹೆಸರನ್ನು ನಾನೆಲ್ಲೋ ಕೇಳಿದ ನೆನಪಿದೆ. ತಾಳು, ತಾಳು ; ಅವನಿಗೆ ಒಬ್ಬಳೇ ಮಗಳಲ್ಲವೇ ? ಅವಳನ್ನು ವಲ್ಲಭದೇವನೆಂಬ ನ್ಯಾಯಾಧಿಪತಿಗೆ ಮದುವೆ ಮಾಡಿಕೊಟ್ಟನಲ್ಲವೇ" ಎಂದು ಹೇಳುತ್ತ ಭದ್ರಕನನ್ನು ನೋಡಲು ಅವನಿಗೆ ಮುಖವು ಬಿಳ್ಚೇರಿ ಕಾಲುಗಳು ನಡುಗಿ ಕೆಳಗೆ ಬೀಳುವಂತಾಗಿ ಪಕ್ಕದ ಗೋಡೆಯನ್ನು ಹಾಗೆಯೇ ಒರಗಿಕೊಂಡನು.

"ಒಂದು ದೀಪವನ್ನು ಹೊತ್ತಿಸು, ಮನೆಯನ್ನು ನೋಡೋಣ " ಎಂದು ಮಲಯಸಿಂಹನು ಆಳಿಗೆ ಹೇಳಲು, ಅವನು

"ಮಹಾಸ್ವಾಮಿ, ದೀಪದಲ್ಲಿ ಎಣ್ಣೆ ಬತ್ತಿ ಎರಡೂ ಇಲ್ಲ" ಎಂದನು. ಆಗ ಭದ್ರಕನು

"ಮಹಾಸ್ವಾಮಿ, ಈ ಕತ್ತಲೆಯಲ್ಲಿ ಮನೆಯನ್ನು ನೋಡುವುದಕ್ಕಿಂತ ಬೆಳಿಗ್ಗೆ ನೋಡುವುದು ಉತ್ತಮವಲ್ಲವೆ?"

"ಬಂಡಿಯ ಲಾಂದರಗಳಲ್ಲಿ ಒಂದನ್ನು ತೆಗೆದುಕೊಂಡುಬಾ"

ಭದ್ರಕನಿಗೆ ಲಾಂದರವನ್ನು ತರಲು ಶುದ್ಧವಾಗಿ ಮನಸ್ಸಿರಲಿಲ್ಲ ; ತರದಿದ್ದರೆ ಮಲಯಸಿಂಹನು ಏನು ಹೇಳುವನೋ ಎಂಬ ಭಯದಿಂದ ಮೆಲ್ಲಗೆ ಬಂಡಿಗೆ ಸಿಕ್ಕಿಸಿದ್ದ ಬೆಳಕನ್ನು ತರಲು, ರಾಜನು "ನೀನು ಮುಂದೆ ನಡೆ" ಎಂದು ಹೇಳಿ, ತಾನು ಅವನ ಹಿಂದೆ ಮನೆಯನ್ನು ಪ್ರವೇಶಿಸಿದನು.

ಮನೆಯು ಸುಮಾರಾಗಿ ವಿಸ್ತಾರವಾಗಿದ್ದಿತು. ಅದನ್ನೆಲ್ಲಾ ನೋಡಿ

"ಇನ್ನು ಮಹಡಿಯನ್ನು ನೋಡೋಣ ಬಾ" ಎಂದು ಹೊರಟನು. ಮಹಡಿಯ ಮೇಲೆ ಮಧ್ಯೆ ಒಂದು ದೊಡ್ಡ ಪಡಸಾಲೆಯೂ ಅತ್ತಿತ್ತ ಎರಡು ಸಣ್ಣ ಕೋಣೆಗಳೂ ಇದ್ದುವು. ಆ ಸಣ್ಣ ಮನೆಗಳಿಗೆ ಸೇರಿದಂತೆ ಎರಡು ಸಣ್ಣ ಬಚ್ಚಲು ಮನೆಗಳೂ ಅವುಗಳಲ್ಲಿ ಒಂದರಿಂದ ಹಿತ್ತಿಲ ತೋಟಕ್ಕೆ ಇಳಿಯುವುದಕ್ಕೆ ಹಂತಗಳೂ ಇದ್ದುವು.

ಇವುಗಳನ್ನು ನೋಡಿ ಮಲಯಸಿಂಹನು "ಎಲಾ ಭದ್ರಕ ! ಈ ಹಂತಗಳು ಎಲ್ಲಿಗೆ ಹೋಗುತ್ತವೆ ನೋಡೋಣ, ನಡೆ'' ಎನ್ನಲು,

"ಮಹಾಸ್ವಾಮಿ, ಇವು ಹಿಂಭಾಗದ ತೋಟಕ್ಕೆ ಹೋಗುತ್ತವೆ."

"ಅದು ನಿನಗೆ ಹೇಗೆ ತಿಳಿಯಿತು ?"

"ಸುಮಾರು ಅಲ್ಲಿಗೆ ಹೋಗಬಹುದೆಂದು ಊಹಿಸಿದೆ."

"ನೋಡೋಣ ಹೋಗು," ಎಂದು ಮಲಯಸಿಂಹನೆನ್ನಲು, ಭದ್ರಕನು ನಿಟ್ಟುಸಿರನ್ನು ಬಿಡುತ್ತ ಬೆದರುಗಣ್ಣುಗಳಿಂದಲೂ ನಡುಗುವ ಕಾಲುಗಳಿಂದಲೂ ಮೆಲ್ಲಮೆಲ್ಲಗೆ ನಾಲ್ಕಾರು ಮೆಟ್ಟಲುಗಳನ್ನು ಇಳಿದು ಅಲ್ಲಿದ್ದ ಬಾಗಿಲ ಬಳಿಗೆ ಬಂದು ಅಲ್ಲಿ ನಿಂತನು.

"ಏತಕ್ಕೆ ನಿಂತೆ ಮುಂದೆ ಹೋಗು'' ಎಂದು ಮಲಯಸಿಂಹನು ಎಷ್ಟು ಹೇಳಿದರೂ ಆವನು ಮುಂದೆ ಒಂದು ಹೆಜ್ಜೆಯನ್ನೂ ಇಡಲಿಲ್ಲ.

"ಭದ್ರಕಾ, ನಿನಗೇನು ಹುಚ್ಚು ಹಿಡಿಯಿತೋ ? ಅಥವಾ ಪಿಶಾಚಿಗಿಶಾಚಿ ಮೆಟ್ಟಿಕೊಂಡಿತೋ ?"

"ಮಹಾಸ್ವಾಮಿ ! ಇದು ದೈವಗತಿಯೇ ಹೊರತು ಮತ್ತೇನೂ ಅಲ್ಲ ; ಅಯ್ಯೋ ! ನಾನು ಇದನ್ನು ಮೊದಲೇ ತಮಗೇಕೆ ತಿಳಿಸಲಿಲ್ಲ ? ತಾವು ಈ ಊರಿಗೆ ಬಂದು ಈ ಸಂಪಗೆಯ ವನದ ಮನೆಯನ್ನೇ ಕೊಳ್ಳಬೇಕೇ ? ಕೊಂಡ ಮನೆಯನ್ನು ನೋಡಲು ರಾತ್ರಿಯಲ್ಲಿಯೇ ಬರಬೇಕೆ ? ಬಂದಮೇಲೆ ಮಹಡಿಯಿಂದ ಈ ದಾರಿಯಲ್ಲಿಯೇ ಇಳಿಯಬೇಕೇ ? ನನ್ನನ್ನು ತಾವು ಕೊಂದರೂ ಸರಿಯೇ, ಇಲ್ಲಿಂದ ಮುಂದೆ ಹೋಗಲು ನನ್ನಿಂದಾಗದು.''

"ಏನೆಂದೆ ಮೂಢಾ ! ಮುಂದೆ ಹೋಗುವೆಯೋ ಇಲ್ಲವೋ" ಎಂದು ಮಲಯಸಿಂಹನು ಅತ್ಯಾಗ್ರಹದಿಂದಕೂಗಲು ಜೀವಭಯದಿಂದ ಓಡುವವನಂತೆ ಮಿಕ್ಕ ಮೆಟ್ಟಲುಗಳನ್ನು ಭದ್ರಕನು ದಡದಡನೆ ಇಳಿದು, ತೋಟದ ಆವರ

ಣದ ಗೋಡೆಯಲ್ಲಿದ್ದ ಸಣ್ಣ ಬಾಗಿಲಿಗೆ ಮಾಡಿದ್ದ ಕಾಲದಾರಿಯಲ್ಲಿ ಹೋದನು. ಇದನ್ನು ನೋಡುತ್ತಲಿದ್ದ ಮಲಯಸಿಂಹನು, "ಹಾಗೆ ಏಕೆ ಹೋಗುತ್ತೀಯೆ ? ಈ ಕಡೆ ಬಾ" ಎಂದು ಹಚ್ಚಗೆ ಹುಲ್ಲು ಬೆಳೆದಿದ್ದ ಬಯಲ ಮಧ್ಯೆ ಇದ್ದ ದಟ್ಟವಾದ ತೋಪಿನ ಕಡೆಗೆ ಹೊರಟು ಅಲ್ಲಿ ಒಂದು ಕಡೆ ನಿಂತನು.

"ಮಹಾಸ್ವಾಮಿ! ಮಹಾಸ್ವಾಮಿ! ಅದೇ ಸ್ಥಳ, ಅದೇ ಸ್ಥಳ ; ಅಲ್ಲಿ ನಿಲ್ಲಬೇಡಿ" ಎಂದು ಭದ್ರಕನು ವಿಕಾರಧ್ವನಿಯಿಂದ ಕೂಗಲು, ಮಲಯಸಿಂಹನು,

"ಹಾಗೆಂದರೇನು"

"ಅಲ್ಲಿಯೇ ಅವನು ಸತ್ತು ನೆಲಕ್ಕೆ ಬಿದ್ದುದು."

"ಭದ್ರಕಾ! ನಿನಗೆ ಹುಚ್ಚು ಹಿಡಿದ ಹಾಗೆ ತೋರುತ್ತಲಿದೆ ; ಇದೇ ರೀತಿ ನೀನಿದ್ದರೆ ಹುಚ್ಚರ ಶಾಲೆಗೆ ನಿನ್ನನ್ನು ಸೇರಿಸಬೇಕಾಗುವುದು."

"ಮಹಾಸ್ವಾಮಿ! ನನಗೆ ಹುಚ್ಚಿಲ್ಲ, ನಾನು ಹೇಳುವುದು ಸತ್ಯ ; ತಾವು ಇತ್ತ ಬಿಜಯ ಮಾಡಬೇಕು,"

"ಎಲೋ ಭದ್ರಕ! ನೀನು ಆಡುವ ಮಾತುಗಳನ್ನೂ ಇರುವ ರೀತಿಯನ್ನೂ ನೋಡಿದರೆ ಯಾರನ್ನೋ ನೀನಿಲ್ಲಿ ಕೊಂದಿರುವಂತೆ ತೋರುತ್ತಲಿದೆ. ಈ ದೇಶವು ಇತರ ದೇಶಗಳಂತಲ್ಲ ; ಕೆಟ್ಟ ಕೆಲಸ ಮಾಡಿದವರನ್ನು ಇಲ್ಲಿಯೇ ಪೋಲೀಸಿನವರು ಆಗತ್ಯ ಹಿಡಿಯುವರು ; ನ್ಯಾಯಾಧಿಪತಿಗಳು ತಕ್ಕ ಶಿಕ್ಷೆಯನ್ನು ವಿಧಿಸುವರು ; ಶೂಲಗಳು ಅನೇಕವಿರುವುವು. ಯಾವ ಕಾಲದಲ್ಲಿ ಯಾವ ದೇಶದಲ್ಲಿ ನಾವಿರುವೆವೋ ಅಲ್ಲಿಯ ನ್ಯಾಯಕ್ಕೆ ನಾವು ಒಳಪಡಬೇಕು ; ನಿನಗಾಗಿ ನಾನು ತೊಂದರೆಯಲ್ಲಿ ಸಿಕ್ಕಿಬೀಳಲು ಇಷ್ಟವಿಲ್ಲ. ನಿರ್ಮಲಾನಂದರು ನಿನ್ನನ್ನು ನನ್ನಲ್ಲಿ ಕಳುಹಿಸಿಕೊಟ್ಟಾಗ ನೀನು ಬಹು ಯೋಗ್ಯನೆಂದು ಹೇಳಿದ್ದರು ; ನಿನ್ನ ವಿಷಯವಾಗಿ ಅವರಿಗೆ ಬರೆಯುವೆನು."

"ಸ್ವಾಮಿ! ತಾವು ಹಾಗೆ ಮಾತ್ರಾ ಮಾಡಕೂಡದು. ನಾನು ತಮ್ಮಲ್ಲಿ ಎಷ್ಟೋ ಭಯ ಭಕ್ತಿಯಿಂದ ಕೆಲಸಗಳನ್ನು ಮಾಡುತ್ತಲಿದ್ದೇನೆ."

"ಹಾಗಿಲ್ಲವೆಂದು ನಾನು ಹೇಳಿದೆನೇ ? ನೀನು ಯಾವುದೋ ಕೆಟ್ಟ ಕೆಲಸವನ್ನು ಮಾಡಿರುವುದರಿಂದ ನಿನಗೆ ಇಷ್ಟು ಗಾಬರಿ. ಶುದ್ಧ ಮನಸ್ಕರಿಗೆ ಯಾವ ಭಯವೂ ಇರುವುದಿಲ್ಲ,"

"ಮಹಾಸ್ವಾಮಿ, ನನ್ನ ಪುರುಷಾಯುಷದಲ್ಲಿ ನಾನು ಮಾಡಿರುವುದು ಒಂದೇ ತಪ್ಪು ; ಬಂದೀಶಾಲೆಯಲ್ಲಿದ್ದಾಗ ನಿರ್ಮಲಾನಂದರಿಗೆ ಅದನ್ನು ತಿಳಿಸಿದ್ದೆ ; ಅವರು ಅದನ್ನು ತಮಗೆ ತಿಳಿಸಲಿಲ್ಲವೆಂದು ತೋರುತ್ತದೆ.''

"ಅವರು ಹೇಳಿದುದರಲ್ಲಿ ನೀನು ಯಾವುದೋ ಒಂದು ಕಳವು ಮಾಡಿ ಸೆರೆಯಲ್ಲಿ ಬಿದ್ದು, ಪಶ್ಚಾತ್ತಾಪ ಪಟ್ಟುದಾಗಿ ನಾನು ತಿಳಿದಿದ್ದೆನು ; ಈಗ ನೋಡಿದರೆ ಅದಕ್ಕಿಂತ ಘೋರತರವಾದ ಕೃತ್ಯವನ್ನು ಮಾಡಿರುವಂತೆ ತೋರುತ್ತಲಿದೆ ; ಆದುದರಿಂದ ನಿನ್ನನ್ನು ನನ್ನ ಬಳಿ ಇಟ್ಟುಕೊಳ್ಳಲು ತಾತ್ಪರ್ಯವಿಲ್ಲ. ಮನೆಗೆ ಹೋದ ಕೂಡಲೇ ನಿನಗೆ ಬರಬೇಕಾದ ಸಂಬಳವನ್ನು ಕೊಟ್ಟುಬಿಡುತ್ತೇನೆ ; ಎಲ್ಲಿಯಾದರೂ ಹೋಗು."

ಮಲಯಸಿಂಹನು ಈ ರೀತಿ ಹೇಳಿದುದನ್ನು ಕೇಳಿ ಭದ್ರಕನು ಅವನ ಅವನ ಕಾಲಿನ ಮೇಲೆ ಬಿದ್ದು,

"ನಾನು ಮುಯ್ಯಿಗೆ ಮುಯ್ಯಿ ಮಾಡಿದೆನೇ ಹೊರತು ಮತ್ತಾವುದನ್ನೂ ನಡೆಸಿದವನಲ್ಲ.''

"ಇರಬಹುದು, ಅದಕ್ಕಾಗಿ ಇಲ್ಲಿ ಏಕೆ ನಿನಗಿಷ್ಟು ಭಯ ?"

"ಮಹಾಸ್ವಾಮಿ, ಈ ತಾವು ನಿಂತಿರುವ ಸ್ಥಳದಲ್ಲಿಯೇ ಆ ಕೃತ್ಯ ನಡೆಯಿತು."

"ಏನು ನನ್ನ ಮನೆಯಲ್ಲಿಯೇ ? "

"ಆವಾಗ ಇದು ತಮ್ಮ ಮನೆಯಾಗಿರಲಿಲ್ಲ.''

"ಮತ್ತೆ ಯಾರದಾಗಿದ್ದಿತು ?''

"ಶ್ರೀಮಂತ ಶಾಂತವೀರರದು."

"ಅವರನ್ನೋ ನೀನು ಕೊಂದುದು ? ''

"ಅವರನ್ನಲ್ಲ."

"ಮತ್ತೆ ಯಾರನ್ನ ? "

''ಮಹಾಸ್ವಾಮಿ, ತಾವು ನಿಂತಿರುವ ಸ್ಥಳದಿಂದ ಇತ್ತ ಬಿಜಯಮಾಡಿದರೆ ಎಲ್ಲವನ್ನೂ ಹೇಳುವೆನು. ತಾವು ಅಲ್ಲಿ ನಿಂತಿರುವವರೆಗೆ ವಲ್ಲಭದೇವನ ಜ್ಞಾಪಕವೇ ಬರುತ್ತಲಿರುವುದು."

"ಓಹೋ ! ನೀನು ವಲ್ಲಭದೇವನನ್ನು ಕೊಂದೆಯೋ ?''

"ಹೂಂ"

"ಆವನು ನರಪುರದಲ್ಲಿ ನ್ಯಾಯಾಧಿಪತಿಯಾಗಿರಲಿಲ್ಲವೇ ?"

"ಅಹುದು. ತಾವು ಅವರನ್ನು ಬಲ್ಲಿರೆಂದು ಕಾಣುತ್ತದೆ."

"ಅವನು ದೀನನಾಥನ ಮಗನಲ್ಲವೇ ?"

"ಹೂಂ."

"ಪ್ರಾಮಾಣಿಕನೆಂದೂ, ಧರ್ಮಶೀಲನೆಂದೂ ಆವನು ಹೆಸರು ಪಡೆದಿದ್ದ ನಲ್ಲವೇ ? ಅವನನ್ನೇ ನೀನು ಕೊಂದುದು ?"

"ಮಹಾಸ್ವಾಮಿ ! ಆವನು ಪ್ರಾಮಾಣಿಕನೂ ಅಲ್ಲ ಏನೂ ಅಲ್ಲ ; ಅನ್ಯಾಯ ಶಿಖಾಮಣಿ."

"ಆ ಮಾತನ್ನು ನಾನು ನಂಬಲಾರೆ."

"ಮಹಾಸ್ವಾಮಿ ! ನಾನು ಹೇಳುವುದು ಸತ್ಯ."

"ಅದು ಹೇಗೆ ?"

"ಅದಕ್ಕೆ ನನ್ನಲ್ಲಿ ಒಂದು ಕುರುಹು ಇದ್ದಿತು."

"ಈಗೆಲ್ಲಿ ?"

"ಹುಡುಕಿದರೆ ಸಿಕ್ಕಬಹುದು" ಎಂದು ಭದ್ರಕನು ಹೇಳುತ್ತಲೇ ಮಲಯಸಿಂಹನು ತೋಪಿನಿಂದ ಹೊರಗೆ ಬಂದು ಪಕ್ಕದಲ್ಲಿ ಹಾಕಿದ್ದ ಕಲ್ಲು ಚಾವಡಿಯ ಮೇಲೆ ಕುಳಿತು "ಈಗ ನಿನ್ನ ಕಥೆಯನ್ನು ಮೊದಲಿನಿಂದ ಹೇಳು" ಎಂದನು.

ಆದ ಭದ್ರಕನು ತನ್ನ ಕಥೆಯನ್ನು ಈ ರೀತಿ ಹೇಳತೊಡಗಿದನು;—

"ಮಹಾಸ್ವಾಮಿ ! ನನಗೊಬ್ಬ ಅಣ್ಣನಿದ್ದನು. ಅವನು ಚಕ್ರವರ್ತಿಯ ಸೈನ್ಯದಲ್ಲಿ ಸೇರಿ ಹದಿನೆಂಟನೆಯ ವಯಸ್ಸಿನಲ್ಲೇ ತನ್ನ ಯೋಗ್ಯತೆಗೆ ತಕ್ಕ ಅಧಿಕಾರವನ್ನು ಪಡೆದು ಚಕ್ರವರ್ತಿಯ ಅಭಿಮಾನಕ್ಕೆ ಪಾತ್ರನಾಗಿದ್ದನು. ಚಕ್ರವರ್ತಿಯು ಪರಾಜಿತನಾದಮೇಲೆ ನನ್ನ ಅಣ್ಣನು ನರಪುರದ ಮಾರ್ಗವಾಗಿ ಊರಿಗೆ ಹಿಂದಿರುಗಿ ಬರುವುದಾಗಿ ನಿಶ್ಚಯಿಸಿ ಹಾದಿಯ ವೆಚ್ಚಕ್ಕೆ ಅನುಕೂಲವಾಗುವಂತೆ ಆ ಪುರದ ಮುಖ್ಯ ಭೋಜನ ಶಾಲೆಯ ಯಜಮಾನನಿಗೆ ಸ್ವಲ್ಪ ಹಣವನ್ನು ಕಳುಹಿಸ ಹೇಳಿ ನನಗೆ ಬರೆದಿದ್ದನು. ಆಗ ನಮ್ಮಲ್ಲಿ ಆರು ಸಾವಿರ ವರಹಗಳಿದ್ದುವು."

"ಆ ಹಣ ಕಳ್ಳ ವ್ಯಾಪಾರದಲ್ಲಿ ಸಂಪಾದಿಸಿದುದೋ?"

"ಮಹಾಸ್ವಾಮಿ, ಹೇಗಾದರೂ ಜೀವನ ನಡೆಯಬೇಕಲ್ಲವೇ"

"ಆಮೇಲೆ ಹೇಳು."

"ಅವರಿವರ ಕೈಯಲ್ಲಿ ಹಣವನ್ನು ಕಳುಹಿಸಿದರೆ ಅಣ್ಣನಿಗೆ ಸೇರುವುದೋ ಇಲ್ಲವೋ ಎಂಬ ಭಯದಿಂದ ಅರ್ಧ ಹಣವನ್ನು ನನ್ನ ನಾದಿನಿಯ ಬಳಿ ಕೊಟ್ಟು ಮಿಕ್ಕದ್ದನ್ನು ನಾನೇ ತೆಗೆದುಕೊಂಡು ನರಪುರಕ್ಕೆ ಹೊರಟೆನು. ನಾನು ಅಲ್ಲಿಗೆ ಹೋದಾಗ ಊರೆಲ್ಲಾ ರಕ್ತಮಯವಾಗಿ ಎಲ್ಲಿ ನೋಡಿದರೂ ಹೆಣಗಳು ಬಿದ್ದಿದ್ದುವು. ಕಾರಣವೇನೆಂದು ವಿಚಾರಿಸಲು, ಜಯಸಿಂಹ ರಾಜನ ಕಡೆಯವರು ಚಕ್ರವರ್ತಿಯ ಕಡೆಯವರನ್ನು ಕೊಲ್ಲುತ್ತಲಿದ್ದಾರೆ ಎಂದು ಜನಗಳು ಹೇಳಿದರು. ಅದನ್ನು ಕೇಳಿ ನನ್ನಣ್ಣನೇನಾದನೋ ಎಂದು ದಿಗಿಲಿನಿಂದ ಅವನು ಹೇಳಿದ್ದ ಭೋಜನಶಾಲೆಯನ್ನು ವಿಚಾರಿಸಿಕೊಂಡು ಹೋಗಲು ಅದರ ತಲೆಬಾಗಿಲಲ್ಲಿಯೇ ಅವನು ಸತ್ತುಬಿದ್ದಿದ್ದನು. ಮೈಯ್ಯೆಲ್ಲ ರಕ್ತದಿಂದ ತೋದುಹೋಗಿ ಗಾಯಗಳಿಂದ ರಕ್ತವು ಇನ್ನೂ ಸುರಿಯುತ್ತಲಿದ್ದಿತು.

ಆಗ ನನಗೆ ಬಹು ಸಂಕಟವಾಗಿ ಅವನನ್ನು ಕೊಂದವರಾರೆಂದು ವಿಚಾರಿಸಲು ಇಂಥವನೆಂದು ಒಬ್ಬರೂ ಹೇಳಲಿಲ್ಲ. ಅಲ್ಲಿಗೆ ನ್ಯಾಯಾಧಿಪತಿಯಾಗಿದ್ದ ವಲ್ಲಭದೇವನ ಬಳಿಗೆ ಹೋಗಿ ನಡೆದ ಸಂಗತಿಯನ್ನು ತಿಳಿಸಿ ಮೊರೆಯಿಡಲು, ಅವನು ಯಾವ ವಿಚಾರಣೆಯನ್ನೂ ಮಾಡದೆ, ನಿಮ್ಮಣ್ಣನು ಚಕ್ರವರ್ತಿಯ ಕಡೆಯವನಾದುದರಿಂದ ಅವನನ್ನು ಕೊಂದುದೇ ನ್ಯಾಯ ಹೋಗು ಎಂದನು. 'ಮಹಾಸ್ವಾಮಿ! ತಾವು ಧರ್ಮಪ್ರಭುಗಳು, ತಾವೇ ಹೀಗೆ ಅಪ್ಪಣೆ ಕೊಡಿಸಿದರೆ ನಾನು ಇನ್ನಾರಲ್ಲಿ ಹೋಗಿ ಕೇಳಿಕೊಳ್ಳಲಿ; ಅವನು ಯುದ್ಧದಲ್ಲಿ ಸತ್ತಿದ್ದರೆ ನಾನೇನೂ ಚಿಂತಿಸುತ್ತಿರಲಿಲ್ಲ. ಯುದ್ಧ ಮುಗಿದು ಊರಿಗೆ ಹಿಂದಿರುಗಿ ಬರುತ್ತಲಿದ್ದಾಗ ಅವನನ್ನು ಕೊಂದುದು ಅನ್ಯಾಯವಲ್ಲವೇ? ಅವನು ಸತ್ತುದರಿಂದ ಅವನ ಹೆಂಡತಿಯು ನಿರಾಧಾರಳಾಗಿದ್ದಾಳೆ; ಅದಕ್ಕಾಗಿಯಾದರೂ ತಾವು ವಿಚಾರಣೆ ಮಾಡಿ ಅವಳಿಗೆ ಮಾಸಾಶನವನ್ನಾದರೂ ಕೊಡಿಸಿಕೊಟ್ಟರೆ ತಮಗೆ ಪುಣ್ಯವುಂಟಾಗುವುದು' ಎಂದು ನಾನು ಎಷ್ಟು ಬಗೆಯಲ್ಲಿ ಕೇಳಿಕೊಂಡರೂ ಆ ವಲ್ಲಭದೇವನ ಕಲ್ಲುಮನಸ್ಸು ಕರಗದೆ, ಕೋಪಿಸಿಕೊಂಡು ಅವನು ನನ್ನನ್ನು ಕತ್ತು ಹಿಡಿದು ದಬ್ಬಿಸಿಬಿಟ್ಟನು.

“ಆಗ ನನಗೂ ಸಿಟ್ಟು ಬಂದು ಎಲಾ ಕಟುಕ! ನೀನು ಮಾಡಿದ ಅನ್ಯಾಯಕ್ಕೆ ನಿನ್ನನ್ನು ನಾನು ಕೊಲ್ಲದಿದ್ದರೆ ನನ್ನ ಜನ್ಮವನ್ನು ಸುಡಬೇಕು.” ಎಂದು ಹೇಳಿ ಹೋದೆನು. ಅಂದು ಮೊದಲು ಅವನು ಕೂಡಿದ ಮಟ್ಟಿಗೂ ಹೊರಗೆ ಬಾರದೆ ಮನೆಯಲ್ಲಿಯೇ ಇರುತ್ತ, ಹೊರಗೆ ಬರುವಾಗ ಯಾವಾಗಲೂ ನಾಲ್ಕೈದು ಜನರ ಜತೆಯಲ್ಲಿಯೇ ಬರುತ್ತಲಿದ್ದನು. ಅವನನ್ನು ಕೊಲ್ಲಲು ಬೇಕಾದಷ್ಟು ಅವಕಾಶ ಸಿಕ್ಕಿದ್ದರೂ, ಅವನನ್ನು ಕೊಂದು ಒಂದುವೇಳೆ ನಾನು ಸಿಕ್ಕಿಬಿದ್ದರೆ ನನ್ನ ನಾದಿನಿಗೆ ದಿಕ್ಕಿಲ್ಲದೆ ಹೋಗುವುದಲ್ಲಾ ಎಂದು ಯೋಚಿಸಿ, ಯಾರಿಗೂ ಗೊತ್ತಾಗದಂತೆ ಅವನನ್ನು ಹತಮಾಡಲು ಕಾದಿದ್ದೆನು.

“ಹೀಗೆ ಕೆಲವು ದಿನಗಳು ಕಳೆದ ಮೇಲೆ, ನರಪುರದಲ್ಲಿ ತಾನಿದ್ದರೆ ಹೇಗಾದರೂ ತನಗೆ ಅಪಾಯವುಂಟಾಗುವುದೆಂದು ತಿಳಿದು ವಲ್ಲಭದೇವನು ಈ ಪಟ್ಟಣಕ್ಕೆ ವರ್ಗಮಾಡಿಸಿಕೊಂಡನು. ಅವನೊಡನೆ ನಾನೂ ಇಲ್ಲಿಗೆ ಬಂದೆನು. ಸುಮಾರು ಮೂರು ನಾಲ್ಕು ತಿಂಗಳವರೆಗೆ ಅವನು ಈ ಊರಿನಲ್ಲಿ ಹೋಗಿ ಬರುತ್ತಲಿದ್ದ ಸ್ಥಳಗಳಲ್ಲಿ ಸಮಯ ನೋಡುತ್ತಲಿದ್ದು, ಒಂದಾನೊಂದು ರಾತ್ರಿ ಸುಮಾರು ಎಂಟು ಘಂಟೆಯ ವೇಳೆಯಲ್ಲಿ ಕುದುರೆಯನ್ನು ಹತ್ತಿ ತನ್ನ ಮನೆಯಿಂದ ಹೊರಟು ಈ ಮನೆಯ ಬಳಿಗೆ ಬಂದು, ಕತ್ತಲಾಗಿದ್ದ ಒಂದು ಕಡೆಯಲ್ಲಿ ನಿಂತು ಕುದುರೆಯಿಂದಿಳಿದು ಅದನ್ನು ಒಂದು ಮರಕ್ಕೆ ಕಟ್ಟಿ, ಈ ತೋಟದ ಸಣ್ಣ ಬಾಗಿಲನ್ನು ತನ್ನಲ್ಲಿದ್ದ ಬೀಗದ ಕೈಯಿಂದ ತೆಗೆದು ಒಳಗೆ ಬಂದು ಪುನಃ ಬಾಗಿಲನ್ನು ಮುಚ್ಚಿ ಬೀಗವನ್ನು ಹಾಕಿದನು.

“ಅವನು ತೋಟದೊಳ ಹೊಕ್ಕು ಬಾಗಿಲನ್ನು ಬಿಗಿದುಕೊಂಡ ಕೂಡಲೇ, ನಾನು ಆವರಣದ ಗೋಡೆಯನ್ನು ಏರಿ ಗಿಡದ ಮರೆಯಲ್ಲಿ ಆ ಗೋಡೆಯ ಮೇಲೆಯೇ ಮಲಗಿಕೊಂಡೆನು. ವಲ್ಲಭದೇವನು ತೋಟವನ್ನು ಪ್ರವೇಶಿಸಿದಾಗ, ಅಲ್ಲಿ ಬೆಳುದಿಂಗಳಲ್ಲಿ ಒಬ್ಬ ಸುಂದರಿಯು ಕುಳಿತಿದ್ದಳು. ವಲ್ಲಭದೇವನು ಹತ್ತಿರಕ್ಕೆ ಬರುತ್ತಲೆ ಅವಳು ಎದ್ದು ಅವನನ್ನು ಆಲಿಂಗಿಸಿಕೊಂಡು ‘ಪ್ರಿಯನೇ, ನೀನು ಇದುವರೆಗೂ ಬಾರದಿದ್ದುದರಿಂದ ಈ ಚಂದ್ರನು ಚಂಡಕರನಾದನು; ಬೆಳುದಿಂಗಳು ಬಿಸಿಲಿನಂತಾಯಿತು’ ಎಂದು ನಮ್ರವಚನಗಳನ್ನು ನುಡಿಯುತ್ತ, ಅವನ ಜತೆಯಲ್ಲಿ ಮನೆಯೊಳಗೆ ಹೋದಳು. ಅದನ್ನು ನೋಡುತ್ತಿದ್ದ ನಾನು ಆ ಯುವತಿಯು ವಲ್ಲಭದೇವನ ಉಪಪತ್ನಿಯಿರಬಹುದು, ಆದಕಾರಣ ಅವನು

ಇಲ್ಲಿಗೆ ಅಡಿಗಡಿಗೆ ಬರುತ್ತಿರುವನು. ಇಲ್ಲಿಯೇ ಕಾದಿದ್ದರೆ ಯಾವುದಾದರೂ ಒಂದು ದಿನ ಅವನನ್ನು ನನ್ನ ಕೋಪಕ್ಕೆ ಬಲಿಗೊಡಬಹುದು ಎಂದು ಯೋಚಿಸಿ ಕೊಂಡೆನು."

"ಆ ಸುಂದರಿಯ ಹೆಸರೇನು"

"ಮಹಾಸ್ವಾಮಿ, ಅದನ್ನು ನಾನು ವಿಚಾರಿಸಲಿಲ್ಲ."

"ಮುಂದೆ ಏನಾಯಿತು ?"

"ಆ ದಿನವೇ ನಾನು ಅವನನ್ನು ಕೊಲ್ಲಬಹುದಾಗಿದ್ದಿತು ; ಆದರೆ ಅಲ್ಲಿಯ ಸನ್ನಿವೇಶವು ನನಗೆ ಚೆನ್ನಾಗಿ ಗೊತ್ತಿರಲಿಲ್ಲವಾದುದರಿಂದ ಅಂದು ನಾನು ಆ ಕೆಲಸಕ್ಕೆ ಪ್ರಯತ್ನಪಡಲಿಲ್ಲ. ಸುಮಾರು ಏಳೆಂಟು ತಿಂಗಳಾದಮೇಲೆ ಒಂದು ರಾತ್ರಿ ಒಬ್ಬನು ತನ್ನ ಗುರುತು ಯಾರಿಗೂ ತಿಳಿಯದಂತೆ ಮೈಯ್ಯ ತುಂಬ ಶಾಲನ್ನು ಹೊದ್ದು, ಮುಸುಕು ಹಾಕಿಕೊಂಡು, ತೋಟದ ಸಣ್ಣ ಬಾಗಿಲ ಬೀಗವನ್ನು ಬಿಚ್ಚಿ ಒಳಗೆ ಪ್ರವೇಶಮಾಡಿ ಪುನಃ ಬಾಗಿಲನ್ನು ಬೀಗಹಾಕಿ ದೈವಾಧೀನದಿಂದ ಬೀಗದ ಕಯ್ಯನ್ನು ಅಲ್ಲಿಯೇ ಬಿಟ್ಟುಹೋದನು. ಆಗ ರಾತ್ರಿ ಸುಮಾರು ಹತ್ತು ಗಂಟೆಯಿರಬಹುದು. ಬಂದವನು ವಲ್ಲಭದೇವನೇ ಇರ ಬಹುದೆಂದು ನಿಶ್ಚಯಿಸಿ ಕ್ಷಣಮಾತ್ರದಲ್ಲಿ ತೋಟದ ಆವರಣದ ಗೋಡೆಯನ್ನು ಏರಿ ನೋಡಲು, ಆಗ ತಾನೇ ಅವನು ಶಾಲನ್ನು ತೆಗೆದು ಮಡಿಸಿ ಕಯ್ಯ ಮೇಲೆ ಹಾಕಿಕೊಂಡು ಮನೆಯಕಡೆ ಹೋಗುತ್ತಲಿದ್ದನು.

"ಅವನು ಮನೆಯ ಒಳಗೆ ಹೋಗುತ್ತಲೇ ನಾನು ತೋಟದೊಳಗೆ ಇಳಿದು ತೋಪನ್ನು ಹೊಕ್ಕು ನಡುವಿನಲ್ಲಿ ಸಿಕ್ಕಿಸಿದ್ದ ಕಠಾರಿಯನ್ನು ಕಯ್ಯಲ್ಲಿ ಹಿಡಿದುಕೊಂಡು, ಅವನು ದಾರಿಯಲ್ಲಿ ಪುನಃ ಬರುವುದನ್ನೇ ನೋಡುತ್ತಲಿದ್ದೆನು. ಅಂದು ಆಷಾಢಶುಕ್ಲ ಪೌರ್ಣಮಿ ; ಗಾಳಿಯು ವಿಪರೀತವಾಗಿದ್ದುದರಿಂದ ಮೇಘಗಳು ಚದರಿ ಹೋಗುತ್ತಲೂ ಮರಳಿ ದಟ್ಟವಾಗಿ ಸೇರುತ್ತಲೂ ನಿಂತಲ್ಲಿ ನಿಲ್ಲದೆ ಆಕಾಶದಲ್ಲಿ ತೇಲುತ್ತಲಿದ್ದುವು. ತೋಪಿನಲ್ಲಿ ಮರಗಳು ದಟ್ಟವಾಗಿದ್ದು ದರಿಂದ ವಿರಳವಾದ ಮೇಘಗಳಿಂದ ಬಿಡಲ್ಪಟ್ಟ ಚಂದ್ರಿಕೆಯು ಧಾರಾಳವಾಗಿ ಆ ತೋಪಿನೊಳಗೆ ಪ್ರವೇಶಮಾಡಲರಿಯದಿದ್ದಿತು. ಆಗ ಯಾರೋ ಮನೆ ಯೊಳಗೆ ನರಳುತ್ತಿರುವಂತೆ ನನಗೆ ಕೇಳಿಸಿತು. ಕೊಲೆಯನ್ನು ಮಾಡಲು ಉದ್ಯುಕ್ತನಾಗಿರುವನಿಗೆ ಇಂತಹ ವಿಕಾರಧ್ವನಿಗಳು ಕೇಳಿಸುವುದುಂಟು ಎಂದು

ಕೇಳಿದ್ದುದರಿಂದ ಇದು ನನ್ನ ಭ್ರಾಂತಿಯೆಂದಿದ್ದೆನು. ಸುಮಾರು ಅರ್ಧರಾತ್ರಿಯ ವೇಳೆಯಲ್ಲಿ ನಾವು ಈಗ ಇಳಿದು ಬಂದ ಮೆಟ್ಟಲುಗಳ ಮೇಲಿನ ಹಂತದ ಮೇಲೆ ಒಂದು ಸಣ್ಣ ಬೆಳಕನ್ನಿಟ್ಟು, ವಲ್ಲಭದೇವನು ಹಂತಗಳನ್ನಿಳಿದು ಕಂಕುಳಲ್ಲಿ ಒಂದು ಸಣ್ಣ ಪೆಟ್ಟಿಗೆಯನ್ನಿಟ್ಟುಕೊಂಡು ಕಯ್ಯಲ್ಲಿ ಒಂದು ಗುದ್ದಲಿಯನ್ನು ಹಿಡಿದು ಕೆಳಗೆ ಇಳಿದು ನಾನಿದ್ದ ಕಡೆಗೆ ಬಂದು, ಅತ್ತಿತ್ತ ನೋಡಿ ಯಾರೂ ಇಲ್ಲವೆಂದು ನಿಶ್ಚಯಿಸಿಕೊಂಡು ಕಂಕುಳಲ್ಲಿದ್ದ ಪೆಟ್ಟಿಗೆಯನ್ನು ಕೆಳಗಿಟ್ಟು, ಗುದ್ದಲಿಯಿಂದ ನೆಲವನ್ನು ಅಗೆಯಲು ಪ್ರಾರಂಭಿಸಿದನು.

"ವಲ್ಲಭದೇವನು ಇಳಿದು ಬಂದ ಕೂಡಲೇ ನಾನು ಆ ತೋಪಿನ ಒಂದು ದೊಡ್ಡ ಮರದ ಮರೆಯಲ್ಲಿ ಅವನಿಗೆ ಕಾಣದಂತೆ ನಿಂತಿದ್ದೆನು. ಅವನು ಪೆಟ್ಟಿಗೆಯನ್ನು ನೆಲದ ಮೇಲೆ ಇಟ್ಟು ಅಗೆಯಲು ಪ್ರಾರಂಭಮಾಡಿದಾಗ ಆ ಪೆಟ್ಟಿಗೆಯಲ್ಲಿ ಪ್ರಾಯಶಃ ಹಣವಿರಬಹುದು ಅದನ್ನು ಇಲ್ಲಿ ಯಾರಿಗೂ ತಿಳಿಯದಂತೆ ಹೂಳಿಡುವನು; ಇವನನ್ನು ಈಗ ಕೊಂದರೆ ನನ್ನ ದ್ವೇಷವನ್ನು ತೀರಿಸಿಕೊಳ್ಳುವುದಲ್ಲದೆ ನನ್ನ ನಾದಿನಿಗೆ ಜೀವನಕ್ಕೆ ಬೇಕಾದಷ್ಟು ಹಣವು ದೊರಕುವುದು ಎಂದು ಸಂತೋಷದಿಂದ ಕೂಡಿದವನಾಗಿ ಸಮಯವನ್ನು ಕಾದಿದ್ದು ತಟ್ಟನೆ ವಲ್ಲಭದೇವನ ಸಮೀಪಕ್ಕೆ ಹಾರಿಬಂದು 'ಇಗೋ! ನನ್ನ ಅಣ್ಣನ ಸಾವಿಗೆ ನಿನ್ನ ಸಾವು. ಅವನ ಮಡದಿಯ ಜೀವನಕ್ಕೆ ನಿನ್ನ ಪೆಟ್ಟಿಗೆಯ ಹಣ; ಇಂದಿಗೆ ನನ್ನ ಹಗೆಯು ಹರಿಯಿತು' ಎಂದು ಹೇಳಿ ಕಠಾರಿಯನ್ನು ಅವನ ಎದೆಯಲ್ಲಿ ನಾಟಿದೆನು.

"ನಾನಾಡಿದ ಮಾತು ಅವನ ಕಿವಿಗೆ ಬಿದ್ದಿತೋ ಇಲ್ಲವೋ ಕಾಣೆ; ಅವನು ಪಿಟ್ ಪಟ್ ಎನ್ನದೆ ನೆಲದ ಮೇಲೆ ಸತ್ತು ಬಿದ್ದನು. ಅವನ ಎದೆಯಿಂದ ಕಠಾರಿಯನ್ನು ಹಿರಿದಾಗ ರಕ್ತವು ನನ್ನ ಮುಖಕ್ಕೆ ಚಿಠ್ರೆಂದು ಹಾರಿತು: ಅದು ನನಗೆ ಆತ್ಯಾನಂದವನ್ನುಂಟುಮಾಡಿತು. ಕೂಡಲೇ ಪೆಟ್ಟಿಗೆಯನ್ನು ಎತ್ತಿಕೊಂಡು ತೋಟದ ಬಾಗಿಲನ್ನು ತೆರೆದು ಪುನಃ ಅದನ್ನು ಮುಚ್ಚಿಕೊಂಡು ಹೊರಗಿನಿಂದ ಬೀಗವನ್ನು ಹಾಕಿ, ಬೀಗದ ಕಯ್ಯನ್ನು ದೂರದ ಒಂದು ಕುಂಟೆಯಲ್ಲಿ ಬಿಸುಟು ಓಡಿಹೋದೆನು."

"ಹಾಗಾದರೆ ನೀನು ಅವನನ್ನು ಕೊಂದುದಲ್ಲದೆ ಅವನ ದ್ರವ್ಯವನ್ನೂ ಅಪಹರಿಸಿದಂತಾಯಿತು" ಎಂದು ಮಲಯಸಿಂಹನು ಹೇಳಲು, ಭದ್ರಕನು

“ಮಹಾಸ್ವಾಮಿ! ನಾನು ಕೊಲೆಯನ್ನೂ ಮಾಡಲಿಲ್ಲ; ದ್ರವ್ಯವನ್ನೂ ಅಪಹರಿಸಲಿಲ್ಲ; ಮುಯ್ಯಿಗೆ ಮುಯ್ಯಿ ಮಾಡಿ ನನ್ನ ನಾದಿನಿಗೆ ಉಂಟಾದ ನಷ್ಟಕ್ಕೆ ಪ್ರತಿಯಾಗಿ ಆ ಪೆಟ್ಟಿಗೆಯನ್ನು ತೆಗೆದುಕೊಂಡೆನು.”

“ಆ ಪೆಟ್ಟಿಗೆಯಲ್ಲಿ ಎಷ್ಟು ಹಣವಿದ್ದಿತು?”

“ಮಹಾಸ್ವಾಮಿ, ಆ ಪೆಟ್ಟಿಗೆಯಲ್ಲಿ ಹಣವಿರಲಿಲ್ಲ; ಹೆಣದಂತೆ ಒಂದು ಮಗುವಿದ್ದಿತು. ನನ್ನ ಮುಖದಮೇಲೆ ಹಾರಿದ್ದ ರಕ್ತವನ್ನು ತೊಳೆದುಕೊಳ್ಳುವುದಕ್ಕಾಗಿ ಊರಿನ ಹೊರಗಿರುವ ನದಿಗೆ ಹೋಗಿ ಪೆಟ್ಟಿಗೆಯನ್ನು ಕೆಳಗಿಟ್ಟು, ಮುಖವನ್ನೂ ಕಠಾರಿಯನ್ನೂ ತೊಳೆದು ಪೆಟ್ಟಿಗೆಯ ಮುಚ್ಚಳವನ್ನು ತೆರೆದು ನೋಡಲು ‘ಭಾ’ ಎಂಬ ಅಕ್ಷರವನ್ನು ಎರಡು ಸೆರಗುಗಳಲ್ಲಿಯೂ ಹಾಕಿದ್ದ ಒಂದು ದುಪ್ಪಟಿಯಲ್ಲಿ ಆಗತಾನೇ ಹುಟ್ಟಿದ್ದ ಒಂದು ಗಂಡುಮಗುವನ್ನು ಸುತ್ತಿ ಇಟ್ಟಿದ್ದಿತು. ಅದು ಉಸಿರಿಲ್ಲದೆ ಇದ್ದುದನ್ನು ಕಂಡು ಅದನ್ನು ನದಿಯಲ್ಲಿ ಬಿಸುಟು ಹೋಗಬೇಕೆಂದು ಎತ್ತಿದಾಗ ಅದರ ಮೈ ಬೆಚ್ಚಗೆ ಇದ್ದುದರಿಂದ, ಇನ್ನೂ ಪ್ರಾಣವಿರುವುದೋ ಏನೋ ಎಂದು ನೋಡುತ್ತಿರುವಷ್ಟರಲ್ಲಿಯೇ ಅದು ಅಳುವುದಕ್ಕೆ ಪ್ರಾರಂಭಿಸಿತು. ಒಂದು ಪ್ರಾಣವನ್ನು ಕೊಂದುದಕ್ಕೆ ಮತ್ತೊಂದನ್ನು ಉಳಿಸುವಂತೆ ದೇವರು ಅನುಕೂಲಪಡಿಸಿದನಲ್ಲಾ ಎಂದು ಸಂತೋಷಪಟ್ಟು, ಶಿಶುವನ್ನು ಸುತ್ತಿದ್ದ ದುಪ್ಪಟಿಯನ್ನು ಎರಡು ಅಕ್ಷರಗಳ ಮಧ್ಯೆ ಹರಿದು ಒಂದು ಭಾಗವನ್ನು ನಾನಿಟ್ಟುಕೊಂಡು ಮತ್ತೊಂದರಲ್ಲಿ ಆ ಶಿಶುವನ್ನು ಸುತ್ತಿ ಪೆಟ್ಟಿಗೆಯ ಕೂಡ ಅಲ್ಲಿಗೆ ಸಮೀಪದಲ್ಲಿದ್ದ ಅನಾಥಾಲಯದ ಜಗುಲಿಯಮೇಲೆ ಇಟ್ಟು ನಮ್ಮೂರಿಗೆ ಹೊರಟುಹೋದೆನು.

“ಗಂಡನನ್ನು ಕರೆದುಕೊಂಡು ಬರುವೆನೆಂದು ಬಹುದಿನಗಳಿಂದ ಕಾದಿದ್ದ ನನ್ನ ನಾದಿನಿಯು ನಾನೊಬ್ಬನೇ ಬಂದುದನ್ನು ಕಂಡು, ನಿಮ್ಮಣ್ಣನವರೆಲ್ಲಿ ಎಂದು ಕೇಳಲು, ಅಮ್ಮಾ! ನರಪುರದಲ್ಲಿ ಈಗಿನ ರಾಜನಕಡೆಯವರು ಕೊಂದರು, ಅದಕ್ಕೆ ಪ್ರತಿಯಾಗಿ ಮಾಡಿಬಂದೆನು ಎಂದೆನು. ‘ಹಾಗೆಂದರೇನು’ ಎಂದು ಅವಳು ಗೋಳಾಡಲು ನಡೆದ ಸಂಗತಿಯನ್ನು ವಿಸ್ತಾರವಾಗಿ ತಿಳಿಸಿದೆನು. ಅಯ್ಯೋ! ಆ ಮಗುವನ್ನಾದರೂ ತಂದಿದ್ದರೆ ಅದನ್ನು ಸಾಕಿ ಸಲಹುತ್ತ ಹೊತ್ತು ಕಳೆಯುತ್ತಲಿದ್ದೆನಲ್ಲಾ ಎಂದು ಹೇಳಲು- ಅಮ್ಮಾ! ಆ ಮಗುವನ್ನು ಸಾಕಲು ನಮಗೆ ಈಗ ಶಕ್ತಿಸಾಲದು; ಮುಂದೆ ದೇವರು ಅನುಕೂಲಮಾಡಿಕೊಟ್ಟರೆ ಆಗ

ಕರೆದುಕೊಂಡು ಬರೋಣ. ಈ ಅರ್ಧ ದುಪ್ಪಟಿಯನ್ನು ಅನಾಥಾಲಯದಲ್ಲಿ ತೋರಿಸಿದರೆ ಆ ಮಗುವನ್ನು ಅವರು ನಮಗೆ ಕೊಡುವರು. ಇದನ್ನು ಜೋಪಾನವಾಗಿಟ್ಟಿರು ಎಂದು ಹೇಳಿ ತಂದಿದ್ದ ದುಪ್ಪಟಿಯ ಅರ್ಧಭಾಗವನ್ನು ಅವಳಲ್ಲಿ ಕೊಟ್ಟೆನು.

"ಸ್ವಲ್ಪದಿನಗಳಲ್ಲಿಯೇ ದೈವಾನುಗ್ರಹದಿಂದ ನಮ್ಮ ವ್ಯಾಪಾರವು ವೃದ್ಧಿಯಾಗಿ ದ್ರವ್ಯಾನುಕೂಲಗಳು ಹೆಚ್ಚುತ್ತ, ಒಂದಾನೊಂದು ಸಾರಿ ವ್ಯಾಪಾರ ಸಂಬಂಧದಲ್ಲಿ ದೂರದೇಶಕ್ಕೆ ನಾನು ಹೋಗಬೇಕಾಗಿ ಬಂದಿತು. ಅಲ್ಲಿಗೆ ಹೋಗಿ ಕೆಲಸಗಳನ್ನು ಮುಗಿಸಿಕೊಂಡು ಹಿಂದಿರುಗಿ ಮನೆಗೆಬಂದಾಗ ಅಲ್ಲಿ ತೊಟ್ಟಿಲೂ ಒಂದು ಮಗುವೂ ಇದ್ದಿತು. ಯಾರಮಗುವೆಂದು ಕೇಳಿದುದಕ್ಕೆ ಅವಳು ಅನಾಥಾಲಯದಲ್ಲಿದ್ದ ಮಗು ಎಂದಳು. ಗಂಡನೂ ಸತ್ತು ಮಕ್ಕಳೂ ಇಲ್ಲದೆ ಕೊರತೆಪಡುತ್ತಲಿದ್ದವಳಿಗೆ ಹೊತ್ತು ಕಳೆಯಲು ಇದೊಂದು ವಿಧವಾಗಿ ಅನುಕೂಲವಾಯಿತೆಂದು ತಿಳಿದು ಅಮ್ಮಾ, ಒಳ್ಳೆಯ ಕೆಲಸವಾಯಿತು ಎಂದು ನಾನು ಸಂತೋಷಪಟ್ಟುಕೊಂಡೆನು. ದೇವರ ದಯೆಯಿಂದ ಆ ಮಗುವು ನಮಗೆ ಸಿಕ್ಕಿದುದರಿಂದ ನಾವು ಅದಕ್ಕೆ ಭದ್ರದತ್ತನೆಂದು ಹೆಸರಿಟ್ಟೆವು ಅದು ಚಟುವಟಿಕೆಯಾಗಿಯೂ ಇದ್ದುದರಿಂದ ಅದನ್ನು ಪ್ರೀತಿಯಿಂದ ಸಾಕುತ್ತ ಅದಕ್ಕೆ ತಕ್ಕ ವಿದ್ಯೆಯನ್ನು ಕಲಿಸುತ್ತ ಬಂದೆವು. ಹದಿನೆಂಟು ವಯಸ್ಸಾಗುವುದರಲ್ಲಿಯೇ ಅವನು ವಿದ್ಯೆಯನ್ನೂ ಕಲಿತು ಜತೆಯಲ್ಲಿ ತುಂಟತನವನ್ನೂ ಕಲಿತನು.

"ಒಂದಾನೊಂದು ದಿನ ಸಂಜೆ, ನನ್ನ ಮಗ್ಗುಲಮನೆಯವನು ಬಂದು 'ಅಪ್ಪಾ ಭದ್ರಕ, ನಾನಿಲ್ಲದ ವೇಳೆಯಲ್ಲಿ ಯಾರೋ ನನ್ನ ಮನೆಯ ಬೀಗವನ್ನು ಮುರಿದು ಒಳಗಿದ್ದ ಹಣವನ್ನು ಕಳವು ಮಾಡಿದ್ದಾರೆ' ಎಂದನು. ನಮ್ಮೂರಿನಲ್ಲಿ ಕಳವು ಎಂಬ ಹೆಸರೇ ಇರಲಿಲ್ಲ. ಹೊರಗಣವರು ಯಾರೂ ಬಂದಿರಲಿಲ್ಲ; ಹೀಗಿರುವಲ್ಲಿ ಯಾರು ಕಳವು ಮಾಡಿರಬಹುದೆಂದು ಯೋಚಿಸುತ್ತ ಭದ್ರದತ್ತನ ಮೇಲೆ ಅನುಮಾನವುಂಟಾಗಿ. ಅವನೆಲ್ಲಿ ಎಂದು ನನ್ನ ನಾದಿನಿಯನ್ನು ಕೇಳಲು. ಅವಳು 'ಬೆಳಿಗ್ಗೆ ಎದ್ದು ಹೋದವನು ಇನ್ನೂ ಬಂದಿಲ್ಲ' ಎಂದಳು."

# ಮೂವತ್ತೊಂದನೆಯ ಅಧ್ಯಾಯ

## ದುರಾಶೆಯ ಫಲ

‘‘ಊರೆಲ್ಲ ಸುತ್ತಿ ಭದ್ರದತ್ತನನ್ನು ಕಾಣದೆ ಬೇಸತ್ತು ಮನೆಗೆ ಹಿಂದಿರುಗಿ ಬರುತ್ತಲಿದ್ದಾಗ ಅವನು ಒಂದು ಕೋತಿಯ ಮರಿಯ ನಡುವಿಗೆ ಸರಪಣಿ ಕಟ್ಟಿ ಹಿಡಿದುಕೊಂಡು ಬರುತ್ತಲಿದ್ದುದನ್ನು ಕಂಡು, ‘ಎಲಾ ಭದ್ರದತ್ತ! ಈ ಕೋತಿ ಮರಿಯು ಎಲ್ಲಿಯದು? ಏತಕ್ಕೆ ತಂದೆ’ ಎಂದು ಕೇಳಲು, ‘ಊರ ಹೊರಗಿನ ತೋಪಿನಲ್ಲಿ ಕಟ್ಟಿದ್ದಿತು; ಬಿಚ್ಚಿಕೊಂಡು ಬಂದೆನು’ ಎಂದನು. ಕೆಲವುದಿನಗಳ ಹಿಂದೆ ಒಬ್ಬ ನಾವಿಕನು ಕೆಲವು ಕೋತಿಗಳನ್ನು ನಮ್ಮೂರಿಗೆ ತಂದು ಆಡಿಸಿದ್ದುದನ್ನು ಭದ್ರದತ್ತನು ನೋಡಿದ್ದನು. ಅಂದಿನಿಂದ ಅವನಿಗೆ ಹೇಗಾದರೂ ಒಂದು ಕೋತಿಯನ್ನು ಸಂಪಾದಿಸಬೇಕೆಂಬ ಆಸೆಯು ಬಲವಾಗಿದ್ದಿತು. ಕೋತಿಗಳನ್ನು ಮರಕ್ಕೆ ಕಟ್ಟಿದುದನ್ನು ನಾನೆಂದೂ ಕಾಣೆ, ನಿಜವನ್ನು ಹೇಳು ಎಂದು ಕೇಳಲು, ಅವನು ಸುಳ್ಳುಗಳನ್ನು ಒಂದಕ್ಕೊಂದು ಜೋಡಿಸಿ ತಾನು ಹೇಳಿದ್ದುದೇ ನಿಜವೆಂದು ಸಾಧಿಸುತ್ತಾ, ನನಗೆ ಕೋಪ ಬಂದಿತೆಂದು ತಿಳಿದು ನಗುತ್ತಿದ್ದನು. ಅದನ್ನು ಕಂಡು ನನಗೆ ಮತ್ತಷ್ಟು ಕೋಪವು ಹೆಚ್ಚಿ ಅವನನ್ನು ಹೊಡೆಯಬೇಕೆಂದು ಕೈಯೆತ್ತಿದೆನು. ಆಗವನು ‘ನನ್ನನ್ನು ಹೊಡೆಯುವುದಕ್ಕೆ ನೀನಾರು? ನಿನಗೇನು ಬಾಧ್ಯತೆ? ನೀನೇನು ನಮ್ಮಪ್ಪನೋ’ಎಂದು ಕೇಳಿದನು.

‘‘ಅವನು ಹೀಗೆನ್ನುತ್ತಲೇ ನನಗೆ ಬಹು ಆಶ್ಚರ್ಯವಾಗಿ ಎತ್ತಿದ ಕೈಯ್ಯನ್ನು ಹಾಗೇ ಕೆಳಗೆ ಇಳಿಸಿ ಇವನು ನಮ್ಮ ಮಗನಲ್ಲವೆಂಬುದನ್ನು ನಾವು ಎಷ್ಟೋ ಗುಟ್ಟಾಗಿ ಇಟ್ಟಿದ್ದರೂ, ಇದು ಅವನಿಗೆ ಗೊತ್ತಾದ ಬಗೆಹೇಗೆ ಎಂದು ಯೋಚಿಸಿದೆನು. ಅಂದಿನಿಂದ ಅವನಿಗೆ ವಿಶೇಷ ಧೈರ್ಯವುಂಟಾಗಿ, ದಿನೇದಿನೇ ದುಸ್ಸಹವಾಸವೂ ಅವಿವೇಕವೂ ಹೆಚ್ಚಿ ಮನೆಯಲ್ಲಿ ಕೈಗೆ ಸಿಕ್ಕಿದುದನ್ನೆಲ್ಲ ಕದಿಯುತ್ತ ಸ್ವೇಚ್ಛೆಯಾಗಿರುತ್ತಿದ್ದನು. ಅವನ ಶಕ್ತಿಯನ್ನೂ ಯುಕ್ತಿಯನ್ನೂ ಧೈರ್ಯವನ್ನೂ ಸಾಹಸವನ್ನೂ ನೋಡಿ ಮೆಚ್ಚಿ ಇವನನ್ನು ನಮ್ಮ ಕಳ್ಳವ್ಯಾಪಾರದಲ್ಲಿ ಸೇರಿಸಿದರೆ ಮುಂದೆ ಸರಿಯಾದ ಮಾರ್ಗಕ್ಕೆ ಬರಬಹುದು ಎಂದು ಯೋಚಿಸಿ. ಅದಕ್ಕಾಗಿ ಒಬ್ಬ ಸ್ನೇಹಿತನ ಸಂಗಡ ತಕ್ಕ ಏರ್ಪಾಡನ್ನು ಮಾಡಿ ಒಂದುದಿನ ಅವನನ್ನು ಕರೆದು ‘ಅಪ್ಪಾ, ಇಷ್ಟುದಿನಗಳು ನೀನು ಸಣ್ಣವನಾಗಿದ್ದುದರಿಂದ ಸುಮ್ಮನೆ

ಆಟವಾಡುತ್ತ ಹೊತ್ತುಕಳೆದೆ; ಈಗ ದೊಡ್ಡವನಾದೆ, ಇನ್ನು ಹೀಗಿರುವುದು ಸರಿಯಲ್ಲ' ಎಂದು ನಾನು ಮಾಡಿದ ಏರ್ಪಾಡನ್ನೆಲ್ಲ ಅವನಿಗೆ ತಿಳಿಸಲು, ಅವನು ಎಲ್ಲವನ್ನೂ ಕೇಳಿ 'ನಿನಗೇನು ಹುಚ್ಚೋ? ನೆಮ್ಮದಿಯಾಗಿ ಬದುಕಿರುವುದನ್ನು ಬಿಟ್ಟು ನಿನ್ನಂತೆ ಕಷ್ಟಪಡುವುದಕ್ಕೆ ನನಗೇನು ತೆವಲು ಹಿಡಿದಿದೆಯೋ? ನನ್ನ ಮನಸ್ಸು ಎಂದಿಗೂ ಅದಕ್ಕೆ ಒಡಂಬಡದು' ಎಂದನು.

"ಅವನು ಹೀಗೆಂದುದನ್ನು ಕೇಳಿ ನನಗೆ ಆಶ್ಚರ್ಯವಾಗಿ ಏನನ್ನು ಹೇಳುವುದಕ್ಕೂ ತೋಚದೆ ಸುಮ್ಮನೆ ನಿಂತೆನು. ಅಷ್ಟು ಹೊತ್ತಿಗೆ ಅವನ ಜತೆಗಾರರು ಅವನನ್ನು ಹುಡುಕಿಕೊಂಡು ಬಂದರು. ಅವರ ಸಂಗಡ ಹೋಗುತ್ತ ಅವರಿಗೆ ನನ್ನನ್ನು ತೋರಿಸಿ ಏನನ್ನೋ ಹೇಳುತ್ತ ಹೋದನು. ನನ್ನ ಮಗನಾಗಿದ್ದಿದ್ದರೂ ನನ್ನ ಅಣ್ಣನ ಮಗನಾಗಿದ್ದಿದ್ದರೂ ಅವನನ್ನು ದಂಡಿಸಿ ಒಳ್ಳೆಯ ಮಾರ್ಗಕ್ಕೆ ತರುತ್ತಲಿದ್ದೆನು. ಅವನ ತಂದೆಯನ್ನು ನನ್ನ ಕೈಯಾರೆ ಕೊಂದು, ಹುಟ್ಟಿದಾರಭ್ಯ ತಾಯಿಯ ಮುಖವನ್ನು ಕಂಡರಿಯದ ಆ ಹುಡುಗನನ್ನು ಹೊಡೆಯಲು ಕೈ ಬರಲಿಲ್ಲ. ಎರಡು ಮೂರು ದಿನಗಳಲ್ಲಿಯೇ ವ್ಯಾಪಾರದ ನಿಮಿತ್ತ ನಾನು ಹೊರಡಬೇಕಾಗಿ ಬಂದುದರಿಂದ, ಭದ್ರದತ್ತನ ಸಂಗತಿಯನ್ನು ನನ್ನ ನಾದಿನಿಗೆ ತಿಳಿಸಿ, ಹತ್ತಿರಿದ್ದ ಹಣಕಾಸುಗಳನ್ನು ನೆಲದಲ್ಲಿ ಹೂಳಿ ಆ ಸ್ಥಳವನ್ನು ಅವಳಿಗೆ ತೋರಿಸಿ, ನೀನು ಎಚ್ಚರಿಕೆಯಾಗಿರು ಎಂದು ಹೇಳಿ ಹೊರಟು ಹೋದೆನು.

"ಆ ಸಲದ ವ್ಯಾಪಾರವು ಮೊತ್ತಮೊದಲು ಅನುಕೂಲವಾಗಿದ್ದರೂ ಕೊನೆಕೊನೆಗೆ ಬಹು ಕಷ್ಟಕ್ಕೆ ಹೇತುವಾಯಿತು. ಎಲ್ಲೆಲ್ಲಿಯೋ ಸುತ್ತಿ ವ್ಯಾಪಾರವನ್ನು ಮಾಡಿಕೊಂಡು, ಕೊನೆಗೆ ಮನೋರಂಜಿನಿ ಎಂಬ ಊಟದ ಮನೆಯ ಸಮೀಪದಲ್ಲಿ ಸಾಮಾನುಗಳನ್ನು ಇಳಿಸಿಕೊಡುವುದಾಗಿ ಒಪ್ಪಿಕೊಂಡು ಅಲ್ಲಿ ಅವುಗಳನ್ನು ಇಳಿಸುತ್ತಲಿದ್ದಾಗ ಸರ್ಕಾರದವರು ಹೇಗೋ ಅದನ್ನು ತಿಳಿದು ನಮ್ಮನ್ನು ಹಿಡಿಯಬೇಕೆಂದು ಆಯುಧ ಸಮೇತರಾಗಿ ಬರುತ್ತಲಿದ್ದರು. ದೈವಾಧೀನದಿಂದ ಆ ವೇಳೆಗೆ ಸೂರ್ಯನು ಅಸ್ತಂಗತನಾದನು. ಅವರು ಬರುತ್ತಲಿದ್ದುದನ್ನು ದೂರದಲ್ಲಿಯೇ ಕಂಡು ನನ್ನ ಜತೆಯವರಿಗೆ ಹೇಳಿ ಸದ್ದಿಲ್ಲದೆ ನದಿಯಲ್ಲಿ ಇಳಿದು ಅಲ್ಲಿಂದ ಒಂದು ಚರಂಡಿಯಲ್ಲಿ ನುಗ್ಗಿ ಮನೋರಂಜಿನಿಯ ಹಿಂದುಗಡೆಯ ಕಾಲುವೆಯಲ್ಲಿ ಎದ್ದು ಮನೆಯ ಹಿಂಭಾಗವನ್ನು ಸೇರಿದೆನು.

ಆ ಮನೋರಂಜಿನಿಯ ಯಜಮಾನನು ನಮಗೆ ಆಪ್ತನು. ಸರ್ಕಾರದವರ ತೊಂದರೆ ಬಂದಾಗಲೆಲ್ಲಾ ಅವರ ಕಣ್ಣಿಗೆ ನಾವು ಬೀಳದಂತೆ ನಮ್ಮನ್ನು ಮರೆಮಾಡಿ ರಕ್ಷಿಸುತ್ತಲಿದ್ದನು. ಆದುದರಿಂದ ಆ ಮನೆಯ ಹಿತ್ತಲ ಬಾಗಿಲಲ್ಲಿ ನಿಂತು ಒಳಗೆ ಹೊಸಬರಾರೂ ಇಲ್ಲದಿದ್ದರೆ ಕದವನ್ನು ತಟ್ಟೋಣವೆಂದು ಇದ್ದೆನು.

"ನನ್ನ ಗ್ರಹಚಾರಕ್ಕೆ ಒಳಗೆ ಯಾರೋ ಹೊಸಬರಿದ್ದರು. ಅವರು ಹೋದ ಮೇಲೆ ಕದವನ್ನು ತಟ್ಟಿ ಒಳಗೆ ಹೋಗುವುದು ಸರಿಯೆಂದು ತಿಳಿದು, ಒದ್ದೆಯಾಗಿದ್ದ ಉಡುಪುಗಳಲ್ಲಿ ಕೆಲವನ್ನು ಹಿಂಡಿ ಆರಹಾಕಿ ಒಳಗಿನಿಂದ ಮಹಡಿಗೆ ಹತ್ತುವುದಕ್ಕೆ ಮಾಡಿದ್ದ ಮರದ ಹಂತಗಳ ಮರೆಯಲ್ಲಿ ಕುಳಿತುಕೊಂಡೆನು."

ಅದುವರೆಗೆ ಸುಮ್ಮನೆ ಕೇಳುತ್ತಲಿದ್ದ ಮಲಯಸಿಂಹನಿಗೆ ಆ ಸಂಗತಿಯನ್ನು ಕೇಳಿ ಈ ಕಥೆಯಲ್ಲಿ ರುಚಿಯು ಹೆಚ್ಚಿ "ಮನೋರಂಜಿನಿಯ ಯಜಮಾನನ ಹೆಸರೇನು?" ಎಂದು ಪ್ರಶ್ನೆ ಮಾಡಲು, ಭದ್ರಕನು "ಕದರ್ಥಕ" ಎಂದನು.

"ಇದು ನಡೆದುದು ಯಾವಾಗ?"

"ಮಹಾಸ್ವಾಮಿ, ಇದು ನಡೆದು ಬಹು ದಿವಸಗಳಾದುವು."

"ಸರಿ, ಸರಿ, ಆಮೇಲೆ?"

"ನಾನು ಅಲ್ಲಿ ಕುಳಿತಿದ್ದಾಗ ಒಳಗೆ ಕದರ್ಥಕನು ಹೊಸಬನೊಡನೆ 'ಅಯ್ಯಾ ಶೆಟ್ಟರೇ, ನಿಜವಾಗಿಯೂ ನಮಗೆ ಇದನ್ನು ಒಬ್ಬ ಆನಂದನು ಕೊಟ್ಟನು. ಅವನು ಈ ರೀತಿ ವಜ್ರಗಳನ್ನು ನಮಗೆ ಉಚಿತವಾಗಿ ಕೊಡುತ್ತಾನೆಂದು ನಾನು ಕನಸಿನಲ್ಲಿಯೂ ಕಂಡಿರಲಿಲ್ಲ' ಎಂದನು. ಅದಕ್ಕೆ ಸೆಟ್ಟಿಯು 'ಆನಂದರು ಈ ರೀತಿ ವಜ್ರದುಂಗುರಗಳನ್ನು ಕೊಟ್ಟು ಹೋಗುವುದನ್ನು ನಾನು ಕಂಡೂ ಇಲ್ಲ ಕೇಳಿಯೂ ಇಲ್ಲ' ಎನ್ನಲು, ಮಹಡಿಯ ಹಂತದ ಮೇಲೆ ನರಳುತ್ತ ಕುಳಿತಿದ್ದ ಕದರ್ಥಕನ ಹೆಂಡತಿ ಕಳಾಕಾಂತೆಯು ಮೆಲ್ಲಗೆ ಇಳಿದು ಸೆಟ್ಟಿಯ ಬಳಿಗೆ ಬಂದು 'ನಮ್ಮ ಯಜಮಾನರಿಗೆ ಪೂರ್ವದಲ್ಲಿ ಧರ್ಮದೇವನೆಂಬ ಒಬ್ಬ ಸ್ನೇಹಿತನಿದ್ದನು; ದುರದೃಷ್ಟವಶಾತ್ ಅವನಿಗೆ ಕಾರಾಗೃಹ ಪ್ರಾಪ್ತಿಯಾಯಿತು. ಅವನು ತನ್ನ ಜತೆಯಲ್ಲಿ ಸೆರೆಯಲ್ಲಿದ್ದ

ಒಬ್ಬ ದೊಡ್ಡ ಮನುಷ್ಯನಿಗೆ ಆಲಸ್ಯವಾಗಿದ್ದಾಗ ಅವನಿಗೆ ಸಹಾಯ ಮಾಡುವುದು ತನ್ನ ಧರ್ಮವೆಂದು ತಿಳಿದು ನಿಷ್ಕಾಮನಾಗಿ ಉಪಚಾರಮಾಡಿದ್ದುದಕ್ಕಾಗಿ, ಬಂಧ ವಿಮುಕ್ತನಾದಾಗ ಆ ಶ್ರೀಮಂತನು ಧರ್ಮದೇವನಿಗೆ ಈ ಉಂಗುರವನ್ನು ಕೊಟ್ಟನಂತೆ; ಅವನು ತನ್ನ ಮರಣ ಕಾಲದಲ್ಲಿ ಅವನ್ನು ಒಬ್ಬ ಆನಂದನಲ್ಲಿ ಕೊಟ್ಟು ಇವರಿಗೆ ಕೊಡುವಂತೆ ಹೇಳಿ ಸತ್ತನಂತೆ' ಎಂದಳು.

"ಅಮ್ಮಾ! ನಿಮ್ಮ ಯಜಮಾನರು ಹೇಳಿದುದನ್ನೇ ನೀವೂ ಹೇಳುತ್ತೀರಿ' ಎಂದು ಸೆಟ್ಟಿಯು ಉಸಿರಲು, ಅವಳು "'ಎಷ್ಟು ಜನ ಎಷ್ಟು ಸಾರಿ ಹೇಳಿದರೂ ನಿಜವು ಎಂದಿಗಾದರೂ ವ್ಯತ್ಯಾಸವಾದೀತೇ, ಇಲ್ಲ' ಎಂದಳು. "'ಇದರ ಬೆಲೆಯೇನು' ಎಂಬುದಕ್ಕೆ ಕದರ್ಥಕನು "'ಸೆಟ್ಟರೇ, ಇದನ್ನು ಕೊಡುವಾಗ ಆ ಆನಂದನು ಕಟ್ಟಡವನ್ನುಳಿದು ಬರಿಯ ವಜ್ರಕ್ಕೆ ಮಾತ್ರ ಐವತ್ತು ಸಾವಿರ ವರಹಗಳೆಂದು ಹೇಳಿದ್ದನು' ಎಂದನು. ಸೆಟ್ಟಿಯು ಉಂಗುರವನ್ನು ಸಾಯಂಕಾಲದ ಬೆಳಕಿನಲ್ಲಿ ನೋಡಿ" 'ಈಗ ಚೆನ್ನಾಗಿ ತಿಳಿಯುವುದಿಲ್ಲ, ಬೆಳಿಗ್ಗೆ ನೋಡಿದರೆ ಇದರ ಯೋಗ್ಯತೆಯು ಗೊತ್ತಾಗುವುದು. ನನಗೇನೋ ನಲವತ್ತು ಸಾವಿರದ ಮೇಲೆ ಏರುವುದಿಲ್ಲವೆಂದು ತೋರುತ್ತದೆ. ಆ ಆನಂದನ ಹೆಸರೇನು?' ಎಂದು ಕೇಳಲು "'ನಿರ್ಮಲಾನಂದ' ಎಂದನು.

ಆಗ ಮಲಯಸಿಂಹನು "ಎಲೋ ಭದ್ರಕಾ, ಕದರ್ಥಕನೂ ಅವನ ಹೆಂಡಿತಿಯೂ ಹೇಳಿದ ಕಥೆಯನ್ನು ನೀನು ನಂಬಿದೆಯೊ"

"ಸ್ವಾಮಿಾ, ಕದರ್ಥಕನು ಎಂದೂ ಸುಳ್ಳು ಹೇಳಿದುದನ್ನು ಕಾಣೆ. ನಾನು ಅದನ್ನು ನಂಬಿದೆನು."

"ಹಾಗಾದರೆ ನಿನ್ನ ಮನಸ್ಸು ಒಳ್ಳೆಯದೆಂದು ತೋರುತ್ತದೆ. ಆ ಧರ್ಮದೇವನಾರು ಬಲ್ಲೆಯೋ?"

"ಸಾಮಿಾ, ನಾನರಿಯೆ; ನರಪುರದ ಬಂದಿಶಾಲೆಯಲ್ಲಿ ನಾನಿದ್ದಾಗ ನಿರ್ಮಲಾನಂದರು ಅವನ ವರ್ತಮಾನವನ್ನು ಸ್ವಲ್ಪ ಹೇಳಿದ್ದರು."

"ಸರಿ; ಮುಂದೆ ನಿನ್ನ ಕಥೆಯನ್ನು ಹೇಳು."

"ಸ್ವಾಮಿಾ! ಅಪ್ಪಣೆ, ಲಾಲಿಸಬೇಕು. ಸೆಟ್ಟಿಯು ಪುನಃ ಉಂಗುರವನ್ನು ಕೈಯಲ್ಲಿ ತೆಗೆದುಕೊಂಡು ಹೀಗೂ ಹಾಗೂ ತಿರುಗಿಸಿ ಅದನ್ನು ತಾನು ತಂದಿದ್ದ ಸಣ್ಣ ತ್ರಾಸಿನಲ್ಲಿ ತೂಕಮಾಡಿ "'ಏನೋ ಹೋದರೂ ಹೋಗಲಿ,

ಇನ್ನೂ ಐದು ಸಾವಿರ ವರಹಗಳನ್ನು ಕೊಟ್ಟುಬಿಡುತ್ತೇನೆ; ಆದರ ಮೇಲೆ ಒಂದು ಚಿಕ್ಕ ಕಾಸನ್ನೂ ಕೊಡಲಾರೆ' ಎಂದನು. ಆಗ ಕದರ್ಥಕನು 'ಆನಂದನು ಹೇಳಿದ ಬೆಲೆಗೆ ಒಂದು ಕಾಸು ಕಡಮೆಯಾದರೂ ಕೊಡೆನು. ನಿಮಗೆ ಇಷ್ಟವಿದ್ದರೆ ಅಷ್ಟಕ್ಕೆ ಕೊಳ್ಳಬಹುದು, ಇಲ್ಲದಿದ್ದರೆ ಬಿಡಬಹುದು. ಬೇರೆ ಯಾರಾದರೂ ಕೊಳ್ಳುವರು' ಎಂದನು. ಅದಕ್ಕೆ ಆ ಸೆಟ್ಟಿಯು 'ಇನ್ನಾರಾದರೂ ನಿನ್ನ ಆನಂದನ ಕಥೆಯನ್ನು ಕೇಳಿ ನನ್ನಂತೆ ಮರುಳಾಗುವರೇ? ಅವರು ಒಡನೆಯೇ ಪೋಲೀಸಿನವರಿಗೆ ಈ ಸಂಗತಿಯನ್ನು ತಿಳಿಸಿಬಿಟ್ಟರೆ ನಿನ್ನಂಥವನಿಗೆ ಇಂತಹ ವಜ್ರದುಂಗುರವು ಹೇಗೆ ಸಿಕ್ಕಿತು; ಇದನ್ನು ಎಲ್ಲಿಯೋ ಕದ್ದಿರಬೇಕೆಂದು ಅವರು ಒದ್ದು ನಿನ್ನನ್ನು ಸೆರೆಮನೆಗೆ ಸೇರಿಸುವರು. ಆಗ ನಿನ್ನ ಆನಂದನು ನಿನ್ನನ್ನು ಬಿಡಿಸಿಕೊಳ್ಳಲಿಕ್ಕೆ ಬರುವನೋ? ನೀನು ಸೆರೆಮನೆಯಿಂದ ಬರುವುದರೊಳಗಾಗಿ ನಿನ್ನ ಉಂಗುರದ ವಜ್ರವು ಮಾಯವಾಗಿ ಒಂದು ಬಿಳಿಯ ಕಲ್ಲಿನ ಉಂಗುರ ಮಟ್ಟಿಗೆ ಉಳಿಯುವುದು. ಇದನ್ನೆಲ್ಲಾ ಚೆನ್ನಾಗಿ ಯೋಚಿಸಿ ನೋಡು' ಎಂದು ಹೇಳಲು, ಕದರ್ಥಕನು 'ಏನಾದರೂ ಆಗಲಿ, ಐವತ್ತು ಸಾವಿರ ವರಹಗಳಿಗೆ ಕಡಿಮೆಯಾಗಿ ಕೊಡುವುದಕ್ಕೆ ಆಗುವುದಿಲ್ಲ' ಎಂದನು.

"ಹಾಗಾದರೆ ನಿನ್ನ ಇಷ್ಟ; ನಾನು ತಂದಿರುವ ಹಣವು ಇಷ್ಟೇ; ಇಲ್ಲಿ ನೋಡು.' ಎಂದು ಸೆಟ್ಟಿಯು ಚೀಲದಿಂದ ಹೊನ್ನು ವರಹಗಳನ್ನೂ ನೋಟುಗಳನ್ನೂ ಮೇಜಿನ ಮೇಲೆ ಸುರಿದನು. 'ಥಳಥಳಿಸುತ್ತಲಿರುವ ಹೊನ್ನು ವರಹಗಳ ರಾಶಿಯನ್ನು ನೋಡುತ್ತಲೆ ಗಂಡ ಹೆಂಡಿರು ಒಬ್ಬರ ಮುಖವನ್ನೊಬ್ಬರು ನೋಡುತ್ತ ಕೆಲವು ಹೊತ್ತು ಬೆರಗಾಗಿ ನಿಂತು, ಕಣ್ಣಿನಿಂದಲೇ ಒಬ್ಬರನ್ನೊಬ್ಬರು ಪ್ರಶ್ನೆಮಾಡುತ್ತ ಇಬ್ಬರೂ ಪ್ರತ್ಯೇಕ ಒಂದು ಕಡೆ ಹೋಗಿ, 'ಈಗ ಇವನು ಹೇಳುವುದಕ್ಕೆ ಒಪ್ಪದಿದ್ದರೆ, ಮುಂದೆ ನಮಗೇನಾಗುವುದೋ? ಇವನು ಉಂಗುರವನ್ನು ಕೊಳ್ಳದೆ ಮರಳಿ ಹೋದನಾದರೆ ಯಾವುದಾದರೂ ಕಿರುಕುಳವನ್ನು ಹುಟ್ಟಿಸಿ ಪೋಲೀಸಿನವರಿಂದ ನಮಗೆ ಇಲ್ಲದ ತೊಂದರೆಯನ್ನು ತಂದಿಟ್ಟಾನು. ಹೋದರೆ ಹೋಗಲಿ; ನಲವತ್ತೈದು ಸಾವಿರ ವರಹಗಳಿಗೆ ಕೊಟ್ಟುಬಿಡೋಣ' ಎಂದು ನಿಶ್ಚಯಮಾಡಿಕೊಂಡರು.

"ಆಗ ಕದರ್ಥಕನು ಸೆಟ್ಟಿಯ ಸಮೀಪಕ್ಕೆ ಬಂದು, ''ಅಯ್ಯಾ ಸೆಟ್ಟರೇ! ನೀವು ಹೇಳಿದಂತೆಯೇ ಆಗಲಿ; ಆದರೆ ನನ್ನ ಹೆಂಡತಿಗೆ ಒಂದು

ಚಿನ್ನದ ಸರ ಬೇಕಂತೆ, ಈ ಹಣದ ಜೊತೆಗೆ ಒಂದು ಸರವನ್ನೂ ಕೊಟ್ಟರೆ ಉಂಗುರವನ್ನು ತೆಗೆದುಕೊಂಡು ಹೋಗಬಹುದು' ಎನ್ನಲು, ಒಡನೆಯೇ ವ್ಯಾಪಾರಿಯು ತನ್ನಲ್ಲಿದ್ದ ಮೂರು ನಾಲ್ಕು ಸರಗಳನ್ನು ತೋರಿಸಿ, 'ಇವು ಗಳಲ್ಲಿ ನಿಮಗೆ ಯಾವುದು ಬೇಕೋ ಅದನ್ನು ತೆಗೆದುಕೊಳ್ಳಿರಿ' ಎಂದನು. ಕಳಾಕಾಂತೆಯು ಆ ಸರಗಳನ್ನು ಒಂದೊಂದಾಗಿ ಕುತ್ತಿಗೆಗೆ ಹಾಕಿಕೊಂಡು ಮನಸ್ಸಿಗೆ ಒಪ್ಪಿದುದೊಂದನ್ನು ತೆಗೆದಿಟ್ಟುಕೊಂಡಳು.

"ಅಷ್ಟು ಹೊತ್ತಿಗೆ ಗಾಳಿಯೂ ಮೋಡವೂ ಹೆಚ್ಚಿ ಗುಡುಗೂ ಮಿಂಚೂ ಮಳೆಯೂ ಮೊದಲಾದುವು. ಮನೆಯೊಳಗಿದ್ದ ಮೂವರೂ ಧನಪಿಶಾಚಗ್ರಸ್ತ ರಾಗಿದುದರಿಂದ ಇದಾವುದೂ ಅವರಿಗೆ ಗೊತ್ತಾಗಲಿಲ್ಲ. ಕದರ್ಥಕನು ಹಣವನ್ನು ಎಣಿಸಿ ಎಣಿಸಿ ಚೀಲಕ್ಕೆ ಹಾಕುವುದೂ ತೆಗೆಯುವುದೂ, ಇದರಲ್ಲಿಯೇ ಮಗ್ನನಾಗಿದ್ದನು; ಕಳಾಕಾಂತೆಯು ಕೊರಳಿಗೆ ಸರವನ್ನು ಹಾಕಿಕೊಂಡು ಕನ್ನಡಿಯ ಮುಂದೆ ನಿಂತು ತನ್ನ ಸೌಂದರ್ಯವನ್ನು ನೋಡಿಕೊಂಡು ಹಿಗ್ಗುತ್ತ ಲಿದ್ದಳು; ಸೆಟ್ಟಿಯೋ, ಆ ಉಂಗುರವನ್ನು ದೀಪದ ಬೆಳಕಿನಲ್ಲಿ ಹಿಡಿದು ಅದರ ಕಾಂತಿಯನ್ನು ನೋಡಿ ನೋಡಿ ತನಗೆ ತುಂಬ ಆದಾಯವಾಗುವುದೆಂದು ಆನಂದದಲ್ಲಿದ್ದನು.

"ಕದರ್ಥಕನು ಹಣದ ಚೀಲವನ್ನು ಭದ್ರವಾಗಿ ಇರಿಸಿ 'ಅಯ್ಯಾ ಸೆಟ್ಟರೇ, ಈ ವ್ಯಾಪಾರದಿಂದ ನನಗೆ ಐದು ಸಾವಿರ ವರಹಗಳು ನಷ್ಟವಾಗಿ ಹೋದುವು; ಆದರೂ ಚಿಂತೆಯಿಲ್ಲ, ಏನಾದರೂ ಅಷ್ಟು ಫಲಾಹಾರವನ್ನು ಮಾಡಿಕೊಂಡು ಹೋಗಿ' ಎಂದನು.

ಅದಕ್ಕೆ ವ್ಯಾಪಾರಿಯು ಗಡಿಯಾರವನ್ನು ತೆಗೆದು ನೋಡಿ, 'ಈಗ ಏಳು ಗಂಟೆಯಾಯಿತು; ಊರಿಗೆ ಹೋಗುವುದಕ್ಕೆ ಇನ್ನೂ ಬ್ರಹ್ಮಾಂಡ ಹೊತ್ತಾಗು ತ್ತದೆ; ನಾನು ಇಲ್ಲಿ ನಿಲ್ಲುವುದಕ್ಕೆ ಆಗುವುದಿಲ್ಲ, ಕ್ಷಮಿಸಬೇಕು' ಎಂದು ಹೇಳಿ ಬೀದಿಗೆ ಹೋದನು. ಆ ವೇಳೆಗೆ ಸಮೀಪದಲ್ಲಿ ಒಂದು ಸಿಡಿಲು ಬಿದ್ದಿತು. ದಾರಿಯನ್ನು ಬಿಡಲು ಬಂದಿದ್ದ ಕದರ್ಥಕನು ಅದನ್ನು ನೋಡಿ 'ಸ್ವಾಮಿಾ ಸಾಹುಕಾರರೇ, ಮಳೆ ಗಾಳಿ ಸಿಡಿಲು ಬಲವಾಗಿದೆ, ನೀವು ಈಗ ಊರಿಗೆ ಹೋಗುವುದು ಸರಿಯಲ್ಲ; ಸುಖವಾಗಿ ಭೋಜನ ಮಾಡಿಕೊಂಡು ಇಲ್ಲಿಯೇ ಮಲಗಿದ್ದು ಬೆಳಗಾಗುತ್ತಲೆ ಎದ್ದು ಹೊರಡುವುದು ಮೇಲು'

ಎಂದನು. ಅದಕ್ಕೆ ಸೆಟ್ಟಿಯು " 'ನಾನೇನೂ ಮಳೆ ಗಾಳಿಗೆ ಹೆದರುವವನಲ್ಲ' ಎಂದನು. " 'ಕಳ್ಳರು ಬಂದರೋ!' ಎಂದು ಕಳಾಕಾಂತೆಯು ಕೇಳಲು, ಅವನು " 'ಇಗೋ ನೋಡಿ, ನನ್ನಲ್ಲಿ ಎರಡು ನಾಯಿಗಳು ಇರುವುವು; ಇವು ಬಗುಳುವುದಕ್ಕೆ ಮೊದಲೇ ಕಚ್ಚುವುವು' ಎಂದು ತನ್ನಲ್ಲಿದ್ದ ಎರಡು ಪಿಸ್ತೂಲುಗಳನ್ನು ತೋರಿಸಿದನು.

" ಹಾಗಾದರೆ ನಿಮ್ಮಿಷ್ಟ' ಎಂದು ಕದರ್ಥಕನು ಅವನನ್ನು ಸಾಗುಕಳುಹಿ ಮನೆಯೊಳಕ್ಕೆ ಬಂದನು. ಬಾಗಿಲಲ್ಲಿ ನಿಂತಿದ್ದ ಕಳಾಕಾಂತೆಯೂ ಹಿಂದಿರುಗಿ ಗಂಡನನ್ನು ಕುರಿತು " 'ಮಳೆ ಗಾಳಿ ಹೆಚ್ಚಾಗಿರುವಾಗ ಬಾಗಿಲು ತೆರೆದಿರುವುದು ಸರಿಯಲ್ಲ ಮೊದಲು ಅದನ್ನು ಮುಚ್ಚಿ' ಎನ್ನಲು, ಅವನು " 'ಮನೆಯೊಳಗೆ ಹಣವಿರುವಾಗ ಬಾಗಿಲು ತೆರೆದಿರುವುದು ನನಗೂ ಇಷ್ಟವಿಲ್ಲ' ಎಂದು ಬಾಗಿಲನ್ನು ಮುಚ್ಚಿ ಅಗಳಿಯನ್ನು ಹಾಕಿದನು.

ಕಳಾಕಾಂತೆಯು ಹಿಂದಿರುಗಿ ಬಂದಾಗ ಅವಳ ಮುಖವು ಪಿಶಾಚದ ಮುಖದಂತಿದ್ದಿತು. ಬೆಂಕಿಯನ್ನುಗುಳುತ್ತಿದ್ದ ಅವಳ ಕಣ್ಣುಗಳು ಕೆಂಪಾಗಿ ಭಯಂಕರವಾಗಿದ್ದುವು; ಗಂಡನು ಬಾಗಿಲನ್ನು ಮುಚ್ಚಿ ಅವಳ ಇದಿರಿಗೆ ಬಂದು ನಿಲ್ಲಲು, " 'ನೀವು ಏತಕ್ಕೆ ಅವನನ್ನು ಇಲ್ಲಿಯೇ ಮಲಗು ಎಂದು ಹೇಳಿದಿರಿ' ಎಂದಳು.

" 'ಏಕೆ? ಮಳೆ ಗಾಳಿಯಲ್ಲಿ ಅವನು ಊರಿಗೆ ಪ್ರಯಾಣ ಮಾಡುವುದು ಸರಿಯಲ್ಲವೆಂದು ಹೇಳಿದೆ.'

" 'ನನಗಿನ್ನೇನೋ ತೋರಿತು.'

" 'ಹಾಗೆಂದರೇನು?'

" 'ನೀವು ಬೇರೆ ಯೋಚನೆಯಿಂದ ಅವನನ್ನು ಇಲ್ಲಿ ನಿಲ್ಲಿಸುವ ಪ್ರಯತ್ನ ಮಾಡಿದಿರೆಂದಿದ್ದೆನು.'

" 'ಹೆಂಗಸಿಗೆ ಮೈಯೆಲ್ಲ ವಿಷವೆಂಬುದು ಸುಳ್ಳಲ್ಲ, ಇಂತಹ ದುರ್ಬುದ್ಧಿ ನಿನಗೇಕೆ ಹುಟ್ಟಿತು?'

" 'ನೀವು ಗಂಡಸು ಎಂದಿದ್ದೆ.'

" 'ಹಾಗೆಂದರೇನು?'

" 'ನೀವು ಗಂಡಸಾಗಿದ್ದಿದ್ದರೆ ಅವನನ್ನು ಬೇರೆ ಹೊರಗೆ ಕಳುಹುತ್ತಲೇ ಇರಲಿಲ್ಲ.'

" 'ಅಯ್ಯೋ, ದೇವರೇ! ಇವಳಿಗೇನು ದುರ್ಬುದ್ಧಿ ?'

" 'ಒಂದು ವೇಳೆ ಕಳುಹಿದರೂ ಅವನು ಊರನ್ನು ಸೇರುತ್ತಿರಲಿಲ್ಲ.'

" 'ವಿಷ, ವಿಷ, ವಿಷ !'

" 'ತೋಪಿನ ರಸ್ತೆಯಲ್ಲಿ ಹೋದರೆ ಸುತ್ತು. ಸೀಳು ದಾರಿಯಲ್ಲಿ ಹೋದರೆ ಅವನನ್ನು ಒಂದು ನಿಮಿಷದಲ್ಲಿ ಹಿಡಿಯಬಹುದು.'

'ಎಲೌ ವಿಷಪುತ್ತಳಿಯೇ ! ನಿನ್ನ ದುರಾಲೋಚನೆಗೆ ದೇವರು ಎಂದಾದರೂ ಸಮ್ಮತಿಸುವನೇ, ಎಂದು ಕದರ್ಥಕನು ಹೇಳುತ್ತಲಿದ್ದಾಗ ದಿಢೀರೆಂದು ಒಂದು ಸಿಡಿಲು ಪಕ್ಕದಲ್ಲಿದ್ದ ತೋಪಿನಲ್ಲಿ ಬಿದ್ದಿತು.

"ಆಗ ಅವನು ಹೆಂಡತಿಯನ್ನು ನೋಡಿ, 'ನೋಡಿದೆಯಾ, ನಿನ್ನ ದುರಾಲೋಚನೆಗೆ ದೈವಸಮ್ಮತವಿಲ್ಲವೆಂದು ನಾನಾಗಲೇ ಹೇಳಲಿಲ್ಲವೇ' ಎಂದನು. ಆ ಮಾತು ಮುಗಿಯುವುದರಲ್ಲಿಯೇ ಬೀದಿಯ ಕದವನ್ನು ಯಾರೋ ದಬದಬನೆ ಬಡಿಯುವ ಸದ್ದು ಕೇಳಿಸಿತು. ಗಂಡಹೆಂಡರಿಬ್ಬರೂ ಹೆದರಿ 'ಇದಾರು?' ಎನ್ನಲು, 'ನಾನು, ನಾನು, ಬಾಗಿಲನ್ನು ತೆರೆಯಿರಿ' ಎಂದು ಯಾರೋ ಹೇಳಿದರು. ನೀನಾರೆಂದು ಕದರ್ಥಕನು ಕೇಳಲು ಆಗಂತುಕನು 'ನಾನು, ಸೆಟ್ಟಿ, ಸೆಟ್ಟಿ,' ಎಂದನು. ಆಗ ಕಳಾಕಾಂತೆಯು ಗಂಡನ ಮುಖವನ್ನು ನೋಡಿ 'ದೇವರು ಒಪ್ಪಲಾರ ಎಂದು ಹೇಳಿದ್ದಿರಿ, ಇಗೋ ದೇವರೇ ಅವನನ್ನು ಇಲ್ಲಿಗೆ ತಂದು ಬಿಟ್ಟಿದ್ದಾನೆ' ಎಂದಳು. ಆ ಮಾತನ್ನು ಕೇಳುತ್ತಲೆ ಕದರ್ಥಕನು ಕಳೆಗುಂದಿ ಕೈಕಾಲುಗಳು ನಡುಗಿ ಅಲ್ಲಿದ್ದ ಒಂದು ಕುರ್ಚಿಯ ಮೇಲೆ ಬಿದ್ದುಕೊಂಡನು.

"ಒಡನೆಯೇ ಕಳಾಕಾಂತೆಯು ಬಾಗಿಲನ್ನು ತೆರೆದು 'ಸಾಹುಕಾರರೇ, ಇಲ್ಲಿಯೇ ಇರಿ ಎಂದು ಆಗಲೇ ನಾವು ಹೇಳಲಿಲ್ಲವೇ? ನಮ್ಮ ಮಾತನ್ನು ಕೇಳದೆ ಹೋಗಿ ಅನ್ಯಾಯವಾಗಿ ಅದ್ದಿ ಮುದ್ದೆಯಾದಿರಲ್ಲ; ಬನ್ನಿರಿ, ಒದ್ದೆ ಬಟ್ಟೆಯನ್ನು ತೆಗೆದು ಹಾಕಿರಿ, ನಾನು ಬೇರೆ ಬಟ್ಟೆಯನ್ನು ಕೊಡುತ್ತೇನೆ' ಎಂದು ಹೇಳುತ್ತ ಬಾಗಿಲನ್ನು ಮುಚ್ಚಿ ಅಗಳಿಯನ್ನು ಹಾಕಿದಳು. ಆದಕ್ಕವನು 'ಅಮ್ಮಾ ನನಗೆ ಇಂದು ಊರಿಗೆ ಹೋಗಿ ಸೇರುವ ಪ್ರಾಪ್ತಿಯಿಲ್ಲ;

ಆದರದಿಂದ ನೀವು ಭೋಜನಕ್ಕೆ ಕರೆದಿದ್ದಿರಿ, ಇಗೋ ಬಂದಿದ್ದೇನೆ; ಮಲಗುವುದಕ್ಕೆ ಸ್ವಲ್ಪ ಸ್ಥಳಕೊಟ್ಟರೆ ನಿಮ್ಮ ಉಪಕಾರವನ್ನು ಎಂದಿಗೂ ಮರೆಯೆನು' ಎಂದನು.

"ಕುಳಿತಿದ್ದ ಕಡೆಯಿಂದಲೇ ವರ್ತಕನು ಮನೆಯನ್ನು ಪರಿಶೋಧಿಸಿ, ಯಾವ ಭಾಗದಲ್ಲೂ ಅನುಮಾನಕ್ಕೆ ಕಾರಣವಿಲ್ಲವೆಂದು ಮನಸ್ಸಿನಲ್ಲಿ ಧೈರ್ಯ ಮಾಡಿಕೊಂಡು, ತನ್ನ ಒದ್ದೆ ಬಟ್ಟೆಯನ್ನು ಬಿಚ್ಚುತ್ತ

" 'ಅಮ್ಮಾ, ಈ ಮನೆಯಲ್ಲಿ ಇನ್ನಾರಾದರೂ ಉಂಟೋ'

" 'ನಾವಿಬ್ಬರಲ್ಲದೆ ಬೇರೆ ಯಾರೂ ಇಲ್ಲ'

" 'ಹಾಗಾದರೆ ನಿಮಗೆ ನನ್ನಿಂದ ತೊಂದರೆಯಾಗಬಹುದು'

" 'ನಮಗೇನೂ ತೊಂದರೆಯಿಲ್ಲ. ಮಹಡಿಯ ಮೇಲೆ ಪ್ರತ್ಯೇಕವಾಗಿ ಒಂದು ಕೋಣೆ ಯಿರುವುದು; ಅಲ್ಲಿ ನೀವು ಸುಖವಾಗಿ ಮಲಗಬಹುದು" ಎಂದು ಹೇಳಿ ಹೊಸಬಟ್ಟೆಗಳನ್ನೂ ಊಟದ ಸಾಮಾನನ್ನೂ ತಂದಿಟ್ಟಳು. ಆಗ ವರ್ತಕನು 'ನಿಮಗೆ ಊಟವಾಯಿತೋ' ಎಂದು ಕೇಳಲು, ಅವಳು

" 'ನಾವು ಹೊತ್ತು ಮುಳುಗುವುದರೊಳಗಾಗಿಯೇ ಊಟಮಾಡುವ ಪದ್ಧತಿ'

" 'ಹಾಗಾದರೆ ನಾನೊಬ್ಬನೇ ಊಟಮಾಡಬೇಕು'

"'ನನ್ನ ಯಜಮಾನರು ನೋಡುತ್ತ ಕುಳಿತಿರುತ್ತಾರೆ, ನಾನೇ ನಿಮ್ಮನ್ನು ಉಪಚರಿಸುವೆನು'.

"ಇದು ವರೆಗೆ ಯಾರಿಗೂ ಇಷ್ಟು ಆದರದಿಂದ ಉಪಚರಿಸಿ ಕಾಣದ ಕಳಾಕಾಂತೆಯು ವರ್ತಕನಿಗೆ ಈಗ ಮಾಡುತ್ತಲಿದ್ದ ಉಪಚಾರವನ್ನು ಕಂಡು ಕದರ್ಥಕನು ಗಡಗಡನೆ ನಡುಗಿ ಊಟಮಾಡುತ್ತಲಿದ್ದವನನ್ನೂ ನೋಡಿ ಸ್ವಲ್ಪ ನಕ್ಕು, ಕೂಡಲೆ ಎದ್ದು ವರ್ತಕನನ್ನು ನೋಡಿ 'ನೀವು ಈ ರಾತ್ರಿ ಇಲ್ಲಿ ನಿಂತುದು ಒಳ್ಳೆಯದಾಯಿತು. ನನಗೆ ನಿದ್ದೆ ಬರುವುದರಿಂದ ಮಲಗಲಿಕ್ಕೆ ಹೋಗುವೆನು, ಕ್ಷಮಿಸಬೇಕು' ಎಂದು ಹೇಳಿ ಮನೆಯ ಹಿಂದುಗಡೆಯ ಕೊಟ್ಟಡಿಯಲ್ಲಿ ಹಾಕಿದ್ದ ಮಂಚದ ಮೇಲೆ ಮಲಗಿದನು. ಆ ಸೆಟ್ಟಿಯು ಮನೆಯಲ್ಲಿರುವವರೆಗೆ, ನಾನು ಒಳಗೆ ಹೋಗುವುದು ತರವಲ್ಲವೆಂದು ತಿಳಿದು, ಹೀಗೆಯೇ ಹಂತದ ಕೆಳಗೆರಾತ್ರಿಯೆಲ್ಲಾ ಮಲಗಿದ್ದು ಒಂದು ಹೊತ್ತಿನಲ್ಲಿ ಎದ್ದು

ಇನ್ನೆಲ್ಲಿಗಾದರೂ ಹೋಗೋಣವೆಂದು ನಿಶ್ಚಯಿಸಿಕೊಂಡೆನು. ಬಲು ಹೊತ್ತು ನೀರಿನಲ್ಲಿ ಒದ್ದಾಡಿದ್ದುದರಿಂದಲೂ ಹೊಟ್ಟೆಗೇನೂ ಇಲ್ಲದಿದ್ದುದರಿಂದಲೂ ನನಗೆ ಬೇಗ ನಿದ್ದೆ ಬರಲಿಲ್ಲ. ಸ್ವಲ್ಪ ಹೊತ್ತು ಹಾಗೆಯೇ ಇರಲು ಕಣ್ಣು ಮುಚ್ಚಿ ಹೋಯಿತು. ಈ ರೀತಿ ಎಷ್ಟು ಹೊತ್ತು ನಿದ್ದೆ ಮಾಡಿದೆನೋ ಕಾಣೆ.

"ಒಂದು ಹೊತ್ತಿನಲ್ಲಿ ಪಿಸ್ತೂಲನ್ನು ಹಾರಿಸಿದ ಸದ್ದು ಕೇಳಿಸಿತು; ಯಾರೋ ಕಿರಿಚಿಕೊಂಡರು. ಓಹೋ! ಇಂದಿಗೆ ನನ್ನ ಪರಿಣಾಮವು ಮುಗಿಯಿತು; ನಾನಿಲ್ಲಿರುವುದನ್ನು ಸರ್ಕಾರದವರು ಹೇಗೋ ಕಂಡು ನನ್ನನ್ನು ಗುಂಡಿನಿಂದ ಸುಟ್ಟಿರಬಹುದುದು ಎಂದು ಬೆಬ್ಬರ ಬಿದ್ದೆದ್ದು ಮೆಯ್ಯಿಗೆ ಯಾವ ಕಡೆ ಪೆಟ್ಟುತಾಗಿದೆ• ನೋಡೋಣವೆಂದು ನೋಡಿದೆನು. ಎಲ್ಲಿಯೂ ಪೆಟ್ಟು ಬಿದ್ದಂತೆತೋರದಿದ್ದುದರಿಂದ, ಅಯ್ಯೋ! ಇದು ಬರಿಯ ಬೇಳಂಬವೆಂದು ನಿಶ್ಚಯಿಸಿ, ಇನ್ನೆಲ್ಲಾದರೂ ಹೋಗೋಣವೆಂದು ಯೋಚಿಸಿ ಬಟ್ಟೆಗಳನ್ನುಡುತ್ತಲಿದ್ದಾಗ ಅಟ್ಟದ ಮೇಲಿನಿಂದ ನನ್ನ ತಲೆಯ ಮೇಲೆಯೂ ಬಟ್ಟೆಯ ಮೇಲೆಯೂ ಯಾವುದೋ ತೊಟ್ಟು ತೊಟ್ಟಾಗಿ ಬೀಳಲು ಪ್ರಾರಂಭವಾಯಿತು. ಆ ದಿನ ಮಳೆಯು ವಿಪರೀತವಾಗಿ ಸುರಿದಿದ್ದುದರಿಂದ ಎಲ್ಲಿಯೋ ಮಹಡಿಯ ಮೇಲೆ ನಿಂತಿದ್ದ ನೀರು ಕೆಳಗೆ ತೊಟ್ಟಿಕ್ಕುವುದೆಂದು ಭಾವಿಸಿಕೊಂಡೆನು. ಅಷ್ಟರಲ್ಲಿಯೇ ಯಾರೋ ಮಹಡಿಯಿಂದ ಕೆಳಗೆ ಇಳಿಯುವ ಸದ್ದಾಯಿತು. ಈ ವೇಳೆಯಲ್ಲಿ ಹೀಗೆ ಕೆಳಗಿಳಿದು ಬರುವವರಾರಿರಬಹುದು ನೋಡೋಣವೆಂದು ಕದದ ಕಿಂಡಿಯಲ್ಲಿ ಹಾಗೆಯೇ ಇಣಿಕಿ ನೋಡಲು. ಕದರ್ಥಕನು ಒಂದು ಕೈಯ್ಯಲ್ಲಿ ದೀಪವನ್ನೂ ಮತ್ತೊಂದು ಕೈಯಲ್ಲಿ ಹಣದ ಚೀಲವನ್ನೂ ಹಿಡಿದುಕೊಂಡು ಕೆಳಗಿಳಿದು ಅಲ್ಲಿದ್ದ ಮೇಜಿನ ಮೇಲೆ ಅವೆರಡನ್ನೂ ಇಟ್ಟು ಅಂಗಿಯ ಜೇಬಿನಿಂದ ಉಂಗುರದ ಪೆಟ್ಟಿಗೆಯನ್ನು ತೆಗೆದು ಅದರಲ್ಲಿ ಉಂಗುರವಿರುವುದೋ ಇಲ್ಲವೋ ಎಂದು ನೋಡಿ ಪುನಃ ಜೇಬಿನಲ್ಲಿಟ್ಟುಕೊಂಡು, ಹಣವನ್ನೆಲ್ಲಾ ನಡುಕಟ್ಟಿನ ಚೀಲದಲ್ಲಿ ಭದ್ರ ಪಡಿಸಿಕೊಂಡು ಆ ಚೀಲವನ್ನು ಅಲ್ಲಿಯೇ ಬಿಸುಟು, ಬೀದಿಯ ಬಾಗಿಲನ್ನು ತೆರೆದುಕೊಂಡು ಹೊರಗೆ ಹೊರಟುಹೋದನು. ಅವನ ಬಟ್ಟೆಯೂ ಮುಖವೂ ರಕ್ತದಿಂದ ತೋಯ್ದುಹೋಗಿದ್ದುವು.

"ಅದನ್ನು ನೋಡುತ್ತಲೇ ಕಳಾಕಾಂತೆಯು ಗಂಡನನ್ನು ಹೀಯಾಳಿಸುತ್ತಿದ್ದುದು ಜ್ಞಾಪಕಕ್ಕೆ ಬಂದು, ಅಯ್ಯೋ! ಈ ಚಂಡಾಳನು ಆ ವರ್ತಕನನ್ನು

ಕೊಂದು ಉಂಗುರವನ್ನು ಅಪಹರಿಸಿಕೊಂಡು ಹೋದನು ; ನಾನು ಎಚ್ಚರವಾಗಿದ್ದಿದ್ದರೆ ಇದು ಎಂದೂ ನಡೆಯುತ್ತಿರಲಿಲ್ಲ ಎಂದು ಚಿಂತಿಸುತ್ತಿದ್ದೆನು. ಆಗ ಯಾರೋ ಮಹಡಿಯ ಮೇಲೆ ಮೆಲ್ಲಗೆ ನರಳುತ್ತಿರುವಂತೆ ಕೇಳಿಸಿತು. ಇದರಿಂದ ಆ ವರ್ತಕನಿಗೆ ಬಹುಶಃ ಇನ್ನೂ ಪ್ರಾಣ ಹೋಗಿರಲಾರದು, ಈಗ ಏನಾದರೂ ಸ್ವಲ್ಪ ಒತ್ತಾಸೆಯನ್ನು ಮಾಡೋಣವೆಂದುಕೊಂಡು ಬಲಾತ್ಕಾರದಿಂದ ಆ ಹಿತ್ತಲಬಾಗಿಲನ್ನು ಮೀಟಿ ಒಳಹೊಕ್ಕು ದೀಪವನ್ನು ತೆಗೆದುಕೊಂಡು ಮಹಡಿಯ ಮೇಲಕ್ಕೆ ಹೋಗಲು, ಕಳಾಕಾಂತೆಯು ಮಧ್ಯದಲ್ಲಿ ನರಳುತ್ತ ಬಿದ್ದಿದ್ದಳು. ಅವಳ ಎದೆಯಲ್ಲಿ ಕಠಾರಿಯು ನಾಟಿದ್ದಿತು. ನಾನು ಅದನ್ನು ಈಚೆಗೆ ತೆಗೆದೊಡನೆಯೇ ಅವಳಿಗೆ ಪ್ರಾಣವು ಹೋಯಿತು. ವರ್ತಕನೇನಾಗಿರುವನೋ ನೋಡೋಣವೆಂದು ಮೇಲೆ ಹತ್ತಿ ಕೊಟ್ಟಡಿಗೆ ಹೋಗಲು ಅಲ್ಲಿ ಅವನ ಹೆಣವು ಬಿದ್ದಿದ್ದಿತು. ಈ ಎರಡು ಘೋರ ಕೃತ್ಯಗಳನ್ನು ಕಂಡು ನನಗೆ ಮೆಯ್ ನಡುಗಿ ಯಾವುದೂ ತೋರದೆ ಅಯ್ಯೋ ! ಎಂದು ಗಟ್ಟಿಯಾಗಿ ಕೂಗಿಕೊಂಡೆನು.

"ಆಗ ಸಿಪಾಯಿಗಳು ನನ್ನನ್ನು ಹುಡುಕುತ್ತ ಸಮೀಪದಲ್ಲಿಯೇ ಇದ್ದುದರಿಂದ ಅವರು ನನ್ನ ಸದ್ದನ್ನು ಕೇಳಿ " 'ಇಗೋ ಅವನು ಈ ಮನೆಯಲ್ಲಿರುವಂತೆ ತೋರುತ್ತಲಿದೆ' ಎಂದುಕೊಂಡು ನಿಮಿಷಮಾತ್ರದಲ್ಲಿಯೇ ಮನೆಯನ್ನು ಸುತ್ತಿಕೊಳ್ಳಲು, ಅವರಲ್ಲಿ ಇಬ್ಬರು ಬೆಳಕನ್ನು ಹಿಡಿದುಕೊಂಡು ನಾನಿದ್ದೆಡೆಗೆ ಬಂದು ನನ್ನ ತಲೆಯನ್ನೂ ಬಟ್ಟೆಗಳನ್ನೂ ಬಿದ್ದಿದ್ದ ಹೆಣಗಳನ್ನೂ ನೋಡಿ, ಇದೇನು ಎಂದು ಕೇಳಿದರು. ಅದುವರೆಗೆ ಮೇಲಿನಿಂದ ಸುರಿದುದು ಮಳೆಯಲ್ಲ ; ಆ ಚಂಡಾಳನು ಕೊಂದ ಶರೀರದಿಂದ ಸುರಿದ ರಕ್ತದ ಮಳೆಯೆಂದು ನನಗೆ ತೋರಿಯೇ ಇರಲಿಲ್ಲ. 'ಸ್ವಾಮಿ ! ಈ ಕೊಲೆಗಳನ್ನು ನಾನು ಮಾಡಿದವನಲ್ಲ ; ಈ ಮನೆಯ ಯಜಮಾನನಾಗಿದ್ದ ಕದರ್ಥಕನನ್ನೂ ನಿರ್ಮಲಲಾನಂದರೆಂಬ ಸನ್ಯಾಸಿಗಳನ್ನೂ ವಿಚಾರಿಸಿದರೆ ಯಾರು ಮಾಡಿದರೆಂಬುದು ಗೊತ್ತಾಗುವುದು' ಎಂದು ಎಷ್ಟು ಹೇಳಿದರೂ ಕೇಳದೆ ಅವರು ನನ್ನ ಎರಡು ಕೈಗಳನ್ನೂ ಕಟ್ಟಿ ವಿಚಾರಣೆಗಾಗಿ ಬಂಧನದಲ್ಲಿಟ್ಟರು.

" 'ಇದಾದ ಮೂರು ತಿಂಗಳ ಮೇಲೆ ವಿಚಾರಣೆಯು ಪ್ರಾರಂಭವಾಯಿತು. ಈ ಮಧ್ಯೆ ಸರ್ಕಾರದವರು ನಾನು ಹೇಳಿದುದನ್ನು ಪ್ರಕಟಿಸಿದ್ದರು. 'ಕದರ್ಥ

ಕನು ಬಹುಶಃ ಸಿಕ್ಕಲಾರ, ಒಂದು ವೇಳೆ ಸಿಕ್ಕಿದರೂ ನಿಜವನ್ನು ಹೇಳಲಾರ ನಿರ್ಮಲಾನಂದರು ಸಿಕ್ಕಿದರೆ ನಾನು ಬದುಕುತ್ತೇನೆ; ಇಲ್ಲವಾದರೆ ಆಗಿನ ಸನ್ನಿವೇಶದಿಂದ ಆ ಕೊಲೆಗಳನ್ನು ನಾನೇ ಮಾಡಿದೆನೆಂದು ನಿಶ್ಚಯಿಸಿ ನನ್ನನ್ನು ಹೇಗಿದ್ದರೂ ಗಲ್ಲಿಗೆ ಏರಿಸಿಬಿಡುವರು' ಎಂದುಕೊಂಡು ಪ್ರತಿದಿನವೂ ದೇವರನು ಪ್ರಾರ್ಥಿಸುತ್ತಲಿದ್ದೆನು. ಹೀಗೆಯೇ ಎಂಬತ್ತೈದು ದಿನಗಳು ಕಳೆದುಹೋದುವು. ಆನಂದರ ವರ್ತಮಾನವೇ ಇಲ್ಲ. ವಿಚಾರಣೆಯ ಕಾಲವೂ ಸಮೀಪಿಸಿತು, ಆಗಲೂ ಆನಂದರ ಸುದ್ದಿಯೇ ಇಲ್ಲ. ತಪ್ಪು ಮಾಡಿದವನೆಲ್ಲಿಯೋ ಹೋಗಿ ನಿರಪರಾಧಿಯಾದ ನಾನು ಸಿಕ್ಕಿ ಅನ್ಯಾಯವಾಗಿ ಪ್ರಾಣ ಬಿಡಬೇಕಲ್ಲಾ, 'ಹಣ್ಣು ತಿಂದವನು ನುಣುಚಿಕೊಂಡ; ಸಿಪ್ಪೆ ತಿಂದವನು ಸಿಕ್ಕಿಹಾಕಿಕೊಂಡ' ಎಂಬ ಗಾದೆ ನನ್ನ ವಿಷಯದಲ್ಲಿ ಈಗ ಪ್ರಮಾಣಕ್ಕೆ ಬಂದಿತು ಎಂದು ದೇವರಲ್ಲಿ ನಿತ್ಯವೂ ಮೊರೆಯಿಡುತ್ತಿರಲು, ಆ ವೇಳೆಗೆ ಸರಿಯಾಗಿ ಆನಂದರು ನಾನಿದ್ದ ಕಾರಾಗೃಹಕ್ಕೆ ಬಂದು 'ನೀನೇಯೋ ನನ್ನ ಆಗಮನವನ್ನು ನಿರೀಕ್ಷಿಸುತ್ತಲಿದ್ದವನು?' ಎಂದು ಕೇಳಿದರು. ಹೌದೆಂದು ನಾನು ಹೇಳಲು, ಅವರು 'ನಿನ್ನ ವಿಷಯವನ್ನು ವರ್ತಮಾನ ಪತ್ರಿಕೆಯಲ್ಲಿ ಓದಿ ಇಲ್ಲಿಗೆ ಬಂದೆನು. ನಡೆದ ಸಂಗತಿಯನ್ನು ನಿಜವಾಗಿ ಹೇಳಿಬಿಟ್ಟರೆ ನಾನು ನಿನಗನುಕೂಲ ಮಾಡಿ ಕೊಡುವೆನು' ಎಂದರು.

"ಆಗ ನಾನು ಕಂಡದ್ದನ್ನೂ ಕೇಳಿದುದನ್ನೂ ಸ್ವಲ್ಪವೂ ಲೋಪವಿಲ್ಲದಂತೆ ಹೇಳಿಬಿಟ್ಟೆನು. ವಜ್ರದುಂಗುರದ ಸಂಗತಿ ಬಂದಾಗ ನನ್ನ ಮಾತನ್ನು ನಂಬುವರೋ ಇಲ್ಲವೋ ಎಂದು ನನಗನುಮಾನವಾಗಿದ್ದಿತು. ನಾನು ಹೇಳಿದುದನ್ನೆಲ್ಲಾ ಅವರು ನಿಜವೆಂದು ಒಪ್ಪಿಕೊಂಡರು. ಬಳಿಕ ನಾನು ಸಂಪಗೆಯ ವನದ ಮನೆಯಲ್ಲಿ ಮಾಡಿದ ಪಾಪಕೃತ್ಯವನ್ನು ಆ ಮಹಾತ್ಮರಿಗೆ ತಿಳಿಸಿ, ಅವರ ಕ್ಷಮೆಯನ್ನು ಕೇಳಿಕೊಂಡರೆ ಕ್ಷೇಮವಾದೀತೆಂದು ತಿಳಿದು, ಅದನ್ನೂ ತಿಳಿಸಲು ಅವರಿಗೆ ನನ್ನಲ್ಲಿ ಪೂರ್ಣವಾಗಿ ನಂಬುಗೆಯು ಹುಟ್ಟಿ 'ನೀನು ದಿಗಿಲು ಪಡಬೇಡ, ಧೈರ್ಯವಾಗಿರು' ಎಂದು ಭರವಸೆ ಕೊಟ್ಟು ಹೊರಟು ಹೋದರು.

"ನನ್ನ ಅದೃಷ್ಟಕ್ಕೆ ಸರಿಯಾಗಿ ವಿಚಾರಣೆಗೆ ಮೊದಲೇ ಕದರ್ಥಕನು ಸಿಕ್ಕಿ, ತಾನು ಧನದ ಆಸೆಯಿಂದ ಪ್ರೇರಿತನಾಗಿ ಆ ಕೃತ್ಯಗಳನ್ನು ಮಾಡಿದುದು

ಉಂಟೆಂದು ಒಪ್ಪಿಕೊಂಡನು. ನ್ಯಾಯಾಧಿಪತಿಯು ಅವನಿಗೆ ಯಾವಜ್ಜೀವವೂ ಕಾರಾಗೃಹದಲ್ಲಿರುವಂತೆ ದಂಡವನ್ನು ವಿಧಿಸಿ, ನನ್ನನು ಬಿಟ್ಟುಬಿಡುವಂತೆ ಆಜ್ಞೆಯನ್ನು ಮಾಡಿದನು."

"ಇದೆಲ್ಲಾ ಆದಮೇಲೆ ನೀನು ನನ್ನಬಳಿ ಬಂದೆಯೋ ?"

"ಮಹಾಸ್ವಾಮಿಾ ! ನನ್ನ ಅವಸ್ಥೆಯನ್ನೂ ನಾನು ಮಾಡುತ್ತಲಿದ್ದ ವ್ಯಾಪಾರದ ಅಪಾಯವನ್ನೂ ನೋಡಿ, ಆನಂದರು ಮನಮರುಗಿ 'ಅಪ್ಪಾ ! ಇದು ನಿನಗೆ ತರವಲ್ಲ ; ನನ್ನ ಶಿಷ್ಯನಾದ ಸಂಪನ್ನನೊಬ್ಬನು ತನಗೊಬ್ಬ ನಂಬಿಕೆಯಾದ ಸೇವಕನು ಬೇಕು ಎಂದು ಹೇಳುತ್ತಲಿದ್ದಾನೆ. ನೀನು ಅವನಲ್ಲಿ ಸೇರಿದರೆ ಅನುಕೂಲವಾದೀತು' ಎಂದರು. 'ಮಹಾಸ್ವಾಮಿಾ ! ಅಪ್ಪಣೆ' ಎಂದು ಒಪ್ಪಿಕೊಳ್ಳಲು. ಅವರು 'ಯಾವಾಗಲೂ ಸುಳ್ಳು ಹೇಳುವುದಿಲ್ಲವೆಂದೂ, ಆ ದೊಡ್ಡವನ ಮನಸ್ಸಿಗೆ ಸ್ವಲ್ಪವೂ ಅಸಮಾಧಾನವಾಗದಂತೆ ಕೆಲಸ ಮಾಡಿಕೊಂಡಿರುವೆನೆಂದೂ, ನೀನು ಪ್ರಮಾಣ ಮಾಡಿಕೊಡು ; ಹಾಗೆ ಮಾಡಿದರೆ ನಾನು ಅವರಿಗೆ ಒಂದು ಕಾಗದವನ್ನು ಬರೆದುಕೊಡುವೆನು' ಎಂದರು."

"ಆಮೇಲೆ ನೀನು ನನ್ನ ಬಳಿ ಬಂದೆಯೋ ?"

"ಅಹುದು."

"ಈಗ ನಿನ್ನ ನಾದಿನಿಯೂ ಭದ್ರದತ್ತನೂ ಎಲ್ಲಿದ್ದಾರೆ ?"

"ಸ್ವಾಮಿಾ ! ಅದೊಂದು ದೊಡ್ಡ ಅನ್ಯಾಯ. ನಾನು ಊರಿನಲ್ಲಿಲ್ಲದಿದ್ದಾಗ ನನ್ನ ನಾದಿನಿಯು ತನಗೆ ಬೇಕಾದಷ್ಟು ಹಣವನ್ನು ಕೊಡಲಿಲ್ಲವೆಂದು ಭದ್ರದತ್ತನು ಅವಳ ಕೈ ಕಾಲುಗಳನ್ನು ಕಟ್ಟಿಹಾಕಿ ಮೈಮೇಲಿದ್ದ ಬಟ್ಟೆಗೆ ಎಣ್ಣೆಯನ್ನು ಸುರಿದು ಬೆಂಕಿಯನ್ನು ಹೊತ್ತಿಸಿ ಮನೆಗೆ ಬೀಗ ಹಾಕಿಕೊಂಡು ಓಡಿಹೋದನು."

"ಅನ್ಯಾಯ, ಅನ್ಯಾಯ ! ಈಗ ಅವನು ಎಲ್ಲಿದ್ದಾನೆ ?"

"ಆ ದುರಾತ್ಮನ ಮುಖವನ್ನು ನೋಡುವುದಕ್ಕೆ ಇಷ್ಟವಿಲ್ಲದೆ ನಾನು ಈಗವನೆಲ್ಲಿದ್ದಾನೆಂಬುದನ್ನೇ ವಿಚಾರಿಸಲಿಲ್ಲ. ಮಹಾಸ್ವಾಮಿಾ, ಇದೇ ನನ್ನ ಕಥೆ. ನಾನು ಈ ಸ್ಥಳಕ್ಕೆ ಬಾರದಿದ್ದುದಕ್ಕೆ ಕಾರಣವು ಈಗ ತಮಗೆ ಗೊತ್ತಾಯಿತಷ್ಟೆ?"

"ಅದು ಸರಿ, ನೀನು ಒಳಗೆ ನಡೆ. ನಾನು ಬರುತ್ತೇನೆ" ಎಂದು ಹೇಳಿ

ಭದ್ರಕನನ್ನು ಕಳುಹಿಸಿ, ಮಲಯಸಿಂಹನು ಸ್ವಲ್ಪ ಹೊತ್ತು ಅಲ್ಲಿಯೇ ಇದ್ದು ಆ ತೋಪನ್ನೆಲ್ಲಾ ಚೆನ್ನಾಗಿ ನೋಡಿಕೊಂಡು ಭದ್ರಕನೊಂದಿಗೆ ತನ್ನ ಮನೆಗೆ ಹೋದನು.

ಮನೆಗೆ ಹೋಗುತ್ತಲೇ ಮಲಯಸಿಂಹನು ವಾಮನಭಟ್ಟನನ್ನು ಕರೆದು "ಈಗ ಹನ್ನೊಂದು ಗಂಟೆಯ ಸಮಯ, ಕೋಮಲೆಯು ಬರುವ ಹೊತ್ತಾಯಿತು; ಅಮರದೇಶದ ದಾಸಿಗಳು ಸಿದ್ಧರಾಗಿದ್ದಾರೆಯೋ?" ಎಂದನು.

ಅದಕ್ಕವನು ಕೋಮಲೆಯಮ್ಮನವರಿಗಾಗಿ ಸಿದ್ಧವಾಗಿರುವ ಕೋಣೆಗಳನ್ನು ತೋರಿಸಿ, ಬಲಗೈಯ ಮೂರು ಬೆರಳುಗಳನ್ನು ನೀಡಿ ತನ್ನ ತಲೆಯ ಮೇಲಿಟ್ಟು ಕಣ್ಣುಗಳನ್ನು ಮುಚ್ಚಿಕೊಂಡು ನಿದ್ದೆಮಾಡುವನಂತೆ ತೋರಿಸಿದನು. ಅವನ ಸಂಜ್ಞೆಗಳನ್ನು ಮಲಯಸಿಂಹನು ಚೆನ್ನಾಗಿ ತಿಳಿದಿದ್ದುದರಿಂದ ಆ ಅಭಿಪ್ರಾಯವನ್ನು ಗ್ರಹಿಸಿ "ಅಮರದೇಶದ ಮೂವರು ದಾಸಿಗಳು ಕೋಮಲೆಯು ಮಲಗುವ ಮನೆಯಲ್ಲಿ ಸಿದ್ಧರಾಗಿರುವರೆಂದಲ್ಲವೇ ನೀನು ಹೇಳಿದುದು?" ಎನ್ನಲು ವಾಮನಭಟ್ಟನು ಅಹುದೆಂದು ತಲೆಯನ್ನು ಅಲುಗಿಸಿದನು.

"ಅಮರದೇಶದ ದಾಸಿಯರು ಯವನದೇಶದ ದಾಸಿಯರ ಸಂಗಡ ಯಾವಾಗಲೂ ಸೇರದಂತೆಯೂ ಮಾತುಕಥೆಗಳನ್ನಾಡದಂತೆಯೂ ಜೋಪಾನವಾಗಿ ನೋಡಿಕೋ" ಎಂದು ಮಲಯಸಿಂಹನು ಹೇಳಿ ಮುಗಿಸುವುದರಲ್ಲಿಯೇ, ಆವರಣದ ಹೆಬ್ಬಾಗಿಲು ತೆರೆಯಲ್ಪಟ್ಟು ಬಂಡಿಯೊಂದು ಝುರ್ರೆಂದು ಬಂದು ಮನೆಯ ಬಾಗಿಲಲ್ಲಿ ನಿಂತಿತು. ಕೂಡಲೇ ಮಲಯಸಿಂಹನು ಬಾಗಿಲಿಗೆ ಬಂದು ನಿಂತು ಬಂಡಿಯಲ್ಲಿದ್ದ ಯುವತಿಯ ಯೋಗಕ್ಷೇಮವನ್ನು ವಿಚಾರಿಸಿ, ಅವಳನ್ನು ಇಳಿಸಿಕೊಂಡು ಅವಳಿಗಾಗಿ ಅಣಿಯಾಗಿದ್ದ ಕೋಣೆಗೆ ಕರೆದುಕೊಂಡು ಹೋಗಿಬಿಟ್ಟು, ಆವಳಿಗೆ ಊಟ ಉಪಚಾರಗಳಾಗುವ ವರೆಗೂ ಅಲ್ಲಿಯೇ ಇದ್ದು, ಅವಳು ಮಲಗಿದ ಮೇಲೆ ತಾನೂ ತನ್ನ ಕೊಟ್ಟಡಿಗೆ ಹೋಗಿ ಮಲಗಿಕೊಂಡನು.

# ಮೂವತ್ತೆರಡನೆಯ ಅಧ್ಯಾಯ

## ಹುಂಡಿಯ ಬೆರಗು

ಮಾರನೆಯ ದಿನ ಮಧ್ಯಾಹ್ನ ಸುಮಾರು ಎರಡು ಗಂಟೆಯ ವೇಳೆಯಲ್ಲಿ ಶ್ಲಾಘ್ಯವಾದ ಎರಡು ಅರಬ್ಬಿಯ ಕುದುರೆಗಳನ್ನು ಹೂಡಿದ್ದ ಒಂದು ಬಂಡಿಯು ಮಲಯಸಿಂಹನ ಮನೆಯ ಮುಂದೆ ಬಂದು ನಿಂತಿತು. ಅದರಲ್ಲಿ ಸರಿಗೆಯ ಪಂಚೆಯನ್ನುಟ್ಟು ಕಿಂಕಾಪು ಅಂಗಿಯನ್ನು ತೊಟ್ಟು, ಪಟ್ಟೆಯ ರುಮಾಲನ್ನಿಟ್ಟು, ಸರಿಗೆಯ ವಲ್ಲಿಯನ್ನು ಹೊದೆದು ಆ ದೇಶದ ರಾಜನಿಂದ ಬಹುಮಾನವಾಗಿ ಪಡೆದಿದ್ದ ಕಂಠೀಸರವನ್ನೂ ಬಿರುದು ಬಿಲ್ಲೆಗಳನ್ನೂ ಎಲ್ಲರಿಗೂ ಕಾಣುವಂತೆ ಅಂಗಿಯ ಮೇಲೆ ಅಳವಡಿಸಿಕೊಂಡು ಒಬ್ಬ ದೊಡ್ಡ ಮನುಷ್ಯನು ಕುಳಿತಿದ್ದನು.

ಬಂಡಿಯು ನಿಲ್ಲುತ್ತಲೆ ಅದರ ಮೇಲಿದ್ದ ಆಳು ಥಟ್ಟನೆ ಕೆಳಗಿಳಿದು ಬಂಡಿಯ ಬಾಗಿಲನ್ನು ತೆರೆದು ನಿಂತನು. ಅವನನ್ನು ಕಂಡು ಯಜಮಾನನು "ಎಲಾ ಮಲಯಸಿಂಹರು ಮನೆಯಲ್ಲಿದ್ದರೆ ಈ ಚೀಟನ್ನು ಕೊಡು" ಎನ್ನುತ್ತಲೆ, ಆಳು ಹೆಬ್ಬಾಗಿಲನ್ನು ದಾಟಿ ಒಳಗಿದ್ದ ಕಾವಲುಗಾರನಿಗೆ ಆ ಚೀಟನ್ನು ಕೊಡಲು, "ಯಜಮಾನರು ಇಂದು ಯಾರನ್ನೂ ನೋಡಲಾರರು" ಎಂದನು.

ಆಳು ಅತ್ತ ಹೋಗುತ್ತಲೆ, ಬಂಡಿಯಲ್ಲಿ ಕುಳಿತಿದ್ದವನು ಹಾಗೆಯೇ ಕಿಟಕಿಯ ಹೊರಗೆ ತಲೆಯನ್ನು ಚಾಚಿ ಅರಮನೆಯನ್ನು ಹಳಿಯುವ ಮಲಯಸಿಂಹನ ಮನೆಯ ಅಂದವನ್ನೂ, ಅಲ್ಲಿಯ ಉದ್ಯಾನದ ಸೊಂಪನ್ನೂ, ಅದರ ಹೂಗಿಡಗಳ ಸೊಗಸನ್ನೂ, ಅಲ್ಲಿ ಓಡಾಡುತ್ತಲಿರುವ ಆಳುಗಳ ಉಡುಪುಗಳ ಆಡಂಬರವನ್ನೂ ನೋಡಿ ಬೆರಗಾದನು. ಕೆಲವರು ಇತರರ ಸಂಪತ್ತನ್ನು ನೋಡಿ, ನಮಗಿಲ್ಲದಿದ್ದರೂ ಚಿಂತೆಯಿಲ್ಲ, ದೇವರು ಅವರನ್ನಾದರೂ ಈ ರೀತಿ ಒಳ್ಳೆಯ ಸ್ಥಿತಿಯಲ್ಲಿ ಇಟ್ಟಿರುವನಲ್ಲ, ಅಷ್ಟೇ ಸಾಕು ಎಂದು ಸಂತೋಷಪಡುವರು; ಮತ್ತೆ ಕೆಲವರು ನಮಗಿಲ್ಲದ ಸಂಪತ್ತು ಅವರಿಗೆ ಇದೆಯಲ್ಲಾ ಎಂದು ಕರುಬುವರು; ಇನ್ನು ಕೆಲವರು ನಮ್ಮ ಸಂಪತ್ತಿನಂತೆ ಇವರಿಗೂ ಇದೆಯಲ್ಲ ಎಂದು ಹೊಟ್ಟೆಯುರಿಯಿಂದ ಬೇಯುವರು. ಬಂಡಿಯಲ್ಲಿ ಕುಳಿತಿದ್ದ ದೊಡ್ಡಮನುಷ್ಯನು ಈ ಪಂಗಡಕ್ಕೆ ಸೇರಿದವನು. ಅವನ ಮುಖದಲ್ಲಿ

ಕ್ರೌರ್ಯವೂ ಅಹಂಕಾರವೂ ಕೆಡಕು ಬುದ್ಧಿಯೂ ನೀಚತನವೂ ಕಾಣಿಸುತ್ತಲಿದ್ದುವು.

ಮಲಯಸಿಂಹನ ಊಳಿಗದವನು ಹೇಳಿದುದನ್ನು ಆಳು ಬಂದು ತಿಳಿಸಲು "ಸರಿ ಸರಿ, ನ್ಯಾಯವಿಧಾಯಕಸಭೆಗೆ ಹೋಗುತ್ತ ಹಾಗೆಯೇ ಇವರನ್ನು ನೋಡಿಕೊಂಡು ಹೋಗೋಣವೆಂದು ಈ ಹಾದಿಯಲ್ಲಿ ಬಂದಿದ್ದೇನೆಂದು ಮಲ ಸಿಂಹನಿಗೆ ತಿಳಿಸುವಂತೆ ಹೇಳಿ ಬಾ" ಎಂದು ಆಜ್ಞಾಪಿಸಲು, ಅದನ್ನು ಆಳು ಕಾವಲುಗಾರನಿಗೆ ಹೇಳಿದನು.

ಇವನು ಬರುವ ಸಮಾಚಾರವನ್ನು ಮೊದಲೇ ಬಲ್ಲ ಮಲಯಸಿಂಹನು ಕಿಟಕಿಯ ತೆರೆಯ ಮನೆಯಲ್ಲಿ ನಿಂತು ದೂರದರ್ಶಕ ಯಂತ್ರದಿಂದ ಬಂಡಿಯಲ್ಲಿದ್ದವನನ್ನು ನೋಡಿ "ಇವನ ಮುಖವನ್ನು ನೋಡಿದರೆ ಇವನ ದುರ್ಮಾರ್ಗತನವು ಯಾರಿಗಾದರೂ ಚೆನ್ನಾಗಿ ತಿಳಿಯಬರುವುದು. ಇವನನ್ನು ಜನರು ಏಕೆ ತ್ಯಜಿಸುವುದಿಲ್ಲ?" ಎಂದು ತನ್ನೊಳು ತಾನೇ ಆಡಿಕೊಂಡು, ಭದ್ರಕನನ್ನು ಕೂಗಿ "ಎಲೋ ಭದ್ರಕ, ಈ ಮನೆಯ ಮುಂದೆ ಈಗ ನಿಂತಿದ್ದ ಬಂಡಿಗೆ ಹೂಡಿದ್ದ ಕುದುರೆಗಳನ್ನು ನೋಡಿದೆಯಾ?" ಎನ್ನಲು,

"ಬುದ್ಧೀ, ನೋಡಿದೆ"

"ಅವು ಚೆನ್ನಾಗಿದ್ದುವೋ?"

"ಮಹಾಸ್ವಾಮಿ! ಅವು ಅತ್ಯುತ್ತಮವಾದ ಯವನಾಶ್ವಗಳು."

"ಈ ಪಟ್ಟಣದಲ್ಲಿ ದೊರೆಯತಕ್ಕ ಅತ್ಯುತ್ತಮವಾದ ಕುದುರೆಗಳನ್ನು ಕೊಂಡುಕೊಳ್ಳೆಂದು ಅಪ್ಪಣೆ ಮಾಡಿದ್ದರೂ ನೀನು ಏಕೆ ಆ ಕುದುರೆಗಳನ್ನು ತೆಗೆಯಲಿಲ್ಲ?"

"ಮಹಾಸ್ವಾಮಿ! ಕ್ಷಮಿಸಬೇಕು. ನಾನು ವಿಚಾರಿಸಿದಾಗ ಅವುಗಳನ್ನು ಮಾರುವುದಿಲ್ಲವೆಂದು ಹೇಳಿದರು."

"ಹಣ ಕೊಟ್ಟರೆ ಲೋಕದಲ್ಲಿ ಸಿಕ್ಕದಿಲ್ಲಿರುವ ಪದಾರ್ಥವೂ ಉಂಟೋ?"

"ಮಹಾಸ್ವಾಮಿ! ಈ ಜತೆಗೆ ಹದಿನಾರು ಸಾವಿರ ವರಹಗಳನ್ನು ಕೊಟ್ಟು ಶ್ರೀಮಂತ ದುರ್ಮತಿಗಳು ತೆಗೆದುಕೊಂಡರಂತೆ."

"ಆದರೇನು? ತಮಗೆ ಲಾಭ ಬರುವುದಾದರೆ ಧನಾಗಾರಪತಿಗಳು ಯಾವುದಾದನ್ನಾದರೂ ಮಾರಿಬಿಡುವರು. ಈದಿನ ಸಾಯಂಕಾಲ ಐದುಗಂಟೆಗೆ

ಸರಿಯಾಗಿ ಒಬ್ಬ ದೊಡ್ಡಮನುಷ್ಯನನ್ನು ನೋಡುವುದಕ್ಕೆ ಹೋಗಬೇಕು, ಅಷ್ಟರೊಳಗೆ ಆ ಕುದುರೆಗಳನ್ನು ಕೊಂಡು ನನ್ನ ಬಂಡಿಗೆ ಹೂಡಿಸಿರಬೇಕು, ಕಂಡೆಯಾ; ಜೋಕೆ" ಎಂದು ಹೇಳಿ ಅವನನ್ನು ಕಳುಹಿಸಿ, ವಾಮನಭಟ್ಟನನ್ನು ಕೂಗಿ

''ಎಲಾ ! ನಮ್ಮ ಲಾಯದಲ್ಲಿರುವ ಕುದುರೆಗಳೆಲ್ಲವನ್ನೂ ಕೋಮಲೆಗೆ ಕಾಣುವಂತೆ ಕಿಟಕಿಯ ಬಳಿ ನಿಲ್ಲಿಸಿ, ಅವಳು ಒಪ್ಪುವ ಎರಡು ಕುದುರೆಗಳನ್ನು ಅವಳ ಬಂಡಿಗೆ ಪ್ರತ್ಯೇಕವಾಗಿರಿಸು ; ಭೈರವನನ್ನು ಬರಹೇಳು'' ಎಂದನು.

ಸ್ವಲ್ಪ ಹೊತ್ತಿನಮೇಲೆ ಭೈರವನು ಬಂದು ಇದಿರಿಗೆ ನಿಂತನು.

"ಭೈರವ! ನೀನು ನನ್ನಲ್ಲಿ ಸೇರಿ ಒಂದು ವರ್ಷವಾಯಿತು, ಇಷ್ಟರೊಳಗಾಗಿ ನಿನಗೂ ನನಗೂ ಸರಿಹೋಗುವುದೂ ಇಲ್ಲದುದೂ ಗೊತ್ತಾಗಿರಬೇಕು. ನಾನೇನೋ ನಿನ್ನ ಕೆಲಸವನ್ನು ಒಪ್ಪಿದೆ; ನನ್ನ ಬಳಿಇರುವುದು ನಿನಗೆ ಸರಿಹೋಗುವುದೋ ಇಲ್ಲವೋ ಹೇಳು. ಅದನ್ನು ನಿನ್ನ ಬಾಯಿಂದಲೇ ತಿಳಿಯಬೇಕಾಗಿದೆ."

''ಮಹಾಸ್ವಾಮಿ! ನನಗೆ ತಮ್ಮಂಥಾವರು——''

''ನಾನು ಹೇಳುವುದನ್ನೆಲ್ಲಾ ಪೂರ್ತಿಯಾಗಿ ಕೇಳು; ಆಮೇಲೆ ಹೇಳತಕ್ಕುದು ಏನಾದರೂ ಇದ್ದರೆ ಹೇಳು. ಯಾವ ಕೆಲಸವೂ ಇಲ್ಲದೆ ಸುಮ್ಮನೆ ಕಯ್ಯಾಳಾಗಿರುವುದಕ್ಕೇ ನಿನಗೆ ತಿಂಗಳು ಒಂದಕ್ಕೆ ನೂರಇಪ್ಪತ್ತೈದು ವರಹಗಳ ಸಂಬಳ ಕೊಡುತ್ತಲಿದ್ದೇನೆ. ನೀನೇ ಆಳು, ಆದರೆ ನಿನ್ನಬಳಿ ಕೆಲಸ ಮಾಡಲು ಬೇರೆ ಆಳುಗಳಿದ್ದಾರೆ. ಇದಲ್ಲದೆ ಸಂಸಾರವೆಚ್ಚಕ್ಕಾಗಿ ಕೊಡುವ ಹಣದಲ್ಲಿ ಕೂಡ ನಿನಗೆ ಮಿಗುತ್ತದೆ.''

''ಮಹಾಸ್ವಾಮಿ! ನಾನು ಆ ರೀತಿ........''

''ಸುಮ್ಮನೆ ಕೇಳು. ನೀನು ಹಾಗೆ ಮಾಡುವುದು ತಪ್ಪು ಎಂದು ನಾನು ಆಕ್ಷೇಪಿಸುವುದಿಲ್ಲ ಇಷ್ಟರಲ್ಲಿಯೇ ತೃಪ್ತಿಪಡು; ಬೇರೆ ಸಂಪಾದನೆಯ ಯೋಚನೆಮಾಡಬೇಡ. ಇಷ್ಟು ಅನುಕೂಲವಾಗಿಯೂ ಲಾಭಕರವಾಗಿಯೂ ಇರುವ ಚಾಕರಿಯು ನಿನಗೆ ಎಂದಿಗೂ ಖಂಡಿತವಾಗಿ ಬೇರೊಂದು ಕಡೆ ದೊರೆಯಲಾರದು. ಆದರೂ ಜನರು ಹಣಕೊಡುತ್ತೇವೆಂದು ಆಶೆ ತೋರಿಸಿ ನನ್ನ ವರ್ತಮಾನವನ್ನೇ ಆಗಲಿ, ಮನೆಯ ವಿಚಾರವನ್ನೇ ಆಗಲಿ, ಕೇಳುವರು;

ಈ ವಿಚಾರಗಳು ಈಷದಪಿ ಹೊರಗೆ ಬಂದುದೇ ಆದರೆ ಒಡನೆಯೇ ನಿನ್ನನ್ನು ಕೆಲಸದಿಂದ ನಿವೃತ್ತಿಮಾಡುವೆನು. ನನಗೆ ಬೇಕಾದಷ್ಟು ಹಣವಿರುವುದರಿಂದ ಎಲ್ಲಿ ಯಾವ ಸಮಾಚಾರ ನಡೆದರೂ ಕ್ಷಣದಲ್ಲಿ ಅದನ್ನು ತಿಳಿದುಕೊಳ್ಳುವ ಅನುಕೂಲವುಂಟು. ಇದಲ್ಲದೆ ನನ್ನ ಮನಮೆಚ್ಚುವಂತೆ ಉದ್ಯೋಗಮಾಡುವವರಿಗೆ ಸಂಬಳಕೊಡುವುದು ಮಾತ್ರವಲ್ಲದೆ ವರ್ಷಂಪ್ರತಿಯೂ ಬಹುಮಾನವಾಗಿ ಅಷ್ಟು ಹಣವನ್ನು ಪ್ರತ್ಯೇಕ ತೆಗೆದಿಟ್ಟು ಅವನ್ನು ನನ್ನ ಕಾಲಾನಂತರ ಅವರು ಕಷ್ಟಪಡದಂತೆ ಜೀವನಮಾಡಿಕೊಳ್ಳುವ ಸಲುವಾಗಿ ಅವರಿಗೆ ಹಂಚಿಕೊಡುವಂತೆ ಏರ್ಪಾಡು ಮಾಡಿದ್ದೇನೆ. ಅಂತಹ ಬಹುಮಾನವು ನಿವೃತ್ತರಾದ ಸೇವಕರಿಗೆ ಸಿಕ್ಕದು; ತಿಳಿಯಿತೋ! ನಡೆ.''

'ಐದುಗಂಟೆಯಾಗುವುದಕ್ಕೆ ಮೊದಲೇ ಮಲಯಸಿಂಹನ ಬಳಿಗೆ ಭದ್ರಕನು ಬಂದು

''ಮಹಾಸ್ವಾಮಿ! ಬಂಡಿಯು ಕಟ್ಟಿ ಸಿದ್ಧವಾಗಿದೆ; ತಮ್ಮ ಸಂಗಡ ನಾನೂ ಬರಬೇಕೋ?''

"ನೀನು ಬರಬೇಕಾದುದಿಲ್ಲ; ವಾಮನಭಟ್ಟನು ಬಂಡಿಯನ್ನು ಹೊಡೆಯಲಿ, ಸಂಗಡ ಭೈರವನು ಬರಲಿ''ಎಂದು ಹೇಳಿ ಮಲಯಸಿಂಹನು ಹೊರಗೆ ಬಂದು ಬಂಡಿಯ ಸಮೀಪದಲ್ಲಿ ನಿಂತು, ಹೂಡಿದ್ದ ಕುದುರೆಗಳನ್ನು ನೋಡಿ "ಉತ್ಕೃಷ್ಟವಾದುವು, ಇವುಗಳನ್ನು ಕೊಂಡುಕೊಂಡುದು ಒಳ್ಳೆಯದಾಯಿತು'' ಎಂದು ಭದ್ರಕನನ್ನು ನೋಡಿ ಹೇಳಲು, ಆವನು "ಮಹಾಸ್ವಾಮಿ, ಅವರು ಈ ಕುದುರೆಗಳನ್ನು ಕೊಡರು, ನಾನು ಬಿಡೆನು; ಈರೀತಿ ಹಣಗಾಟದಲ್ಲಿ ಬೆಲೆಯು ಒಂದಕ್ಕೆರಡಾಯಿತು'' ಎಂದನು.

''ಹೆಚ್ಚು ಕೊಟ್ಟುದರಿಂದ ಕುದುರೆಯ ಶ್ಲಾಘ್ಯತೆಗೆ ಏನಾದರೂ ಕೊರತೆಯೇ?''

ಎಂದುಹೇಳಿ ಮಲಯಸಿಂಹನು ಬಂಡಿಯನ್ನು ಹತ್ತಲು ವಾಮನಭಟ್ಟನು

''ಮಹಾಸ್ವಾಮಿ! ಎಲ್ಲಿಗೆ ಹೊಡೆಯಲಿ?''

''ಸ್ವಲ್ಪ ತಾಳು," ಎಂದು ಭದ್ರಕನನ್ನು ಹತ್ತಿರ ಕರೆದು,

''ಈದೇಶದ ಸಮುದ್ರತೀರದಲ್ಲಿ ಅನೇಕ ಸರ್ವಮಾನ್ಯಗ್ರಾಮಗಳು ಇದೆಯೆಂದು ಕೇಳಿದ್ದೇನೆ; ಅವುಗಳಲ್ಲಿ ವಿಸ್ತಾರವಾಗಿಯೂ ಹಡಗುಗಳು ನಿಲ್ಲಲು

ಅನುಕೂಲವಾಗಿರುವ ಕೊಲ್ಲಿಗಳುಳ್ಳದಾಗಿಯೂ ಇಲ್ಲಿಗೆ ಸಮೀಪವಾಗಿಯೂ ಇರುವ ಒಂದು ದೊಡ್ಡಗ್ರಾಮವನ್ನು ಕ್ರಯಕ್ಕೆ ಕೊಂಡು, ಅಲ್ಲಿಂದ ಇಲ್ಲಿಗೆ ಒಂದೊಂದು ಹರದಾರಿಗೆ ಒಂದೊಂದು ಜತೆಯ ಟಪಾಲು ಕುದುರೆಗಳನ್ನು ಏರ್ಪಾಡುಮಾಡಬೇಕು. ಇದಕ್ಕಾಗಿ ಎಲ್ಲವನ್ನು ಸಿದ್ಧಪಡಿಸು. ಹಣದ ವಿಷಯದಲ್ಲಿ ಸ್ವಲ್ಪವೂ ಯೋಚಿಸಬೇಡ; ಆದಷ್ಟು ವೆಚ್ಚವಾಗಲಿ."

"ಮಹಾಸ್ವಾಮಿ, ಅಪ್ಪಣೆ."

ಎಂದು ಭದ್ರಕನು ಹೊರಟನು. ಮಲಯಸಿಂಹನು "ವಾಮನಭಟ್ಟ, ದುರ್ಮತಿಯ ಮನೆಗೆ ಹೊಡೆ ಎಂದನು."

ಮಲಯಸಿಂಹನ ಬಂಡಿಯು ದುರ್ಮತಿಯ ಮನೆಯಮುಂದೆ ನಿಂತಿತು. ಕಾವಲುಗಾರನು ಅದನ್ನು ತನ್ನ ಯಜಮಾನನಿಗೆ ತಿಳಿಸಲು, "ಕೊಟ್ಟಡಿಗೆ ಕರೆದುಕೊಂಡು ಹೋಗು, ನಾನು ಕೂಡಲೆ ಬರುವೆನು" ಎಂದು ಅಪ್ಪಣೆಮಾಡಿದನು. ದುರ್ಮತಿಯು ಬರುವುದು ಸ್ವಲ್ಪ ಸಾವಕಾಶವಾಯಿತು; ಅಷ್ಟರಲ್ಲಿಯೇ ಮಲಯಸಿಂಹನು ಆ ಕೊಟ್ಟಡಿಯಲ್ಲಿ ಕಟ್ಟಿದ್ದ ಪಟಗಳನ್ನೂ ಇತರ ಅಲಂಕಾರಗಳನ್ನೂ ನೋಡಿ ಇವನಬುದ್ಧಿಗೆ ತಕ್ಕಂತೆ ಈಕೊಟ್ಟಡಿಯ ರಚನೆಯೂ ಇದೆ ಎಂದುಕೊಂದು, ಅಷ್ಟರಲ್ಲಿಯೇ ದುರ್ಮತಿಯು ಬರಲು ವಂದನೆ ಪ್ರತಿವಂದನೆಗಳು ನಡೆದು ಇಬ್ಬರೂ ಆಸನಗಳಲ್ಲಿ ಕುಳಿತರು.

"ಮಲಯಸಿಂಹರು ತಾವೆಯೋ?

ಎಂದು ದುರ್ಮತಿಯು ಕೇಳಲು, ಮಲಯಸಿಂಹನು ಅಹುದೆಂದು ತಲೆಯನ್ನಲುಗಿಸಿ,

"ತಾವು ಮಹಾರಾಜರವರಿಂದ ಅನೇಕ ಬಹುಮಾನಗಳನ್ನು ಪಡೆದು ವಿಶೇಷ ಪ್ರಖ್ಯಾತಿಯನ್ನು ಪಡೆದ ಶ್ರೀಮಂತ ಧನಾಗಾರಪತಿ ದುರ್ಮತಿಗಳಲ್ಲವೇ?"

ಎಂದು ದುರ್ಮತಿಯು ತನಗೆ ಕೊಟ್ಟುಕಳುಹಿದ್ದ ಚೀಟಿಯಲ್ಲಿ ಬರೆದಿದುದನ್ನೆಲ್ಲಾ ಸ್ವಲ್ಪವೂ ಬಿಡದೆ ಹೇಳಿ ಮೂದಲಿಸಿದನು. ದುರ್ಮತಿಯು ಮಲಯಸಿಂಹನ ಉಪಾಯವನ್ನರಿತು ಅಸಮಾಧಾನದಿಂದ ಓಡನ್ನು ಕಚ್ಚಿಕೊಂಡನು.

"ನಾನು ನಿಮ್ಮನ್ನು ರಾಜಾಮಲಯಸಿಂಹರೆಂದು ಕರೆಯದೆ ಹೋದೆನು, ಕ್ಷಮಿಸಬೇಕು. ಇಂತಹ ಒಣ ಮರ್ಯಾದೆಗಳಲ್ಲಿ ನನಗೇನೂ ಮಮತೆಯಿಲ್ಲ.

ನಾನು ಶ್ರೀಮನ್ಮಹಾರಾಜರಿಗೆ ಸಮಯದಲ್ಲಿ ಸ್ವಲ್ಪ ಉಪಕಾರ ಮಾಡಿದ್ದೆನು; ಅದಕ್ಕಾಗಿ ಅವರು ಅಪ್ರಾರ್ಥಿತವಾದ ಈ ಬಿರುದುಗಳನ್ನು ನನಗೆ ಕೊಟ್ಟರು".

‘‘ತಮಗೆ ಆ ಮರ್ಯಾದಾಶಬ್ದಗಳಲ್ಲಿ ಮಮತೆಯಿಲ್ಲವೆಂಬುದು ತಾವು ಕೊಟ್ಟ ಚೀಟಿಂದಲೇ ವ್ಯಕ್ತವಾಗುತ್ತದೆ."

‘‘ಕೆಲವು ವೇಳೆ ಅದೂ ಬೇಕಾಗುತ್ತದೆ. ಒಂದು ವೇಳೆ ನಮ್ಮ ಸೇವಕರಲ್ಲಿ—".

‘‘ಓಹೋ! ಈಗ ತಮ್ಮ ಅಭಿಪ್ರಾಯವು ನನಗೆ ಗೊತ್ತಾಯಿತು; ತಮ್ಮ ಸೇವಕರಿಗೆ ತಾವು ಶ್ರೀಮಂತರು; ತಮ್ಮ ಬಳಿಗೆ ಸಾಲ ತೆಗೆಯಲು ಬರುವವರಿಗೆ ತಾವು ಧನಾಗಾರಪತಿಗಳು; ಶ್ರೀಮನ್ಮಹಾರಾಜರಿಗೆ ತಾವು ಬಿರುದಾಂಕಿತರು; ಇತರರಿಗೆ ತಾವು ಬರಿಯ ಹುರುಳಿಲ್ಲದ ದುರ್ಮತಿಗಳು; ಇದಲ್ಲವೇ ತಮ್ಮಭಿಪ್ರಾಯ"

ಎನ್ನುತ್ತಲೆ ದುರ್ಮತಿಯು ಪುನಃ ಒಸಡನ್ನು ಕಚ್ಚಿ ಇವನ ಸಂಗಡ ಮಾತನಾಡಿ ಜಯಿಸಲು ತನ್ನಿಂದ ಸಾಗದೆಂದು ತಿಳಿದು ಬೇರೆ ಮಾತನ್ನೆತ್ತಿದನು.

‘‘ರಾಜರೇ! ತಮಗೆ ಅಮಿತವಾದ ಹಣ ಕೊಡುವಂತೆ ಧನಾಗಾರ ಪತಿ ನಂದಕುಮಾರರು ಹುಂಡಿಯನ್ನು ಕಳುಹಿಸಿದ್ದಾರೆ. ಅದರ ಅಭಿಪ್ರಾಯವು ನನಗೆ ಚೆನ್ನಾಗಿ ಗೊತ್ತಾಗಲಿಲ್ಲ.

"ಶ್ರೀಮಂತರೇ (ತಮ್ಮ ಸೇವಕರಂತೆ ನಾನೂ ತಮ್ಮನ್ನು ಶ್ರೀಮಂತರೆಂದು ಕರೆಯಲು ಅಪ್ಪಣೆಯಾಗಬೇಕು), ಆ ಹುಂಡಿಯಲ್ಲಿ ತಮಗೆ ಗೊತ್ತಾಗದೆ ಇರುವ ಅಂಶವನ್ನು ದಯೆಮಾಡಿ ತಿಳಿಸಿದರೆ ನನ್ನಿಂದ ಸಾಧ್ಯವಾದ ಮಟ್ಟಿಗೂ ಸ್ಪಷ್ಟಪಡಿಸುವೆನು."

‘‘ಅದರಲ್ಲಿ ‘ಅಮಿತವಾದ’ ಎನ್ನುವ ಪದಕ್ಕೆ ಅರ್ಥವಾಗಲಿಲ್ಲ."

‘‘ ‘ಅಮಿತವಾದ’ ಎಂದರೆ ಕೇಳಿದಷ್ಟು ಎಂದು ಅರ್ಥ; ತಮ್ಮಲ್ಲಿ ಈ ಪದವೇ ರೂಢಿಯಲ್ಲಿಲ್ಲವೋ?"

‘‘ರೂಢಿಯಲ್ಲಿದ್ದರೂ ಅದು ಅನುಮಾನಕ್ಕೆ ಕಾರಣ".

‘‘ಓಹೋ! ನಂದಕುಮಾರರಲ್ಲಿ ತಮಗೆ ಅನುಮಾನಕ್ಕೆ ಕಾರಣವೇ? ನನ್ನ ,ಆಸ್ತಿಯನ್ನೆಲ್ಲಾ ಅವರ ವಶಮಾಡಿ ಬಂದಿರುತ್ತೇನೆಯಾಗಿ ಅವರ

ವಿಷಯದಲ್ಲಿ ತಮಗೆ ಅನುಮಾನಕ್ಕೆ ಕಾರಣವಿದ್ದರೆ ನಾನು ಮುಳುಗಿಯೇ ಹೋಗುತ್ತೇನೆ".

"ಅವರಲ್ಲಿ ಅನುಮಾನವೇನೂ ಇಲ್ಲ. ಆದರೂ ಹಣದ ವಿಷಯದಲ್ಲಿ ಈ ರೀತಿ ಹುಂಡಿಯನ್ನು ಬರೆಯುವುದು ಅಪೂರ್ವ."

"ಅವರು ನಿಮ್ಮನ್ನು ಸಾಧಾರಣ ಧನಾಗಾರಪತಿಗಳೆಂದು ತಿಳಿದಿರಲಿಲ್ಲ; ನೀವು ಹೇಳುವುದನ್ನು ನೋಡಿದರೆ ನಿಮ್ಮ ವಿಷಯದಲ್ಲಿ ಅವರಿಗಿದ್ದ ಅಭಿಪ್ರಾಯವು ತಪ್ಪೆಂದೂ ಈ ಹುಂಡಿಯು ತಮ್ಮ ಯೋಗ್ಯತೆಗೆ ಮೀರಿದುದೆಂತಲೂ ತೋರುತ್ತಲಿದೆ".

"ಇದುವರೆಗೆ ನನ್ನ ಯೋಗ್ಯತೆಯು ಇಷ್ಟೇ ಎಂದು ಮಿತಿಮಾಡಿ ಹೇಳಿದವರಾರೂ ಇಲ್ಲ".

"ಹಾಗೆ ಹೇಳುವ ಭಾರವನ್ನು ನನಗಾಗಿಯೇ ಎಲ್ಲರೂ ಬಿಟ್ಟದ್ದಂತೆ ತೋರುತ್ತದೆ".

"ಅದು ಹೇಗೆ?"

"ತಾವು ದೊಡ್ಡ ಧನಾಗಾರಪತಿಗಳೆಂತಲೂ, ರಾಜಾಧಿರಾಜರುಗಳಿಗೆಲ್ಲಾ ಸಾಲಗಳನ್ನು ಕೊಡುತ್ತಿದ್ದೀರೆಂತಲೂ ಕೇಳಿ ತಮಗೆ ಹುಂಡಿಯನ್ನು ಬರೆಯುವಂತೆ ನಂದಕುಮಾರರಿಗೆ ಹೇಳಿ ಬಂದಿದ್ದೆನು. ತಮಗೆ ಅನುಮಾನವಿದ್ದರೂ ಸರಿಯೆ, ತಮ್ಮ ಯೋಗ್ಯತೆಗೆ ಮೀರಿದ್ದರೂ ಸರಿಯೆ, ತಿಳಿಸೋಣವಾಗಲಿ; ನಾನು ಬೇರೆ ಕಡೆ ಹಣಕ್ಕೆ ಏರ್ಪಾಡು ಮಾಡಿಕೊಳ್ಳುವೆನು. ಸಂದರ್ಭ ಹೇಗೆ ಆಗುವುದೋ ಎಂದು ಇದರಂತೆಯೇ ಇನ್ನಿಬ್ಬರು ಧನಾಗಾರಪತಿಗಳಿಗೂ ಎರಡು ಹುಂಡಿಗಳನ್ನು ತಂದಿದ್ದೇನೆ"

ಎಂದು ಮಲಯಸಿಂಹನು ಅಂಗಿಯ ಜೇಬಿನಿಂದ ಎರಡು ಕಾಗದಗಳನ್ನು ತೆಗೆದು ದುರ್ಮತಿಗೆ ತೋರಿಸಿದನು. ದುರ್ಮತಿಯು ಅವುಗಳನ್ನು ಓದಿ, ಇವು ನಿಜವಾದ ಹುಂಡಿಗಳೋ ಅಲ್ಲವೋ ಎಂದು ಯೋಚಿಸಿ ಹುಂಡಿಗಳನ್ನು ಪರೀಕ್ಷಿಸಿ ನೋಡಿ ನಿಜವಾದುದೆಂದು ತಿಳಿದು ಆಶ್ಚರ್ಯಪಟ್ಟು, ಇಷ್ಟು ಹಣವುಳ್ಳ ರಾಜನನ್ನು ಇತರರ ಬಳಿಗೆ ಕಳುಹಿಸಿದರೆ ಗೌರವಕ್ಕೆ ನ್ಯೂನತೆಯುಂಟಾಗುವುದಲ್ಲದೆ, ಒಂದು ವೇಳೆ ಏನಾದರೂ ಪ್ರಯೋಜನವುಂಟಾಗುವುದಾಗಿದ್ದರೆ ಅದೂ ತಪ್ಪಿ ಹೋಗುವುದು ಎಂದು ಯೋಚಿಸಿ,

"ರಾಜರೇ! ಈ ಹುಂಡಿಯನ್ನು ನಾನು ಒಪ್ಪಿದೆನು; ನಿಮಗೆ ಹತ್ತು ಲಕ್ಷ ವರಹಗಳು ಬೇಕಾಗಿದ್ದರೂ ನಿಮಿಷದಲ್ಲಿ ಕೊಡುವೆನು"

"ಉಶ್! ಹತ್ತು ಲಕ್ಷ ವರಹಗಳೇ! ಯಾವ ಮೂಲೆಗೆ ಸಾಕು? ಸಾಧಾರಣವಾಗಿ ಅಷ್ಟು ಹಣವನ್ನು ನಾನು ಯಾವಾಗಲೂ ನನ್ನ ಜೇಬಿನಲ್ಲೇ ಇಟ್ಟುಕೊಂಡಿರುವೆನು; ಇಗೋ ಪರಾಂಬರಿಸೋಣವಾಗಲಿ"

ಎಂದು ತಾನು ಅಮರಪುರದ ಖಜಾನೆಯ ಮೇಲೆ ತಂದಿದ್ದ ಐದು ಲಕ್ಷ ವರಹಗಳ ಎರಡು ಹುಂಡಿಗಳನ್ನು ದುರ್ಮತಿಯ ಮುಂದೆ ಬಿಸುಟನು. ದುರ್ಮತಿಯು ಅವುಗಳನ್ನೂ ಪರೀಕ್ಷಿಸಿ ಬಿರಬಿರನೆ ಕಣ್ಣು ಬಿಟ್ಟು ನೋಡಿ

"ಅಯ್ಯಾ ರಾಜರೇ, ನಾನು ಇದುವರೆಗೆ ಅನುಮಾನಪಟ್ಟುದಕ್ಕಾಗಿ ಕ್ಷಮಿಸಿ; ಇನ್ನು ನನಗೆ ಯಾವ ಅನುಮಾನವೂ ಇಲ್ಲ"

"ಕೊಂಕಿನ ದೇವರಿಗೆ ಕೊಡತಿ ಮದ್ದು ಎಂಬಂತೆ ಈ ರೀತಿ ಮಾಡದಿದ್ದರೆ ಇವನು ದಾರಿಗೆ ಬರುತ್ತಿದ್ದನೇ?" ಎಂದು ಮಲಯಸಿಂಹನು ಮನದಲ್ಲಿ ಯೋಚಿಸಿ, ಆನಂದಗೊಂಡು,

"ಹಾಗಾದರೆ ಈ ವರ್ಷ ನನ್ನ ವೆಚ್ಚಕ್ಕೆ ಸುಮಾರು ಅರುವತ್ತು ಲಕ್ಷ ವರಹಗಳು ಬೇಕಾದೀತು"

"ಅರುವತ್ತು ಲಕ್ಷವೇ?"

"ಇನ್ನೂ ಬೇಕಾದರೆ ಸಕಾಲದಲ್ಲಿ ತಿಳಿಸುವೆನು. ತಾವು ದಯವಿಟ್ಟು ನಾಳೆಯೇ ಐದು ಲಕ್ಷ ವರಹಗಳನ್ನು ನನ್ನ ಮನೆಗೆ ಕಳುಹಿಸಿಕೊಡಬೇಕು."

"ಅವಶ್ಯಕವಾಗಿ ಆಗಲಿ ಸ್ವಾಮಿ, ಈ ಭರತಖಂಡದಲ್ಲಿರುವ ಎಲ್ಲಾ ಶ್ರೀಮಂತರ, ಎಲ್ಲಾ ರಾಜರ, ಆಸ್ತಿಯೂ ಇಷ್ಟೇ ಎಂದು ನನಗೆ ಗೊತ್ತು; ಆದರೆ ನಿಮ್ಮ ಆಸ್ತಿಯ ಪರಿಮಿತಿಯನ್ನು ಅರಿತಿಲ್ಲ."

"ತಾವು ನನ್ನ ಆಸ್ತಿಯನ್ನು ತಿಳಿಯದಿರುವುದಕ್ಕೆ ಕಾರಣವುಂಟು! ನಮ್ಮ ಪೂರ್ವಿಕರೊಬ್ಬರು ಬಲು ಹಣಗಾರರು; ಅವರ ದೇಶದ ರಾಜನು ಆ ಹಣವನ್ನೆಲ್ಲಾ ಸುಲಿದುಕೊಳ್ಳಬೇಕೆಂದು ಪ್ರಯತ್ನಪಟ್ಟನು. ಆಗ ಅವರು ಅನ್ಯದೇಶದಲ್ಲಿ ನಂಬುಗೆಯಾಗಿದ್ದ ಒಬ್ಬ ಧನಗಾರಪತಿಯಲ್ಲಿ ಆ ಹಣವನ್ನಿಟ್ಟು ಕಾಲವಾದರು. ಅದು ಬಹುಕಾಲದವರೆಗೆ ಆ ವಂಶದವರಿಗೂ ತಿಳಿಯದೆ ಬಡ್ಡಿಗೆ ಬಡ್ಡಿ ಸೇರಿ ಬೆಳೆಯಿತು. ಹೋದ ವರ್ಷ ನನಗೆ ಆ ಸಮಾಚಾರವು

ಗೊತ್ತಾಗಿ ಆ ಧನಗಾರಪತಿಯನ್ನು ಕೇಳಲು ಅವನು ಆ ಹಣವನ್ನು ನನ್ನ ವಶಮಾಡಿದನು. ,ಇನ್ನು ಮುಂದೆ ನನ್ನ ಸಮಾಚಾರವೆಲ್ಲವೂ ತಮಗೆ ಚೆನ್ನಾಗಿ ವೇದ್ಯವಾಗುವುದು ”

ಎಂದು ಹೇಳಿ ದುರ್ಮತಿಯ ಮುಖವನ್ನು ನೋಡಿ ನಸುನಕ್ಕು ಮನೆಗೆ ಹೊರಡುವ ಪ್ರಯತ್ನಮಾಡಿದನು.

“ ರಾಜರೇ! ನಿಮಗೆ ಇಷ್ಟವಾಗಿದ್ದರೆ ನನ್ನ ಪತ್ನಿ ಭಾಮಿನೀ, ಪುತ್ರಿ ವಿಲಾಸಿನೀ ಇವರಿಗೆ ತಮ್ಮ ಆಗಮನವನ್ನು ತಿಳುಹಿಸುವೆನು ”

“ ಅಗತ್ಯವಾಗಿ ಆಗಬಹುದು ”

---

# ಮೂವತ್ತಮೂರನೆಯ ಅಧ್ಯಾಯ

## ಅರಬ್ಬಿಯ ಕುದರೆಗಳು

ರಾಜಾಮಲಯಸಿಂಹನ ಆಗಮನವನ್ನು ಭಾಮಿನಿಗೆ ತಿಳುಹಿಸೆಂದು ದುರ್ಮತಿಯು ಕಳುಹಿಸಿದ ಆಳು ಒಳಗೆ ಬಂದಾಗ, ಅವಳೂ ದಮನಕನೂ ಏಕಾಂತದಲ್ಲಿದ್ದರು. ದಮನಕನಿಗೆ ಭಾಮಿನಿಯಲ್ಲಿ ಅತಿ ಪ್ರೀತಿ; ಅವಳೂ ಅವನನ್ನು ಗಂಡನಿಗಿಂತ ಹೆಚ್ಚಾಗಿ ಕಾಣುತ್ತಿದ್ದಳು. ಈ ಮರ್ಮವು ದುರ್ಮತಿಗೆ ಗೊತ್ತಿದ್ದರೂ ತನಗೆ ಅದು ಪ್ರಯೋಜನಕರವಾಗಿದ್ದುದರಿಂದ ಅವನು ಅದರ ವಿಷಯವಾಗಿ ಯಾವ ತೊಂದರೆಯನ್ನೂ ಹಚ್ಚಿಕೊಳ್ಳುತ್ತಿರಲಿಲ್ಲ. ದುರ್ಮತಿಯೂ ರಾಜಾಮಲಯಸಿಂಹನೂ ಬರುವರೆಂದು ಆಳು ತಿಳಿಸಿದ ಕೂಡಲೆ ಭಾಮಿನಿಯು ತಟ್ಟನೆ ಎದ್ದು ಒಂದು ಶಾಲನ್ನು ಹೊದ್ದುಕೊಂಡು, ಕೈಯಲ್ಲಿ ವೀಣೆಯನ್ನು ಹಿಡಿದು ಪ್ರತ್ಯೇಕವಾದ ಪೀಠದ ಮೇಲೆ ಕುಳಿತಳು. ಅವಳ ಮುಂದೆ ಸ್ವಲ್ಪ ದೂರದಲ್ಲಿದ್ದ ಒಂದು ಸಣ್ಣ ಕಾಲುಮಣೆಯ ಮುಂದೆ ನಿಂತು, ದಮನಕನು ಅಲ್ಲಿದ್ದ ಒಂದು ಪುಸ್ತಕವನ್ನು ಬಿಚ್ಚಿ ಹಾಳೆಗಳನ್ನು ಒಂದೊಂದಾಗಿ ತಿರಿವಿ ಹಾಕುತ್ತಲಿದ್ದನು; ಮಲಯಸಿಂಹನು ಒಳಗೆ ಬರುವುದರೊಳಗಾಗಿಯೇ ಅವನ ವಿಷಯವಾಗಿ ತನಗೆ ತಿಳಿದಿದ್ದುದನ್ನೆಲ್ಲಾ

ದಮನಕನು ಭಾಮಿನಿಯೊಡನೆ ಹೇಳಿದನು. ಅವನ ವಿಷಯವನ್ನು ಅವಳು ಉದಯಸಿಂಹನಿಂದಲೂ ಸ್ವಲ್ಪ ಕೇಳಿ ತಿಳಿದಿದ್ದಳು.

ದುರ್ಮತಿಯು ಮಲಯಸಿಂಹನನ್ನು ಮರ್ಯಾದೆಯೊಡನೆ ತನ್ನ ಹೆಂಡತಿಯ ಬಳಿಗೆ ಕರೆತಂದು "ಇವರೇ ರಾಜಾಮಲಯಸಿಂಹರು. ಒಂದು ವಿಷಯವನ್ನು ನಿಮಗೆ ತಿಳಿಸಿದರೆ ಇವರ ಮಿಕ್ಕ ಎಲ್ಲಾ ವಿಷಯಗಳೂ ನಿಮಗೆ ಗೊತ್ತಾದ ಹಾಗೆಯೇ ಆಗುವುದು. ಇವರು ಇಲ್ಲಿ ವಾಸಮಾಡಬೇಕೆಂದಿರುವ ಒಂದು ವರ್ಷದಲ್ಲಿ ಅರವತ್ತು ಲಕ್ಷ ವರಹಗಳನ್ನು ವೆಚ್ಚಮಾಡಬೇಕೆಂದಿದ್ದಾರೆ'' ಎಂದನು. ದುರ್ಮತಿಯ ಅಪ್ರಸಕ್ತವಾದ ಈ ಮಾತನ್ನು ಕೇಳಿ ಮಲಯ ಸಿಂಹನಿಗೆ ಬಹು ಅಸಹ್ಯವಾಯಿತು. ಅವನ ಮನೆಗೆ ಬಂದುದು ಇದೇ ಮೊದಲನೆಯ ಸಲವಾದುದರಿಂದ ಹಾಗೆಯೇ ಮನಸ್ಸಿನ ಭಾವವನ್ನು ಅಡಗಿಸಿ ಕೊಂಡು ಸುಮ್ಮನಿದ್ದನು. ಭಾಮಿನಿಯು ತಕ್ಕ ಉಪಚಾರೋಕ್ತಿಗಳಿಂದ ರಾಜನಿಗೆ ಆಸನವನ್ನು ಕೊಟ್ಟು "ತಾವು ಇಲ್ಲಿಗೆ ಯಾವಾಗ ಬಿಜಯಮಾಡಿ ದುದು?''

"ನಾನು ಈ ಊರಿಗೆ ನೆನ್ನೆ ಬೆಳಿಗ್ಗೆ ಬಂದೆನು.''

"ನಿಮ್ಮ ಪದ್ಧತಿಯಂತೆ ಈ ಸಲವೂ ಭೂಮಂಡಲದ ಕೊನೆಯಿಂದ ಬಂದಿರೋ"

"ಅಮ್ಮಾ! ಈ ಸಾರಿ ನಾನು ಅಲ್ಲಿಂದ ಬರಲಿಲ್ಲ''

"ಈ ಊರಿಗೆ ನೀವು ಸರಿಯಾದ ಕಾಲಕ್ಕೆ ಬರಲಿಲ್ಲ. ಸದ್ಯಕ್ಕೆ ಇಲ್ಲಿ ಆಟನೋಟಗಳಾವುವೂ ಇಲ್ಲದೆ ಇರುವುದರಿಂದ ನಿಮಗೆ ಸ್ವಲ್ಪ ದಿನಗಳಲ್ಲೇ ಬೇಸರ ಹತ್ತೀತು; ಆದರೆ ಕುದುರೆಯ ಜೂಜು ಮಾತ್ರ ನಡೆಯುತ್ತಲಿದೆ. ಅದನ್ನು ನೋಡುವುದರಲ್ಲಿ ನಿಮಗೆ ಕುತೂಹಲವಿದ್ದು ಕುದುರೆಗಳನ್ನು ಜೂಜಿಗೆ ಕಳುಹಿಸುವ ಉದ್ದೇಶವೂ ಇದ್ದರೆ ಹೊತ್ತು ಕಳೆಯಲು ಸ್ವಲ್ಪ ಅನುಕೂಲ ವಾಗುವುದು.''

"ಅಮ್ಮಾ! ನಾನು ಈ ಊರಿಗೆ ಹೊಸಬ; ಇಲ್ಲಿಯ ಜನರ ರೀತಿನೀತಿ ಗಳಾವುವೂ ತಿಳಿಯದು. ನಿಮ್ಮಂಥವರು ಯಾರಾದರೂ ಮುಂದಾಳಾಗಿ ನಿಂತು ಹೇಗೆ ಮಾಡಬೇಕೋ ತೋರಿಸಿಕೊಟ್ಟರೆ ಅದರಂತೆಯೇ ನಾನೂ ನಡೆದುಕೊಳ್ಳುವೆನು."

" ನಿಮಗೆ ಕುದುರೆಗಳಲ್ಲಿ ಅಭಿಮಾನವು ಹೆಚ್ಚೋ ?"

" ನಮ್ಮ ದೇಶದವರಿಗೆ ಕುದುರೆಗಳು, ಸ್ತ್ರೀಯರು ಇವೆರಡರಲ್ಲಿಯೇ ಪ್ರೀತಿ ಹೆಚ್ಚು."

" ಆಹಾ ! 'ರಾಜರೇ, ಮೊದಲು ಸ್ತ್ರೀಯರೆಂದು ಹೇಳದೆ ಅವರನ್ನು ಕುದುರೆಗಳಿಗಿಂತ ಕಡೆ ಮಾಡಿದರಲ್ಲಾ ?''

" ಇದಕ್ಕಾಗಿಯೇ ನಿಮ್ಮಂಥ ಮಾರ್ಗದರ್ಶಿಗಳು ಆಗಬೇಕು ಎಂದು ನಾನು ಹೇಳಿದುದು" ಎಂದು ಮಲಯಸಿಂಹನು ಹೇಳುತ್ತಲಿದ್ದಾಗ, ಭಾಮಿನಿಯ ಮುಖ್ಯ ದಾಸಿಯೊಬ್ಬಳು ಬಂದು ಅವಳ ಕಿವಿಯಲ್ಲಿ ಏನನ್ನೋ ಹೇಳಲು, .ಯಜಮಾನಿಯು ನಾನು ಅದನ್ನು ನಂಬಲಾರೆನೆಂದಳು. ಅದು ನಿಶ್ಚಯವೆಂದು ದಾಸಿಯು ಖಂಡಿತವಾಗಿ ತಿಳಿಸಲು, ಯಜಮಾನಿಯು ಗಂಡನ ಮುಖವನ್ನು ನೋಡಿ

" ಇವಳು ಹೇಳುವುದು ನಿಶ್ಚಯವೋ ''

" ಅವಳು ಏನ ಹೇಳುತ್ತಾಳೆ ?"

'' ನನ್ನ ಗೆಳತಿ ನಾಗಮಣಿಗೆ ಕುದುರೆ ಬಂಡಿಗಳನ್ನು ಒಂದು ದಿನದ ಮಟ್ಟಿಗೆ ಕಳುಹಿಸಿ ಕೊಡುವುದಾಗಿ ಒಪ್ಪಿ ಬಂಡಿಯನ್ನು ಕಟ್ಟಿಕೊಂಡು ಹೋಗುವಂತೆ ಆಳಿಗೆ ಹೇಳಿದ್ದೆನು. ಕುದುರೆಗಳನ್ನು ತರಲು ಆಳು ಲಾಯಕ್ಕೆ ಹೋಗಿ ನೋಡಿದರೆ ಅಲ್ಲಿ ಕುದುರೆಗಳೇ ಇರಲಿಲ್ಲವಂತೆ. ಇದಕ್ಕೇನು ಅರ್ಥ?"

" ನಾನು ಹೇಳುವುದನ್ನು ಕೇಳು.''

" ಕೇಳುವುದೇನು ? ನೀವು ಹೇಳುವುದು ನನಗೆ ತಿಳಿದೇ ಇದೆ '' ಎಂದು ಹೇಳಿ, ಮಲಯಸಿಂಹನನ್ನು ನೋಡಿ,

" ಸ್ವಾಮಿ ರಾಜರೇ ! ತಾವೂ ದಮನಕರೂ ಇಬ್ಬರೂ ಈ ವಿಷಯವನ್ನು ಚೆನ್ನಾಗಿ ಕೇಳಿ ನ್ಯಾಯವಾದ ತೀರ್ಪನ್ನು ಹೇಳಬೇಕು. ನಾನು ಬಲು ಆಸೆಪಟ್ಟು ನನ್ನ ಸ್ವಂತ ಹಣದಿಂದ ಕೊಂಡಿದ್ದ ಶ್ಲಾಘ್ಯವಾದ ಅರಬ್ಬಿಯ ಕುದುರೆಗಳನ್ನು ನನ್ನ ಯಜಮಾನರು ನನ್ನನ್ನು ಕೇಳದೆಯೇ ಲಾಭಕ್ಕೆ ಆಸೆಪಟ್ಟು ಮಾರಿಬಿಟ್ಟಂತಿದೆ. ಇವರು ಹೀಗೆ ಮಾಡುವುದು ನ್ಯಾಯವೋ ಅಪ್ಪಣೆಯಾಗಬೇಕು " ಎಂದಳು. ಅದಕ್ಕೆ ದುರ್ಮತಿಯು

" ಅವು ಬಲು ತುಂಟ ಕುದುರೆಗಳು ; ಅವನ್ನು ಮಾರಿ ಸಾಧುವಾದ ಬೇರೆ ಒಂದು ಜತೆಯನ್ನು ತೆಗೆಯುವ ಏರ್ಪಾಡು ಮಾಡಿದ್ದೇನೆ. ಅವು ನಾಳೆಯೇ ಬರಬಹುದು "

" ಇದೇನು ಅವಿವೇಕದ ಮಾತು? ಎರಡು ತಿಂಗಳಿಂದ ಆ ಕುದುರೆಗಳನ್ನು ನಾನು ಉಪಯೋಗಿಸುತ್ತಿರಲಿಲ್ಲವೇ? ಅದರಿಂದ ನನಗೇನೂ ಅಪಾಯವಾಗಲಿಲ್ಲವಲ್ಲಾ ? ನಿಮ್ಮ ದುರಾಶೆಯೇ ಆ ಕುದುರೆಗಳಲ್ಲಿ ಇಲ್ಲದ ಕೆಟ್ಟ ಚಾಳಿಯನ್ನು ಕಲ್ಪಿಸಿತು."

ತನ್ನ ಹೆಂಡತಿಯ ಕಣ್ಣುಗಳಿಂದ ಹೊಮ್ಮುತ್ತಿದ್ದ ಕೋಪದ ವೇಗವನ್ನು ಸಹಿಸಲಾರದೆ ದುರ್ಮತಿಯು ಮೆಲ್ಲಗೆ ಮಲಯಸಿಂಹನ ಕಡೆಗೆ ತಿರುಗಿ

" ರಾಜರೇ! ಹೆಂಗುಸರ ಬುದ್ಧಿಯನ್ನು ನೋಡಿರಿ; ಅವರ ಹಿತಕ್ಕಾಗಿ ನಾವು ಮಾಡುವುದನ್ನು ಅವರು ಅನ್ಯಥಾ ಭಾವಿಸುವರು. ಆ ಕುದುರೆಗಳು ಕೈಬಿಟ್ಟು ಹೋದರೆ ಸಾಕೆಂದು ಈ ದಿನ ಬೆಳಿಗ್ಗೆ ಧರ್ಮಾರ್ಥವಾಗಿ ಕೊಟ್ಟಂತೆ ಬಹು ಅಲ್ಪವಾದ ಬೆಲೆಗೆ ಕೊಟ್ಟುಬಿಟ್ಟೆನು. ನಿಮ್ಮ ಪರಿಚಯವು ನನಗೆ ಮೊದಲೇ ಆಗಿದ್ದಲ್ಲಿ ನಿಮಗೇ ಕೊಡಬಹುದಾಗಿದ್ದಿತು."

" ಸ್ವಾಮಿ! ನಾನೊಂದು ಜತೆಯನ್ನು ಈ ದಿನ ತೆಗೆದೆನು"

ಎಂದು ದುರ್ಮತಿಗೆ ಹೇಳಿ, ದಮನಕನ ಕಡೆಗೆ ತಿರುಗಿ

" ದಮನಕರೇ! ನೀವು ಅಶ್ವಪರೀಕ್ಷೆಯಲ್ಲಿ ನಿಪುಣರೆಂದು ಕೇಳಿದ್ದೇನೆ; ನಾನು ಕೊಂಡ ಜತೆಯನ್ನು ನೋಡಿ. ನಿಮ್ಮ ಅಭಿಪ್ರಾಯವನ್ನು ಹೇಳಿ", ಎಂದು ಅವನನ್ನು ಕಿಟಕಿಯ ಬಳಿಗೆ ಕರೆದುಕೊಂಡು ಹೋಗಿ ಬೀದಿಯಲ್ಲಿ ನಿಂತಿದ್ದ ತನ್ನ ಕುದುರೆಗಳನ್ನು ತೋರಿಸಿದನು. ಆ ಸಮಯವನ್ನು ನೋಡಿಕೊಂಡು ದುರ್ಮತಿಯು ಮಡದಿಯ ಸಮೀಪವನ್ನು ಸೇರಿ

" ಯಾವನೋ ಒಬ್ಬ ಹುಚ್ಚನು ಹದಿನಾರು ಸಾವಿರ ವರಹಗಳ ಲಾಭವನ್ನು ಕೊಟ್ಟು ಆ ಕುದುರೆಗಳನ್ನು ಕ್ರಯಕ್ಕೆ ಕೊಂಡನು. ಬಂದ ಲಾಭದಲ್ಲಿ ನಿನ್ನ ಸ್ವಂತಕ್ಕೆ ಆರು ಸಾವಿರ ವರಹಗಳನ್ನೂ ನಿನ್ನ ಮಗಳ ವೆಚ್ಚಕ್ಕೂ ಎರಡು ಸಾವಿರ ವರಹಗಳನ್ನೂ ತೆಗೆದುಕೋ. ಸುಮ್ಮನೆ ಅವರಿದಿರಿಗೆ ಕೋಪ ಮಾಡಬೇಡ. ಇದನ್ನೆಲ್ಲಾ ಅವರ ಮುಂದೆ ನಿನಗೆ ಹೇಗೆ ಹೇಳಲಿ ಎಂದು ಸುಮ್ಮನಿದ್ದೆನು."

ಅತ್ತ ದಮನಕನು ಆ ಕುದುರೆಗಳನ್ನು ನೋಡಿ ಇವೇ ಭಾಮಿನಿಯ ಕುದುರೆಗಳು ಎಂದು ಮಲಯಸಿಂಹನಿಗೆ ಹೇಳಿ, ಕೂಡಲೇ ಭಾಮಿನಿಯ ಬಳಿಗೆ ಬಂದು ಅವಳಿಗೂ ಆ ಸಮಾಚಾರವನ್ನು ತಿಳಿಸಿದನು. ಅವಳು ಎದ್ದು ಬಂದು ಆ ಕುದುರೆಗಳನ್ನು ನೋಡಿ "ಇವೇ ನನ್ನವು" ಎಂದು ಕೋಪದಿಂದ ದುರದುರನೆ ಗಂಡನ ಮುಖವನ್ನು ನೋಡಿದಳು. ದುರ್ಮತಿಯು ಗಡಗಡನೆ ನಡುಗುತ್ತ ಯಾವುದೋ ಒಂದು ಕೆಲಸದ ನೆಪಮಾಡಿಕೊಂಡು ಆಚೆಗೆ ಹೊರಟನು. ಗಂಡಹೆಂಡಿರ ಜಗಳದಲ್ಲಿ ತಾನಿರುವುದು ಅನುಚಿತವೆಂದು ತಿಳಿದು ಮೆಲ್ಲಗೆ ದಮನಕನು ಎಲ್ಲಿಗೋ ಇಳಿಯಬಿದ್ದನು.

ಮಲಯಸಿಂಹನು ಹೊರಗೆ ಹೋಗುತ್ತಲಿದ್ದ ದುರ್ಮತಿಯನ್ನು ಹಿಮ್ಮೆಟ್ಟಿ "ಅಯ್ಯಾ ಶ್ರೀಮಂತರೇ! ಜಂಗುಸರು ಮೂರ್ಖರು; ಅವರು ಹೋದ ದಾರಿಯಲ್ಲಿಯೇ ಅವರನ್ನು ಬಿಟ್ಟರೆ, ಅವರ ಅವಿವೇಕದಿಂದುಂಟಾಗುವ ಅಪಾಯಕ್ಕೆ ಮತ್ತೊಬ್ಬರನ್ನು ಗುರಿಮಾಡಲಾರರು; ಕೆಲವು ಮಡದಿಯರಿಗೆ ತಮ್ಮ ಮಾರ್ಗವೇ ಮಾರ್ಗ; ಅಂಥವರ ಗೋಜಿಗೆ ಹೋಗುವುದೇ ತಪ್ಪು. ನಾನು ಬಂದ ಕೆಲಸವಾಯಿತು; ಅಪ್ಪಣೆಯಾದರೆ ಹೋಗಿಬರುತ್ತೇನೆ" ಎಂದು ಹೊರಟನು.

ಮಲಯಸಿಂಹನು ಬಂಡಿಯಲ್ಲಿ ಕುಳಿತು ಮನೆಗೆ ಹಿಂದಿರುಗಿ ಹೋಗುತ್ತ "ಇದುವರೆಗೆ ನಾನು ಯೋಚಿಸಿದಂತೆಯೇ ಎಲ್ಲವೂ ಅನುಕೂಲಿಸಿದುವು. ಇನ್ನು ಮುಂದೆ ಈ ಗಂಡಹೆಂಡಿರ ಅನುಕೂಲ್ಯವೂ ಈ ಮನೆಯ ಸೌಖ್ಯವೂ ನನ್ನ ಕೈಯಲ್ಲಿವೆ. ಈಗ ನಾನು ಇನ್ನೊಂದು ಕೆಲಸ ಮಾಡಿದರೆ ದಂಪತಿಗಳಿಬ್ಬರ ಮನಸ್ಸಿಗೂ ಸಂತೋಷವಾಗುವುದಲ್ಲದೆ ನನ್ನ ಮುಂದಣ ಕೆಲಸಕ್ಕೂ ಅನುಕೂಲವಾಗುವುದು. ದುರ್ಮತಿಯ ಮಗಳನ್ನು ಪರಿಚಯಮಾಡಿಕೊಳ್ಳುವುದಕ್ಕೆ ಅನುಕೂಲಿಸಲಿಲ್ಲ; ಅದಕ್ಕೆ ಈಗ ಅವಸರವೇನು? ಬೇಕಾದಷ್ಟು ಕಾಲವಿದೆ" ಎಂದು ಯೋಚಿಸುತ್ತ ಮನೆಯನ್ನು ಸೇರಿದನು.

ಮನೆಗೆ ಹೋದ ಕೂಡಲೇ ಭಾಮಿನಿಗೂ ದುರ್ಮತಿಗೂ ಬೇರೆ ಬೇರೆ ಎರಡು ಲೇಖನಗಳನ್ನು ಬರೆದು, ತಾನು ದುರ್ಮತಿಯಿಂದ ಕೊಂಡಿದ್ದ ಅರಬ್ಬಿಯ ಕುದುರೆಗಳನ್ನೂ ಅವುಗಳಿಗಾಗಿ ಹೊಸದಾಗಿ ಮಾಡಿಸಿದ್ದ ಜೀನು ಹಲ್ಲಣ ಮೊದಲಾದುವುಗಳನ್ನೂ ಶಿರೋಭೂಷಣಗಳಾಗಿದ್ದ ತುರಾಯಿಗಳಲ್ಲಿ

ಎರಡು ಉತ್ತಮವಾದ ವಜ್ರಗಳನ್ನೂ ಇಟ್ಟು ವಾಮನಭಟ್ಟನ ಜತೆಯಲ್ಲಿ ಕಳುಹಿಸಿಕೊಟ್ಟನು.

ಭಾಮಿನಿಗೆ ಈ ರೀತಿ ಲೇಖನವು ಬರೆದಿದ್ದಿತು :—

"ಅಮ್ಮಾ! ನಿಮ್ಮಂಥ ರೂಪವತಿಯರಾದ ಹೆಂಗುಸರ ಮನದ ಸಂಕಟ ವನ್ನು ನೋಡಿ ಸಹಿಸಲಾರದೆ, ನೀವು ಆಸೆಪಟ್ಟು ಇಟ್ಟುಕೊಂಡಿದ್ದ ಕುದುರೆ ಗಳನ್ನು ನಮ್ಮ ದೇಶದ ವಾಡಿಕೆಯಂತೆ ಅಲಂಕರಿಸಿ ನಿಮಗೆ ಉಪಾಯನವಾಗಿ ಕಳುಹಿಸಿಕೊಟ್ಟಿದ್ದೇನೆ. ತಾವು ದಯೆಮಾಡಿ ಇವುಗಳನ್ನು ಸ್ವೀಕರಿಸಬೇಕು. ಈ ವಿಷಯವಾಗಿ ನಿಮ್ಮ ಯಜಮಾನರಿಗೂ ಬರೆದಿದ್ದೇನೆ."

ಮಾರನೆಯ ದಿನ ಹೊತ್ತು ಹುಟ್ಟುತ್ತಲೆ ಮಲಯಸಿಂಹನು ಎದ್ದು ವಾಮನಭಟ್ಟನನ್ನು ಕರೆದುಕೊಂಡು ಸಂಪಿಗೆಯ ವನದ ಮನೆಗೆ ಹೋಗಿ ಮಹಡಿಯ ಮೇಲೆ ಕುಳಿತು "ಭಟ್ಟಾ! ನೀನು ನಿಮ್ಮ ದೇಶದಲ್ಲಿದ್ದಾಗ ಕುಣಿಕೆಹಾಕಿದ್ದ ನೂಲ, ಹಗ್ಗದಿಂದ ಓಡಿ ಹೋಗುತ್ತಲಿರುವ ಎಂತಹ ಕಾಡು ಮೃಗಗಳನ್ನಾದರೂ ನಿಲ್ಲಿಸಿ ಬೇಟೆಯಾಡುತ್ತಲಿದ್ದೆ ಎಂದು ನನ್ನೊಡನೆ ಹೇಳಿದ್ದಂತೆ ಜ್ಞಾಪಕವಿದೆ. ಈ ಅಭ್ಯಾಸವು ಈಗಲೂ ನಿನ್ನಲ್ಲಿದೆಯೋ?" ಎನ್ನಲು, ವಾಮನಭಟ್ಟನು

"ಇದೆ" ಎಂದು ಸೂಚಿಸಿದನು.

"ಎಷ್ಟು ಬಲವಾದ ಮೃಗವಾದರೂ, ಎಷ್ಟು ವೇಗವಾಗಿ ಹೋಗುತ್ತ ಲಿದ್ದರೂ, ಅದನ್ನು ನಿಲ್ಲಿಸಬಲ್ಲೆಯೋ?''

"ಹೂಂ."

"ಸಿಂಹವನ್ನಾದರೂ ನಿಲ್ಲಿಸಬಲ್ಲೆಯೋ?"

"ಹೂಂ.''

"ಹಾಗಾದರೆ ಇಲ್ಲಿ ಬಾ', ಎಂದು ಮಹಡಿಯಿಂದಿಳಿದು ಅವನನ್ನು ಬೀದಿಗೆ ಕರೆದುಕೊಂಡು ಹೋಗಿ

'' ಇನ್ನು ಸ್ವಲ್ಪ ಹೊತ್ತಿನಲ್ಲಿ ನೆನ್ನೆಯ ದಿನ ನಮ್ಮ ಬಂಡಿಗೆ ಹೂಡಿದ ಕುದುರೆಗಳು ಮತ್ತೊಂದು ಬಂಡಿಯನ್ನು ಅತಿ ವೇಗದಿಂದ ಎಳೆದುಕೊಂಡು ಈ ಮಾರ್ಗವಾಗಿ ಬರುವುವು; ಅವುಗಳನ್ನು ಹೇಗಾದರೂ ಮಾಡಿ ನೀನು ನಿಲ್ಲಿಸಬೇಕು" ಎನ್ನಲು ಅವನು ಮನೆಯಿಂದ ಒಂದು ನೂಲ ಹಗ್ಗವನ್ನು

ತಂದು ಕುಣಿಕೆಯನ್ನು ಹಾಕಿ ಮನೆಯ ಇದಿರಿಗಿದ್ದ ಬಂಡೆಯ ಮೇಲೆ ಕುಳಿತು ಹಗ್ಗವನ್ನು ಹೇಗೆ ಎಸೆದರೆ ಬೀದಿಯಲ್ಲಿ ಹೋಗುವ ಕುದುರೆಯ ಕಾಲಿಗೆ ಕುಣಿಕೆಯು ಬೀಳುವುದೋ ಅದನ್ನು ಮಲಯಸಿಂಹನಿಗೆ ತೋರಿಸಿದನು. ಆಗ ಮಲಯಸಿಂಹನು ಅವನ ಬೆನ್ನನ್ನು ತಟ್ಟಿ "ನೀನಿಲ್ಲಿಯೇ ಇದ್ದು ಆ ಕೆಲಸವನ್ನು ಮಾಡು" ಎಂದು ಹೇಳಿ, ತಾನು ಮಹಡಿಯ ಮೇಲೆ ಬೀದಿಯಲ್ಲಿ ನಡೆಯುವುದೆಲ್ಲಾ ಕಾಣುವಂತೆ ಒಂದು ಕೊಠಡಿಯಲ್ಲಿ ಕುರ್ಚಿಯನ್ನು ಹಾಕಿಕೊಂಡು ಕುಳಿತನು.

ಇತ್ತ ವಾಮನಭಟ್ಟನು ಬಂಡೆಯ ಮೇಲೆ ಕುಳಿತು ಬಂಡಿಯು ಬರುವುದನ್ನೇ ನೋಡುತ್ತಿದ್ದನು. ಮಲಯಸಿಂಹನು ಆಗಾಗ ಬಂಡಿಯು ಬರುವ ದಿಕ್ಕನ್ನೇ ನೋಡುತ್ತ ಇನ್ನೂ ಏಕೆ ಬರಲಿಲ್ಲ ಎಂದು ಯೋಚಿಸುತ್ತಿದ್ದನು. "ಬಲು ಹೊತ್ತಾಯಿತು, ಇನ್ನು ಮೇಲೆ ಬಹುಶಃ ಬರಲಾರದು" ಎಂದು ಗಡಿಯಾರವನ್ನು ತೆಗೆದು ನೋಡುವ ವೇಳೆಗೆ ಬಂಡಿಯು ಬರುವ ಸಪ್ಪಳವು ಕೇಳಿಸಿತು. ಎದ್ದು ನೋಡುವಲ್ಲಿ ದೂರದಲ್ಲಿ ಬಂಡಿಯು ಕಾಣಿಸಿತು. ನೋಡುತ್ತಿದ್ದಹಾಗೆಯೇ ಕುದುರೆಗಳೆರಡೂ ಕಡಿವಾಣವನ್ನು ಕಚ್ಚಿಕೊಂಡು ಸಾರಥಿಯ ಅಧೀನದಲ್ಲಿ ನಿಲ್ಲದೆ ಸ್ವೇಚ್ಛೆಯಾಗಿ ರಥವನ್ನೆಳೆದುಕೊಂಡು ವಾಯುವೇಗದಿಂದ ಓಡಿಬರುತ್ತಲಿದ್ದುದೂ ಕಾಣಿಸಿತು. ಬಂಡಿಯು ನಿಮಿಷಮಾತ್ರದಲ್ಲಿ ಸಮೀಪಕ್ಕೆ ಬಂದಿತು.

ಆ ಬಂಡಿಯಲ್ಲಿ ಒಬ್ಬ ಯುವತಿಯೂ ಸುಮಾರು ಎಂಟು ವಯಸ್ಸುಳ್ಳ ಒಬ್ಬ ಬಾಲಕನೂ ಕುಳಿತಿದ್ದರು. ಈ ರೀತಿ ಕುದುರೆಗಳು ಬಂಡಿಯನ್ನು ದಿಕ್ಕುಪಾಲಾಗಿ ಎಳೆದುಕೊಂಡು ಹೋಗುತ್ತಿರುವುದನ್ನು ಕಂಡು ಅವರು ಅತಿಭೀತರಾಗಿ ಜೀವದಾಸೆಯಿಲ್ಲದೆ ಒಬ್ಬರನ್ನೊಬ್ಬರು ಅಪ್ಪಿಕೊಂಡಿದ್ದರು, ದಾರಿಯಲ್ಲಿ ಓಡಾಡುತ್ತಿದ್ದವರು ಕುದುರೆಗಳು ಈ ರೀತಿ ವೇಗವಾಗಿ ಬರುತ್ತಿದ್ದುದನ್ನು ನೋಡಿ ಈ ಬಂಡಿ ಎಲ್ಲಿಯೋ ಉರುಳಿ ಚೂರ್ಣವಾಗಿ ಹೋಗಿ ಒಳಗಿರುವವರು ನಿಜವಾಗಿಯೂ ಸಾಯುವರೆಂದೇ ನಿಶ್ಚಯಿಸಿದ್ದರು.

ಬಂಡಿಯು ಮನೆಯ ಮುಂದೆ ಬರುವವರೆಗೂ ವಾಮನಭಟ್ಟನು ಸುಮ್ಮನಿದ್ದು, ಬಂದಕೂಲೇ ನಿಮಿಷಮಾತ್ರದಲ್ಲಿ ಕೈಯಲ್ಲಿದ್ದ ಹಗ್ಗವನ್ನು ಎಸೆಯಲು ಕುಣಿಕೆಯು ಅವನ ಕಡೆಯಿದ್ದ ಕುದುರೆಯ ಮುಂಗಾಲಿಗೆ ಸಿಕ್ಕಿ ಬೀರಿ

ಕೊಂಡಿತು. ಅದು ಅತಿವೇಗವಾಗಿ ಬರುತ್ತಿದ್ದ ಕಾರಣ ಕಾಲಿಗೆ ತೊಡರಿಕೊಂಡ ಹಗ್ಗವನ್ನೂ, ಅದನ್ನು ಎಳೆದು ಹಿಡಿದಿದ್ದ ವಾಮನಭಟ್ಟನನ್ನೂ, ಸ್ವಲ್ಪ ದೂರ ಎಳೆದುಕೊಂಡು ಹೋಗಿ ದೊಪ್ಪೆಂದು ಕೆಳಗೆ ಬಿದ್ದಿತು. ತಕ್ಷಣವೇ ವಾಮನಭಟ್ಟನು ಓಡಿಹೋಗಿ ಮತ್ತೊಂದು ಕುದುರೆಯ ಎರಡು ಮೂಗಿನಲ್ಲಿಯೂ ಹೆಬ್ಬೆಟ್ಟನ್ನೂ ಅನಾಮಿಕವನ್ನೂ ಇಟ್ಟು ಗಟ್ಟಿಯಾಗಿ ಒತ್ತಲು ಆ ನೋವನ್ನು ಸಹಿಸಲಾರದೆ ಆ ಕುದುರೆಯು ಕೆಳಗೆ ಬಿದ್ದಿತು. ಬಂಡಿಯಲ್ಲಿದ್ದವರಿಬ್ಬರೂ ಭಯದಿಂದ ಮೂರ್ಛಾಕ್ರಾಂತರಾದರು. ಇಷ್ಟರಲ್ಲಿಯೇ ಮಲಯಸಿಂಹನು ಮನೆಯಿಂದ ಆಳುಗಳನ್ನು ಕರೆದುಕೊಂಡು ಬಂದು ಮೂರ್ಛಿತರಾಗಿದ್ದ ಇಬ್ಬರನ್ನೂ ಮಹಡಿಯ ಮೇಲಕ್ಕೆ ಸಾಗಿಸಿ ಅಲ್ಲಿ ಹಾಕಿದ್ದ ಎರಡು ಸೋಫಾಗಳ ಮೇಲೆ ಮಲಗಿಸಿ, ಅವರಿಗೆ ಶೈತ್ಯೋಪಚಾರಗಳನ್ನು ಮಾಡುತ್ತಿದ್ದನು.

ಯುವತಿಯು ಸ್ವಲ್ಪ ಹೊತ್ತಿನ ಮೇಲೆ ಮೂರ್ಛೆ ತಿಳಿದು ಕಣ್ಣನ್ನು ತೆರೆದು ಸುತ್ತಲೂ ನೋಡಿದಳು. ಆಗ ಮಲಯಸಿಂಹನು "ಅಮ್ಮಾ! ನಿಮಗೆ ಒದಗಿದ್ದ ವಿಪತ್ತು ಕಳೆದು ಹೋಯಿತು, ಹೆದರಬೇಡಿ" ಎಂದನು. ಅವಳು ತನ್ನ ಮಗನಿಗಿನ್ನೂ ಜ್ಞಾನಬಾರದಿದ್ದುದನ್ನು ಕಂಡು ಬಹಳವಾಗಿ ದುಃಖಿಸಿದಳು. ಅದಕ್ಕೆ ಮಲಯಸಿಂಹನು

"ಅಮ್ಮಾ, ಸುಮ್ಮನೆ ಏಕೆ ದುಃಖಿಸುವಿರಿ? ಈ ಬಾಲಕನು ಗಾಬರಿಯಿಂದ ಮೂರ್ಛಿತನಾಗಿದ್ದಾನೆ; ಇನ್ನು ಸ್ವಲ್ಪ ಹೊತ್ತಿನಲ್ಲಿಯೇ ಎಚ್ಚರಗೊಳ್ಳುವನು. ನೀವು ಗಾಬರಿ ಪಡದೆ ಧೈರ್ಯವಾಗಿರಿ"

"ಸ್ವಾಮಿ! ನನ್ನನ್ನು ಸಮಾಧಾನಪಡಿಸುವ ಉದ್ದಿಶ್ಯ ತಾವು ಹೀಗೆ ಹೇಳುವಂತೆ ತೋರುತ್ತದೆ" ಎಂದು ಹೇಳಿ ಮಗುವಿನ ಕಡೆಗೆ ತಿರುಗಿ

"ಮಗೂ, ನನ್ನ ಕಂದಾ, ಒಂದು ಸಾರಿ ಕಣ್ಣುಬಿಟ್ಟು ನನ್ನನ್ನು ನೋಡಬಾರದೇ? ನನ್ನ ಮುದ್ದು ಕಂದಾ! ನನ್ನೊಡನೆ ಏಕೆ ಮಾತನಾಡದಿರುವೆ?" ಎಂದು ಪ್ರಜ್ಞೆಯಿಲ್ಲದ ಮಗುವನ್ನು ಕುರಿತು ಹಳವಳಿಸುತ್ತ, ಅದು ಮಾತನಾಡದೆ ಇರಲು

"ಅಯ್ಯೋ ದೇವರೇ! ಈ ಮಗು ಸತ್ತು ನಾನು ಹೇಗೆ ತಾನೇ ಬದುಕಿರಲಿ" ಎಂದು ಗೋಳಿಡುತ್ತಿದ್ದಳು. ಹಾಗೆಯೇ ಸ್ವಲ್ಪ ಸಮಾಧಾನಗೊಂಡು

"ಸ್ವಾಮಿಾ! ಸಮಿಾಪದಲ್ಲಿ ಯಾರಾದರೂ ವೈದ್ಯರಿದ್ದರೆ ಅವರನ್ನು ಮೊದಲು ಕರೆಸೋಣವಾಗಲಿ; ನನ್ನ ಆಸ್ತಿಯೆಲ್ಲಾ ಹೋದರೂ ಚಿಂತೆಯಿಲ್ಲ, ಈ ಮಗುವೊಂದಿದ್ದರೆ ಸಾಕು"

ಮಲಯಸಿಂಹನು ಆ ಯುವತಿಗೆ ಧೈರ್ಯವನ್ನು ಹೇಳುತ್ತ ಅಲ್ಲಿ ಒಂದು ಮೂಲೆಯಲ್ಲಿ ಇಟ್ಟಿದ್ದ ಸೀಸೆಗಳಲ್ಲಿ ಒಂದನ್ನು ತಂದು ಅದರಲ್ಲಿದ್ದ ದ್ರಾವಕದಲ್ಲಿ ಒಂದು ತೊಟ್ಟನ್ನು ಮಗುವಿನ ಬಾಯಿಗೆ ಬಿಟ್ಟನು. ಕೂಡಲೇ ಮಗು ಕಣ್ಣು ತೆರೆದು ಸುತ್ತಮುತ್ತಲೂ ನೋಡಿ ತಾಯಿಯ ಮುಖವನ್ನು ಕಂಡು ಸ್ವಲ್ಪ ನಕ್ಕು ಪುನಃ ಕಣ್ಣು ಮುಚ್ಚಿಕೊಂಡಿತು. ಅದನ್ನು ನೋಡಿ ತಾಯಿಯು ಖಿನ್ನಳಾಗಿ

"ಸ್ವಾಮಿಾ! ಆ ದ್ರಾವಕದಲ್ಲಿ ಇನ್ನೊಂದು ತೊಟ್ಟನ್ನು ಬಿಡಿರಿ; ಮಗು ಏಕೋ ಮರಳಿ ಕಣ್ಣು ಮುಚ್ಚಿಕೊಂಡಿತು"

"ಅಮ್ಮಾ! ಈ ದ್ರಾವಕದ ಒಂದು ತೊಟ್ಟು ಸಂಜೀವನದಂತೆ ಆರೋಗ್ಯ ವನ್ನುಂಟುಮಾಡುವುದು; ಅದಕ್ಕೆ ಹೆಚ್ಚಾದರೆ ಕ್ರೂರವಾದ ಕಾಲಕೂಟದಂತೆ ಕೊಲ್ಲದೆ ಬಿಡದು. ನೀವು ಇನ್ನು ಎರಡು ನಿಮಿಷಗಳು ಸುಮ್ಮನಿದ್ದರೆ ಈ ಬಾಲಕನು ಎದ್ದು ಓಡಾಡುವನು"

ಅವನು ಹೇಳಿದಂತೆಯೇ ಎರಡು ನಿಮಿಷಗಳಾದ ಮೇಲೆ ಬಾಲಕನೆದ್ದು ತಾಯಿಯ ಬಳಿಗೆ ಬಂದನು. ಅದನ್ನು ಕಂಡು ಅವಳಿಗೆ ಉಂಟಾದ ಆನಂದ ವನ್ನು ಯಾರು ತಾನೇ ಸರಿಯಾಗಿ ವಿವರಿಸಬಲ್ಲರು ? ಮಗನನ್ನು ಅಪ್ಪಿ ಬಾರಿ ಬಾರಿಗೂ ಮುದ್ದಾಡುತ್ತ

"ಸ್ವಾಮಿಾ! ಇದು ಯಾರಮನೆ? ನನಗೆ ಜೀವದಾನವನ್ನೂ ಪುತ್ರ ದಾನವನ್ನೂ ಮಾಡಿದ ಆ ಮಹಾನುಭಾವರ ದಿವ್ಯ ನಾಮಾಕ್ಷರಗಳಾವುವು? ಈ ಮಹೋಪಕಾರವನ್ನು ನಾನು ಹೇಗೆ ತಾನೇ ಮರೆತೇನು ?"

"ಅಮ್ಮಾ! ಇದು ನಿಮ್ಮ ಈ ದುರ್ದೆಶೆಯಲ್ಲಿ ಕಿಂಚಿತ್ಸಹಾಯಮಾಡುವ ಪುಣ್ಯವನ್ನು ಹೊಂದಿದ್ದ ನನ್ನ ಮನೆ. ನಿಮ್ಮ ಬಂಡಿಯು ಸ್ವಲ್ಪ ಶಿಥಿಲವಾಗಿದೆ ಸ್ವಲ್ಪ ವಿಶ್ರಮಿಸಿಕೊಳ್ಳಿರಿ, ನನ್ನ ಬಂಡಿಯನ್ನು ಕಟ್ಟಿಸಿಕೊಡುತ್ತೇನೆ. ಅದರಲ್ಲಿ ಕುಳಿತು ತಾವು ಸುಖವಾಗಿ ಮನೆಯನ್ನು ಸೇರಬಹುದು."

"ಸ್ವಾಮಿಾ! ಇದು ನಮ್ಮ ದುರ್ದಶೆಯೇ ಸರಿ. ಊರೆಲ್ಲ ಕೊಂಡಾ ಡುತ್ತಲಿದ್ದ ಈ ಕುದುರೆಗಳು ಹೇಗಿವೆ ಎಂದು ನೋಡಲೋಸುಗ ನಾನು ನನ್ನ

ಗೆಳತಿ ಭಾಮಿನಿಯನ್ನು ಕೇಳಿ ರಥವನ್ನು ಕಟ್ಟಿಸಿಕೊಂಡು ಬಂದುದಕ್ಕೆ ಈ ಗತಿ ಯಾಯಿತು. ನಿಮಗೇನಾದರೂ ಅವಳ ಪರಿಚಯವುಂಟೋ ?"

"ನೆನ್ನೆ ನಾನು ಈ ಕುದುರೆಗಳನ್ನು ಕೊಂಡುಕೊಂಡು ಸ್ವಲ್ಪ ಕೆಲಸ ವಿದ್ದುದರಿಂದ ಇವುಗಳನ್ನೇ ಬಂಡಿಗೆ ಹೂಡಿಸಿ ಶ್ರೀಮಂತ ದುರ್ಮತಿಯವರ ಮನೆಗೆ ಹೋಗಿದ್ದೆನು. ಈ ಕುದುರೆಗಳನ್ನು ನೋಡಿ 'ನಾನು ಸ್ವಂತ ಹಣ ಕೊಟ್ಟು ತೆಗೆದು ಅತಿಮೋಹದಿಂದಿಟ್ಟುಕೊಂಡಿದ್ದ ಈ ಕುದುರೆಗಳನ್ನು ನನ್ನ ತಿಳುವಳಿಕೆಗೆ ಬಾರದಂತೆಯೇ ಶ್ರೀಮಂತರು ಲಾಭಕ್ಕೆ ಮಾರಿದರಲ್ಲ' ಎಂದು ಭಾಮಿನಿಯವರು ವ್ಯಥೆಪಟ್ಟರು. ಅದನ್ನು ನೋಡಿ ನಾನು ಮನಕರಗಿದವ ನಾಗಿ ಇವುಗಳನ್ನು ಅವರಿಗೆ ಒಪ್ಪಿಸಿಬಿಟ್ಟೆನು."

"ಹಾಗೇ ? ಭಾಮಿನಿಯು ಬಹುವಾಗಿ ಸ್ತೋತ್ರಮಾಡುತ್ತಲಿದ್ದ ರಾಜಾ ಮಲಯಸಿಂಹರೆಂಬುವರು ತಾವೇ ಎಂದು ಕಾಣುತ್ತದೆ."

"ನಿಮ್ಮ ಊಹೆಯು ತಪ್ಪಲ್ಲ. ತಾವು ಯಾರೆಂಬುದನ್ನು ಹೇಳಲು ಅಭ್ಯಂತರವಿಲ್ಲದಿದ್ದರೆ ಅದನ್ನು ನಾನು ತಿಳಿಯಲಪೇಕ್ಷಿಸುತ್ತೇನೆ."

"ನಾನು ಇಲ್ಲಿಯ ನ್ಯಾಯಾಧಿಪತಿಗಳ ಕುಟುಂಬ; ನನ್ನ ಹೆಸರು ನಾಗ ಮಣಿ. ತಾವು ಮಾಡಿದ ಉಪಕಾರಕ್ಕೆ ನಾನೂ ನನ್ನ ಯಜಮಾನರೂ ಜೀವಾವಧಿ ಋಣಪಟ್ಟಿದ್ದೇವೆ" ಎಂದು ಅವಳು ಹೇಳುತ್ತಿದ್ದಾಗ ಬಾಲಕನು ಅವಳ ಆಲಿಂ ಗನದಿಂದ ಬಿಡಿಸಿಕೊಂಡು ಔಷಧಿಗಳಿಟ್ಟಿದ್ದ ಮೇಜಿನ ಬಳಿಗೆ ಓಡಿಹೋಗಿ ಅಲ್ಲಿ ಯಾವುದೋ ಒಂದು ಸೀಸೆಗೆ ಕೈಹಾಕಿದನು. ಅದನ್ನು ನೋಡುತ್ತಲಿದ್ದ ಮಲಯಸಿಂಹನು

"ಅಪ್ಪಾ ಮಗೂ ! ಆ ಸೀಸೆಗಳಲ್ಲಿ ಅನೇಕ ವಿಷಗಳಿರುವುವು; ಅದನ್ನು ಮುಟ್ಟಬೇಡ" ಎನ್ನಲು ತಾಯಿಯು ಗಾಬರಿಯಿಂದೆದ್ದು ಮಗನನ್ನು ಕರೆದು ಕೊಂಡು ಬಂದಳು.

"ಸ್ವಾಮಿಾ ! ತಾವಿಲ್ಲಿಯೇ ವಾಸವಾಗಿರುಫಿರೋ ?"

"ಇದು ನನ್ನ ಮನೆಯಾದರೂ ನಾನು ಇಲ್ಲಿ ಯಾವಾಗಲೂ ವಾಸವಾಗಿಲ್ಲ; ಆಗಾಗ ಇಲ್ಲಿಗೆ ಬರುವುದುಂಟು."

ಬಂಡಿಯು ಸಿದ್ಧವಾಗಿದೆಯೆಂದು ವಾಮನಭಟ್ಟನು ಬಂದು ತಿಳಿಸಿದನು.

ಅವನನ್ನು ನೋಡುತ್ತಲೇ ತಾಯಿಯು ಮಗನನ್ನು ನೋಡಿದ "ಮಗೂ! ಇವ ನೀಗ ನಿನ್ನನ್ನು ಕಾಪಿಟ್ಟವನು; ಇವನಿಗೆ ವಂದನೆ ಮಾಡಪ್ಪ" ಎಂದು ಮುದ್ದಿಸಿದಳು.

"ಊಹೂಂ, ನಾನೊಲ್ಲೆ, ಅವನು ಕುರೂಪಿ" ಎಂದು ಮಗುವು ಎನ್ನುತ್ತಲೆ ತಾಯಿಯು ಅದನ್ನು ಶಿಕ್ಷಿಸುವುದಕ್ಕೆ ಬದಲಾಗಿ ಮುದ್ದಿಸಿ ಮಲಯ ಸಿಂಹನ ಜತೆಯಲ್ಲಿ ಮಹಡಿಯಿಂದಿಳಿದು ಬಂಡಿಯ ಸಮೀಪದಲ್ಲಿ ನಿಂತು, ಬಂಡಿಗೆ ಅದೇ ಕುದುರೆಗಳನ್ನು ಕಟ್ಟಿರುವುದನ್ನು ಕಂಡು

"ಸ್ವಾಮಿಾ! ಈ ಕೆಟ್ಟಕುದುರೆಗಳನ್ನು ಕಟ್ಟಿರುವ ಬಂಡಿಯಲ್ಲಿ ಕುಳಿತು ಕೊಳ್ಳುವುದಕ್ಕೆ ನನಗೆ ಭಯವಾಗುತ್ತದೆ."

"ಅಮ್ಮಾ! ನೀವು ಹೆದರಬೇಡಿ, ವಾಮನಭಟ್ಟನು ಹೇಳಿದಂತೆ ಈ ಕುದುರೆಗಳು ಕೇಳುವುವು" ಎಂದು ಮಲಯಸಿಂಹನು ಧೈರ್ಯವನ್ನು ಹೇಳಲು, ನಾಗಮಣಿಯು ಮಗುವನ್ನೆತ್ತಿಕೊಂಡು ಬಂಡಿಯಲ್ಲಿ ಕುಳಿತಳು. ವಾಮನ ಭಟ್ಟನು ಕುದುರೆಗಳ ಮೈಗೆ ಯಾವುದೋ ಒಂದು ದ್ರಾವಕವನ್ನು ಸವರಿ ಬಂಡಿಯ ಮೇಲೆ ಹತ್ತಿ ಕಡಿವಾಳವನ್ನು ಹಿಡಿದು ಚಾವಟಿಯಿಂದ ಹೊಡೆದ ಹೊರತು ಕುದುರೆಗಳು ಮುಂದೆ ಹೆಜ್ಜೆಯನ್ನೇ ಇಡಲಿಲ್ಲ. ಅವುಗಳ ವೇಗವು ಮೊದಲು ಇದ್ದುದರಲ್ಲಿ ನೂರರಲ್ಲಿ ಒಂದು ಪಾಲೂ ಇರಲಿಲ್ಲ. ಬೀದಿಯವ ರೆಲ್ಲರೂ ಅತ್ಯುತ್ತಮವಾದ ಈ ಅರಬ್ಬಿಯ ಕುದುರೆಗಳು ಇದೇಕೆ ಹೀಗೆ ಕತ್ತೆ ಗಳಂತಾದುವು ಎಂದುಕೊಂಡು ಹೋಗುತ್ತಲಿದ್ದರು.

ಮನೆಯನ್ನು ಸೇರಿದ ಕೂಡಲೇ ನಾಗಮಣಿಯು ತನ್ನ ಗೆಳತಿ ಭಾಮಿ ನಿಗೆ ಒಂದು ಲೇಖನವನ್ನು ಬರೆದು ಕಳುಹಿಸಿಕೊಟ್ಟಳು. ಆ ಲೇಖನವು ಈ ರೀತಿ ಇದ್ದಿತು:—

"ಪ್ರಿಯ ಸಖಿಯೇ! ಇಂದು ನಿನ್ನ ಕುದುರೆಗಳ ದೆಸೆಯಿಂದ ನನಗೆ ಒಂದು ದೊಡ್ಡ ವಿಪತ್ತುಂಟಾಗಿ ನಾನೂ ನನ್ನ ಮುದ್ದು ಕಂದನೂ ಸಾಯುವು ದರಲ್ಲಿದ್ದೆವು. ದೈವಾಧೀನದಿಂದ ರಾಜಾಮಲಯಸಿಂಹನು ಆ ವೇಳೆಗೆ ಬಂದು ನಮ್ಮನ್ನು ಕಾಪಿಟ್ಟನು."

"ನೆನ್ನೆಯ ದಿನ ನೀನು ಅವನನ್ನು ಸ್ತೋತ್ರಮಾಡುತ್ತಲಿದ್ದರೆ ಇದೇಕೆ ಹೀಗೆ ನೀನು ಅವನನ್ನು ಮೀತಿಮಾರಿ ಸ್ತೋತ್ರಮಾಡುತ್ತಲಿದ್ದೀಯೇ ಎಂದು

ನಾನು ಗೇಲಿ ಮಾಡಿದೆನು. ಅವನನ್ನು ಸಾಕ್ಷಾತ್ತಾಗಿ ನೋಡಿ ಮೇಲೆ ನೀನು ಮಾಡಿದ ಸ್ತೋತ್ರವು ಏನೂ ಅತಿಶಯೋಕ್ತಿಯಲ್ಲವೆಂದೇ ತೋರುತ್ತಲಿದೆ. ನಿನ್ನ ಕುದುರೆಗಳ ದೆಸೆಯಿಂದಲೇ ನನಗೆ ಆ ಪ್ರಖ್ಯಾತಪುರುಷನ ಪರಿಚಯವಾಯಿತು. ಅವನ ವಿಚಾರವನ್ನು ಕೂಲಂಕಷವಾಗಿ ತಿಳಿದುಕೊಳ್ಳಬೇಕೆಂಬ ಕುತೂಹಲವು ನನಗೆ ಉಂಟಾಗಿದೆ. ನೀನು ಯಾವುದಾದರೂ ಒಂದು ನೆಪದಿಂದ ಆ ರಾಜನನ್ನು ನಿನ್ನ ಮನೆಗೆ ಕರೆಸು; ನಾನೂ ಬರುತ್ತೇನೆ. ಆಗ ನಾವಿಬ್ಬರೂ ಕಲೆತು ಅವನ ಸಂಗಡ ಮಾತನಾಡಬಹುದು.

"ನಮ್ಮ ಯಜಮಾನರನ್ನು ಅವನ ಬಳಿಗೆ ಕಳುಹಿಸುವೆನು. ಅವರು ಅಲ್ಲಿಗೆ ಹೋದರೆ ಅವನು ಒಂದು ಸಾರಿಯಾದರೂ ನಮ್ಮ ಮನೆಗೆ ಬಾರದೆ ಇರನು. ಆಗ ನಿನ್ನನ್ನೂ ಕರೆಸುವೆನು. ನಿನ್ನ ಬಂಡಿಯು ಶಿಥಿಲವಾಗಿದೆ; ಅದನ್ನು ಸರಿಪಡಿಸಿ ಕಳುಹಿಸಿ ಕೊಡುವೆನು."

ಇತಿ,<br>
ನಿನ್ನ ಪ್ರಿಯ ಸಖಿ ನಾಗಮಣಿ.

---

# ಮೂವತ್ತನಾಲ್ಕನೆಯ ಅಧ್ಯಾಯ

## ದಾರ್ಶನಿಕ ಶಾಸ್ತ್ರ

ಮಲಯಸಿಂಹನು ಅಮರಪುರದಲ್ಲೇ ಬಹುಕಾಲ ವಾಸವಾಗಿದ್ದು ಅಲ್ಲಿಯ ದೊಡ್ಡವರ ನಡತೆಗಳನ್ನು ಚೆನ್ನಾಗಿ ಅರಿತಿದ್ದರೆ ವಲ್ಲಭದೇವನ ಆಗಮನದಿಂದ ತನಗುಂಟಾದ ಗೌರವವಿಶೇಷವು ಅವನಿಗೆ ಪರಿಷ್ಕಾರವಾಗಿ ಗೊತ್ತಾಗುತ್ತಲಿದ್ದಿತು. ರಾಜಾಸ್ಥಾನದಲ್ಲಿ ಗೌರವವನ್ನು ಸಂಪಾದಿಸಿ, ಜನರಲ್ಲಿ ಬುದ್ಧಿವಂತನೆಂದೆಣಿಸಲ್ಪಟ್ಟು, ವಲ್ಲಭದೇವನು ಯಾವಾಗಲೂ ತನ್ನ ಮೇಲುಪಟ್ಟವರ ಜತೆಯಲ್ಲಿಯೇ ಸ್ನೇಹವನ್ನು ಬೆಳೆಸುತ್ತಲಿದ್ದನು. ನಾವೇ ನಮ್ಮನ್ನು ಗೌರವಿಸಿಕೊಳ್ಳದಿದ್ದರೆ ಇತರರು ಹೇಗೆ ತಾನೇ ನಮ್ಮನ್ನು ಗೌರವಿಸಾರು ಎಂದು ಆತನು ತಿಳಿದುಕೊಂಡು, ತನ್ನ ಮಿತ್ರರಿಗೆ ರಕ್ಷಕನಾಗಿಯೂ ಶತ್ರುಗಳಿಗೆ ಶಿಕ್ಷಕನಾಗಿಯೂ ಉದಾಸೀನರಿಗೆ ನ್ಯಾಯಸ್ತಂಭನಾಗಿಯೂ ಇದ್ದನು.

ಇಂಥ ಪ್ರಸಿದ್ಧ ನ್ಯಾಯಾಧಿಕಾರಿಯ ಬಂಡಿಯು ಮಲಯಸಿಂಹನ ಮನೆಯ ಮುಂದೆ ಬಂದು ನಿಂತಿತು. ಅವನು ಬರುವನೆಂಬುದನ್ನು ತಿಳಿದು ಮಲಯಸಿಂಹನು ಒಂದು ಭೂಪಟವನ್ನು ಕಯ್ಯಲ್ಲಿಟ್ಟುಕೊಂಡು ನೋಡುತ್ತ ಲಿದ್ದನು. ವಲ್ಲಭದೇವನು ನ್ಯಾಯಸ್ಥಾನವನ್ನು ಪ್ರವೇಶ ಮಾಡುವಂತೆ ಗಾಂಭೀರ್ಯವನ್ನು ತಾಳಿ ರಾಜನ ಮನೆಯೊಳಗೆ ಪ್ರವೇಶಮಾಡಿದನು.

ವಲ್ಲಭದೇವದ ಮುಖದಲ್ಲಿ ಮುಪ್ಪಿನ ಗುರುತುಗಳು ತಲೆಹಾಕುತ್ತಲಿದ್ದುವು. ಆದರೂ ಹಿಂದೆ ನಾವು ಮಲಯಪಟ್ಟಣದಲ್ಲಿ ಅವನನ್ನು ನೋಡಿದಾಗ ಹೇಗೆ ಇದ್ದನೋ ಹಾಗೆಯೇ ಇದ್ದನು. ಮಲಯಸಿಂಹನು ತನ್ನ ಮನೋಭಾವವನ್ನು ಮುಖದಿಂದ ಇತರರಿಗೆ ಎಳ್ಳಷ್ಟಾದರೂ ತೋರ್ಪಡಿಸದಿರುವ ಶಕ್ತಿಯುಳ್ಳವನಾಗಿದ್ದರೂ, ವಲ್ಲಭದೇವನು ಇದಿರಿಗೆ ಬಂದು ನಿಂತು ನಮಸ್ಕಾರ ಮಾಡಲು, ಅವನನ್ನು ಪರಿಶೋಧಿಸಬೇಕೆಂಬ ತನಗಿದ್ದ ಕುತೂಹಲವನ್ನು ಸ್ವಲ್ಪ ವ್ಯಕ್ತಪಡಿಸಿ, ಹೃದಯವನ್ನು ಭೇದಿಸಿ ಅದರ ವ್ಯಾಪಾರವನ್ನು ತಿಳಿಯಲಾಸಕ್ತಿಯುಳ್ಳವನಂತೆ ಅವನ ಮುಖವನ್ನೇ ನೋಡತೊಡಗಿದನು. ವಲ್ಲಭದೇವನೋ, ಮಲಯಸಿಂಹನ ಮುಖವನ್ನು ನೋಡಿದ ಕೂಡಲೇ ಇವನು ಪ್ರಖ್ಯಾತ ಪುರುಷನಾಗಿದ್ದರೂ ದೇಶ ಸಂಚಾರ ಮಾಡುತ್ತ ಸಾಹಸಕಾರ್ಯಗಳಲ್ಲಿ ಉದ್ಯುಕ್ತನಾದವನಾಗಿಯೋ, ಅಥವಾ ಬಂದಿಶಾಲೆಯಿಂದ ತಪ್ಪಿಸಿಕೊಂಡು ಬಂದ ಸೆರೆಯವಳಾಗಿಯೋ ಇರಬೇಕಲ್ಲದೆ ಎಷ್ಟು ಮಾತ್ರವೂ ರಾಜನು ಬೇರೆ ಅಲ್ಲವೆಂದು ನಿಶ್ಚಯಿಸಿಕೊಂಡು, ಅವನನ್ನು ರಾಜನೆಂದು ಕರೆಯಲು ಇಷ್ಟವಿಲ್ಲದೆ "ಮಲಯಸಿಂಹರೇ ! ನನ್ನ ಹೆಂಡತಿ ಮಕ್ಕಳಿಗೆ ನೀವು ಇಂದು ಮಾಡಿದ ಉಪಕಾರಕ್ಕಾಗಿ ನಿಮ್ಮನ್ನು ಕಂಡು ವಂದಿಸುವುದು ನನ್ನ ಕರ್ತವ್ಯವೆಂದು ನಿಮ್ಮ ಮನೆಗೆ ಬಂದೆನು" ಎಂದನು.

ಅದಕ್ಕೆ ಮಲಯಸಿಂಹನು ನಸುನಗುತ್ತ "ಈ ಅಲ್ಪ ಕಾರ್ಯಕ್ಕಾಗಿ ತಾವು ಇಷ್ಟು ದೂರ ಬರಬೇಕೇ ? ವಿಶೇಷ ಗೌರವಸ್ಥರಾದುದರಿಂದ ತಾವು ಆರಮನೆಗೆ ಕೂಡ ಹೋಗುವುದಿಲ್ಲ ಎಂದು ಕೇಳಿದ್ದೇನೆ. ಹೀಗಿರುವಲ್ಲಿ ಈ ನನ್ನ ಮನೆಗೆ ತಾವು ಬಿಜಯಮಾಡಿಸಿದುದರಿಂದ ನನಗೆ ವಿಶೇಷ ಗೌರವವನ್ನು ತೋರಿಸೋಣವಾಯಿತು. ತಂದೆಗಿಂತ ತಾಯಿಗೆ ಮಕ್ಕಳಲ್ಲಿ ಹೆಚ್ಚು ವಾತ್ಸಲ್ಯವೆಂಬುದು ತಮಗೆ ತಿಳಿಯದ ಸಂಗತಿಯಲ್ಲ. ಸನ್ನಿಹಿತವಾಗಿದ್ದ ವಿಪತ್ತನ್ನು

ತಪ್ಪಿಸಿ ತಾಯಿಮಕ್ಕಳಿಬ್ಬರನ್ನೂ ಸುರಕ್ಷಿತರನ್ನಾಗಿ ಮನೆಗೆ ಸೇರಿಸಿದ ಸಂತೋಷಕ್ಕಿಂತಲೂ ತಮ್ಮ ಆಗಮನದಿಂದುಂಟಾದ ಗೌರವವು ಹೆಚ್ಚೆಂದು ತೋರುವುದಿಲ್ಲ" ಎನ್ನಲು, ವಾಗಸ್ತ್ರಪ್ರಯೋಗದಲ್ಲಿ ತಾನೇ ನಿಪುಣನೆಂದೆಣಿಸಿಕೊಂಡಿದ್ದ ವಲ್ಲಭದೇವನು ಆಶ್ಚರ್ಯಪಟ್ಟು "ಈ ಅಸ್ತ್ರಗಳು ನನ್ನ ಕಬ್ಬಿಣದ ಕವಚವನ್ನೂ ಭೇದಿಸಿ ಮನಸ್ಸನ್ನು ಇರಿಯುತ್ತಲಿವೆ. ಇವನು ಹೀಗೆ ಮಾತನಾಡುವನೆಂದು ನಾನು ಕನಸಿನಲ್ಲಿಯೂ ಕಂಡಿರಲಿಲ್ಲ" ಎಂದು ತನ್ನೊಳು ತಾನೇ ಹೇಳಿಕೊಂಡು ಪ್ರಸ್ತಾಪವನ್ನು ಬದಲಾಯಿಸಲೋಸುಗ ಸುತ್ತಮುತ್ತ ನೋಡಿ, ಮಲಯಸಿಂಹನು ಹಿಡಿದಿದ್ದ ಭೂಪಟವನ್ನು ಕಂಡು

"ಓಹೋ! ನೀವು ಭೂಗೋಳಶಾಸ್ತ್ರ ಅಭ್ಯಸಿಸುವಂತೆ ತೋರುತ್ತಲಿದೆ. ನೀವು ಲೋಕಸಂಚಾರಿಗಳಲ್ಲವೇ ? ಆದುದರಿಂದಲೇ ಆ ಶಾಸ್ತ್ರದ ಪರಿಚಯವು ನಿಮಗೆ ಅತ್ಯವಶ್ಯಕ."

"ಕ್ಷಮಿಸಬೇಕು. ಇದು ಭೂಗೋಳಶಾಸ್ತ್ರವಲ್ಲ. ಇದನ್ನು ಅಧ್ಯಾತ್ಮಿಕ ಶಾಸ್ತ್ರವೆಂದು ಹೇಳುತ್ತಾರೆ. ತಮ್ಮಂಥಾ ನ್ಯಾಯಾಧಿಪತಿಗಳು ಆಯಾಯ ದೇಶದಲ್ಲಿರುವ ಪ್ರತಿಯೊಬ್ಬ ಮನುಷ್ಯನನ್ನೂ ಪ್ರತಿನಿತ್ಯವೂ ಪರೀಕ್ಷಿಸಿ ಆಯಾಯ ದೇಶದ ಜನರ ವಿಷಯವಾಗಿ ಕಲ್ಪಿಸುವುದನ್ನು ನಾನು ಮನುಷ್ಯ ಜಾತಿಯಿಂದ ಪ್ರಾರಂಭಿಸಿ ಪ್ರತಿಯೊಂದು ದೇಶದ ಪ್ರತಿಯೊಬ್ಬನ ವಿಷಯವಾಗಿಯೂ ಕಲ್ಪಿಸುತ್ತೇನೆ. ಆರೋಹಣಕ್ರಮಕ್ಕಿಂತ ಅವರೋಹಣ ಕ್ರಮದಲ್ಲಿ ಪ್ರಮಾದವು ಕಡಿಮೆಯೆಂಬುದು ತಮಗೆ ತಿಳಿದಿರಬಹುದು"

ಎಂದು ಹೇಳಿ "ಓಹೋ ! ತಾವು ನಿಂತೇ ಇದ್ದೀರಿ" ಎಂದು ಸಮೀಪದಲ್ಲಿದ್ದ ಕುರ್ಚಿಯನ್ನು ತೋರಿಸಲು ವಲ್ಲಭದೇವನು ಅದರಲ್ಲಿ ಕುಳಿತನು.

"ಅಯ್ಯಾ ಮಲಯಸಿಂಹರೇ ! ಮಾಡುವುದಕ್ಕೆ ಬೇರೆ ಕೆಲಸವಿಲ್ಲದಿದ್ದರೆ ಈ ಶಾಸನವನ್ನು ಓದುತ್ತ ವಿನೋದವಾಗಿ ಹೊತ್ತು ಹೋಗಿಸಬಹುದು."

"ಬ್ರಹ್ಮನ ನೇತ್ರದಿಂದ ನೋಡಿದರೆ ಮನುಷ್ಯನು ಒಂದು ಕೀಟವು ; ಈ ಕೀಟದ ಮರ್ಮವನ್ನು ತಿಳಿದು ಅದರ ಜನ್ಮವು ಸಾರ್ಥಕವಾಗುವಂತೆ ಮಾಡುವುದಕ್ಕಿಂತ ಬೇರೆ ಕೆಲಸವಾವುದುಂಟು ? ನನಗೆ ಬೇರೆ ಕೆಲಸವಿಲ್ಲದಿದ್ದುದರಿಂದ ಇದನ್ನು ಓದುತ್ತೇನೆಂದು ನೀವು ಹೇಳುವಂತೆ ಅಭಿಪ್ರಾಯವಾಗು

ವುದು. ಹಾಗೆಯೇ ನೋಡಿದರೆ, ನಿಜವಾಗಿಯೂ ನಿಮಗೇನು ಕೆಲಸವಿದೆ ? ನೀವು ಮಾಡುವುದನ್ನು ಕೆಲಸವೆಂದು ಹೇಳಬಹುದೋ ? ನೀವೇ ಯೋಚಿಸಿ ನೋಡಿ”

ಎನ್ನಲು, ಮಲಯಸಿಂಹನ ಮಾತಿಗೆ ವಲ್ಲಭದೇವನು, ಇದುವರೆಗೆ ಈರೀತಿ ಮಾತಿನಲ್ಲಿ ನನ್ನನ್ನು ಸೋಲಿಸಿದವರಾರೂ ಇಲ್ಲ ; ಇವನೊಬ್ಬ ಅಸಾಧ್ಯ ಎಂದು ಯೋಚಿಸಿ,

“ಅಯ್ಯಾ ! ನೀವು ಪೂರ್ವದೇಶಗಳಲ್ಲಿಯೇ ಓಡಾಡುತ್ತಲಿರುವುದರಿಂದ ಇಲ್ಲಿಯ ನ್ಯಾಯಕ್ರಮವನ್ನೇ ಆಗಲಿ ನ್ಯಾಯಾಧಿಪತಿಗಳ ಕೆಲಸವನ್ನೇ ಆಗಲಿ ಅರಿಯಿರಿ.”

“ನಾನು ಎಲ್ಲಾ ದೇಶದ ನ್ಯಾಯಕ್ರಮಗಳನ್ನೂ, ನ್ಯಾಯಾಧಿಪತಿಗಳನ್ನೂ ಬಲ್ಲೆನು. ಅಷ್ಟೇ ಅಲ್ಲದೆ ಅವುಗಳನ್ನು ಒಂದಕ್ಕೊಂದು ಹೋಲಿಸಿ ಒಂದು ಸಿದ್ಧಾಂತ ಮಾಡಿ ಇಟ್ಟುಕೊಂಡಿರುವೆನು.”

“ಅದೇನು ಸಿದ್ಧಾಂತ ?”

“ಪೂರ್ವಕಾಲದಲ್ಲಿ ಮುಯ್ಯಿಗೆ ಮುಯ್ಯಿ ಎಂಬ ನ್ಯಾಯವೇ ಸರಿಯೆಂಬುದು.”

“ಈ ನ್ಯಾಯವನ್ನಿಟ್ಟುಕೊಂಡರೆ ಧರ್ಮಶಾಸ್ತ್ರವೂ ಬೇಡ, ನ್ಯಾಯಾಧಿಪತಿಗಳೂ ಬೇಡ.”

“ಇದ್ದು ತಾನೇ ಏನು ಪ್ರಯೋಜನ? ಯಾವನಾದರೂ ಒಬ್ಬ ನ್ಯಾಯಾಧಿಪನು ದ್ವೇಷಾಸೂಯೆಗಳಿಂದಲೋ ಮಹತ್ವಾಕಾಂಕ್ಷೆಯಿಂದಲೋ ಸುಳ್ಳು ಕಾಗದ ಪತ್ರಗಳನ್ನು ಹವಣಿಸಿಕೊಂಡು ನಿರಪರಾಧಿಯಾದವನೊಬ್ಬನನ್ನು ಶಿಕ್ಷಿಸಿದರೆ, ಆಗ ನ್ಯಾಯವೆಲ್ಲಿಯದು ? ಧರ್ಮಶಾಸ್ತ್ರವಿದ್ದೇನು ? ನ್ಯಾಯಾಧಿಪರಿದ್ದೇನು ? ಮುಂದೆ ಹೋಗುತ್ತ ಹೋಗುತ್ತ ತಾವು ಹೇಳಿದಂತೆಯೇ ಆಗಿ ನನ್ನ ಸಿದ್ಧಾಂತವೇ ಸರಿಯೆಂದಾಗುವುದು.”

“ಅಲ್ಲಿಯವರೆಗೆ ಈ ದೇಶದ ಧರ್ಮಶಾಸ್ತ್ರದಂತೆ ಇಲ್ಲಿ ಶಿಕ್ಷೆರಕ್ಷೆಗಳು ನಡೆಯುವುವು. ನಾನಾದೇಶದ ಧರ್ಮಶಾಸ್ತ್ರಗಳನ್ನು ಕಲಿಯುವುದರಲ್ಲಿ ನಿಮ್ಮ ಉದ್ದೇಶವೇನು ?”

ಎಂದು ವಲ್ಲಭದೇವನು ಕೇಳಲು, ಮಲಯಸಿಂಹನು ಸ್ವಲ್ಪ ನಕ್ಕು,

"ಎಷ್ಟು ದೊಡ್ಡವರಾದರೇನು ? ಎಷ್ಟು ವಿದ್ಯಾವಂತರಾದರೇನು ? ಅವರವರ ಸ್ವಭಾವಗಳು ಎಂದೂ ತಲೆಎತ್ತದಿರವು. ತಾತ್ಕಾಲಿಕವಾದ ಭೌತಿಕಪ್ರಯೋಜನದಿಂದ ಕಾರ್ಯಗಳ ಫಲಗಳನ್ನು ನಿರ್ಣಯಿಸುವುದು ತಪ್ಪೆಂಬುವುದು ತಮ್ಮಂಥಾ ಪ್ರಾಜ್ಞರಿಗೆ ತಿಳಿಯದಿರುವುದು ಅತ್ಯಾಶ್ಚರ್ಯವೇ ಸರಿ.''

"ನಿಮ್ಮ ಅಭಿಪ್ರಾಯವು ನನಗೆ ಗೊತ್ತಾಗಲಿಲ್ಲ."

"ಹಾಗಾದರೆ ಹೇಳುತ್ತೇನೆ ಕೇಳಿ. ಈ ಪ್ರಪಂಚವು ಒಂದು ದೊಡ್ಡ ಯಂತ್ರ. ಇದರಲ್ಲಿ ಯಾವುದೋ ಒಂದು ಭಾಗವನ್ನು ನೋಡಿ, ಅದು ಯಂತ್ರದಲ್ಲಿ ಒಂದು ಭಾಗವೆಂಬುದನ್ನೂ, ಆ ಯಂತ್ರಕ್ಕೆ ಇತರ ಭಾಗಗಳು ಉಂಟೆಂಬುದನ್ನೂ, ಆ ಯಂತ್ರವನ್ನು ನಡೆಸುವ ಪರಮಪುರುಷನೊಬ್ಬನು ಪ್ರತ್ಯೇಕವಿರುವನೆಂಬುದನ್ನೂ ಮರೆತು, ಅವನ ಅನುಗ್ರಹಕ್ಕೆ ಪಾತ್ರವಾಗಲು ಮಾಡಬೇಕಾದುದನ್ನು ಮಾಡದೆ, ಇಹಲೋಕ ವ್ಯಾಪಾರವೇ ದೊಡ್ಡದೆಂತಲೂ ಮೇಲುಪಟ್ಟ ಅಧಿಕಾರಿಗಳೇ ಪರಮದೇವತೆಗಳೆಂತಲೂ ಭಾವಿಸಿ, ಇದಿರಿಗಿರುವವರು ಯಾರೆಂಬುದನ್ನೇ ತಿಳಿಯದೆ ಮೂಢರಾಗಿರುವಿರಿ ; ದುಷ್ಟರನ್ನು ನಿಗ್ರಹಿಸಿ ಶಿಷ್ಟರನ್ನು ಪರಿಪಾಲಿಸಲೋಸುಗ ದೇವರು ಅಲ್ಲಲ್ಲಿ ಮಹಾಪುರುಷರನ್ನು ನಿರ್ಮಿಸಿರುವನೆಂಬುದನ್ನೂ, ಅಯ್ಯೋ ಪಾಪ ! ನೀವು ಕಾಣಿರಿ."

"ಹಾಗಾದರೆ ತಾವು ಅಂತಹ ಮಹಾಪುರುಷರೋ ?''

"ಏಕೆ ಆಗಬಾರದು ?"

"ನಾನಿಲ್ಲಿಗೆ ಬರುವಾಗ ಇದು ನನಗೆ ತಿಳಿದಿರಲಿಲ್ಲ. ಕ್ಷಮಿಸಬೇಕು."

''ಬಹುಕಾಲದಿಂದ ನ್ಯಾಯಾಧಿಪತಿಯಾಗಿದ್ದು ಪ್ರಜ್ಞಾಶಾಲಿಗಳೆಂದು ಹೆಸರನ್ನು ಪಡೆದು ಇದಿರಿಗೆ ಇಂಥಾವರಿರುವರೆಂಬುದನ್ನೇ ತಿಳಿಯದಿದ್ದರೆ, ನಾನು ಏನು ಹೇಳಲಿ ?"

''ಅಯ್ಯಾ ! ನಿಮ್ಮಂತೆ ವಾದಿಸುವವರನ್ನು ಇದುವರೆಗೆ ನಾನೆಲ್ಲಿಯೂ ನೋಡಲಿಲ್ಲ. ನಿಮ್ಮನ್ನು ಸೋಲಿಸಲು ನನ್ನಿಂದಾಗದು."

''ಇದರ ಕಾರಣ ತಮಗೆ ತಿಳಿಯುವುದೋ ?"

''ಇಲ್ಲ"

''ನೀವು ಯಾವಾಗಲೂ ಅಧಿಕಾರವೇ ಪ್ರಧಾನ, ಮೇಲಿನ ಅಧಿಕಾರಿಗಳೇ ಪರಮದೇವತೆಗಳು ಎಂದು ಇರುವಿರಿ. ಪಾಪಿಷ್ಟರಿಗೆ ಕಾಣಿಸಿಕೊಳ್ಳದೆ

ಪುಣ್ಯಭೂಮಿಗಳಲ್ಲಿ ನೆಲೆಗೊಂಡಿರುವ ಮಹಾತ್ಮರ ಪಾದಗಳನ್ನು ಆಶ್ರಯಿಸದೆ ಇರುವುದೇ ಇದಕ್ಕೆ ಕಾರಣ."

"ಅಂತಹ ಮಹಾತ್ಮರೂ ಇರುವರೆಂದು ನೀವು ನಂಬುವಿರೋ ?"

"ಕಣ್ಣಿಗೆ ಕಾಣದಿದ್ದರೂ ಗಾಳಿಯನ್ನು ಇಲ್ಲವೆಂದು ಹೇಳಲಾದೀತೋ. ಅದಿಲ್ಲದಿದ್ದರೆ ನಾವು ಒಂದು ನಿಮಿಷವಾಗಲಿ ಬದುಕಲಾಪೆವೋ ?"

"ಹಾಗಾದರೆ ಅಂತಹ ಮಹಾತ್ಮರನ್ನು ಕಾಣುವುದು ಅಸಾಧ್ಯ. ಅಸಾಧ್ಯವಾದುದನ್ನು ಕಾಣಲು ಪ್ರಯತ್ನ ಮಾಡಿದರೇನು ಪ್ರಯೋಜನ ?"

"ಹಾಗೆನ್ನಬೇಡಿ. ನೀವು ಪ್ರಯತ್ನ ಮಾಡಿದರೆ ದೈವಾನುಗ್ರಹ ವುಂಟಾಗಿ ಮಹಾತ್ಮರು ಗೋಚರವಾಗುವರು. ದೈವಾನುಗ್ರಹವಿಲ್ಲದಿದ್ದರೆ ಅವರು ನಿಮ್ಮ ಸಂಗಡ ಓಡಾಡುತ್ತ ಮಾತನಾಡುತ್ತಲಿದ್ದರೂ ನಿಮಗೆ ಅವರಾರೆಂಬುದು ತಿಳಿಯಲಾಗದು ; ಅಥವಾ ಇವರೇ ಎಂದು ತೋರಿಸಿಕೊಟ್ಟರೂ ನಂಬಲಾರಿರಿ."

"ಅಂಥವರಾರಾದರೂ ಇದ್ದರೆ ಮೊದಲು ತಿಳಿಸಿರಿ ; ಅವರು ನನ್ನಿದಿರಿಗೆ ಬಂದು ನಿಲ್ಲಲಿ. ಅವರನ್ನು ನೋಡುವೆನು."

"ಇದನ್ನು ನಾನು ಮೊದಲೇ ನಿಮಗೆ ಸೂಚಿಸಿದ್ದೇನೆ. ಈಗಲೂ ಸೂಚನೆ ಕೊಡುತ್ತೇನೆ."

"ನೀವು ಹೇಳುವುದನ್ನು ಕೇಳಿದರೆ ನೀವೂ ಒಬ್ಬ ಮಹಾಪುರುಷರೆಂದು ತೋರುತ್ತಲಿದೆ."

"ಹಾಗೆಯೇ ತಿಳಿದುಕೊಳ್ಳಿರಿ. ಇದುವರೆಗೆ ನನ್ನ ಸ್ಥಿತಿಗೆ ಯಾರೂ ಬಂದಿಲ್ಲ. ರಾಜ್ಯಕ್ಕೆ ನದಿ, ಸಮುದ್ರ, ಪರ್ವತ ಮುಂತಾದ ಎಲ್ಲೆಗಳುಂಟು. ಈ ಭೂಮಂಡಲವೇ ನನ್ನ ರಾಜ್ಯ ; ಇದರ ಎಲ್ಲೆಗಳೇ ನನ್ನ ರಾಜ್ಯದ ಎಲ್ಲೆಗಳು. ನಾನು ಎಲ್ಲಾ ದೇಶಭಾಷೆಗಳನ್ನೂ ಕಲಿತು ಆಯಾಯ ದೇಶದವರಂತೆ ಮಾತನಾಡುತ್ತೇನೆ. ಆದುದರಿಂದ ಆಯಾಯ ದೇಶದವರು ನನ್ನನ್ನು ತಮ್ಮ ತಮ್ಮ ದೇಶಕ್ಕೆ ಸೇರಿದವನೆಂದು ಹೇಳುತ್ತಾರೆ. ನಾನು ಇಂತಹ ದೇಶದವನೆಂದು ಯಾರೂ ಅರಿಯರು. ನನ್ನ ಜನನ ಭೂಮಿಯಿದು ಎಂದು ಯಾರಿಗೂ ಗೊತ್ತಿಲ್ಲ. ಮರಣಭೂಮಿ ಯಾವುದೋ ದೇವರೇ ಬಲ್ಲ. ನಾನು ಯಾವ ದೇಶಕ್ಕೂ ಸೇರದೆ ಸರ್ವತ್ರ ವಾಸಿಸುವೆನು. ಯಾವ ದೇಶಕ್ಕೂ

ಸೇರದ ಯಾವ ರಾಜನ ರಕ್ಷಣೆಗೂ ಒಳಪಡದೆ ಒಬ್ಬ ಮನುಷ್ಯನನ್ನಾದರೂ ಒಡಹುಟ್ಟಿದವನೆಂದು ಭಾವಿಸದೆ ಇರುವುದರಿಂದಲೇ ಬಲಿಷ್ಟರಿಗಿರುವ ವಿಕಲ್ಪಗಳಾಗಲಿ ದುರ್ಬಲರಿಗಿರುವ ವ್ಯಾಘಾತಗಗಳಾಗಲೀ ಯಾವುವೂ ನನಗಿಲ್ಲ. ಆದರೆ ನನಗೆ ಕಾಲ ದೇಶಗಳೆಂಬ ಎರಡು ಶತ್ರುಗಳುಂಟು. ಅವುಗಳನ್ನೂ ನನ್ನ ಸಾಹಸದಿಂದ ಜಯಿಸಬಲ್ಲೆನು. ಇವುಗಳೆಲ್ಲಕ್ಕಿಂತಲೂ ಭಯಂಕರವಾದುದು ಮೃತ್ಯು. ಅದನ್ನು ಜಯಿಸಲು ಅಸಾಧ್ಯ. ಆದರೆ ಮೃತ್ಯುವು ನನ್ನ ಬಳಿಗೆ ಬರುವುದರೊಳಗಾಗಿಯೇ ನಾನು ಉದ್ದೇಶಿಸಿರುವ ಕಾರ್ಯಗಳನ್ನು ಮುಗಿಸಬಿಡಬೇಕೆಂದಿದ್ದೇನೆ. ಸತ್ತರೆ ಹೊರತು, ನಾನು ಹೀಗೆಯೇ ಆಗಲೂ ನನ್ನ ಕೆಲಸಗಳನ್ನು ನೆರವೇರಿಸುತ್ತಲಿರುವೆನು. ದೊರೆಗಳಿಗೇ ನಿಮ್ಮ ದಾಕ್ಷಿಣ್ಯ ಬೇಕು, ಅದರಲ್ಲಿ ಸಾಧಾರಣರಿಗಂತೂ ಹೇಳಬೇಕೇ. ನನಗಾದರೋ ಒಬ್ಬರ ದಾಕ್ಷಿಣ್ಯವೂ ಅವಶ್ಯಕವಿಲ್ಲ.

''ನೀವು ಅಮರದೇಶದಲ್ಲಿ ಕಾಲಿಟ್ಟಕೂಡಲೇ ಈ ರಾಜ್ಯದ ಕಟ್ಟಳೆಗಳಿಗೆ ಬದ್ಧರಾಗಿರುತ್ತೀರಿ; ಆದುದರಿಂದ ನಿಮಗೆ ಇಲ್ಲಿಯ ನ್ಯಾಯಾಧಿಪತಿಯ ದಾಕ್ಷಿಣ್ಯವು ಬೇಕೇಬೇಕು."

"ಅವಶ್ಯಕವಿಲ್ಲ. ನಾನು ಎಲ್ಲಾದೇಶದ ನ್ಯಾಯಗಳನ್ನೂ ಓದಿ ಆಯಾಯ ನ್ಯಾಯಾಧಿಪತಿಗಳ ಗುಣದೋಷಗಳನ್ನೂ ಕೃತ್ಯಾಕೃತ್ಯಗಳನ್ನೂ ತಿಳಿದಿರುವೆನು. ನನ್ನ ಸಮಾಚಾರವಾವುದನ್ನೂ ಇತರರಿಗೆ ತಿಳಿಸದೆಯೇ ಎಲ್ಲರ ಸಮಾಚಾರವನ್ನೂ ನಾನು ತಿಳಿದು ಕೊಳ್ಳಬಲ್ಲೆನು. ಆದುದರಿಂದಲೇ ನಾನು ನಿರ್ಭೀತನಾಗಿಯೂ ಇತರರು ನನ್ನಲ್ಲಿ ಭಯವುಳ್ಳವರಾಗಿಯೂ ಇರುವರು.''

"ಹಾಗಾದರೆ ನ್ಯಾಯಾಧಿಪತಿಗಳೆಲ್ಲರೂ ತಪ್ಪಿತಸ್ಥರು; ನೀವು ಒಬ್ಬರು ಮಾತ್ರ ನಿರ್ದೋಷಿಗಳೋ?''

"ಅವರು ತಪ್ಪಿತಸ್ಥರೋ ಪಾತಕಿಗಳೋ ಆ ಮಾತು ನನಗೇಕೆ? ನಿಮ್ಮ ನ್ಯಾಯವೆಂದರೆ ನನಗೆ ನಿರ್ಭಯ; ನನ್ನ ಜ್ಞಾನದೃಷ್ಟಿಯೆಂದರೆ ನಿಮಗೂ ನಿರ್ಭಯವಾಗಿರಬಹುದು. ಈ ಪ್ರಸ್ತಾಪವು ನಿಮ್ಮ ಚಿತ್ತಕ್ಕೆ ಸಮಾಧಾನಕರವಲ್ಲದಿದ್ದಲ್ಲಿ, ಇದನ್ನು ಇಲ್ಲಿಗೆ ನಿಲ್ಲಿಸಿಬಿಡೋಣ.''

"ನೀವು ಮಾಡುವ ತತ್ವಬೋಧನೆಯು ಜ್ಞಾನೋದಯವನ್ನುಂಟುಮಾಡಿ ನಮ್ಮಂಥ ಮೂಢರನ್ನೂ ಉತ್ಕೃಷ್ಟರನ್ನಾಗಿ ಮಾಡುವುದು. ನೀವು

ಸಾಮಾನ್ಯರಲ್ಲ; ಆದರೂ ನಿಮ್ಮ ಅಹಂಕಾರವನ್ನು ನೋಡಿದರೆ ನಿಮ್ಮಮೇಲೆ ದೇವರೊಬ್ಬನಿದ್ದಾನೆ ಎಂಬುದನ್ನು ಮರೆತಿದ್ದೀರೆಂದು ತೋರುತ್ತದೆ."

"ನನ್ನಮೇಲೆ ಮಾತ್ರವೇ? ನಿಮ್ಮ, ನನ್ನ, ಮತ್ತು ಈ ಲೋಕದ ಸಮಸ್ತ ಚರಾಚರವಸ್ತುಗಳೆಲ್ಲರಮೇಲೆಯೂ ಇದ್ದಾನೆ ಎನ್ನಿರಿ ಎಂದು 'ನಿಮ್ಮ' ಎಂಬ ಪದವನ್ನು ಒತ್ತಿಹೇಳಿ, ಅಜ್ಞಾತನಾಗಿಯೂ ನಿಷ್ಪ್ರಯೋಜಕನಾಗಿಯೂ ಇದ್ದ ನನ್ನನ್ನು ಈ ಸ್ಥಿತಿಗೆ ತಂದ ಆ ದೇವರನ್ನು ಎಂದಿಗೆ ತಾನೇ ನಾನು ಮರೆತೇನು?"

ಇದುವರೆಗೆ ಮಲಯಸಿಂಹರನ್ನು ರಾಜನೆಂದು ಕರೆಯದಿದ್ದ ವಲ್ಲಭದೇವನನು, ಈಗ ರಾಜರೇ ಎಂದು ಸಂಭೋದಿಸತೊಡಗಿ,

"ರಾಜರೇ! ನಿಮ್ಮ ಸಲ್ಲಾಪವು ಬಹು ರುಚಿಕರವಾಗಿಯೂ ಆಶ್ಚರ್ಯಕರವಾಗಿಯೂ ಇದೆ. ನೀವು ಯಾವುದೋ ಒಂದು ಉದ್ದೇಶವಿಟ್ಟುಕೊಂಡು ಈ ರೀತಿ ಮಾತನಾಡಿದಂತೆ ತೋರುತ್ತದೆ."

"ಉದ್ದೇಶವಿಲ್ಲದೆ ಲೋಕದಲ್ಲಿ ಯಾವನೂ ಯಾವ ಕೆಲಸವನ್ನೂ ಮಾಡನು. 'ಪ್ರಯೋಜನಮನುದ್ದಿಶ್ಯ ನಮಂದೋಪಿ ಪ್ರವರ್ತತೇ' ಎಂದು ಹೇಳುವ ಹಿರಿಯರ ಮಾತನ್ನು ಕೇಳಿ ಅರಿಯಿರಾ. ಒಂದಾನೊಂದು ಕಾಲದಲ್ಲಿ ನಾನು ಘೋರವಾದ ತಪಸ್ಸನ್ನು ಮಾಡಲು ಅದಕ್ಕೆ ಮೆಚ್ಚಿ ಒಬ್ಬ ಮಹಾಪುರುಷನು 'ನಿನಗೇನು ಬೇಕು, ಬೇಡು,' ಎಂದನು; ಅದಕ್ಕೆ ನಾನು 'ಸ್ವಾಮಿಾ! ದೇವರೊಬ್ಬನು ಉಂಟೆಂದು ಎಲ್ಲರೂ ಹೇಳುತ್ತಾರೆ, ಒಂದುದಿನವಾದರೂ ನಾನು ಅವನನ್ನು ನೋಡಿಲ್ಲ. ಅವನಿರುವುದು ಸತ್ಯವೇ, ಆದರೆ ಲೋಕದಲ್ಲಿ ಏತಕ್ಕೆ ಇಷ್ಟು ಅನ್ಯಾಯಗಳೂ ಪಾತಕಗಳೂ ನಡೆಯುತ್ತಿರುವುವು? ಪಾಪಿಗಳಿಗೆ ಏಕೆ ತಕ್ಕ ಶಿಕ್ಷೆಗಳಾಗುವುದಿಲ್ಲ. ಈ ವಿಷಯವನ್ನು ನನಗೆ ಚೆನ್ನಾಗಿ ಮನದಟ್ಟಾಗುವಂತೆ ತಿಳಿಸಬೇಕು,' ಎಂದು ಪ್ರಾರ್ಥಿಸಿದೆನು. ಆ ಮಹಾಪುರುಷನು 'ಅಪ್ಪಾ! ಪರಮಾತ್ಮನೊಬ್ಬನು ಇರುವುದು ಸತ್ಯ, ಅವನು ದುಷ್ಟರನ್ನು ನಿಗ್ರಹಿಸುವುದೂ ಸತ್ಯ; ಜ್ಞಾನಿಗಳಿಗೆ ವಿನಾ ಮತ್ತಾರಿಗೂ ಅವನು ಗೋಚರನಾಗನು. ಸದಾಚಾರ್ಯನನ್ನು ಆಶ್ರಯಿಸಿ ಜ್ಞಾನವನ್ನು ಸಂಪಾದಿಸಿ ನಿರಂತರ ಭಕ್ತಿಯಿಂದ ದೇವರನ್ನು ಪೂಜಿಸುತ್ತಲಿದ್ದರೆ ಅವನು ಪ್ರತ್ಯಕ್ಷನಾಗುವನು. ಜನರು ತಮ್ಮ ತಮ್ಮ ಪೂರ್ವಾರ್ಜಿತ ಪುಣ್ಯಪಾಪರೂಪವಾದ ಕರ್ಮಾನುಗುಣವಾಗಿ ಸುಖ ದುಃಖಗಳ

ನ್ನನುಭವಿಸುವರಲ್ಲದೆ ಆ ಪೂರ್ವಜನ್ಮಗಳ ವಾಸನೆಯಿಂದ ಪ್ರೇರಿತರಾಗಿ ಪುಣ್ಯವನ್ನೋ, ಪಾಪವನ್ನೋ ಮಾಡಿ ಮುಂದಿನ ಜನ್ಮಕ್ಕಾಗಿ ಸುಖದುಃಖಗಳನ್ನು ಗಳಿಸುತ್ತಲಿರುವರು. ದುಷ್ಕರ್ಮಗಳಿಗೆ ಶಿಕ್ಷೆಯಿಲ್ಲವೆಂದು ಎಂದಿಗೂ ತಿಳಿಯಬೇಡ. ಪೂರ್ವಜನ್ಮ ಸುಕೃತಾನುಭವಪ್ರಾಪ್ತಿಯಿದ್ದರೆ ಮೊದಲು ಸುಖಾನುಭವವಾಗಿ ಬಳಿಕ ಪಾಪಕ್ಕೆ ಶಿಕ್ಷೆಯು ಆಗುವುದು. ಬೆಂಕಿಯಲ್ಲಿ ಕೈಯಿಟ್ಟರೆ ಎಂದಿಗೂ ಸುಡದಿರದು' ಎಂದರು. 'ಸ್ವಾಮಿ! ನನ್ನದು ಇದೊಂದು ಅರಿಕೆ ಇದೆ. ಲೋಕದಲ್ಲಿ ದುಷ್ಟರನ್ನು ಶಿಕ್ಷಿಸಿ ಶಿಷ್ಟರಿಗೆ ಅನುಕೂಲಮಾಡುವುದಕ್ಕಿಂತ ಉತ್ತಮವಾದ ಕೆಲಸವಾವುದೂ ಇಲ್ಲವೆಂದು ಕೇಳಿದ್ದೇನೆ; ಆದುದರಿಂದ ಆ ಕೆಲಸಮಾಡಲು ಶಕ್ತಿಯನ್ನು ತಾವು ನನಗೆ ಕರುಣಿಸಬೇಕು'ಎಂದು ಪ್ರಾರ್ಥಿಸಲು ಅವರು 'ತಥಾಸ್ತು' ಎಂದು ಹೇಳಿ ಅಂತರ್ಧಾನರಾದರು.''

ಈ ಮಾತನ್ನು ಕೇಳಿ ವಲ್ಲಭದೇವನು ಬೆರಗಾಗಿ

"ರಾಜರೇ! ನಿಮಗೆ ಬಂಧುಗಳಾರಾದರೂ ಉಂಟೋ" ಎಂದು ಕೇಳಲು ರಾಜನು ಯಾರೂ ಇಲ್ಲ ಎಂದನು.

''ಹಾಗಾದರೆ ಕಷ್ಟ."

"ಕಷ್ಟವೇನು."

''ಮೃತ್ಯುವಿಗೆ ವಿನಾ ಇನ್ನಾವುದಕ್ಕೂ ಹೆದರುವುದಿಲ್ಲವೆಂದು ಹೇಳಿದಿರಿ; ನಾನೊಬ್ಬರನ್ನು ನಿಮಗೆ ತೋರಿಸುವೆನು. ಅವರ ಅವಸ್ಥೆಯನ್ನು ನೀವು ನೋಡಿದರೆ ನಿಮಗಿರುವ ಅಹಂಕಾರವು ನಿವೃತ್ತಿಯಾಗುವುದು."

"ನಾನು 'ಸತ್ತರೆ ವಿನಾ ಉದ್ದೇಶಿಸಿದ ಕೆಲಸವನ್ನು 'ಎಂದಿಗೂ ಮಾಡದೆ ಬಿಡೆನು'ಎಂದು ಹೇಳಿದನೇ ಹೊರತು ಸಾವಿಗೆ ಹೆದರುವೆನೆಂದು ಹೇಳಲಿಲ್ಲ."

'ಮೃತ್ಯುವಿಲ್ಲದಿದ್ದರೆ ವಾರ್ಧಿಕ್ಯವಿಲ್ಲವೇ?'

'ಮುಪ್ಪು ಬರುವುದಕ್ಕೆ ಮುಂದೆಯೇ ನನ್ನ ಕೆಲಸವನ್ನು ಪೂರೈಸಿಕೊಳ್ಳುವ ಏರ್ಪಾಡನ್ನು ಮಾಡಿಕೊಂಡಿದ್ದೇನೆ.'

'ಹುಚ್ಚು ಹಿಡಿದರೋ?'

'ಒಂದಾನೊಂದು ಕಾಲದಲ್ಲಿ ಹಿಡಿಯುವ ಸಂದರ್ಭವಿದ್ದು ದೈವಾಧೀನದಿಂದ ತಪ್ಪಿತು. ಇನ್ನು ಆ ಭಯವಿಲ್ಲ.'

''ರಾಜರೇ! ನಾವು ಭಯಪಡತಕ್ಕುದು ಮೃತ್ಯು, ಮುಪ್ಪು, ಹುಚ್ಚು.

ಇವುಗಳೇ ಅಲ್ಲ; ವಾತರೋಗವನ್ನು ನೋಡಿ! ಇದು ಇದ್ದಕ್ಕಿದ್ದಹಾಗೆ ಬಂದು ಕೈ, ಕಾಲು, ಬುದ್ಧಿಗಳನ್ನು ಸ್ವಾಧೀನ ತಪ್ಪಿಸಿ ಮನುಷ್ಯನನ್ನು ಜೀವಚ್ಛವದಂತೆ ಮಾಡಿಬಿಡುವುದು. ನಿಮಗನುಕೂಲವಿದ್ದಾಗ ನನ್ನ ಮನೆಗೆ ಬಿಜಯಮಾಡಿಸಿದರೆ ನನ್ನ ತಂದೆಯ ಸ್ಥಿತಿಯನ್ನು ತೋರಿಸುವೆನು. ಎಷ್ಟು ದೊಡ್ಡ ಕೆಲಸಗಳನ್ನು ಮಾಡುತ್ತ ದೃಢಾಂಗನಾಗಿದ್ದವನು ಆ ವಾಯುವಿನ ಚೇಷ್ಟೆಯಿಂದ ಒಂದು ನಿಮಿಷದಲ್ಲಿ ಗತಶಕ್ತನಾಗಿ ಆಗ ಹುಟ್ಟಿದ ಕೂಸಿಗಿಂತ ಕಡಿಮೆಯಾಗಿರುವನು."

"ಇಂತಹ ಅನೇಕ ರೋಗಗಳನ್ನು ನಾನು ನೋಡಿದ್ದೇನೆ; ಅದಕ್ಕಾಗಿಯೇ ಸ್ವಲ್ಪಮಟ್ಟಿಗೆ ವೈದ್ಯಶಾಸ್ತ್ರ ರಸಾಯನಶಾಸ್ತ್ರಗಳನ್ನು ಓದಿ ಪರಿಚಯಮಾಡಿಕೊಂಡಿದ್ದೇನೆ. ಅನುಕೂಲವಾದಾಗ ನಿಮ್ಮ ತಂದೆಯನ್ನು ನೋಡಲು ಬರುವೆನು. ಅವರ ಸ್ಥಿತಿಯು ನಿಮಗೆ ಅತಿ ದುಃಖಕರವಾಗಿದ್ದೀತು."

"ಅದನ್ನು ಮರೆಯಿಸುವ ಬೇರೆ ಸುಖವಿಲ್ಲದಿದ್ದರೆ ನೀವು ಹೇಳುವಂತೆಯೇ ಅದು ದುಃಖಕರವಾಗಿ ಇರುತ್ತಲಿದ್ದಿತು."

"ಅದಾವುದು?"

"ಎರಡು ರತ್ನಗಳು."

"ಇದರಿಂದ ನೀವು ಮಾಡಿಕೊಂಡಿರುಂ ಸಿದ್ಧಾಂತವೇನು?"

"ನನ್ನ ತಂದೆಯು ತನ್ನ ಪಾಪದಿಂದ ದೈವನಿಗ್ರಹಕ್ಕೆ ಪಾತ್ರವಾಗಿ ಅದರ ಫಲವನ್ನು ಭಜಿಸುತ್ತಲಿದ್ದಾನೆ. ರಾಜರೇ! ಈಗ ಹೊತ್ತಾಯಿತು, ಇನ್ನಾವಾಗಲಾದರೂ ನಿಮಗೆ ವಿರಾಮವಿದ್ದರೆ ಇದೇ ವಿಷಯವನ್ನು ಚರ್ಚಿಸೋಣ. ನಿಮ್ಮ ದರ್ಶನದಿಂದಲೂ ಸಲ್ಲಾಪದಿಂದಲೂ ನಿಮ್ಮಲ್ಲಿ ನನಗುಂಟಾದ ಗೌರವವನ್ನು ಅಷ್ಟಿಷ್ಟೆಂದು ಹೇಳಲಾರೆ. ನಿಮ್ಮ ಸ್ನೇಹಲಾಭವಾದುದಕ್ಕಾಗಿ ನನ್ನ ಕುಟುಂಬಕ್ಕೆ ಅತ್ಯಾನಂದವಾಯಿತು ಎಂದು ಹೇಳಿ ವಲ್ಲಭದೇವನು ಹೊರಟು ಹೋದನು.

ಅವನು ಹೊರಗೆ ಹೋದ ಕೂಡಲೇ ಮಲಯಸಿಂಹನು ನಿಟ್ಟುಸಿರನ್ನು ಬಿಟ್ಟು "ಈ ವಿಷವಿಷ್ಟಕ್ಕೇ ಸಾಕು; ಇನ್ನು ವಿಷಹರಚಿಕಿತ್ಸೆಯನ್ನು ಮಾಡೋಣ'' ಎಂದುಕೊಂಡು ವಾಮನಭಟ್ಟನನ್ನು ಕರೆದು "ನಾನು ಬರಬಹುದೋ ಎಂದು ಕೋಮಲೆಯನ್ನು ಕೇಳಿಕೊಂಡು ಬಾ. ಒಂದು ಗಂಟೆಗೆ ಸರಿಯಾಗಿ ನನ್ನ ಬಂಡಿಯನ್ನು ಸಿದ್ಧಪಡಿಸು'' ಎಂದು ಆಜ್ಞಾಪಿಸಿದನು.

# ಮೂವತ್ತೈದನೆಯ ಅಧ್ಯಾಯ

## ಅಪೂರ್ವಸಂತೋಷ

ಜಯವೀರನು ಮಲಯಸಿಂಹನನ್ನು ತನ್ನ ಮನೆಗೆ ಕರೆದಿದ್ದುದೂ, ಅವನು ಬರುವೆನೆಂದು ಒಪ್ಪಿದುದೂ ನಮ್ಮ ಪಾಠಕರಿಗೆ ಜ್ಞಾಪಕವಿರಬಹುದು. ಅಲ್ಲಿಗೆ ಹೊರಡಬೇಕೆಂಬ ಯೋಚನೆಯು ಹುಟ್ಟಿದಾಗಲೇ ಮಲಯಸಿಂಹನಿಗೆ ಮುಖವಿಕಾಸವಾಗಿ ಜಯವೀರನನ್ನೂ ಅವನ ತಂಗಿ ಮೊದಲಾದವರನ್ನೂ ಕಂಡು ಅವರ ಸಂಗಡ ಮಾತನಾಡುವುದರಿಂದ ಉಂಟಾಗುವ ಸಂತೋಷಾನುಭವವನ್ನು ತನ್ನ ಮನದಲ್ಲಿಯೇ ಮಾಡತೊಡಗಿದನು.

ವಲ್ಲಭದೇವನ ಆಗಮನದಿಂದ ಮಲಯಸಿಂಹನಿಗುಂಟಾದ ಮನಃಕ್ಲೇಶವನ್ನು ಹೇಳಲು ಅಸಾಧ್ಯ. ವಿಷವನ್ನು ಕುಡಿದು ತಾಪವನ್ನು ಸಹಿಸಲಾರದೆ ಮದ್ದನ್ನು ಹುಡುಕುವನಂತೆ ಅವನು ಜಯವೀರನ ಮನೆಗೆ ಹೋಗಲು ನಿಶ್ಚಯಿಸಿ, ಮೊದಲು ಮನಸ್ಸನ್ನು ಒಂದು ಸ್ತಿಮಿತಕ್ಕೆ ತಂದುಕೊಳ್ಳಲು, ಕೋಮಲೆಯ ಸಂಗಡ ಸ್ವಲ್ಪ ಹೊತ್ತು ಮಾತನಾಡೋಣವೆಂದು ಅವಳ ಕೊಟ್ಟಡಿಗೆ ಹೋದನು.

ಮಲಯಸಿಂಹನು ಅಲ್ಲಿಗೆ ಹೋದಾಗ ಕೋಮಲೆಯು ಸೋಫಾದಲ್ಲಿ ಕುಳಿತು ಜಾರುದಿಂಬನ್ನು ಒರಗಿಕೊಂಡು ವೀಣಾಗಾನವನ್ನು ಆಲಿಸುತ್ತಿದ್ದಳು. ಹೊಸದಾದ ಪಟ್ಟೆಯ ಸೀರೆಯನ್ನೂ ಕಿಂಕಾಪಿನ ರವಿಕೆಯನ್ನೂ ತೊಟ್ಟು, ಎಡಗ್ಯೆಯನ್ನು ತಲೆಯ ಕೆಳಗಿಟ್ಟು ಬಲಗ್ಯೆಯಲ್ಲಿ ಚೀನಾ ದೇಶದ ಲಘುವಾದ ಒಂದು ಬಿಳಿಯ ವಸ್ತ್ರವನ್ನು ಹಿಡಿದಿದ್ದಳು. ಅವಳ ರೂಪಲಾವಣ್ಯ ಯೌವನಾದಿಗಳು ವರ್ಣಿಸಲಸದಳವಾಗಿದ್ದುವು. ಅವಳ ಮುಖಚಂದ್ರನಿಂದ ಪ್ರಸರಿಸುತ್ತಲಿದ್ದ ಬೆಳುದಿಂಗಳಲ್ಲಿ ಉಡಿಗೆ ತೊಡಿಗೆಗಳ ಕಾಂತಿಯು ಮಂಕಾಗಿದ್ದಿತು.

ಮಲಯಸಿಂಹನು ಒಳಗೆ ಹೋದ ಕೂಡಲೇ ಕೋಮಲೆಯು ಎದ್ದು, ಕೋಮಲಸ್ವರದಿಂದ

"ಸ್ವಾಮಿ! ತಾವು ನನ್ನನ್ನು ನೋಡುವುದಕ್ಕೆ ಬರಬೇಕಾದರೆ ಹೇಳಿ ಕಳುಹಿಸಬೇಕು? ತಾವು ಸರ್ವಸ್ವತಂತ್ರರು, ನಾನು ತಮ್ಮ ದಾಸಿ; ಹೀಗಿರುವಲ್ಲಿ

ತಾವು ಹೇಳಿ ಕಳುಹಿಸಿದುದನ್ನು ನೋಡಿದರೆ ನನ್ನ ಮೇಲೆ ತಮಗೆ ಕೋಪವೋ ಏನೋ ?''

''ಕೋಮಲೀ! ಹೆಂಗುಸರ ಕೊಟ್ಟಡಿಗೆ ಗಂಡಸರು ಬರಬೇಕಾದರೆ ಮೊದಲು ಅವರಿಗೆ ತಿಳಿಸಿ ಬರಬೇಕಾದುದು ನ್ಯಾಯ. ಇದಲ್ಲದೆ ಈಗ ನಾವು ಅಮರದೇಶದಲ್ಲಿದ್ದೇವೆ. ಇಲ್ಲಿ ನೀನು ಸ್ವತಂತ್ರೆ''.

''ಯಾವ ಭಾಗದಲ್ಲಿ ?''

''ಎಲ್ಲಾ ಭಾಗದಲ್ಲಿಯೂ. ನಿನಗೆ ಇಷ್ಟವಿದ್ದರೆ ಮನಸ್ಸು ಬಂದ ಕಡೆಗೆ ಹೋಗಬಹುದು''.

''ಸ್ವಾಮೀ! ನಿಮ್ಮನ್ನು ಬಿಟ್ಟು ನಾನೆಲ್ಲಿ ಹೋಗಲಿ?''

''ಅದಕ್ಕೆ ನಾನೇನ ಹೇಳಲಿ? ಇದು ನಿಮ್ಮ ದೇಶದಂತೆ ಅಲ್ಲ; ಇಲ್ಲಿರುವ ವರೆಗೆ ನಾವು ಜನರೊಡನೆ ಕೂಡಾಡಬೇಕಾಗುವುದು".

''ನಾನೆಲ್ಲಿಯೂ ಹೋಗೆನು".

''ಇನ್ನಾರಾದರೂ ನನಗಿಂತ ಅನುಕೂಲರಾದವರು ಸಿಕ್ಕಿದರೆ?''

''ನಿಮಗಿಂತ ನನಗಾರು ಅನುಕೂಲರು? ನನ್ನ ತಂದೆಯೊಬ್ಬನಿದ್ದನು, ಅವನೂ ಸತ್ತು ಹೋದನು. ಈಗ ತಾವು ಒಬ್ಬರೇ''.

''ನಿನ್ನ ತಂದೆಯನ್ನು ಬಲ್ಲೆಯೋ'' ಎಂದು ಮಲಯಸಿಂಹನು ಕೇಳಲು, ಕೋಮಲೆಯು ಕಣ್ಣೀರನ್ನು ಸುರಿಸುತ್ತ "ಇಲ್ಲಿದ್ದಾನೆ, ಇಲ್ಲಿದ್ದಾನೆ'' ಎಂದು ತನ್ನ ಕಣ್ಣುಗಳನ್ನು ಮುಟ್ಟಿ ತೋರಿಸಿದಳು.

''ನಾನೆಲ್ಲಿದ್ದೇನೆ?''

''ತಾವು ನನ್ನ ಸ್ವಾಮಿಯಾದುದರಿಂದ ನನ್ನ ಶರೀರದಲ್ಲೆಲ್ಲಾ ಇರುತ್ತೀರಿ", ಎಂದು ಅವನ ಮೇಲಿದ್ದ ತನ್ನ ಅನುರಾಗವನ್ನು ಸೂಚಿಸಿದಳು. ಮಲಯಸಿಂಹನು ಸುಪ್ರೀತನಾದನು.

''ಎಲೌ ಕೋಮಲೆ! ಇಂದು ಮೊದಲು ನೀನು ಸರ್ವಸ್ವತಂತ್ರಳು; ನನ್ನ ಮನೆಯಲ್ಲಿಯೇ ಇದ್ದರೆ ಸರ್ವಾಧಿಕಾರವನ್ನು ನಿನಗೆ ಕೊಟ್ಟು ನಿನ್ನನ್ನು ನನ್ನ ಮಗಳಂತೆ ಭಾವಿಸುವೆನು. ನೀನು ನನಗೆ ಒಂದು ಉಪಕಾರ ಮಾತ್ರ ಮಾಡಬೇಕು''.

'ಅದೇನು ಅಪ್ಪಣೆಯಾಗಲಿ''.

"ನೀನಿಂಥವಳೆಂಬುದನ್ನೂ, ನಿನ್ನ ತಾಯಿತಂದೆಗಳ ಹೆಸರುಗಳನ್ನೂ ಯಾರೊಡನೆಯೂ ಹೇಳದೆ ಬಲು ಗುಟ್ಟಾಗಿಟ್ಟಿರಬೇಕು".

"ಸ್ವಾಮಿಾ! ನಾನೊಬ್ಬರನ್ನೂ ನೋಡುವುದಿಲ್ಲವೆಂದು ಮೊದಲೇ ತಮ್ಮಲ್ಲಿ ಅರಿಕೆ ಮಾಡಿದ್ದೇನೆಯಲ್ಲವೇ?"

"ಇಲ್ಲಿ ನಿಮ್ಮ ದೇಶದಂತೆ ಇರಲಾಗದು. ಇಲ್ಲಿಯ ಹೆಂಗುಸರು ಗಂಡಸರೊಡನೆ ಧಾರಾಳವಾಗಿಯೂ ನಿರ್ಭಯವಾಗಿಯೂ ಕಲೆಯುತ್ತ ಸ್ನೇಹವನ್ನು ಬೆಳೆಸುವರು. ಇದು ನಮ್ಮ ದೇಶದ ಪದ್ಧತಿಯಾದುದರಿಂದ ಇಲ್ಲಿ ನಾವಿರುವವರೆಗೆ ಇದಕ್ಕನುಗುಣವಾಗಿ ನೀನೂ ಇರಬೇಕಾಗುವುದು. ಈ ರೀತಿ ನೀನಿರುವುದಾದರೆ ನೀನೆಲ್ಲಿದ್ದರೂ ಸರಿಯೆ ನಿನಗೆ ಅನುಕೂಲವುಂಟು."

"ಸ್ವಾಮಿಾ! ತಾವು ಈಗ ಅಪ್ಪಣೆ ಕೊಡಿಸಿದ ಮಾತಿನಲ್ಲಿ 'ನಾವು ನಮಗೆ' ಎನ್ನದೆ 'ನೀನು, ನಿನಗೆ' ಎಂಮದಕ್ಕೆ ನನಗೆ ಅರ್ಥವಾಗಲಿಲ್ಲ. ದಯೆಮಾಡಿ ಅಪ್ಪಣೆಯಾಗಬೇಕು."

"ಎಲಾ ಕೋಮಲೆ ಪುಷ್ಪವು ಗಿಡವನ್ನು ಬಿಟ್ಟು ಕೆಳಗೆ ಬೀಳುವುದೇ ಹೊರತು ಗಿಡವು ಪುಷ್ಪವನ್ನು ಎಂದಿಗಾದರೂ ಬಿಟ್ಟೀತೇ?"

"ಸ್ವಾಮಿಾ! ಗಿಡವನ್ನು ಬಿಟ್ಟು ಕೆಳಗೆಬಿದ್ದ ಪುಷ್ಪದ ಗತಿಯೇನಾಗುವುದು? ತಮ್ಮನ್ನು ಬಿಟ್ಟು ನಾನು ಒಂದು ಕ್ಷಣಮಾತ್ರವೂ ಜೀವಿಸಲಾರೆನು."

"ಕೋಮಲೆ! ಇನ್ನು ಹತ್ತು ವರ್ಷಗಳಲ್ಲಿ ನಾನು ಮುದುಕನಾಗುವೆನು, ಆಗ ನಿನ್ನ ಯೌವನಸಂಪತ್ತು ಅಧಿಕವಾಗುವುದು. ಅದು ವ್ಯರ್ಥವಾಗಬಾರದಲ್ಲವೇ?

"ನನ್ನ ತಂದೆಯು ಹಣ್ಣುಹಣ್ಣು ಮುದುಕನಾಗಿದ್ದನು, ಆದರೂ ಅವನನ್ನು ನಾನು ಪ್ರೀತಿಸುತ್ತಿರಲಿಲ್ಲವೇ?"

"ಹಾಗಾದರೆ ನಾವು ತಂದೆ ಮಕ್ಕಳಂತೆ ಇರಲು ನಿನಗೆ ಸಮ್ಮತವೋ?"

"ಸ್ವಾಮಿಾ! ಪ್ರತಿನಿತ್ಯವೂ ತಮ್ಮ ದರ್ಶನವಾಗುತ್ತಿದ್ದರೆ ತಾವು ಹೇಗಿಟ್ಟರೆ ಹಾಗಿರುವೆನು."

"ಅದಕ್ಕೇನು ಅಡ್ಡಿ?"

"ಹಾಗಾದರೆ ತಮಗೆ ಭಯವೇನು?"

"ಚಿಕ್ಕ ಪ್ರಾಯದಲ್ಲಿ ಹೀಗಿರುವುದು ನಿನಗೆ ಸಂತೋಷಕರವಲ್ಲ."

" ಸ್ವಾಮಿ! ಬೆಳಿಗ್ಗೆ ಎದ್ದರೆ ತಮ್ಮ ದರ್ಶನವಾಗುವುದೆಂಬ ಸಂತೋಷವೂ, ದರ್ಶನವಾದ ಮೇಲೆ ಅದರಿಂದುಂಟಾದ ಸಂತೋಷಾನುಭವವೂ, ತಮ್ಮಲ್ಲಿ ಕೃತಜ್ಞತೆಯೂ ಅನುರಾಗವೂ ಇರುವಾಗ ನನ್ನ ಸಂತೋಷಕ್ಕೆ ಏನು ಕಡಿಮೆ?''

" ನೀನಿಷ್ಟಪಟ್ಟರೆ ನಿನಗೆ ತಕ್ಕ ಒಂದು ವರನನ್ನು ನೋಡುವೆನು."

'' ಸ್ವಾಮಿ! ತಮ್ಮ ಅಭಿಪ್ರಾಯವೇನೋ ನನಗೆ ತಿಳಿಯದು. ನನ್ನ ತಂದೆಯಲ್ಲಿ ನನಗಿದ್ದ ಪ್ರೀತಿಗೂ ತಮ್ಮಲ್ಲಿ ನನಗಿರುವ ಪ್ರೀತಿಗೂ ತಾರತಮ್ಯವುಂಟು. ನನ್ನ ತಂದೆಯು ಕಾಲವಾದಾಗ ನಾನು ಸಾಯಲಿಲ್ಲ; ತಮ್ಮನ್ನು ಬಿಟ್ಟು ಅಗಲಿದ ಕ್ಷಣವೇ ನನ್ನ ಪ್ರಾಣವಿರಲಾರದು.''

ಕೋಮಲೆಯು ಹೀಗೆಂದುದನ್ನು ಕೇಳಿ ಮೊದಲೇ ಅರಳಿದ್ದ ಮಲಯಸಿಂಹನ ಮುಖವು ಮತ್ತಷ್ಟು ಅರಳಿತು. ಅವಳು ಅವನ ಕೈಯನ್ನು ಮುದ್ದಿಟ್ಟು ಕಣ್ಣಿಗೆ ಒತ್ತಿಕೊಂಡಳು. ಬಳಿಕ ಮಲಯಸಿಂಹನು ಅಲ್ಲಿಂದ ಹೊರಟು, ' ಕೋಮಲೆಯರ ದೇಹಲತೆಯಲ್ಲಿ ಯೌವನವೇ ಸುವಾಸನೆಯಾದ ಹೂವು, ಮೋಹವೇ ಫಲ; ಈ ಪುಷ್ಪವನ್ನೂ, ಫಲವನ್ನೂ ಸಕಾಲದಲ್ಲಿ ಅನುಭವಿಸುವವನೇ ಧನ್ಯನು ' ಎಂದುಕೊಂಡು, ಸಿದ್ಧವಾಗಿ ನಿಂತಿದ್ದ ಬಂಡಿಯಲ್ಲಿ ಕುಳಿತನು.

ಬಂಡಿಯು ಸ್ವಲ್ಪ ಕಾಲದಲ್ಲಿಯೇ ಜಯವೀರನ ಮನೆಯ ಮುಂದೆ ನಿಂತಿತು. ಭೈರವನು ಬಂಡಿಯಿಂದಿಳಿದು ಏನಪ್ಪಣೆಯೆಂದು ಕೇಳಲು, ಮಲಯಸಿಂಹನು " ನಾನು ಬಂದಿದ್ದೇನೆಂದು ಮನೆಯವರಿಗೆ ತಿಳಿಸು " ಎಂದನು. ಭೈರವನು ಮನೆಯೊಳಗೆ ಪ್ರವೇಶಿಸಿ ಯಾರನ್ನೂ ಕಾಣದೆ ಕುದುರೆಯನ್ನು ತಿಕ್ಕಿಸುತ್ತ ನಿಂತಿದ್ದ ಜಯವೀರನನ್ನು ಕಂಡು '' ಸ್ವಾಮಿ! ರಾಜಾಮಲಯಸಿಂಹರು ಬಿಜಯಮಾಡಿಸಿದ್ದಾರೆ, ಅವರನ್ನು ನೋಡಲು ತಮಗೆ ಅನುಕೂಲವೇ ಎಂದು ತಿಳಿದುಕೊಂಡು ಬರುವಂತೆ ಹೇಳಿದ್ದಾರೆ '' ಎನ್ನಲು, ಒಡನೆಯೇ ಜಯವೀರನು " ರಾಜರನ್ನು ನೋಡಲು ಅನುಕೂಲವೇ? ಅವರು ಬಿಜಯಮಾಡಿಸಿದಾಗಲೇ ಅನುಕೂಲ '' ಎಂದು ಹೇಳಿ ಬೀದಿಯಲ್ಲಿ ಬಂಡಿಯು ನಿಂತಿರುವುದನ್ನು ಕಂಡು ತಟ್ಟನೆ ಅಲ್ಲಿಗೆ ಓಡಿ ಬಂದು " ರಾಜರೇ! ಬಿಜಯಂಗೆಯ್ಯಬೇಕು. ತಮ್ಮ ಮನೆಗೆ ತಾವು ಬಿಜಯ ಮಾಡಿಸಲಿಕ್ಕೆ ಮತ್ತೊಬ್ಬರ

ಅನುಮತಿಯನ್ನು ಕೇಳಬೇಕೆ ? ರತ್ನಾಂಬೆಯು ತೋಟದಲ್ಲಿರುತ್ತಾಳೆ, ಅಲ್ಲಿಗೇ ಹೋಗೋಣವೊ ?'' ಎಂದು ಕೇಳಿದನು.

" ಆಗಬಹುದು."

ಹೂವನ್ನು ಕೊಯ್ಯುತ್ತಲಿದ್ದ ರತ್ನಾಂಬೆಯು ಇವರ ಹೆಜ್ಜೆಯ ಸದ್ದನ್ನು ಕೇಳಿ ತಲೆಯೆತ್ತಿ ನೋಡಲು ತನ್ನಣ್ಣನ ಸಂಗಡ ಅನ್ಯಪುರುಷನಾವನೋ ಬರುತ್ತಿದ್ದುದನ್ನು ಕಂಡು ನಾಚಿಕೊಂಡಳು. ಅಷ್ಟರಲ್ಲಿಯೇ ಜಯವೀರನು " ಅಮ್ಮಾ ರತ್ನ ! ಇವರೇ ರಾಜಾಮಲಯಸಿಂಹರು. ಸ್ವಾಮಿಾ ! ಇವಳೇ ನನ್ನ ತಂಗಿ ರತ್ನಾಂಬೆ '' ಎಂದು ಇಬ್ಬರಿಗೂ ಪರಿಚಯ ಮಾಡಿಕೊಟ್ಟನು. ಆಗವಳು

"ರಾಜರೇ ! ನಮ್ಮಣ್ಣನಿಗೆ ತಂಗಿಯೆಂದರೆ ಸ್ವಲ್ಪವೂ ಗೌರವವಿಲ್ಲ. ನಾನು ಈ ವೇಷದಲ್ಲಿರುವಾಗ ತಮ್ಮನ್ನು ಇಲ್ಲಿಗೆ ಕರೆದುಕೊಂಡು ಬಂದಿದ್ದಾನೆ" ಎಂದು ಹೇಳಲು, ರಾಜನು

"ಅಮ್ಮಾ ! ನಾನೂ ನಿಮ್ಮ ಸಂಸಾರಕ್ಕೆ ಸೇರಿದವನು"

"ಸ್ವಾಮಿಾ ! ತಾವು ಅಣ್ಣನ ಜತೆಯಲ್ಲಿ ಕೊಟ್ಟಡಿಗೆ ಬಿಜಯಮಾಡಿಸು ವುದರೊಳಗಾಗಿ ಬರುವೆನು, ಕ್ಷಮಿಸಬೇಕು" ಎಂದು ಹೇಳಿ ರತ್ನಾಂಬೆಯು ಸಮಿಾಪದಲ್ಲಿ ಅಗೆಯುತ್ತಿದ್ದವನನ್ನು ನೋಡಿ,

"ಎಲೋ ದಾಸ !" ಎಂದು ಕೂಗಿದಳು. ಅಗೆಯುತ್ತಿದ್ದ ಮುದುಕನು ನಮ್ಮ ಜಯಲಕ್ಷ್ಮಿಯಲ್ಲಿ ಬಹುದಿನಗಳು ನಾವಿಕನಾಗಿದ್ದು ಧನಕೋಟಿಯ ಮನೆಯನ್ನು ಬಿಡಲಾರದೆ ಈಗ ತೋಟಗಾರನಾಗಿದ್ದನು. ರತ್ನಾಂಬೆಯು ಕರೆಯುತ್ತಲೇ ಬಾಯಲ್ಲಿದ್ದ ಹೊಗೆಯಸೊಪ್ಪನ್ನು ದವಡೆಯಲ್ಲಿ ಒತ್ತರಿಸಿಕೊಂಡು "ಅಮ್ಮಾ ! ಏನು ಅಪ್ಪಣೆ" ಎನ್ನಲು, ಅವಳು "ರಾಜಾಮಲಯಸಿಂಹರು ಬಿಜಯಮಾಡಿದ್ದಾರೆಂದು ಯಜಮಾನರಿಗೆ ತಿಳಿಸಿ ಅವರನ್ನು ತಕ್ಷಣವೇ ಬರು ವಂತೆ ಹೇಳು" ಎಂದು ಹೇಳಿ ಪಕ್ಕದಲ್ಲಿದ್ದ ಸಣ್ಣ ಬಾಗಿಲಿನಿಂದ ಮನೆಯನ್ನು ಹೊಕ್ಕಳು. ರಾಜನೂ ಜಯವೀರನೂ ಕೊಟ್ಟಡಿಗೆ ಹೋಗಿ ಕುಳಿತರು.

"ನಾನು ಬಂದುದು ಇಷ್ಟು ಅವಾಂತರಕ್ಕೆ ಕಾರಣವಾಯಿತು" ಎಂದು ರಾಜನು ಹೇಳಲು ಜಯವೀರನು

"ತಾವು ಬರುವುದೇ ಅಪರೂಪ, ಬಂದಾಗ ಎಲ್ಲರೂ ತಮ್ಮ ದರ್ಶನವನ್ನು

ಮಾಡಿಕೊಳ್ಳದಿದ್ದರೆ ಮನಸ್ಸು ನೆಮ್ಮದಿಯಾಗಿರದು. ನನ್ನ ಭಾವ ಮನೋ ಮೋಹನನು ಜಾಗ್ರತೆಯಾಗಿಯೇ ಬರುತ್ತಾನೆ"

"ಜಯವೀರರೇ! ನೀವೆಲ್ಲರೂ ಸುಖವಾಗಿದ್ದೀರಾ ?"

"ಸ್ವಾಮಿಾ ! ತಮ್ಮ ಅನುಗ್ರಹದಿಂದ ನಾವೆಲ್ಲರೂ ಕ್ಷೇಮವಾಗಿದ್ದೇವೆ. ನನ್ನ ತಂಗಿಯೂ ಅವಳ ಗಂಡನೂ ಚಿಕ್ಕವರಾಗಿದ್ದರೂ ಅನುರಾಗವುಳ್ಳವ ರಾಗಿಯೂ ಸಂತೋಷಚಿತ್ತರಾಗಿಯೂ ಇದ್ದಾರೆ. ಅವರಿಗೆ ವರ್ಷ ಒಂದಕ್ಕೆ ಇಪ್ಪತ್ತೈದು ಸಾವಿರ ವರಹಗಳ ವರಮಾನವಿದೆ, ಅದರಿಂದ ನೆಮ್ಮದಿಯಾಗಿ ಜೀವನಮಾಡಿಕೊಂಡಿದ್ದಾರೆ."

"ಇಪ್ಪತ್ತೈದು ಸಾವಿರ ವರಹಗಳು ಸಾಕೇ?" ಎಂದು ಕೇಳಿದ ಮಲಯ ಸಿಂಹನ ಮಾತಿಗೆ ಜಯವೀರನ ಮನಸ್ಸು ಕರಗಿಹೋಯಿತು.

"ನಿಮ್ಮ ಭಾವನವರು ವೈದ್ಯರೋ, ವ್ಯವಹಾರಪಂಡಿತರೋ ?"

"ಅವನು ನಮ್ಮ ವ್ಯಾಪಾರದಲ್ಲಿ ಒತ್ತಾಸೆಮಾಡುತ್ತಿದ್ದು ನಮ್ಮಪ್ಪನ ಕಾಲಾನಂತರ ಎರಡು ಲಕ್ಷ ಐವತ್ತುಸಾವಿರ ವರಹಗಳ ಆಸ್ತಿಯನ್ನು ಸಂಪಾ ದಿಸಿ ವ್ಯಾಪಾರವನ್ನು ಬಿಟ್ಟು ಬಡ್ಡಿಯಿಂದ ನೆಮ್ಮದಿಯಾಗಿ ಜೀವನಮಾಡಿ ಕೊಂಡು ಇದ್ದಾನೆ."

ಅದನ್ನು ಕೇಳಿ ಮಲಯಸಿಂಹನು ಆನಂದಪಡುತ್ತಲಿದ್ದಾಗ ಮನಮೋಹ ನನು ಬಂದು ಅವನಿಗೆ ನಮಸ್ಕರಿಸಿ ಕುಳಿತನು. "ಇವರೇ ಮನಮೋಹ ನರೋ ?"

"ಅಹುದು. ಮನಮೋಹನಾ ! ಇವರೇ ರಾಜಾ ಮಲಯಸಿಂಹರು."

ಅಷ್ಟು ಹೊತ್ತಿಗೆ ರತ್ನಾಂಬೆಯೂ ಅಲ್ಲಿಗೆ ಬಂದಳು.

ಆ ದಂಪತಿಗಳ ಮುಖದಲ್ಲಿ ತೃಪ್ತಿಯೂ ಸಂತೋಷವೂ ತುಂಬಿ ತುಳುಕು ತ್ತಲಿರುವುದನ್ನು ಕಂಡು ಮಲಯಸಿಂಹನು ರತ್ನಾಂಬೆಯನ್ನು ನೋಡಿ,

"ಅಮ್ಮಾ ! ಅತೃಪ್ತರಾಗಿಯೂ ಸಂತೋಷಿಗಳಾಗಿಯೂ ಇರುವವರನ್ನು ನಾನು ನೋಡಲಿಲ್ಲ. ಆದುದರಿಂದ ಈಗ ನಿಮ್ಮನ್ನು ಎಷ್ಟು ನೋಡಿದರೂ ತೃಪ್ತಿಯೇ ಇಲ್ಲ. ಹುಟ್ಟಿದಾರಭ್ಯದಿಂದ ಹೀಗೆಯೇ ಇರುವಿರೋ ?"

"ಸ್ವಾಮಿಾ ! ಒಂದಾನೊಂದು ಕಾಲದಲ್ಲಿ ನಮಗೂ ಕಷ್ಟನಷ್ಟಗಳು ಸಂಪ್ರಾಪ್ತವಾಗಿದ್ದುವು."

"ಅದೇನು ? ಯಾವಾಗ ?"

"ಇದು ನಮ್ಮ ಗೃಹಕೃತ್ಯಕ್ಕೆ ಸೇರಿದ ವಿಷಯವಾದುದರಿಂದ ತಮಗೆ ರುಚಿಸಲಾರದು"

"ಸತ್ಪುರುಷರು ಕಷ್ಟಪಡುವುದನ್ನು ಕಂಡು ದೇವರು ಸಹಿಸಲಾರನು. ಪ್ರಾಯಶಃ ಅವನು ಅದನ್ನು ಆಗಲೇ ನಿವೃತ್ತಿಸಿರಬೇಕು."

"ಸ್ವಾಮಿಾ ! ನಿಜ. ಹಾಗೆಯೇ ನಿವೃತ್ತಿಯಾಯಿತು. ಯಾವನೋ ಒಬ್ಬ ಮಹಾಪುರುಷನು ನಮ್ಮ ಕಷ್ಟವನ್ನು ಪರಿಹಾರಮಾಡಿದನು."

ಎಂದು ರತ್ನಾಂಬೆಯು ಹೇಳುತ್ತಲೇ ಮಲಯುಸಿಂಹನು ಕೆಮ್ಮುವ ನೆಪದಿಂದ ಮುಖವನ್ನು ಮುಚ್ಚಿಕೊಂಡು ಹೊರಗೆ ತಲೆಹಾಕಿದ್ದ ಆನಂದ ಬಾಷ್ಪಗಳನ್ನು ಒರಸಿಕೊಂಡನು. ಆಗ ಮನಮೋಹನನು,

"ಸ್ವಾಮಿಾ ! ಆ ಮಹಾಪುರುಷನು ಮಾಡಿದ ಉಪಕಾರದಿಂದ ನಮಗೆ ಉಂಟಾದ ಆನಂದವನ್ನು ತಿಳಿಸುವವುದು ಅಸಾಧ್ಯ. ಅನುಭವಿಸಿದವರಿಗೆ ವಿನಾ ಅದು ಇತರರಿಗೆ ಗೊತ್ತಾಗದು. ಆಗರ್ಭ ಶ್ರೀಮಂತರು ಸುಖದ ಲ್ಲಿಯೇ ಹುಟ್ಟಿ ಬೆಳೆಯುವುದರಿಂದ ಅವರಿಗೆ ಕಷ್ಟಸುಖಗಳು ಯಾವುವೂ ತಿಳಿ ಯುವ ಸಂಭವವಿಲ್ಲ. ಸಮುದ್ರದಲ್ಲಿ ಬಿರುಗಾಳಿ ಮಳೆ ಸಿಡಿಲುಗಳಿಗೆ ಸಿಕ್ಕಿ ಪಾಡು ಪಟ್ಟಿದ್ದ ನಾವಿಕರಿಗಲ್ಲದೆ ಸಮುದ್ರದ ಕೋಟಲೆಗಳು ಮತ್ತಾರಿಗಾದರೂ ತಿಳಿಯುವುದೇ ?'' ಎಂದನು.

"ಹುಣ್ಣಿಮೆಯ ಚಂದ್ರನನ್ನು ನೋಡಿ ಉಕ್ಕುವ ಸಮುದ್ರದೋಪಾದಿ ಈ ದಂಪತಿಗಳ ಆನಂದ್ಧವನ್ನು ನೋಡಿ ಉಕ್ಕಿಬರುತ್ತಲಿರುವ ಸಂತೋಷವನ್ನು ಮಲಯುಸಿಂಹನು ಮುಚ್ಚಲರಿಯದೆ ಎದ್ದು ಹಾಗೆಯೇ ಶತಪಥವನ್ನು ಮಾಡ ತೊಡಗಲು, ಜಯವೀರನು,

"ಸ್ವಾಮಿಾ ರಾಜರೇ, ನಮ್ಮ ಈ ಅಲ್ಪ ಸಂಪತ್ತನ್ನು ನೋಡಿ ತಮಗೆ ನಗು ಬರುತ್ತದೆಂದು ತೋರುತ್ತದೆ" ಎಂದನು.

ಮಲಯಸಿಂಹನಿಗೆ ಮಾತು ಹೊರಡದೆ ಡಬಡಬ ಎಂದು ಹಾರುತ್ತಲಿದ್ದ ಎದೆಯನ್ನು ಒಂದು ಕೈಯಲ್ಲಿ ನೀವಿಕೊಳ್ಳುತ್ತ ಮತ್ತೊಂದು ಕೈಯಿಂದ ಕನ್ನ ಡಿಯ ಗೂಡಿನಲ್ಲಿ ಎಲ್ಲರಿಗೂ ಸ್ಪಷ್ಟವಾಗಿ ಕಾಣುವಂತೆ ಇದಿರಿಗೆ ಇಟ್ಟಿದ್ದ ಒಂದು ಹಳೆಯ ಪಟ್ಟೆಯ ಚೀಲವನ್ನು ತೋರಿಸಿ,

"ಇದೇನು ? ಇದಕ್ಕೆ ಒಂದು ಕಡೆ ಒಂದು ಚೀಟಿಯೂ ಮತ್ತೊಂದು ಕಡೆ ಒಂದು ದೊಡ್ಡ ವಜ್ರವೂ ಕಟ್ಟಿದೆ ?" ಎಂದು ಜಯವೀರನನ್ನು ಕೇಳಿದನು.

"ಸ್ವಾಮಿಾ ! ಅದೇ ನಮ್ಮ ವಂಶವನ್ನು ಕಾಪಿಟ್ಟ ಕಲ್ಪವೃಕ್ಷ. ಅದಿಲ್ಲದಿದ್ದರೆ ನಾವು ಈ ರೀತಿಯಲ್ಲಿ ಇರುವುದಕ್ಕಾಗುತ್ತಿದ್ದಿತೇ ? ತಿರುಪಕ್ಕೆ ಹೋಗಬೇಕಾಗಿದ್ದಿತು."

"ಆ ವಜ್ರವು ಉತ್ತಮವಾದುದೆಂದು ತೋರುತ್ತದೆ" ಎಂದು ರಾಜನು ಕೇಳಲು ರತ್ನಾಂಬೆಯು,

"ಸ್ವಾಮಿಾ ! ಆ ವಜ್ರಕ್ಕಿಂತ ಚೀಲವೇ ನಮಗೆ ಹೆಚ್ಚು"

"ಅದೇನು ಹಾಗೆ ಹೇಳುತ್ತೀರಿ ? ಅದನ್ನು ನನಗೆ ತಿಳಿಸಬಹುದಾಗಿದ್ದರೆ ಸಂತೋಷ."

"ಸ್ವಾಮಿಾ ! ಬಹುದಿನಗಳ ಕೆಳಗೆ ನಮಗೆ ಅತಿ ಕಷ್ಟಕಾಲವು ಪ್ರಾಪ್ತವಾಗಿದ್ದಾಗ ಯಾರಿಗೂ ಗೋಚರನಾಗದಂತೆ ಯಾವನೊ ಒಬ್ಬ ಮಹಾತ್ಮನು ನಮಗೆ ಮಹೋಪಕಾರವನ್ನು ಮಾಡಿ ಹೋದನು. ಅಂದಿನಿಂದ ನಾವು ಅವನ ದರ್ಶನ ಮಾಡಬೇಕೆಂದು ಎಷ್ಟೆಷ್ಟು ವಿಚಾರಿಸಿ ಹುಡುಕಿದರೂ ಅವನು ನಮಗೆ ಸಿಕ್ಕಲಿಲ್ಲ. ನಾವು ಮಾಡುವ ಉಪಕಾರಸ್ಮರಣೆಯು ಅವನ ಕಿವಿಗೆ ಬಿದ್ದು ಅವನ ಮನಸ್ಸು ಕರಗಿ ಎಂದಾದರೂ ಪ್ರತ್ಯಕ್ಷನಾದಾನೋ ಎಂಬ ಚಾಪಲ್ಯದಿಂದ ಈ ಚೀಲವನ್ನು ದೇವರಂತೆ ಭಾವಿಸಿ, ಎಲ್ಲರಿಗೂ ಕಾಣುವಂತೆ ಇಟ್ಟು ಬಂದವರೆಲ್ಲರ ಸಂಗಡಲೂ ಈ ಸಮಾಚಾರವನ್ನು ಹೇಳುತ್ತಲಿದ್ದೇವೆ."

"ಓಹೋ ! ಹಾಗೇ ?" ಎಂದು ಏನೂ ತಿಳಿಯದವನಂತೆ ನಟಿಸಿ ಮಲಯಸಿಂಹನು,

"ಇದರಿಂದೇನು ಉಪಕಾರವಾಯಿತು ?" ಎಂದು ಪ್ರಶ್ನೆ ಮಾಡಿದನು. ಆಗ ಜಯವೀರನೆದ್ದು ಗೂಡಿನಿಂದ ಚೀಲವನ್ನು ತೆಗೆದು,

ಇದು ತಾತಂಗೊದವಿದ ದು |
ರ್ವಿಧಿಯಂ ಮಾಣಿಸಿದುದಿದುವೆ ನಮ್ಮಯ ದಾರಿ ||
ದ್ರ್ಯದ ಕಂದಂ ಕಳೆದುದು ದೇ |
ವದತ್ತಮಿದು ನೋಡಲತಿವಿಶಾಲಂ ಚೀಲಂ || (S.G.G.)

ಆದುದರಿಂದಲೇ ಈ ಚೀಲದಲ್ಲಿ ನಮಗೆ ಅಷ್ಟು ವಿಶ್ವಾಸ. ಈ ಚೀಲಕ್ಕೆ ಕಟ್ಟಿರುವ ಚೀಟಿಯನ್ನು ಆ ಉಪಕಾರಕನೇ ಬರೆದನು. ಈ ವಜ್ರವನ್ನು ನಮ್ಮ ರತ್ನಾಂಬೆಗೆ ಸ್ತ್ರೀಧನವೆಂದು ಅವನೇ ಕೊಟ್ಟನು" ಎಂದು ಆ ಚೀಟಿಯನ್ನು ಮಲಯಸಿಂಹನ ಕಯ್ಯಲ್ಲಿ ಕೊಡಲು ಅವನು ಅದನು ಓದಿ ಆನಂದ ಭರಿತನಾದನು. ಆ ಲೇಖನವನ್ನೇ ನಮ್ಮ ನಾವಿಕ ಸೈಂಧವನು ಬರೆದದ್ದು ದೆಂಬುದನ್ನು ನಮ್ಮ ಪಾಠಕರು ಇನ್ನೂ ಮರೆತಿರಲಾರರು.

"ಜಯವೀರರೇ ! ನಿಮ್ಮನ್ನು ನೋಡುವವರೆಗೆ ಲೋಕದಲ್ಲಿ ಕೃತಜ್ಞತೆಯೆಂಬುದೇ ಇಲ್ಲ ಎಂದು ನಾನು ತಿಳಿದಿದ್ದೆನು. ಸಾಧಾರಣವಾಗಿ ಜನರು ತಮಗೆ ಉಪಕಾರವಾಗುವವರೆಗೆ ಇತರರನ್ನು ಆಶ್ರಯಿಸುವರೇ ಅಲ್ಲದೆ ತದನಂತರ ಆಶ್ರಯಿಸುವುದಿಲ್ಲ. ಸಾವಿರಕ್ಕೊಬ್ಬನು ಮಾಡಿದ ಉಪಕಾರವನ್ನು ಒಂದೆರಡಾವೃತ್ತಿ ಸ್ಮರಿಸುವನು. ಬಹುಕಾಲದ ಹಿಂದೆ ಮಾಡಿದ ಈ ಉಪಕಾರವನ್ನು ನೀವು ಇನ್ನೂ ಜ್ಞಾಪಕವಿಟ್ಟುಕೊಂಡು ಆ ಉಪಕಾರಿಯನ್ನು ಕೊಂಡಾಡುತ್ತಲಿರುವುದು ನಿಮ್ಮ ಸದ್ಗುಣವನ್ನು ಪ್ರಕಾಶಪಡಿಸುತ್ತದೆ. ಈ ಉಪಕಾರವನ್ನು ಮಾಡಿವವನು ಇಂಥವನೆಂದು ಇನ್ನೂ ನಿಮಗೆ ಗೊತ್ತಾಗಲಿಲ್ಲವೋ ?"

''ಸ್ವಾಮಿ ! ರಾಜರೇ ! ನಾವು ಮಾಡಿದ ಮನುಷ್ಯಪ್ರಯತ್ನಗಳೆಲ್ಲವೂ ನಿಷ್ಪ್ರಯೋಜನವಾದುವು ; ದೇವರಿಗೆ ಎಷ್ಟೋ ಸಾರಿ ಹರಕೆ ಮಾಡಿಕೊಂಡೆವು ; ಆದರೂ ಈ ಉಪಕಾರಿಯನ್ನು ಕಂಡುಹಿಡಿಯಲು ಸಾಧ್ಯವಾಗಲಿಲ್ಲ. ಮುಂದೆ ದೇವರ ದಯೆಯು ಹೇಗಿರುವುದೋ ?'' ಎಂದು ಜಯವೀರನು ಹೇಳಲು, ರತ್ನಾಂಬೆಯು,

"ಅಣ್ಣಯ್ಯ ! ದೇವರಿಗೆ ಮಾಡಿದ್ದ ಪ್ರಾರ್ಥನೆಯು ಎಂದಿಗೂ ವ್ಯರ್ಥವಾಗದು. ಸಕಾಲದಲ್ಲಿ ಫಲಿಸುವುದು. ಈಗ ಚೀಲವನ್ನು ನಾವು ಕಣ್ಣಿಗೆ ಒತ್ತಿಕೊಳ್ಳುವಂತೆ ಆಗ ಅವನ ಎರಡು ಪಾದಗಳನ್ನೂ ಕಣ್ಣಿಗೆ ಒತ್ತಿಕೊಳ್ಳುವೆವು. ನಮ್ಮ ನಾವಿಕ ದಾಶನು ಹಿಂದೆ ತನ್ನ ಪ್ರಯಾಣಗಳೊಂದರಲ್ಲಿ ನೋಡಿದ್ದ ಆಂಗ್ಲೇಯ ದೇಶಿಯನಂತೆ ಇದ್ದ ಒಬ್ಬನು ನಮ್ಮ ತಂದೆಯನ್ನು ಕಾಪಿಟ್ಟನೆಂದು ಹೇಳಿದ್ದನು'' ಎಂದಳು.

"ಆಂಗ್ಲೇಯ ದೇಶೀಯನೇ," ಎಂದು ಮಲಯಸಿಂಹನು ಕೇಳಲು ರತ್ನಾಂಬೆಯು,

"ಹಾಗೆ ದಾಶನು ಹೇಳಿದನು" ಎಂದಳು.

''ಅಮ್ಮಾ! ನಿಮ್ಮ ತಂದೆಯು ಯಾರಿಗೋ ಯಾವುದೋ ಒಂದು ಉಪಕಾರವನ್ನು ಮಾಡಿರಬಹುದು ; ಆ ಉಪಕಾರವನ್ನು ಹೊಂದಿದ್ದವನು ಅದನ್ನು ಮರೆಯದೆ ಈ ರೀತಿ ಪ್ರತ್ಯುಪಕಾರವನ್ನು ಮಾಡಿರಬಹುದು. ಆ ಚೀಟಿಯಲ್ಲಿ ಏನೆಂದು ಹೆಸರು ಕೊಟ್ಟಿದ್ದಾನೆ?"

''ನಾವಿಕ ಸೈಂಧವ."

''ನಾವಿಕ ಸೈಂಧವ! ನಾವಿಕ ಸೈಂಧವ! ಅದು ಅವನ ನಿಜವಾದ ಹೆಸರಲ್ಲ'' ಎಂದು ಮಲಯಸಿಂಹನು ಹೇಳಿ, ರತ್ನಾಂಬೆಯು ತನ್ನ ಧ್ವನಿಯನ್ನೇ ಕೇಳುತ್ತಲಿದ್ದುದನ್ನು ಕಂಡು,

''ಅಮ್ಮಾ ನೀನು ಹೇಳು. ಆ ಸೈಂಧವನು ನನ್ನಷ್ಟು ಉದ್ದವೋ? ನನ್ನ ಹಾಗೆಯೇ ಅವನೂ ಮಾತಾಡುತ್ತಿದ್ದನೋ? ನನ್ನಂತೆಯೇ ನಿಲವಂಗಿಯನ್ನು ತೊಟ್ಟು ಕೈಯ್ಯಲ್ಲಿ ಒಂದು ಸೀಸದ ಕಡ್ಡಿಯನ್ನು ಹಿಡಿದಿದ್ದನೋ?'' ಎನ್ನಲು, ಅವಳು ಸಂತೋಷದಿಂದ,

''ಅಹುದಹುದು, ಅವನನ್ನು ನೀವು ಬಲ್ಲಿರಾ?"

''ಅಮ್ಮಾ! ಆಂಗ್ಲೇಯ ದೇಶಕ್ಕೆ ಹೋಗಿ ಅಲ್ಲಿಯ ಜನರಂತೆ ಉಡಿಗೆ ತೊಡಿಗೆಗಳನ್ನು ಹಾಕಿಕೊಂಡು ವಿಜಯಧ್ವಜನೆಂಬುವನೊಬ್ಬನು ಈ ರೀತಿ ಜನರಿಗೆ ಉಪಕಾರ ಮಾಡುತ್ತಿದ್ದುದನ್ನು ನಾನು ನೋಡಿದ್ದೆನು."

''ತಾನಿಂಥವನೆಂದು ಯಾರಿಗೂ ತಿಳಿಸದೆ?''

''ಲೋಕದಲ್ಲಿ ಕೃತಜ್ಞತೆಯೇ ಇಲ್ಲವೆಂದು ನನಂತೆಯೇ ನಂಬಿದ್ದ ಅವನೊಬ್ಬ ವಿಲಕ್ಷಣ ಪುರುಷ.''

''ಹಾಗಾದರೆ ಅವನಿಗೆ ಏತರಲ್ಲಿ ನಂಬಿಕೆ?''

'' ಆ ಕಾಲದಲ್ಲಿ ಅವನಿಗೆ ಆ ನಂಬಿಕೆಯು ಇರಲಿಲ್ಲ. ಈ ಚೆ ಗೆ ನಿಮ್ಮಂಥವರನ್ನು ನೋಡಿ ಆ ಅಭಿಪ್ರಾಯವನ್ನು ಬದಲಾಯಿಸಿದ್ದಾನೆ."

"ತಾವು ಅವರನ್ನು ಬಲ್ಲಿರೋ?'' ಎಂದು 'ಮನೋಮೋಹನನು ಕೇಳಲು, ರತ್ನಾಂಬೆಯು

"ತಮಗೆ ಅವರು ತಿಳಿದಿದ್ದರೆ ಅವರಿರುವ ಸ್ಥಳವನ್ನು ಹೇಳಿರಿ. ಅವರ ಮುಂದೆ ನಮ್ಮ ಹೃದಯವನ್ನು ಬಿಚ್ಚಿ ಕೃತಜ್ಞತೆಯು ಲೋಕದಲ್ಲಿ ಉಂಟೆಂಬುದನ್ನು ತಿಳಿಸುತ್ತೇವೆ'' ಎಂದಳು. ಇದನ್ನು ಕೇಳಿದ ಕೂಡಲೇ ಮಲಯಸಿಂಹನಿಗೆ ಆನಂದಭಾಷ್ಪಗಳು ಉಕ್ಕಿಬರುತ್ತಿರಲು ಪುನಃ ಶತಪಥ ಮಾಡತೊಡಗಿ, ಮಿತಿಮೀರಿ ಬಂದ ಆನಂದವನ್ನು ಹಾಗೆಯೇ ಅಡಗಿಸಿಕೊಂಡು,

"ನಿಮ್ಮ ಉಪಕಾರಕನು ವಿಭಯಧ್ವಜನೇ ಆಗಿದ್ದರೆ ನೀವು ಅವನನ್ನು ನೋಡಲಾರಿರಿ. ಎರಡು ವರ್ಷಗಳ ಹಿಂದೆ ಅವನನ್ನು ನಾನು ನೋಡಿದ್ದಾಗ 'ನಾನು ಬಹು ದೂರ ಸಂಚಾರ ಮಾಡುತ್ತೇನೆ' ಎಂದು ಹೇಳಿದ್ದನು. ಇದಲ್ಲದೆ ಅವನು ನನ್ನ ಆಪ್ತ ಸ್ನೇಹಿತನು. ಆಪ್ತನೆಂದರೆ ನಾನೇ ಅವನು, ಅವನೇ ನಾನು' ಎಂದು ಹೇಳಬಹುದು. ಹೀಗಿರುವಲ್ಲಿ ಈ ಉಪಕಾರವನ್ನು ನಿಮಗೆ ಮಾಡಿದ್ದರೆ ನನ್ನ ಸಂಗಡ ಹೇಳುತ್ತಲಿದ್ದನು."

ಆಗ ಜಯವೀರನು ತಂಗಿಯನ್ನು ಕುರಿತು ''ಅಮ್ಮಾ ! ರಾಜರು ಹೇಳುವುದು ಸರಿಯೆ. ತನನ್ನು ಕಾಪಿಟ್ಟ ಮಹಾಪುರುಷನು ಆಂಗ್ಲೇಯನಲ್ಲವೆಂದು ನಮ್ಮ ತಂದೆಯು ಹೇಳುತ್ತಲಿದ್ದನು. ನೀನು ಕಾ ಣೆ ಯಾ ?" ಎಂದು ಹೇಳಲು ಮಲಯಸಿಂಹನು ಸ್ವಲ್ಪ ಬೆಚ್ಚಿ,

ನಿಮ್ಮ ತಂದೆಯು ಏನನ್ನು ಹೇಳುತ್ತಲಿದ್ದರು?"

‟ಸ್ವಾಮಿ ! ನಮ್ಮ ತಂದೆಯು ಸಾಯುವವರೆಗೆ ಎಷ್ಟೋ ವಿಚಾರ ಮಾಡಿ ಯಾವುದೂ ತಿಳಿಯದೆ ಕೊನೆಗೆ ಅವಸಾನ ಕಾಲದಲ್ಲಿ ನನ್ನನ್ನು ಕರೆದು ‟ಅಪ್ಪಾ ! ನಮಗೆ ಉಪಕಾರ ಮಾಡಿದವನು. ಜಯಲಕ್ಷ್ಮಿಯಲ್ಲಿಗ್ದ ಧರ್ಮದೇವನಲ್ಲದೆ ಮತ್ತಾರೂ ಅಲ್ಲವೆಂದು ನನ್ನ ಮನಸ್ಸಿಗೆ ತೋರುತ್ತಲಿದೆ' ಎಂದು ಹೇಳುತ್ತ ಪ್ರಾಣವನ್ನು ಬಿಟ್ಟನು'' ಎಂದನು. ಜಯವೀರನು ಹೀಗೆಂದುದನ್ನು ಕೇಳಿದೊಡನೆಯೇ ಮಲಯಸಿಂಹನ ಮುಖವು ಬಿ ಳ್ಪೇ ರಿ ಯಾವ ಮಾತನ್ನೂ ಆಡಲರಿಯದೆ ಗಡಿಯಾರವನ್ನು ನೋಡಿ,

''ಈಗ ಹೊತ್ತಾಯಿತು ; ನಾನು ಹೋಗಿ ಬರುವೆನು. ನಿಮ್ಮ ಸುಖವನ್ನು ನೋಡಿ ನನಗೆ ಪರಮಾನಂದವಾಯಿತು. ಬಹುಕಾಲದಿಂದ ಇಂತಹ ಆನಂದವನ್ನು ಕಂಡರಿಯೆನಾದುದರಿಂದ ನೀವುಗಳು ಅಪ್ಪಣೆಯನ್ನಿತ್ತರೆ ಬಾರಿ

ಬಾರಿಗೂ ಇಲ್ಲಿ ಬಂದು ನಿಮ್ಮ ಸಂತೋಷದಲ್ಲಿ ನಾನೂ ಭಾಗಿಯಾಗುತ್ತೇನೆ. ನಿಮ್ಮಗಳ ಸ್ನೇಹವು ನನಗೆ ಅವಶ್ಯವಾದುದು'' ಎಂದು ಹೇಳಿ ಮೂವರಲ್ಲಿಯೂ ತನಗಿದ್ದ ಪ್ರೀತಿಯನ್ನು ತೋರಿಸಿ ಹೊರಟುಹೋದನು.

ಅವನತ್ತ ಹೋದ ಕೂಡಲೇ ಮನೋಮೋಹನನು "ಇವನು ವಿಜಾತೀಯ ರಾಜನು'' ಎಂದುದಕ್ಕೆ ಜಯವೀರನು ''ಅಹುದು, ಆದರೆ ಉತ್ಕೃಷ್ಟ ಹೃದಯನು. ನಮ್ಮನ್ನು ಕಂಡರೆ ಬಹುಪ್ರೀತಿ" ಎಂದನು. ಆಗ ರತ್ನಾಂಬೆಯು ''ಇವನ ಧ್ವನಿಯನ್ನು ಹಿಂದೆ ಎಲ್ಲಿಯೋ ಕೇಳಿದ್ದೇನೆ'' ಎಂದಳು.

---

# ಮೂವತ್ತಾರನೆಯ ಅಧ್ಯಾಯ

## ಪ್ರೇಮಭಾವ

ಮಲಯಸಿಂಹನ ಮನೆಗೆ ಸುಮಾರು ಮುಕ್ಕಾಲು ಮೈಲಿಯ ದೂರದಲ್ಲಿ ಒಂದು ದೊಡ್ಡ ಮಹಡಿಯ ಮನೆಯಿದ್ದಿತು. ಆ ಮನೆಯ ಹಿಂಭಾಗದಲ್ಲಿ ವಿಸ್ತಾರವಾಗಿ ಪ್ರತ್ಯೇಕವಾದ ಎರಡು ಉಪವನಗಳು ಒಂದರ ಹಿಂದೆ ಒಂದು ಇದ್ದುವು. ಮನೆಯ ಒತ್ತಿನಲ್ಲಿದ್ದ ಆರಾಮದಲ್ಲಿ ನಾನಾವಿಧವಾದ ಆಕಾರಗಳುಳ್ಳ ದಟ್ಟವಾದ ಪಾತಿಗಳೂ, ಮಾಲತಿ ಜಾಜಿ ಮುಂತಾದ ಸುವಾಸನೆಯನ್ನು ಬೀರುವ ಹೂವಿನ ಬಳ್ಳಿಗಳೂ, ಲತಾಗೃಹಗಳೂ, ವಿಶ್ರಮಿಸಿಕೊಳ್ಳಲು ಅಲ್ಲಲ್ಲಿ ಹಾಕಿದ್ದ ಉನ್ನತಶಿಲಾಸ್ತರಣಗಳೂ ರಮಣೀಯವಾದ ಸಣ್ಣಸಣ್ಣ ಕೃತಕ ತಟಾಕಗಳೂ, ಗಿಡಗಳಿಂದ ತುಂಬಿದ ಕೃತ್ರಿಮಪರ್ವತಗಳೂ, ಕುಳಿತು ಬೇಸರಿಕೆಯಾದರೆ ವಿನೋದವಾಗಿ ಓಡಾಡುವುದಕ್ಕೆ ಅನುಕೂಲವಾಗಿರುವಂತೆ ಮಾಡಿದ್ದ ಕಾಲಹಾರಿಗಳೂ, ಕಣ್ಣಿಗೆ ಇಂಪಾಗಿ ತೋರುವ ಗರುಕೆಯ ಬಯಲುಗಳೂ ಇದ್ದುವು. ಇನ್ನೊಂದು ತೋಟವು ಬರಿಯ ಕರಡು ನೆಲವಾಗಿ ಪಾಳುಬಿದ್ದಿತು.

ಈ ಎರಡು ತೋಟಗಳ ಸುತ್ತಲೂ ಆಳು ಮಟ್ಟಕ್ಕೆ ಪೌಳಿಯ ಗೋಡೆಯು ಇದ್ದಿತು. ಇವುಗಳ ನಡುವೆ ಒಂದು ಅಡ್ಡಗೋಡೆಯು ಇದ್ದಿತು. ಈ ಅಡ್ಡಗೋಡೆಯೊಳಗೆ ಪೂರ್ವದಲ್ಲಿ ಇಟ್ಟಿದ್ದ ಕಬ್ಬಿಣದ ಬಾಗಿಲೂ ಮರದ ಕದಗಳೂ

ಹಾಗೆಯೇ ಇದ್ದರೂ ತೋಟವನ್ನು ನೂರಿದಂದಿನಿಂದ ಆ ಬಾಗಿಲನ್ನು ತೆಗೆಯಲೇ ಇಲ್ಲ. ಆ ತೋಟದಿಂದ ಪಕ್ಕದ ಬೀದಿಗೆ ಹೋಗಲು ಒಂದು ಸಣ್ಣ ಬಾಗಿಲೂ ಕದವೂ ಇದ್ದುವು.

ಮನೆಯ ಒತ್ತಿನಲ್ಲಿ ಉಪವನದಲ್ಲಿದ್ದ ತೋಪುಗಳು ದಟ್ಟವಾಗಿದ್ದರೂ ಅವುಗಳಲ್ಲಿ ಒಂದು ಮಾತ್ರ ಬಹಳ ವಿಸ್ತಾರವಾಗಿಯೂ ಒಳ್ಳೆಯ ಬೇಸಗೆಯ ಬೇಗೆಯಲ್ಲಿ ಕೂಡಾ ತಂಪಾಗಿಯೂ ಇರುತ್ತಿದ್ದಿತು. ವಸಂತಋತುವಿನ ಒಂದಾನೊಂದು ಸಾಯಂಕಾಲ ಸುಮಾರು ಐದು ಗಂಟೆಯ ವೇಳೆಯಲ್ಲಿ ಆ ತೋಪಿನ ಮಧ್ಯೆ ಹಾಕಿದ್ದ ಶಿಲಾಸನದ ಮೇಲೆ ಒಂದು ತೆರೆದ ಪುಸ್ತಕವೂ ಕಸೂತಿ ಕೆಲಸದ ಸಾಮಾನುಗಳನ್ನಿಟ್ಟಿದ್ದ ಹುಲ್ಲಿನ ಪೆಟ್ಟಿಗೆಯೂ ಇದ್ದುವು. ಅದಕ್ಕೆ ಸ್ವಲ್ಪ ದೂರದಲ್ಲಿ ಕಬ್ಬಿಣದ ಬಾಗಿಲ ಕದದ ಸಂದಿನಲ್ಲಿ ಯಾವುದನ್ನೋ ಅತ್ಯಾಸಕ್ತಿಯಿಂದ ನೋಡುತ್ತ ಯುವತಿಯೊಬ್ಬಳು ನಿಂತಿದ್ದಳು. ಇವಳು ನೋಡಿ ನೋಡಿ ಬೇಸತ್ತು ಅತ್ತಿತ್ತ ತಿರುಗುತ್ತ ಪುನಃ ನೋಡುತ್ತಲಿದ್ದಾಗ ಒಬ್ಬ ಯುವಕನು ಪಕ್ಕದ ತೋಟದ ಸಣ್ಣ ಬಾಗಿಲನ್ನು ತೆಗೆದುಕೊಂಡು, ಪುನಃ ಕದವನ್ನು ಮುಚ್ಚಿ ಅತ್ತಿತ್ತ ನೋಡಿ ಯಾರೂ ಇಲ್ಲವೆಂದು ದೃಢಪಡಿಸಿಕೊಂಡು ಅವಸರದಿಂದ ಕಬ್ಬಿಣದ ಬಾಗಿಲ ಬಳಿಗೆ ಬರುತ್ತಿದ್ದನು.

ಅವನ ಉಡುಪನ್ನು ನೋಡಿ ಆ ಯುವತಿಯು ಹೆದರಿ ಮರೆಯಾದುದನ್ನು ಕಂಡು ಆ ಯುವಕನು ಅವಳು ನೋಡುತ್ತಲಿದ್ದ ಬಾಗಿಲ ಸಂದಿನಲ್ಲಿ ತನ್ನ ಮುಖವನ್ನಿಟ್ಟು "ವಿಮಲೇ ! ಏಕೆ ಓಡಿಹೋದೆ ?" ಎಂದನು.

ಆಗ ವಿಮಲೆಯು ಪುನಃ ಬಾಗಿಲ ಸಮೀಪಕ್ಕೆ ಬಂದು "ಪ್ರಿಯನೇ ! ಇಂದು ನೀನು ಬರುವುದಕ್ಕೆ ಏಕೆ ಇಷ್ಟು ಹೊತ್ತಾಯಿತು ? ಈಗ ಅಲ್ಪಾಹಾರದ ಸಮಯ; ಯಾವಾಗಲೂ ನನ್ನ ಆಟಪಾಟಗಳನ್ನು ಅತಿ ಜಾಗರೂಕತೆಯಿಂದ ನೋಡುತ್ತಲಿರುವ ನನ್ನ ಮಲತಾಯಿ, ಒಂದು ನಿಮಿಷವೂ ನನ್ನನ್ನು ಪೀಡಿಸದೆ ಇರದ ನನ್ನ ಮಲತಮ್ಮ, ಅತಿಶ್ರದ್ಧೆಯಿಂದ ನೋಡುತ್ತಲಿರುವ ನನ್ನ ದಾಸಿ, ಇವರುಗಳಿಂದ ಉಪಾಯವಾಗಿ ತಪ್ಪಿಸಿಕೊಂಡು ಬರುವುದೇ ಕೃತಾವಸ್ಥೆಯಾಯಿತು. ಹೊತ್ತು ಹೋಗಿ ಬಂದ ತಪ್ಪಿಗಾಗಿ ನಿನಗೇನು ಮಾಡಲಿ ? ಅದಿರಲಿ; ಇದೇನು ವೇಷ ? ನಿನ್ನ ಗುರುತೇ ಸಿಕ್ಕಲಿಲ್ಲವಲ್ಲ ?"

"ನೀನು ದೊಡ್ಡವರ ಮಗಳು, ನಾನು ಬಡವರ ಹೊಟ್ಟೆಯಲ್ಲಿ ಹುಟ್ಟಿ

ದವನು; ನಿನ್ನ ಸ್ಥಿತಿಗೂ ನನ್ನ ಸ್ಥಿತಿಗೂ ಬಹಳ ವ್ಯತ್ಯಾಸ; ಆದುದರಿಂದ ನನ್ನಲ್ಲಿ ಪ್ರೀತಿಯನ್ನಿಟ್ಟಿರುವೆನೆಂದು ತಿಳಿಸುವುದಕ್ಕೆ ನನಗೆ ಹೆದರಿಕೆ. ನನ್ನ ಪ್ರಾಣವನ್ನೇ ನಿನಗೆ ಅರ್ಪಿಸಿ ಪ್ರತಿದಿನವೂ ನಿನ್ನನ್ನು ನೋಡಿ ನಿನ್ನ ಸಂಗಡ ಒಂದೆರಡು ಮಾತನಾಡದಿದ್ದರೆ ನಾನು ಜೀವಿಸಲಾರೆನು. ಈ ವೇಷವೇನೆಂದು ಕೇಳಿದೆಯಲ್ಲವೇ ? ನಾನು ಬಾರಿಬಾರಿಗೆ ಈ ಪಾಳು ತೋಟಕ್ಕೆ ಬರುವುದನ್ನು, ಹೋಗುವುದನ್ನು ಯಾರಾದರೂ ನೋಡಿದರೆ ಏನನ್ನಾದರೂ ಹೇಳುವರು ; ಆದಕ್ಕೆ ಆಸ್ಪದ ಕೊಡದಂತೆ ಇರಲು ಈ ಪಾಳು ನೆಲವನ್ನು ವ್ಯವಸಾಯಕ್ಕೆ ತೆಗೆದುಕೊಂಡು ತೋಟಗಾರನಂತೆ ವೇಷವನ್ನು ಹಾಕಿಕೊಂಡಿದ್ದೇನೆ."

"ನಿನಗೆ ಶುದ್ಧ ಹುಚ್ಚು."

"ಈ ವೇಶದಿಂದ ನಮ್ಮಿಬ್ಬರ ಸಮಾಗಮವು ಯಾರಿಗೂ ಗೊತ್ತಾಗುವುದಿಲ್ಲ. ಇಲ್ಲಿ ಒಂದು ಸಣ್ಣ ಗುಡಿಸಲನ್ನು ಹಾಕಿಕೊಂಡು ನುಸಾಲೆಯ ಸೊಪ್ಪನ್ನು ಬೆಳೆಯಿಸುತ್ತ ವ್ಯವಸಾಯ ಮಾಡುತ್ತಲಿದ್ದರೆ ನಿನ್ನನ್ನು ಆಗಾಗ ನೋಡುತ್ತ ಕಣ್ಣುಗಳನ್ನು ಸಾರ್ಥಕ ಪಡಿಸಿಕೊಳ್ಳುತ್ತೇನೆ. ನಿನ್ನ ಧ್ವನಿಯನ್ನು ಕೇಳಿ ಕಿವಿಗಳು ಧನ್ಯವಾಗುವುವು. ಇದರ ಮೇಲೆ ನನಗೆ ನಿನ್ನಲ್ಲಿರುವ ಪ್ರೀತಿಯನ್ನು ಬಣ್ಣಿಸಿ ನಾಲಗೆಯನ್ನು ಸಫಲಗೊಳಿಸುವೆನು."

"ಜಯವೀರ ! ನೀನು ಹೀಗೆ ಹೇಳುವುದು ಸರಿಯಲ್ಲ. ಎಷ್ಟೋ ಚಿಕ್ಕವರು ತಮ್ಮ ತಮ್ಮ ಬುದ್ಧಿಯನ್ನು ನೆಚ್ಚಿ ಕೆಲಸಮಾಡಿ ಪಾಡುಪಟ್ಟಿರುವುದನ್ನು ನಾವು ನೋಡಿಯೂ ಕೇಳಿಯೂ ಇಲ್ಲವೇ ?"

"ವಿಮಲೆ ! ನಾನೇನು ಅಷ್ಟು ಅವಿವೇಕಿಯೇ ? ನಾವು ಮೊದಲು ಸಂಧಿಸಿ ಮಾತನಾಡಿದಂದಿನಿಂದ ಮಾತಿನಿಂದಲೇ ಆಗಲಿ ಚರ್ಯದಿಂದಲೇ ಆಗಲಿ ಯಾವುದಾದರೂ ಅವಿವೇಕವನ್ನು ಕಂಡಿರುವೆಯಾ ? ನಮ್ಮಿಬ್ಬರ ಅಭಿಪ್ರಾಯಗಳು ಹೇಗಾದರೂ ಇರಲಿ. ನಿನ್ನ ತಂದೆಯು ನಿನ್ನನ್ನು ವೀರಸಿಂಹನಿಗೆ ಕೊಟ್ಟು ಮದುವೆ ಮಾಡಬೇಕೆಂದು ನಿಶ್ಚಯಿಸಿದ್ದಾನೆಂದು ನೀನು ತಿಳಿಸಿದಂದಿನಿಂದ ದೇವರು ಏನು ಮಾಡೂತ್ತಾನೋ ನೋಡೋಣವೆಂದು ನಾನು ಆತುರದಿಂದ ಇರುತಿದ್ದೇನೆ ಅಲ್ಲವೆ ? ನನ್ನ ಹಿಂದೆ ಮುಂದೆ ತಿರುಗಬೇಡವೆಂದು ನೀನು ಹೇಳಿದುದಕ್ಕೆ ನಾನು ಎಂದಾದರೂ ತಪ್ಪಿ ನಡೆದಿದ್ದೇನೆಯೇ ? ಹೇಳು."

"ಇಲ್ಲ, ಇಲ್ಲ. ನಿನ್ನ ಮಾತಿನಂತೆ ನೀನು ನಡೆದಿದ್ದೀಯೆ, ಸಂದೇಹವೇ

ಇಲ್ಲ; ಆದರೆ ಅದು ನಿನ್ನ ಸುಖಕ್ಕಾಗಿಯೇ ಮಾಡಿದುದು. ಈ ಲೋಕ ದಲ್ಲಿ ನನಗೆ ಹಿತವಂತರಾರೂ ಇಲ್ಲ. ತಂದೆಯು ಲಕ್ಷ್ಯ ಮಾಡದೆ ಮಲ ತಾಯಿಯು ಪ್ರೀತಿಸದಿರುವ ಈ ಸ್ಥಿತಿಯಲ್ಲಿ ಕೈಕಾಲು ಸ್ವಾಧೀನವಿಲ್ಲದಿದ್ದರೂ ತಾತನು ನನ್ನನ್ನು ಪ್ರೀತಿಸದಿದ್ದರೆ ನನ್ನ ಗತಿ ಏನಾಗಬೇಕು. ಎಲ್ಲರೂ ಶತ್ರು ಗಳಾಗಿರುವಾಗ ಹಿತೈಷಿಯಾದ ತಾತನೂ ಜೀವಚ್ಛವವಾಗಿದ್ದಾನೆ. ನನ್ನ ಅದೃಷ್ಟಕ್ಕೆ ಎಣೆಯುಂಟೇ ? ಇಂಥ ನನ್ನನ್ನು ನೀನು ಕೇವಲ ಕೃಪೆಯಿಂದ ಪ್ರೀತಿಸಬೇಕೇ ಅಲ್ಲದೆ ಮತ್ಯಾವ ಪ್ರತ್ಯಾಶೆಯಿಂದಲೂ ಅಲ್ಲ."

"ಪ್ರಿಯೇ ! ನನಗೆ ಮದುವೆಯಾಗಿರುವ ತಂಗಿಯೊಬ್ಬಳುಂಟು ಅವ ಳನ್ನು ಕಂಡರೆ ನನಗೆ ಅತಿ ಪ್ರೀತಿ; ಅವಳಲ್ಲಿರುವ ಪ್ರೀತಿಗೂ ನಿನ್ನ ಮೇಲಿರುವ ಪ್ರೀತಿಗೂ ತುಂಬಾ ತಾರತಮ್ಯವಿದೆ. ನಿನ್ನ ಯೋಚನೆಯು ಬಂದ ಕೂಡಲೇ ಎದೆಯು ಝಲ್ಲೆಂದು ಹಾರಿ ರೋಮಾಂಚವುಂಟಾಗುವುದು. ಹೀಗಿದ್ದರೂ ನಿನ್ನ ಪಾಣಿಗ್ರಹಣ ಮಾಡುವವರೆಗೂ ನನ್ನ ಪ್ರೇಮಾಧಿಕ್ಯವನ್ನು ನಿನ್ನಾಣೆಗೂ ತಡೆದಿರುವೆನು.''

ಆ ಮಾತನ್ನು ಕೇಳಿ ವಿಮಲೆಯು ಸುಮ್ಮನಿದ್ದಳು. ಜಯವೀರನು ಪುನಃ ಹೇಳಲಾರಂಭಿಸಿ, "ಎಲೌ ಪ್ರಿಯೇ ! ವೀರಸಿಂಹನು ಇನ್ನೂ ಒಂದು ವರ್ಷ ಊರಿಗೆ ಬರುವುದಿಲ್ಲವಂತೆ; ಅದು ನಿಜವಾಗಿ ದೈವಸಹಾಯವೂ ಅನು ಕೂಲಿಸಿದರೆ ಏಕೆ ನಮಗನುಕೂಲವಾಗಬಾರದು ? ನನ್ನ ಇಷ್ಟಾರ್ಥವನ್ನು ದೇವಲ್ಲಿ ದೃಢಭಕ್ತಿಯಿಂದ ಅರಿಕೆಮಾಡಿಕೊಂಡಿರುವೆನಾದುದರಿಂದ ನನ್ನ ಪ್ರಾರ್ಥನೆಯು ವ್ಯರ್ಥವಾಗಲಾರದು. ನನ್ನನ್ನು ನೀನು ಸ್ವಾರ್ಥಪರನೆಂದು ನಿಂದಿಸಿದೆ. ನನಗಾಗಿ ನೀನು ಏನು ಮಾಡಿದ್ದೀಯೆ, ನೋಡೋಣ ? ಅಂದ ವಾದ ಪುತ್ತಳಿಯಂತೆ ನನ್ನ ಎದುರಿಗೆ ಬಂದು ನಿಲ್ಲುತ್ತೀಯೆ; ಅಲ್ಲದೆ ಮುಂದೆ ನನ್ನ ಇಷ್ಟಾರ್ಥವನ್ನು ನೆರವೇರಿಸಲು ಯಾವ ಏರ್ಪಾಡು ಮಾಡಿದ್ದೀಯೆ ಎಂಬುದನ್ನು ಯಾವಾಗಲಾದರೂ ನನ್ನೊಡನೆ ಹೇಳಿದ್ದೀಯಾ ? ವೀರಸಿಂಹ ನಲ್ಲಿ ನಿನಗೆ ಪ್ರೇಮವಿಲ್ಲದಿದ್ದರೂ ತಂದೆಯ ಬಲಾತ್ಕಾರದಿಂದ ಅವನ ಕೈಹಿಡಿ ಯಬೇಕಲ್ಲಾ ಎಂಬುದೊಂದೇ ದುಃಖವೋ ನಿನಗೆ ? ಮತ್ತೇನಾದರೂ ಉಂಟೋ? ನಾನು ನಿನ್ನ ವಿಷಯದಲ್ಲಿ ಪ್ರಾಣವನ್ನಾದರೂ ಒಪ್ಪಿಸುತ್ತೇನೆ; ನನ್ನ ಪ್ರಾಣವು ನಿನ್ನ ಪ್ರಾಣದಲ್ಲಿ ಐಕ್ಯವಾಗಿ ಹೋಗಿದೆ. ನೀನು ಮತ್ತೊಬ್ಬನ ಕೈಹಿಡಿದ

ಮೇಲೆ ನಾನು ಒಂದು ನಿಮಿಷವೂ ಬದುಕಿರಲಾರೆನು. ಹೀಗಿರುವಲ್ಲಿ ನಿನ್ನ ತಂದೆಯು ಮಾಡಿದ ಏರ್ಪಾಡನ್ನು ಇಷ್ಟು ಸಂಕೋಚವಿಲ್ಲದೆ ನನ್ನೊಡನೆ ಹೇಳಲು ನಿನಗೆ ಹೇಗೆ ತಾನೇ ಮನಸ್ಸು ಬಂದಿತು ? ವಿಮಲೇ! ನಾನೇ ನೀನಾಗಿದ್ದು ನಾನು ನಿನ್ನನ್ನು ಪ್ರೀತಿಸುವಂತೆ ನೀನು ನನ್ನನ್ನು ಪ್ರೀತಿಸುತ್ತಿದ್ದರೆ ನನ್ನ ಪ್ರಾಣಪ್ರಿಯನೆ ! ಹೇಗಾದರೂ ಆಗಲಿ, ನಾನು ನಿನ್ನವಳೇ ಎನ್ನುತ್ತಲಿದ್ದೆನು"

ಅದನ್ನು ಕೇಳಿ ವಿಮಲೆಯ ಮುಖವು ಕೆಚ್ಚನಾಯಿತು. ಜಯವೀರನು ನೋಡಿ

"ನನ್ನಿಂದೇನಾದರೂ ತಪ್ಪಾಯಿತೇ ? ನಾನು ಈಗ ಹೇಳಿದುದನ್ನೆಲ್ಲಾ ಮರೆತುಬಿಡು"

"ನಿನ್ನಿಂದೇನು ಅಪರಾಧ ? ತಾಯಿಲ್ಲದ ತಬ್ಬಲಿ ಏನು ಮಾಡಾಳು ? ತಂದೆಯು ಯಾವುದನ್ನೂ ಮೈಮೇಲೆ ಹಾಕಿಕೊಳ್ಳನು; ಮಲತಾಯಿಯು ಯಾವಾಗಲೂ ನನಗೆ ಮೊಗಗೊಡದೆ ದ್ವೇಷಿಸುತ್ತಲಿರುವಳು; ಮಲತಮ್ಮನು ಯಾವಾಗಲೂ ಕಲ್ಮಷಬುದ್ಧಿಯಿಂದ ಹಿಂಸಿಸುತ್ತಿರುವನು. ಹೀಗಿರುವಲ್ಲಿ ನಾನೇನು ತಾನೇ ಮಾಡಬಲ್ಲೆನು ?"

"ಏನು ಮಲತಾಯಿಯು ನಿನ್ನನ್ನು ದ್ವೇಷಿಸುತ್ತಾಳೆಯೇ ? ನಿನ್ನಂಥವಳನ್ನು ದ್ವೇಷಿಸಲು ಲೋಕದಲ್ಲಿ ಯಾರಿಗೆ ತಾನೇ ಮನಸ್ಸು ಬರುವುದು ?"

"ಅವಳು ನನ್ನನ್ನು ದ್ವೇಷಿಸುವುದಕ್ಕೆ ಒಂದು ಕಾರಣವುಂಟು. ಅವಳಿಗೆ ತಾಯಿ ತಂದೆಯ ಆಸ್ತಿ ಯಾವುದೂ ಇಲ್ಲ. ನನ್ನ ಮಾತಾಮಹನ ಆಸ್ತಿಯೆಲ್ಲಾ ಅವನ ಕಾಲಾನಂತರ ನನಗೆ ಬರುವುದು; ತನ್ನ ಮಗನಿಗೆ ಯಾವುದೂ ಇಲ್ಲದೆ ನನಗೆ ಮಾತ್ರ ಅಷ್ಟು ಆಸ್ತಿಯೂ ಬರುವುದಲ್ಲಾ ಎಂದು ಅವಳಿಗೆ ನನ್ನಲ್ಲಿ ಅಸೂಯೆ. ಅವಳು ಬಾಯಿಬಿಟ್ಟು ನನ್ನನ್ನು ಕೇಳಿದರೆ ನನ್ನ ಆಸ್ತಿಯಲ್ಲಿ ಅರ್ಧವನ್ನಾದರೂ ಕೊಟ್ಟೇನು. ಅವಳು ನನ್ನನ್ನು ದ್ವೇಷಿಸದೆ ಪ್ರೀತಿಯುಳ್ಳವಳಾಗಿರುವುದಾದರೆ ನನ್ನ ಆಸ್ತಿಯನ್ನೆಲ್ಲಾ ಬೇಕಾದರೂ ಕೊಟ್ಟೇನು."

"ಅಯ್ಯೋ ಪಾಪ."

"ತಂದೆಯ ಮನೆಯಲ್ಲಿದ್ದರೂ ಬಂದಿಶಾಲೆಯಲ್ಲಿರುವಂತಿದೆ. ಇಲ್ಲಿಂದ ತಪ್ಪಿಸಿಕೊಂಡು ಹೋಗೋಣವೆಂದರೆ ಅನಾಥೆಯಾಗಿ ಹೋಗಿಬಿಡುವೆನು: ತಂದೆಯು ಬುದ್ಧಿವಂತನೆಂತಲೂ ಪ್ರಾಮಾಣಿಕನೆಂತಲೂ ಗಣ್ಯನಾಗಿದ್ದಾನೆ;

ಅವನ ಅಧಿಕಾರ ದೊಡ್ಡದು; ಅವನನ್ನು ಕಂಡರೆ ರಾಜನಿಗೂ ಹೆದರಿಗೆ. ತನ್ನ ಯೋಚನೆಯಂತೆ ನನ್ನ ವಿವಾಹವು ನಡೆಯದಿದ್ದಲ್ಲಿ ಅವನು ನಿನ್ನನ್ನು ಒಂದು ನಿಮಿಷದಲ್ಲಿಯೇ ನಜ್ಜುಗುಜ್ಜು ಮಾಡುವನು. ನಿನ್ನ ಕ್ಷೇಮಾರ್ಥವಾಗಿಯೇ ನಾನು ಈ ಸೆರೆಯನ್ನು ಬಿಟ್ಟು ಬಾರದೆ ಇದ್ದೇನೆ."

"ವಿಮಲೇ ! ಹೀಗೆ ಏತಕ್ಕೆ ಕೆಟ್ಟದ್ದನ್ನೇ ಯೋಚಿಸುತ್ತೀಯೇ ?"

"ಹಿಂದೆ ನಡೆದು ಬಂದಿರುವುದನ್ನೆಲ್ಲಾ ಯೋಚಿಸಿ ನೋಡಿದರೆ ಮುಂದೆ ಹೀಗೆಯೇ ನಡೆಯುವುದೆಂದು ಖಂಡಿತವಾಗಿ ಹೇಳಬಹುದು. ಅದು ಹೋಗಲಿ. ನಿನ್ನನ್ನು ಒಂದು ಮಾತು ಕೇಳಬೇಕೆಂದಿದ್ದೆನು."

"ಅದೇನು ?"

"ನಿನ್ನ ತಂದೆಗೂ ನನ್ನ ತಂದೆಗೂ ಹಿಂದೆ ಏನಾದರೂ ದ್ವೇಷವಿದ್ದಿತೋ?"

"ಯಾವುದನ್ನೂ ಕಾಣೆ; ರಾಜ್ಯತಂತ್ರವಿಚಾರಗಳಲ್ಲಿ ನನ್ನ ತಂದೆಯು ಚಕ್ರವರ್ತಿಯ ಪಕ್ಷವನ್ನೂ ನಿನ್ನ ತಂದೆಯು ರಾಜನ ಪಕ್ಷವನ್ನೂ ವಹಿಸಿದ್ದರು. ಅದಕ್ಕಾಗಿ ಏನಾದರೂ ದ್ವೇಷವಿದೆಯೋ ಏನೋ ? ಇದನ್ನು ಏಕೆ ಕೇಳಿದೆ ?"

"ಅದೂ ನಿನಗೆ ತಿಳಿದಿರಬೇಕಾದುದರಿಂದ ಹೇಳುತ್ತೇನೆ ಕೇಳು. ನಾನು ನಿತ್ಯವೂ ನನ್ನ ತಾತನಿಗೆ ವರ್ತಮಾನಪತ್ರಿಕೆಯನ್ನು ಓದಿ ಹೇಳುವ ಪದ್ಧತಿ. ಈಗ ಸುಮಾರು ಎಂಟು ತಿಂಗಳ ಹಿಂದೆ ಎಂದಿನಂತೆ ಪತ್ರಿಕೆಯನ್ನು ಓದುತ್ತಲಿದ್ದಾಗ ನನ್ನ ತಂದೆಯೂ ದುರ್ಮತಿಯೂ ಅಲ್ಲಿದ್ದರು. ಅಂದಿನ ಪತ್ರಿಕೆಯಲ್ಲಿ ನಿನಗೆ ಸೈನ್ಯದಲ್ಲಿ ದೊಡ್ಡ ಅಧಿಕಾರವಾಯಿತೆಂಬ ಸಮಾಚಾರವು ಬರೆದಿದ್ದಿತು. ಆ ವಿಷಯವನ್ನು ನೀನು ಹಿಂದಿನ ಸಾಯಂಕಾಲ ನನಗೆ ತಿಳಿಸಿದ್ದೆಯಾದ ಕಾರಣ ಅವರ ಮುಂದೆ ನಿನ್ನ ಹೆಸರನ್ನು ಹೇಳುವುದಕ್ಕೆ ನಾಚಿಕೊಂಡು ಅದನ್ನು ಓದಲೋ ಬೇಡವೋ, ಓದದಿದ್ದರೆ ಏನೆಂದುಕೊಳ್ಳುತ್ತಾರೆಯೋ, ಏನಾದರೂ ಆಗಲಿ ಎಂದು ಧೈರ್ಯಮಾಡಿ ಓದಿದೆನು. ಆಗ ನನ್ನ ತಂದೆಯು 'ಜಯವೀರನಾರು ? ಧನಕೋಟಿಯ ಮಗನೋ' ಎಂದು ಕೇಳಲು, ದುರ್ಮತಿಯು ಅಂತರಂಗದಲ್ಲಿ ದ್ವೇಷಾಸೂಯೆಗಳಿಂದ ಕೂಡಿದವನಾಗಿ, ಮೇಲೆ ನಗುತ್ತ 'ಅಹುದು' ಎಂದನು. ಆಗ ನನ್ನ ತಂದೆಯು 'ಅವರೆಲ್ಲಾ ಚಂಡಾಲರು' ಎಂದನು. ಅಲ್ಲಿದ್ದವರಲ್ಲಿ ನಿನ್ನ ಹೆಸರನ್ನು ಕೇಳಿ ಸಂತೋಷಪಟ್ಟವನು

ನನ್ನ ತಾತನೊಬ್ಬನೇ. ಅವನಿಗೆ ಸಂತೋಷವುಂಟಾದುದನ್ನು ಕಂಡು ನನಗೆ ಆಶ್ಚರ್ಯವಾಯಿತು. ನಿನಗೂ ಅವನಿಗೂ ಏನಾದರೂ ಸಂಬಂಧವುಂಟೋ ?''

"ನಮ್ಮಪ್ಪನೂ ನಿನ್ನಜ್ಜನೂ ಚಕ್ರವರ್ತಿಪಕ್ಷದವರು ; ಆದುದರಿಂದಲೇ ಅವರು ನನ್ನ ಹೆಸರನ್ನು ಕೇಳಿ ಸಂತೋಷಪಟ್ಟಿರಬಹುದು."

"ಯಾರೋ ನನ್ನನ್ನು ಕೂಗುವಂತಿದೆ; ನೀನು ಬೇಗ ಇಲ್ಲಿಂದ ಹೊರಟು ಹೋಗು" ಎಂದು ವಿಮಲೆಯು ಹೊರಟಳು. ಒಡನೆಯೇ ಜಯವೀರನು ಸಮೀಪದಲ್ಲಿದ್ದ ಪೊದರನ್ನು ಹೊಕ್ಕು ಅಲ್ಲಿ ಏನೋ ಕೆಲಸ ಮಾಡುವಂತೆ ಇದ್ದನು.

"ಅಮ್ಮಾ ವಿಮಲೆ ! ನಿನ್ನನ್ನು ಎಲ್ಲೆಲ್ಲಿ ಹುಡುಕಲಿ ? ಯಾರೋ ನಿನ್ನನ್ನು ನೋಡಬೇಕೆಂದು ಬಂದಿದ್ದಾರೆ, ಬಾ'' ಎಂದು ತೋಪಿನ ಅತ್ತಕಡೆಯಿಂದ ಯಾರೋ ಕೂಗಿದರು. ಕೂಡಲೆ ದಾಸಿಯೂ ಬಂದಳು.

"ನನ್ನನ್ನು ಹುಡುಕಿಕೊಂಡು ಬಂದಿರುವರಾರು ?"

"ಯಾರೋ ರಾಜಾಮಲಯಸಿಂಹನಂತೆ.''

"ಸರಿ, ಸರಿ, ಹಾಗಾದರೆ ನಡೆ, ಹೋಗೋಣ" ಎಂದು ವಿಮಲೆಯು ಪುಸ್ತಕವನ್ನೂ ಕಸೂತಿಯ ಪೆಟ್ಟಿಗೆಯನ್ನೂ ತೆಗೆದುಕೊಂಡು ಅವಳ ಹಿಂದೆ ಹೊರಟಳು.

---

# ಮೂವತ್ತೇಳನೆಯ ಅಧ್ಯಾಯ

## ವಿಷವೈದ್ಯ

ವಲ್ಲಭದೇವನು ತನ್ನ ಮನೆಗೆ ಬಂದ ಮೇಲೆ ತಾನೂ ಅವನ ಮನೆಗೆ ಒಂದು ಸಾರಿ ಹೋಗಿಬರುವುದು ಸಂಪ್ರದಾಯವೆಂದು ಮಲಯಸಿಂಹನು ಅವನನ್ನು ನೋಡಲು ಹೋದನು. ರಾಜನು ಬಂದಾಗ ವಲ್ಲಭದೇವನು ಮನೆಯಲ್ಲಿರಲಿಲ್ಲ. ನಾಗಮಣಿಯೊಬ್ಬಳೇ ಕೊಟ್ಟಡಿಯಲ್ಲಿದ್ದಳು. ಒಡನೆಯೇ ಅವಳು ಮಗನನ್ನು ಕರೆದುಕೊಂಡು ಬರುವಂತೆ ಸೇವಕನಿಗೆ ಹೇಳಿ ಕಳುಹಿಸಿದಳು ; ಕೂಡಲೆ ಹುಡುಗನು ಓಡಿ ಬಂದನು. ಹೀಗೆ ಬಂದುದು ತಾಯಿಯ ಮಾತನ್ನು ಪರಿಪಾಲಿಸುವುದಕ್ಕೆ ಆಗಲಿ ಅಥವಾ ರಾಜನಿಗೆ ತನ್ನ ಕೃತಜ್ಞತೆಯನ್ನು ತೋರಿಸುವುದಕ್ಕೇ

ಆಗಲಿ ಅಲ್ಲ; ಎರಡು ಮೂರು ದಿನಗಳಿಂದ ಮನೆಯೊಳಗೆ ರಾಜನ ಪ್ರಸ್ತಾಪ ವಿನಾ ಮತ್ತಾವುದೂ ನಡೆಯದಿದ್ದುದರಿಂದ, ರಾಜನು ಬಂದರೆ ತನ್ನ ಅಸಂಬದ್ಧ ವಾದ ಮಾತುಗಳಿಗೆ ಅವಕಾಶವುಂಟಾಗುವುದೆಂದು ಓಡಿ ಬಂದನು. ಅವನಿಗೆ ತಾನಾಡುವ ಮಾತುಗಳು ಅಸಂಬದ್ಧವಾದುವುಗಳೆಂದೇ ಆಗಲಿ ಚಮತ್ಕಾರ ವಾದುವೆಂದೇ ಆಗಲಿ ತಿಳಿಯದು. ಇಂಥಾ ಮಾತುಗಳನ್ನಾಡಿದಾಗೆಲ್ಲಾ ತಾಯಿಯು 'ಏನು ಅದ್ಭುತಬುದ್ಧಿ' ಎಂದುಹೇಳಿಕೊಂಡು ಹಿಗ್ಗುತ್ತಿದ್ದಳು.

ವಲ್ಲಭದೇವನನ್ನು ಕಾಣದೆ, "ಯಜಮಾನರು ಮನೆಯಲ್ಲಿಲ್ಲವೋ ?" ಎಂದು ರಾಜನು ಕೇಳಲು, ನಾಗಮಣಿಯು

"ಅವರು ಈಗತಾನೆ ಮಂತ್ರಿಯ ಮನೆಗೆ ಊಟಕ್ಕೆ ಹೋದರು. ನೀವು ಬಂದ ಸಮಾಚಾರವು ತಿಳಿದರೆ ಈ ವೇಳೆಯಲ್ಲಿ ತಾವು ಮನೆಯಲ್ಲಿರಲಿಲ್ಲವಲ್ಲಾ ಎಂದು ಅವರು ವ್ಯಸನ ಪಡುವರು" ಎಂದು ಹೇಳಿ, ಮಗುವನ್ನು ನೋಡಿ "ಎಲೋ ಮಗೂ ! ನಿನ್ನ ಅಕ್ಕನೆಲ್ಲಿ? ಅವಳಿಗೆ ರಾಜರನ್ನು ತೋರಿಸೋಣ. ಯಾರನ್ನಾದರೂ ಕಳುಹಿಸೋ, ಕರೆದುಕೊಂಡು ಬರಲಿ.''

"ಓಹೋ ! ನಿಮಗೊಬ್ಬ ಮಗಳಿದ್ದಾಳೆಯೋ ?''

"ಅವಳು ನನ್ನ ಸವತಿಯ ಮಗಳು; ಬಲು ಚಲೋ ಹುಡುಗಿ''

ನಾಗಮಣಿಯು ಹೀಗೆಂದ ಕೂಡಲೇ ಅಲ್ಲಿ ಇದ್ದ ಸಣ್ಣ ಗಿಣಿಯ ಪುಕ್ಕ ವನ್ನು ಎಳೆಯುತ್ತ ಆಡುತ್ತಿದ್ದ ನಾಗಕುಮಾರನು

"ಚಲೋ ಹುಡುಗಿ, ದೊಡ್ಡವಳು, ಆದರೂ ಸದಾ ಅಳುಮೋರೆಯವಳು" ಎಂದು ಕೂಗಿಕೊಂಡನು.

"ಬಾಯಿ ಮುಚ್ಚು"ಎಂದು ಮಗುವನ್ನು ಗದರಿಸಿಕೊಂಡು ರಾಜನನ್ನು ನೋಡಿ

''ಸ್ವಾಮಿ! ಈ ಹುಡುಗನು ಹೇಳುವುದು ನಿಜ. ನಾವು ಎಷ್ಟೆಷ್ಟು ಉಲ್ಲಾಸಗೊಳಿಸುತ್ತಲಿದ್ದರೂ ಅವಳು ಮಾತಾಡದೆ ಅಳುತ್ತ ಇರುವಳು."

ಎಂದು ಹೇಳಿ, ವಿಮಲೆಯು ಇನ್ನೂ ಬಾರದಿದ್ದುದನ್ನು ನೋಡಿ

''ಮಗೂ ಅಕ್ಕನೇಕೆ ಬರಲಿಲ್ಲ, ನೋಡಿ ಬಾ"

''ಅವಳಿಲ್ಲದ ಸ್ಥಳದಲ್ಲೆಲ್ಲ ಅವರು ಅವಳನ್ನು ಹುಡುಕುತ್ತಾರೆ.''

"ಅವರೆಲ್ಲಿ ಹುಡುಕುತ್ತಾರೆ ?"

"ತಾತನ ಕೊಟ್ಟಡಿಯಲ್ಲಿ."

‘‘ಅವಳಿರುವುದೆಲ್ಲಿ?"

"ಬೂರಗದ ಮಳದ ಕೆಳಗೆ"ಎಂದು ಹೇಳಿ, ಹುಡುಗನು ನೊಣಗಳನ್ನು ಹಿಡಿದು ಗಿಣಿಯ ಪಂಜರದೊಳಗೆ ಹಾಕುತ್ತಲಿದ್ದನು.

ಅಷ್ಟರಲ್ಲಿಯೇ ವಿಮಲೆಯೂ ಬಂದಳು. ಅವಳ ಮುಖದಲ್ಲಿ ಚಿಂತೆಯು ತೋರುತ್ತಲ್ಲಿದ್ದಿತು. ಚೆನ್ನಾಗಿ ಆ ಮುಖವನ್ನು ನೋಡಿದ್ದಲ್ಲಿ ಅವಳ ಹೃದಯ ದಲ್ಲಿ ಅಡಗಿರುವ ಸಂಕಟವು ಈಗ ತಾನೇ ಉಕ್ಕಿ ಬಂದು ಕಣ್ಣೀರಾಗಿ ಪ್ರವಹಿಸಿ ದಂತೆ ತೋರುತ್ತಲಿದ್ದಿತು.

ಕಥಾಪ್ರವಾಹದಲ್ಲಿ ನಮ್ಮ ಪಾಠಕರಿಗೆ ವಿಮಲೆಯ ಪರಿಚಯವನ್ನು ಮಾಡಿಸುವುದಕ್ಕೆ ನಮಗೆ ಅವಕಾಶವಾಗಲಿಲ್ಲ. ಅವಳು ವಲ್ಲಭದೇವನ ಮೊದ ಲನೆಯ ಹೆಂಡತಿ ರೇಣುಕೆಯ ಮಗಳು. ಅವಳು ತನ್ನ ತಾಯಿಯಂತೆ ಉದ್ದ ವಾಗಿಯೂ ಸುಂದರಿಯಾಗಿಯೂ ಇದ್ದಳು. ಅವಳಿಗೆ ಸುಮಾರು ಹತ್ತೊಂಭತ್ತು ವಯಸ್ಸು. ಸ್ಪಟಿಕಶಿಲೆಯಲ್ಲಿ ಕಡೆದುಮಾಡಿದಂತೆ ತೋರುವ ಅವಳ ತೋಳು ಗಳೂ, ಸಣ್ಣ ಕೈ ಬೆರಳುಗಳೂ, ನಸುಗೆಂಪಾದ ಕಪೋಲಗಳೂ, ತಾವರೆಯ ದಳದಂತೆ ನೀಟಾದ ಕಣ್ಣುಗಳೂ, ಆಣಿ ಮುತ್ತುಗಳಂತಿದ್ದ ದಂತಗಳೂ, ಪವಳ ವನ್ನು ಹಳಿಯುವ ತುಟಿಗಳೂ, ಅಪ್ಸರಸ್ತ್ರೀಯರ ರೂಪವನ್ನೂ ತುಳಿದು ಮೆಟ್ಟು ವಂತಿದ್ದುವು.

ವಿಮಲೆಯು ಒಳಕ್ಕೆ ಬಂದ ಕೂಡಲೇ ಮಲಯಸಿಂಹನಿಗೆ ನಮಸ್ಕರಿಸಿ ಆಸನದಲ್ಲಿ ಕುಳಿತಳು.

‘‘ಸ್ವಾಮಿ ರಾಜರೇ! ಇವಳೇ ವಿಮಲೆ, ನನ್ನ ಸವತಿಯ ಮಗಳು" ಎಂದು ನಾಗಮಣಿಯು ಹೇಳಿ ಮುಗಿಸುವುದರೊಳಗಾಗಿ ಸಮೀಪದಲ್ಲಿದ್ದ ದುಷ್ಟ ನಾದ ನಾಗಕುಮಾರನು

‘‘ಇವರೇ ರಾಜಾಮಲಯಸಿಂಹರು, ಅರಬ್ಬೀ ದೇಶದ ರಾಜರು, ಚೀನಾ ದೇಶದ ಚಕ್ರವರ್ತಿ, ವಿಷವೈದ್ಯ ನಾಗರಾಜ ಪಂಡಿತರು" ಎಂದು ಗಟ್ಟಿಯಾಗಿ ಅರಚಿಕೊಂಡನು. ಆವನಾಡಿದ ಮಾತನ್ನು ಕೇಳಿ ತಾಯಿಯ ಮುಖವು ಬಿಳ್ಪೇರಿತು; ಮಲಯಸಿಂಹನು ಪ್ರಸನ್ನ ಮುಖನಾಗಿದ್ದುದರಿಂದ ಅವಳಿಗೆ

ಮಗನಲ್ಲಿ ಪ್ರೇಮವು ಇಮ್ಮಡಿಯಾಗಿ ಮುಖವು ಸೂರ್ಯೋದಯದ ಕಮಲದಂತೆ ಅರಳಿತು.

ಆಗ ಮಲಯಸಿಂಹನು ತಾಯಿ ಮಗಳ ಮುಖಗಳನ್ನು ನೋಡುತ್ತ "ಅಮ್ಮಾ, ನಿಮ್ಮಿಬ್ಬರ ಮುಖಗಳನ್ನು ನೋಡಿದರೆ ಹಿಂದೆ ಯಾವಾಗಲೋ ನಾನು ನಿಮ್ಮನ್ನು ನೋಡಿದಂತೆ ತೋರತ್ತದೆ. ನಾನೆಲ್ಲಿ ನೋಡಿರಬಹುದು" ಎಂದನು.

"ನಿಮ್ಮನ್ನು ನೋಡಿದಂತೆ ನಮಗೆ ಜ್ಞಾಪಕವಿಲ್ಲ. ವಿಮಲೆಯಂತೂ ಮನೆಯನ್ನು ಬಿಟು ಹೋಗುವುದೇ ಇಲ್ಲ."

"ಈ ಊರಿಗೆ ನಾನು ಬಂದುದು ಈಗಲೇ, ಇಲ್ಲಿ ನೋಡಿದ್ದೆನೆಂದು ಹೇಳಲಾರೆ" ಎಂದು ಮಲಯಸಿಂಹನು ಜ್ಞಾಪಿಸಿಕೊಳ್ಳುವನಂತೆ ಸ್ವಲ್ಪಕಾಲ ಯೋಚನಾಪರನಾಗಿ,

"ತಾಳಿ, ತಾಳಿ; ಈಗ ಸ್ವಲ್ಪ ಜ್ಞಾಪಕಕ್ಕೆ ಬಂದಿತು. ಯಾವುದೋ ಜಾತ್ರೆಯಲ್ಲಿ ನಿಮ್ಮ ಈ ಮಗಳು ಕಯ್ಯಲ್ಲಿ ಹೂವಿನ ಗೊಂಚಲನ್ನು ಹಿಡಿದಿದ್ದಳು; ಈ ಸಣ್ಣಮಗು ಒಂದು ನವಿಲನ್ನು ಅಟ್ಟಿಸಿಕೊಂಡು ಹೋಗುತ್ತಿದ್ದಿತು. ನೀವು ಒಂದು ಲತಾಗೃಹದ ಕೆಳಗೆ ಕುಳಿತಿದ್ದಿರಿ; ಅಲ್ಲವೆ! ಇವುಗಳು ನಿಮಗೆ ನೆನಪುಂಟೇ?"

'ನಿಮ್ಮನ್ನು ನಾನು ಎಲ್ಲಿಯೂ ನೋಡಿದಂತೆ ಇಲ್ಲ' ಎಂದು ನಾಗಮಣಿಯು ಹೇಳುತ್ತಿದ್ದಾಗ, ವಿಮಲೆಯು

'ಬಹುಶಃ ಇಂದ್ರಪ್ರಸ್ಥದಲ್ಲಿ ನಾವು ಇದ್ದಾಗ ತಾವು ಅಲ್ಲಿ ನಮ್ಮನ್ನು ನೋಡಿರಬಹುದು' ಎಂದಳು.

ವಿಮಲೆಯು ಅಷ್ಟು ಹೇಳಿದೊಡನೆಯೇ ತನಗೆ ಎಲ್ಲವೂ ಜ್ಞಾಪಕ ಬಂದಂತೆ ರಾಜನು

"ಅಹುದು ಪಾಪವಿನಾಶಿನೀನಗರದ ಉತ್ಸವದಲ್ಲಿ ಮಧುವನದೊಳಗೆ ನಾವೆಲ್ಲಾ ಒಂದುಕಡೆ ಸೇರಿದ್ದೆವು."

"ಊರು, ಉತ್ಸವ, ತೋಟ, ಎಲ್ಲವೂ ಜ್ಞಾಪಕವಿದೆ; ನಿಮ್ಮನ್ನು ಅಲ್ಲಿ ನೋಡಿದಂತೆ ಜ್ಞಾಪಕವಿಲ್ಲವಲ್ಲಾ, ವಿಮಲೆ ನಿನಗೇನಾದರೂ ಜ್ಞಾಪಕವಿದೆಯೇ?"

"ನನಗೂ ಇಲ್ಲ."

ಆಗ ನಾಗಕುಮಾರನು'ನನಗೆ ಚೆನ್ನಾಗಿ ಜ್ಞಾಪಕವಿದೆ"ಎಂದನು.

"ಅಮ್ಮಾ! ನಿಮಗೆ ಜ್ಞಾಪಕಬರಲು ಕೆಲವು ಸಂಗತಿಗಳನ್ನು ಹೇಳುತ್ತೇನೆ ಕೇಳಿರಿ, ಅಂದು ಬಲು ಬಿಸಿಲು; ಜಾತ್ರೆಯ ಗುಂಪಿನಲ್ಲಿ ಬಂಡಿಯ ಕುದುರೆಗಳು ಬರುವುದು ಸಾವಕಾಶವಾಯಿತು; ನೀವು ಕುಂಜದೊಳಗೆ ಉಚ್ಚಾಸನದಲ್ಲಿ ಕುಳಿತಿದ್ದಿರಿ; ನಿಮ್ಮ ಮಗಳು ಮಧುವನದ ಸಾಲುಮರದ ನೆರಳಿನಲ್ಲಿ ಓಡಾಡುತ್ತಿದ್ದಳು; ಈ ಮಗುವು ನವಿಲನ್ನು ಅಟ್ಟಿಸಿಕೊಂಡು ಹೋಗಿ ಕಣ್ಣಿಗೆ ಮರೆಯಾಯಿತು."

''ಸರಿ; ಅಮ್ಮಾ, ಅಹುದು. ಅದರ ಮೂರು ಗರಿಗಳನ್ನು ಕಿತ್ತು ನಾನು ಟೋಪಿಯಲ್ಲಿ ಸಿಕ್ಕಿಸಿಕೊಳ್ಳಲಿಲ್ಲವೆ?''ಎಂದು ನಾಗಕುಮಾರನು ಕಿರಿಚಿಕೊಂಡನು. ಆಗ ತಾಯಿಯು

''ರಾಜರೇ! ಅವನ ಮಾತು ಹಾಗಿರಲಿ; ತಾವು ಮುಂದೆ ಹೇಳೋಣಾಗಲಿ''

''ಇವರಿಬ್ಬರೂ ಇಲ್ಲದ ಸಮಯದಲ್ಲಿ ಯಾದೊಂದಿಗೋ ನೀವು ಬಲು ಹೊತ್ತು ಮಾತನಾಡುತ್ತಿರಲಿಲ್ಲವೆ?''ಎಂದು ಮಲಯಸಿಂಹನು ಕೇಳಲು, ನಾಗಮಣಿಯು ಭಯಾಕ್ರಾಂತಳಾಗಿ

''ನಿಜ, ಅವರು ವೈದ್ಯರು, ಬಿಷಜ್ಮಣಿಗಳೆಂದು ಅವರನ್ನು ಆ ಊರಿನವರು ಕರೆಯುತ್ತಲಿದ್ದರು. ಆಗ ತಾವೆಲ್ಲಿದ್ದಿರಿ?"

''ಅಮ್ಮಾ! ಅವನೇ ನಾನು. ಆ ಊರಿನಲ್ಲಿ ಎರಡು ವಾರಗಳಲ್ಲಿ ನನ್ನ ಕೈಯ್ಯಾಳಿಗೆ ಬಂದಿದ್ದ ಜ್ವರವನ್ನೂ ನಾನಿದ್ದ ಮನೆಯ ಯಜಮಾನನ ಕಾಮಾಲೆಯನ್ನೂ ವಾಸಿಮಾಡಿದೆನು; ಅದಕ್ಕೆ ಅಲ್ಲಿಯ ಭಿಷಜ್ಮಣಿ ಎಂದು ನನ್ನನ್ನು ಕರೆಯುತಲಿದ್ದರು. ಆಗ ಅನೇಕ ವಿಷಯಗಳ ಪ್ರಸ್ತಾಪ ಬಂದು ಕೊನೆಗೆ ವಿಷವೈದ್ಯದ............"

ಅಷ್ಟು ಹೊತ್ತಿಗೆ ಅಲ್ಲಿದ್ದ ಗಡಿಯಾರವು ಆರುಗಂಟೆಯನ್ನು ಹೊಡೆಯಲು, ನಾಗಮಣಿಯು ವಿಮಲೆಯನ್ನು ನೋಡಿ ''ಅಮ್ಮಾ, ನಿನ್ನ ತಾತನಿಗೆ ಔಷಧಿ ಕೊಡುವ ಹೊತ್ತಾಯಿತು, ಹೋಗು"ಎಂದಳು.

ವಿಮಲೆಯು ಅತ್ತ ಹೋಗುತ್ತಲೆ ಇತ್ತ ಮಲಯಸಿಂಹನು

‘‘ಅಮ್ಮಾ! ನೀವು ನನಗಾಗಿ ವಿಮಲೆಯನ್ನು ಇಲ್ಲಿಂದ ಹೊರಡಿಸಿದಂತೆ ತೋರುತ್ತದೆ.’

“ಸ್ವಾಮಿ! ನನ್ನ ಮಾವಂದಿರ ಅವಸ್ಥೆಯನ್ನು ತಾವು ಕೇಳಿರಬಹುದು.”

“ನಿಮ್ಮ ಯಜಮಾನರು ಹೇಳಿದ್ದರು.”

“ನಮ್ಮ ಗೃಹಕೃತ್ಯದ ವಿಚಾರ ತಮಗೆ ರುಚಿಸದು. ಅದು ಹಾಗಿರಲಿ. ತಾವೇನೋ ವಿಷವೈದ್ಯರೆಂದು ಹೇಳುತ್ತಲಿದ್ದಿರಿ! ಅದೇನು ಅಪ್ಪಣೆಯಾಗಲಿ.”

“ನಾನು ವೈದ್ಯನೆಂದು ಹೇಳಿಕೊಳ್ಳಲಿಲ್ಲ”ಎಂದು ಮ ಲ ಯ ಸಿಂ ಹ ನು ನಕ್ಕು,

“ಮನುಷ್ಯನ ಶರೀರದಲ್ಲಿ ಯಾವ ಯಾವ ರಸಗಳು ಸೇರಿದರೆ ಏನೇನು ಕೆಲಸ ಮಾಡುತ್ತದೆ ಎಂಬುದನ್ನು ತಿಳಿದುಕೊಳ್ಳಬೇಕೆಂದು ರಸವಿದ್ಯೆಯನ್ನು ತಿಳಿದುಕೊಂಡಿರುವೆನೇ ಹೊರತು ವೈದ್ಯವನ್ನು ಮಾಡುವುದಕ್ಕಲ್ಲ. ಪೂರ್ವದೇಶ ಗಳಲ್ಲಿ ವಾಸಮಾಡತಕ್ಕವರಿಗೆ ಈ ವಿದ್ಯೆಯು ಅಗತ್ಯವಾಗಿ ತಿಳಿದಿರಬೇಕು; ಇಲ್ಲ ದಿದ್ದರೆ ಅವರು ಬದುಕುವುದೇ ಕಷ್ಟ. ನಾನು ಈ ವಿದ್ಯೆಯನ್ನು ನಾಗರಾಜ ವಿಷವೈದ್ಯನಿಂದ ಕಲಿತೆನು.”

ಆವೇಳೆಗೆ ಚಿತ್ರದ ಪುಸ್ತಕವನ್ನು ಕೈಯಲ್ಲಿಟ್ಟುಕೊಂಡು ಅದರ ಹಾಳೆ ಗಳನ್ನು ಒಂದೊಂದಾಗಿ ಹರಿಯುತಲಿದ್ದ ನಾಗಕುಮಾರನು ಸುಮ್ಮನಿರದೆ

‘‘ಪ್ರತಿನಿತ್ಯವೂ ಬೆಳಗ್ಗೆ ಏಳುತ್ತಲೆ ವಿಷಮಿಶ್ರವಾದ ಹಾಲನ್ನು ಕುಡಿಯು ತ್ತಲಿದ್ದ ವಿಷವೈದ್ಯ ನಾಗರಾಜ”ಎಂದು ಗಟ್ಟಿಯಾಗಿ ಕೂಗಿಕೊಳ್ಳಲು; ತಾಯಿಗೆ ತುಂಬಾ ಅಸಮಾಧಾನವುಂಟಾಗಿ ಹುಡುಗನ ಕಯ್ಯಿಂದ ಚಿತ್ರದ ಪುಸ್ತಕವನ್ನು ಕಿತ್ತುಕೊಂಡು “ಹೊರಗೆ ಹೋಗು”ಎಂದು ಗದ್ದರಿಸಿಕೊಂಡಳು.

“ನಾನು ಹೋಗುವುದಿಲ್ಲ.”

‘‘ಹೋಗುತ್ತೀಯೋ, ಇಲ್ಲವೊ?’’

‘‘ಪುಸ್ತಕವನ್ನು ಕೊಟ್ಟ ಹೊರತು ಹೋಗೆನು.”

“ಚಿತ್ರಗಳನ್ನು ಹರಿಯುವುದೇಕೆ?’’

“ಅದರಲ್ಲಿ ನನಗೆ ತೃಪ್ತಿ.’’

‘‘ಹೋಗಪ್ಪಾ! ಹೋಗು.”

“ಅದನ್ನು ಕೊಡು, ನಾನು ಹೋಗುತ್ತೇನೆ.”

"ಹಾಗಾದರೆ ತೊಲಗಿಸಿಕೊಂಡು ಹೋಗು"ಎಂದು ಪುಸ್ತಕವನ್ನು ಕೊಟ್ಟು ಹುಡುಗನನ್ನು ಹೊರಗೆಬಿಟ್ಟು ಬರಲು ಹೋದಳು. ಆಗ ಮಲಯಸಿಂಹನು 'ಆ ಹುಡುಗನನ್ನು ಕಳುಹಿಸಿದಮೇಲೆ ಇವಳು ಕದವನ್ನು ಹಾಕಿಕೊಂಡು ಬರಬಹುದು. ವಿಷವೈದ್ಯದ ರುಚಿಯು ಇವಳ ತಲೆಗೆ ಹತ್ತಿದಂತಿದೆ'ಎಂದು ಯೋಚಿಸುತ್ತಲಿದ್ದ ಹಾಗೆ ಅವಳು ಬಾಗಿಲನ್ನು ಮುಚ್ಚಿಕೊಂಡು ಬಂದಳು.

"ಸ್ವಾಮಿ! ವಿಷವೈದ್ಯನಾಗರಾಜನು ವಿಷವನ್ನು ಸಾಧನೆಮಾಡುತ್ತಲಿದ್ದುದರಿಂದ ಅವನಿಗೇನಾದರೂ ಪ್ರಯೋಜನವಾಯಿತೋ''?

"ಆಗಿರಬೇಕು; ನನಗೂ ಆ ಅಭ್ಯಾಸವಿಲ್ಲದಿದ್ದಿದ್ದರೆ ನಾನು ಇಷ್ಟು ದಿನಕ್ಕೆ ಎಷ್ಟೋಸಾರಿ ಸಾಯುತ್ತಲಿದ್ದೆನು"

"ಆ ದೇಶದಲ್ಲಿ ಸಾಧನೆ ಮಾಡುವಂತೆ ನಮ್ಮ ದೇಶದಲ್ಲಿಯೂ ಮಾಡಬಹುದೋ?"

"ಏಕೆ ಆಗ ಕೂಡದು?"

"ಶೀತಸೀಮೆಯಲ್ಲಿರುವವರ ರಕ್ತಕ್ಕೂ ಉಷ್ಣಸೀಮೆಯಲ್ಲಿರುವವರ ರಕ್ತಕ್ಕೂ ತಾರತಮ್ಯವಿದೆ; ಆದುದರಿಂದ ಅಲ್ಲಿ ಯಾವ ವಿಷವನ್ನು ಪ್ರಯೋಗ ಮಾಡಿದರೆ ಕೆಂದುವುದೋ ಅದೇ ವಿಷವನ್ನು ಇಲ್ಲಿ ಪ್ರಯೋಗಮಾಡಿದರೆ ಕೆಂದದು ಎಂದು ಯಾರೋ ಹೇಳಿದ್ದರು. ಅದಕ್ಕಾಗಿ ತಮ್ಮನ್ನು ವಿಚಾರಿಸಿದೆ."

"ವಿಷಗಳಲ್ಲಿ ಅನೇಕ ಭೇದವುಂಟು.",

"ಅದನ್ನೆಲ್ಲಾ ನಾನು ಬಲ್ಲೆನು."

"ಹಾಗಾದರೆ ನನ್ನಿಂದ ನಿಮಗೆ ತಿಳಿಯಬೇಕಾದುದು ಯಾವುದೂ ಇರಲಾರದು."

"ಇಂಥಹ ಗುಪ್ತಶಾಸ್ತ್ರಗಳನ್ನು ಕಲಿಯಲು ನನಗೆ ಬಲು ಆಸೆ. ಮುಂದಕ್ಕೆ ಅಪ್ಪಣೆಯಾಗಲಿ."

"ಯಾವ ಯಾವ ವಿಷವನ್ನು ಯಾವ ಯಾವ ರೀತಿಯಲ್ಲಿ ಪ್ರಯೋಗಿಸಿದರೆ ಎಷ್ಟೆಷ್ಟು ದಿನಗಳಲ್ಲಿ ಆಯಾ ವಿಷವು ಅದರದರ ಕಾರ್ಯವನ್ನು ಮಾಡುವುದು ಎಂಬುದು ಚೆನ್ನಾಗಿ ತಿಳಿದಿರಬೇಕು."

"ಪೂರ್ವದೇಶದ ಹೆಂಗುಸರು ವಿಷಪ್ರಯೋಗ ಮಾಡುವುದರಲ್ಲಿ ಬಹು ಚತುರೆಯರೆಂದು ಕೇಳಿದ್ದೇನೆ. ಅದು ನಿಜವೇ ಸ್ವಾಮಿ?"

"ಅವರು ಬೇಕಾದವರಿಗೆ ಮೆಚ್ಚು ಮದ್ದನ್ನು ಕೊಟ್ಟು ತಮ್ಮ ಸ್ವಾಧೀನ ಮಾಡಿಕೊಳ್ಳುವರು. ಬೇಡದೆ ಇದ್ದವರನ್ನು ಲೇಶವೂ ಅನುಮಾನಕ್ಕೆ ಕಾರಿಣವಿಲ್ಲದಂತೆ ಸಾಗಿಸಿಬಿಡುವರು."

"ಅದು ಹೇಗೆ! ನಮ್ಮ ದೇಶದಲ್ಲಿ ಯಾರಾದರೂ ಸ್ವಲ್ಪ ಅನುಮಾನದಿಂದ ಸತ್ತರೂ, ಪೋಲೀಸಿನವರು ಇಲ್ಲದ ಅವಾಂತರ ಮಾಡಿ ಬಿಡುವರು. ಅಲ್ಲಿ ಹಾಗಿಲ್ಲವೋ?"

"ಅಲ್ಲಿಯೂ ಅವರ ಅವಾಂತರವಿದೆ; ಆದರೂ ಅಲ್ಲಿಯ ಹೆಂಗುಸರು ಅದಕ್ಕೆಲ್ಲಾ ಸಿಕ್ಕಿಕೊಳ್ಳುವುದಿಲ್ಲ."

"ಅದು ಹೇಗೆ! ದಯೆಮಾಡಿ ತಿಳಿಸಬೇಕು."

"ಅವರು ಯಾವ ವಿಷವನ್ನು ಪ್ರಯೋಗಿಸಬೇಕೆಂದಿರುವರೋ ಅದನ್ನು ನೀರಿನಲ್ಲಿ ಕಲೆಸಿ, ಆ ನೀರಿನಿಂದ ಪಲ್ಯವನ್ನು ಬೆಳೆಸಿ, ಆ ಪಲ್ಯವು ಬೆಂದ ನೀರಿನಲ್ಲಿ ಮತ್ತೆ ಪಲ್ಯವನ್ನು ಬೆಳೆಸಿ, ಹೀಗೆ ಏಳುಸಾರಿ ಮಾಡುವರು. ಎಂಟನೆಯ ಸಲ ಬೆಳದ ಪಲ್ಯದಲ್ಲಿ ವಿಷದ ವೇಗವೂ ತೋರದು. ಇಂಥ ಪಲ್ಯವನ್ನು ಅಷ್ಟು ಬಿಡಿಸಿದರೆ ನಿಧಾನವಾಗಿ ಆ ವಿಷವು ಅನುಮಾನಕ್ಕೆ ಕಾರಣವಿಲ್ಲದೆ ತನ್ನ ಕೆಲಸವನ್ನು ಮಾಡುವುದು."

"ರಾಜರೇ! ಹೀಗೆ ವಿಷಪ್ರಯೋಗಮಾಡಿ ಕೊಲ್ಲುವವರಿಗೆ ಸದಸದ್ವಿಚಾರಶಕ್ತಿಯೇ ಇರುವಂತೆ ತೋರುವುದಿಲ್ಲ."

"ಆ ಶಕ್ತಿಯಿಲ್ಲವೆಂದು ಹೇಳಲಾಗದು. ಆದರೆ ಅನೇಕ ಕಾರಣಗಳು ಆ ವಿಚಾರಗಳನ್ನು ಮುಚ್ಚುಗೊಳಿಸುವುವು. ವ್ಯಭಿಚಾರಿಯಾದ ಹೆಂಗಸು ವಿಷವಿಕ್ಕಿ ಗಂಡನನ್ನು ಕೊಂದು ತನ್ನ ಸ್ವೇಚ್ಛಾವಿಹಾರಕ್ಕೆ ಇದ್ದ ಅಡ್ಡಿಯನ್ನು ನಿವೃತ್ತಿಮಾಡಿಕೊಳ್ಳುವಳು. ಚೀನಾದೇಶದಲ್ಲಿ ಒಬ್ಬ ರಾಜಪುತ್ರನು ರಾಜನಾಗಿದ್ದ ತನ್ನ ಅಣ್ಣನು ಸಾಯುತ್ತಲೆ ಅವನ ಇಬ್ಬರು ಮಕ್ಕಳನ್ನು 'ಇವರು ಬದುಕಿದ್ದರೆ ರಾಜ್ಯಕ್ಕೆ ಬರುವರು; ಅದರಿಂದ ಜನಗಳಿಗೆ ಸುಖವಿಲ್ಲ' ಎಂದು ಆ ಇಬ್ಬರು ಮಕ್ಕಳನ್ನೂ ಕೊಂದು ತಾನು ದೊರೆಯಾದನಂತೆ. ಇನ್ನೊಬ್ಬ ಮಹಾರಾಣಿಯು ತನ್ನ ಗಂಡನು ಎಂದಿದ್ದರೂ ಸಾಯಬೇಕು; ಹೊಟ್ಟೆಯಲ್ಲಿ ಹುಟ್ಟಿದ ಮಗನಿಗೆ ಈಗಲೇ ಪಟ್ಟಾಭಿಷೇಕಮಾಡಿ ಆ ಸಂತೋಷವನ್ನು ಅನುಭವಿಸಬೇಕೆಂದು ಯೋಚಿಸಿ ಗಂಡನನ್ನೇ ಕೊಂದಳಂತೆ. ಲೋಕದಲ್ಲಿ ತಾಯಿಗೆ

ಮಗನಲ್ಲಿರುವ ಪ್ರೀತಿಯು ಸದ್ಗುಣಗಳಲ್ಲಿ ದೊಡ್ಡದೆನಿಸಿಕ್ಕೊಂಡಿರುವುದು ; ಅದಕ್ಕೆ ಅಡ್ಡಿಯಾಗಿರುವುದನ್ನೆಲ್ಲಾ ನಿವೃತ್ತಿಮಾಡಲು ಬೇಕಾದಷ್ಟು ಕಾರಣಗಳು ಇರುವುವು. ವಿಚಾರಶಕ್ತಿಯಿಲ್ಲದಿದ್ದರೆ ಈ ಯೋಚನೆಗಳು ಹುಟ್ಟವು."

ರಾಜನು ಹೇಳುತ್ತಿದ್ದುದನ್ನೆಲ್ಲಾ ಕುತೂಹಲದಿಂದ ಕೇಳಿ, "ರಾಜರೇ! ನೀವು ಅದ್ಭುತವಾದಿಗಳು ; ನಿಮ್ಮ ಮಾತನ್ನು ಕೇಳುತ್ತಿರುವವರು ಮನಸ್ಸು ಕರಗಿ ನಿಮ್ಮ ಮಾರ್ಗಕ್ಕೆ ಬರುವರು. ನನ್ನ ಮಗನಿಗೆ ದ್ರಾವಕವನ್ನು ಕೊಟ್ಟು ಬದುಕಿಸಿದುದರಿಂದ ನೀವು ಒಳ್ಳೆಯ ರಸವೈದ್ಯರೆಂದು ತೋರುತ್ತದೆ."

"ಅಮ್ಮಾ! ಅದರಲ್ಲಿ ಅಷ್ಟು ನಂಬಿಕೆಯನ್ನಿಡಬೇಡಿ ; ಒಂದು ತೊಟ್ಟು ಬಿಟ್ಟರೆ ಸಾಯುವ ಮಗುವು ಬದುಕುವುದು ; ಮೂರು ತೊಟ್ಟುಗಳು ಶ್ವಾಸ ಕೋಶಗಳಿಗೂ ತಲೆಗೂ ರಕ್ತವನ್ನು ತಂದು ತುಂಬುವುವು ; ಆರು ತೊಟ್ಟುಗಳು ಶ್ವಾಸೋಚ್ಛ್ವಾಸವನ್ನು ನಿಲ್ಲಿಸಿ ಮೂರ್ಛೆಯನ್ನುಂಟುಮಾಡುವುವು ; ಹತ್ತು ತೊಟ್ಟುಗಳು ಪ್ರಾಣವನ್ನೇ ಕೊಂಡು ಹೋಗುವುವು. ಆದುದರಿಂದಲೇ ಅಂದು ನಿಮ್ಮ ಮಗನು ಆ ಸೀಸೆಗೆ ಕೈಹಾಕಲು ನಾನು ಬೇಡವೆಂದು ಹೇಳಿದುದು."

"ಅದು ಅಷ್ಟು ಭಯಂಕರವಾದ ವಿಷವೇ ?"

"ಔಷಧಿಗಳಲ್ಲಿ ಕ್ರೂರವಾದ ವಿಷಗಳೂ ಸೇರಿರುತ್ತವೆಯಾಗಿ ಲೋಕದಲ್ಲಿ ವಿಷವೆಂಬುದೇ ಇಲ್ಲವೆಂದು ಇಟ್ಟುಕೊಳ್ಳಬೇಕು. ಪದಾರ್ಥಗಳನ್ನು ಉಪ ಯೋಗಿಸುವುದರಲ್ಲಿ ಅವು ವಿಷವೂ ಆಗಬಹುದು, ಔಷಧಿಯೂ ಆಗಬಹುದು."

"ಸ್ವಾಮೀ! ನನಗೆ ಆಗಾಗ ಉಸಿರು ಹಿಡಿಯುವುದೂ ತಲೆ ತಿರುಗು ವುದೂ ಮೂರ್ಛೆಹೋಗುವಂತಾಗುವುದು ಉಂಟು. ಅದಕ್ಕೆ ಈ ದ್ರಾವಕವು ಅನುಕೂಲವಾಗುತ್ತದೋ ?"

"ಆಹಾ! ಸಂದೇಹವೇನು ?"

"ಇದನ್ನು ಹೇಗೆ ಮಾಡುವುದು, ಎಂದು ಕೇಳಲಿಕ್ಕೆ ಸಂಕೋಚ ಪಡುತ್ತೇನೆ."

"ನಿಮಗೆ ಸಂಕೋಚವಾದರೂ ನಾನು ಧಾರಾಳವಾಗಿ ಅದನ್ನು ಮಾಡುವ ವಿಧಾನವನ್ನು ಬರೆದು ಕಳುಹಿಸುತ್ತೇನೆ."

"ಅಷ್ಟು ಮಾಡಿದರೆ ಬಹು ಉಪಕಾರ ಮಾಡಿದಂತೆ ಆಗುವುದು."

"ಅಗತ್ಯವಾಗಿ ಆಗಲಿ ; ನಾನು ಹೋಗಿಬರುವೆನು" ಎಂದು ಹೇಳಿ

ಮಲಯಸಿಂಹನು ಹೊರಟನು. ನಾಗಮಣಿಯು ತಲೆಬಾಗಿಲವರೆಗೆ ಬಂದು "ರಾಜರೇ! ದ್ರಾವಕದ ವಿಧಾನ ಜ್ಞಾಪಕವಿರಲಿ" ಎಂದಳು.

"ಅಮ್ಮಾ! ನಿಮ್ಮ ಸಂಗಡ ಒಂದು ಗಂಟೆಯಿಂದ ಮಾತನಾಡುತ್ತಲಿದ್ದುದನ್ನು ಮರೆತರೆ ದ್ರಾವಕಮಾಡುವ ವಿಧಾನವನ್ನು ಬರೆದು ಕಳುಹಿಸಬೇಕೆಂಬುದನ್ನು ಮರೆಯುವೆನು" ಎಂದು ಹೇಳಿ ಮಲಯಸಿಂಹನು ಬಂಡಿಯಲ್ಲಿ ಕುಳಿತು "ಇದು ಬಹು ಫಲವತ್ತಾದ ಭೂಮಿ; ಇದರಲ್ಲಿ ನಾಟಿದ ಬೀಜವು ವ್ಯರ್ಥವಾಗದು," ಎಂದುಕೊಂಡು ಸಂತೋಷದಿಂದ ಮನೆಯನ್ನು ಸೇರಿದನು.

---

# ಮೂವತ್ತೊಂಟನೆಯ ಅಧ್ಯಾಯ

## ನಾಟಕಶಾಲೆ

ನಮ್ಮ ಕಥೆಯು ನಡೆಯುತ್ತಲಿದ್ದ ಕಾಲದಲ್ಲಿ ಅಮರಪುರಕ್ಕೆ ಒಂದು ಹೊಸ ನಾಟಕದ ಸಮಾಜವು ಬಂದಿತು. ಅದರ ಯಜಮಾನನು ನಾಟ್ಯವೇದ ವಿಚಕ್ಷಣನಾಗಿ ಕಲಾವಿದನಾಗಿ 'ಲೋಕಜ್ಞನಾಗಿ ಇದ್ದನು. ನಟಿಯರೆಲ್ಲರೂ ತಮ್ಮ ಕಾರ್ಯಗಳಲ್ಲಿ ನಿಪುಣೆಯರಾಗಿ ಇದ್ದುದರಿಂದ ಆ ಪುರದ ಜನರೆಲ್ಲರೂ ಆ ನಾಟಕವನ್ನು ನೋಡಲು ಬಹು ಕುತೂಹಲವುಳ್ಳವರಾಗಿದ್ದರು.

ತಾವು ನಾಟಕಕ್ಕೆ ಹೋಗಲಿ ಹೋಗದಿರಲಿ, ನಾಟಕಶಾಲೆಯಲ್ಲಿ ಒಂದು ಆಸನವನ್ನು ತೆಗೆದಿಟ್ಟಿರುವುದು ಗೌರವವೆಂದು ದೊಡ್ಡ ಮನುಷ್ಯರೆಲ್ಲರೂ ತಿಳಿದುಕೊಂಡಿದ್ದರು. ಇಂದು ನಾಟಕಕ್ಕೆ ಹೋಗುವುದಕ್ಕೆ ಆಗುವುದಿಲ್ಲವೆಂದು ಹೇಳಿ ಮಂತ್ರಿಯು ತನ್ನ ಆಸನವನ್ನು ಯಾರಾದರೂ ಆಕ್ರಮಿಸಿಕೊಳ್ಳಬಹುದೆಂದು ಮುಖ್ಯಶಿಷ್ಯನಾದ ದಮನಕನಿಗೆ ಹೇಳಿದನು. ಅವನು ಅದನ್ನು ಭಾಮಿನಿಗೆ ತಿಳಿಸುವಂತೆ ದುರ್ಮತಿಗೆ ಹೇಳಿದನು. ಸಾಧಾರಣವಾಗಿ ಧನವಂತರಲ್ಲಿ ಒಂದು ಗುಣ ವಿಶೇಷವುಂಟು:— ಕೋಟ್ಯಧೀಶರಾಗಿ ಅನೇಕ ರಾಜರನ್ನೂ ರಾಜ್ಯಗಳನ್ನೂ ಕ್ರಯಕ್ಕೆ ಕೊಳ್ಳುವಶಕ್ತಿಯಿದ್ದರೂ ಕಯ್ಯ ಕಾಸು ಹೋಗದಂತೆ ಯಾವುದು ಸಿಕ್ಕಿದರೂ ಅದನ್ನು ಅತಿ ಪ್ರೀತಿಯಿಂದ ಸ್ವೀಕರಿಸಿರುವರು. ಸರ್ಕಾರದಲ್ಲಿ ದೊಡ್ಡ ದೊಡ್ಡ ಪದವಿಗಳಿದ್ದು ಹೆಚ್ಚು ಸಂಬಳಗಳನ್ನು ತೆಗೆಯುತ್ತ

ಲಿದ್ದರೂ, ಬಡಪಾಪಿಗಳಿಗಾಗಿ ಏರ್ಪಟ್ಟಿರುವ ಸರ್ಕಾರದ ಸಹಾಯವನ್ನು ತನ್ನ ಮಕ್ಕಳು ನಂಟರು ಮೊದಲಾದವರಿಗೆ ಕೊಡಿಸಲು ವಿಶ್ವ ಪ್ರಯತ್ನ ವನ್ನು ಮಾಡುವರು. ಅಂತಹ ಹಣಗಾರ ಕೂಟದಲ್ಲಿ ನಮ್ಮ ದುರ್ಮತಿಯು ಒಬ್ಬನಾದುದರಿಂದ ದಮನಕನ ಆಹ್ವಾನವನ್ನು ಸ್ವೀಕರಿಸಿದನು.

ನಾಟಕಕ್ಕೆ ಹೋಗಬೇಕೆಂದು ಆಸೆಯಿದ್ದರೂ, ಇದಿರು ಕಕ್ಷಿಯಾದ ಮಂತ್ರಿಯ ಆಸನದಲ್ಲಿ ಕುಳಿತರೆ ತನ್ನ ಕಡೆಯವರು ಯಾರಾದರೂ ನೋಡಿ ದರೆ ಏನು ಹೇಳುತ್ತಾರೋ ಎಂದು ಭಯಪಟ್ಟು, ತಾನು ಹೋಗುವುದಿಲ್ಲವೆಂದು ದುರ್ಮತಿಯು ನಿಶ್ಚಯಿಸಿಕೊಂಡನು. ಆ ಸಂಗತಿಯು ಭಾಮಿನಿಗೆ ತಿಳಿದ ಕೂಡಲೇ ಅವಳು ದಮನಕನನ್ನು ಮನೆಗೆ ಕರೆಸಿಕೊಂಡು ಮಗಳನ್ನೂ ಕರೆದು ಕೊಂಡು ಅವನ ಜೊತೆಯಲ್ಲಿ ನಾಟಕ ಶಾಲೆಗೆ ಹೋದಳು. 'ಇಬ್ಬರು ಹೆಂಗಸರೇ ಯಾವ ಪುರುಷನ ಸಾಹಾಯ್ಯವೂ ಇಲ್ಲದೆ ಇಂತಹ ಸ್ಥಳಗಳಿಗೆ ಹೋದರೆ ಅವರ ವಿಷಯವಾಗಿ ಜನರು ಆಡಿಕೊಳ್ಳದೇ ಇದ್ದಾರೆಯೇ ? ದಮ ನಕನಾದರೋ ಭಾಮಿನಿಯ ಉಪಪತಿಯೆಂಬುದು ಲೋಕಪ್ರಸಿದ್ಧ. ಆತನು ಜತೆಯಲ್ಲಿದ್ದರೆ ಲೋಕಾಪವಾದವು ತಟ್ಟುವುದು' ಎಂದು ವಿಲಾಸಿನಿಯು ತಿಳಿ ದಿದ್ದಳು.

ಉದಯಸಿಂಹನಿಗೆ ನಾಟಕವನ್ನು ನೋಡುವುದಕ್ಕಿಂತಾ ನಾಟಕಶಾಲೆಗೆ ಬರುವ ಯುವತಿಯರನ್ನು ನೋಡಿ ಸಂತೋಷಪಡುವುದೇ ಆಸೆ; ಆದುದರಿಂದ ಅವನು ತನ್ನ ಆಪ್ತಸ್ನೇಹಿತನಾದ ಚಿತ್ರಸೇನನೊಡನೆ ಎಲ್ಲರಿಗಿಂತಲೂ ಮೊದಲೇ ಬಂದು ಆಸನದಲ್ಲಿ ಕುಳಿತುಕೊಂಡಿದ್ದನು.

"ಅಯ್ಯಾ ಚಿತ್ರಸೇನ, ಇಂದು ಯಾವ ನಾಟಕ ?"

"ಚಂಡಕೌಶಿಕನಾಟಕವಂತೆ."

"ಅದೊಂದು ಗೋಳು ನಾಟಕ."

"ನಿನಗೆ ಯಾವ ನಾಟಕದಲ್ಲಿ ತಾನೇ ರುಚಿಯಿದೆ ?"

ಉದಯಸಿಂಹನು ನಕ್ಕು ಸುಮ್ಮನಾದನು. ಆ ವೇಳೆಗೆ ನಾಟಕವು ಆರಂಭವಾಯಿತು. ಅದಾದ ಐದು ನಿಮಿಷಗಳಲ್ಲಿ ದಮನಕನು ಭಾಮಿನಿ ವಿಲಾಸಿನಿಯರೊಡನೆ ಬಂದು ಮಂತ್ರಿಯ ಆಸನದಲ್ಲಿ ಕುಳಿತುಕೊಂಡನು.

ಆಗ ಚಿತ್ರಸೇನನು "ಅಯ್ಯಾ ಉದಯಸಿಂಹ ಇತ್ತ ನೋಡು, ನಿನ್ನ

ವಿಲಾಸಿನಿಯು ಬಂದಿದ್ದಾಳೆ: ಅವಳನ್ನು ನೀನೇಕೆ ಮದುವೆಯಾಗಲು ಒಪ್ಪುವುದಿಲ್ಲ. ಅವಳೇನೋ ಕುಲೀನಳಲ್ಲ; ಆದರೆ ಈ ಕಾಲದಲ್ಲಿ ಕುಲವನ್ನು ಯಾರು ಕೇಳುತ್ತಾರೆ ? ಹುಡುಗಿಯೇನೋ ಚೆನ್ನಾಗಿದ್ದಾಳೆ" ಎನ್ನಲು, ಉದಯಸಿಂಹನು

"ನಿಜ, ಅವಳೇನೋ ಚೆನ್ನಾಗಿದ್ದಾಳೆ, ಆದರೆ ಗಂಡುಬೀರಿ" ಎಂದನು.

ಉದಯಸಿಂಹನು ಹೇಳಿದುದೇನೋ ನಿಜವೇ. ವಿಲಾಸಿನಿಗೆ ಅವಯವ ಸೌಂದರ್ಯವಿದ್ದರೂ ಸ್ತ್ರೀಯರುಗಳಿಗೆ ಸಹಜವಾಗಿರಬೇಕಾದ ಮಾರ್ದವವೂ ಲಾಲಿತ್ಯವೂ ಇರಲಿಲ್ಲ.

ಹೀಗೆ ಚಿತ್ರಸೇನನೂ ಉದಯಸಿಂಹನೂ ಒಬ್ಬೊಬ್ಬಳ ಅಂದಚೆಂದಗಳನ್ನೂ ಗುಣದೋಷಗಳನ್ನೂ ವಿಚಾರಮಾಡುತ್ತಲಿರುವಾಗ ಮೊದಲನೆಯ ಅಂಕವು ಮುಗಿದು ತೆರೆಯು ಬಿದ್ದಿತು. ಆಗ ಅವರವರು ಎದ್ದು ತಮ ತಮಗೆ ಪರಿಚಯವಿದ್ದವರನ್ನು ನೋಡಿ ಮಾತನಾಡಿಸಲು ಹೋದರು. ಎರಡನೆಯ ಅಂಕವು ಪ್ರಾರಂಭವಾಗುವ ಸೂಚನೆಯಾದ ಕೂಡಲೇ ಎಲ್ಲರೂ ತಮ್ಮ ತಮ್ಮ ಸ್ಥಳಗಳಿಗೆ ಬಂದು ಸೇರಿದರು.

ಆಗ ರಾಜಾಮಲಯಸಿಂಹನು ಕೋಮಲೆಯೊಡನೆ ಬಂದು ತನ್ನ ಆಸನದಲ್ಲಿ ಕುಳಿತನು. ಅವನ ಜತೆಯಲ್ಲಿ ಬಂದಿದ್ದ ವಾಮನಭಟ್ಟನು ಮುಂದೆ ನಿಂತಿದ್ದನು. ಕೋಮಲೆಯು ತನ್ನ ದೇಶದ ಉಡಿಗೆ ತೊಡಿಗೆಗಳನ್ನು ತೊಟ್ಟಿದ್ದುದರಿಂದ ಆ ಪುರದ ಜನರಿಗೆ ಅದು ವಿಜಾತೀಯವಾಗಿ ತೋರಿ ಎಲ್ಲರೂ ಅವಳನ್ನೇ ನೋಡುತ್ತಲಿದ್ದರು. ತನ್ನ ತಲೆಯ ಮುಸುಕನ್ನು ತೆಗೆದು ಆಸನದ ಮೇಲೆ ಅವಳು ಕುಳಿತ ಕೂಡಲೇ, ಎಲ್ಲರೂ ಅವಳ ರೂಪಲಾವಣ್ಯಗಳನ್ನು ನೋಡಿ ಪರಮಾಶ್ಚರ್ಯಪಡುತ್ತ ಇವಳು ಮನ್ಮಥನ ಸಾಮ್ರಾಜ್ಯಲಕ್ಷ್ಮಿಯೋ! ರತಿದೇವಿಯ ಅಪರಾವತಾರವೋ! ಎಂದು ತಮ ತಮಗೆ ತೋರಿದ ರೀತಿಯಿಂದ ಉಲ್ಲೇಖಿಸುತ್ತಿದ್ದರು.

"ಅಯ್ಯಾ ಉದಯಸಿಂಹ, ಈ ಸುಂದರಿಯು ಯಾರನ್ನು ವರಿಸುವಳೋ ಅವನೇ ಧನ್ಯನು. ಇವಳು ಯಾರ ಕೈಯನ್ನು ಹಿಡಿಯುವಳೋ ಅವನು ಸದಾ ಮನ್ಮಥನ ಉಪವನದಲ್ಲಿ ರಮಿಸುತ್ತಿರುವಂತಿರುವನು."

"ಮನ್ಮಥನ ಉಪವನಕ್ಕೂ ಇವಳಿಗೂ ಎಲ್ಲಿಯ ಸಾಮ್ಯ ?"

"ಹಾಗೋ! ಕೇಳು. ತುಟಿಗಳಿಂದ ಪಲ್ಲವಿಸಿ, ಮಂದಹಾಸದಿಂದ ಕುಸುಮಿಸಿ, ಸುಳಿಗುರುಳುಗಳಿಂದ ಸುಳಿಗೊಂಡು, ಕುಚಯುಗ್ಮದಿಂದ ಫಲಿಸಿ, ಸವಿನುಡಿಗಳಿಂದ ಶುಕಪಿಕಾಯಮಾನವೆನಿಸಿ, ನೇತ್ರಮೀನಗಳಿಂದ ಕೂಡಿದ ಮುಖಸೌಂದರ್ಯದಿಂದ ಸರೋಜವೆನಿಸಿ ಶೃಂಗಾರರಸವಂ ಚೆಲ್ಲುವ ಮನ್ಮಥನ ಉಪವನ."

"ಅಪ್ಪಾ ಚಿತ್ರಸೇನ, ನೀನು ಹೇಳುವುದೇನೋ ಸರಿ; ಆ ನಿರ್ಜೀವ ಪದಾರ್ಥವಾದ ವನಕ್ಕೂ, ತನ್ನ ಸೌಂದರ್ಯದಿಂದ ರತಿಯನ್ನು ಸೋಲಿಸಿ, ಭ್ರೂಲತೆಯಿಂದ ಸಕಲರ ಮನಸ್ಸನ್ನೂ ಕಟ್ಟಿಹಾಕಬಲ್ಲ ಈ ಜಗನ್ಮೋಹಿನಿಗೂ ಎಲ್ಲಿಯ ಸಂಬಂಧ? ಇವಳನ್ನು ನೋಡಿದ ಮೇಲೆ ಇನ್ನು ಯಾವ ಸ್ತ್ರೀಯನ್ನು ನೋಡುವುದಕ್ಕೂ ಮನಸ್ಸು ಬರುವುದಿಲ್ಲ" ಎಂದನು. ಅಷ್ಟರಲ್ಲಿಯೇ ಎರಡನೆಯ ಅಂಕವು ಮುಗಿಯಿತು.

ಕೂಡಲೇ ಭಾಮಿಯು ತನ್ನ ಬಳಿಗೆ ಬರುವಂತೆ ಉದಯಸಿಂಹನಿಗೆ ಸಂಜ್ಞೆಯನ್ನು ಮಾಡಿದಳು. ಹೋಗದಿದ್ದರೆ ಎಲ್ಲಿ ಅವಳಿಗೆ ಅವಮರ್ಯಾದೆ ಮಾಡಿದಂತಾಗುವುದೋ ಎಂದು ಅವನು ಅಲ್ಲಿಗೆ ಹೋದನು. ಅವಳು ಅವನನ್ನು ಬಹು ಮರ್ಯಾದೆಯಿಂದ ಕಂಡಳು; ವಿಲಾಸಿನಿಯು ಮರ್ಯಾದೆಮಾಡಲಿಲ್ಲ. ದಮನಕನು ಉದಯಸಿಂಹನನ್ನು ನೋಡಿ

"ನೀನು ಒಳ್ಳೆಯ ಸಮಯಕ್ಕೆ ಬಂದೆ; ಮಲಯಸಿಂಹನ ವಿಚಾರವಾಗಿ ಕೇಳಿ ಕೇಳಿ ಇವರು ನನ್ನ ಪ್ರಾಣವನ್ನು ತೆಗೆಯುತ್ತಲಿದ್ದರು. ನಿನ್ನನ್ನು ಕೇಳಿದರೆ ಎಲ್ಲವೂ ತಿಳಿಯುವುದೆಂದು ಹೇಳಿಬಿಟ್ಟಿದ್ದೇನೆ."

"ಅಯ್ಯಾ ದಮನಕರೇ, ನೀವು ಮಂತ್ರಿಗೆ ಒಳ್ಳೆಯ ಶಿಷ್ಯರು. ಗೂಢಚಾರರ ಮೂಲಕ ಇಂತಹ ಪ್ರಸಿದ್ಧಪುರುಷರ ವರ್ತಮಾನಗಳನ್ನು ತಿಳಿಯಬೇಕೆಂದು ಸರ್ಕಾರದವರು ವರ್ಷವೊಂದಕ್ಕೆ ಐವತ್ತು ಸಾವಿರ ವರಹಗಳ ಸಂಬಳವನ್ನು ಕೊಡುತ್ತಾರೆ. ಹೀಗಿರುವಲ್ಲಿ ನಾನು ಕೇಳಿದ ವಿಷಯವು ನಿಮಗೆ ತಿಳಿಯದು ಎಂದರೆ ನನಗೆ ನಾಚಿಕೆಯಾಗುತ್ತದೆ" ಎಂದು ಭಾಮಿನಿಯು ಹೇಳಲು, ಅವನು

"ಆ ರಾಜನು ಗೋಲಕೊಂಡದ ನವಾಬನಿಗಿಂತ ಹಣಗಾರನು. ಇದು ಹೊರತು ಮತ್ತಾವುದೂ ನನಗೆ ತಿಳಿಯದು."

"ಯಾವ ನವಾಬನಾಗಿದ್ದರೂ ಸುಮಾರು ಐವತ್ತು ಸಾವಿರ ವರಹಗಳ ಬೆಲೆಬಾಳುವ ಕುದುರೆಗಳನ್ನೂ ವಜ್ರಗಳನ್ನೂ ನನಗೆ ಕೊಡುತ್ತಿರಲಿಲ್ಲ."

"ಅಮ್ಮಾ, ಅವನಿಗೆ ವಜ್ರದ ಹುಚ್ಚು. ಯಾವಾಗಲೂ ಜೇಬಿನಲ್ಲಿ ವಜ್ರಗಳನ್ನು ತುಂಬಿಕೊಂಡು ಬೀದಿಯಲ್ಲಿ ಎರಚುತ್ತ ಹೋಗುತ್ತಿರುವನು" ಎಂದು ಉದಯಸಿಂಹನು ಹೇಳಲು, ಇವಳು

"ಅವನಿಗೆ ವಜ್ರದ ಗಣಿಯೊಂದು ಸಿಕ್ಕಿರಬಹುದು; ಇಲ್ಲದಿದ್ದರೆ ಹೀಗೆ ವಜ್ರಗಳನ್ನು ಮನಸ್ಸು ಬಂದ ಹಾಗೆ ಕೊಡುತ್ತಿರಲಿಲ್ಲ. ಉದಯಸಿಂಹರೇ! ಅವನು ಯಜಮಾನರ ಮೇಲೆ ಅಮಿತವಾದ ಹಣಕ್ಕೆ ಒಂದು ಹುಂಡಿಯನ್ನು ತಂದಿದ್ದಾನೆ. ಅದು ನಿಮಗೆ ತಿಳಿಯದೋ ?"

"ಅದನ್ನು ನಾನರಿಯೆನು."

"ಅವನು ಈ ಪಟ್ಟಣದಲ್ಲಿ ಒಂದು ವರ್ಷವಿರುತ್ತಾನಂತೆ; ಅಷ್ಟರಲ್ಲಿ ಅರುವತ್ತು ಲಕ್ಷ ವರಹಗಳನ್ನು ವೆಚ್ಚಮಾಡುವನಂತೆ."

"ಅಮ್ಮಾ! ಅವನು ಕುಬೇರನೇ ಆಗಿರಬೇಕು" ಎಂದು ಉದಯಸಿಂಹನು ಹೇಳಿದನು.

ವಿಲಾಸಿನಿಯು ಕೋಮಲೆಯನ್ನು ನೋಡಿ, "ದಮನಕರೇ, ರಾಜಾಮಲಯಸಿಂಹರ ಪಕ್ಕದಲ್ಲಿ ಕುಳಿತಿರುವ ಯುವತಿಯನ್ನು ನೋಡಿದಿರಾ ?"

"ಅವಳು ಬಲು ಸೊಗಸುಗಾತಿ. ಒಬ್ಬ ಸುಂದರಿಯು ಮತ್ತೊಬ್ಬಳ ಸೌಂದರ್ಯವನ್ನು ನೋಡಿ ಶ್ಲಾಘಿಸುವುದು ಆಶ್ಚರ್ಯವೇ ಸರಿ."

"ಅವಳಾರು" ಎಂದು ವಿಲಾಸಿನಿಯು ಉದಯಸಿಂಹನನ್ನು ಕೇಳಲು,

"ಅವಳೊಬ್ಬ ಯವನದೇಶದವಳು."

"ಅವಳ ಉಡಿಗೆಯಿಂದಲೇ ಅದು ವ್ಯಕ್ತವಾಗುತ್ತದೆ. ನಿಮಗೆ ಇನ್ನೇನೂ ತಿಳಿಯದಿದ್ದರೆ ನೀವೂ ನಮ್ಮಂತೆಯೇ ಆಗುತ್ತೀರಿ."

"ಅವಳು ಬಲು ಚೆನ್ನಾಗಿ ಹಾಡುತ್ತಾಳೆ; ಅಷ್ಟು ಬಲ್ಲೆ."

"ನೀವೆಲ್ಲಿ ಅವಳ ಹಾಡನ್ನು ಕೇಳಿದಿರಿ ?"

"ಒಂದು ದಿನ ರಾಜನು ನನ್ನನ್ನು ಊಟಕ್ಕೆ ಕರೆದಿದ್ದನು. ಅಂದು ತನ್ನ ಕೋಣೆಯಲ್ಲಿ ಕುಳಿತು ಅವಳು ಹಾಡುತ್ತಿದ್ದುದನ್ನು ಕೇಳಿದ್ದೆನು."

ಅದನ್ನು ಕೇಳಿ ಭಾಮಿನಿಯು ಆಶ್ಚರ್ಯಪಟ್ಟು "ನಿಮ್ಮ ರಾಜನು ಜನಗಳನ್ನು ಊಟಕ್ಕೆ ಕರೆಯುವುದೂ ಅವರ ಮನೆಗೆ ಕರೆದರೆ ತಾನೂ ಹೋಗುವುದೂ ಉಂಟೋ ?" ಎಂದು ಕೇಳಲು,

"ಉಂಟು; ಅವನ ಮನೆಯ ಊಟವೆಂದರೆ ರಸಕವಳ."

"ಹಾಗಾದರೆ ನಮ್ಮ ಯಜಮಾನರಿಗೆ ಹೇಳಿ ಒಂದು ದಿನ ಅವನಿಗೆ ಔತಣಮಾಡಿಸಿದರೆ ಅವನು ನಿರ್ವಾಹವಿಲ್ಲದೆ ನಮ್ಮನ್ನು ಬದಲಿಗೆ ಕರೆಯಬೇಕಾಗುತ್ತದೆ."

"ಆಗಬಹುದು."

"ನನಗೊಂದು ಕೆಲಸವನ್ನು ನೀವು ಮಾಡಿಕೊಡಬೇಕಲ್ಲ ?"

"ಅದೇನು ಹೇಳೋಣಾಗಲಿ."

"ನಿಮ್ಮ ರಾಜನನ್ನು ಇಲ್ಲಿಗೆ ಕರೆದುಕೊಂಡು ಬರಬೇಕು" ಎಂದು ಹೇಳಲು, ವಿಲಾಸಿನಿಯು

"ಅಮ್ಮಾ, ಏತಕ್ಕೆ ?" ಎಂದು ಕೇಳಿದಳು.

"ಅಮ್ಮಾ ವಿಲಾಸಿನೀ ! ನಿನಗೆ ಅವನನ್ನು ನೋಡಬೇಕೆಂಬ ಆಸೆಯಿಲ್ಲವೋ ?"

"ಇಲ್ಲ."

"ನೀನೊಂದು ವಿಜಾತೀಯಳಾದ ಹುಡುಗಿ," ಎಂದು ಹೇಳಿ ಭಾಮಿನಿಯು ಉದಯಸಿಂಹನ ಮುಖವನ್ನು ನೋಡಲು, ಅವನು "ಅಮ್ಮಾ ! ರಾಜನು ತಾನಾಗಿಯೇ ಇಲ್ಲಿಗೆ ಬರುವಂತಿದೆ. ಅವನು ನಿಮ್ಮನ್ನು ನೋಡಿ ತಲೆಯನ್ನು ಲಗಿಸುತ್ತಾನೆ" ಎಂದನು.

ಭಾಮಿನಿಯು ಅತಿಪ್ರಸನ್ನಳಾಗಿ ಬದಲಿಗೆ ತಲೆಯನ್ನು ಅಲುಗಿಸಿದಳು. ಉದಯಸಿಂಹನು ರಾಜಾಮಲಯಸಿಂಹನ ಬಳಿಗೆ ಹೊರಟನು. ಅದನ್ನು ತಿಳಿದು ರಾಜನು ಅಲ್ಲಿಂದ ಹೊರಟು ವಾಮನಭಟ್ಟನನ್ನು ಅಲ್ಲಿಯೇ ಬಿಟ್ಟು, ಉದಯಸಿಂಹನನ್ನು ಇದಿರುಗೊಂಡು ಬಂದನು.

"ಸ್ವಾಮಿ ರಾಜರೇ ! ಸಂಗೀತವು ಹೇಗಿದೆ ?" ಎಂದು ಉದಯಸಿಂಹನು ಕೇಳಲು, ಮಲಯಸಿಂಹನು

"ಮನುಷ್ಯಕಲ್ಪಿತವಾಗಿ ರೆಕ್ಕೆಪುಕ್ಕಗಳಿಲ್ಲದ ದ್ವಿಪಾದಗಳಿಂದ ಹಾಡಲ್ಪಟ್ಟರೆ ಎಷ್ಟು ಮನೋಹರವಾಗಿರಬಹುದೋ ಅಷ್ಟು ಮನೋಹರವಾಗಿದೆ."

"ದೇವಗಾನದಂತಿರುವ ಸಂಗೀತವನ್ನು ಕೇಳಿದ ಕಿವಿಗಳಿಗೆ ಈ ಸಂಗೀತವು ರುಚಿಸದು."

"ಆ ಸಂಗೀತವನ್ನು ಕೇಳಬೇಕಾಗಿದ್ದರೆ ನೀವು ಯಾವುದಾದರೂ ಒಂದು ದಿನ ನನ್ನ ಮನೆಗೆ ಬನ್ನಿರಿ."

"ಅದನ್ನು ನಾನು ಆವಾಗಲೇ ಕೇಳಿದ್ದೇನೆ."

"ಇಂದ್ರಪ್ರಸ್ಥದಲ್ಲಲ್ಲವೇ ?"

"ಅಹುದು."

ಉದಯಸಿಂಹನು ಈ ಮಾತನ್ನು ಅಷ್ಟಕ್ಕೇ ನಿಲ್ಲಿಸಿದನು. ಮಲಯಸಿಂಹನು ಯಾವುದನ್ನೋ ಯೋಚನೆ ಮಾಡುತ್ತ ಮೌನವಾಗಿದ್ದನು. ಆಗ ಅಂಕದ ತೆರೆಯನ್ನೆತ್ತುವ ಸೂಚನೆಯಾಯಿತು. ಉದಯಸಿಂಹನು ತನ್ನ ಆಸನಕ್ಕೆ ಹೋಗುವ ಪ್ರಯತ್ನಮಾಡಿ,

"ಭಾಮಿನಿಯವರು ನಿಮ್ಮನ್ನು ನೋಡಬೇಕೆಂದು ಕುತೂಹಲವುಳ್ಳವರಾಗಿದ್ದಾರೆ. ಅವರಿಗೆ ಏನು ಹೇಳಲಿ ?"

"ಆಮೇಲೆ ಹೋಗಿ ನೋಡುತ್ತೇನೆ. ನಿಮ್ಮ ಯಜಮಾನರು ಶ್ರೀಮಂತ ರಾಜಸಿಂಹರನ್ನು ಎಲ್ಲೆಲ್ಲಿ ನೋಡಿದರೂ ಕಾಣಲಿಲ್ಲ. ಅವರು ನಾಟಕಕ್ಕೆ ಬರುವುದಿಲ್ಲವೋ ?"

"ಇನ್ನು ಮೇಲೆ ಬರುವರು" ಎಂದು ಹೇಳಿ, ರಾಜನು ಬರುತ್ತೇನೆಂದುದನ್ನು ಭಾಮಿನಿಗೆ ಸೂಚಿಸಿ ಉದಯಸಿಂಹನು ತನ್ನ ಸ್ಥಾನಕ್ಕೆ ಹೋದನು.

ಮೂರನೆಯ ಅಂಕವು ಪ್ರಾರಂಭವಾದ ಮೇಲೆ ಶ್ರೀಮಂತ ರಾಜಸಿಂಹನು ಬಂದು ಭಾಮಿನಿಯ ಬಳಿ ಕುಳಿತನು. ಇವನು ಬಲು ದೊಡ್ಡ ಮನುಷ್ಯನೆಂದೆನಿಸಿಕೊಂಡಿದ್ದರೂ ಇವನ ಆಗಮನವು ಯಾರ ದೃಷ್ಟಿಗೂ ಬೀಳಲಿಲ್ಲ. ಮಲಯಸಿಂಹನು ಮಾತ್ರ ಇವನು ಬಂದುದನ್ನು ಕಂಡನು. ಕೋಮಲೆಯು ಚಿಕ್ಕ ವಯಸ್ಸಿನವಳಾಗಿ ಪರಿಶುದ್ಧಾತ್ಮಳಾದುದರಿಂದ ನಾಟಕಶಾಲೆಯಲ್ಲಿ ಕಣ್ಣಿಗೆ ಸೊಗಸಾಗಿರುವುದನ್ನು ನೋಡುತ್ತ ಕಿವಿಗಿಂಪಾಗಿರುವುದನ್ನು

ಕೇಳುತ್ತ ಕಾಲಹರಣ ಮಾಡುತ್ತಿದ್ದುದರಿಂದ ರಾಜಸಿಂಹನು ಬಂದುದನ್ನು ಅವಳು ನೋಡಲಿಲ್ಲ.

ಮೂರನೆಯ ಅಂಕವೂ ಮುಗಿಯಿತು. ಹರಿಶ್ಚಂದ್ರ ಮಹಾರಾಜನು ಹೆಂಡತಿ ಮಕ್ಕಳನ್ನು ಮಾರಿದರೂ ವಿಶ್ವಾಮಿತ್ರ ಮಹರ್ಷಿಯ ಸಾಲವು ತೀರದಿದ್ದುದರಿಂದ ತನ್ನ ಶರೀರವನ್ನು ಮಹತ್ತರಕನೆಂಬ ಚಂಡಾಲನಿಗೆ ವಿಕ್ರಯಿಸಿ ಅದರಿಂದ ಬಂದ ಹಣದಿಂದ ಸಾಲವನ್ನು ತೀರಿಸಿ. ಮಹತ್ತರಕನ ಅಪ್ಪಣೆಯಂತೆ ಶ್ಮಶಾನವನ್ನು ಕಾಯುವುದಕ್ಕೆ ಹೋದನು. ತೆರೆಯು ಬಿದ್ದಿತು. ಕೂಡಲೇ ಮಲಯಸಿಂಹನು ಭಾಮಿನಿಯು ಇದ್ದೆಡೆಗೆ ಹೋಗಿ, ರಾಜಸಿಂಹನ ಹಿಂದೆ ಇದ್ದ ಆಸನದಲ್ಲಿ ಕುಳಿತುಕೊಂಡನು.

"ಸ್ವಾಮಿಾ ರಾಜರೇ! ತಾವು ನನಗಾಗಿ ಮಾಡಿದ ಉಪಕಾರಕ್ಕಾಗಿ ನಾನು ಮೊದಲೇ ಪತ್ರದ ಮೂಲಕ ವಂದಿಸಿದ್ದೇನೆ. ಆದರೂ ಪ್ರತ್ಯಕ್ಷದಲ್ಲಿ ವಂದಿಸಬೇಕೆಂದು ಆಸೆಪಟ್ಟು ಇಲ್ಲಿಗೆ ಬಿಜಯಮಾಡಬೇಕೆಂದು ತಮ್ಮನ್ನು ಬೇಡಿಕೊಂಡೆನು'' ಎಂದು ಭಾಮಿನಿಯು ಹೇಳುತ್ತಲೇ, ರಾಜನು,

"ಅಮ್ಮಾ! ಆ ಅಲ್ಪ ಕೆಲಸವನ್ನು ನೀವು ಜ್ಞಾಪಕವಿಟ್ಟುಕೊಂಡು ಇಷ್ಟು ದೊಡ್ಡದನ್ನಾಗಿ ಮಾಡಬಹುದೇ? ನನಗೆ ಅದು ಆಗಲೇ ಮರೆತು ಹೋಯಿತು.''

"ನಾಗಮಣಿಯನ್ನೂ ಅವಳ ಮಗನನ್ನೂ ಕಾಪಿಟ್ಟಿರಲ್ಲಾ, ಅದೂ ಅಲ್ಪ ಕೆಲಸವೋ?''

"ಅದು ನನ್ನ ಕೆಲಸವಲ್ಲ. ವಾಮನಭಟ್ಟನದು'' ಎನ್ನುತ್ತಲೇ, ರಾಜಸಿಂಹನು,

''ನನ್ನ ಮಗನನ್ನು ಕಳ್ಳರ ಕಯ್ಯಿಂದ ಬಿಡಿಸಿಕೊಂಡು ಬಂದವನೂ ವಾಮನಭಟ್ಟನೋ?'' ಎಂದು ಕೇಳಿದನು.

"ಸ್ವಾಮಿಾ! ನಾನೇ ಅವರನ್ನು ಬಿಡಿಸಿಕೊಂಡುಬಂದೆನು; ಅದಕ್ಕೆ ಆವಾಗಲೇ ತಾವು ನನಗೆ ತಕ್ಕ ಉಪಚಾರೋಕ್ತಿಗಳನ್ನು ಹೇಳಿದ್ದಿರಿ; ಪುನಃ ಈಗ ಅವುಗಳನ್ನು ಹೇಳುವುದೇಕೆ?'' ಎಂದು ಭಾಮಿನಿಯನ್ನು ಕುರಿತು,

''ಅಮ್ಮಾ, ಇವರು ನಿಮ್ಮ ಪುತ್ರಿಯೋ?'' ಎಂದು ಕೇಳಿದನು.

''ಓಹೋ; ರಾಜರೇ! ತಮಗೆ ಇನ್ನೂ ವಿಲಾಸಿನಿಯ ಪರಿಚಯ

ವಾಗಿಲ್ಲವೇ ? ತಮ್ಮ ಪರಿಚಯವನ್ನು ಮಾಡಿಸುವುದಕ್ಕೆ ಯಾರೂ ಬೇಕಾಗಿಲ್ಲ. ಒಂದುವೇಳೆ ತಮ್ಮನ್ನು ನೋಡದೆ ಇದ್ದರೂ ತಮ್ಮ ಹೆಸರನ್ನು ಕೇಳದವರೇ ಇಲ್ಲ. ಈಗ ಎರಡು ಮೂರು ದಿನಗಳಿಂದಲಂತೂ ನಮ್ಮ ಮನೆಯಲ್ಲಿ ತಮ್ಮ ಮಾತೇ ಮಾತು" ಎಂದು ಭಾಮಿನಿಯು ವಿಲಾಸಿನಿಯ ಮೊಗವನ್ನು ನೋಡಿದಳು.

ವಿಲಾಸಿನಿಗೂ ರಾಜನಿಗೂ ಪರಿಚಯವಾಗಿ ಕೆಲವು ಸಂವಾದಗಳು ನಡೆದ ಮೇಲೆ ಅವಳು,

''ಸ್ವಾಮಿ ರಾಜರೇ, ನಿಮ್ಮ ಪಕ್ಕದಲ್ಲಿ ಕುಳಿತಿದ್ದ ಸುಂದರಿ ಯಾರು ?" ತಮ್ಮ ಮಗಳೋ ?"

''ಅವಳು ನನ್ನ ಮಗಳಲ್ಲ; ಯವನದೇಶದವಳು ; ಅನಾಥೆ, ನನ್ನ ಪಾಲನೆಯಲ್ಲಿದ್ದಾಳೆ.''

''ಅವಳ ಹೆಸರೇನು ?''

"ಕೋಮಲೆ."

"ಯವನದೇಶದವಳೇ ?'' ಎಂದು ರಾಜಸಿಂಹನು ಕೇಳಲು, ಭಾಮಿನಿಯು,

''ಶ್ರೀಮಂತರೇ ! ತಾವು ಅಲ್ಲಿದ್ದಾಗ ಇಂತಹ ಉತ್ಕೃಷ್ಟ ಸೌಂದರ್ಯವನ್ನು ನೋಡಿದ್ದಿರಾ ?" ಎಂದು ಕೇಳಿದಳು.

ಅದಕ್ಕೆ ರಾಜಸಿಂಹನು ಬದಲು ಹೇಳುವುದರೊಳಗಾಗಿಯೇ ಮಲಯಸಿಂಹನು,

''ಶ್ರೀಮಂತರೇ ! ತಾವು ಯವನದೇಶದಲ್ಲಿಯೂ ಇರೋಣಾಗಿದ್ದಿತೋ ?" ಎಂದು ಪ್ರಶ್ನೆಯನ್ನು ಮಾಡಲು, ಅವನು

''ಅಹುದು. ಆ ರಾಜನ ಸೈನ್ಯಗಳಿಗೆಲ್ಲಾ ರಾಜಮಾನನಾಗಿದ್ದೆನು. ನಾನು ಮಾಡಿದ ಉಪಕಾರಕ್ಕಾಗಿ ಅವನು ನನಗೆ ಹೇರಳವಾಗಿ ದ್ರವ್ಯವನ್ನು ಕೊಟ್ಟನು. ಇದು ಎಲ್ಲರಿಗೂ ಗೊತ್ತು" ಎಂದನು.

ಆಗ ಭಾಮಿನಿಯು ''ಅಲ್ಲಿ ನೋಡಿ ಅಲ್ಲಿ ನೋಡಿ" ಎಂದುಗಾಬರಿಯಿಂದ ಕೂಗಿಕೊಳ್ಳಲು ರಾಜಸಿಂಹನು ''ಎಲ್ಲಿ, ಏನು ?'' ಎಂದು ಕೇಳಿ ಬಗ್ಗಿ ನೋಡುತ್ತಿದ್ದನು. ಅವನ ಹಿಂದೆ ಇದ್ದ ಮಲಯಸಿಂಹನು ಎದ್ದು ತನ್ನ ಕೈ

ಅನ್ನು ನೀಡಿ ಕೋಮಲೆಯು ಕುಳಿತಿದ್ದ ಸ್ಥಳವನ್ನು ತೋರಿಸಿದನು, ತನ್ನ ಸ್ವಾಮಿಯು ಎಲ್ಲಿ ಹೋದನೋ ಎಂದು ಕೋಮಲೆಯು ಅತ್ತಿತ್ತ ನೋಡಿ, ಅವನು ರಾಜಸಿಂಹನ ಜೊತೆಯಲ್ಲಿ ಕುಳಿತಿರುವುದನ್ನು ಕುಂಡು ಕಾಲಕೂಟ ವಿಷದ ಸರ್ಪದ ತಲೆಯ ಸಮೀಪದಲ್ಲಿರುವಂತೆ ಕಂಡು ಕಿರ್ರನೆಕಿರಿಚಿಕೊಂಡಳು. ತಕ್ಷಣವೇ ಬಾಗಿಲಲ್ಲಿದ್ದ ವಾಮನಭಟ್ಟನು ಒಳಕ್ಕೆ ಹೋದನು.

ಇದನ್ನು ನೋಡುತ್ತಲಿದ್ದ ವಿಲಾಸಿನಿಯು "ರಾಜರೇ ! ನಮ್ಮ ಪೋಷಣೆ ಯಲ್ಲಿರುವ ಯುವತಿಗೆ ಏನು ? ಮೂರ್ಛೆ ಹೋದಂತೆ ತೋರುತ್ತದೆ" ಎಂದು ದಕ್ಕೆ, ರಾಜನು "ಅವಳ ನರಗಳು ಅತಿ ಸೂಕ್ಷ್ಮವಾದುವು. ಕೆಲವು ಹೂವು ಗಳ ವಾಸನೆಯು ಅವಳಿಗಾಗದು, ಕೆಲವು ಅವಳ ಕಣ್ಣಿಗೆ ಬಿದ್ದರೆ ಸಾಕು ಮೂರ್ಛೆಹೋಗುವಳು. ನೀವೇನೂ ಭಯಪಡ ಕೆಲಸವಿಲ್ಲ. ಅಂತಹ ರೋಗಗಳಿಗೆ ಇದು ಸಂಜೀವನ" ಎಂದು ತನ್ನ ಜೇಬಿನಲ್ಲಿದ್ದ ಸೀಸೆಯನ್ನು ತೋರಿಸಿ, ಓಡಿಹೋಗಿ, ಆ ಸೀಸೆಯ ದ್ರಾವಕದಲ್ಲಿ ಒಂದು ತೊಟ್ಟನ್ನು ಕೋಮ ಲೆಯ ಬಾಯಿಗೆ ಬಿಟ್ಟನು.

ಐದು ನಿಮಿಷಗಳೊಳಗಾಗಿಯೇ ಕೋಮಲೆಯು ಎದ್ದು ಮಲಯ ಸಿಂಹನ ಕಯ್ಯನ್ನು ಹಿಡಿದು,

''ಸ್ವಾಮಿ ! ನೀವು ಅಲ್ಲಿ ಯಾರೊಂದಿಗೆ ಕುಳಿತು ಮಾತನಾಡುತ್ತಲಿ ದ್ದಿರಿ ?"

''ಶ್ರೀಮಂತ ರಾಜಸಿಂಹನ ಸಂಗಡ : ತನಗೆ ಮಾಡಿದ ಮಹದುಪ ಕಾರಕ್ಕಾಗಿ ಸಾಯುವ ಕಾಲದಲ್ಲಿ ನಿನ್ನ ತಂದೆಯು ಅವನಿಗೆ ವಿಶೇಷ ದ್ರವ್ಯ ವನ್ನು ಕೊಟ್ಟನೆಂದು ಅವನು ಹೇಳುತ್ತಿದ್ದನು.''

ಇದನ್ನು ಕೇಳುತ್ತಲೇ ಕೋಪದಿಂದ ಕೋಮಲೆಯ ಕಣ್ಣುಗಳು ಕೆಂಡ ದಂತಾಗಿ,

''ಅವನು ಖೂಳನು, ವಿಶ್ವಾಸಘಾತುಕನು. ನನ್ನ ತಂದೆಯನ್ನು ನಮ್ಮ ಹಗೆಗಳಿಗೆ ಮಾರಿ ತುಚ್ಛವಾದ ಮೋಸದ ಕೆಲಸಗಳನ್ನು ಮಾಡಿ ಹಣ ವನ್ನು ಸಂಪಾದಿಸಿದನು. ನನ್ನ ಸ್ವಾಮಿಯಾದ ನಿಮಗೆ ಈ ಸಮಾಚಾರವು ತಿಳಿಯದೋ ?"

''ಹಿಂದೆ ಎಲ್ಲೋ ಸ್ವಲ್ಪ ಕೇಳಿದ್ದೆನು. ಆದರೆ ಅದರ ವಿವರವು ನನಗೆ

ಚೆನ್ನಾಗಿ ತಿಳಿಯದು. ಈಗ ನೀನು ದುರ್ಬಲೆಯಾಗಿರುವುದರಿಂದ ಇನ್ನಾವಾಗಲಾದರೂ ಈ ಕಥೆಯನ್ನು ಮೊದಲಿನಿಂದ ಕೇಳುತ್ತೇನೆ."

"ಸ್ವಾಮಿಾ ! ಆ ಚಂಡಾಲನಿರುವ ಕಡೆ ನಾನಿದ್ದರೆ ನನ್ನ ಪ್ರಾಣವೇ ಹೋಗುವುದು. ಮನೆಗೆ ಹೋಗೋಣ'' ಎಂದು ರಾಜನ ಕಯ್ಯನ್ನು ಹಿಡಿದುಕೊಂಡು ನಾಟಕಶಾಲೆಯಿಂದ ಹೊರಟಳು.

ಅದಕ್ಕೆ ಸರಿಯಾಗಿ ತೆರೆಯನ್ನು ಎತ್ತಿದರು. ಮುಂದಿನ ಅಂಕವು ಪ್ರಾರಂಭವಾಯಿತು. ಆಗ ಅಲ್ಲಿದ್ದವರಲ್ಲಿ ಕೆಲವರು "ಈ ರಾಜನು ಇತರರು ಮಾಡುವಂತೆ ಯಾವ ಕೆಲಸವನ್ನೂ ಮಾಡುವುದಿಲ್ಲ. ಹರಿಶ್ಚಂದ್ರ ಮಹಾರಾಜನು ಚಂಡಾಲನ ವಶವಾಗುವವರೆಗೆ ಕಥೆಯನ್ನು ಕೇಳಿ, ಕೊನೆಯವರೆಗೆ ಇರದೆ ಓಡಿಹೋದನು'' ಎಂದು ಮನಬಂದಂತೆ ಹೇಳಿಕೊಳ್ಳುತ್ತಲಿದ್ದರು.

---

# ಮೂವತ್ತೊಂಭತ್ತನೆಯ ಅಧ್ಯಾಯ

## ದುರ್ಮತಿಯ ವ್ಯಾಪಾರ

ನಾಟಕಶಾಲೆಯಲ್ಲಿ ನೋಡಿ ಕೆಲವು ದಿನಗಳಾದ ಮೇಲೆ ಒಂದು ದಿವಸ ಬೆಳಿಗ್ಗೆ ಉದಯಸಿಂಹನೂ ದಮನಕನೂ ಮಲಯಸಿಂಹನನ್ನು ನೋಡಲು ಹೋದರು. ರಾಜನು ಅವರನ್ನು ಮರ್ಯಾದೆಯಿಂದ ಬರಮಾಡಿಕೊಂಡು, ಇದೇನು ಇಷ್ಟು ಅಪರೂಪವಾದ ದರ್ಶನ ಎನ್ನಲು, ಉದಯಸಿಂಹನು "ಸ್ವಾಮಿಾ ರಾಜರೇ! ನೀವು ಮಾಡಿದ ಉಪಕಾರಕ್ಕಾಗಿ ಭಾಮಿನಿಯು ನಿಮ್ಮನ್ನು ಬಹಳವಾಗಿ ಕೊಂಡಾಡುತ್ತಿದ್ದಾಳೆ" ಎಂದು ಹೇಳಿದನು. ರಾಜನು ಅದಕ್ಕೆ ಯಾವ ಬದಲನ್ನೂ ಹೇಳದೆ, ಐವತ್ತು ಸಾವಿರ ಹೊನ್ನು ಬೆಲೆ ಬಾಳುವ ಕುದುರೆಗಳನ್ನೂ ವಜ್ರಗಳನ್ನೂ ತನಗೆ ಕೊಟ್ಟವನ ಗೃಹಕೃತ್ಯವು ಹೇಗಿರುವುದೋ ತಿಳಿಯಬೇಕೆಂಬ ಆಸೆಯಿಂದ ಭಾಮಿನಿಯು ತಾನೇ ಬಂದರೆ ಯಾರೇನು ಹೇಳುವರೋ ಎಂದು ಭಯಪಟ್ಟು, ದಮನಕನಿಂದ ಅದನ್ನು ಕೇಳಿ ತಿಳಿಯಲೋಸುಗ ಅವನನ್ನು ಕಳುಹಿಸಿರಬಹುದು, ಎಂದು ಯೋಚಿಸಿ, ಏನೂ ಅರಿಯದವನಂತೆ

‘ಉದಯಸಿಂಹರೇ ! ಭಾಮಿನಿಯನ್ನು ನೀವು ಅಡಿಗಡಿಗೆ ಕಾಣುತ್ತಿರುವಿರೋ?’ ಎಂದನು.

“ಅಹುದು, ನಿಮಗೆ ಅದರ ಕಾರಣವನ್ನು ನಾನು ಮೊದಲೇ ಹೇಳಿರಲಿಲ್ಲವೇ ?”

“ಅಹುದು, ಅಹುದು. ಮದುವೆ ನಿಶ್ಚಯವಾಯಿತೋ ?’’

“ಆದ ಹಾಗೆಯೇ.”

“ಇಷ್ಟು ಜಾಗ್ರತೆಯಾಗಿ ಆಗುವುದೆಂದು ನಾನು ಯೋಚಿಸಿರಲಿಲ್ಲ.”

“ಕಾರ್ಯಗಳೆಲ್ಲವೂ ತಾವಾಗಿಯೇ ಮುಂದುವರಿಯುತ್ತ ಫಲಕ್ಕೆ ಬರುತ್ತಲಿರುವುವು. ನಮ್ಮ ಯಜಮಾನರೂ ದುರ್ಮತಿಗಳೂ ಬಹು ದಿವಸಗಳು ಒಂದೇ ಕಡೆಯಲ್ಲಿದ್ದು ಸ್ನೇಹವನ್ನು ಬೆಳೆಸಿದ್ದುದರಿಂದ ಈ ಸಂಬಂಧವನ್ನು ಮಾಡಬೇಕೆಂದು ಅವರಿಬ್ಬರಿಗೂ ಆಸೆ.”

“ಅಹುದಹುದು, ಆ ವಿಷಯವನ್ನು ದುರ್ಮತಿಗಳು ಅಡಿಗಡಿಗೆ ಹೇಳುತ್ತಿದ್ದರು, ಎಂದು ಕಡೆಗಣ್ಣಿನಿಂದ ದಮನಕನನ್ನು ನೋಡುತ್ತ

“ಉದಯಸಿಂಹರೇ ! ವಿಲಾಸಿನಿಯು ಸುಂದರಿ ; ಅವಳನ್ನು ಮದುವೆಯಾದರೆ ನೀವು ಭಾಗ್ಯಶಾಲಿಗಳೇ ಸರಿ.”

“ಸೌಂದರ್ಯದ ವಿಚಾರವು ಹಾಗಿರಲಿ. ಅವಳನ್ನು ಪಡೆಯುವ ಪ್ರಾಪ್ತಿ ನನಗಿಲ್ಲ ’’.

“ಅದೇಕೆ ?”

“ಅವಳು ವಿಶೇಷ ಧನಿಕಳು.’’

“ಆದರೇನು ? ನೀವೂ ಧನಿಕರು.’’

“ನನ್ನ ತಂದೆಯ ವರಮಾನವು ವರುಷಕ್ಕೆ ಸುಮಾರು ಐವತ್ತು ಸಾವಿರ ವರಹಗಳು. ಮದುವೆಯಾದಾಗ ನನಗೆ ಹತ್ತುಸಾವಿರ ವರಹಗಳನ್ನು ಕೊಡಬಹುದು.’’

“ಈ ಊರಿಗೆ ಅದೇನೋ ಹೆಚ್ಚಲ್ಲ. ಆದರೂ ಬರಿಯ ಹಣವೇ ಪ್ರಧಾನವಲ್ಲ ; ಯಶಸ್ಸನ್ನೂ ಅಧಿಕಾರವನ್ನೂ ನೋಡಬೇಕು. ನಿಮ್ಮ ವಂಶವು ಹೆಸರುವಾಸಿಯಾದುದು ; ನಿಮ್ಮ ತಂದೆಯು ರಣಧೀರನು. ಈ ಮದುವೆಯು ಉತ್ತಮವಾದ ಸಂಬಂಧವೆಂದು ನನಗೆ ತೋರುತ್ತದೆ. ವಿಲಾಸಿನಿಯು ನಿಮಗೆ

ಹಣವನ್ನು ತರುವಳು. ನಿಮ್ಮಿಂದ ಅವಳ ವಂಶಕ್ಕೆ ಕಳೆ ಬಂದು ಅದು ಪುನೀತವಾಗುವುದು. ನಿಮಗೆ ಅಭ್ಯಂತರವೇನು? ಈ ಸಂಬಂಧವು ನಿಮ್ಮ ಯಜಮಾನರಿಗೆ ಇಷ್ಟವೆಂದು ಮೊದಲೇ ಹೇಳಿದ್ದೀರಿ."

ಆಗ ಉದಯಸಿಂಹನು ತಲೆಯನ್ನು ಅಲ್ಲಾಡಿಸುತ್ತ ದಮನಕನಿಗೆ ಕೇಳಿಸದಂತೆ

''ಈ ಮದುವೆಯನ್ನು ಒಪ್ಪದಿರಲು ಬೇರೆ ಕಾರಣವುಂಟು" ಎಂದನು.

"ಅದೇನು ಕಾರಣ?"

"ಇದು ನನ್ನ ತಾಯಿಗೆ ಇಷ್ಟವಿಲ್ಲ. ದುರ್ಮತಿಯೆಂದರೆ ಅವಳು ಅಸಹ್ಯಪಡುವಳು."

"ಅದು ನ್ಯಾಯ. ನಿಮ್ಮ ತಾಯಿಯು ದೊಡ್ಡ ವಂಶಕ್ಕೆ ಸೇರಿದವರು, ಕೀಳು ಹೆಣ್ಣನ್ನು ತರಲು ಅವರಿಗೆ ಇಷ್ಟವಿರಲಾರದು."

"ಅದು ಹೇಗೋ ನನಗೆ ತಿಳಿಯದು ; ಆದರೆ ಈ ಮದುವೆಯಿಂದ ಅವಳಿಗೆ ದುಃಖವುಂಟಾಗುವುದೆಂದು ಬಲ್ಲೆನು. ನನಗೆ ಉಭಯಸಂಕಟ. ನಿಮ್ಮಂತೆ ಮದುವೆಯಾಗದೇ ಇದ್ದರೆ ನಿಶ್ಚಿಂತೆ.''

"ಹಾಗಾದರೆ ನೀವೂ ನನ್ನಂತೆಯೇ ಏತಕ್ಕೆ ನಿಶ್ಚಿಂತೆಯಾಗಿರಬಾರದು?"

"ಮದುವೆಯಾಗದಿದ್ದರೆ ನನ್ನ ತಂದೆಗೆ ಅಸಮಾಧಾನವಾಗುವುದು."

"ಮದುವೆಯನ್ನು ಮಾಡಿಕೊಂಡು ಬಿಡಿ."

"ಈ ಮದುವೆಯಾದರೆ ನನ್ನ ತಾಯಿಯು ದುಃಖ ಸಮುದ್ರದಲ್ಲಿ ಮುಳುಗಿಯೇ ಬಿಡುವಳು,"

''ಹಾಗಾದರೆ ವಿಲಾಸಿನಿಯನ್ನು ಮದುವೆಯಾಗಬೇಡಿ.''

''ನನಗೂ ಅವಳನ್ನು ಮದುವೆಯಾಗುವುದಕ್ಕೆ ಇಷ್ಟವಿಲ್ಲ. ಈ ಮದುವೆಯನ್ನು ತಪ್ಪಿಸಲು ನಿಮ್ಮಿಂದ ಆದರೆ ಅದಕ್ಕೆ ತಕ್ಕ ಏರ್ಪಾಡನ್ನು ಮಾಡಿ. ನನ್ನ ತಂದೆಗೆ ಕೋಪ ಬಂದರೂ ಚಿಂತೆಯಿಲ್ಲ. ನನ್ನ ತಾಯಿಯ ದುಃಖವನ್ನು ಮಾತ್ರ ಸಹಿಸಲಾರೆನು" ಎಂದು ಉದಯಸಿಂಹನು ಹೇಳಲು, ಮಲಯಸಿಂಹನು ತಟ್ಟನೆ ಅತ್ತಕಡೆ ತಿರುಗಿದನು.

ದಮನಕನು ಕುರ್ಚಿಯಲ್ಲಿ ಕುಳಿತು ಯಾವುದೋ ಒಂದು ಲೆಕ್ಕವನ್ನು ಹಾಕುತ್ತಲಿದ್ದನು. ಮಲಯಸಿಂಹನು,

"ಏನು ದಮನಕರೇ ! ಚಿತ್ರಬರೆಯುತ್ತಲಿದ್ದೀರೋ ?" ಎಂದನು.

"ರಾಜರೆ! ನನಗೆ ಚಿತ್ರವೆಂದರೆ ಶೂನ್ಯ. ನಾನೊಂದು ಲೆಕ್ಕವನ್ನು ಮಾಡು ತ್ತಲಿದ್ದೇನೆ."

"ಅದೇನು ಲೆಕ್ಕ ?"

"ನಮ್ಮ ಸ್ನೇಹಿತರು ಉದಯಸಿಂಹರಿಗೆ ಸೇರಿದ ಲೆಕ್ಕ."

"ಅದೇನಪ್ಪಾ, ನನ್ನ ಲೆಕ್ಕ" ಎಂದು ಉದಯಸಿಂಹನು ಕೇಳಲು, ದಮನಕನು

"ಐನೂರು ವರಹಗಳ ಸರ್ಕಾರೀ ಪತ್ರಗಳ ಬೆಲೆಯು ಮೂರು ದಿನಗಳ ಕೆಳಗೆ ಇನ್ನೂರ ಆರು ವರಹಗಳಿದ್ದುವು. ದುರ್ಮತಿಯು ಅವುಗಳನ್ನು ಆ ಬೆಲೆಗೆ ಕೊಂಡುಕೊಂಡು ಇಂದು ಪತ್ರಗಳ ಬೆಲೆ ಏರಿದುದರಿಂದ ನಾಲ್ಕುನೂರ ಒಂಭತ್ತು ವರಹಗಳಂತೆ ಮಾರಿಬಿಟ್ಟನು. ಇನ್ನು ಒಂದು ದಿವಸ ಸಾವಕಾಶವಾಗಿದ್ದರೆ ಅವು ಇನ್ನೂರು ವರಹಗಳಿಗೆ ಇಳಿಯುತ್ತಲಿದ್ದುವು. ವಿಲಾಸಿನಿಯ ಮೂಲಕ ನಿನಗೆಷ್ಟು ಲಾಭ ಬರಬಹುದೆಂದು ಲೆಕ್ಕಮಾಡಿದೆನು" ಎಂದನು.

"ಓಹೋ ! ಒಂದು ದಿನದಲ್ಲಿ ಮೂರು ಲಕ್ಷ ವರಹಗಳ ಲಾಭ ಬರಬೇಕಾಗಿದ್ದರೆ ದುರ್ಮತಿಗಳು ಅಪಾರ ಹಣಗಾರರಾಗಿರಬೇಕು. ಸ್ವಾಮಿಾ ದಮನಕರೇ, ಪತ್ರಗಳ ಬೆಲೆಯು ಏರುವುದೂ ಇಳಿಯುವುದೂ ಎಂದರೆ ಏನು ? ಸ್ವಲ್ಪ ಹೇಳಿ. ಇದರ ವ್ಯಾಪಾರವೇ ನನಗೆ ಗೊತ್ತಿಲ್ಲ" ಎಂದು ಮಲಯಸಿಂಹನು ಕೇಳಿದನು.

"ಬೆಲೆಯು ಏರುವುದೂ ಇಳಿಯುವುದೂ ತಂತೀವರ್ತಮಾನದ ಕೆಲಸ. ಈ ವ್ಯಾಪಾರವನ್ನು ದುರ್ಮತಿಯು ಮಾಡುವುದಿಲ್ಲ; ಇದು ಅವನ ಹೆಂಡತಿಯ ಕೆಲಸ. ಅವಳೇ ನುಗ್ಗುವಳು" ಎಂದು ದಮನಕನು ಹೇಳಲು ಉದಯ ಸಿಂಹನು

"ಅಪ್ಪಾ ದಮನಕ ! ನಿನಗೆ ಈ ತಂತೀ ವರ್ತಮಾನಗಳು ಮೊದಲೇ ಬರುವುದರಿಂದ ನೀನು ಅವಳ ವ್ಯಾಪಾರವನ್ನು ತಪ್ಪಿಸಬಹುದಲ್ಲವೇ ?"

"ಅವಳ ಯೋಗ್ಯತೆ ಗೊತ್ತೇಯಿದೆ. ಗಂಡನನ್ನೂ ಲಕ್ಷ್ಯಮಾಡುವುದಿಲ್ಲ ಯಾರನ್ನೂ ಲಕ್ಷ್ಯಮಾಡುವುದಿಲ್ಲ. ತನಗೆ ಇಷ್ಟಬಂದಂತೆ ಕೆಲಸಗಳ್ನು ಮಾಡುತ್ತಾಳೆ."

"ಅಪ್ಪಾ! ನಿನ್ನ ಹಾಗೆ ನನಗೆ ಅವಕಾಶವು ಇದ್ದಿದ್ದರೆ ಅವಳನ್ನು ತಿದ್ದುತ್ತಲಿದ್ದೆ" ಎಂದು ಉದಯಸಿಂಹನು ನಕ್ಕನು.

"ಈ ದಿನ ಯಾವುದೋ ಒಂದು ತಂತೀವರ್ತಮಾನವು ಬಂದಿತೆಂದು ಸುಳ್ಳು ಹೇಳಿದರೆ ಅವಳು ನಿನ್ನ ಮಾತನ್ನು ನಂಬಿ ಪತ್ರಗಳನ್ನು ಮಾರುವುದೋ ತೆಗೆಯುವುದೋ ಮಾಡುವಳು. ಮಾರನೆಯ ದಿನ ಆ ವರ್ತಮಾನವು ಸುಳ್ಳೆಂದು ತಿಳಿದರೆ ಅವಳಿಗೆ ನಷ್ಟವಾಗುವುದು. ಒಂದೆರಡು ಸಾರಿ ಹೀಗೆ ಆದರೆ ಅವಳಿಗೆ ತಾನಾಗಿಯೇ ಬುದ್ಧಿ ಬರುವುದು."

ಉದಯಸಿಂಹನು ಹೀಗೆ ಹೇಳುತ್ತಲೆ ದಮನಕನಿಗೆ ಮನಸ್ಸಿನಲ್ಲಿ ತುಂಬ ದುಃಖವುಂಟಾಯಿತು. ಉದಾಸೀನದಿಂದ ಇದ್ದ ಮಲಯಸಿಂಹನು ಈ ಸಂವಾದದಲ್ಲಿ ಒಂದು ಮಾತನ್ನೂ ಬಿಡದೆ ಗ್ರಹಿಸಿದುದಲ್ಲದೆ ದಮನಕನ ಮನಸ್ಸಿನ ಕಳವಳವನ್ನು ತಿಳಿದುಕೊಂಡನು. ದಮನಕನು ನಿಲ್ಲಲಾರದೆ ಮನೆಗೆ ಹೊರಡಲು, ರಾಜನು ಅವನ ಕಿವಿಯಲ್ಲಿ ಏನನ್ನೋ ಹೇಳಿದನು. ಅವನು ಅವಶ್ಯವಾಗಿ ಆಗಲಿ ಎಂದು ಹೊರಟುಹೋದನು.

ದಮನಕನು ಅತ್ತ ಹೋದಮೇಲೆ ಮಲಯಸಿಂಹನು ಉದಯಸಿಂಹನನ್ನು ಕುರಿತು "ನಿಮ್ಮ ಅತ್ತೆ ಭಾಮಿನಿಯ ವಿಷಯವಾಗಿ ದಮನಕನ ಸಂಗಡ ನೀವು ಹಾಗೆ ಹೇಳಬಾರದಾಗಿದ್ದಿತು" ಎಂದು ಹೇಳಲು, ಉದಯಸಿಂಹನು

"ಅವಳು ಇನ್ನೂ ನನಗೆ ಅತ್ತೆಯಾಗಿಲ್ಲವಲ್ಲ" ಎಂದನು.

"ಈ ಮದುವೆಯು ನಿಮ್ಮ ತಾಯಿಗೆ ಸ್ವಲ್ಪವೂ ಇಷ್ಟವಿಲ್ಲವೊ ?"

"ಇಲ್ಲ".

"ಹಾಗಾದರೆ ನಾನೊಂದು ಮಾತನ್ನು ಹೇಳಬೇಕೆಂದಿದ್ದೇನೆ."

"ಅದೇನು ?"

"ದುರ್ಮತಿಯ ಬಳಿ ನನ್ನ ಹಣವಿದೆ. ವಲ್ಲಭದೇವನ ಕುಟುಂಬಕ್ಕೆ ನಾನು ಮಾಡಿದ ಅಲ್ಪ ಸಹಾಯಕ್ಕಾಗಿ ಅವನು ನನಗೆ ಬಹು ಗೌರವವನ್ನು ತೋರಿಸಿದ್ದಾನೆ. ಅವರಿಬ್ಬರೂ ನನ್ನನ್ನು ಊಟಕ್ಕೆ ಕರೆಯಬಹುದು; ಅದಕ್ಕೆ ಮೊದಲೇ ನಾನು ಆ ಎರಡು ಮನೆಯವರನ್ನೂ ಕರೆಯಬೇಕೆಂದಿದ್ದೇನೆ. ನಿಮ್ಮ ಮನೆಯವರನ್ನೂ ಕರೆದರೆ ನಿಮ್ಮ ಮದುವೆಯ ಏರ್ಪಾಡಿಗಾಗಿಯೇ ಅವರ ಜತೆಯಲ್ಲಿ ನಿಮ್ಮನ್ನು ಸೇರಿಸಿದೆನೆಂಬ ಭಾವವು ಅವರಿಗೆ ತೋರಬಹುದು.

ನಿಮ್ಮತಾಯಿಗೆ ಅದರಿಂದ ನನ್ನ ಮೇಲೆ ಸಿಟ್ಟು ಬರಬಹುದು. ನಿಮ್ಮ ತಾಯಿಯ ಆಗ್ರಹಕ್ಕೆ ಪಾತ್ರವಾಗುವುದು ನನಗೆ ಸುತರಾಂ ಇಷ್ಟವಿಲ್ಲದುದರಿಂದ ನಿಮ್ಮನ್ನು ಕರೆಯುವುದು ಸರಿಯಲ್ಲ. ನಿಮ್ಮ ಅಭಿಪ್ರಾಯವೇನು ?''

''ರಾಜರೇ! ಮುಚ್ಚುಮರೆಯಿಲ್ಲದೆ ನೀವಾಡಿದ ಮಾತಿಗೆ ನನಗೆ ಸಂತೋಷ. ಈ ಸದರ್ಭದಲ್ಲಿ ನಮ್ಮನ್ನು ಊಟಕ್ಕೆ ಕರೆಯದಿರುವುದೇ ಒಳ್ಳೆಯದು. ನನ್ನ ತಾಯಿಯ ಅಭಿಮಾನಕ್ಕೆ ನೀವು ಪಾತ್ರವಾಗಬೇಕೆಂದು ಹೇಳಿದಿರಿ; ನಿಮ್ಮಲ್ಲಿ ಅವಳಿಗೆ ಈಗಲೇ ಪೂರ್ಣಾಭಿಮಾನವಿದೆ''.

''ನಿಜವಾಗಿ ?''

''ನಿಶ್ಚಯ, ಅದು ಹಾಗಿರಲಿ. ಅವಳ ಮನಸ್ಸನ್ನು ನೋಯಿಸದೆ ಇರಬೇಕೆಂಬ ನಿಮ್ಮ ಅಭಿಪ್ರಾಯವು ಅವಳಿಗೆ ತಿಳಿದರೆ ಎಷ್ಟು ಹಿಗ್ಗುವಳೋ ನನ್ನ ತಂದೆಗೆ ಅಷ್ಟು ಕೋಪಬರುವುದು" ಎಂದು ಉದಯಸಿಂಹನು ಹೇಳಲು, ಮಲಯಸಿಂಹನು ನಗುತ್ತಾ

''ಅಪ್ಪಾ! ನಿಮ್ಮ ತಂದೆಗೆ ಮಾತ್ರವೇ ಅಲ್ಲ; ದುರ್ಮತಿ ಭಾಮಿನಿ ಯರಿಗೂ ಕೋಪವುಂಟಾಗುವುದು. ಆದುದರಿಂದ ನೀವೂ ನಿಮ್ಮ ತಾಯಿಯೂ ಇಲ್ಲಿಗೆ ಬಾರದಿರುವಂತೆ ಯಾವುದಾದರೂ ಒಂದು ಉಪಾಯವನ್ನು ಹುಡುಕಿಕೊಂಡು ಇರಿ" ಎಂದನು.

''ನಿಮ್ಮ ಮನೆಯ ಊಟವೆಂದು ?''

''ನಾಳೆ ಶನಿವಾರ ಸಾಯಂಕಾಲ."

''ಇಂದು ಮಂಗಳವಾರ. ನನ್ನ ತಾಯಿಗೆ ಮೈಯ್ಯು ಚೆನ್ನಾಗಿಲ್ಲ ದುದರಿಂದ ನಾಳೆಯೇ ಹೊರಟು ಒಂದುವಾರ ಸಮುದ್ರತೀರದಲ್ಲಿದ್ದು ಬರುವು ದಾಗಿ ಏರ್ಪಾಡು ಮಾಡುತ್ತೇನೆ. ಅಯ್ಯಾ ರಾಜರೇ! ನಿಷ್ಠೂರಕ್ಕೆ ಸಿಕ್ಕದೆ ತಪ್ಪಿಸಿಕೊಳ್ಳುವ ಉಪಾಯವನ್ನು ಬಹು ಸುಲಭವಾಗಿ ಜನಗಳಿಗೆ ಹೇಳಿ ಕೊಡುತ್ತೀರಿ."

''ನನಗೆ ಅಷ್ಟು ಬುದ್ಧಿ ಸಾಲದು. ನಿಮ್ಮ ಅನುಕೂಲಕ್ಕಾಗಿ ತೋರಿದು ದನ್ನು ಹೇಳಿದೆ.''

''ನಾವು ಹೊರಡುವುದಕ್ಕೆ ಮುಂಚೆ ನೀವು ನಮ್ಮ ಮನೆಗೆ ಒಂದು ದಿನ ಬರುವುದಿಲ್ಲವೊ? ನಾಳೆ ಏತಕ್ಕೆ ಬರಕೂಡದು ?''

"ನಾಳೆ ಬರುವುದಕ್ಕೆ ಆಗುವುದಿಲ್ಲ."

"ಹಾಗಾದರೆ ಈ ದಿನವೇ ಬನ್ನಿರಿ. ನನ್ನ ತಂದೆಯು ಇಂದು ಮನೆಯಲ್ಲಿ ಊಟ ಮಾಡುವುದಿಲ್ಲ. ನೀವು ಬಂದರೆ ನಾವು ಮೂರು ಜನವೂ ಸುಖವಾಗಿ ಭೋಜನವನ್ನು ಮಾಡುತ್ತ ಮಾತುಕತೆಗಳನ್ನಾಡುತ್ತ ಸ್ವಲ್ಪ ಹೊತ್ತು ಇರಬಹುದು. ನನ್ನ ತಾಯಿಯು ಅಸಾಧಾರಣಳಾದ ಹೆಂಗಸು; ಅವಳನ್ನು ನೀವು ಇನ್ನೂ ಚೆನ್ನಾಗಿಅರಿಯಿರಿ; ಇಂದು ತಾವು ಅಗತ್ಯ ಬಿಜಯಮಾಡಬೇಕು."

"ಈ ದಿನ ನನಗೆ ಬೇರೆ ಕೆಲಸವಿದೆ; ಕ್ಷಮಿಸಬೇಕು."

"ನೋಡಿದಿರೋ ? ನನಗೆ ತಪ್ಪಿಸಿಕೊಳ್ಳುವುದಕ್ಕೆ ಉಪಾಯವನ್ನು ಹೇಳಿಕೊಟ್ಟಂತೆಯೇ, ನೀವು ಉಪಾಯಮಾಡಿ ತಪ್ಪಿಸಿಕೊಳ್ಳುವಂತೆ ತೋರುತ್ತಲಿದೆ. ಹೀಗೆಲ್ಲ ಹೇಳಿದರೆ ನಾನು ಒಪ್ಪುತ್ತೇನೆಯೇ ?"

"ಹಾಗೋ" ಎಂದು ಮಲಯಸಿಂಹನು ಗಂಟೆಯನ್ನು ಬಾರಿಸಿದನು. ಆಳು ಬರುವುದರೊಳಗಾಗಿಯೇ ಉದಯಸಿಂಹನು ರಾಜನನ್ನು ಕುರಿತು

"ನೀವು ನಮ್ಮ ಮನೆಗೆ ಊಟಕ್ಕೆ ಬಾರದೆ ತಪ್ಪಿಸಿಕೊಂಡುದು ಇದು ಎರಡರೆಯ ಸಾರಿ. ನೀವು ಹೀಗೆ ಮಾಡುವುದನ್ನು ನೋಡಿದರೆ ನಮ್ಮ ತಾಯಿಯನ್ನು ಕಾಣುವುದಕ್ಕೆ ಹಿಂತೆಗೆಯುತ್ತೀರಿ ಎಂದು ತೋರುತ್ತದೆ"

ಆ ಮಾತನ್ನು ಕೇಳುತ್ತಲೆ ಮಲಯಸಿಂಹನು ಸ್ವಲ್ಪ ಬೆಚ್ಚಿ

"ನೀವು ಹೀಗೆ ಆಡುವುದು ತಪ್ಪು; ನಿಮ್ಮ ತಾಯಿಯವರ ಅಭಿಮಾನವನ್ನು ಸಂಪಾದಿಸಲು ನನಗೆ ಬಹಳ ಕುತೂಹಲವೆಂದು ನಾನು ನಿಮಗೆ ಮೊದಲೇ ತಿಳಿಸಿದ್ದೇನೆ. ನನಗೆ ಕೆಲಸವಿರುವುದು ನಿಶ್ಚಯವೋ ಸುಳ್ಳೋ ಎಂಬುದನ್ನು ಈಗ ನಿಮಗೆ ತೋರಿಸಿಕೊಡುತ್ತೇನೆ. ನೀವು ಇಲ್ಲಿಗೆ ಬರುವುದು ನನಗೆ ಗೊತ್ತಿದ್ದಿತೋ ?"

"ನೀವು ಅಪ್ರತಿಮರಾದುದರಿಂದ ನಾನು ಯಾವುದನ್ನೂ ಹೇಳಲಾರೆ."

"ಅದು ಹೋಗಲಿ, ನೀವು ಇಂದು ನನ್ನನ್ನು ಊಟಕ್ಕೆ ಕರೆಯುವಿರೆಂಬುದು ತಿಳಿದಿದ್ದಿತೋ ?"

"ಇಲ್ಲ."

ಗಂಟೆಯ ಸದ್ದನ್ನು ಕೇಳಿ ಭೈರವನು ಬರಲು ಅವನನ್ನು ಕುರಿತು

"ಭೈರವಾ ! ಬೆಳಗ್ಗೆ ನಿನಗೆ ಏನು ಹೇಳಿದೆ ?"

"ಸಾಯಂಕಾಲ ಐದು ಗಂಟೆಯು ಹೊಡೆಯುತ್ತಲೇ ಯಾರನ್ನೂ ಒಳಗೆ ಬಿಡಬೇಡ ಎಂದು ಅಪ್ಪಣೆಯಾಯಿತು"

"ರಾಜರೇ! ಅಷ್ಟು—"ಎಂದು ಉದಯಸಿಂಹನು ಪ್ರಾರಂಭಿಸಿದ ಮಾತನ್ನು ಮುಗಿಸುವುದರೊಳಗಾಗಿಯೇ ರಾಜನು

"ಅದಲ್ಲ; ಏನೋ ರಹಸ್ಯವಿದೆಯೆಂದು ನೀವು ತಿಳಿದಿರುವಂತಿದೆ. ಹಾಗೆ ಯೋಚಿಸಿದರೆ ಅದು ನನಗೆ ಬಹು ಕಷ್ಟವನ್ನುಂಟುಮಾಡುವುದು. ನಾನು ಅಂತಹವನಲ್ಲ. ನಿಮಗೆ ತೋರಿಸಿಕೊಡುತ್ತೇನೆ. ಭೈರವಾ, ಆಮೇಲೆ ಏನು ಹೇಳಿದೆ?''

"ಸೈನ್ಯಾಧ್ಯಕ್ಷರಾದ ಬೊಮ್ಮರಾಜುವೂ ಅವರ ಮಕ್ಕಳು ಅನಂತ ರಾಜುವೂ ಬಂದರೆ ಒಡನೆಯೇ ತಿಳಿಸೆಂದು ಅಪ್ಪಣೆಯಾಯಿತು."

"ಸರಿ, ನೀನು ಹೋಗು" ಎಂದು ಭೈರವನನ್ನು ಕಳುಹಿ, ರಾಜನು ಉದಯಸಿಂಹನನ್ನು ಕುರಿತು

"ಕೇಳಿದಿರೋ, ಬೊಮ್ಮರಾಜು ಇಂದ್ರಪ್ರಸ್ಥದ ಒಂದು ದೊಡ್ಡ ಮನೆ ತನಕ್ಕೆ ಸೇರಿದವನಂತೆ. ಅವನ ಮನೆತನವು ಬಹಳ ಪುರಾತನವು; ಆ ವಂಶ ದವರೆಲ್ಲರೂ ಶ್ರೀಮಂತರು. ಬೊಮ್ಮರಾಜುವಿನ ಮಗ ಅನಂತರಾಜುವು ನಿಮ್ಮಂತೆಯೇ ತರುಣನು ಅವನನ್ನು ಈ ಪಟ್ಟಣದ ದೊಡ್ಡ ಮನುಷ್ಯರ ಸಹವಾಸದಲ್ಲಿರಿಸಿ ಒಳ್ಳೆಯ ನಡತೆಗಳನ್ನು ಕಲಿಸಬೇಕೆಂಬ ಅಭಿಪ್ರಾಯದಿಂದ ನನ್ನ ಬಳಿ ಬಿಡಬೇಕೆಂದು ಬರುತ್ತಾನಂತೆ. ಅಪ್ಪನು ಕೋಟ್ಯಾಧೀಶ್ವರನೆಂದು ಕೇಳಿದ್ದೇನೆ; ಮಗನು ಯೋಗ್ಯನಾಗಿದ್ದರೆ ಅವನಿಗೆ ಬೇಕಾದ ಅನುಕೂಲ ಗಳನ್ನು ಮಾಡಿಕೊಡುತ್ತೇನೆ. ಇದಕ್ಕೆ ನಿಮ್ಮ ಸಹಾಯವೂ ನನಗೆ ಬೇಕಾಗು ವುದು."

"ಅದಕ್ಕೇನು, ಆಗಬಹುದು. ಬೊಮ್ಮರಾಜು ನಿಮಗೆ ಪೂರ್ಣಸ್ನೇಹಿ ತರೋ?''

"ಇಲ್ಲ. ನನ್ನ ಪ್ರಯಾಣಗಳಲ್ಲಿ ಅನೇಕಾವರ್ತಿ ಅನೇಕ ಕಡೆಗಳಲ್ಲಿ ಅವರನ್ನು ನೋಡಿದ್ದೆನು. ಆ ಪರಿಚಯದ ಮೇಲೆ ಅವರು ನನಗೆ ಹೇಳಿ ಕಳುಹಿಸಿದ್ದಾರೆ. ಪ್ರಯಾಣಗಳಲ್ಲಿ ಆಗುವ ಪರಿಚಯವು ಸ್ವಲ್ಪ ಕಾಲದ್ದಾ ದರೂ, ಜನರು ಅದನ್ನೇ ವಿಶೇಷವಾಗಿ ಕೊಂಡಾಡಿ ಹುಟ್ಟಿದಾರಭ್ಯ ಜತೆಯ

ಲ್ಲಿಯೇ ಬೆಳೆದು ಧಾರಾಳವಾಗಿರುವ ಜತೆಗಾರರಿಗಿಂತಲೂ ಹೆಚ್ಚಾಗಿರುವರು. ಇದು ನಿಮಗೆ ತಿಳಿದೇ ಇದೆ. ಅವರಿಗೆ ನಾನು ಮಾಡಬೇಕೆಂದಿರುವ ಸಹಾಯ ವಿಷ್ಟೇ. ಒಳ್ಳೆಯ ಊಟವನ್ನು ಹಾಕಿ, ಅವರಿಗೆ ಇಲ್ಲಿಯ ಜನಗಳ ಪರಿಚಯ ವನ್ನು ಮಾಡಿಕೊಟ್ಟು, ಮಗನನ್ನು ನೋಡಿಕೊಳ್ಳುತ್ತೇನೆಂದು ಹೇಳಿ ಅವನು ಹೋದ ರೀತಿಯಲ್ಲಿ ಬಿಟ್ಟುಬಿಟ್ಟರೆ ನಾನು ಮಾಡಬೇಕಾದ ಕೆಲಸವಾಯಿತು."

"ಸರಿ ಸರಿ, ಒಳ್ಳೆಯ ಹಿತಚಿಂತಕರು ! ನಿಮಗೆ ಹೇಳುವುದಕ್ಕೆ ಮರೆತೆ ವೀರಸಿಂಹರಿಂದ ಕಾಗದ ಬಂದಿತು."

"ಇನ್ನೂ ಇಂದ್ರಪ್ರಸ್ಥದ ವಿನೋದದಲ್ಲಿಯೇ ಮಗ್ನರಾಗಿದ್ದಾರೆಯೋ ?"

"ನೀವು ಅಲ್ಲಿಲ್ಲದಿರುವುದು ಸೂರ್ಯನಿಲ್ಲದ ಹಗಲಿನಂತೆ ಎಂದು ಬರೆ ದಿದ್ದಾನೆ."

"ಹಾಗಾದರೆ ನನ್ನ ವಿಷಯದಲ್ಲಿ ಅವರಿಗಿದ್ದ ಅಭಿಪ್ರಾಯವು ಬದಲಾದಂತೆ ತೋರುತ್ತದೆ."

"ಇಲ್ಲ. ನೀವು ಅಗ್ರಾಹ್ಯರೂ ಅಭೇದ್ಯರೂ ಎಂಬ ಅಭಿಪ್ರಾಯವು ಅವನಿಗೆ ಇನ್ನೂ ಬಿಟ್ಟಿಲ್ಲ."

"ಮಲಯದ್ವೀಪದಲ್ಲಿ ನೋಡಿದಾರಭ್ಯ ಅವರೆಂದರೆ ನನಗೆ ಪ್ರಾಣ. ಬಹು ಯೋಗ್ಯರಾದ ಮನುಷ್ಯ. ಅವರು ಅನ್ಯಾಯವಾಗಿ ಹತರಾದ ಸೈನ್ಯಾ ಧ್ಯಕ್ಷ ವೀರಪ್ರಚಂಡರ ಮಕ್ಕಳಲ್ಲವೇ ?"

"ಅಹುದು."

"ಅವರಿಗೆ ವಲ್ಲಭದೇವನ ಮಗಳನ್ನು ಕೊಟ್ಟು, ಮದುವೆ ಮಾಡುವು ದಾಗಿ ವರ್ತಮಾನ ಕೇಳಿದೆ. ಅದು ನಿಜವೋ ?"

"ವಿಲಾಸಿನಿಗೂ ನನಗೂ ಮದುವೆಯಾಗುವುದು ಎಷ್ಟು ನಿಶ್ಚಯವೋ ಅದೂ ಅಷ್ಟೇ ನಿಶ್ಚಯ" ಎಂದು ನಕ್ಕು ಉದಯಸಿಂಹನು ಹೊರಡಲಿದ್ದನು.

"ಇದೇನು ಹೊರಟಿರಿ ?"

"ನಾನು ಹೋಗಬೇಕು. ಮದುವೆಯ ಪ್ರಸ್ತಾಪಬಂದಾಗ ಒಂದು ಜ್ಞಾಪ ಕಕ್ಕೆ ಬಂದಿತು. ತನ್ನ ಮಗನಿಗೆ ಈ ದೇಶದ ಹೆಣ್ಣನ್ನು ತರಲು ಬೊಮ್ಮರಾಜು ವಿಗೆ ಇಷ್ಟವಿದ್ದಲ್ಲಿ ವಿಲಾಸಿನಿಯನ್ನು ಅವನಿಗೆ ಕೊಟ್ಟು ಮದುವೆಮಾಡಿಸುವ ಪ್ರಯತ್ನವನ್ನು ನೀವು ಮಾಡಿದರೆ ನನಗೆ ಬಹು ಉಪಕಾರವಾದಂತಾಗುವುದು."

"ಈ ಲೋಕದಲ್ಲಿ ಅಸಾಧ್ಯವಾದುದೂ ಉಂಟೇ? ಅದಕ್ಕೇನು ನೋಡೋಣ"

ಎಂದು ಮಲಯಸಿಂಹನು ನಗುತ್ತ ಉದಯಸಿಂಹನನ್ನು ಕಳುಹಿಸಿ ಕೊಟ್ಟನು. ಅನಂತರ ಭದ್ರಕನನ್ನು ಕರೆದು ಶನಿವಾರದ ದಿನ ಸಾಯಂಕಾಲ ನಮ್ಮ ಸಂಪಿಗೆ ವನದ ಮನೆಯಲ್ಲಿ ಔತಣವು ಆಗಬೇಕಾಗಿದೆ ಎನ್ನಲು, ಅದನ್ನು ಕೇಳಿ ಅವನು ಬೆಚ್ಚಿದನು.

"ಅದಕ್ಕಾಗಿ ನೀನು ಎಲ್ಲವನ್ನೂ ಸಿದ್ಧಪಡಿಸಿ ಆ ಮನೆಯಲ್ಲಿ ಅಣಿ ಮಾಡಬೇಕು"

"ಮಹಾಸ್ವಾಮಿ! ಆ ಮನೆಯನ್ನು ಸೊಗಸುಮಾಡಬೇಕಾಗಿದ್ದರೆ ಅದಕ್ಕೆ ಬ್ರಹ್ಮಾಂಡ ಕೆಲಸವಾಗಬೇಕು."

"ಆದರೇನು? ಆ ಮಹಡಿಯ ಮೇಲೆ ಇರುವ ಮಲಗುವ ಕೋಣೆ ಮಾತ್ರ ಈಗಿರುವಂತೆಯೇ ಇರಲಿ; ಮಿಕ್ಕುವನ್ನೆಲ್ಲಾ ಹೊಸದು ಮಾಡು. ಹಿಂದಲ ತೋಟವೂ ಹಾಗೆಯೇ ಇರಲಿ; ಮುಂದಣ ಅಂಗಳವನ್ನು ಗುರುತು ಕಾಣದಂತೆ ಮಾಡಿಬಿಡು."

"ಅಪ್ಪಣೆ. ಭೋಜನಕ್ಕೆ ಏನು ಮಾಡಬೇಕು? ಊಟಕ್ಕೆ ಬರುವವರು ಎಷ್ಟು ಜನವೋ ಅಪ್ಪಣೆಯಾಗಬೇಕು."

"ಈ ಪಟ್ಟಣಕ್ಕೆ ಬಂದ ಮೇಲೆ ಬೆಚ್ಚಿಬೆಚ್ಚಿ ಬೀಳುತ್ತೀಯೆ, ನಿನ್ನ ಬುದ್ಧಿಯು ಸರಿಯಾಗಿಲ್ಲ. ನಾನು ಹೇಳುವುದು ಒಂದೂ ನಿನಗೆ ಗೊತ್ತಾಗುವುದಿಲ್ಲ."

"ಮಹಾಸ್ವಾಮಿ! ಊಟಕ್ಕೆ ಬರುವವರು ಇಂಥವರೆಂದರೆ ಸಾಕು."

"ಸಿಂಹದೊಂದಿಗೆ ನರಿಯು ಬೆರೆಯುತ್ತದೆಯೆ?" ಎಂದು ಮಲಯಸಿಂಹನು ಹೇಳಲು, ಭದ್ರಕನು ಅಪ್ಪಣೆ ಎಂದು ಹೊರಟುಹೋದನು.

# ನಲವತ್ತನೆಯ ಅಧ್ಯಾಯ

## ಆಂಧ್ರದೇಶದ ತಂದೆ ಮಕ್ಕಳು

ರಾಜನು ಉದಯಸಿಂಹನ ಮನೆಗೆ ಊಟಕ್ಕೆ ಹೋಗಲು ಇಷ್ಟವಿಲ್ಲದೆ ಬೊಮ್ಮರಾಜುವೂ ಅವನ ಮಗನೂ ತನ್ನ ಮನೆಗೆ ಬರುವರೆಂದು ಹೇಳಿದ ಕಾರಣವು ನಿಶ್ಚಯ. ಆ ದಿನ ಸಾಯಂಕಾಲ ಏಳು ಗಂಟೆಗೆ ಸರಿಯಾಗಿ ಒಂದು ಬಂಡಿಯು ರಾಜನ ಮನೆಯ ಮುಂದೆ ಬಂದು, ಆಗಂತುಕನನ್ನು ಇಳಿಸಿ ಹೊರಟು ಹೋಯಿತು. ಇದಕ್ಕೆ ಸುಮಾರು ಎರಡು ಗಂಟೆಗಳು ಮುಂದಾಗಿಯೇ ರಾಜನು ಸಂಪಿಗೆಯ ವನದ ಮನೆಗೆ ಭದ್ರಕನನ್ನು ಕಳುಹಿದ್ದನು. ಅಷ್ಟು ಹೊತ್ತಿಗೆ ಇವನ ಆಗಮನವನ್ನೇ ಇದಿರುನೋಡುತ್ತಲಿದ್ದ ಭೈರವನು ಹೊರಗೆ ಬಂದು, ರಾಜನು ಹೇಳಿದ್ದ ಗುರುತುಗಳಿಂದ ಇವನೇ ಬೊಮ್ಮರಾಜುವೆಂದು ನಿಶ್ಚಯಿಸಿಕೊಂಡು, ಸ್ವಾಮಿ, ತಾವು ಶ್ರೀಮಂತ ಬೊಮ್ಮರಾಜರೋ ಎಂದು ಕೇಳಲು, ಅವನು ಹೂಂ ಎಂದನು. ಆಗ ಭೈರವನು ಎರಡು ಸಣ್ಣಕೋಣೆಗಳೊಳಗೆ ಒಂದರಲ್ಲಿ ಬೊಮ್ಮರಾಜುವನ್ನು ಕುಳ್ಳಿರಿಸಿ ಅವನು ಬಂದಿರುವ ವರ್ತಮಾನವನ್ನು ರಾಜನಿಗೆ ತಿಳಿಸಿದನು.

ರಾಜನು ಒಳಗೆ ಬಂದ ಕೂಡಲೇ ಬೊಮ್ಮರಾಜುವು ಎದ್ದುನಿಂತು ಅವನಿಗೆ ವಂದಿಸಿದನು. ರಾಜನು ಪ್ರತಿವಂದನೆ ಮಾಡಿ

"ನಿಮಗಾಗಿಯೇ ಕಾದಿದ್ದೆನು" ಎಂದನು. ಬೊಮ್ಮರಾಜುವು ಸಂತೋಷಯುಕ್ತನಾಗಿ

"ಮಹಾಸ್ವಾಮಿ, ನಾನು ಬರುವ ವಿಷಯ ತಮಗೆ ಮೊದಲೇ ಗೊತ್ತಿದ್ದಿತೆಂದು ತೋರುತ್ತದೆ"

"ಅದರಲ್ಲಿ ಏನು ಅನುಮಾನ?"

"ಹಾಗಾದರೆ ಮಿಕ್ಕ ವಿಷಯಗಳೂ ತಮಗೆ ತಿಳಿದೇ ಇರಬಹುದು".

"ನಿಮ್ಮ ವಿಷಯವೆಲ್ಲವೂ ನನಗೆ ತಿಳಿದಿದೆ".

"ಹಾಗಿಲ್ಲದಿದ್ದರೆ ಬಹಳ ತೊಂದರೆಯಾಗುತ್ತಲಿದ್ದಿತು".

"ಏನು ತೊಂದರೆ''?

"ಏನೂ ಇಲ್ಲ, ನಿಮಗೆ ಸಮಾಚಾರವು ತಿಳಿದಿದ್ದರೆ ಸರಿ".

"ಹಾಗಾದರೆ ನಿಮ್ಮ ವಿಷಯವಾಗಿ ನನಗೆ ತಿಳಿದುದನ್ನೆಲ್ಲಾ ಹೇಳುತ್ತೇನೆ ಕೇಳಿ".

"ಸ್ವಾಮೀ! ಅವಶ್ಯಕವಿಲ್ಲ".

"ಅತ್ಯವಶ್ಯವಾದುದು" ಎಂದು ರಾಜನು ಹೇಳಲು ಬೊಮ್ಮರಾಜುವು ಬೆಪ್ಪಾದನು. ಮಲಯಸಿಂಹನು ಅದನ್ನು ನೋಡದವನಂತೆ

"ನೀವು ಶ್ರೀಮಂತ ಬೊಮ್ಮರಾಜರು''

"ಅಹುದು"

"ಆಂಧ್ರರಾಜ್ಯದಲ್ಲಿ ಸೈನಾಧ್ಯಕ್ಷರು."

"ಹಾಗೋ! ನಾನು ಸೈನ್ಯದಲ್ಲಿದ್ದೇನೋ ?"

"ಅಹುದು, ಇದ್ದೀರಿ''.

"ಸರಿ. ಇದೇನೆ. ತಮಗೆಲ್ಲವೂ ತಿಳಿದೇ ಇದೆ, ಇನ್ನು ಸಾಕು ಬಿಡಿ".

''ನಿರ್ಮಲಾನಂದರು ನಿಮ್ಮನ್ನು ಇಲ್ಲಿಗೆ ಕಳುಹಿಸಿದರಲ್ಲವೇ ?''

''ಸ್ವಾಮೀ! ಅಹುದು. ಇಗೋ ಇದೇ ಅವರು ಕೊಟ್ಟ ಲೇಖನ.''

ಮಲಯಸಿಂಹನು ಲೇಖನವನ್ನು ಓದಿ ನೋಡುತ್ತಲಿದ್ದಾಗ ಬೊಮ್ಮರಾಜವು ಅವನ ಮುಖವನ್ನೇ ನೋಡುತ್ತಲಿದ್ದನು.

"ಶ್ರೀಮಂತ ಬೊಮ್ಮರಾಜರು ದೊಡ್ಡವಂಶದವರು, ಕೋಟ್ಯಧೀಶರು. ಇವರಿಗೆ ವರ್ಷಕ್ಕೆ ಐದು ಲಕ್ಷ ವರಹಗಳ ವರಮಾನವಿದೆ".

ಐದು ಲಕ್ಷವೇ ?

''ಅಹುದು, ನಿರ್ಮಲಾನಂದರು ಸುಳ್ಳು ಬರೆಯಲಾರರು".

"ಸ್ವಾಮೀ! ನನ್ನ ವರಮಾನವೆಷ್ಟೆಂಬುದು ನನಗೇ ಗೊತ್ತಿಲ್ಲ".

''ನಿಮ್ಮ ಮನೆವಾರ್ತೆಯವರು ಅದನ್ನು ನಿಮಗೆ ತಿಳಿಸಿರಲಾರರು''.

''ಇರಬಹುದು. ನಾನು ಊರಿಗೆ ಹೋದಕೂಡಲೇ ಅದಕ್ಕೆ ತಕ್ಕ ಏರ್ಪಾಡನ್ನು ಮಾಡುತ್ತೇನೆ.''

ಮಲಯಸಿಂಹನು ಮುಂದೆ ಓದಿದನು.

"ಶ್ರೀಮಂತರಾಗಿದ್ದರೂ ಅವರಿಗೆ ಮನಸ್ಸಿನಲ್ಲಿ ಒಂದು ಕೊರತೆಯಿದೆ''.

"ಅಹುದು, ದೊಡ್ಡಕೊರತೆ'' ಎಂದು ಬೊಮ್ಮರಾಜು ಕಣ್ಣನ್ನು ಒರಿಸಿಕೊಂಡನು.

''ಇವರ ಏಕಪುತ್ರನನ್ನು ಇವರ ದ್ವೇಷಿಗಳಾರೋ ಬಾಲ್ಯದಲ್ಲಿಯೇ ಅಪಹರಿಸಿರುತ್ತಾರೆ.''

''ಸ್ವಾಮೀ! ಅದೇ ಕೊರತೆ'' ಎಂದು ನಿಟ್ಟುಸಿರನ್ನು ಬಿಟ್ಟನು.

''ಹದಿನೈದು ವರುಷದ ಹಿಂದೆ ಎತ್ತಿಕೊಂಡು ಹೋದ ಮಗನನ್ನು ಕಂಡು ಹಿಡಿದು ಅವರ ಸ್ವಾಧೀನಮಾಡಿಕೊಡಲು ನಿಮ್ಮಿಂದ ಸಾಧ್ಯವೆಂದು ತಿಳಿದು ಅವರನ್ನು ನಿಮ್ಮ ಬಳಿಗೆ ಕಳುಹಿಸಿದ್ದೇನೆ'' ಎಂದು ಓದಿ, ರಾಜನು ''ಹೋ! ಅದು ನನ್ನಿಂದಾಗುವ ಕೆಲಸ'' ಎಂದನು.

ಇದುವರೆಗೆ ರಾಜನ ಮುಖವನ್ನು ಕಳವಳದಿಂದ ನೋಡುತ್ತಲಿದ್ದ ಬೊಮ್ಮರಾಜುವಿಗೆ ಸ್ವಲ್ಪ ಧೈರ್ಯವುಂಟಾಗಿ

''ಸ್ವಾಮೀ, ಹಾಗಾದರೆ ಕಾಗದದಲ್ಲಿ ಬರೆದಿರುವುದೆಲ್ಲಾ ನಿಶ್ಚಯವೆಂದೇ ತೋರುತ್ತದೆ''.

''ಆ ಅಂಶದಲ್ಲಿ ನಿಮಗೆ ಅನುಮಾನವಿದ್ದಿತೊ?" .

''ಇಲ್ಲ. ಮಹಾತ್ಮರಾದ ನಿರ್ಮಲಾನಂದರು ಎಂದಿಗೂ ವಿನೋದ ಕ್ಕಾಗಲಿ ಸುಳ್ಳ ಹೇಳಲಾರರು. ಮುಂದೆ ಪರಾಂಬರಿಸೋಣವಾಗಲಿ".

''ಇನ್ನೂ ನಾನು ಪೂರಾ ಓದಲಿಲ್ಲ''.

''ಅದೇ ನಾನು ಅರಿಕೆ ಮಾಡಿದುದು''.

''ಇವರ ದಾರಿಯ ವೆಚ್ಚಕ್ಕೆ ಬೇಕಾದ ಐವತ್ತುಸಾವಿರ ವರಹಗಳನ್ನು ತರಿಸಿಕೊಳ್ಳುವುದು ಸಾವಕಾಶವಾಗುವುದೆಂದು ನಾನು ಇವರಿಗೆ ಎರಡು ಸಾವಿರ ವರಹಗಳನ್ನು ಕೊಟ್ಟು ಇದ್ದೇನೆ; ಮಿಕ್ಕುದನ್ನು ನೀವು ನನಗೆ ಕೊಡಬೇಕಾ ಗಿರುವ ಹಣದಲ್ಲಿ ಕೊಡುತ್ತೀರೆಂದು ಇವರಿಗೆ ಹೇಳಿದ್ದೇನೆ"

ಎಂದು ರಾಜನು ಓದುತ್ತಲೆ, ಕೊಡುವೆನೆಂದು ಹೇಳುವನೋ, ಇಲ್ಲ ವೆಂದು ಹೇಳುವನೋ ಎಂಬ ಆತಂಕದಿಂದ ಬೊಮ್ಮರಾಜುವು ಮಲಯಸಿಂಹನ ಮುಖವನ್ನೇ ನೋಡುತ್ತಲಿದ್ದನು.

"ಅದು ಸರಿ"

ಎನ್ನುತ್ತಲೆ, ಬೊಮ್ಮರಾಜುವಿನ ಮುಖವು ವಿಕಾಸವಾಗಿ "ಹಾಗಾದರೆ" —ಎಂದನು.

"ಹಾಗಾದರೇನು ?"

"ಲೇಖನದಲ್ಲಿ ಹಣದ ವಿಚಾರವಾಗಿ ಬರೆದಿರುವುದನ್ನು ತಾವು ಒಪ್ಪಿಕೊಂಡಿರೋ ?"

"ಹೂಂ."

"ನಿರ್ಮಲಾನಂದರ ಮಾತನ್ನು ನಂಬಿ ನಾನು ಆ ಹಣವನ್ನು ತರದೆ ಬಂದೆನು. ನಿಮ್ಮ ಹಣವು ದೊರಕದಿದ್ದರೆ ನನ್ನ ಪಾಡು ನಾಯಪಾಡಾಗುವುದು"

"ಬೊಮ್ಮರಾಜರೇ ! ನಿಮ್ಮಂಥವರು ಎಲ್ಲಿದ್ದರೂ ಒಂದೇ. ನಿಮ್ಮ ಹಣ ಯಾವಾಗಬೇಕಾದರೂ ಸಿದ್ಧವಾಗಿರುವುದು. ಅದು ಹಾಗಿರಲಿ. ನಿಮ್ಮ ಮಗನ ವಿಚಾರವನ್ನು ಆಲೋಚಿಸೋಣ.''

ಲೇಖನದಲ್ಲಿ ಬರೆದಿದ್ದ ಹಣವು ಕೈಸೇರುವುದೋ ಇಲ್ಲವೋ ಎಂದು ಪುನಃ ಬೊಮ್ಮರಾಜುವು ಗಾಬರಿಬಿದ್ದನು. ಆಗ ಮಲಯಸಿಂಹನು,

''ಅಯ್ಯೋ ಪಾಪ ! ನಿಮ್ಮ ಕುಟುಂಬ ತೀರಿಹೋಗಿ ಹತ್ತುವರುಷ'' ಎಂದು ಅವನ ಹೆಂಡತಿಯ ಮಾತೆತ್ತಲು, ಬೊಮ್ಮರಾಜುವು ಉಸ್ಸೆಂದು ಸಂಕಟಪಟ್ಟನು.

''ನಿಮ್ಮ ಮಗನು ಪರಾಧೀನವಾದುದು ಹೇಗೆ ?''

''ಸ್ವಾಮಿಾ ! ನನಗಿನ್ನೂ ಅದು ತಿಳಿಯದು.''

''ವಿದ್ಯಾಭ್ಯಾಸಕ್ಕಾಗಿ ಉಪಾಧ್ಯಾಯರ ಬಳಿ ಬಿಟ್ಟಿದ್ದಾಗ ನಿಮ್ಮ ದ್ವೇಷಿಗಳು ತೋರಿದ ದ್ರವ್ಯದ ಆಸೆಯಿಂದ ಅವರು ಅವನನ್ನು ಪರಾಧೀನಮಾಡಿದರೆಂದು ತೋರುತ್ತದೆ.''

"ನನಗೂ ಹಾಗೆಯೇ ತೋರುತ್ತದೆ."

"ಈ ಊರಿನಲ್ಲಿ ಅವನನ್ನು ಇಡಲು ನಿಮ್ಮ ಉದ್ದೇಶವೇನು ?"

"ಆನಂದರು ತಮ್ಮ ಲೇಖನದಲ್ಲಿ ಅದನ್ನು ಬರೆದಿದ್ದಾರೆ."

"ಈ ಪಟ್ಟಣದಲ್ಲಿದ್ದು ದೊಡ್ಡಮನುಷ್ಯರಲ್ಲಿ ಓಡಾಡುತ್ತ ಒಳ್ಳೆಯ ನಡತೆಗಳನ್ನು ಕಲಿಯಲೋಸುಗ ಅವನನ್ನು ನೀವು ಇಲ್ಲಿ ಬಿಡಲುದ್ದೇಶಿಸಿದಂತೆ ಕಾಣುತ್ತದೆ."

"ನಿಜ."

"ಈಗ ನಿಮಗೆ ಒಳ್ಳೆಯ ಅದೃಷ್ಟಕಾಲವು ಪ್ರಾಪ್ತವಾಗಿದೆ"

ಬೊಮ್ಮರಾಜುವು ನಲವತ್ತೆಂಟುಸಾವಿರ ವರಹಗಳು ಕೈಗೆ ಸಿಕ್ಕುವ ಕಾಲವು ಪ್ರಾಪ್ತವಾಯಿತೆಂದು ತಿಳಿದು ಆನಂದಪಡುತ್ತ, ಹಾಗೋ ! ಎಂದನು. ಒಡನೆಯೇ ರಾಜನು

"ಬಹುಕಾಲದಿಂದ ಪರಾಧೀನನಾಗಿ ಕಣ್ಣಿಗೆ ಬೀಳದಿದ್ದ ಮಗನನ್ನು ನೋಡುವ ಸಂತೋಷಕ್ಕಿಂತ ಹೆಚ್ಚಾದುದು ಯಾವುದು"

ಎನ್ನಲು, ಬೊಮ್ಮರಾಜುವು ಖಿನ್ನನಾದನು.

"ಪ್ರಾಯಶಃ ನಿಮ್ಮ ಮಗನು ಇಷ್ಟು ಹೊತ್ತಿಗೆ ಬಂದಿರಬಹುದು; ಬಂದಿದ್ದರೆ ಅವನನ್ನು ನಿಮ್ಮಲ್ಲಿಗೆ ಕಳುಹಿಸುತ್ತೇನೆ."

"ಸ್ವಾಮಿಾ ; ಇಷ್ಟೆಲ್ಲಾ ಮಾಡಿಕೊಟ್ಟವರು ಮಗನಿಂಥವನೆಂದು ತೋರಿಸಿ ಕೊಟ್ಟರೆ ಬಹು ಅನುಕೂಲ."

"ಅದೇನೂ ಅವಶ್ಯವಿಲ್ಲ. ತಂದೆತಾಯಿಗಳು ತಮಗೆ ಇರುವ ಅಂತರಂಗ ಪ್ರೇಮದಿಂದಲೇ ಮಕ್ಕಳನ್ನು ಕಂಡುಹಿಡಿಯಬಲ್ಲರು. ನೀವು ಮೋಸಹೋಗಲು ಕಾರಣವೇ ಇಲ್ಲ, ನಿಮ್ಮ ಮಗನು ಈ ಬಾಗಿಲಿನಿಂದಲೇ ಈ ಕೋಣೆಗೆ ಈಗಲೇ ಬರುವನು; ಅವನಿಗೆ ಹದಿನೆಂಟು ಹತ್ತೊಂಭತ್ತು ವಯಸ್ಸು, ಸ್ಫುರದ್ರೂಪಿ. ಇಷ್ಟೆಲ್ಲ ಏತಕ್ಕೆ ? ನೀವೇ ಅವನನ್ನು ನೋಡುತ್ತೀರಿ," ಎಂದು ಮಲಯಸಿಂಹನು ಎದ್ದನು. ಆಗ ಬೊಮ್ಮರಾಜು

"ಸ್ವಾಮಿಾ ! ತಂದಿದ್ದ ಹಣವು...."

"ಸದ್ಯಕ್ಕೆ ತೆಗೆದುಕೊಳ್ಳಿ" ಎಂದು ಮಲಯಸಿಂಹನು ಎಂಟುಸಾವಿರ ವರಹಗಳನ್ನು ಕೊಟ್ಟು "ನಿಮಗೆ ಒಂದು ಮಾತನ್ನು ಹೇಳಬೇಕು" ಎಂದನು.

"ಅದೇನು ಅಪ್ಪಣೆಯಾಗಲಿ."

"ನಿಮ್ಮಂಥ ಶ್ರೀಮಂತರು ಈ ಪಟ್ಟಣದಲ್ಲಿರುವವರೆಗೆ ಇಲ್ಲಿಯ ಶ್ರೀಮಂತರ ಹಾಗೆ ಬಟ್ಟೆಗಳನ್ನು ಉಡಬೇಕು. ನಿಮ್ಮ ದೇಶದ ಉಡಿಗೆಗಳು ಇಲ್ಲಿ ಪ್ರಯೋಜನವಿಲ್ಲ."

"ಗ್ರಹಚಾರ ! ಬೇರೆ ಬಟ್ಟೆಗಳು ಯಾವುವೂ ಇಲ್ಲವಲ್ಲಾ ?"

"ಇವೆ."

"ಎಲ್ಲಿವೆ ?"

"ನಿಮ್ಮ ಪೆಟ್ಟಿಗೆಗಳಲ್ಲಿವೆ."

"ನಾನು ತಂದುದು ಒಂದೇ ಪೈಪೆಟ್ಟಿಗೆ."

"ನೀವು ಬಿಟ್ಟು ಬಂದ ಪೆಟ್ಟಿಗೆಗಳನ್ನು ನಿಮ್ಮ ಆಳುಗಳು ನಿಮಗೆ ಅನಾನುಕೂಲವಾಗದಂತೆ ಕಳುಹಿಸಿದ್ದಾರೆ. ಅವುಗಳನ್ನು ನಿಮ್ಮ ಬಿಡಾರದಲ್ಲಿ ಇಡಿಸಿದ್ದೇನೆ. ಇಲ್ಲಿಂದ ಹೋದ ಕೂಡಲೇ ಈಗ ನೀವು ಉಟ್ಟಿರುವ ಬಟ್ಟೆಗಳನ್ನು ತೆಗೆದುಹಾಕಿ ಆ ಪೆಟ್ಟಿಗೆಗಳಲ್ಲಿರುವುದನ್ನು ಉಡಬೇಕು."

"ಹಾಗೆಯೇ ಆಗಲಿ."

"ಪಾಪ! ಮಗನನ್ನು ನೋಡಲು ಆತುರರಾಗಿದ್ದೀರಿ; ನಾನು ಹೋಗಿ ಅವನನ್ನು ಕಳುಹಿಸುತ್ತೇನೆ. ಅಲ್ಲಿಯವರೆಗೆ ಇಲ್ಲಿಯೇ ಇರಿ" ಎಂದು ಹೇಳಿ ಮಲಯಸಿಂಹನು ಹೊರಟನು.

ಭೈರವನು ರಾಜನ ಆಜ್ಞೆಯಂತೆ ಅನಂತರಾಜುವನ್ನು ಬೊಮ್ಮರಾಜು ವಿದ್ದ ಪಕ್ಕದ ಕೋಣೆಯಲ್ಲಿ ಕುಳ್ಳಿರಿಸಿದ್ದನು. ಈ ಎರಡು ಕೋಣೆಗಳಿಗೂ ಮಧ್ಯೆ ಒಂದು ಬಾಗಿಲಿದ್ದಿತು; ಆದರೆ ಆದರ ಕದವು ಮುಚ್ಚಿದ್ದಿತು. ಮಲಯ ಸಿಂಹನು ಅನಂತರಾಜುವಿದ್ದ ಕೊಟ್ಟಡಿಗೆ ಹೋದಕೂಡಲೆ ಅವನು ಎದ್ದು ಬಗ್ಗಿ ನಮಸ್ಕಾರಮಾಡಿ ರಾಜಾಮಲಯಸಿಂಹರು ತಾವೇಯೋ? ಎಂದನು. ಅದಕ್ಕೆ ರಾಜನು ಅಹುದೆಂದು ಹೇಳಿ ಅವನೇ ಶ್ರೀಮಂತ ಅನಂತರಾಜುವೆಂಬುದನ್ನು ಅವನ ಬಾಯಿಂದ ಕೇಳಿ ಅವನ ಯೋಗಕ್ಷೇಮವನ್ನು ವಿಚಾರಿಸಿ,

"ನಾವಿಕಸ್ಯೆಂಥವರು ನನಗೆ ಕೊಡಹೇಳಿ ನಿಮ್ಮ ಬಳಿ ಏನಾದರೂ ಕಾಗದವನ್ನು ಕೊಟ್ಟಿದ್ದಾರೆಯೋ?"

"ಅಹುದು ಕಾಗದವನ್ನೇನೋ ಕೊಟ್ಟಿದ್ದಾರೆ. ಆದರೆ ನಾವಿಕಸ್ಯೆಂಥವನೆಂಬ ಹೆಸರನ್ನು ಕಥೆಯಲ್ಲಿ ವಿನಾ ಇನ್ನೆಲ್ಲಿಯೂ ನಾನು ಕೇಳಿಲ್ಲವಾದುದರಿಂದ ಅವರು ಕೊಟ್ಟ ಕಾಗದವನ್ನು ನಾನು ಗಣನೆಗೆ ತರಲಿಲ್ಲ."

"ಈ ನಾವಿಕಸ್ಯೆಂಥವನು ಕಥೆಗಳಲ್ಲಿ ಹೇಳುವವರ ವಂಶದವರೇ; ಅವರು ನನ್ನ ಆಪ್ತಸ್ನೇಹಿತರು; ಆಂಗ್ಲೇಯರಂತೆ ಉಡುಪನ್ನು ಧರಿಸಿಕೊಂಡು ಅನೇಕ ಧರ್ಮ ಕೆಲಸಗಳನ್ನು ಮಾಡುವುದುಂಟು. ಅವರ ನಿಜವಾದ ಹೆಸರು ವಿಜಯಧ್ವಜರೆಂದು."

"ಹಾಗೋ! ಸರಿಸರಿ. ನಾನು ಹಿಂದೆ—ನೋಡಿದ್ದವರೇ. ಈಗ ಎಲ್ಲಾ ಚೆನ್ನಾಗಿ ಗೊತ್ತಾಯಿತು. ಮುಂದಿನ ಸಮಾಚಾರ ಅಪ್ಪಣೆಯಾಗಲಿ."

"ಮೊದಲು ನಿಮ್ಮ ವೃತ್ತಾಂತವನ್ನು ನನಗೆ ತಿಳಿಸಿ ನೋಡೋಣ."

"ಅಗತ್ಯವಾಗಿ ಆಗಲಿ. ನಾನು ಶ್ರೀಮಂತ ಬೊಮ್ಮರಾಜರ ಮಗ; ನನ್ನ ಹೆಸರು ಅನಂತರಾಜು. ನನ್ನ ವಂಶದವರೆಲ್ಲರೂ ಶ್ರೀಮಂತರೇ. ಐದನೆಯ ವರ್ಷದಲ್ಲಿ ನನ್ನ ತಾಯಿಯು ಕಾಲವಾದುದರಿಂದ ನನ್ನ ತಂದೆಯವರು ಉಪಾಧ್ಯಾಯರ ಮನೆಯಲ್ಲಿ ನನ್ನನ್ನಿರಿಸಿದರು. ಕೆಲವು ಕಾಲಾನಂತರ ಆ ಉಪಾಧ್ಯಾಯರು ಮೋಸದಿಂದ ನನ್ನನ್ನು ನಮ್ಮ ಶತ್ರುಗಳ ವಶಮಾಡಿದರು. ನನಗೆ ವಯಸ್ಸಾಗಿ ಬುದ್ಧಿ ಬಂದ ಮೇಲೆ ತಂದೆಯನ್ನು ಕಾಣದೆ ಪೇಚಾಡುತ್ತಾ ಸಿಕ್ಕಿದವರನ್ನೆಲ್ಲಾ ನನ್ನ ತಂದೆಯೆಲ್ಲಿದ್ದಾರೆಂದು ಕೇಳುತ್ತಲಿದ್ದಾಗ ನಿಮ್ಮ ಸ್ನೇಹಿತರಾದ ನಾವಿಕ ಸ್ಕಂಧವರು ಈ ಲೇಖನವನ್ನು ಕೊಟ್ಟು ನಿಮ್ಮ ಬಳಿಗೆ ಕಳುಹಿಸಿದರು. ಅವರ ಕೋರಿಕೆಯಂತೆ ತಾವು ನನ್ನನ್ನು ನನ್ನ ತಂದೆಯ ಬಳಿ ಸೇರಿಸಬೇಕೆಂದು ಪ್ರಾರ್ಥಿಸುತ್ತೇನೆ."

"ನೀವು ಹೇಳಿದುದೆಲ್ಲಾ ಬಹು ಸ್ವಾರಸ್ಯವಾಗಿದೆ. ನಾವಿಕಸ್ಕಂಧವರು ಹೇಳಿದಂತೆ ನೀವು ನನ್ನ ಬಳಿಗೆ ಬಂದುದು ಒಳ್ಳೆಯದಾಯಿತು. ನಿಮ್ಮ ತಂದೆಯು ನಿಮ್ಮನ್ನು ಹುಡುಕಿಕೊಂಡು ಇಲ್ಲಿಗೆ ಬಂದಿದ್ದಾರೆ."

"ನನ್ನ ತಂದೆ!" ಎಂದು ಅನಂತರಾಜುವು ಬೆದರಲು, ರಾಜನು

"ಅಹುದು, ನಿಮ್ಮ ತಂದೆ ಬೊಮ್ಮರಾಜರು"

"ಓಹೋ! ಬೊಮ್ಮರಾಜರೇ ? ಈಗ ಅವರು ಇಲ್ಲಿದ್ದಾರೆಯೋ ?"

"ಈಗತಾನೇ ಅವರ ಸಂಗಡ ಮಾತನಾಡಿಕೊಂಡು ಬಂದೆನು. ಮಗನ ವಿಷಯವಾಗಿ ಅವರು ಹೇಳಿದ ಚರಿತ್ರೆಯು ನನ್ನ ಮನಸ್ಸನ್ನು ಕರಗಿಸಿಬಿಟ್ಟಿತು. ಇದುವರೆಗೆ ನೀವು ಎಲ್ಲಿದ್ದಿರಿ?" ಎಂದು ರಾಜನು ಕೇಳಲು ಅನಂತರಾಜು ಸ್ವಲ್ಪ ಗಾಬರಿ ಬಿದ್ದು, ಹಾಗೆಯೇ ಧೈರ್ಯಗೊಂಡು

"ಅಮರದೇಶದ ದಕ್ಷಿಣಭಾಗದಲ್ಲಿದ್ದೆನು."

"ನೀವು ಪರಾಧೀನರಾದ ಮೇಲೆ ನಿಮ್ಮನ್ನು ಸರಿಯಾಗಿ ನೋಡಿಕೊಂಡು ನಿಮಗೆ ವಿದ್ಯೆಬುದ್ಧಿಗಳನ್ನು ಕಲಿಸಿ, ಕೆಟ್ಟಸಹವಾಸವಿಲ್ಲದಂತೆ ನೋಡಿಕೊಂಡರೋ ಇಲ್ಲವೋ, ನಿಮ್ಮ ಪದವಿಗೆ ತಕ್ಕ ಯೋಗ್ಯತೆಯನ್ನು ನೀವು ಸಂಪಾದಿಸಿದಿರೋ ಇಲ್ಲವೋ, ಎಂಬಿವೇ ನಿಮ್ಮ ತಂದೆಗೆ ದೊಡ್ಡ ಯೋಚನೆಯಾಗಿವೆ."

"ಸ್ವಾಮಿ! ನನ್ನ ವಿಷಯವಾಗಿ ಸುಳ್ಳುವರ್ತಮಾನಗಳು.—"

"ನಾನೇನೋ ನಿಮ್ಮ ಸಮಾಚಾರವನ್ನು ವಿಜಯಧ್ವಜರಿಂದ ಕೇಳ ಬಲ್ಲೆ ; ಅವರು ಹೇಳಿದುದರಲ್ಲಿ ನೀವೇನೋ ಸ್ವಲ್ಪ ತೊಂದರೆಗೆ ಸಿಕ್ಕಿಬಿದ್ದಿದ್ದ ಹಾಗೂ, ಲೋಕೋಪಕಾರವೇ ಮುಖ್ಯವಾಗಿಟ್ಟುಕೊಂಡಿರುವ ಆ ವಿಜಯ ಧ್ವಜರು ನಿಮ್ಮನ್ನು ಆ ತೊಂದರೆಯಿಂದ ಬಿಡಿಸಿಕೊಂಡ ಹಾಗೂ, ಅನಂತರ ನಿಮ್ಮ ಚರಿತ್ರವನ್ನೆಲ್ಲಾ ಕೇಳಿ ಪಶ್ಚಾತ್ತಾಪದಿಂದ ನಿಮ್ಮ ತಂದೆಯನ್ನು ಹುಡುಕಿ ಕಂಡುಹಿಡಿದ ಹಾಗೂ, ಹೇಳಿದರು. ಅವರು ನಿಮ್ಮ ಪುರೋಭಿವೃದ್ಧಿಯ ವಿಷಯದಲ್ಲಿ ತಕ್ಕ ಏರ್ಪಾಡನ್ನು ಮಾಡುವುದಾಗಿ ನನಗೆ ಹೇಳಿದ್ದಾರೆ. ಅವ ರೇನೋ ವಿಜಾತೀಯಪುರುಷರು ; ಆದರೂ ಯಥಾರ್ಥವಾದಿಯಾದುದರಿಂದ ಹೇಳಿದ ಮಾತಿಗೆ ಎಂದಿಗೂ ತಪ್ಪುವುದಿಲ್ಲ. ನಾನು ಹೀಗೆಲ್ಲಾ ನಿಮ್ಮನ್ನು ಪ್ರಶ್ನೆಮಾಡುತ್ತೇನೆಂದು ಅಸಮಾಧಾನಪಡದೆ ಸರಿಯಾದ ಉತ್ತರವನ್ನು ಕೊಡುವಿರಾ? ಇದೇ ನನ್ನ ಪ್ರಶ್ನೆ ; ನಿಮಗೆ ಉಂಟಾಗಿದ್ದ ದುರ್ದಶೆಯಿಂದ ನಿಮ್ಮ ಪದವಿಗೆ ತಕ್ಕ ಯೋಗ್ಯತೆಯೂ ನಡತೆಯೂ ಬಂದುವು ಎಂದು ಹೇಳಬಲ್ಲಿರಾ?''

"ಸ್ವಾಮಿ! ಆ ವಿಷಯದಲ್ಲಿ ತಾವು ನಿಶ್ಚಿಂತರಾಗಿರಬಹುದು. ನನ್ನ ತಂದೆಗೆ ನನ್ನನ್ನು ಮಾರುವ ಉದ್ದೇಶದಿಂದಲೇ ಶತ್ರುಗಳು ನನ್ನನ್ನು ಅಪಹರಿಸಿ ಕೊಂಡು ಹೋದರಾದುದರಿಂದ ನನಗೆ ವಿದ್ಯೆಬುದ್ಧಿಗಳನ್ನು ಹೆಚ್ಚಾಗಿ ಕಲಿಸಿದ ಹಾಗೆಲ್ಲಾ ನನ್ನ ಬೆಲೆಯು ಹೆಚ್ಚಾಗುವುದೆಂದು ತಿಳಿದು, ಅವರು ಅವುಗಳನ್ನು ನನಗೆ ಚೆನ್ನಾಗಿ ಕಲಿಸಿರುತ್ತಾರೆ. ಒಂದು ವೇಳೆ ನನ್ನ ನಡತೆಯಲ್ಲಿ ಏನಾದರೂ ಹೆಚ್ಚು ಕುಂದುಗಳು ಇದ್ದರೆ ನನ್ನ ದುರ್ದಶೆಯನ್ನು ನೋಡಿ ಅವುಗಳನ್ನು ಕ್ಷಮಿಸುವಿರೆಂದು ನಂಬಿದ್ದೇನೆ.''

ಹೀಗೆ ಅನಂತರಾಜು ಹೇಳುವುದನ್ನು ಕೇಳಿ ರಾಜನು ಆಶ್ಚರ್ಯದಿಂದ ನಕ್ಕನು. ಅವನು ಅಷ್ಟು ಚಮತ್ಕಾರವಾದ ಮಾತುಗಳನ್ನಾಡುವನೆಂದು ರಾಜನು ತಿಳಿದಿರಲಿಲ್ಲ.

''ಅಪ್ಪಾ! ನೀವು ಸ್ವತಂತ್ರರು, ನಿಮ್ಮಿಷ್ಟಬಂದಂತೆ ಮಾಡಬಹುದು ; ನಾನಾಗಿದ್ದರೆ ಈ ಪೂರ್ವ ಚರಿತ್ರೆಗಳನ್ನು ಯಾರಿಗೂ ಹೇಳದೆ ಗುಪ್ತವಾಗಿಟ್ಟು ಕೊಂಡಿರುತ್ತಿದ್ದೆನು. ಈ ಕಾಲದ ಜನರು ಕಟ್ಟುಕತೆಗಳಲ್ಲಿ ಬರೆದಿರುವ ನಾಯಕ ನಾಯಿಕೆಯರ ಸುಖದುಃಖಗಳನ್ನು ಓದಿ ಅವರಂತೆಯೇ ತಾವು ಸಂತೋಷ

ಪಡುತ್ತಲೂ ದುಃಖಪಡುತ್ತಲೂ ಇರುವರೇ ಹೊರತು, ಈ ಜೀವಕೋಟಿಯೆಂಬ ಪುಸ್ತಕದಲ್ಲಿ ಬರೆದಿರುವ ನಿಜವಾದ ಸುಖದುಃಖಗಳನ್ನು ಎಂದೂ ನಂಬರು. ಆದುದರಿಂದ ನೀವು ಒಂದು ಸರಿಯಾದ ಮಾರ್ಗವನ್ನು ಹಿಡಿದು ಒಳ್ಳೆಯ ಸಹವಾಸಗಳನ್ನು ಮಾಡಿ ನಿಮ್ಮ ಜನನದಾರಭ್ಯ ನಿಮಗೆ ಉಂಟಾಗಿರುವ ಅಪ್ರತೀತಿಯನ್ನು ಹೋಗಲಾಡಿಸಿಕೊಳ್ಳಬೇಕು. ನಿಮ್ಮನ್ನು ನೋಡಿಕೊಳ್ಳು ವಂತೆ ವಿಜಯಧ್ವಜರು ನನಗೆ ಲೇಖನವನ್ನು ಬರೆದಿದ್ದಾರೆ. ಆದರೆ ಇಂತಹ ಕಾರ್ಯವನ್ನು ನಾನೆಂದಿಗೂ ವಹಿಸುವನಲ್ಲ. ನಡತೆಯಲ್ಲಿ ನೀವು ಸರಿಯಾಗಿದ್ದ ರೇನೇ ನಿಮ್ಮನ್ನು ನಾನು ಹತ್ತಿರ ಸೇರಿಸುವೆನು; ಇಲ್ಲವಾದರೆ ನಿಮ್ಮ ಪಾಡು ನಿಮಗೆ, ನನ್ನ ಪಾಡು ನನಗೆ."

"ಮಹಾಸ್ವಾಮಿಾ! ವಿಜಯಧ್ವಜರ ಮಾತಿಗೋಸ್ಕರವಾದರೂ ತಾವು ನನ್ನನ್ನು ಕೈಬಿಡಕೂಡದು."

''ನಿಮ್ಮ ಬಾಲ್ಯಯೌವನಕಾಲಗಳು ಕೇವಲ ದುರ್ದಿನಗಳಂತಿದ್ದುವು ಎಂದು ವಿಜಯಧ್ವಜರು ನಿಮ್ಮ ವಿಷಯವಾಗಿ ಬರೆದಿರುತ್ತಾರೆ'' ಎಂದು ರಾಜನು ಹೇಳಲು ಅನಂತರಾಜುವು ಜೆಪ್ಪಾದನು. ಕೂಡಲೇ ರಾಜನು

''ಆ ವಿಷಯವಾಗಿ ನಾನು ನಿಮ್ಮೊಡನೆ ಪ್ರಸ್ತಾಪಮಾಡುವುದಿಲ್ಲ; ನೀವು ದಿಗಿಲು ಬೀಳಬೇಡಿರಿ. ಅದಕ್ಕಾಗಿಯೇ ನಿಮ್ಮ ತಂದೆಯನ್ನು ಇಲ್ಲಿಗೆ ಬರಮಾಡಿ ದೆನು. ಅವರು ಸ್ವಲ್ಪ ಜಂಭಗಾರರಂತೆ ತೋರುತ್ತದೆ; ಆದರೆ ಶ್ರೀಮಂತ ರಾಗಿದ್ದು ಬಹುಕಾಲ ಸೈನ್ಯದಲ್ಲಿದ್ದವರಲ್ಲಿ ಯಾರು ತಾನೇ ಜಂಭವಿಲ್ಲದಿದ್ದಾರೆ? ಇನ್ನೇನು, ಹೇಗಿದ್ದರೂ ನೀವು ಅವರನ್ನು ನೋಡುತ್ತೀರಿ; ನಿಮಗೇ ಗೊತ್ತಾ ಗುತ್ತದೆ'' ಎಂದನು.

"ಸಾಮಿಾ! ತಂದೆಯನ್ನು ಅಗಲಿ ಬಹುದಿವಸಗಳಾದುದರಿಂದ ನನಗೆ ಅವರ ಗುರುತೇ ಸ್ವಲ್ಪವೂ ಇಲ್ಲ. ಇದಲ್ಲದೆ ಲೋಕದೃಷ್ಟಿಯಲ್ಲಿ ಹಣವೊಂದಿ ದ್ದರೆ ಸಕಲ ದುರ್ಗುಣಗಳೂ ಮುಚ್ಚಿಹೋಗುತ್ತವೆ ಎಂದು ತಾವು ಅರಿಯಿರಾ 'ಸರ್ವೇ ಗುಣಾಃ ಕಾಂಚನಮಾಶ್ರಯಂತಿ' ಎಂದು ಪ್ರಾಚೀನರು ಹೇಳಿಯೇ ಇದ್ದಾರೆ."

"ನಿಮ್ಮ ತಂದೆಗಳು ಕೋಟ್ಯಾಧೀಶ್ವರರಾಗಿರುವುದರಿಂದ ಆ ವಿಷಯದಲ್ಲಿ ನಿಮಗೆ ಯಾವ ಕೊರತೆಯೂ ಇರಲಾರದು."

"ಹಾಗಾದರೆ ಅವರು ನನ್ನನ್ನು ಅನುಕೂಲಸ್ಥಿತಿಯಲ್ಲಿಡಬಹುದು ?"

"ನೀವು ಈ ಪಟ್ಟಣದಲ್ಲಿರುವವರೆಗೆ ನಿಮಗೆ ವರ್ಷವೊಂದಕ್ಕೆ ಅರವತ್ತು ಸಾವಿರ ವರಹಗಳನ್ನು ಕೊಡಬೇಕೆಂದು ನಿಶ್ಚಯಿಸಿದ್ದಾರೆ."

"ಹಾಗಾದರೆ ನಾನು ಈ ಊರನ್ನು ಬಿಟ್ಟು ಹೋಗುವುವೇ ಇಲ್ಲ."

"ಸ್ಥಿತಿಗತಿಗಳು ಎಂದಿಗೂ ಏಕರೀತಿಯಾಗಿ ನಿಮ್ಮಿಷ್ಟದಂತೆ ಇರಲಾರವು."

"ಅದೇನೋ ನಿಜವೇ. ಈ ವರ್ಷಾಶನವನ್ನು ಕೊಡುವವರಾರು ?"

"ನಿಮ್ಮ ತಂದೆಯೇ ; ಅದಕ್ಕೆ ಲೋಪವಿಲ್ಲದಂತೆ ವಿಜಯಧ್ವಜರು ನೋಡಿಕೊಳ್ಳುವರು. ನಿಮ್ಮ ತಂದೆಯ ಕೋರಿಕೆಯಂತೆ ಅವರು ಧನಾಗಾರ ಪತಿ ಶ್ರೀಮಂತ ದುರ್ಮತಿಗಳಿಂದ ನಿಮಗೆ ಒಂದೊಂದು ತಿಂಗಳೂ ಐದು ಸಾವಿರ ವರಹಗಳನ್ನು ಕೊಡಿಸುವ ಏರ್ಪಾಟು ಮಾಡಿದ್ದಾರೆ."

"ನಮ್ಮ ತಂದೆಗಳು ಈ ಊರಿನಲ್ಲಿ ಇನ್ನು ಎಷ್ಟು ದಿನಗಳಿರುವರು ?"

"ಅವರು ಸೈನ್ಯಾಧೀಶರಾದುದರಿಂದ ಒಂದು ವಾರದ ಮೇಲೆ ನಿಲ್ಲಲಾರರು."

ಅವರು ಬೇಗನೆ ಊರಿಗೆ ಹೊರಟುಹೋಗುವನೆಂದು ಸಂತೋಷದಿಂದ ಅನಂತರಾಜು ಅಪ್ಪ ಎಂದುದನ್ನು ಕೇಳಿ, ರಾಜನು ತಪ್ಪು ಅರ್ಥ ಮಾಡಿಕೊಂಡವನಂತೆ "ಅಯ್ಯೋ ಪಾಪ ! ನೀವು ತಂದೆಯನ್ನು ನೋಡಲು ಆತ್ಯಾತುರರಾಗಿದ್ದೀರಿ" ಎಂದು ಆ ಎರಡು ಕೊಟ್ಟಡಿಗಳ ಮಧ್ಯೆ ಇದ್ದ ಬಾಗಿಲನ್ನು ತೆರೆದು ಅನಂತರಾಜುವನ್ನು ಬೊಮ್ಮರಾಜುವಿನ ಕೊಟ್ಟಡಿಗೆ ಕಳುಹಿ ಬಾಗಿಲನ್ನು ಪುನಃ ಮುಚ್ಚಿಕೊಂಡು, ಗೋಡೆಯಲ್ಲಿ ಮತ್ತೊಂದು ಕಡೆ ಮಾಡಿದ್ದ ಸಣ್ಣ ರಂಧ್ರಕ್ಕೆ ಮುಚ್ಚಿದ್ದ ಹಲಗೆಯನ್ನು ಓಸರಿಸಿ ಅಲ್ಲಿ ನಡೆದುದನ್ನೆಲ್ಲಾ ನೋಡುತ್ತ ನಿಂತುಕೊಂಡನು. ಅನಂತರಾಜು ಒಳಗೆ ಹೋಗುತ್ತಲೇ ಮಲಯಸಿಂಹನಿಗೆ ಕೇಳಿಸುವಂತೆ "ಅಪ್ಪಾಜೀ, ಕೊನೆಗೆ ಸಿಕ್ಕಿದಿರಾ ;" ಎಂದು ಎರಡು ಕೈಗಳನ್ನೂ ನೀಡಿಕೊಂಡು ಗಟ್ಟಿಯಾಗಿಕೂಗುತ್ತ ಅಲ್ಲಿದ್ದ ವೃದ್ಧನನ್ನು ತಬ್ಬಿಕೊಂಡನು. ಆ ವೃದ್ಧನು "ಮಗೂ ! ಇಷ್ಟು ದಿವಸಗಳಿಂದ ನಿನ್ನನ್ನು ಕಾಣದೆ ನಾನೆಷ್ಟು ತಪಿಸಿದೆನೋ" ಎಂದು ಆ ಯುವಕನ ತಲೆಯನ್ನು ಸವರಿದನು.

"ಅಪ್ಪಾ ! ಮಗೂ, ಈ ಕಾಗದವನ್ನು ಜೋಪಾನವಾಗಿಟ್ಟುಕೋ. ಇವುಗಳನ್ನು ನಿನಗೆ ಕೊಟ್ಟು ತಕ್ಕ ಏರ್ಪಾಡನ್ನು ಮಾಡಲೋಸುಗವೇ ನಾನು ಈ ದೇಶಕ್ಕೆ ಬಂದೆನು."

ಅನಂತರಾಜುವು ಆ ಕಾಗದಗಳನ್ನು ಓದಿ ನೋಡಿ ನಕ್ಕು ಧ್ವನಿಯನ್ನು ತಗ್ಗಿಸಿಕೊಂಡು,

''ಏನು ತಾತ ! ನಿಮ್ಮೂರಿನಲ್ಲಿ ಬಂದಿಶಾಲೆಗಳೇ ಇಲ್ಲವೋ ?''

''ಹಾಗೆಂದರೇನು ? ನನಗೆ ಅರ್ಥವಾಗಲಿಲ್ಲ.''

'' ಬಂದಿಶಾಲೆಗಳಿದ್ದಿದ್ದರೆ ಇಂಥ ಕಾಗದಗಳನ್ನು ಸೃಷ್ಟಿಸುವುದಕ್ಕೆ ಅಸಾಧ್ಯ. ಈ ಕೆಲಸವನ್ನು ಅಮರದೇಶದಲ್ಲಿ ಮಾಡಿದ್ದರೆ ಶಾಶ್ವತವಾಗಿ ಸೆರೆ ಮನೆಯಲ್ಲಿ ವಾಸ ಮಾಡಲಿಕ್ಕೆ ಅನುಕೂಲವಾಗುತ್ತಿದ್ದಿತು."

"ಇದೂ ನನಗೆ ಅರ್ಥವಾಗಲಿಲ್ಲ. ನೀನು ಹೇಳುವುದನ್ನು ಸರಿಯಾಗಿ ತಿಳಿಯುವಂತೆ ಹೇಳು.''

"ತಾತ ! ನೀವು ನನ್ನ ತಂದೆಯಾಗುವುದಕ್ಕಾಗಿ ಅವರು ನಿನಗೇನನ್ನು ಕೊಟ್ಟರು. ?"

ಅದಕ್ಕೆ ಏನೂ ಹೇಳದೆ ವೃದ್ಧನು ಸುಮ್ಮನಿದ್ದನು ಯುವಕನು,

''ಇದೆಲ್ಲಾ ಬರಿಯ ಹುಚ್ಚಾಟ. ನಿಮ್ಮ ಮಗನಾಗಿರುವುದಕ್ಕೆ ವರ್ಷ ಒಂದಕ್ಕೆ ನನಗೆ ಇ ರ ವ ತ್ತು ಸಾವಿರ ವರಹಗಳನ್ನು ಅವರು ಕೊಡುತ್ತಾರೆ. ಆದುದರಿಂದ ನೀವು ನನ್ನ ತಂದೆಯಲ್ಲವೆಂದು ನಾನೇತಕ್ಕೆ ಹೇಳಲಿ ?"

ವೃದ್ಧನು ಅತ್ತಿತ್ತ ನೋಡಿ ತನ್ನ ಮಾತು ಯಾರಿಗೂ ಗೊತ್ತಾಗುವುದಿಲ್ಲ ವೆಂದು ತಿಳಿದು,

''ನನಗೆ ಒಂದೇ ಗಂಟಿನಲ್ಲಿ ಐವತ್ತು ಸಾವಿರ ವರಹಗಳನ್ನು ಕೊಟ್ಟರು.''

''ಕಟ್ಟುಕಥೆಯನ್ನು ನಂಬುವಿರೋ ? ''

''ಇದುವರೆಗೆ ನನಗೆ ಅದರಲ್ಲಿ ನಂಬಿಕೆಯಿರಲಿಲ್ಲ ; ಈಗ ನಂಬಿಕೆ ಯುಂಟಾಯಿತು" ಎಂದು ಮುದುಕನು ರಾಜನು ಕೊಟ್ಟ ಹಣವನ್ನು ತೋರಿಸಿದನು.

''ಹಾಗಾದರೆ ರಾಜನು ನನಗೆ ವರ್ಷಾಶನ ಕೊಡುವುದಾಗಿ ಹೇಳಿರುವುದನ್ನೂ ನಂಬಬಹುದು?"

''ಸಂದೇಹವಿಲ್ಲದೆ"

“ಅಲ್ಲಿಯವರೆಗೆ ನಾವು ನಾವು ನಮ್ಮ ಜೋಹಗಳನ್ನು ಸರಿಯಾಗಿ ಅಳ ವಡಿಸಿಕೊಳ್ಳಬೇಕು, ನಾನು ನಿನ್ನ ತಂದೆ.”

“ನಾನು ನಿಮ್ಮ ವಿಧೇಯನಾದ ಮಗ.”

“ಅವರು ಎಂದು ಹೇಳಿದೆಯಲ್ಲಾ, ಯಾರು ?”

“ನನಗೊಬ್ಬರು ಒಂದು ಕಾಗದವನ್ನು ಬರೆದಿದ್ದರು. ಅದರಂತೆಯೇ ನಿಮಗೂ ಒಂದು ಬಂದಿರಬೇಕು. ಅವುಗಳನ್ನು ಯಾರು ಬರೆದರೋ ಅವರೇ.”

“ನನಗೆ ನಿರ್ಮಲಾನಂದನೆಂಬುವನು ಬರೆದಿದ್ದಾನೆ.”

“ಅವನನ್ನು ನೀವು ಬಲ್ಲಿರೋ ?”

“ನಾನು ಕಂಡೂ ಇಲ್ಲ, ಕೇಳಿಯೂ ಇಲ್ಲ.”

“ಅವನು ಏನನ್ನು ಬರೆದಿದ್ದಾನೆ ?”

“ನಂಬಿಕೆಗೆ ದ್ರೋಹ ಮಾಡದಿದ್ದರೆ ತೋರಿಸುತ್ತೇನೆ.”

“ಇದರಲ್ಲಿ ನಮ್ಮಿಬ್ಬರಿಗೂ ಲಾಭವಿರುವುದರಿಂದ ನೀವು ಅನುಮಾನ ಪಡಬೇಡಿ.”

ಆಗ ವೃದ್ಧನು ತನಗೆ ಬರೆದಿದ್ದ ಕಾಗದವನ್ನು ಅವನ ಕೈಗೆ ಕೊಟ್ಟನು. ಅದರಲ್ಲಿ ಈ ರೀತಿ ಇದ್ದಿತು—

“ನೀನು ಹುಟ್ಟುದರಿದ್ರ; ವೃದ್ಧಾಪ್ಯವೂ ದುಃಖವೂ ನಿನ್ನನ್ನು ಬೆನ್ನಟ್ಟು ತ್ತಿರುವುವು. ಹಣಗಾರನಾಗಬೇಕಾಗಿದ್ದರೆ ಈಗಲೇ ಅಮರಪುರಕ್ಕೆ ಹೋಗಿ ರಾಜಾಮಲಯಸಿಂಹನನ್ನು ನೋಡು. ಅವನು ಪರಾಧೀನನಾಗಿರುವ ಅನಂತರಾಜುವೆಂಬ ನಿನ್ನ ಮಗನನ್ನು ಕಂಡುಹಿಡಿದು ನಿನ್ನ ಸ್ವಾಧೀನಮಾಡಿ ಕೊಡುವನು- ನಾನು ಬರೆದಿರುವುದು ನಿಶ್ಚಯವೆಂದು ನಿನಗೆ ನಂಬುಗೆ ಯುಂಟಾಗುವುದಕ್ಕೆ ಇದರಲ್ಲಿ ಎರಡು ಸಾವಿರ ವರಹಗಳ ನೋಟನ್ನೂ. ರಾಜಾ ಮಲಯಸಿಂಹನಿಗೆ ಒಂದು ಕಾಗದವನ್ನೂ ನಲವತ್ತೆಂಟು ಸಾವಿರ ವರಹಗಳಿಗೆ ಅವನಿಗೆ ಒಂದು ಹುಂಡಿಯನ್ನೂ ಗರ್ಭೀಕರಿಸಿದ್ದೇನೆ. ರಾಜನನ್ನು ಶ್ರಾವಣ ಬಹುಳ ದ್ವಾದಶಿ ಸಾಯಂಕಾಲ ಏಳು ಗಂಟೆಗೆ ಸರಿಯಾಗಿ ಹೋಗಿ ನೋಡು. ತಪ್ಪಬೇಡ.”

ನಿರ್ಮಲಾನಂದ.

''ಹೀಗೆಯೇ ನನಗೂ ಒಂದು ಕಾಗದ ಬಂದಿದೆ.''

''ಆನಂದನಿಂದಲೇಯೋ ?''

''ಅಲ್ಲ, ನಾವಿಕ ಸೈಂಧವನೆಂಬ ಹೆಸರಿನಿಂದ ಸದಾ ಸಂಚಾರ ಮಾಡುತ್ತಲಿರುವ ವಿಜಯಧ್ವಜನೆಂಬುವನಿಂದ. ಇಗೋ ನೋಡಿ'' ಎಂದು ತನಗೆ ಬಂದಿದ್ದ ಕಾಗದವನ್ನು ಕೊಟ್ಟನು. ಅದರಲ್ಲಿ ಹೀಗೆ ಬರೆದಿದ್ದಿತು—

''ಅಪ್ಪಾ ! ನೀನು ಶ್ರೀಮಂತ ಬೊಮ್ಮರಾಜುವಿನ ಮಗ. ನೀನು ಹುಟ್ಟಿದ ಸ್ವಲ್ಪ ದಿನಗಳಲ್ಲಿಯೇ ನಿನ್ನ ತಾಯಿಯು ಕಾಲವಾದಳು. ನಿನ್ನ ಐದನೆಯ ವಯಸ್ಸಿನಲ್ಲಿ ನಿಮ್ಮಪ್ಪನು ಒಬ್ಬ ಉಪಾಧ್ಯಾಯನ ಬಳಿ ನಿನ್ನನ್ನು ಬಿಟ್ಟನು. ನಿಮ್ಮ ಶತ್ರುಗಳು ನಿನ್ನನ್ನು ಅಪಹರಿಸಿ ಸ್ವತಂತ್ರನನ್ನಾಗಿ ಬಿಟ್ಟರಾದುದರಿಂದ ನಿನ್ನ ಈಗಿನ ಗತಿಯು ನಿನಗೆ ಪ್ರಾಪ್ತವಾಯಿತು. ನೀನು ಸುಖವಾಗಿರಬೇಕಾದರೆ ಕೂಡಲೇ ಅಸುರಪುರಕ್ಕೆ ಹೋಗಿ ಶ್ರಾವಣ ಬಹುಳ ದ್ವಾದಶೀ ದಿನ ಸಾಯಂಕಾಲ ಏಳು ಗಂಟೆಗೆ ಸರಿಯಾಗಿ ರಾಜಾ ಮಲಯಸಿಂಹನ ಮನೆಯನ್ನು ವಿಚಾರಿಸಿಕೊಂಡು ರಾಜನನ್ನು ಕಾಣು. ಅವನು ತಂದೆಯೊಂದಿಗೆ ನಿನ್ನನ್ನು ಸೇರಿಸುವುದಲ್ಲವೆ ಅರವತ್ತು ಸಾವಿರ ವರಹಗಳ ವರ್ಷಾಶನವನ್ನೂ ನಿನಗೆ ಏರ್ಪಾಡು ಮಾಡಿ ಕೊಡುತ್ತಾನೆ. ನಿನ್ನ ದಾರಿಯ ವೆಚ್ಚಕ್ಕಾಗಿ ಐದು ಸಾವಿರ ವರಹಗಳ ನೋಟನ್ನು ಇದರಲ್ಲಿ ಇಟ್ಟಿದ್ದೇನೆ.

ನಾವಿಕ ಸೈಂಧವ.

''ಈ ಕೆಲಸದಿಂದ ಯಾರೋ ಮೋಸಹೋಗಿದ್ದಾರೆ'' ಎಂದು ಬೊಮ್ಮರಾಜುವು ಹೇಳಲು, ಅನಂತರಾಜುವು,

''ಯಾರಾದರೂ ಮೋಸಹೋಗಿರಲಿ, ನಮಗೇನು ?''

''ಅದೇನೋ ಸರಿ''

ಈ ವೇಳೆಗೆ ಸರಿಯಾಗಿ ರಾಜಾ ಮಲಯಸಿಂಹನು ತಂದೆ ಮಕ್ಕಳಿದ್ದ ಕೊಟ್ಟಡಿಯನ್ನು ಹೊಕ್ಕು,

''ಶ್ರೀಮಂತರೇ, ಮಗನನ್ನು ನೋಡಿ ಸಂತೋಷವಾಯಿತೇ ?'' ಎನ್ನಲು ಬೊಮ್ಮರಾಜುವು,

''ಬ್ರಹ್ಮಾನಂದವಾಯಿತು''

''ತಂದೆಯನ್ನು ಕಂಡು ನಿಮಗೂ ಆನಂದವಾಯಿತೋ'' ಎಂದು

ಕೇಳಲು ಅನಂತರಾಜು,

"ನನ್ನ ಆನಂದಕ್ಕೆ ಪಾರವೇ ಇಲ್ಲ" ಎಂದನು.

"ತಂದೆ ಮಕ್ಕಳಿಬ್ಬರೂ ಆನಂದವಾಗಿರಿ" ಎಂದು ರಾಜನು ಹೇಳಲು, ಬೊಮ್ಮರಾಜು,

"ಶೀಘ್ರವಾಗಿಯೇ ಈ ಊರನ್ನು ಬಿಟ್ಟು ಹೋಗಬೇಕಲ್ಲಾ ಎಂಬುದೊಂದೇ ನನಗೆ ದೊಡ್ಡ ಕೊರತೆ."

"ನನ್ನ ಸ್ನೇಹಿತರಲ್ಲಿ ಕೆಲವರ ಪರಿಚಯವನ್ನು ಮಾಡಿಕೊಡುವವರೆಗೂ ನೀವು ಇಲ್ಲಿಂದ ಹೊರಡಕೂಡದು."

"ಆಗಲಿ"

"ಹಾಗಾದರೆ ನಿಮ್ಮಿಬ್ಬರ ದರ್ಶನವು ಪುನಃ ಯಾವಾಗ ಆಗುವುದು."

"ಯಾವಾಗ ಎಂದರೆ ಆವಾಗ" ಎಂದು ಇಬ್ಬರೂ ಹೇಳಲು, ರಾಜನು,

"ನಾಳೆಯ ಶನಿವಾರ ಸಾಯಂಕಾಲ ಏಳು ಗಂಟೆಗೆ ನನ್ನ ಸಂಪಿಗೆಯ ವನದ ಮನೆಯಲ್ಲಿ ಒಂದು ಔತಣಕ್ಕೆ ಏರ್ಪಾಡು ಮಾಡಿದ್ದೇನೆ. ಅದಕ್ಕೆ ನನ್ನ ಸ್ನೇಹಿತರು ಕೆಲವರು ಬರುವರು. ನೀವಿಬ್ಬರೂ ಅಗತ್ಯ ಅಲ್ಲಿಗೆ ಬರಬೇಕು" ಎಂದು ಹೇಳಿ ಅವರನ್ನು ಕಳುಹಿಸಿದನು.

ಅವರಿಬ್ಬರೂ ಒಬ್ಬರ ಕಯ್ಯನ್ನೊಬ್ಬರು ಜೋಡಿಸಿಕೊಂಡು ಬೀದಿಯಲ್ಲಿ ಹೋಗುತ್ತಿರುವುದನ್ನು ಮಲಯಸಿಂಹನು ಮಹಡಿಯ ಕಿಟಕಿಯಿಂದ ನೋಡಿ ಇವರು ನಿಜವಾಗಿಯೂ ತಂದೆಮಕ್ಕಳಾಗಿದ್ದರೆ ಚೆನ್ನಾಗಿದ್ದಿತು ಎಂದು ಸ್ವಲ್ಪ ಕಾಲ ವ್ಯಾಕುಲಪಟ್ಟು "ಇವರೊಂದಿಗೆ ಸೇರಿ ಮಾತನಾಡಿದುದರಿಂದುಂಟಾದ ಹೇಸಿಗೆಯು ದ್ವೇಷಕ್ಕಿಂತಲೂ ಅಸಹ್ಯವಾಗಿ ತೋರುತ್ತದೆ. ಈ ಹೇಸಿಗೆಯನ್ನು ಹೋಗಲಾಡಿಸಿಕೊಂಡು ಬರುವುದಕ್ಕಾಗಿ ಧನಕೋಟಿಯ ಮಗನನ್ನು ನೋಡಿಕೊಂಡು ಬರಬೇಕು" ಎಂದುಕೊಂಡನು.

---

# ನಲವತ್ತೊಂದನೆಯ ಅಧ್ಯಾಯ

## ಸೊಪ್ಪಿನ ತೋಟ

ವಲಭದೇವನ ಮನೆಯ ಹಿಂದೆ ಪಾಳು ಬಿದ್ದಿದ್ದು ಜಯವೀರನು ಸೊಪ್ಪುಗಳನ್ನು ಬೆಳೆಸುತ್ತಿದ್ದ ತೋಟಕ್ಕೆ ನಮ್ಮ ಪಾಠಕರು ನಮ್ಮ ಸಂಗಡ ಬಂದರೆ, ಅಲ್ಲಿ ನಮಗೆ ಪರಿಚಿತರಾದ ಇಬ್ಬರನ್ನು ತೋರಿಸುವೆವು. ಇಂದು ಜಯವೀರನು ಮೊದಲೇ ಒಂದು ಸಂಕೇತಸ್ಥಾನದಲ್ಲಿ ನಿಂತು ತನ್ನ ಪ್ರಾಣ ಪ್ರಿಯೆಯ ಆಗಮನವನ್ನು ನಿರೀಕ್ಷಿಸುತ್ತ ಅವಳ ಕೋಮಲವಾದ ಹೆಜ್ಜೆಯ ಸದ್ದನ್ನು ಕೇಳಲು ಆಸಕ್ತಿಯಿಂದ ನಿಂತಿದ್ದನು. ವಿಮಲೆಯು ಬರುವುದು ಸಾವಕಾಶವಾದಷ್ಟೂ ಜಯವೀರನ ಆತುರವು ಹೆಚ್ಚಾಯಿತು. ಕೊನೆಗೆ ಅವನಿಗೆ ಇಬ್ಬರ ಹೆಜ್ಜೆಗಳ ಸಪ್ಪುಳವು ಕೇಳಿಸಿ ಯಾರೋ ಇಬ್ಬರು ಮಾತನಾಡುವಂತೆ ತೋರಿತು. ಆಗ ಕದದ ಸಂದಿಯಲ್ಲಿ ಅವನು ಇಣಿಕಿ ನೋಡಲು, ವಿಮಲೆಯೂ ವಿಲಾಸಿನಿಯೂ ಒಬ್ಬರ ಕಯ್ಯನ್ನೊಬ್ಬರು ಹಿಡಿದುಕೊಂಡು ಮಾತನಾಡುತ್ತ ಕಾಲು ದಾರಿಗಳಲ್ಲಿ ತಿರುಗಾಡುತ್ತಲಿದ್ದರು. "ಭಾಮಿನಿಯೂ ವಿಲಾಸಿನಿಯೂ ನಾಗಮಣಿಯನ್ನು ನೋಡಲು ಬಂದಿರುವುದರಿಂದ ಕಾಲ ವಿಳಂಬವಾದುದಕ್ಕೆ ನಾನು ಏನು ತಿಳಿದುಕೊಳ್ಳುವೆನೋ ಎಂದು ಉದ್ಯಾನ ವನದಲ್ಲಿ ಸಂಚರಿಸುವ ನೆಪದಿಂದ ವಿಲಾಸಿನಿಯೊಡನೆ ವಿಮಲೆಯು ಬಂದಿರುವುದು" ಎಂದು ಜಯವೀರನು ತಿಳಿದುಕೊಂಡನು.

ಇಬ್ಬರೂ ಸುಂದರಿಯರೇ ಆದರೂ ಅವರ ಸೌಂದರ್ಯದಲ್ಲಿ ತಾರತಮ್ಯ ವಿದ್ದಿತು. ಜಯವೀರನು ಈ ತಾರತಮ್ಯ ವಿಚಾರಪರವಾಗಿ ಅವರವರ ಗುಣ ದೋಷಗಳನ್ನು ವಿಂಗಡಿಸಿನೋಡಿ ಕೊನೆಗೆ ವಿಮಲೆಯ ಸೌಂದರ್ಯವೇ ಮೇಲೆಂದು ನಿಶ್ಚಯಿಸಿಕೊಂಡನು. ಆ ತರಳೆಯರು ಸುಮಾರು ಅರ್ಧ ಗಂಟೆ ಯವರೆಗೂ ಕ್ರೀಡಾವನದಲ್ಲಿ ಸಂಚರಿಸುತ್ತಲಿದ್ದು ಅನಂತರ ಮನೆಯೊಳಗೆ ಹೋದರು. ಇನ್ನು ಭಾಮಿನಿಯು ಹೊರಡುವಂತಿದೆ, ವಿಮಲೆಯು ಶೀಘ್ರ ದಲ್ಲಿಯೇ ಬರುವಳು ಎಂದು ಜಯವೀರನು ಯೋಚಿಸುತ್ತಿರುವುದರಲ್ಲಿಯೇ ಆವಳು ಅತ್ತಿತ್ತ ನೋಡುತ್ತ ಮೆಲ್ಲಮೆಲ್ಲನೆ ಹೆಜ್ಜೆಯನ್ನಿಡುತ್ತ, ಸಂಕೇತ ಸ್ಥಾನಕ್ಕೆ ನೆಟ್ಟಗೆ ಹೋದರೆ ಯಾರು ನೋಡಿ ಏನು ಹೇಳುವರೋ ಎಂದು

ಶಂಕಿಸುತ್ತ, ಅಲ್ಲಲ್ಲಿದ್ದ ಉಚ್ಚಾಸನಗಳಲ್ಲಿ ಕುಳಿತು ಸುತ್ತಮುತ್ತಲೂ ನೋಡಿ ಯಾರೂ ಇಲ್ಲವೆಂದು ತಿಳಿದು ಪ್ರಿಯನಿದ್ದೆಡೆಗೆ ಹೋಗಿ,

"ಪ್ರಾಣನಾಥ, ನಾನು ಬರಲು ಸಾವಕಾಶವಾದುದಕ್ಕೆ ಕಾರಣವು ನಿನಗೆ ತಿಳಿದಿರಬಹುದು."

"ವಿಲಾಸಿನಿಯನ್ನು ನೀನು ಈ ಕಡೆ ಕರೆದುಕೊಂಡು ಬಂದಾಗಲೇ ನನಗೆ ಗೊತ್ತಾಯಿತು. ನಿನಗೂ ಅವಳಿಗೂ ಸ್ನೇಹವಿರುವುದೆಂದು ಇದುವರೆಗೆ ನಾನು ತಿಳಿದಿರಲಿಲ್ಲ"

"ನಮಗೆ ಸ್ನೇಹವಿದೆ ಎಂಬುದನ್ನು ನಿನಗೆ ಯಾರು ಹೇಳಿದರು ?"

"ನೀವಿಬ್ಬರೂ ರಹಸ್ಯವಾಗಿ ಮಾತುಗಳನ್ನಾಡುತ್ತಲಿದ್ದುದರಿಂದ ನನಗೆ ಹಾಗೆ ತೋರಿತು."

"ಬರಿಯ ಪರಿಚಯಕ್ಕೂ ಸ್ನೇಹಕ್ಕೂ ಇರುವ ವ್ಯತ್ಯಾಸವು ನಿನಗೆ ತಿಳಿಯದೆ ? ಅವಳು ನನ್ನ ಪರಿಚಯಸ್ಥಳು. ನಾನು ಅಂತರಂಗದಲ್ಲಿ ಮಾತನಾಡುತ್ತಲಿದ್ದುದೇನೋ ನಿಜ್ಜಯ. ಆದರೆ ನನಗೆ ಸ್ನೇಹವಿಲ್ಲ."

"ಸ್ನೇಹವಿಲ್ಲದೆ ಏನು ಅಂತರಂಗ ?"

"ಅವಳು ಉದಯಸಿಂಹನನ್ನು ಮದುವೆಯಾಗುವುದಿಲ್ಲವೆಂದು ಹೇಳಿದಳು, ನಾನು ವೀರಸಿಂಹನನ್ನು ಮದುವೆಯಾದರೆ ನನಗುಂಟಾಗುವ ದುಃಖವನ್ನು ಹೇಳಿದೆನು. ಆಗ ನನ್ನ ಮನಸ್ಸು ಯಾರ ಮೇಲೆ ಇದ್ದಿತೋ ಅದನ್ನು ನೀನೇ ಬಲ್ಲೆ."

"ಅದಕ್ಕಾಗಿಯೇ ನನ್ನ ಪ್ರಾಣವು ನಿನ್ನಲ್ಲಿರುವುದು. ನಿನ್ನ ಗುಣವೂ ಲಾವಣ್ಯವೂ ವಿಲಾಸಿನಿಗೆ ಎಂದಿಗೂ ಇಲ್ಲ. ನನಗೇನೋ ಅವಳು ವಾಸನೆಯಿಲ್ಲದ ಹೂವಿನಂತೆ ತೋರುತ್ತಾಳೆ."

"ನನ್ನ ಮೇಲಣ ಮೋಹದಿಂದ ನೀನು ಹೀಗೆ ಹೇಳುತ್ತೀಯೇ ಹೊರತು ಬೇರೆಯಿಲ್ಲ."

"ನಿಜವಾಗಿಯೂ ಹಾಗಿಲ್ಲ ; ವಿಲಾಸಿನಿಯು ಸುಂದರಿಯಾದರೂ ಹೆಂಗಸರಿಗೆ ಮುಖ್ಯವಾಗಿರಬೇಕಾದ ಲಜ್ಜೆ ಅವಳಲ್ಲಿಲ್ಲ."

"ನಾನು ಅವಳ ಸಮೀಪದಲ್ಲಿ ಇಲ್ಲದೆ ಇದ್ದರೆ ನೀನು ಹೀಗೆ ಹೇಳುತ್ತಿರಲಿಲ್ಲ."

"ರತ್ನವು ಪಕ್ಕದಲ್ಲಿರಲಿ ಇಲ್ಲದಿರಲಿ, ಕಲ್ಲು ಕಲ್ಲೇ. ವಿಲಾಸಿನಿಯು ಉದಯಸಿಂಹನನ್ನು ಮದುವೆಯಾಗಲು ಏತಕ್ಕೆ ಇಷ್ಟಪಡುವುದಿಲ್ಲ?''

''ಅವಳು ಯಾರನ್ನೂ ಮದುವೆಯಾಗುವುದಿಲ್ಲವಂತೆ; ನನ್ನ ತಂದೆಯ ಐಶ್ವರ್ಯ ಹೋದರೂ ಚಿಂತೆಯಿಲ್ಲ ನನ್ನ ಪಾಡಿಗೆ ನಾನು ಜೀವನಮಾಡಿ ಕೊಂಡು ಸುಖವಾಗಿರುವೆನು ಎಂದು ಹೇಳಿದಳು.''

''ನೋಡಿದೆಯೋ?"

''ಏನನ್ನು ನೋಡೋದು?"

"ಏನೂ ಇಲ್ಲ."

"ಹಾಗಾದರೆ ನೀನು ಏತಕ್ಕೆ ನಕ್ಕೆ?"

''ನಾನು ನಿನ್ನನ್ನು ನೋಡಿ ನಕ್ಕೆನು."

''ನಾನು ಹೊರಟುಹೋಗಲೇನು?" ಎಂದು ವಿಮಲೆಯು ನಗುತ್ತ ಮನೆಯ ಕಡೆಗೆ ತಿರುಗಲು ಜಯವೀರನು,

''ಬೇಡ, ಬೇಡ, ನಾನು ಹೊರಡಬೇಕು. ನಿನಗೋಸ್ಕರವೇ ಅಲ್ಲವೆ ನಾನು ಇಲ್ಲಿಗೆ ಬಂದುದು."

''ನಾನೂ ಹೊರಡಬೇಕು, ಅದೇನು ಮಾತು! ಬೇಗ ಹೇಳು'' ಎಂದು ವಿಮಲೆಯು ಹೇಳುತ್ತಲೇ ಜಯವೀರನು ಹಾಗೆಯೇ, ಎಂದು ಸಂಕಟ ಪಟ್ಟನು.

"ನಾಥ! ನೀನು ಸುಖಿಯಾಗಿರತಕ್ಕವನು. ಅಂಥ ಸುಖಕ್ಕೆ ನನ್ನಿಂದ ವಿಘ್ನವಾಗುತ್ತಿದೆಯೆಂದು ನನಗೆ ಪಶ್ಚಾತ್ತಾಪವಾಗುತ್ತಿದೆ.''

"ಹಾಗೆಂದರೇನು? ಇಂತಹ ತೊಂದರೆಗಳು ಇನ್ನಿಷ್ಟು ಇದ್ದರೂ ಚಿಂತೆ ಯಿಲ್ಲ. ಅವುಗಳೆಲ್ಲವೂ ನಿನ್ನ ಸಾನ್ನಿಧ್ಯದಿಂದಲೂ ಸಲ್ಲಾಪದಿಂದಲೂ ಪರಿ ಹಾರವಾಗುವುವು."

"ದೇವರು ನಮ್ಮ ಕೋರಿಕೆಯನ್ನು ನೆರವೇರಿಸಿಕೊಡಬೇಕು."

"ವಿಮಲೇ, ಬಾಲ್ಯದಿಂದ ನಮ್ಮನ್ನು ಒಂದು ಕಡೆಯಲ್ಲಿಟ್ಟು, ನಮ್ಮ ಮನೋಭಾವಗಳನ್ನು ಏಕರೀತಿಯಲ್ಲಿ ಹುಟ್ಟಿಸಿ, ಅನ್ಯೋನ್ಯ ಪ್ರೀತಿಯನ್ನು ಕೊಟ್ಟ ದೇವರು ಕೊನೆಗೆ ನಮ್ಮನ್ನು ಅಗಲಿಸಲಾರನೆಂಬ ನಂಬುಗೆಯು ನನಗೆ ಸಂಪೂರ್ಣವಾಗಿದೆ.''

"ನಾಥ, ಇಂಥ ಮಾತಿನಿಂದ ಯಾರ ಮನಸ್ಸಿಗೆ ತಾನೆ ಸಂತೋಷ ವಾಗುವುದಿಲ್ಲ? ನನ್ನ ದುಃಖವೂ ಶಮನವಾಗುವುದು"

"ಅದೇನು, ಇಂದು ಇಷ್ಟು ಜಾಗ್ರತೆಯಾಗಿ ಹೋಗಬೇಕೆನ್ನುತ್ತೀಯೇ?"

"ನನ್ನ ಮಲತಾಯಿಯು ನನ್ನ ಆಸ್ತಿಯ ವಿಷಯದಲ್ಲಿ ನನ್ನೊಂದಿಗೆ ಏನೋ ಮಾತನಾಡಬೇಕೆಂದು ಬರಹೇಳಿದ್ದಾರೆ; ಅದರ ಪೂರ್ವೋತ್ತರವು ನನಗೆ ತಿಳಿಯದು. ನನ್ನ ಆಸ್ತಿಯನ್ನೆಲ್ಲಾ ತೆಗೆದುಕೊಂಡು ಅವರು ನನ್ನನ್ನು ನೆಮ್ಮದಿಯಾಗಿ ಬಿಟ್ಟರೆ ಸಾಕೆಂದಿದ್ದೇನೆ. ನಾನು ದರಿದ್ರಳಾದರೂ ನನ್ನ ಮೇಲೆ ನಿನ್ನ ಪ್ರೀತಿ ಏಕರೀತಿಯಾಗಿರುವುದಲ್ಲವೆ?''

"ವಿಮಲೇ, ನೀನು ದರಿದ್ರಳಾಗಿದ್ದರೂ, ಧನಿಕಳಾಗಿದ್ದರೂ ನಿನ್ನನ್ನು ಬಿಟ್ಟು ಮತ್ತೊಬ್ಬರನ್ನು ಎಂದಿಗೂ ಪ್ರೀತಿಸೆನು. ನೀನು ನನ್ನ ಪತ್ನಿಯಾಗಿ ನನ್ನ ಸನ್ನಿಧಿಯಲ್ಲಿದ್ದರೆ ನನಗೆ ಅದಕ್ಕಿಂತ ಬೇರೆ ಸುಖವೇ ಇಲ್ಲ. ನಿನ್ನ ಮಲತಾಯಿಯು ಪ್ರಾಯಶಃ ನಿನ್ನ ಮದುವೆಯ ವಿಷಯವಾಗಿ ಪ್ರಸ್ತಾಪ ಮಾಡಲು ಕರೆದಿರಬಹುದೇನು?"

"ಆ ವಿಷಯವಲ್ಲವೆಂದು ತೋರುತ್ತದೆ''.

"ಇಂದು ನಾನು ಉದಯಸಿಂಹನನ್ನು ಕಂಡಿದ್ದೆ; ವೀರಸಿಂಹನು ಶೀಘ್ರ ದಲ್ಲಿಯೇ ಬರುತ್ತೇನೆ ಎಂದು ಕಾಗದ ಬರೆದಿದ್ದಾನೆಂದು ಅವನು ಹೇಳಿದನು. ಅದಕ್ಕಾಗಿಯೇ ನಾನು ಹೀಗೆ ಊಹಿಸಿದುದು" ಎಂದು ಜಯವೀರನೆನ್ನಲು ವಿಮಲೆಗೆ ಸಿಡಿಲು ಬಡಿದಂತಾಗಿ ಕೈಕಾಲುಗಳು ನಡುಗಿ ನಿಲ್ಲಲಾರದೆ ಬಾಗಿಲನ್ನು ಒರಗಿಕೊಂಡು

"ಅಯ್ಯೋ ದೇವರೇ! ಹಾಗೇನಾದರೂ ಆದರೆ ನಾನು—; ಅದು ಹಾಗಿರಲಾರದು; ಆ ಸಮಾಚಾರವು ಅವಳಿಂದ ಹೊರಡದು"

"ಅದು ಹೇಗೆ?"

"ಅವಳು ನನ್ನ ಮದುವೆಯ ವಿಷಯದಲ್ಲಿ ಉತ್ಸಾಹವನ್ನು ತೋರ್ಪಡಿ ಸುತ್ತಲಿದ್ದರೂ ಅಂತರಂಗದಲ್ಲಿ ಈ ಮದುವೆಯು ಅವಳಿಗೆ ಇಷ್ಟವಿಲ್ಲ.''

"ಅದು ನಿಶ್ಚಯವಾದರೆ ಅವಳು ಕಾರಣಾಂತರದಿಂದಲಾದರೂ ನನ್ನ ಮದುವೆಗೆ ಸಹಕಾರಿಯಾಗುತ್ತಾಳಲ್ಲಾ ಎಂದು ಅವಳನ್ನು ಪೂಜಿಸುವೆನು''.

ಆಗ ವಿಮಲೆಯು ವ್ಯಸನಾಕ್ರಾಂತಳಾಗಿ "ನಾನು ಮದುವೆಯಾಗುವುದೇ ಅವಳಿಗಿಷ್ಟವಿಲ್ಲ" ಎಂದಳು.

‹‹ಮದುವೆ ಯಿಷ್ಟವಿಲ್ಲದವಳು ಏತಕ್ಕೆ ತಾನು ಮದುವೆಯಾದಳು ?"

"ಆ ಸಮಾಚಾರವು ನಿನಗೆ ಚೆನ್ನಾಗಿ ತಿಳಿಯದು. ಅದನ್ನು ಹೇಳುತ್ತೇನೆ ಕೇಳು. ಸುಮಾರು ಒಂದು ವರ್ಷದ ಹಿಂದೆ ನಾನು ಸನ್ಯಾಸಿನಿಯಾಗಬೇಕೆಂದಿದ್ದು, ಅವಳಿಗೆ ಅದನ್ನು ತಿಳಿಸಲು, 'ನನಗೆ ಸಮ್ಮತವಾಗಿದ್ದರೂ ನಾನು ಒಪ್ಪುವುದಿಲ್ಲ' ಎಂದು ಹೇಳಿ ಕೊನೆಗೆ ನಿರ್ವಾಹವಿಲ್ಲದೆ ಒಪ್ಪಿದಂತೆ ಮಾಡಿ ನನ್ನ ತಂದೆಯನ್ನೂ ಒಪ್ಪಿಸಿದಳು. ಈ ಸಮಾಚಾರವು ತನ್ನ ತಾತನಿಗೆ ತಿಳಿದ ಕೂಡಲೇ ಅವನು ನನ್ನನ್ನು ದುರುದುರುನೆ ನೋಡಿದನು; ಆ ನೋಟವನ್ನು ನಾನೆಂದಿಗೂ ಮರೆಯಲಾರೆನು. ನನ್ನ ಅವಸ್ಥೆಯನ್ನು ನೋಡಿ ಅವನ ಕಣ್ಣುಗಳಲ್ಲಿ ಧಾರಾಕಾರವಾಗಿ ನೀರು ಸುರಿಯಿತು. ಅದರಿಂದ ನಾನು ಎಷ್ಟು ಸಂಕಟಪಟ್ಟೆನೋ ದೇವರೇ ಬಲ್ಲ. ಆಗ ನಾನು ಅವನ ಕಾಲಿನ ಮೇಲೆ ಬಿದ್ದು ಮನೆಯವರು ಏನು ಬೇಕಾದರೂ ಮಾಡಲಿ. ನಾನು ಬೇರೆ ನಿನ್ನನ್ನು ಬಿಟ್ಟು ಅಲ್ಲಾಡುವುದಿಲ್ಲ ಎಂದು ಹೇಳಿದಮೇಲೆ ಅವನಿಗೆ ಸಮಾಧಾನವಾಯಿತು. ನನಗೇನೋ ಅನೇಕ ಕಷ್ಟಗಳಿರಬಹುದು. ತಾತನ ಶಾಂತ ದೃಷ್ಟಿಯನ್ನು ನೆನೆಸಿಕೊಂಡರೆ ಆ ಕಷ್ಟಗಳೆಲ್ಲವೂ ಪರಿಹಾರವಾದಂತೆ ಭಾವಿಸಿಕೊಳ್ಳುವೆನು."

''ವಿಮಲೆ, ನಿನ್ನ ಸಮಾನ ಗುಣವತಿಯು ದೇವಲೋಕದಲ್ಲಿಯೂ ಸಿಕ್ಕಳು. ನೀನು ಮದುವೆಯಾಗದೆ ಸನ್ಯಾಸಿನಿಯಾಗಿದ್ದರೆ ನಿನ್ನ ಮಲತಾಯಿಗೇನು ಪ್ರಯೋಜನವಾಗುವುದು ?''

"ಇದೀಗ ಪ್ರಯೋಜನ, ಕೇಳು. ನನ್ನ ತಾಯಿಯು ತೀರಿಹೋದ ಮೇಲೆ ಅವಳ ಐವತ್ತು ಸಾವಿರ ವರಹಗಳ ಆಸ್ತಿಯು ನನಗೆ ಸೇರಿತು. ಅವಳ ತಂದೆ ತಾಯಿಯರ ಆಸ್ತಿಯೂ ಅವರ ಕಾಲಾನಂತರ ನನಗೇ ಬರುವುದು. ಇದಲ್ಲದೆ, ನಮ್ಮ ಅಜ್ಜನ ಆಸ್ತಿಯೂ ನನಗೇ ಸೇರುವಂತಿದೆ. ನನ

ಗಿಷ್ಟು ಆಸ್ತಿಯಿದ್ದು ತನ್ನ ಮಗನಿಗೆ ಯಾವುದೂ ಇಲ್ಲವಲ್ಲಾ ಎಂದು ಅವಳಿಗೆ ಹೊಟ್ಟೆಯ ಕಿಚ್ಚು."

"ಇಷ್ಟು ಚಿಕ್ಕ ವಯಸ್ಸಿನಲ್ಲಿಯೇ ಅವಳಿಗೆಷ್ಟು ದುರಾಸೆ.''

"ಅವಳು ತನಗಾಗಿ ಆಸೆಪಟ್ಟಿದ್ದರೆ ಆಗ ದುರಾಸೆಯೆಂದು ಹೇಳಬಹುದು. ಮಕ್ಕಳಿಗೆ ಹೇಗಾದರೂ ಮಾಡಿ ಆಸ್ತಿಯನ್ನಿಡಬೇಕೆಂಬ ಆಸೆಯು ತಾಯಿ ತಂದೆಗಳಿಗೆ ಸ್ವಭಾವ."

"ಹೋದರೂ ಹೋಗಲಿ, ನಿನ್ನ ಆಸ್ತಿಯಲ್ಲಿ ಅರ್ಧವನ್ನಾದರೂ ಕೊಟ್ಟು ಅವಳನ್ನು ಏತಕ್ಕೆ ಸಮಾಧಾನ ಪಡಿಸಬಾರದು ?"

''ಅವಳು ಯಾವಾಗಲೂ ಸ್ವಾರ್ಥಪರಳಲ್ಲದವಳಂತೆಯೇ ಮಾತನಾಡುವುದರಿಂದ ಅದನ್ನು ಅವಳಿಗೆ ಹೇಗೆ ಹೇಳಲಿ ?''

''ವಿಮಲೆ, ನಮಗಿರುವ ಅನ್ಯೋನ್ಯ ಪ್ರೀತಿಯನ್ನು ಯಾರಿಗೂ ತಿಳಿಸದೆ ಇದುವರೆಗೆ ಗೋಪ್ಯವಾಗಿಟ್ಟಿದ್ದೆನು. ನನ್ನ ತಂಗಿಗೆ ಕೂಡ ಇದು ತಿಳಿಯದು. ನೀನು ಒಪ್ಪುವುದಾದರೆ ನನ್ನ ಆಪ್ತ ಸ್ನೇಹಿತನಿಗೆ ಇದನ್ನು ತಿಳಿಸಿ ಅವನ ಸಲಹೆಯನ್ನು ಕೇಳುವೆನು."

ಆ ಮಾತಿಗೆ ವಿಮಲೆಯು ಸ್ವಲ್ಪ ಬೆಚ್ಚಿ,

''ಅಂಥಾ ಸ್ನೇಹಿತನಾರು ? ನನ್ನ ಒಪ್ಪಿಗೆಯನ್ನು ಕೊಡಲು ಭಯವಾಗುವುದು."

''ಹೊಸಬನಾವರೂ ಹಳಬನಂತೆಯೇ. ಯಾವನು ನಮ್ಮ ಮನಸ್ಸನ್ನು ಯಾವಾಗಲೂ ತನ್ನ ಕಡೆಗೆ ಸೆಳೆಯುವನೋ, ಆತನನ್ನು ನೋಡಿದ ಮಾತ್ರದಿಂದಲೇ ಜನ್ಮ ಜನ್ಮಾಂತರಗಳಲ್ಲಿಯೂ ಯಾವನು ನಮಗೆ ಬಹು ಅನುಕೂಲನಾಗಿದ್ದವನೆಂದು ತೋರುವುದೋ, ಅಂಥವನೊಬ್ಬನು ಇಲ್ಲವೇ ?"

''ಹೂಂ"

''ಆ ಪ್ರಖ್ಯಾತ ಪುರುಷನನ್ನು ನೋಡಿದರೆ ನನಗೆ ಹಾಗಾಗುತ್ತದೆ."

''ಎಷ್ಟು ದಿವಸಗಳಿಂದ ನಿನಗೆ ಅವನ ಪರಿಚಯ ?"

''ಎಂಟು ಹತ್ತು ದಿನಗಳಿಂದ"

''ಇಂತಹ ಪರಿಚಯವನ್ನು ಸ್ನೇಹವೆಂದು ಹೇಳಬಹುದೋ ? ಹಾಗಾದರೆ ಸ್ನೇಹದ ಬೆಲೆ ನಿನಗೆ ಚೆನ್ನಾಗಿ ಗೊತ್ತಿದೆ.''

“ಮಿಮಲೀ! ನಿನ್ನನ್ನು ಒಪ್ಪಿಸುವುದಕ್ಕೆ ನನ್ನಿಂದಾಗುವುದಿಲ್ಲ. ನೀನು ಏನು ಹೇಳಿದರೂ ಅವನ ವಿಷಯದಲ್ಲಿ ನನಗೆ ಆ ಅಭಿಪ್ರಾಯವು ತಪ್ಪದು. ಅವನೊಬ್ಬ ಅಸಾಧ್ಯ ಪುರುಷನು, ಮುಂದೆ ಹೀಗೆಯೇ ಕಾರ‍್ಯಗಳು ನಡೆಯುವುವೆಂದು ಹೇಳಬಲ್ಲನು. ಒಂದು ವೇಳೆ ಹಾಗೆ ನಡೆಯಲಾರವೆಂದು ಅವನಿಗೆ ತೋರಿಬಂದರೆ ಸನ್ನಿವೇಶವನ್ನು ಸರಿಮಾಡಿಕೊಂಡು ತನ್ನ ಇಷ್ಟಾನುಗುಣವಾಗಿ ಅವುಗಳನ್ನು ನಡೆಸಬಲ್ಲನು. ನನ್ನ ಅನುಕೂಲ ಸ್ಥಿತಿಗೆಲ್ಲಾ ಅವನೇ ಕಾರಣನು, ಬಲ್ಲಿಯಾ ?”

“ಹಾಗಾದರೆ ಅವನೊಬ್ಬ ಮಹಾತ್ಮನಾಗಿರಬೇಕು.”

“ನನಗೂ ಹಾಗೆಯೇ ತೋರುತ್ತದೆ.”

“ಸ್ವಾಮಿ! ಅವನನ್ನು ನಾನೊಂದು ಸಾರಿ ಕಂಡು ನನ್ನ ಗ್ರಹಚಾರವು ಮುಂದೆ ಹೇಗಿರುವುದೆಂದು ತಿಳಿಯಬೇಕು.”

“ಅವನನ್ನು ನೀನೂ ಬಲ್ಲೆ”

“ನಾನೂ ಬಲ್ಲೆನೆ ?”

“ಅವನೇ ನಿನ್ನ ಮಲತಾಯಿಯನ್ನೂ ಅವಳ ಮಗನನ್ನೂ ವಿಪತ್ತಿನಿಂದ ತಪ್ಪಿಸಿ ಕಾಪಿಟ್ಟನನು.”

“ರಾಜಾಮಲಯಸಿಂಹನೇ ?”

“ಅವನೇ.”

“ಅಯ್ಯೋ! ಅವನು ನನ್ನ ಮಲತಾಯಿಗೆ ಅಪ್ತನು. ನನಗೆ ಹೇಗೆ ಸಹಾಯ ಮಾಡಾನು ?”

“ನೀನು ಹೇಳುವಂತಿರಲಾರದು.”

“ಅಯ್ಯೋ, ಅದನ್ನು ನಾನು ಚೆನ್ನಾಗಿ ಬಲ್ಲೆ. ನನ್ನ ಮಲತಾಯಿಯು ಅವನನ್ನು ಬೃಹಸ್ಪತಿಯೆಂದು ಭಾವಿಸಿ, ಹೊಗಳುತ್ತಲೇ ಇರುವಳು. ನನ್ನ ತಂದೆಯು ಅವನ ವಾಗ್ಝರಿಗೂ ಅಭಿಪ್ರಾಯಗಳಿಗೂ ಮರುಳಾಗಿಹೋಗಿದ್ದಾನೆ. ನನ್ನ ಮಲತಮ್ಮನು ಕೂಡ ಮಲಯಸಿಂಹನ ಕಣ್ಣುಗಳನ್ನು ನೋಡಿ ಭಯಪಟ್ಟರೂ ಅವನು ಬಂದೊಡನೆಯೇ ಸಂತೋಷದಿಂದ ಓಡಿಹೋಗಿ ಅವನನ್ನು ಅಪ್ಪಿಕೊಳ್ಳುತ್ತಾನೆ. ಅಂತೂ ನಮ್ಮ ಮನೆತನದವರನ್ನೆಲ್ಲಾ ಆಕರ್ಷಿಸುವ ಒಂದು ಅದ್ಭುತವಾದ ಶಕ್ತಿಯು ಅವನಲ್ಲಿರುವಂತಿದೆ.”

‘‘ಹಾಗಾದರೆ ಅವನ ಶಕ್ತಿಯನ್ನು ನೀನು ಅರಿಯದವಳಲ್ಲ. ಅವನೆಲ್ಲಿದ್ದರೂ ಯಾವುದಾದರೂ ಒಂದು ಅತಿಶಯವಾದ ಕೆಲಸ ಮಾಡುವನು. ಇಂದ್ರಪ್ರಸ್ಥದಲ್ಲಿ ಉದಯಸಿಂಹನನ್ನು ಕಳ್ಳರ ಕಯ್ಯಿಂದ ಬಿಡಿಸಿದನು ; ಭಾವಿನಿಗೆ ಶ್ಲಾಘ್ಯವಾದ ಕುದುರೆಗಳನ್ನೂ ವಜ್ರಗಳನ್ನೂ ಕೊಟ್ಟನು ; ನಿನ್ನ ಮಲತಾಯಿಯೂ ತಮ್ಮನೂ ಅವನ ಮನೆಯ ಮುಂದೆ ಹೋಗುತ್ತಿದ್ದಾಗ ಅವರಿಗೆ ಉಂಟಾದ ವಿಪತ್ತನ್ನು ತಪ್ಪಿಸಿದನು. ಅವನ ಶಕ್ತಿಯೂ ಯುಕ್ತಿಯೂ ಅಪರಿಮಿತವಾದುವು. ಅವನು ಯಾವಾಗಲೂ ನನ್ನನ್ನು ತಂದೆಯಂತೆ ಅಭಿಮಾನದಿಂದ ಕಾಣುತ್ತಾನೆ. ವಿಮಲೇ ! ನಿನ್ನ ಸಂಗಡ ಅವನು ನಗುತ್ತ ಮಾತಾಡಲಿಲ್ಲವೇ ?’’

‘‘ನನ್ನ ಸಂಗಡಲೇ ? ಅವನು ಯಾವಾಗಲೂ ನನ್ನ ಕಡೆ ತಿರುಗುವುದಿಲ್ಲ. ನೀನು ಹೇಳುವಂತೆ ಅವನು ದಯಾಳುವಾಗಿಯೂ ದೀರ್ಘದರ್ಶಿಯಾಗಿಯೂ ಇದ್ದರೆ ನನಗೆ ಇರುವ ಸಂಕಟಗಳನ್ನು ತಿಳಿದು ನನಗನುಕೂಲ ಮಾಡುತ್ತಿದ್ದನು. ಅವನು ನಿನಗೇನು ಅನುಕೂಲ ಮಾಡಿರುವುದು, ದಯಮಾಡಿ ತಿಳಿಸು, ಕೇಳೋಣ. ಒಂದು ವೇಳೆ ನಿನ್ನ ವಿಷಯದಲ್ಲಿ ಅವನು ಹಾಗಿದ್ದರೂ ಅದಕ್ಕೆ ಕಾರಣವುಂಟು. ಸರ್ಕಾರದಲ್ಲಿ ದೊಡ್ಡ ಪದವಿಯಲ್ಲಿರುವವರಿಗೆ ಎಲ್ಲರೂ ಮರ್ಯಾದೆ ಮಾಡುತ್ತಾರೆ ; ನನ್ನಂತಹ ತಬ್ಬಲಿಗಳನ್ನು ಪಾತಾಳಕ್ಕೆ ತುಳಿಯುವರು.”

‘‘ವಿಮಲೆ ನೀನು ಹೀಗೆ ಹೇಳಬೇಡ.”

‘‘ಸ್ವಾಮಿ ! ನಾನಾಡಿದುದು ನಿನಗೆ ಅಸಮಾಧಾನವಾದಂತೆ ತೋರುತ್ತದೆ, ಕ್ಷಮಿಸು. ಆತನು ನಿನಗೇನು ಅನುಕೂಲ ಮಾಡಿಕೊಟ್ಟದ್ದಾನೆ?’’

‘‘ಅವನನ್ನು ನೋಡಿದಾರಭ್ಯ ಅವನಲ್ಲಿ ನನಗೆ ಒಂದು ವಿಧವಾದ ಪ್ರೀತಿಯೂ, ವಿಶ್ವಾಸವೂ ಉಂಟಾಗಿವೆ. ಅದಕ್ಕೆ ಕಾರಣವೇನೆಂದರೆ ಹೇಳಲಾರೆ. ಅವನಿಗೂ ನನ್ನಲ್ಲಿ ಅದೇ ರೀತಿ ಪ್ರೀತಿಯೂ ವಿಶ್ವಾಸವೂ ಇವೆ. ಈ ಅನ್ಯೋನ್ಯ ಪ್ರೀತಿ ಭಾವವು ಆಕಸ್ಮಿಕವಾದುದಲ್ಲ. ನನ್ನ ಮನದಲ್ಲಿ ಯಾವುದಾದರೂ ಒಂದನ್ನು ಯೋಚಿಸಿದರೆ ಅವನು ಅದನ್ನು ತಿಳಿದು ನನಗೆ ಅನುಕೂಲಮಾಡುವನು. ನೀನು ನಕ್ಕರೂ ಸರಿ ; ನನ್ನ ಭಾಗ್ಯವೆಲ್ಲಾ ಅವನಿಂದಲೇ ಉಂಟಾದುದೆಂದು ನನಗೆ ದೃಢವಾಗಿ ತೋರಿಹೋಗಿದೆ. ಈಗ

ನೋಡು ; ನಾಳೆ ಶನಿವಾರ ನಿನ್ನ ತಂದೆ ತಾಯಿಯರನ್ನು ಊಟಕ್ಕೆ ಕರೆದಿರುತ್ತಾನೆ. ನನ್ನನ್ನೂ ಅವರನ್ನೂ ಅಲ್ಲಿ ಸೇರಿಸುವುದು ನಮ್ಮ ಅನುಕೂಲಕ್ಕಾಗಿಯೇ ಎಂದು ತಿಳಿದುಕೊಂಡಿದೇನೆ.''

''ಪ್ರಾಣನಾಥ ! ನೀನು ಈ ರೀತಿ ಮಾತನಾಡುತ್ತ ಬಂದರೆ ನಿನ್ನ ಬುದ್ಧಿಯ ವಿಷಯದಲ್ಲಿ ನಾನು ಅನುಮಾನಪಡಬೇಕಾಗಿದೆ. ಈ ಪ್ರೀತಿ ಆಕಸ್ಮಿಕವೇ ಹೊರತು ಅಂತರ್ಯವಾದುದಲ್ಲ. ಆತನ ಮನೆಗೆ ಊಟಕ್ಕೆ ಹೋಗುವುದು ನನ್ನ ತಂದೆಗೆ ಇಷ್ಟವಿಲ್ಲ ; ನನ್ನ ಮಲತಾಯಿಯ ಬಲಾತ್ಕಾರದಿಂದ ಒಪ್ಪಿಕೊಂಡನು. ಹೀಗಿರುವಲ್ಲಿ ನಿನ್ನ ಊಹೆಯು ಸರಿಯಲ್ಲ. ಇದಲ್ಲದೆ ನಮ್ಮಿಬ್ಬರಿಗೂ ಇರುವ ಸಂಬಂಧವು ಅವನಿಗೆ ಹೇಗೆ ಗೊತ್ತು ? ನೀನೂ ನಮ್ಮ ಅಜ್ಜ ಇಬ್ಬರು ಹೊರತಾಗಿ ನನಗಾರೂ ಸಹಾಯಕರಿಲ್ಲ.''

"ನೀನು ಹೇಳುವುದೇನೋ ನ್ಯಾಯ; ಆದರೂ ನನ್ನ ಪರಮಾತ್ಮನು ಬೇರೆ ವಿಧವಾಗಿ ಬೋಧಿಸುತ್ತಾನೆ."

"ನನ್ನ ಪರಮಾತ್ಮನು ನೀನು ಹೇಳುವಂತೆ ಒಪ್ಪುವುದಿಲ್ಲ. ಇದಕ್ಕಿಂತ ಪ್ರಬಲವಾದ ಕಾರಣಗಳನ್ನು ನೀನು ಹೇಳಿದ ಹೊರತು—"

"ಅದನ್ನು ಹೇಳಿದರೆ ನೀನು ನಗುವಿಯೋ ಏನೋ ?''

ವಿಮಲೆಯು ನಗುತ್ತ "ಹೇಳು ನೋಡೋಣ,'' ಎಂದಳು.

"ನನ್ನ ಪರಮಾತ್ಮನಲ್ಲಿ ನನಗೆ ಪೂರ್ಣವಾದ ನಂಬುಗೆಯುಂಟು. ಯುದ್ಧದಲ್ಲಿ ಅನೇಕಾವೃತ್ತಿ ಅದರ ಹೇಳಿಕೆಯಂತೆ ನಡೆದು ನಾನು ಗುಂಡಿನ ಏಟುಗಳಿಂದ ತಪ್ಪಿಸಿಕೊಂಡಿದ್ದೇನೆ."

''ಹಾಗೆ ನೀನು ತಪ್ಪಿಸಿಕೊಂಡುದು ನಿನ್ನ ಕ್ಷೇಮಾರ್ಥವಾಗಿ ನಾನು ದೇವರಲ್ಲಿ ಮಾಡುತ್ತಲಿದ್ದ ಪ್ರಾರ್ಥನೆಯ ಬಲದಿಂದ ಏತಕ್ಕೆ ಆಗಿರಬಾರದು ?"

''ನಿನಗೂ ನನಗೂ ಸ್ನೇಹವಾದಮೇಲೆ ಹಾಗಾಗಿರಬಹುದು. ಅದಕ್ಕೆ ಮೊದಲು ?"

''ಇಂದು ನನ್ನನ್ನು ರೇಗಿಸುವ ಉದ್ದೇಶದಿಂದಲೇ ನೀನು ಬಂದಿರುವಂತೆ ತೋರುತ್ತಲಿದೆ. ನಾನು ಯಾವುದನ್ನೂ ಹೇಳಿದರೂ ನೀನು ನಂಬುವುದಿಲ್ಲ. ಇದು ಹಾಗಿರಲಿ. ಬಲವತ್ತರವಾದ ಕಾರಣವೊಂದಿದೆ ಎಂದು ಹೇಳಿದೆ. ಅದೇನು ?"

“ಹಾಗಾದರೆ ಇಲ್ಲಿರುವ ಕುದುರೆಯನ್ನು ನೋಡು.”

ವಿಮಲೆಯು ಕದದ ಸಂದಿನಲ್ಲಿ ಇಣಿಕಿನೋಡಿ “ಆಹಾ ! ಎಂಥ ಶ್ಲಾಘ್ಯವಾದ ಕುದುರೆ,” ಎಂದಳು.

“ನಾನು ಈ ಕುದುರೆಯನ್ನು ನೋಡಿ ಮೋಹಿಸಿ ಕ್ರಯಕ್ಕೆ ಕೊಳ್ಳಬೇಕೆಂಬ ಆಸೆಯಿಂದ ಬೆಲೆಯನ್ನು ವಿಚಾರಿಸಲು. ಸ್ವಂತಗಾರನು ನಾಲ್ಕುಸಾವಿರದ ಐನೂರು ವರಹಗಳನ್ನು ಕೇಳಿದನು. ಅಷ್ಟು ಹಣವನ್ನು ಕೊಟ್ಟು ತೆಗೆಯಲು ನನಗೆ ಯೋಗ್ಯತೆಯಿಲ್ಲದುದರಿಂದ ಸಂಕಟಪಡುತ್ತ ಅದರ ಹಂಬಲವನ್ನು ತೊರೆದುಬಿಟ್ಟೆನು. ಅಂದು ಸಾಯಂಕಾಲ ಏಳೆಂಟು ಮಂದಿ ಸ್ನೇಹಿತರು ನನ್ನ ಮನೆಗೆ ಬಂದು ಎಂದೂ ಆಡದ ನನ್ನನ್ನು ಬಲಾತ್ಕಾರದಿಂದ ಇಸ್ಪೀಟನ್ನು ಆಡುವುದಕ್ಕೆ ಕುಳ್ಳಿರಿಸಿದರು. ಆಟವು ಪ್ರಾರಂಭವಾಗುವುದರೊಳಗಾಗಿಯೇ ರಾಜನು ಬಂದು ನಮ್ಮ ಸಂಗಡ ಆಡಿ ನನಗೆ ಸುಮಾರು ಐದುಸಾವಿರ ವರಹಗಳನ್ನು ಸೋತುಹೋದನು. ಆ ರಾತ್ರಿಯೇ ನಾನು ವ್ಯಾಪಾರಿಯ ಬಳಿಗೆ ಹೋಗಿ ಹಣವನ್ನು ಕೊಟ್ಟು ಕುದುರೆಯನ್ನು ಹತ್ತಿ ರಾಜನ ಮನೆಯ ಮುಂದೆ ಬರುತ್ತಿದ್ದಾಗ, ಅವನು ಹೇಗೋ ನಾನು ಬರುವುದನ್ನು ತಿಳಿದು ಅಷ್ಟು ಹೊತ್ತಿನಲ್ಲಿ ಕಿಟಕಿಯ ಕದವನ್ನು ತೆಗೆದು ನನ್ನನ್ನು ನೋಡಿದನು. ಇದರಿಂದ ಏನು ತೋರುತ್ತದೆ ? ನಾನು ಆಸೆಪಟ್ಟ ಕುದುರೆಯನ್ನು ಕೊಳ್ಳುವುದಕ್ಕೆ ಅನುಕೂಲ ಪಡಿಸಲು ಅವನು ಬೇಕೆಂದೇ ಅಷ್ಟು ಹಣವನ್ನು ಸೋತುಹೋದನೆಂದು ಹೇಳಬಹುದಲ್ಲವೇ ?”

“ಪ್ರಾಣನಾಥ, ಇಂದು ನಿನ್ನ ಬುದ್ಧಿಯು ಏಕೋ ಒಂದು ವಿಧವಾಗಿರುವಂತೆ ತೋರುತ್ತಲಿದೆ. ಅಗೋ ! ಯಾರೋ ನನ್ನನ್ನು ಕೂಗುತ್ತಾರೆ.”

“ಆಗಲೇ ಹೊರಡಬೇಕೆ ?” ಎಂದು ಇಬ್ಬರೂ ಒಬ್ಬರ ಮುಖವನ್ನು ಒಬ್ಬರು ನೋಡುತ್ತ ವಿಯೋಗದುಃಖದಿಂದ ಅಗಲಿದರು.

# ನಲವತ್ತೆರಡನೆಯ ಅಧ್ಯಾಯ

## ದೀನನಾಥನ ಮರಣಶಾಸನ

ಭಾಮಿನಿಯು ಹೊರಟುಹೋಗಿ ವಿಮಲೆಯು ಜಯವೀರನ ಸಂಗಡ ಮಾತನಾಡುತ್ತಲಿದ್ದಾಗ ವಲ್ಲಭದೇವನ ಮನೆಯೊಳಗೆ ಏನು ನಡೆಯುತ್ತ ಲಿದ್ದಿತೋ ನೋಡೋಣ. ವಲ್ಲಭದೇವನೂ ಅವನ ಹೆಂಡತಿಯೂ ದೀನ ನಾಥನ ಕೊಟ್ಟಡಿಗೆ ಹೋಗಿ ತಾತನ ಸಮೀಪದಲ್ಲಿ ನಿಂತಿದ್ದ ವಿಮಲೆಯನ್ನು ತೋಟಕ್ಕೆ ಹೋಗೆಂದು ಹೇಳಿ, ಆಳನ್ನು ಹೊರಗೆ ಕಳುಹಿದನು. ವಿಮಲೆಯು ಹೇಳಿದ್ದೇ ಸಾಕೆಂದು ಜಯವೀರನ ಸಂಗಡ ಮಾತನಾಡಲು ತೋಟಕ್ಕೆ ಹೋದಳು.

ಹರಿದಾಸನೆಂಬ ಆಳು ಬಹುಕಾಲದಿಂದಲೂ ದೀನನಾಥನ ಆಪ್ತಸೇವಕ ನಾಗಿದ್ದುದರಿಂದ ಅವನೂ ಸಂಸಾರಕ್ಕೆ ಸೇರಿದವನಂತೆಯೇ ಯಾವಾಗಲೂ ದೀನನಾಥನ ಮನೆಯಲ್ಲಿಯೇ ಇರುತ್ತಿದ್ದನು. ದೀನನಾಥನಿಗೆ ವಾಯುಹಿಡಿದ ಮೇಲಂತೂ ಒಂದು ಕ್ಷಣವಾದರೂ ಅವನನ್ನು ಬಿಟ್ಟು ಹೋಗುತ್ತಿರಲಿಲ್ಲ.

ದೀನನಾಥನ ಸ್ಥಿತಿಯು ನಮ್ಮ ಪಾಠಕರಿಗೆ ಸುಮಾರಾಗಿ ತಿಳಿದಿರಬಹುದು. ಆದರೂ ಈಗ ನಾವು ಅದನ್ನು ವಿಶದವಾಗಿ ತಿಳಿಸುವೆವು. ಸುಮಾರು ಏಳೆಂಟು ವರ್ಷಗಳ ಹಿಂದೆ ಅವನಿಗೆ ಒಂದು ಬಗೆಯ ವಾಯುವು ತೋರಿ ಕೈಕಾಲುಗಳೂ ನಾಲಗೆಯೂ ಸ್ವಾಧೀನ ತಪ್ಪಿಹೋದುವು. ಅದು ಮೊದಲ್ಗೊಂಡು ಅವನು ಯಾವಾಗಲೂ ಒಂದು ಕುರ್ಚಿಯ ಮೇಲೆ ಜೀವಚ್ಛವದಂತೆ ಬಿದ್ದಿದ್ದನು. ಅವನ ಶರೀರಸ್ಥಿತಿಯು ಹೀಗಿದ್ದರೂ, ಮನೋದಾರ್ಢ್ಯವೂ ನೇತ್ರೇಂದ್ರಿಯ ಪಾಟವವೂ ಚೆನ್ನಾಗಿಯೇ ಇದ್ದುವು. ಇಂದ್ರಿಯಗಳಲ್ಲಿ ಕೆಲವು ಊನವಾದರೆ ಮಿಕ್ಕವು ಪಟುತರವಾಗುವುದೆಂಬುದು ಲೋಕಪ್ರಸಿದ್ಧವು. ದೀನನಾಥನಿಗೆ ಸರ್ವಾಂಗಚೈತನ್ಯವೂ ಈಗ ಕಣ್ಣುಗಳಲ್ಲಿಯೇ ನೆಲೆಗೊಂಡಿದ್ದಿತು. ಸಂತೋಷ ವನ್ನಾಗಲಿ ಕೋಪವನ್ನಾಗಲಿ ಸೂಚಿಸುವಾಗ ಕಣ್ಣುಗಳ ಥಾಳವನ್ನು ಅಷ್ಟಿಷ್ಟೆಂದು ಬಣ್ಣಿಸತೀರದು. ಮಾತನಾಡುವುದಕ್ಕೆ ಆಗದಿದ್ದರೂ ಮನೋಭಿಪ್ರಾಯ ಗಳನ್ನು ಕಣ್ಣಿನಿಂದಲೇ ಸೂಚಿಸುತ್ತಲಿದ್ದನು. ಅದರ ಅರ್ಥವನ್ನು ವಿಮ ಲೆಯೂ ಹರಿದಾಸನೂ ಚೆನ್ನಾಗಿ ಅರಿತಿದ್ದರು. ವಲ್ಲಭದೇವನು ಅವನ್ನು ಬಲ್ಲವ

ನಾಗಿದ್ದರೂ ಏನಾದರೂ ಕೆಲಸಬಿದ್ದಾಗ ಮಾತ್ರ ತಂದೆಯ ಬಳಿಗೆ ಹೋಗುತ್ತಿದ್ದನೇ ಹೊರತು ಮಿಕ್ಕ ವೇಳೆಗಳಲ್ಲಿ ಹೋಗುತ್ತಿರಲಿಲ್ಲ. ಮಗನು ಅಸಡ್ಡೆ ಮಾಡುತ್ತಿದ್ದುದರಿಂದ ಅವನ ಪ್ರೀತಿ ತಪ್ಪಿ ತನಗೆ ಉಪಚಾರಮಾಡುತ್ತಿದ್ದ ವಿಮಲೆಯನ್ನೂ ಹರಿದಾಸನನ್ನೂ ದೀನನಾಥನು ವಿಶೇಷವಾಗಿ ಪ್ರೀತಿಸುತ್ತಲಿದ್ದನು.

ಕಣ್ಣುಗಳನ್ನು ಮುಚ್ಚಿಕೊಂಡರೆ ಸಮ್ಮತಿಯೆಂತಲೂ, ರೆಪ್ಪೆಯನ್ನು ಬಡಿದರೆ ಒಪ್ಪಲಿಲ್ಲವೆಂತಲೂ, ಬಲಗಣ್ಣು ಮುಚ್ಚಿದರೆ ವಿಮಲೆಯು ಬರಬೇಕೆಂತಲೂ, ಎಡಗಣ್ಣನ್ನು ಮುಚ್ಚಿದರೆ ಹರಿದಾಸನು ಬರಬೇಕೆಂತಲೂ, ಕಣ್ಣುಗಳನ್ನು ಮೇಲಕ್ಕೆ ಎತ್ತಿದರೆ ಏನನ್ನೋ ಅಪೇಕ್ಷಿಸುವನೆಂತಲೂ, ದೀನನಾಥನು ಸಂಕೇತವನ್ನು ಮಾಡಿಕೊಂಡಿದ್ದನು.

ವಿಮಲೆಯನ್ನೂ ಹರಿದಾಸನನ್ನೂ ಹೊರಕ್ಕೆ ಕಳುಹಿಸಿ, ವಲ್ಲಭದೇವನು ತಂದೆಯನ್ನು ನೋಡಿ

"ಅಪ್ಪಾ, ಅವರಿಬ್ಬರೂ ಹೊರಗೆ ಹೋದರೆಂದು ನೀವು ಅಸಮಾಧಾನಪಡಬೇಡಿ; ನಾವು ಈಗ ಹೇಳಬೇಕೆಂದಿರುವ ವಿಷಯವು ಅವರ ಇದಿರಿಗೆ ಹೇಳತಕ್ಕುದಲ್ಲ. ಆ ವಿಷಯಕ್ಕೆ ನೀವು ನನ್ನಲ್ಲಿ ವಿಶ್ವಾಸವಿಟ್ಟು ಸಮ್ಮತಿಸಬೇಕು."

ಮುದುಕನ ಕಣ್ಣು ಯಾವ ಅಭಿಪ್ರಾಯವನ್ನೂ ಸೂಚಿಸಲಿಲ್ಲ.

"ಇನ್ನು ಮೂರು ತಿಂಗಳೊಳಗಾಗಿ ವಿಮಲೆಗೆ ಮದುವೆಮಾಡಬೇಕೆಂದಿದ್ದೇನೆ"

ಕಣ್ಣುಗಳು ಏನನ್ನೂ ಸೂಚಿಸಲಿಲ್ಲ. ಆಗ ನಾಗಮಣಿಯು ಮಾವನನ್ನು ನೋಡಿ

"ಸ್ವಾಮಿ, ನಾವು ಗೊತ್ತುಮಾಡಿಕೊಂಡಿರುವ ವರನು ಬಹು ಯೋಗ್ಯನು ಒಳ್ಳೆಯ ಮನೆತನದವನು, ಮತ್ತು ಹಣಗಾರನು. ಅವನನ್ನು ತಾವು ಅರಿಯಿರಾ ? ನಮ್ಮ ಶ್ರೀಮಂತ ವೀರಪ್ರಚಂಡರ ಮಗ ವೀರಸಿಂಹ" ಎಂದಳು.

ಆಗ ವಲ್ಲಭದೇವನು ತಂದೆಯ ಕಣ್ಣುಗಳನ್ನೇ ನೋಡುತ್ತಿದ್ದನು. ವೀರಪ್ರಚಂಡನ ಹೆಸರನ್ನು ಕೇಳಿದ ಕೂಡಲೇ ಕಣ್ಣುಗಳು ಕೋಪದಿಂದ ನಾಗಮಣಿಯನ್ನು ಸುಡುವಂತಿದ್ದುವು. ವಲ್ಲಭದೇವನು ಅದೊಂದನ್ನೂ ಕಾಣದಂತೆ

"ಅಪ್ಪಾ, ವಿಮಲೆಗೆ ವಯಸ್ಸಾಯಿತು; ಇನ್ನು ಮದುವೆಯನ್ನು ತಾವುಸ

ಮಾಡುವುದು ತರವಲ್ಲ. ಆ ಯೋಚನೆಯಲ್ಲಿ ನಾವು ನಿಮ್ಮನ್ನು ಮರೆತೆವೆಂದು ತಿಳಿಯಬೇಡಿರಿ; ಮದುವೆಯಾದ ಕೂಡಲೇ ಅವಳೂ ಅವಳ ಗಂಡನೂ ನೀವೂ ಬೇರೆ ಒಂದು ಮನೆಯಲ್ಲಿರಬಹುದು. ಆಗ ಗಂಡಹೆಂಡಿರಿಬ್ಬರೂ ನಿಮ್ಮ ಸೇವೆಯನ್ನು ಮಾಡುವರು" ಎಂದನು.

ಅದನ್ನು ಕೇಳುತ್ತಲೆ ದೀನನಾಥನ ಕಣ್ಣುಗಳು ಕೋಪದಿಂದ ಜ್ವಲಿಸುತ್ತಲಿದ್ದುವು.

"ವೀರಪ್ರಚಂಡನ ಮನೆಯವರಿಗೂ ನಮಗೂ ಆಗುತ್ತಿರಲಿಲ್ಲ; ಈ ಮದುವೆಯಿಂದ ಎರಡು ಮನೆಯವರಿಗೂ ಸ್ನೇಹವಾಗುವುದು."

ಮುದುಕನ ಕಣ್ಣುಗಳು ತಿರಸ್ಕಾರವನ್ನು ಸೂಚಿಸಿ ಪಟಪಟ ಎಂದು ಬಡಿದುವು.

ಹಾಗಾದರೆ ನಾವು ಹೋಗಿ ಬರುತ್ತೇವೆ ಎಂದು ಗಂಡಹೆಂಡಿರಿಬ್ಬರೂ ಎದ್ದರು. ನಾಗಕುಮಾರನನ್ನು ಕಳುಹಲೋ ಎಂದು ನಾಗಮಣಿಯು ಕೇಳಲು ಮುದುಕನು ರೆಪ್ಪೆಗಳನ್ನು ಬಡಿದನು. ವಿಮಲೆಯನ್ನು ಕಳುಹಲೋ ಎಂದು ಮಗನು ಕೇಳಲು ವೃದ್ಧನು ಅತ್ಯಾತುರದಿಂದ ಕಣ್ಣುಗಳನ್ನು ಮುಚ್ಚಿಕೊಂಡನು. ಆಗ ಅವರು ವಿಮಲೆಗೆ ಹೇಳಿಕಳುಹಿಸಿದರು. ತಾತನ ಕೊಟ್ಟಡಿಗೆ ಬಂದಾಗ ಆಗತಾನೆ ಅವಳು ತನ್ನ ಪ್ರಿಯನ ಸಂಗಡ ಮಾತನಾಡಿ ಬಂದಿದ್ದಳಾದುದರಿಂದ ಅತಿ ಸಂತೋಷಚಿತ್ತಳಾಗಿದ್ದಳು; ಒಳಗೆ ಬಂದು ತಾತನ ಮುಖವನ್ನು ನೋಡಿದ ಕೂಡಲೆ ಅವಳಿಗೆ ಸಂಕಟವುಂಟಾಗಿ,

"ತಾತ ! ಅವರು ನಿನಗೆ ಏನಾದರೂ ಅಸಮಾಧಾನವನ್ನುಂಟುಮಾಡಿ ಹೋದರೋ ?"

"ಅಹುದು."

"ತಂದೆಯೋ ?"

"ಅಲ್ಲ."

"ಮಲತಾಯಿಯೋ ?"

"ಅಲ್ಲ."

"ನಾನೋ ?"

"ಅಹುದು."

"ಅಯ್ಯೋ, ನಾನೇನು ಮಾಡಿದೆ" ಎನ್ನಲು ಕಣ್ಣುಗಳು ಸುಮ್ಮನಿದ್ದುವು.

"ನನ್ನ ಮೇಲೆ ಯಾರಾದರೂ ಏನನ್ನಾದರೂ ಹೇಳಿದರೋ ?"

ಕಣ್ಣುಗಳು ಮುಚ್ಚಿದುವು.

"ಹಾಗಾದರೆ ನನ್ನ ತಂದೆತಾಯಿಗಳು ಏನನ್ನೋ ಹೇಳಿರಬೇಕು. ಏನು ಹೇಳಿದಿರಿ ಎಂದು ಅವರನ್ನು ನಾನು ಕೇಳಲೋ ?"

ಕಣ್ಣ ರೆಪ್ಪೆಯು ಬಡಿಯಿತು.

"ಅವರು ಏನನ್ನು ಹೇಳಿರಬಹುದು ? ಆಹಾ ! ನನ್ನ ಮದುವೆಯ ಪ್ರಸ್ತಾಪವೆಂದು ಕಾಣುತ್ತದೆ"

ಕಣ್ಣು ಕೋಪದಿಂದ ಅಹುದೆಂದಿತು.

"ಅದನ್ನು ನಾನು ಹೇಳಲಿಲ್ಲವೆಂದು ಕೋಪವೋ ?"

"ಹುಂ."

"ಅವರು ಅದನ್ನು ನನ್ನ ಸಂಗಡ ಹೇಳಲೇ ಇಲ್ಲ; ಅಕಸ್ಮಾತ್ತಾಗಿ ಅದು ನನಗೆ ತಿಳಿಯಿತು. ತಿಳಿದ ಬಳಿಕ ಅವರು ಅದನ್ನು ನಿನಗೆ ತಿಳಿಸಬೇಡವೆಂದು ಕಟ್ಟು ಮಾಡಿದ್ದರು. ಅದರಿಂದ ನಾನು ನಿನಗೆ ಆ ವಿಷಯವನ್ನು ತಿಳಿಸಲಿಲ್ಲ" ವೃದ್ಧನು ವಿಮಲೆಯ ಮಾತಿಗೆ ಒಪ್ಪದೆ ತನ್ನ ಕೋಪಕ್ಕೆ ಅದು ಒಂದೇ ಕಾರಣವಲ್ಲವೆಂದು ಸೂಚಿಸಿದನು.

"ಹಾಗಾದರೆ ಇನ್ನೇನು ? ಮದುವೆಯಾದರೆ ನಿನ್ನನ್ನು ಬಿಟ್ಟುಹೋಗುವೆನೆಂಬ ಕೋಪವೋ ?"

"ಅಲ್ಲ."

"ವೀರಸಿಂಹನ ಮದುವೆಯಾದಮೇಲೆ ಇಲ್ಲಿಯೇ ಇರುವೆನೆಂದು ಹೇಳಿದರೋ ?"

"ಅಹುದು"

"ಅದರಿಂದ ಅಸಮಾಧಾನಕ್ಕೆ ಕಾರಣವೇನು ?"

ಆಗ ಮುದುಕನು ವಿಮಲೆಯ ಮೇಲೆ ಪ್ರೀತಿಯಿಂದ ಕೂಡಿದ ದೃಷ್ಟಿಯನ್ನು ಸುಳಿಸಿದನು.

"ನನ್ನ ಮೇಲೆ ನಿನಗೆ ಸಂಪೂರ್ಣವಾದ ಪ್ರೀತಿಯಿರುವುದು; ಈ ಮದುವೆಯು ನನಗೆ ಹಿತಕರವಲ್ಲವೆಂದು ನಿನ್ನ ಅಭಿಪ್ರಾಯವೋ?"

"ಅಹುದು."

"ವೀರಸಿಂಹನನ್ನು ಕಂಡರೆ ನಿನಗಾಗದೋ ?"

"ಆಗದು."

"ಹಾಗಾದರೆ ಕೇಳು. ನನಗೂ ಅವನನ್ನು ಮದುವೆಯಾಗುವುದಕ್ಕೆ ಇಷ್ಟವಿಲ್ಲ. ಇದಕ್ಕಾಗಿಯೇ ಹಿಂದೆ ಸನ್ಯಾಸಿನಿಯಾಗಬೇಕೆಂದು ನಾನು ಯೋಚಿಸಿದ್ದೆನು."

ವೃದ್ಧನ ಕಣ್ಣಿನಲ್ಲಿ ನೀರು ತುಂಬಿತು.

"ಈ ಮದುವೆಯನ್ನು ನೀನು ತಪ್ಪಿಸುವುದಾದರೆ ಬಹು ಸಂತೋಷ. ಅಯ್ಯೋ ಪಾಪ ! ನೀನೇನ ಮಾಡಬಲ್ಲೆ ?"

ತಾನು ಮಾಡಬಲ್ಲನೆಂದು ಕಣ್ಣು ಸೂಚಿಸಿತು.

"ಏನು ನಿನ್ನಿಂದಾಗುತ್ತದೆಯೇ ?"

ವೃದ್ಧನು ಆಗುತ್ತದೆ ಎಂದು ಸೂಚಿಸಿ ಕಣ್ಣುಗಳನ್ನು ಮೇಲಕ್ಕೆ ಎತ್ತಿದನು.

ಆಗ ವಿಮಲೆಯು ತಾತ ! ನಿನಗೇನು ಬೇಕು ? ಎಂದು ಕೇಳಿ ಸಾಧಾರಣವಾಗಿ ಅವನಿಗೆ ಬೇಕಾದ ಪದಾರ್ಥಗಳ ಹೆಸರನ್ನೆಲ್ಲಾ ಹೇಳಿದಳು. ಅವು ಯಾವುವೂ ಅಲ್ಲವೆಂದು ಅವನ ಕಣ್ಣಿನ ಸಂಜ್ಞೆಯಿಂದ ಅರಿತು ಬೇರೆ ಉಪಾಯದಿಂದ ತಿಳಿಯುವೆನೆಂದು ಹೇಳಿ, ಅಕಾರ ಮೊದಲು ಅಕ್ಷರಗಳನ್ನು ಹೇಳಲು ವ ಕಾರ ಬಂದಾಗ ಕಣ್ಣು ಅದೇ ಎಂದು ಸೂಚಿಸಿತು. ಅನಂತರ "ವಕ", "ವಕ್" ಅನ್ನಲು ಅದೇ ಎಂದನು. ಆಗ ಅವಳು ನಿಘಂಟನ್ನು ತಂದು "ವಕೀ" ಇದ್ದ ಪುಟವನ್ನು ಬಿಚ್ಚಿ ಅವನ ಮುಂದಿಟ್ಟು ತನ್ನ ಬೆರಳಿನಿಂದ ಒಂದೊಂದು ಪದವನ್ನಾಗಿ ತೋರಿಸುತ್ತ ಬರಲು, ಅವನ ಕಣ್ಣು "ವಕೀಲ" ಎಂಬ ಪದದ ನಿಂತಿತು. "ಓಹೋ! ವಕೀಲನನ್ನು ಕರೆಸಬೇಕೋ ?"ಎಂದು ಕೇಳಲುಅವನು ಸಮ್ಮತಿಯನ್ನು ಸೂಚಿಸಿದನು.

ತಾತನು ಈ ಸ್ಥಿತಿಗೆ ಬಂದಂದಿನಿಂದ ವಿಮಲೆಯು ಅವನ ಅಭಿಪ್ರಾಯವನ್ನು ತಿಳಿಯಲು ತನ್ನ ಊಹಾಶಕ್ತಿಯನ್ನೆಲ್ಲಾ ಉಪಯೋಗಿಸಿ ಅನೇಕ ಉಪಾಯಗಳನ್ನು ತಿಳಿದುಕೊಂಡು ಅನುಭವವಾಗಿದ್ದುದರಿಂದ ಆವೃದ್ಧನ ಅಭಿಪ್ರಾಯವನ್ನು ಒಂದು ನಿಮಿಷದಲ್ಲೇ ಕಂಡುಹಿಡಿಯುತ್ತಿದ್ದಳು.

"ಅಜ್ಜಾ! ವಕೀಲನನ್ನು ಈಗಲೇ ಕರೆಯಿಸಬೇಕೆನ್ನುತ್ತೀಯೆಂದುಅಪ್ಪನಿಗೆ ಹೇಳಲೋ ?"

"ಹುಂ."

ಆಗ ವಿಮಲೆಯು ಅಪ್ಪನನ್ನೂ ಮಲತಾಯಿಯನ್ನೂ ತಾತನ ಬಳಿಗೆ ಕರೆ ಕಳುಹಿಸಿದಳು. ಹರಿದಾಸನು ವಕೀಲನನ್ನು ಕರೆತರುವುದಕ್ಕೆ ಹೋದನು. ವಲ್ಲಭದೇವನಿಗೆ ಆ ಸಮಾಚಾರವು ತಿಳಿದ ಕೂಡಲೇ ಅವನು ತಂದೆಯನ್ನು ನೋಡಿ "ವಕೀಲನೇತಕ್ಕೆ? ನನಗೆ ನಷ್ಟವಾಗುವುದಕ್ಕೋ" ಎಂದು ಕೇಳಿದನು. ಮುದುಕನ ದೃಷ್ಟಿಯು ಸ್ಥಿರವಾಗಿದ್ದಿತು.

"ಹಾಗಾದರೆ ವಕೀಲನು ಬರಲಿ; ನಿಮ್ಮ ಶರೀರಸ್ಥಿತಿಯನ್ನು ಅವನಿಗೆ ಹೇಳಿ ನಿಮ್ಮ ಪ್ರಯತ್ನವನ್ನು ಭಂಗಪಡಿಸುತ್ತೇನೆ" ಎಂದು ಹೇಳಿ ವಲ್ಲಭದೇವನೂ ಅವನ ಹೆಂಡತಿಯೂ ಅಲ್ಲಿಯೇ ಕುಳಿತುಕೊಂಡರು. ಆಗ ವೃದ್ಧನು ವಿಮಲೆಯನ್ನು ನೋಡಿ ಇಲ್ಲಿಯೇ ಇರು ಎಂದು ಸಂಜ್ಞೆಮಾಡಿದನು.

ಸ್ವಲ್ಪ ಹೊತ್ತಿನೊಳಗೆ ವಕೀಲನು ಬಂದನು. ಒಡನೆಯೇ ವಲ್ಲಭದೇವನು ತಕ್ಕ ಪುರಸ್ಕಾರದಿಂದ ಬರಮಾಡಿಕೊಂಡು

"ಅಯ್ಯಾ ವಕೀಲರೇ! ನಮ್ಮ ತಂದೆ ನಿಮಗೆ ಹೇಳಿ ಕಳುಹಿಸಿದ್ದಾರೆ. ಅವರಿಗೆ ಮಾತನಾಡಲು ನಾಲಿಗೆಯು ಸ್ವಾಧೀನವಿಲ್ಲ; ಅವರ ಅಭಿಪ್ರಾಯವನ್ನು ಕಂಡುಹಿಡಿಯುವುದು ನಮಗೇ ಕಷ್ಟವಾಗಿರುವಾಗ ನಿಮಗೆ ಹೇಗೆ ತಾನೇ ತಿಳಿಯಲಿಕ್ಕಾದೀತು? ಅವರಿಗೆ ನೀವೇನು ಮಾಡಬಲ್ಲಿರಿ?" ಎಂದು ಕೇಳಿದನು.

ವಲ್ಲಭದೇವನು ಹೀಗೆ ಹೇಳುತ್ತಲೆ ವಕೀಲನಿಗೆ ಅನುಮಾನ ಹುಟ್ಟಿ "ನೀವು ಹೇಳುವಂತೆ ನಿಮ್ಮ ಯಜಮಾನರ ಸ್ಥಿತಿಯು ಇದ್ದರೆ ಯಾವ ಕೆಲಸವೂ ನನ್ನಿಂದ ಆಗದು" ಎಂದು ಹೇಳಲು, ವಲ್ಲಭದೇವನ ಮನಸ್ಸು ಹಿಗ್ಗುತ್ತಲಿದ್ದಿತು. ಮುದುಕನು ಸಂಕಟಪಟ್ಟು ವಿಮಲೆಯನ್ನು ನೋಡಿ ನೀನು ಸಹಾಯಮಾಡಬೇಕು ಎಂದು ಕಣ್ಣಿನಿಂದ ಸೂಚಿಸಿದನು. ಆಗ ಅವಳು ವಕೀಲನನ್ನು ಕುರಿತು "ಸ್ವಾಮೀ! ನಾನು ನನ್ನ ತಾತನ ಸಂಗಡ ಮಾತನಾಡುವ ಸಂಜ್ಞೆಗಳು ಕೆಲವುಂಟು. ಅವುಗಳನ್ನು ನಿಮಗೆ ನಿಮಿಷ ಮಾತ್ರದಲ್ಲಿಯೇ ಕಲಿಸಿಕೊಡುವೆನು. ನಿಮಗೆ ನಾನು ಹೇಳುವುದು ನಿಜವೆಂದು ನಂಬುಗೆಯುಂಟಾಗಬೇಕಾದರೆ ಯಾವುದನ್ನಾದರೂ ಹೇಳಿರಿ, ಅವನು ಅದಕ್ಕೆ ಹೇಳುವ ಬದಲನ್ನು ನಾನು ನಿಮಗೆ ತಿಳಿಸುತ್ತೇನೆ" ಎಂದಳು.

"ಅಮ್ಮಾ! ಮೊದಲು ಏನು ಬರೆಯಬೇಕೋ ಅದನ್ನು ನಾನು ತಿಳಿದು

ಕೊಳ್ಳಬೇಕು ; ನಾನು ಬರೆದುದನ್ನು ಅವರು ಒಪ್ಪುವರೋ ಇಲ್ಲವೋ ನನಗೆ ಸ್ಪಷ್ಟವಾಗಿ ತಿಳಿಯಬೇಕು."

"ಸ್ವಾಮೀ! ಅವರ ಮರಣಶಾಸನವನ್ನು ಈಗ ಬರೆಯಬೇಕು. ನೀವು ಬರೆದುದನ್ನು ಅವರು ಒಪ್ಪುವುದೂ ಇಲ್ಲದುದೂ ಎರಡು ಸಂಜ್ಞೆಗಳಿಂದ ನಿಮಗೆ ಗೊತ್ತಾಗುವುದು. ನೀವು ಬರೆದುದನ್ನು ಒಪ್ಪಿಕೊಂಡರೆ ಅವರು ಕಣ್ಣುಗಳನ್ನು ಮುಚ್ಚಿಕೊಳ್ಳುವರು ; ಇಲ್ಲವಾದರೆ ಕಣ್ಣುರೆಪ್ಪೆಯನ್ನು ಪಟಪಟ ಎಂದು ಬಡಿಯುವರು ಎಂದಳು.

ಆಗ ವಕೀಲನು ದೀನನಾಥನನ್ನು ನೋಡಿ "ಯಜಮಾನರೇ! ನಿಮ್ಮ ಮೊಮ್ಮಗಳು ಹೇಳುವುದು ನಿಜವೋ" ಎಂದನು.

ಕಣ್ಣು ಮುಚ್ಚಿತು.

"ನನಗೆ ಹೇಳಿಕಳುಹಿಸಿದವರು ನೀವೆಯೋ ?"

"ಅಹುದು.''

"ಮರಣಶಾಸನವನ್ನು ಬರೆಯಲೋಸುಗವೋ ?"

"ಹುಂ.''

"ಅದನ್ನು ಬರೆಯದೆ ನಾನು ಹೋಗಕೂಡದೋ ?''

ರಪ್ಪೆಯು ಪಟಪಟ ಎಂದು ಬಡಿಯಿತು.

"ಸ್ವಾಮೀ! ಈಗ ತಮ್ಮ ಮನಸ್ಸಿಗೆ ಸಮಾಧಾನವಾಯಿತೋ'' ಎಂದು ವಿಮಲೆಯು ಕೇಳಲು, ವಲ್ಲಭದೇವನು ವಕೀಲನನ್ನು ನೋಡಿ

"ನಮ್ಮಪ್ಪನಿಗೆ ಬಂದಿರುವ ಜಾಡ್ಯದಲ್ಲಿ ಅವನ ಬುದ್ಧಿಯು ಸರಿಯಾಗಿದೆ ಎಂದು ನಂಬುತ್ತೀರೋ'' ಎನ್ನಲು

"ಅವರ ಅಭಿಪ್ರಾಯವು ಇದೇ ಎಂದು ತಿಳಿದರೆ ಸಾಕು'' ಎಂದು ಅವನು ಹೇಳಿದನು.

"ಅದಾಗುವುದೇ ಇಲ್ಲ'' ಎಂದು ಹೇಳಿ ವಲ್ಲಭದೇವನು ಸುಮ್ಮನಾದನು.

ಆಗ ದೀನನಾಥನು ದುಃಖಾಕುಲನಾಗಿ ವಿಮಲೆಯನ್ನು ನೋಡಿದನು. ಆ ಸಮಯದಲ್ಲಿ ತಾನು ಸುಮ್ಮನಿದ್ದರೆ ಕೆಲಸವು ಕೆಟ್ಟುಹೋಗುವುದೆಂದು ತಿಳಿದು, ವಿಮಲೆಯು

"ಸ್ವಾಮಿಾ ವಕೀಲರೇ! ಆ ವಿಷಯಕ್ಕಾಗಿ ತಾವು ಯೋಚಿಸಬೇಕಾದು

ದಿಲ್ಲ. ಅವರ ಅಭಿಪ್ರಾಯವನ್ನು ತಿಳಿಯಲು ಅನೇಕ ಉಪಾಯಗಳನ್ನು ಮಾಡಿಕೊಂಡಿರುವೆನು. ಬೇಕಾದರೆ ತಾವು ನನ್ನ ತಾತನನ್ನು ವಿಚಾರಿಸ ಬಹದು"ಎಂದಳು.

"ಅದು ನಿಶ್ಚಯವೋ" ಎಂದು ವಕೀಲನು ದೀನನಾಥನನ್ನು ಕೇಳಲು ಅವನು ಹುಂ ಎಂದು ಕಣ್ಣು ಮುಚ್ಚಿಕೊಂಡನು.

''ಹಾಗಾದರೆ ನೋಡೋಣ" ಎಂದುಕೊಂಡು ವಕೀಲನು ''ನಾನು ಈಗ ಏನನ್ನು ಬರೆಯಬೇಕು?"ಎಂದು ಮುದುಕನನ್ನು ಕೇಳಿದನು. ಆಗ ವಿಮಲೆಯು ಅಕ್ಷರಗಳನ್ನು ಒಂದೊಂದಾಗಿ ಹೇಳುತ್ತ ಮಕಾರಕ್ಕೆ ಬರಲು ವೃದ್ಧನ ಕಣ್ಣು ಅದೇ ಅಕ್ಷರವೆಂದು ಸೂಚಿಸಿತು. ಅನಂತರ ನಿಘಂಟನ್ನು ತಂದು ಅವನ ಮುಂದಿಟ್ಟು ಮಕಾರಾದಿ ಪದಗಳನ್ನು ಒಂದೊಂದಾಗಿ ಓದಲು ''ಮರಣಶಾಸನ" ಎಂಬ ಪದವು ಬಂದ ಕೂಡಲೇ ಅದೇ ಎಂದು ಸೂಚಿಸಿದನು.

''ಹಾಗಾದರೆ ಈಗ ಮರಣಶಾಸನವನ್ನು ಬರಯಬೇಕೋ'' ಎಂದು ವಕೀಲನು ಕೇಳಿದುದಕ್ಕೆ ವೃದ್ಧನು ಅಹುದೆಂದನು. ವಕೀಲನಿಗೆ ಆಶ್ಚರ್ಯ ವುಂಟಾಗಿ ವಲ್ಲಭದೇವನನ್ನು ಕುರಿತು

''ಸ್ವಾಮಿಾ ! ಇದು ಅತ್ಯಾಶ್ಚರ್ಯಕರವಾದ ಸಂಗತಿ.''

"ಅಹುದು ; ಅವರು ಬರೆಸುವ ಶಾಸನವು ಇನ್ನೂ ಆಶ್ಚರ್ಯಕರವಾಗಿರು ವುದು. ಅವರು ತಮ್ಮ ಆಸ್ತಿಯನ್ನೆಲ್ಲಾ ಬಹುಶಃ ಮೊಮ್ಮಗಳಿಗೆ ಕೊಡ ಬಹುದು. ಅವಳ ಸಹಾಯದಿಂದ ನೀವು ಮರಣಶಾಸನವನ್ನು ಬರೆದರೆ ಅದು ಹೀಗೆ ಸಿದ್ಧಿಯಾದೀತು.''

ದೀನನಾಥನು ಅಲ್ಲ, ಅಲ್ಲ ಎಂದು ಸನ್ನೆಮಾಡಿದನು. ಅದನ್ನು ಕಂಡು ವಲ್ಲಭದೇವನಿಗೆ ಆಶ್ಚರ್ಯವಾಗಿ

"ಏನು ? ಮಿಮುಲೆಗೆ ನೀವು ಆಸ್ತಿಯನ್ನು ಕೊಡುವುದಿಲ್ಲವೇ ?''

''ಇಲ್ಲ.''

ಇದನ್ನೆಲ್ಲ ನೋಡುತ್ತಲಿದ್ದ ವಕೀಲನಿಗೆ ಆ ವೃದ್ಧನು ಶಾಸನವನ್ನು ಹೇಗೆ ಬರೆಸುವನೋ ನೋಡಬೇಕೆಂಬ ಕುತೂಹಲವು ಹೆಚ್ಚಿ, ಶಾಸನಕ್ಕೆ ಎಂಟು ಜನ ರಿಂದ ಸಾಕ್ಷಿಯನ್ನು ಹಾಕಿಸಿದರೆ ಆದೀತು ಎಂದು ಯೋಚಿಸಿಕೊಂಡು, ಎಂಟು

ಜನ ಸಾಕ್ಷಿಗಳನ್ನು ಕರೆಸಿ ಅವರಿಗೆ ಅದುವರೆಗೆ ಅಲ್ಲಿ ನಡೆದುದನ್ನೆಲ್ಲಾ ತಿಳಿಸಿ, ದೀನನಾಥನನ್ನು ನೋಡಿ

''ಸ್ವಾಮೀ ! ತಮಗಿರುವ ಆಸ್ತಿಯು ಎಷ್ಟೆಂದು ತಿಳಿದಿರುವುದೋ?"

ಎಂದು ಕೇಳಿದನು.

"ಹುಂ."

"ಅದೇನು ನೂರರ ಸಂಖ್ಯೆಯೋ ?''

"ಅಲ್ಲ"

"ಸಾವಿರದ ಸಂಖ್ಯೆಯೋ ?"

"ಅಲ್ಲ."

"ಹತ್ತುಸಾವಿರದ ಸಂಖ್ಯೆಯೋ ?"

"ಅಲ್ಲ."

"ಲಕ್ಷದ ಸಂಖ್ಯೆಯೋ ?"

''ಅಹುದು.''

"ಹಾಗಾದರೆ ಲಕ್ಷದ ಸಂಖ್ಯೆಗಳನ್ನು ಕ್ರಮವಾಗಿ ಹೇಳುತ್ತ ಬರುತ್ತೇನೆ ಕೇಳಿ. ನಿಮ್ಮ ಆಸ್ತಿಯ ಸಂಖ್ಯೆಯು ಬಂದಾಗ ಅದನ್ನು ಹೇಳಿ."

"ಹುಂ.''

"ಒಂದು, ಎರಡು'' ಹೀಗೆಯೇ ಎಂಟು ಸಂಖ್ಯೆಗಳವರೆಗೂ ಮುದುಕನು ಅಲ್ಲ, ಅಲ್ಲ ಎಂದಿದ್ದು, ಒಂಭತ್ತನೆಯ ಅಂಕಿಯನ್ನು ಹೇಳಲು ಅಹುದು. ಎಂದನು.

''ಈ ಒಂಭತ್ತು ಲಕ್ಷಗಳೂ ಭೂಸ್ಥಿತಿಯೋ ?"

"ಅಲ್ಲ."

"ಒಡವೆಗಳೋ ?"

"ಅಲ್ಲ."

"ನಾಣ್ಯವಾಗಿಯೇ ಇವೆಯೋ ?"

"ಇಲ್ಲ."

"ಸರ್ಕಾರೀ ಪತ್ರಗಳೋ ?''

"ಹುಂ.''

"ಈ ಪತ್ರಗಳು ಎಲ್ಲಿವೆ" ಎಂದು ವಕೀಲನು ಕೇಳಲು, ದೀನನಾಥನು ಹರಿದಾಸನನ್ನು ನೋಡಿದನು. ಅವನು ಪೆಟ್ಟಿಗೆಯನ್ನು ತಂದು ಕೊಡಲೊ ಎನ್ನಲು, ವೃದ್ಧನು ಹುಂ ಎಂದನು. ಆಗವನು ಒಳಗಿಟ್ಟಿದ್ದ ಕೈಪೆಟ್ಟಿಗೆಯನ್ನೂ ಅದರ ಬೀಗದಕೈಯನ್ನೂ ತಂದು ವಕೀಲನಿಗೆ ಕೊಟ್ಟನು. ಅವನು ಅದನ್ನು ಬಿಚ್ಚಿನೋಡಲು ಅದರಲ್ಲಿ ಲಕ್ಷವರಹಗಳ ಪತ್ರಗಳು ಒಂಭತ್ತು ಇದ್ದುವು. ಅವುಗಳನ್ನು ಅವನು ಸಾಕ್ಷಿಗಳಿಗೆ ತೋರಿಸಿ ಈ ವೃದ್ಧರು ಹೇಳಿದಂತೆ ಒಂಭತ್ತು ಲಕ್ಷವರಹಗಳಿಗೆ ಪತ್ರಗಳು ಸರಿಯಾಗಿವೆ; ಇದರಿಂದ ಇವರ ಬುದ್ಧಿಯು ಸರಿಯಾಗಿದೆ ಎಂದು ಹೇಳುವುದಕ್ಕೆ ಏನೇನೂ ಸಂದೇಹವಿಲ್ಲ ಎಂದನು. ಸಾಕ್ಷಿಗಳೂ ಹಾಗೆಯೇ ಅಭಿಪ್ರಾಯ ಪಟ್ಟರು.

"ಸ್ವಾಮಿ ! ಈ ಆಸ್ತಿಯನ್ನು ಯಾರಿಗೆ ಬರೆಯಬೇಕು ?" ಎಂದು ವಕೀಲನು ಕೇಳಿದುದಕ್ಕೆ ನಾಗಮಣಿಯು

"ಆ ವಿಷಯದಲ್ಲಿ ಏನೂ ಅನುಮಾನವಿಲ್ಲ. ಮೊಮ್ಮಗಳನ್ನು ಕಂಡರೆ ಅವರಿಗೆ ಅತಿಪ್ರೀತಿ, ಅವಳಿಗೇ ಕೊಡುತ್ತಾರೆ" ಎಂದಳು.

ಮುದುಕನು ಇಲ್ಲ, ಎಂದು ಸಂಜ್ಞೆ ಮಾಡಿದನು.

ವಿಮಲೆಯು ಅದನ್ನು ಕೇಳಿ ದುಃಖಿಸಿದಳು. ಆಸ್ತಿಯು ತನಗಿಲ್ಲದೆ ಹೋಯಿತಲ್ಲಾ ಎಂದು ಅವಳಿಗೆ ದುಃಖಬರಲಿಲ್ಲ; ತಾತನಲ್ಲಿ ತಾನು ಏನು ಅಪರಾಧ ಮಾಡಿದೆನೋ ಎಂದು ದುಃಖ ಬಂದಿತು. ಅದನ್ನು ಕಂಡು ದೀನನಾಥನು ಅವಳನ್ನು ಅತಿ ಪ್ರೀತಿಯಿಂದ ನೋಡಲು ವಿಮಲೆಯು ಸಮಾಧಾನಗೊಂಡು

"ತಾತ ! ನಿನ್ನ ಆಸ್ತಿಯನ್ನು ಇತರರಿಗೆ ಕೊಟ್ಟರೂ ಚಿಂತೆಯಿಲ್ಲ; ನಿನಗೆ ನನ್ನ ಮೇಲೆ ಪ್ರೀತಿ ಇದ್ದರೆ ಸಾಕು"

ಅವನು ಹುಂ ಎಂದು ಸೂಚಿಸಿದನು.

ನಾಗಮಣಿಯು ಮಾವನನ್ನು ನೋಡಿ "ಸ್ವಾಮಿ, ವಿಮಲೆಗೆ ನೀವು ಹಣವನ್ನು ಕೊಡದೆ ಇದ್ದ ಪಕ್ಷದಲ್ಲಿ ನಿಮ್ಮ ಮೊಮ್ಮಗ ನಾಗಕುಮಾರನಿಗಾದರೂ ಕೊಡಬಾರದೇ ?"

"ಇಲ್ಲ."

"ಹಾಗಾದರೆ ನಿಮ್ಮ ಮಕ್ಕಳ ಹೆಸರಿಗೆ ಬರೆಸೋಣವೋ ?" ಎಂದು

ವಕೀಲನು ಕೇಳಲು "ಬೇಡ" ಎಂದನು. ಆಗ ಅಲ್ಲಿದ್ದವರೆಲ್ಲರೂ ಒಬ್ಬರ ಮುಖವನ್ನೊಬ್ಬರು ನೋಡುತ್ತ ಆಶ್ಚರ್ಯಪಟ್ಟರು. ಆಗ ವಿಮಲೆಯು ಎದ್ದು "ತಾತ, ಈ ರೀತಿ ಮಾಡಲು ನಾವು ನಿನಗೆ ಏನು ಅಪರಾಧ ಮಾಡಿದೆವು" ಎಂದು ಕೇಳಿದಳು. ಮುದುಕನು ಮಗ ಸೊಸೆಯರನ್ನು ಕ್ರೂರದೃಷ್ಟಿಯಿಂದ ನೋಡಿ, ವಿಮಲೆಯನ್ನು ಪ್ರೀತಿಪೂರ್ವಕ ನೋಡುತ್ತ ಇದ್ದನು.

"ನನ್ನಲ್ಲಿ ನಿನಗೆ ಪ್ರೀತಿಯಿದ್ದರೆ ನಿನ್ನ ಆಸ್ತಿಯನ್ನು ನನಗೇಕೆ ಕೊಡಬಾರದು ?"

ಎಂದು ಕೇಳಲು ತಾತನು ಅವಳ ಕೈಯನ್ನು ಗುರ್ತಿಸಿ ನೋಡಿದನು.

"ನನ್ನ ಕೈಯೇ ?"

"ಅಹುದು."

"ನನ್ನ ಕೈ ಏನು ಅಪರಾಧವನ್ನೂ ಮಾಡಲಿಲ್ಲವಲ್ಲಾ ?"

ಇದೇ ಸಮಯವೆಂದು ವಲ್ಲಭದೇವನು ವಕೀಲನನ್ನೂ ಸಾಕ್ಷಿಗಳನ್ನೂ ನೋಡಿ "ಇದರಿಂದಲೇ ನಮ್ಮಪ್ಪನಿಗೆ ಬುದ್ಧಿಯು ಸರಿಯಾಗಿಲ್ಲವೆಂದು ನೀವು ಸ್ಪಷ್ಟವಾಗಿ ತಿಳಿಯಬಹುದಲ್ಲವೇ" ಎಂದನು.

ವೃದ್ಧನ ಅಭಿಪ್ರಾಯವು ತಿಳಿಯದೆ ಎಲ್ಲರೂ ಯೋಚಿಸುತ್ತಲಿದ್ದರು. ವಿಮಲೆಯೂ ಸ್ವಲ್ಪ ಹೊತ್ತು ಯೋಚಿಸಿ

"ತಾತ ! ಈಗ ನನಗೆ ಗೊತ್ತಾಯಿತು. ನನ್ನ ಪಾಣಿಗ್ರಹಣವಲ್ಲವೇ ನಿನ್ನ ಅಭಿಪ್ರಾಯ"

ಅವನು ಅಹುದೆಂದು ಸೂಚಿಸಿದನು.

"ನಾನು ವೀರಸಿಂಹನನ್ನು ಮದುವೆಯಾಗುವೆನೆಂದು ನನ್ನ ಮೇಲೆ ನಿನಗೆ ಕೋಪವೊ ?"

"ಹುಂ."

"ನಿನಗೆ ಈ ಮದುವೆಯು ಇಷ್ಟವಿಲ್ಲವಾದುದರಿಂದ ಈ ರೀತಿ ಮಾಡಿದೆಯೋ ?"

"ಹುಂ."

"ಈ ಮದುವೆಯ ಏರ್ಪಾಡಿಲ್ಲದಿದ್ದರೆ ಆಸ್ತಿಯನ್ನು ಅವಳಿಗೇ ಕೊಡುತ್ತಲಿದ್ದಿರೋ ?" ಎಂದು ವಕೀಲನು ಕೇಳಲು ವೃದ್ಧನು "ಹುಂ" ಎಂದನು.

"ಒಂದು ವೇಳೆ ಈ ಮದುವೆಯು ನಡೆದರೆ ನಿಮ್ಮ ಆಸ್ತಿಯನ್ನು ನಿಮ್ಮ ಮಕ್ಕಳಿಗೆ ಕೊಡುವ ತಾತ್ಪರ್ಯವುಂಟೋ ?"

"ಇಲ್ಲ."

"ಮೊಮ್ಮಗನಿಗೋ ?"

"ಇಲ್ಲ."

"ಸೊಸೆಗೋ ?"

"ಇಲ್ಲ."

"ಹಾಗಾದರೆ ಧರ್ಮಕೆಲಸಕ್ಕೆ ಬರೆಸುವಿರೋ ?"

"ಹುಂ."

ಆಗ ವಲ್ಲಭದೇವನಿಗೆ ಕೋಪಹತ್ತಿ "ನಮ್ಮ ಅಪ್ಪನಿಗೆ ಹಿಡಿದುದೇ ಹಟ. ನಾನೇನೋ ಮದುವೆಯನ್ನು ಮಾಡುವುದೇ ಸಿದ್ಧ" ಎಂದು ಹೇಳಿ ಹೆಂಡತಿಯೊಡನೆ ಅಲ್ಲಿಂದ ಎದ್ದು ಹೊರಟುಹೋದನು.

ವಲ್ಲಭದೇವನು ಎದ್ದು ಹೋದ ಸುಮಾರು ಅರ್ಧಗಂಟೆಯೊಳಗಾಗಿಯೇ ವಕೀಲನು ದೀನನಾಥನ ಮರಣಶಾಸನವನ್ನು ಬರೆದು ಸಾಕ್ಷಿಗಳ ಮುಂದೆ ಅವನಿಗೆ ಅದನ್ನು ಓದಿಹೇಳಿ ಅವನು ಒಪ್ಪಿದ ಮೇಲೆ ಅವರ ಕೈಬರಹಗಳನ್ನು ತೆಗೆದು, ಇಂತಹ ಶಾಸನಗಳನ್ನು ಕಾಪಿಡುವ ಸರ್ಕಾರದ ಅಧಿಕಾರಿಯ ಬಳಿ ಅದನ್ನು ಕೊಡಲು ಹೊರಟನು.

---

# ನಲವತ್ತಮೂರನೆಯ ಅಧ್ಯಾಯ

## ತಂತಿಯ ಸಮಾಚಾರ

ವಲ್ಲಭದೇವನೂ ನಾಗಮಣಿಯೂ ದೀನನಾಥನ ಕೊಠಡಿಯಿಂದ ಹೊರಗೆ ಬಂದಾಗ ಒಬ್ಬ ಆಳು ಬಂದು, ರಾಜಾಮಲಯಸಿಂಹರು ತಮ್ಮ ದರ್ಶನಕ್ಕಾಗಿ ಕಾದುಕೊಂಡಿದ್ದಾರೆಂದು ತಿಳಿಸಿದನು. ಮುದುಕನು ಹೀಗೆ ಆಸ್ತಿಯನ್ನೆಲ್ಲಾ ಪರಾಧೀನಮಾಡಿಬಿಟ್ಟನಲ್ಲಾ ಎಂದು ಗಂಡಹೆಂಡಿರಿಬ್ಬರೂ ವ್ಯಸನಪಡುತ್ತಿರಲು, ಮುಖಭಾವದಿಂದ ತನ್ನ ದುಃಖವು ರಾಜನಿಗೆ ಎಲ್ಲಿ ಗೊತ್ತಾಗುವುದೋ ಎಂದು ನಾಗಮಣಿಯು ಸಮಾಧಾನಮಾಡಿಕೊಳ್ಳಲು ಸ್ವಲ್ಪಕಾಲ

ತನ್ನ ಕಿರುಮನೆಗೆ ಹೋದಳು. ತನ್ನ ಇಂಗಿತವನ್ನು ಯಾರಿಗೂ ತೋರ್ಪಡಿಸದೆ ಇರಬಲ್ಲೆನೆಂಬ ಧೈರ್ಯದಿಂದ ವಲ್ಲಭದೇವನು ನೆಟ್ಟಗೆ ರಾಜನಿದ್ದೆಡೆಗೆ ಬಂದನು.

ವಲ್ಲಭದೇವನು ತನ್ನ ಮನಸ್ಸಿನ ವ್ಯಾಕುಲವನ್ನು ಅಡಗಿಸಿಕೊಂಡಿದ್ದೇನೆಂದು ತಿಳಿದುಕೊಂಡಿದ್ದರೂ ಅವನ ಮುಖಭಾವವನ್ನು ನೋಡಿ ರಾಜನು

''ಸ್ವಾಮಿ, ತಾವು ಏನೋ ವಿಪರೀತ ಆಲೋಚನೆಯಲ್ಲಿರುವಂತಿದೆ. ತಪ್ಪುಮಾಡಿದವರಾರನ್ನಾದರೂ ಶೂಲಕ್ಕೆ ಹಾಕಿಸುವ ಯೋಚನೆಯೋ ?''

"ರಾಜರೆ! ಈಗ ಅಂತಹುದಾವುದೂ ಇಲ್ಲ. ನನ್ನ ದುರದೃಷ್ಟದಿಂದಲೂ ಮುದುಕನ ಹುಚ್ಚು ಹಟದಿಂದಲೂ ನಾನೇ ಬಲಿಯಾಗಿ ಹೋಗಿದೇನೆ''

"ಏನು ಸಂದರ್ಭ ? ಯಾವುದಾದರೂ ವಿಪತ್ತು ಸಂಭವಿಸಿತೋ ?"

"ಏನೋ ಹಣದ ನಷ್ಟ, ಅಲ್ಪವಿಚಾರ; ಪ್ರಸ್ತಾಪಕ್ಕೆ ಯೋಗ್ಯವಲ್ಲ."

"ನಿಜ; ನೀವು ಶ್ರೀಮಂತರು; ಮೇಲೂ ತತ್ವಜ್ಞರು. ಈ ಹಣ ಹೋದರೆ ನಿಮಗೆ ಲಕ್ಷ್ಯವೇ ?"

"ಒಂಭತ್ತು ಲಕ್ಷ ವರಹಗಳು ಕೈಬಿಟ್ಟು ಹೋದರೆ ಸಂಕಟವಾಗಬಹುದಾದರೂ ಹಣ ಹೋದುದಕ್ಕಾಗಿ ನನಗಿಷ್ಟು ಚಿಂತೆಯಿಲ್ಲ. ಮುದುಕನ ಅರುಳು ಮರುಳು ತನದಿಂದ ನನ್ನ ಮಗುವಿಗೂ ಹಠಾತ್ತಾಗಿ ಈ ಗತಿ ಬಂದಿತಲ್ಲಾ ಎಂದು ಸಂಕಟಪಡಬೇಕಾಗಿದೆ."

"ಏನು ? ಒಂಭತ್ತುಲಕ್ಷವೇ ? ಈ ರಗಳೆಗೆ ಯಾರು ಕಾರಣ ?"

"ನನ್ನ ತಂದೆ."

"ದೀನನಾಥರೆ ? ಅವರ ಇಂದ್ರಿಯಪಾಟವವೆಲ್ಲಾ ಉಡುಗಿ ಹೋಗಿದೆ ಎಂದು ಹೇಳಿದ್ದಿರಲ್ಲಾ ?''

"ಮಾತಾಡುವುದಕ್ಕೂ ಓಡಾಡುವುದಕ್ಕೂ ಏನೇನೂ ಆಗದೆ ಇದ್ದರೂ ಅವನ ಬುದ್ಧಿಶಕ್ತಿಯೂ ಮನೋವ್ಯಾಪಾರವೂ ಪಟುವಾಗಿ ಪೂರ್ವದಂತೆಯೇ ಇದೆ. ಈಗತಾನೇ ನಾನು ಅವನ ಕೊಟ್ಟಡಿಯಿಂದ ಬಂದೆನು. ಅವನು ತನ್ನ ಮರಣಶಾಸನವನ್ನು ಬರೆಸುತ್ತಲಿದ್ದಾನೆ."

''ಹಾಗಾದರೆ ಅವರು ಮಾತನಾಡಿರಬೇಕಲ್ಲವೆ ?''

"ಅದಕ್ಕಿಂತ ಉತ್ತಮವಾಗಿ ಮಾಡಿದ್ದಾನೆ. ತನ್ನ ಇಂಗಿತವನ್ನು ವಕೀಲನಿಗೆ ತಿಳಿಸಿಬಿಟ್ಟಿದ್ದಾನೆ."

"ಅದು ಹೇಗೆ ಸಾಧ್ಯ ?''

''ಅವನ ಕಣ್ಣುಗಳಿಂದ. ಅವುಗಳಿಂದಲೇ ಸರ್ವಶಕ್ತಿಯನ್ನೂ ತೋರಿಸುತ್ತಾನೆ; ಅವುಗಳಿಂದಲೇ ಆಗದವರಿಗೆ ತೀವ್ರವಾದ ವೇದನೆಯನ್ನುಂಟುಮಾಡುತ್ತಾನೆ'' ಎಂದು ವಲ್ಲಭದೇವನು ಹೇಳುತ್ತಿದ್ದಾಗ ನಾಗಮಣಿ ಬಂದು ಅಲ್ಲಿ ಕುಳಿತಳು. ಕೂಡಲೇ ರಾಜನು

''ಅಮ್ಮಾ, ಇದೇನು ? ನಿಮ್ಮ ಯಜಮಾನರು ತಮಗೆ ಅಗ್ರಾಹ್ಯವಾದ ದುರದೃಷ್ಟವೆಂದು ಹೇಳುತ್ತಲಿದ್ದಾರೆ" ಎನ್ನಲು, ವಲ್ಲಭದೇವನು

"ಅಗ್ರಾಹ್ಯವೆಂಬುದು ಸರಿಯಲ್ಲ" ಭುಜವನ್ನು ಕುಣಿಸುತ್ತ "ಮುದುಕನ ಮೂರ್ಖತನ'' ಎಂದನು.

''ಅಮ್ಮಾ! ಮುದುಕರ ಉದ್ದೇಶವನ್ನು ತಿದ್ದುವುದಕ್ಕೆ ಆಗುವುದಿಲ್ಲವೋ ?''

''ಆಗಬಹುದು; ಅದು ನಮ್ಮ ಯಜಮಾನರ ಕೈಯಲ್ಲೇ ಇದೆ. ವಿಮಲೆಗೆ ವಿರೋಧವಾಗಿರುವ ಶಾಸನವನ್ನು ಅವಳಿಗೆ ಅನುಕೂಲವಾಗುವಂತೆ ಮಾಡಬಹುದು''

''ನಾಗಮಣಿ, ಈ ಮನೆಗೆ ನಾನೇ ಯಜಮಾನನೆಂಬ ಭಾವನೆಯು ನನಗೆಂದಿಗೂ ಬಂದಿಲ್ಲ. ನನ್ನ ಮಾತಿಗೆ ಹುಬ್ಬುಸನ್ನೆಯಿಂದ ಲೋಕವನ್ನು ನಾನು ಆಳಬೇಕೆಂಬ ಅಭಿಲಾಷೆಯೂ ನನಗಿಲ್ಲ. ಆದರೂ ನನ್ನ ಮಾತಿಗೆ ನನ್ನ ಮನೆಯಲ್ಲಿ ಗೌರವವಿರಬೇಕು. ಬಹುದಿನಗಳಿಂದ ಇರುವ ನನ್ನ ಸಂಕಲ್ಪವು ವೃದ್ಧನ ಮೂರ್ಖತನದಿಂದಲೂ ಕೂಸಿನ ಚಪಲಚಿತ್ತದಿಂದಲೂ ಭಂಗಪಡುವುದಕ್ಕೆ ಎಂದಿಗೂ ಅವಕಾಶಕೊಡಲೊಲ್ಲೆನು. ವೀರಸಿಂಹನಿಗೆ ವಿಮಲೆಯನ್ನು ಕೊಟ್ಟು ಮದುವೆ ಮಾಡುವುದು ಪ್ರಶಸ್ತವಾದ ಸಂಬಂಧವೆಂದು ತೋರಿರುವುದರಿಂದ ನನಗೆ ಎಷ್ಟು ನಷ್ಟವಾದರೂ ಕಷ್ಟವಾದರೂ ಸರಿಯೆ, ಮದುವೆಯನ್ನು ಮಾಡದೆ ಬೇರೆ ಇರುವುದಿಲ್ಲ'' ಎಂದು ಹೇಳಿ ವಲ್ಲಭದೇವನು ರಾಜನನ್ನು ನೋಡಿದನು.

''ಏನು! ಮೊಮ್ಮಗಳು ವೀರಸಿಂಹನನ್ನು ಮದುವೆಯಾಗುತ್ತಾಳೆಂದು ನಿಮ್ಮ ತಂದೆಯವರು ತಮ್ಮ ಆಸ್ತಿಯನ್ನು ಅವಳಿಗೆ ಕೊಡದೆ ಪರಾಧೀನಮಾಡಿದರೋ ?''

"ಸ್ವಾಮೀ ! ಅಹುದು"

"ವೀರಸಿಂಹನು ವೀರಪ್ರಚಂಡನ ಮಗನಲ್ಲವೇ ?"

"ಹುಂ"

"ಅವನು, ಯೋಗ್ಯ."

"ಅವಕ್ಕಾಗಿಯೇ ನಾನು ನನ್ನ ಮಗಳನ್ನು ಅವನಿಗೆ ಮದುವೆಮಾಡಿಕೊ ಬೇಕೆಂದಿರುವುದು. ನಮ್ಮಪ್ಪನ ಮೂರ್ಖತನಕ್ಕೆ ಏನು ಮಾಡಲಿ ?"

"ಅವನ ತಂದೆಗೂ ನಿಮ್ಮ ತಂದೆಗೂ ಏನಾದರೂ ದ್ವೇಷವೋ ?"

"ಅದು ಯಾರಿಗೆ ಗೊತ್ತು?"

"ರಾಜಕೀಯ ವಿಚಾರದಲ್ಲಿ ಅವರಿಬ್ಬರಿಗೂ ವಿರೋಧವಾದ ಅಭಿಪ್ರಾಯ ಗಳು ಇದ್ದಿದ್ದರೂ ಇರಬಹುದು."

"ವೀರಪ್ರಚಂಡನು ಚಕ್ರವರ್ತಿಯ ಬಳಿ ಕೆಲಸ ಮಾಡುತ್ತಲಿದ್ದಾಗಲೂ ಈಗಿನ ರಾಜನಲ್ಲಿ ಅಭಿಮಾನವಾಗಿದ್ದನು. ಜಯಸಿಂಹರಾಜನೂ ಅವನಲ್ಲಿ ಪೂರ್ಣಾಭಿಮಾನವನ್ನಿಟ್ಟಿದ್ದನು."

"ರಾಜ್ಯಪರಿವರ್ತನದಲ್ಲಿ ನಿರತನಾದ ಯಾವನೋ ಒಬ್ಬನಿಂದ ಅವನು ಹತನಾಗಲಿಲ್ಲವೇ ?" ಎಂದು ಮಲಯಸಿಂಹನು ಕೇಳಲು, ವಲ್ಲಭದೇವನು ಗಾಬರಿಪಟ್ಟು ಹೀಗೆ ಕೇಳುವುದಕ್ಕೆ ಮಲಯಸಿಂಹನಿಗೆ ಏನು ಅಭಿಪ್ರಾಯವಿರ ಬಹುದೆಂದು ತಿಳಿಯಲು ಅವನ ಮುಖವನ್ನು ನೋಡಿದನು. ರಾಜನು ತನ್ನ ನಿಜಾಭಿಪ್ರಾಯಗಳನ್ನು ಮುಚ್ಚಿಕೊಳ್ಳುವುದರಲ್ಲಿ ನಿಸ್ಸೀಮನಾಗಿದ್ದುದರಿಂದ ವಲ್ಲಭದೇವನ ಆ ಪ್ರಯತ್ನವು ಸಾಗಲಿಲ್ಲ.

"ಆದರೇನು ? ಮಗನು ಯೋಗ್ಯನಾಗಿದ್ದಾನೆ. ಇದಲ್ಲದೆ ಮನುಷ್ಯ ನಿಗೆ ದೀರ್ಘದ್ವೇಷವು ಕೂಡದು" ಎಂದು ವಲ್ಲಭದೇವನು ಹೇಳಲು, ರಾಜನು,

"ಸ್ವಾಮಿ! ತಾವು ಹೇಳುವುದೇನೋ ನ್ಯಾಯ : ಆದರೆ ಲೋಕವು ಹಾಗಲ್ಲ. ಈಗ ತಮ್ಮ ಅಧಿಕಾರದಲ್ಲಿ ಜನಗಳನ್ನು ಯಾವಜ್ಜೀವವೂ ಸೆರೆಮನೆ ಯಲ್ಲಿ ಇಡಬೇಕಾಗುವ ಸಂದರ್ಭ ಬರುವುದು. ಹಾಗೆ ಶಿಕ್ಷೆಯು ವಿಧಿಸಲ್ಪಟ್ಟ ವನಿಗೆ ನ್ಯಾಯಾನ್ಯಾಯದ ತತ್ವವನ್ನು ನಾವು ಬೋಧಿಸಿ, ನೀನು ದೀರ್ಘದ್ವೇಷ ಮಾಡಕೂಡದು ಎಂದರೆ ಅವನು ಒಪ್ಪುವನೋ ? ಅದು ಹೋಗಲಿ. ನಿಮ ಲಗೆ ತನ್ನ ಆಸ್ತಿಯನ್ನು ಕೊಡಲು ಇಷ್ಟವಿಲ್ಲದಿದ್ದರೆ ಈ ಮುದ್ದು ನಾಗಕುಮಾ

ರನಿಗೆ ಏಕೆ ಕೊಡಬಾರದು ?" ಎಂದು ನಾಗಮಣಿಯು ಮುಖವನ್ನು ನೋಡಿದನು.

"ಸ್ವಾಮಿಾ ರಾಜರೇ, ತಾವು ಹೇಳುವುದು ನ್ಯಾಯ ; ಅವರಿಗೆ ವಿಮಲೆಯು ಹೇಗೆ ಮೊಮ್ಮಗಳೋ, ಹಾಗೆಯೇ ನಾಗಕುಮಾರನೂ ಮೊಮ್ಮಗನು. ಇದಲ್ಲದೆ ವಿಮಲೆಗೆ ಅವಳ ತಾಯಿಯ ಆಸ್ತಿಯು ಬೇಕಾದಷ್ಟು ಇದೆ. ನಾಗಕುಮಾರನಿಗೆ ಅಂತಹುದೇನೂ ಇಲ್ಲ. ಹೀಗಿರುವಲ್ಲಿ ಇವನಿಗೇಕೆ ಕೊಡಬಾರದು ?" ಎಂದ ನಾಗಮಣಿಯ ಮಾತಿಗೆ ರಾಜನು ಯಾವ ಮಾತನ್ನೂ ಆಡದೆ ಸುಮ್ಮನಿದ್ದನು. ಆಗ ವಲ್ಲಭದೇವನು ರಾಜನನ್ನು ನೋಡಿ,

"ಸ್ವಾಮಿಾ! ನಮ್ಮ ಸಂಸಾರದಕೋಟಲೆಗಳನ್ನು ನಿಮ್ಮಲ್ಲಿ ಹೇಳಿಕೊಂಡು ನಿಮಗೆ ಬೇಸರವನ್ನು ಉಂಟುಮಾಡುವುದಿಲ್ಲ. ನಮ್ಮ ತಂದೆಯ ಆಸ್ತಿಯು ಧರ್ಮಕೆಲಸಕ್ಕೆ ಹೋಗುವುದೇನೋ ನಿಜ. ನನಗೆ ಬರತಕ್ಕ ಆಸ್ತಿಯನ್ನು ಅನ್ಯಾಯವಾಗಿ ನನಗೆ ತಪ್ಪಿಸಿರುವನು. ಆದರೂ ನಾನು ನ್ಯಾಯವಾಗಿಯೂ ಧರ್ಮವಾಗಿಯೂ ನಡೆದುಕೊಂಡಿದ್ದೇನೆಂದು ತೃಪ್ತನಾಗಿದ್ದೇನೆ. ಒಂಭತ್ತು ಲಕ್ಷ ವರಹಗಳ ಆಸ್ತಿಯನ್ನು ಕೊಡುತ್ತೇನೆಂದು ವೀರಸಿಂಹನಿಗೆ ಮಾತು ಕೊಟ್ಟಿರುತ್ತೇನೆ. ನನಗೆ ಎಷ್ಟೇ ಕಷ್ಟವಾಗಲಿ, ಅದನ್ನು ಬೇರೆ ಸಲ್ಲಿಸದೆ ಇರುವುದಿಲ್ಲ" ಎಂದನು. ಆಗ ನಾಗಮಣಿಯು ಗಂಡನನ್ನು ನೋಡಿ,

"ವೀರಸಿಂಹನಿಗೆ ಈ ಸಂಗತಿಯನ್ನು ತಿಳಿಸಿದರೆ ಅವನು ತಾನಾಗಿಯೇ ಈ ಮದುವೆಯು ಬೇಡವೆಂದು ಹೇಳಾನು"

"ಹಾಗೆ ಮಾಡುವುದು ನ್ಯಾಯವಲ್ಲ. ಗೊತ್ತಾಗಿದ್ದ ಮದುವೆಯು ತಪ್ಪಿಹೋದರೆ ಅವಮಾನ."

"ಸ್ವಾಮಿಾ ವಲ್ಲಭದೇವರೇ, ತಾವು ಹಾಗೆ ಮಾಡದೆ ಮದುವೆ ಮಾಡಿದರೆ ಲೋಕವು ಮೆಚ್ಚುವುದು ; ನಿಮ್ಮ ಸ್ನೇಹಿತರು ನಿಮ್ಮನ್ನು ಹೊಗಳುವರು ; ಎಷ್ಟು ಕಷ್ಟಪಟ್ಟರೂ ಕೊಟ್ಟ ಮಾತಿಗೆ ತಪ್ಪದೆ ಮಾಡಬೇಕಾದುದನ್ನು ಹಿಂತೆಗೆಯದೆ ಮಾಡುವವರ ಸಂಬಂಧ ಸಿಕ್ಕಿತಲ್ಲಾ ಎಂದು ವೀರಸಿಂಹನೂ ಹಿಗ್ಗುವನು" ಎಂದು ಹೇಳಿ ರಾಜನು ಎದ್ದನು.

"ಏನು ರಾಜರೇ, ಆಗಲೇ ಎದ್ದಿರಿ ?" ಎಂದು ನಾಗಮಣಿಯು ಕೇಳಲು

"ಕೆಲಸವಿದೆ, ಹೋಗಬೇಕು. ಶನಿವಾರದ ಊಟಕ್ಕೆ ಬರಲು ಎಲ್ಲಿಯಾ

ದರೂ ಮರೆತುಹೋಗುತ್ತೀರೋ ಎಂದು ಜ್ಞಾಪಿಸಲು ಬಂದೆನು"

"ನಮ್ಮ ಯಜಮಾನರು ಬರುವುದಾಗಿ ಮಾತುಕೊಟ್ಟಿದ್ದಾರೆ ; ನಷ್ಟ ವಾಗುವ ಸಂದರ್ಭದಲ್ಲೇ ಕೊಟ್ಟಮಾತನ್ನು ತಪ್ಪದವರು ಲಾಭ ಬರುವಾಗ ಎಂದಾದರೂ ತಪ್ಪುವರೇ ?"

ಆಗ ವಲ್ಲಭದೇವನು "ಭೋಜನಕ್ಕೆ ಎಲ್ಲಿ ಏರ್ಪಾಡು ?" ಎಂದು ಕೇಳಲು,

"ಸಂಪಿಗೆಯ ವನದ ಮನೆಯಲ್ಲಿ."

ಇದನ್ನು ಕೇಳಿದ ವಲ್ಲಭದೇವನಿಗೆ ಕಳವಳಹುಟ್ಟಿ, "ಓಹೋ ! ಶಾಂತ ವೀರರ ಮನೆಯನ್ನು ತೆಗೆದುಕೊಂಡವರು ನೀವೆಯೋ ? ಆ ಮನೆಯು ಅನುಕೂಲವಾಗಿಲ್ಲವಲ್ಲ, ಅದನ್ನು ಏತಕ್ಕೆ ತೆಗೆದಿರಿ ?" ಎಂದು ಕೇಳಿದನು. ಆಗ ನಾಗಮಣಿಯು,

"ಮನೆಯು ಚನ್ನಾಗಿದೆ ; ಈ ಬಾಡಿಗೆ ಮನೆಗಿಂತ ಅದು ಉತ್ತಮ ವೆಂದು ನಾನು ಎಷ್ಟೋ ಸಾರಿ ಹೇಳಿದೆ, ಅಲ್ಲಿ ವಾಸ ಮಾಡಲು ನಮ್ಮ ಯಜಮಾನರಿಗೆ ಇಷ್ಟವಿಲ್ಲ."

"ಅದು ಏಕೆ ?" ಎಂದು ರಾಜನು ಕೇಳಲು ವಲ್ಲಭದೇವನು,

"ನನಗೆ ಇಷ್ಟವಿಲ್ಲ, ಅಷ್ಟೇ."

"ಆ ದುರಭಿಮಾನಕ್ಕಾಗಿ ಎಲ್ಲಿಯಾದರೂ ಭೋಜನಕ್ಕೆ ಬರದೆ ನಿಂತೀರಿ."

"ಆಗಲಿ ನೋಡೋಣ."

"ನೋಡೋಣ ಗೀಡೋಣ ಎನ್ನಬೇಡಿರಿ ; ಅಗತ್ಯವಾಗಿ ಬರಬೇಕು. ಹಾಗೆ ತಾವು ಬಾರದಿದ್ದರೆ ಇಷ್ಟು ವರುಷಗಳಿಂದ ಒಬ್ಬರೂ ಬಾರದೆ ಇದ್ದ ಆ ಮನೆಯಲ್ಲಿ ಏನೋ ಭಯಂಕರವಾದ ಕೃತ್ಯವೋ ಅಚಾತುರ್ಯವೋ ನಡೆದಿರ ಬೇಕೆಂದು"—ಎಂದು ಮಲಯಸಿಂಹನು ಮುಗಿಸುವುದರೊಳಗಾಗಿ ವಲ್ಲಭ ದೇವನು,

"ರಾಜರೇ ! ಬರುತ್ತೇನೆ, ತಪ್ಪುವುದಿಲ್ಲ, ಹೋಗಿಬನ್ನಿರಿ" ಎಂದು ಹೇಳಿ ಹೊರಟುಹೋದನು.

ಆಗ ನಾಗಮಣಿಯು "ರಾಜರೇ ! ಎಲ್ಲಿಯೋ ಕೆಲಸವಿದೆ, ಹೋಗ

ಬೇಕು ಎಂದಿರಲ್ಲಾ, ಏನು ಕೆಲಸ ?"

"ಅದೇ ! ಅದನ್ನು ಹೇಳಿದರೆ ನೀವು ನಗುತ್ತೀರಿ."

''ಇಲ್ಲ, ಹೇಳಿ."

"ಕೆಲವು ದಿನಗಳಿಂದ ಒಂದು ಸಂಗತಿಯನ್ನು ಆಲೋಚನೆ ಮಾಡುತ್ತಿದ್ದೇನೆ. ಅದು ಹರಿಯಲಿಲ್ಲ. ಅದಕ್ಕಾಗಿ ಎಲ್ಲಾದರೂ ಒಂದು ಕಡೆ ಹೋಗಿ ನೋಡಿ ಬರಬೇಕೆಂಬ ಆಸೆ.''

''ಅದೇನು ?"

''ತಂತಿಯ ವಿಷಯ."

"ತಂತಿಯ ವಿಷಯವೇ ?" ಎಂದು ನಾಗಮಣಿಯು ನಕ್ಕಳು.

"ಅಮ್ಮಾ ! ನೀವು ನಗುತ್ತೀರೆಂದು ನಾನು ಮೊದಲೇ ಹೇಳಲಿಲ್ಲವೇ ? ಇಂತಹ ದೊಡ್ಡ ಪಟ್ಟಣಗಳಲ್ಲಿರುವ ನಿಮ್ಮಂಥವರಿಗೆ ಅದು ಸಾಧಾರಣವಾಗಿ ತೋರುವುದು ; ನನಗೆ ಹಾಗಲ್ಲ. ಇನ್ನು ಹೊತ್ತಾಯಿತು, ಹೋಗಿಬರುತ್ತೇನೆ" ಎಂದು ಮಲಯಸಿಂಹನು ಹೊರಟನು. ಅವನು ಬೀದಿಯ ಬಾಗಿಲಿಗೆ ಬರುವುದಕ್ಕೆ ಸರಿಯಾಗಿ ವಕೀಲನೂ ಸಾಕ್ಷಿಗಳೂ ತಮ್ಮ ಕೆಲಸವನ್ನು ಮುಗಿಸಿಕೊಂಡು ದೀನನಾಥನ ಸಮಾಚಾರಗಳನ್ನು ಹೇಳಿಕೊಂಡು ಆಶ್ಚರ್ಯಪಡುತ್ತ ಬಂದರು.

ಮಾರನೆಯ ದಿನ ಬೆಳಿಗ್ಗೆ ರಾಜನು ಆ ಪಟ್ಟಣದ ಉತ್ತರಭಾಗದಲ್ಲಿ ಸುಮಾರು ಹನ್ನೆರಡು ಮೈಲಿಗಳ ದೂರದಲ್ಲಿ ಒಂದು ಗುಡ್ಡದ ಮೇಲಿದ್ದ ತಂತಿಯ ಮನೆಯನ್ನು ನೋಡುವುದಕ್ಕೆ ಹೋದನು. ಗುಡ್ಡದ ಬಳಿ ರಾಜನು ಕುದುರೆಯಿಂದಿಳಿದು ಗುಡ್ಡವನ್ನು ಹತ್ತಿದನು. ತುದಿಯನ್ನು ಮುಟ್ಟಿದಾಗ ಫಲಪುಷ್ಪ ಭರಿತವಾದ ಒಂದು ತೋಟವು ಕಾಣಿಸಿತು. ಒಳಗೆ ಹೋಗಲು ದಾರಿಯನ್ನು ಹುಡುಕುತ್ತ ಒಂದು ಬಾಗಿಲನ್ನು ನೋಡಿ ಅದನ್ನು ತೆರೆದು ತೋಟವನ್ನು ಹೊಕ್ಕನು. ಅದು ವನಲಕ್ಷ್ಮಿಯ ನಿವಾಸಸ್ಥಾನವೋ ಎಂಬಂತೆ ಕಾಣುತ್ತಿದ್ದಿತು. "ಅಹಾ ! ಈ ತಂತಿಯ ಮನೆಯವನಿಗೆ ತೋಟವೆಂದರೆ ಪ್ರಾಣವೆಂದು ತೋರುತ್ತದೆ. ಇಲ್ಲದಿದ್ದರೆ ತೋಟವನ್ನು ಇಷ್ಟು ಮನೋಹರವಾಗಿಇಟ್ಟಿರಲಾರ. ಈ ಆಸೆಗೆ ತಕ್ಕಂತೆಯೇ ಇವನಿಗೆ ಹಣದ ಆಸೆಯೂ ಇದ್ದರೆ ನನ್ನ ಕೆಲಸ ಕೈಗೂಡುವುದು'' ಎಂದು ಯೋಚಿಸುತ್ತ ಹೋಗುತ್ತಿರಲು ಕಾಲಿಗೆ ಅಡ್ಡಲಾಗಿ ಯಾವುದೋ ಸಿಕ್ಕಿತು. ರಾಜನ ಕಾಲು ತಗಲಿದ ಕೂಡಲೆ

ಆ ವಸ್ತುವು ಮೇಲಕ್ಕೆ ಎದ್ದು,

"ಸ್ವಾಮಿ, ಕ್ಷಮಿಸಬೇಕು. ಈಗ ತಾನೇ ತಂತಿಯ ಮನೆಯಿಂದ ಬಂದೆ. ಇಷ್ಟು ಹೊತ್ತೂ ಇಲ್ಲಿಯೇ ಇದ್ದೆ" ಎಂದು ರಾಜನ ಇದಿರಿಗೆ ಐವತ್ತು ವರ್ಷದವನೊಬ್ಬನು ನಿಂತನು.

"ಅಪ್ಪಾ! ನೀನು ಮಾಡುತ್ತಲಿದ್ದ ಕೆಲಸವನ್ನು ಮೊದಲು ಪೂರೈಸು, ಆಮೇಲೆ ಮಾತಾಡೋಣ."

"ಸ್ವಾಮಿ! ಎಲ್ಲವೂ ಮುಗಿಯಿತು, ನೆನ್ನೆ ರಾತ್ರಿ ಹದಿಮೂರು ಹಣ್ಣು ಗಳನ್ನು ಲೆಕ್ಕ ಮಾಡಿದ್ದೆ ; ಇಲಿಗಳು ಮೂರು ಹಣ್ಣನ್ನು ತಿಂದುಬಿಟ್ಟಂತೆ ತೋರುತ್ತದೆ. ಅನ್ಯಾಯವಾಗಿ ಮೂರು ಹಣ್ಣುಗಳು ಹೋದುವು. ತಾವು ಯಾರು, ತಂತಿಯ ಅಧಿಕಾರಿಯೋ ?''

''ನಾನು ಅಧಿಕಾರಿಯಲ್ಲ, ಒಬ್ಬ ಪ್ರಯಾಣಸ್ಥ. ತಂತಿಯನ್ನು ನೋಡ ಬೇಕೆಂದು ಬಂದೆನು ; ನನ್ನಿಂದ ನಿನಗೆ ಕಾಲವು ವ್ಯರ್ಥವಾಗುವುದಲ್ಲಾ ಎಂದು ಯೋಚಿಸುತ್ತಲಿದ್ದೇನೆ.''

"ಸ್ವಾಮಿ! ಸರ್ಕಾರದ ಸಂಬಳ ತಿಂದಮೇಲೆ ವ್ಯರ್ಥ ಕಾಲಹರಣ ಮಾಡಕೂಡದು. ಆದರೆ ಈಗ ವಿರಾಮಕಾಲವಾದುದರಿಂದ ಈ ತೋಟದ ಕೆಲಸಕ್ಕೆ ಬಂದೆನು'' ಎಂದು ಹೇಳಿ ಅಲ್ಲಿ ಇಟ್ಟಿದ್ದ ಛಾಯಾ ಯಂತ್ರವನ್ನು ನೋಡಿ,

"ಇನ್ನೂ ಇಪ್ಪತ್ತು ನಿಮಿಷಗಳ ಕಾಲ ವಿರಾಮವಿದೆ. ಸ್ವಾಮಿ, ಇಲಿಗಳು ಹಣ್ಣುಗಳನ್ನು ತಿನ್ನುತ್ತವೆಯಲ್ಲವೇ ?"

"ಅದಕ್ಕೇನು ಸಂದೇಹ ?''

''ಅನ್ಯಾಯ. ಈ ಹಣ್ಣನ್ನು ನೋಡಿ ; ಇದರಂತೆ ಎಲ್ಲಿಯೂ ಸಿಕ್ಕದು. ನಾನು ಕಷ್ಟಪಟ್ಟು ಬೆಳೆಯುವುದೂ ಅವು ತಿನ್ನುವುದೂ ಆಗಿದೆ. ಸ್ವಾಮೀ, ರಾತ್ರಿಯೆಲ್ಲಾ ನಿದ್ದೆಗೆಟ್ಟರೂ ಚಿಂತೆಯಿಲ್ಲ, ಇನ್ನು ಮೇಲೆ ಅವುಗಳನ್ನು ತಿನ್ನ ದಂತೆ ನೋಡಿಕೊಳ್ಳಬೇಕು.''

ಅದನ್ನು ಕೇಳಿ ಮಲಯಸಿಂಹನು ನಕ್ಕು, ಪ್ರತಿಯೊಬ್ಬನಿಗೂ ಒಂದೊಂದ ರಲ್ಲಿ ಆಸೆ. ಇವನಿಗೆ ತೋಟದಲ್ಲಿ ಆಸೆ ಎಂದು ಮನದಲ್ಲಿ ಯೋಚಿಸಿಕೊಂಡು ದೋರೆ ಹಣ್ಣುಗಳಿಗೆ ಮರೆಯಾಗಿದ್ದ ಎಲೆಗಳನ್ನು ಕುಯ್ದು, ಅವುಗಳ ಮೇಲೆ

ಬಿಸಿಲು ಬೀಳುವಂತೆ ಮಾಡಿ ತೋಟಗಾರನಿಗೆ ಸಂತೋಷವನ್ನುಂಟು ಮಾಡಿದನು.

"ಸ್ವಾಮಿ, ತಾವು ತಂತಿಯನ್ನು ನೋಡುವುದಕ್ಕೆ ಬಂದಿರೋ ?''

"ಅಪ್ಪಾ ! ಸರ್ಕಾರದ ಕಟ್ಟಳೆಗೆ ವಿರೋಧವಿಲ್ಲದಿದ್ದರೆ ಅದನ್ನು ನೋಡ ಬೇಕೆಂಬ ಆಸೆಯುಂಟು."

"ಸ್ವಾಮಿ ! ನಮ್ಮ ಸಂಕೇತಗಳು ಇತರರಿಗೆ ಗೊತ್ತಾಗುವುದಿಲ್ಲ. ಆದುದ ರಿಂದ ಅದನ್ನು ಯಾರು ಬೇಕಾದರೂ ನೋಡಬಹುದು."

''ನಿನಗೆ ಕೂಡ ಎಲ್ಲಾ ಸಂಕೇತಗಳೂ ಗೊತ್ತಿಲ್ಲವೆಂದು ಕೇಳಿದ್ದೆ ; ಅದು ನಿಜವೋ ?"

"ಸ್ವಾಮಿ ! ನಿಜ. ನಮಗೆ ತಿಳಿಯದೆ ಇರುವುದೇ ಒಳ್ಳೆಯದು."

"ಅದು ಹೇಗೆ ?"

"ನಮಗೆ ಸಮಾಚಾರ ತಿಳಿಯದಿದ್ದರೆ ನಮ್ಮ ಉತ್ತರವಾದವಿರುವುದಿಲ್ಲ. ನಾನು ಒಂದು ಯಂತ್ರದಂತೆ ಈ ಕಡೆ ಬಂದ ಸಂಕೇತವನ್ನು ಆ ಕಡೆ ಕಳುಹಿ ದರೆ ನನ್ನ ಕೆಲಸವು ಮುಗಿಯುವುದು" ಎಂದು ಛಾಯಾಯಂತ್ರವನ್ನು ನೋಡಿ

"ಸ್ವಾಮಿ, ಇನ್ನು ಕೆಲಸಕ್ಕೆ ಹೋಗಬೇಕು. ತಾವು ಬಿಜಯ ಮಾಡುವಿರೋ ?"

"ಇಗೋ ! ನಿನ್ನ ಜತೆಯಲ್ಲಿಯೇ ಬರುತ್ತೇನೆ" ಎಂದು ಮಲಯ ಸಿಂಹನು ಅವನ ಹಿಂದೆ ತಂತಿ ಮನೆಗೆ ಹೋದನು.

''ಅಪ್ಪಾ, ಈ ತಂತಿಯ ವಿದ್ಯವನ್ನು ಕಲಿಯುವುದು ಕಷ್ಟವೋ ?''

"ಕಷ್ಟದೇನೂ ಇಲ್ಲ. ಮೂರು ತಿಂಗಳು ಶ್ರಮಪಟ್ಟರೆ ಸಾಕು."

"ಈ ಕೆಲಸವು ಬೇಸರಿಕೆಯನ್ನು ಹುಟ್ಟಿಸುವುದಿಲ್ಲವೋ ?"

"ಮೊತ್ತ ಮೊದಲು ಹಾಗಾಗುತ್ತದೆ, ಅನಂತರ ಸರಿಹೋಗುತ್ತದೆ. ಇದಲ್ಲದೆ ನಮಗೆ ಆಗಾಗ ವಿರಾಮವು ಸಿಕ್ಕುವುದು.''

"ಹಾಗೋ ?''

''ಅಹುದು. ಆಗ ತೋಟದ ಕೆಲಸವನ್ನು ಮಾಡಿಕೊಳ್ಳುವೆನು."

''ಎಷ್ಟು ದಿನಗಳಿಂದ ನೀನು ಇಲ್ಲಿದ್ದೀಯೆ ?''

''ಹದಿನೈದು ವರ್ಷಗಳಿಂದ."

‘‘ನಿನಗೆಷ್ಟು ವರ್ಷ ?’’

‘‘ಐವತ್ತೈದು.”

‘‘ಸರ್ಕಾರದಲ್ಲಿ ಎಷ್ಟು ವರ್ಷ ಕೆ ಲ ಸ ಮಾ ಡಿ ದ ರೆ ನಿನಗೆ ಪೇರ್ಷ ಕೊಡುವರು ?”

‘‘ಎಪ್ಪತ್ತೈದು ವರ್ಷ.’’

‘‘ಎಷ್ಟು ಸಿಕ್ಕುವುದು ?”

‘‘ನೂರು ವರಹಗಳು.”

‘‘ಅಯ್ಯೋ ಪಾಪ ! ಇಷ್ಟೇಯೇ”

‘‘ಅಷ್ಟು ಸಾಕು.’’

‘‘ಇವನು ಆಶಾರಹಿತನೆಂದು ತೋರುತ್ತದೆ ; ಹಾಗಿದ್ದಲ್ಲಿ ನನ್ನ ಕೆಲಸ ಕೆಟ್ಟುಹೋಗುವುದು ; ನೋಡೋಣ” ಎಂದು ಯೋಚಿಸಿಕೊಂಡು ಮಲಯ ಸಿಂಹನು,

‘‘ಈ ಯಂತ್ರವು ಚೆನ್ನಾಗಿದೆ ; ಇದರ ಸಂಕೇತಗಳು ನಿನಗೆ ನಿಶ್ಚಯವಾಗಿಯೂ ತಿಳಿಯದೆ?’’

‘‘ಸ್ವಾಮೀ ! ನನಗೇಕೆ ತಿಳಿಯಬೇಕು ?”

‘‘ನಿನಗೆ ಹೇಳುವ ಸಂಜ್ಞೆಗಳನ್ನಾದರೂ ನೀನು ತಿಳಿದುಕೊಂಡಿರಬೇಕಲ್ಲವೇ ?’’

‘‘ಅವೇನೋ ಸಾಧಾರಣವಾದುವು. ಅವು ನನಗೆ ಗೊತ್ತು.”

‘‘ಅಗೋ ನೋಡು. ನಿನ್ನ ಬಲಗಡೆಯವನು ಏನನ್ನೋ ಹೇಳುತ್ತಾನೆ. ಅದೇನು ?”

“ಸ್ವಾಮೀ, ನಾನು ಸಿದ್ಧವಾಗಿದ್ದೇನೆಯೋ ಎಂದು ಅವನು ಕೇಳುತ್ತಾನೆ” ಎಂದು ಎಡಗಡೆಯವನಿಗೆ ಅವನು ಸಂಜ್ಞೆಯನ್ನು ಮಾಡಿ ‘‘ಇನ್ನು ಐದು ನಿಮಿಷಗಳಲ್ಲಿ ಬಲಗಡೆಯವನು ಮಾತನಾಡುತ್ತಾನೆ, ನೋಡಿ” ಎಂದನು.

ಮಲಯಸಿಂಹನು ‘‘ಐದು ನಿಮಿಷಗಳು ; ನನಗೆ ಬೇಕಾದ ಕಾಲಕ್ಕಿಂತಲೂ ಹೆಚ್ಚು” ಎಂದು ಯೋಚಿಸಿ,

‘‘ಅಪ್ಪಾ ! ನಿನ್ನನ್ನು ಒಂದು ಪ್ರಶ್ನೆ ಕೇಳಬೇಕೆಂದಿದ್ದೇನೆ. ಕೇಳಲೊ ?”

‘‘ಅದೇನು ? ಅಪ್ಪಣೆಯಾಗಲಿ.”

‘‘ನಿನಗೇನೋ ತೋಟವೆಂದರೆ ಪ್ರಾಣವೆಂದು ತೋರುತ್ತದೆ. ನಿನಗೆ ಒಂದು ದೊಡ್ಡ ತೋಟವೂ, ಒಂದು ಸೊಗಸಾದ ಮನೆಯೂ, ಆ ತೋಟದಲ್ಲಿ ಇಲಿ ಕಾಟಗಳಿಲ್ಲದಂತೆ ಒಂದು ಏರ್ಪಾಡೂ ಆದರೆ ಅನುಕೂಲವಲ್ಲವೆ ?”

‘‘ಸ್ವಾಮಿ, ನನ್ನ ಪುಣ್ಯದಿಂದ ಅಷ್ಟು ಸಿಕ್ಕಿದರೆ ಅದನ್ನು ನಂದನ ವನ ದಂತೆ ಮಾಡಿಬಿಡುತ್ತೇನೆ.”

‘‘ಇದಲ್ಲವೆ ನಿನಗೆ ಬರುವ ಸಂಬಳ ಸಾಲದು.”

‘‘ಸ್ವಾಮಿ, ಸಾಲದು ; ಆದರೂ ಜೀವಿಸಬೇಕು. ಏನು ಮಾಡೋಣ?’’

‘‘ಈ ತೋಟವೂ ಸಣ್ಣದು.’’

‘‘ಬಹಳ.’’

‘‘ಇಲಿಗಳ ಕಾಟ ಜೋರೆ.”

‘‘ಇಲಿಗಳು ಯಾವುದನ್ನೂ ಬಿಡುವುದಿಲ್ಲ.”

‘‘ಒಂದುವೇಳೆ ನಿನ್ನ ಬಲಗಡೆಯುವನು ವರ್ತಮಾನ ಕೊಡುತ್ತಿರುವಾಗ ನೀನು ಅದನ್ನು ನೋಡದಿದ್ದರೆ ಏನಾಗುವುದು ?”

‘‘ಅಪರಾಧ ಹಾಕುವರು.’’

‘‘ಎಷ್ಟು ಅಪರಾಧ.”

‘‘ಹತ್ತು ವರಹಗಳು.’’

‘‘ಹಾಗೇಂದಾದರೂ ಆಗಿದೆಯೇ ?’’

“ಹಿಂದೆ ನಾನು ಗುಲಾಬಿಯ ಗಿಡಗಳನ್ನು ಸರಿ ಮಾಡುತ್ತಿದ್ದಾಗ ಒಂದು ಸಾರಿ ಹಾಗಾಗಿದ್ದಿತು.”

“ಬಲಗಡೆಯಿಂದ ಬರುವ ಸಂಜ್ಞೆಗಳನ್ನು ಬದಲಾಯಿಸಿದರೋ ?”

“ನನ್ನನ್ನು ಮನೆಗೆ ಕಳುಹಿಸುವರು ; ಪೆನ್ಷನ್ ಕೂಡ ತಪ್ಪಿ ಹೋಗು ವುದು.”

“ಒಂದು ಒಳ್ಳೆಯ ತೋಟದ ಬೆಲೆಯೂ ಅದರ ಜತಗೆ ಹದಿನೈದು ವರ್ಷ ಗಳ ಪೆನ್ಷನ್ ಹಣವೂ ಒಟ್ಟಿಗೆ ಸಿಕ್ಕುವುದಾದರೋ ? ಯೋಚಿಸಿ ನೋಡು.”

“ಸ್ವಾಮಿ, ನನಗೆ ಗಾಬರಿಯಾಗುತ್ತದೆ.’’

“ನೋಡು, ಅಷ್ಟು ಹಣವೂ ಒಂದೇ ಗಂಟಿನಲ್ಲಿ ಸಿಕ್ಕುತ್ತದೆ.

“ಸ್ವಾಮಿ, ನನ್ನ ಬಲಗಡೆಯವನು ಮಾತನಾಡುತ್ತಾನೆ.’’

"ಆ ಕಡೆ ನೋಡಲೇ ಬೇಡ; ಇಲ್ಲಿ ನೋಡು" ಎಂದು ಮಲಯ ಸಿಂಹನು ಹತ್ತು ಸಾವಿರ ವರಹಗಳ ನೋಟುಗಳನ್ನು ತೋರಿಸಿದನು.

"ನೋಟುಗಳು !"

"ಅಹುದು"

"ಇಷ್ಟೂ ಯಾರದು, ಸ್ವಾಮಿ ?"

"ನಿನ್ನದು."

ಆ ತಂತಿಯವನು ಸಂತೋಷಚಿತ್ತನಾಗಿ "ನನ್ನದೇ ?" ಎಂದನು.

"ನಿನ್ನದೇ."

"ಸ್ವಾಮಿ, ಬಲಗಡೆಯವನು ಕರೆಯುತ್ತಾನೆ,"

"ಅವನು ಬೇಕಾದುದನ್ನು ಮಾಡಿಕೊಳ್ಳಲಿ. ಅದಕ್ಕಾಗಿಯೇ ನೀನು ಈ ನೋಟುಗಳನ್ನು ತೆಗೆದುಕೊಳ್ಳಬೇಕು."

"ಸ್ವಾಮಿ, ಅವನು ಬಡುಕೊಳ್ಳುತ್ತಾನೆ"

"ಅವನೇನಾದರೂ ಹೇಳಲಿ. ನೀನು ಇವುಗಳನ್ನು ತೆಗೆದುಕೋ" ಎಂದು ರಾಜನು ಆ ನೋಟುಗಳನ್ನು ಅವನ ಕೈಯ್ಯಲ್ಲಿಟ್ಟು, "ಪಾಪ ! ಇದು ನಿನಗೆ ಜೀವನಕ್ಕೆ ಸಾಲದು" ಎಂದನು.

"ನನ್ನ ಕೆಲಸವಿದೆಯಲ್ಲಾ, ಸಾಕು."

"ನಿನ್ನ ಕೆಲಸವೂ ಪೋಗುವುದು, ಅವನು ಹೇಳುವ ಮಾತುಗಳನ್ನು ಬಿಟ್ಟು ನಾನು ಕೊಡುವ ಸಂಜ್ಞೆಗಳನ್ನು ನಿನ್ನ ಎಡಗಡೆಯವನಿಗೆ ಕಳುಹಿಸಬೇಕು."

"ಅಯ್ಯೋ, ಅಯ್ಯೋ, ಇದೇನು ಅನ್ಯಾಯ ?

"ಅಪ್ಪಾ, ಇದು ಒಂದು ವಿನೋದ."

"ಸ್ವಾಮಿ, ತಾವು ಬಲಾತ್ಕರಿಸಿದ ಹೊರತು ನಾನು ಹಾಗೆ ಮಾಡುವುದಿಲ್ಲ.

"ನೀನು ಹಾಗೆಯೇ ಮಾಡಬೇಕು" ಎಂದು ರಾಜನು ಮತ್ತೆ ಹತ್ತು ಸಾವಿರ ವರಹಗಳ ನೋಟುಗಳನ್ನು ಅವನ ಕೈಯ್ಯಲ್ಲಿಟ್ಟು, "ನೋಡು ಒಟ್ಟು ಇಪ್ಪತ್ತು ಸಾವಿರ ವರಹಗಳಾದುವು. ಐದು ಸಾವಿರ ವರಹಗಳಿಗೆ ಒಂದು ಮನೆಯನ್ನೂ ಎರಡು ಎಕರೆ ಭೂಮಿಯನ್ನೂ ಕ್ರಯಕ್ಕೆ ಕೊಂಡು, ಇಲಿಗಳು

ತೋಟಕ್ಕೆ ಬಾರದಂತೆ ತಂತಿಯ ಬಲೆಯನ್ನು ಸುತ್ತಲೂ ಹಾಕಿ ಮಿಕ್ಕ ಹದಿನೈದು ಸಾವಿರ ವರಹಗಳನ್ನು ಬಡ್ಡಿಗೆ ಹಾಕಿಕೊಂಡು ಸುಖವಾಗಿ ಜೀವನ ಮಾಡಬಹುದು.

"ಸ್ವಾಮಿಾ ! ನಾವು ಏನು ಮಾಡಬೇಕು ?

"ಕಷ್ಟವಾದುದಾವುದೂ ಇಲ್ಲ. ಈ ಕಾಗದದಲ್ಲಿರುವ ಸಂಜ್ಞೆಗಳನ್ನು ಎಡಗಡೆಯವನಿಗೆ ಕಳುಹಿಸು" ಎಂದು ತಾನು ಬರೆದುಕೊಂಡು ಬಂದಿದ್ದ ಕಾಗದವನ್ನು ಅವನ ಕೈಯಲ್ಲಿ ಕೊಟ್ಟನು.

"ಸ್ವಾಮಿೀ ?"

"ಅದೇನೂ ಕಷ್ಟವಿಲ್ಲ; ಮೂರೇ ಮೂರು ಸಂಜ್ಞೆಗಳು."

"ಆದರೂ....!"

"ಒಳ್ಳೆಯ ಭವನವೂ ತೋಟವೂ ಸಿಕ್ಕಿ, ಮೃಷ್ಟಾನ್ನ ಭೋಜನವೂ ಅಮೃತಪಾನವೂ ಆಗುವುದು." ಹೀಗೆಂದು ರಾಜನು ಹೇಳಿದ ಕೂಡಲೇ ತಂತಿಯವನು ರಾಜನು ಕೊಟ್ಟುದನ್ನು ಎಡಗಡೆಯವನಿಗೆ ತಿಳಿಸಿದನು. ಅಷ್ಟು ಹೊತ್ತಿಗೆ ಅವನಿಗೆ ಜ್ವರಬಂದಂತೆ ಕಣ್ಣು ಕೆಂಪಗಾಗಿ ಮೈಯೆಲ್ಲ ಬೆವರಿತು.

"ಅಪ್ಪಾ, ಈಗ ನೀನು ಹಣಗಾರನಾದೆ" ಎಂದು ರಾಜನು ಹೇಳಲು, ಅವನು

"ಸ್ವಾಮಿಾ ಅನ್ಯಾಯ"

"ನೀನು ಮಾಡಿದುದು ಅನ್ಯಾಯವಲ್ಲ. ಇದರಿಂದ ಲೋಕಕ್ಕೆ ಎಷ್ಟೋ ಉಪಕಾರವಾಯಿತು."

ತಂತಿಯವನು ನೋಟುಗಳನ್ನು ಚೀಲದಲ್ಲಿಟ್ಟುಕೊಂಡು ಮನೆಗೆ ಹೊರಟನು. ಆಗ ಅವನ ಮುಖವು ಬಿಳುಪೇರಿ ನಾಲಗೆಯು ಒಣಗಿ ಓಡಿಹೋಗುತ್ತ ಅರ್ಧದಾರಿಯಲ್ಲಿ ಮೂರ್ಛಿತನಾಗಿ ಬಿದ್ದನು.

ಐದು ನಿಮಿಷಗಳೊಳಗಾಗಿಯೇ ತಂತಿಯ ವರ್ತಮಾನವು ಮಂತ್ರಿಗೆ ಸೇರಿತು. ವರ್ತಮಾನವು ದಮನಕನಿಗೆ ತಿಳಿದ ಕೂಡಲೇ ಅವನು ಬಂಡಿಯನ್ನು ಕಟ್ಟಿಸಿಕೊಂಡು ಅತಿ ಶೀಘ್ರವಾಗಿ ಭಾಮಿನಿಯ ಮನೆಗೆ ಬಂದು,

"ನಿನ್ನ ಗಂಡನಲ್ಲಿ ಕಳಿಂಗದೇಶದ ಪತ್ರಗಳು ಹೇರಳವಾಗಿರುವುವೋ ?"

"ಅರವತ್ತು ಲಕ್ಷ ವರಹಗಳ ಪತ್ರಗಳಿವೆ."

"ಹೋದಷ್ಟಕ್ಕೆ ಹೋಗಲಿ, ಎಲ್ಲವನ್ನೂ ಮಾರಿಬಿಡುವಂತೆ ಹೇಳು."

"ಅದು ಏಕೆ ?"

"ಆ ದೇಶದ ರಾಜನು ಓಡಿಹೋದನಂತೆ. ಅವನು ಹೋದಮೇಲೆ ಆ ಪತ್ರಗಳಿಗೆ ಹಣ ಕೊಡುವವರಾರು ?"

"ನಿಮಗಾರು ಹೇಳಿದರು ?"

"ನನಗೆ ತಿಳಿಯದೇ" ಎಂದನು.

ಭಾಮಿನಿಯು ಕೂಡಲೆ ಗಂಡನ ಬಳಿಗೆ ಹೋಗಿ ಹಮನಕನು ಹೇಳಿದುದನ್ನು ತಿಳಿಸಲು ಅವನು ಒಡನೆಯೇ ತನ್ನಲ್ಲಿದ್ದ ಪತ್ರಗಳನ್ನು ಬಹು ಸುಲಭ ಬೆಲೆಗೆ ಮಾರಿಬಿಟ್ಟನು. ಕಳಿಂಗರಾಜನು ಓಡಿಹೋದ ವರ್ತಮಾನವನ್ನು ಆ ದಿನ ಸಾಯಂಕಾಲವೇ ಪತ್ರಿಕೆಗಳಲ್ಲಿ ಓದಿ ಜನಗಳು ದುರ್ಮತಿಯ ದೂರದೃಷ್ಟಿಯನ್ನು ಕೊಂಡಾಡಿದರು. ಪತ್ರಗಳನ್ನು ಮೊದಲು ಕೊಂಡಿದ್ದವರೆಲ್ಲರೂ ತಾವು ನಾಶವಾದೆವೆಂದು ಗೋಳಾಡುತ್ತಲಿದ್ದರು. ದುರ್ಮತಿಯು ತನಗೆ ಬಂದಿದ್ದ ನಷ್ಟವು ಸ್ವಲ್ಪದರಲ್ಲಿಯೇ ಕಳೆಯಿತೆಂದು ಹಿಗ್ಗುತ್ತಲಿದ್ದನು.

"ನೆನ್ನೆಯದಿನ ಬಂದ ತಂತಿಯ ವರ್ತಮಾನ ಸುಳ್ಳು; ಕಳಿಂಗರಾಜನು ಸುಖವಾಗಿ ರಾಜ್ಯಭಾರ ಮಾಡುತ್ತಲಿದ್ದಾನೆ" ಎಂದು ಮಾರನೆಯ ದಿನ ಬೆಳಿಗ್ಗೆ ಪತ್ರಿಕೆಗಳಲ್ಲಿ ಬಂದಿತು. ಪತ್ರಗಳ ಬೆಲೆಯು ಮೊದಲು ಇದ್ದುದಕ್ಕಿಂತ ಶೇಕಡ ಐದರಂತೆ ಹೆಚ್ಚಿತು. ದುರ್ಮತಿಗೆ ಇದರಿಂದ ಲಕ್ಷಾಂತರ ವರಹಗಳ ನಷ್ಟವಾಯಿತು ಎಂಬ ಸಮಾಚಾರವೂ ಪತ್ರಿಕೆಗಳಲ್ಲಿದ್ದಿತು. ಈ ವರ್ತಮಾನವನ್ನು ಓದುತ್ತಿದ್ದಾಗ ಜಯವೀರನು ಮಲಯಸಿಂಹನ ಬಳಿ ಇದ್ದನು. ಆಗ ರಾಜನು ಅವನನ್ನು ನೋಡಿ,

"ಜಯವೀರರೇ, ಇಂದು ಇಪ್ಪತ್ತು ಸಾವಿರ ವರಹಗಳನ್ನು ಕೊಟ್ಟು ಒಂದು ಸಮಾಚಾರವನ್ನು ತಿಳಿದುಕೊಂಡೆನು."

"ಅದೇನು ಸಮಾಚಾರ ?"

"ತೋಟಗಾರನಿಗೆ ಇಲಿಯ ಕಾಟವು ತಪ್ಪುವ ಸಮಾಚಾರ."

# ನಲವತ್ತನಾಲ್ಕನೆಯ ಅಧ್ಯಾಯ

## ಭೂತದ ಮನೆಯ ಊಟ

ಸಂಪಿಗೆಯ ವನದ ಮನೆಯು ಬಹುಕಾಲದಿಂದ ಯಾರೂ ವಾಸವಾಗಿರದೆ ಪಾಳುಬಿದ್ದಿದ್ದುದರಿಂದ ಆ ಊರಿನವರು ಅದನ್ನು ಭೂತದ ಮನೆಯೆಂದು ಕರೆಯುತ್ತಿದ್ದರು. ವಲ್ಲಭದೇವನಿಗೆ ಆ ಮನೆಯೆಂದರೆ ಒಂದು ವಿಧವಾದ ಭಯ; ಅದಕ್ಕಾಗಿಯೇ ಅವನು, ತನ್ನ ಮಡದಿ ಎಷ್ಟು ಬಲಾತ್ಕಾರಪಡಿಸಿದರೂ, ಅವರಲ್ಲಿ ವಾಸಮಾಡುವುದಕ್ಕೆ ಒಪ್ಪದೆ ಹೋದನು.

ಆ ಮನೆಯ ಹೊರಭಾಗವನ್ನು ನೋಡಿದವರು ಇಷ್ಟು ಸಾಧಾರಣವಾದ ಮನೆಯಲ್ಲಿ ರಾಜಾಮಲಯಸಿಂಹನು ಊಟಕ್ಕೆ ಏರ್ಪಾಡುಮಾಡಿದನೇ ಎಂದು ಯೋಚಿಸುವಂತಿದ್ದಿತು. ಮಲಯಸಿಂಹನು ಬೇಕೆಂದೇ ಅದನ್ನು ಹಾಗೆ ಇಡಿಸಿದ್ದನು. ತಲೆಬಾಗಿಲನ್ನು ತೆರೆದಬಳಿಕ ಆ ಮನೆಯ ರಚನೆಯು ಕಾಣುತ್ತಲಿದ್ದಿತೇ ಹೊರತು ಹೊರಗೆ ಏನೂ ಕಾಣುತ್ತಿರಲಿಲ್ಲ. ಒಳಗೆ ರಾಜಾಧಿರಾಜರ ಅರಮನೆಗಿಂತ ಹೆಚ್ಚಾಗಿ ಅಲಂಕರಿಸಿದ್ದಿತು. ಹಿಂದೆ ಯಾರಾದರೂ ಆ ಮನೆಯನ್ನು ನೋಡಿದವರು ಅದೇ ಸಂಪಿಗೆಯ ವನದ ಮನೆಯೆಂದರೆ ಭ್ರಮಿಸುವಂತೆ ಭದ್ರಕನು ಮೂರು ದಿನಗಳಲ್ಲಿ ಮಾಡಿಸಿದ್ದನು. ಮುಖ್ಯ, ಮಲಯಸಿಂಹನ ಐಶ್ವರ್ಯದಿಂದಲೋ, ಅಲಂಕರಿಸುವುದರಲ್ಲಿ ಅವನಿಗಿದ್ದ ಅಭಿರುಚಿಯಿಂದಲೋ, ಭದ್ರಕನಿಗೆ ಯಜಮಾನನಲ್ಲಿದ್ದ ಭಕ್ತಿವಿಶ್ವಾಸಗಳಿಂದಲೋ, ಅವನ ಬುದ್ಧಿಕೌಶಲ್ಯಗಳಿಂದಲೋ, ಅಥವಾ ಇವುಗಳ ಸಮ್ಮೇಳನದಿಂದಲೋ, ಬಹುಕಾಲದಿಂದ ನಿದ್ದೆ ಹೋಗುತ್ತಲಿದ್ದ ಆ ಗೃಹಲಕ್ಷ್ಮಿಯು ಆಗ ಎದ್ದು ಮನೆಯಲ್ಲಿ ಜಗಜಗಿಸುತ್ತಿದ್ದಳೋ ಎಂಬಂತೆ ತೋರುತ್ತಲಿದ್ದಿತು.

ಮನೆಯ ಮುಂದುಗಡೆ ತೋಟದಲ್ಲಿ ಹಳೆಯ ಮರಗಳನ್ನು ಬೇರುಸಹಿತ ತೆಗೆಯಿಸಿ ಅಪೂರ್ವವಾದ ದೊಡ್ಡ ದೊಡ್ಡ ಮರಗಳನ್ನು ನೆಡಿಸಿ, ಹೊಸದಾಗಿ ಹುಲ್ಲು ಬಯಲುಗಳನ್ನೂ, ಅವುಗಳಲ್ಲಿ ಹೂವಿನ ಗಿಡಗಳನ್ನೂ ಹಾಕಿಸಿ, ಆ ಬಯಲುಗಳ ಮಧ್ಯೆ ವಿನೋದವಾಗಿ ಓಡಾಡಲು ಸರ್ಪಾಕಾರದ ಕಾಲುದಾರಿಗಳನ್ನೂ ಏರ್ಪಡಿಸಿದ್ದನು. ಆದುದರಿಂದ, ಆ ತೋಟದ ಗುರುತೇ ಯಾರಿಗೂ ಸಿಕ್ಕುತ್ತಿರಲಿಲ್ಲ. ಮನೆಯ ಒಳಗಡೆಯೂ ಮುಂಗಡೆಯೂ ಇಷ್ಟು ರಚನೆಯಿಂ

ದಿದ್ದರೂ ಮಹಡಿಯ ಮೇಲಿನ ಪಯ್ಯಾಗೃಹವೂ ಹಿಂದಿನ ತೋಟವೂ ಮೊದ ಲಿದ್ದಂತೆಯೇ ಇದ್ದುವು.

ಭದ್ರಕನು ಶನಿವಾರ ಮಧ್ಯಾಹ್ನದೊಳಗಾಗಿಯೇ ಯಜಮಾನನು ನೇಮಿ ಸಿದ್ದ ಎಲ್ಲಾ ಕೆಲಸಗಳನ್ನೂ ಪೂರೈಸಿ ಅವನು ಬರುವುದನ್ನೇ ಕಾದಿದ್ದನು. ತಾನು ಮಾಡಿದ ಕೆಲಸವನ್ನು ನೋಡಿ ಯಜಮಾನನು ಸಂತೋಷಪಡುವನೋ ಅಥವಾ ತಪ್ಪು ಕಂಡುಹಿಡಿದು ಬೈಯುವನೋ ಎಂದು ಭದ್ರಕನು ದಿಗಿಲು ಪಟ್ಟುಕೊಂಡಿದ್ದನು. ಸಾಯಂಕಾಲ ಆರು ಗಂಟೆಗೆ ಸರಿಯಾಗಿ ಮಲಯ ಸಿಂಹನು ಬಂದು ಎಲ್ಲವನ್ನೂ ನೋಡಿ ಸಂತೋಷಪಟ್ಟಾಗ ಭದ್ರಕನಿಗುಂಟಾದ ಆನಂದವನ್ನು ಅಷ್ಟಿಷ್ಟೆಂದು ಹೇಳಲಾಗದು.

ಮಲಯಸಿಂಹನು ಬಂದ ಅರ್ಧಗಂಟೆಯೊಳಗಾಗಿ ಜಯವೀರನು ಆಸೆ ಪಟ್ಟು ತೆಗೆದಿದ್ದ ಕುದುರೆಯನ್ನು ಏರಿಕೊಂಡು ಬಂದು, ಬಾಗಿಲ ಆಳಿನ ಕೈಯಲ್ಲಿ ಕುದುರೆಯನ್ನು ಕೊಟ್ಟು, ಒಳಹೊಕ್ಕು ರಾಜನನ್ನು ಕಂಡು

''ನಾನೇ ಮೊದಲು ಬಂದವನು, ನಿಮ್ಮೊಂದಿಗೆ ಮಾತನಾಡುವುದಕ್ಕಾ ಗಿಯೇ ಬೇಗ ಬಂದೆನು'' ಎಂದನು.

''ಮನೆಯಲ್ಲಿ ಎಲ್ಲರೂ ಸೌಖ್ಯವೋ ?''

''ನಿಮ್ಮ ಆಶೀರ್ವಾದ ಬಲದಿಂದ ಎಲ್ಲರೂ ಸೌಖ್ಯವಾಗಿದ್ದೇವೆ. ರತ್ನಾಂ ಬೆಯೂ ಮನೋಮೋಹನನೂ ನಿಮ್ಮನ್ನು ನೋಡಿ ಬಹುದಿವಸಗಳಾದುವು ಎಂದು ಹೇಳಿದರು; ನಿಮ್ಮ ಸಂಗಡ ಏನೇನೋ ಮಾತನಾಡಬೇಕಂತೆ. ಆಹಾ ! ನನ್ನ ಕುದುರೆಯನ್ನು ಬಾಗಿಲಲ್ಲಿದ್ದ ಆಳಿನ ವಶಕ್ಕೆ ಬಿಟ್ಟು ಬಂದೆನು; ಅವನು ಅದನ್ನು ಸರಿಯಾಗಿ ನೋಡಿಕೊಳ್ಳುವನೋ ?''

''ಓಹೋ, ಆ ವಿಷಯದಲ್ಲಿ ನೀವು ಯೋಚಿಸಬೇಕಾದುದಿಲ್ಲ;''

''ರಾಜರೇ ! ಆ ಕುದುರೆಯ ವೇಗವನ್ನು ಏನು ಹೇಳಲಿ ? ಗಾಳಿ ಯನ್ನೂ ಮಿಂಚುವಹಾಗಿದೆಯಲ್ಲಾ.''

"ಐದು ಸಾವಿರ ವರಹದ ಮಹತ್ವ ಹೇಗಿದೆ ?" ಎಂದು ಮಲಯಸಿಂಹನು ತಂದೆಯೋಪಾದಿಯಲ್ಲಿ ವಾತ್ಸಲ್ಯದಿಂದ ಕೇಳಲು, ಜಯವೀರನು ನಕ್ಕು

"ಅದಕ್ಕಾಗಿ ನೀವು ವ್ಯಸನಪಡುತ್ತಿದ್ದೀರೋ ?" ಎಂದನು.

"ಎಲ್ಲಾದರೂ ಉಂಟೆ ? ಆ ಕುದುರೆಯು ನಿಮ್ಮ ಮನಸ್ಸಿಗೆ ಒಪ್ಪದಿದ್ದರೆ ವ್ಯಸನಪಡುತ್ತಲಿದ್ದೆನು" ಎಂದು ರಾಜನು ಆಡಿದ ಮಾತಿಗೆ ಜಯವೀರನು ಹಿಗ್ಗಿ

"ಆ ಕುದುರೆಯ ಗುಣವನ್ನೂ ವೇಗವನ್ನೂ ನೋಡಿದವರೆಲ್ಲರೂ ಕೊಂಡಾಡುವರು. ಸವಾರಿಯಲ್ಲಿ ಚತುರರಾದ ಚಿತ್ರಸೇನ ದಮನಕರು ಅರಬ್ಬೀ ಕುದುರೆಗಳನ್ನೇರಿ ನನಗಿಂತ ಮುಂಚೆ ಹೊರಟಿದ್ದರೂ ಒಂದು ನಿಮಿಷದೊಳಗಾಗಿಯೇ ಅವರನ್ನು ಹಿಂದೆ ಹಾಕಿದೆನು. ಭಾಮಿನಿಯ ಬಂಡಿಯೂ ಹಿಂದೆ ಬಿದ್ದಿತು" ಎಂದನು.

"ಹಾಗಾದರೆ ಅವರೂ ಜಾಗ್ರತೆಯಾಗಿಯೇ ಬರಬಹುದು."

"ಇನ್ನೇನು ಬರಬಹುದು" ಎಂದು ಹೇಳುತ್ತಲಿದ್ದ ಹಾಗೆಯೇ ಚಿತ್ರಸೇನನೂ ದಮನಕನೂ ಬಂದರು. ಆ ವೇಳೆಗೆ ಭಾಮಿನಿಯ ಬಂಡಿಯೂ ಬಂದಿತು. ಒಡನೆಯೇ ದಮನಕನು ಬಂಡಿಯ ಬಳಿ ಹೋದನು. ಭಾಮಿನಿಯು ಕೆಳಗೆ ಇಳಿಯುವಾಗ ಒಂದು ಚೀಟಿಯನ್ನು ಗುಟ್ಟಾಗಿ ಅವನ ಕೈಯಲ್ಲಿ ಇಟ್ಟಳು. ಅನಂತರ ಮುರ್ಚುತಿಯು ಇಳಿದನು. ಅವನಿಗೆ ಹೆಣಮುಸುಡು ಬಿದ್ದಿದ್ದಿತು.

ಭಾಮಿನಿಗೆ ರಾಜನ ಮನೆಯ ಊಟವೆಂದರೆ ಆತ್ಯಾಸೆ; ಆದರೂ ಸಂಪಿಗೆಯ ವನದ ಮನೆಗೆ ಹೋಗಲು ಇಷ್ಟವಿರಲಿಲ್ಲ. ವಲ್ಲಭದೇವನು ಬಲಾತ್ಕಾರ ಮಾಡಿದ ಮೇಲೆ ಅವಳು ಬಂದಳು. ಬಂಡಿಯನ್ನಿಳಿದ ಕೂಡಲೇ ಸುತ್ತಲೂ ನೋಡಿ ಮನಸ್ಸಿಗೆ ಉಂಟಾದ ಸಂಕಟವನ್ನು ಅಡಗಿಸಿಕೊಂಡು, ಜಯವೀರನ ಬಳಿಗೆ ಹೋಗಿ ''ತಮ್ಮ ಪರಿಚಯವು ನನಗೆ ವಿಶೇಷವಾಗಿದ್ದಿದ್ದರೆ ತಮ್ಮ ಕುದುರೆಯನ್ನು ನನಗೆ ಮಾರಿಬಿಡಿ ಎಂದು ಕೇಳುತ್ತಲಿದ್ದೆ'' ಎಂದಳು.

ಅದಕ್ಕೆ ಯಾವ ಬಲವನ್ನೂ ಹೇಳಲರಿಯದೆ ಜಯವೀರನು ಮಲಯಸಿಂಹನ ಮುಖವನ್ನು ನೋಡಲು, ಅವನು

''ಅಮ್ಮಾ, ಆ ಕುದುರೆಯನ್ನು ಅವರು ಕೊಡದಿರುವುದಕ್ಕೆ ಕಾರಣವುಂಟು. ಅದು ನನಗೆ ಗೊತ್ತು. ಹಾಗಿಲ್ಲದಿದ್ದರೆ ನಿಮ್ಮಂಥ ರೂಪವತಿಯರು ಕೇಳಿದರೆ ಅವರು ಕೊಡುವುದಿಲ್ಲವೆಂದು ಎಂದಿಗಾದರೂ ಹೇಳಾರೇ ?" ಎಂದನು.

ಆ ವೇಳೆಗೆ ಶ್ರೀಮಂತರು ಬೊಮ್ಮರಾಜು ಅನಂತರಾಜುಗಳು ಬಿಜಯ ಮಾಡಿಸಿದರೆಂದು ದ್ವಾರಪಾಲಕನು ತಿಳಿಸಿದನು.

ಶ್ರೀಮಂತ ಬೊಮ್ಮರಾಜು ಸೈನ್ಯಾಧಿಕಾರಿಯ ಉಡುಪನ್ನು ಉಟ್ಟಿದ್ದನು. ಅನಂತರಾಜುವು ಶ್ರೀಮಂತರ ಮಕ್ಕಳಂತೆ ಜಿಲೆಯುಳ್ಳ ಬಟ್ಟೆಗಳನ್ನು ಹಾಕಿಕೊಂಡು ಹಸನ್ಮುಖನಾಗಿ ಬೊಮ್ಮರಾಜುವಿನ ಸಂಗಡ ಬರುತ್ತಲಿದ್ದನು. ಈ ಪುತ್ರವತ್ಸಲನಾದ ತಂದೆಯನ್ನೂ ಪಿತೃಭಕ್ತಿಯುಳ್ಳ ಮಗನನ್ನೂ ನಮ್ಮ ಪಾಠಕರು ಮೊದಲೇ ಬಲ್ಲರು. ಇವರಿಬ್ಬರೂ ಬಂದಾಗ ದಮನಕ ಚಿತ್ರಸೇನ ಜಯವೀರರು ಒಂದು ಕಡೆ ಕಲೆತು ಮಾತನಾಡುತ್ತಿದ್ದರು. ದ್ವಾರಪಾಲಕರು ತಿಳಿಸಿದುದನ್ನು ಕೇಳಿ, ದಮನಕನು "ಇವರು ಯಾರಪ್ಪ ರಾಜುಗಳು" ಎಂದು ಚಿತ್ರಸೇನನನ್ನು ಕೇಳಲು, ಅವನು "ಹೆಸರನ್ನು ನೋಡಿದರೆ ಅವರು ಆಂಧ್ರದೇಶದವರೆಂದು ತೋರುತ್ತದೆ" ಎಂದನು. ಜಯವೀರನು "ಆಹಾ! ಏನು ಸೊಗಸಾದ ಹೆಸರು" ಎಂದನು.

ಸ್ವಲ್ಪದೂರದಲ್ಲಿದ್ದ ದುರ್ಮತಿಯು ಮಲಯ ಸಿಂಹನ ಬಳಿಗೆ ಬಂದು "ಈಗ ಬಂದ ದೊಡ್ಡ ಮನುಷ್ಯರಾರು" ಎಂದು ಕೇಳಲು, ಅವನು

"ರಾಜುಗಳು ಎಂದು ಆಳು ಹೇಳಿದುದು ಕೇಳಲಿಲ್ಲವೋ?"

"ಅದು ಅವರ ಹೆಸರು; ಅದರಿಂದ ಅವರ ದೇಶ, ಸ್ಥಿತಿ, ಗತಿಗಳು ಹೇಗೆ ತಿಳಿಯುವುವು?"

"ನಿಶ್ಚಯ. ಅವರು ಆಂಧ್ರದೇಶದಲ್ಲಿ ದೊಡ್ಡ ಮನೆತನಕ್ಕೆ ಸೇರಿದ ಲಕ್ಷಾಧಿಪತಿಗಳಂತೆ."

"ಅವರ ಆಸ್ತಿಯು ಎಷ್ಟಿರಬಹುದು?"

"ಅದಕ್ಕೆ ಕೊನೆ ಮೊದಲೇ ಇಲ್ಲವೆಂದು ಹೇಳುತ್ತಾರೆ."

"ಅವರ ಉದ್ಯೋಗವಾವುದು?"

"ಅವರ ಆಧ್ಯಾಯವನ್ನು ಎಷ್ಟು ವೆಚ್ಚಮಾಡಿದರೂ ಕೊನೆಗಾಣದೇ ಇರುವುದು; ವೆಚ್ಚಮಾಡುವುದಕ್ಕೆ ಅವರ ಹೊಸ ಉಪಾಯವನ್ನು ಹುಡುಕುತ್ತಲಿದ್ದಾರೆ. ಅವರು ಯಾವುದೋ ಕೆಲಸಕ್ಕಾಗಿ ನಿಮ್ಮ ಬಳಿಗೆ ಬರಬೇಕೆಂದು ಹೇಳುತ್ತಲಿದ್ದರು. ನಿಮಗಾಗಿಯೇ ಅವರನ್ನು ನಾನು ಇಂದು ಊಟಕ್ಕೆ ಕರೆದೆನು. ನನ್ನ ಸಂಗಡ ಬನ್ನಿ, ನಿಮಗೆ ಅವರ ಪರಿಚಯವನ್ನು ಮಾಡಿಕೊಡುತ್ತೇನೆ."

"ಅವರಿಗೆ ನಮ್ಮ ದೇಶ ಭಾಷೆಯು ತಿಳಿಯುವುದೋ?"

‘‘ಬೊಮ್ಮರಾಜನಿಗೆ ಸ್ವಲ್ಪ ಬರುತ್ತದೆ. ಮಗನು ಈ ದೇಶದಲ್ಲಿಯೇ ವಿದ್ಯಾಭ್ಯಾಸ ಮಾಡಿದನು ; ಅವನಿಗೆ ಈ ದೇಶ ಭಾಷೆ ಚೆನ್ನಾಗಿ ಬರುತ್ತದೆ. ಈ ದೇಶದ ದೊಡ್ಡಮನುಷ್ಯರ ಮನೆಯ ಹೆಣ್ಣು ಒಬ್ಬಳನ್ನು ಮದುವೆ ಮಾಡಿಕೊಂಡು ಇಲ್ಲಿಯೇ ನಿಲ್ಲಬೇಕೆಂಬ ಆಸೆಯು ಅವನಿಗೆ ಇದೆ.’’

‘‘ತಂದೆಯು ಅದಕ್ಕೆ ಸಮ್ಮತಿಸುವನೋ ?”

“ತಂದೆಯು ಅನುಮತಿಸಿರಬಹುದು” ಎಂದು ಮಲಯಸಿಂಹನು ಹೇಳುತ್ತಲೇ ದುರ್ಮತಿಯು ಏನನ್ನೋ ಆಲೋಚಿಸಿಕೊಂಡು ಅನಂತರಾಜುವಿದ್ದೆಡೆಗೆ ಹೋದನು. ಆಗ ಮಲಯಸಿಂಹನು ಸಮೀಪದಲ್ಲಿದ್ದ ಭಾಮಿನಿಯನ್ನು ನೋಡಿ

‘‘ಅಮ್ಮಾ, ನಿಮ್ಮ ಯಜಮಾನರು ಇಂದು ಬಹು ಆಲೋಚನೆ ಮಾಡುತ್ತಿರುವಂತಿದೆ. ಈ ಊರ ರಾಜನೇನಾದರೂ ಅವರಿಗೆ ಪ್ರಧಾನಪದವಿಯನ್ನು ಕೊಟ್ಟನೋ ?”

‘‘ನಮ್ಮ ಯಜಮಾನರು ಮಂತ್ರಿಯ ವಿರೋಧಿಕಕ್ಷಿಯಲ್ಲಿ ಮುಖ್ಯಸ್ಥರು, ಆದುದರಿಂದ ಎಂದಾದರೂ ಒಂದು ದಿನ ಅವರು ಪ್ರಧಾನರಾಗಬಹುದು. ಇಂದು ಅವರಿಗೆ ಪತ್ರಗಳ ವ್ಯಾಪಾರದಲ್ಲಿ ಸ್ವಲ್ಪ ಒಳಪಡಿ ಬಂದಂತೆ ತೋರುತ್ತಲಿದೆ” ಎಂದಳು.

ಅಷ್ಟು ಹೊತ್ತಿಗೆ ವಲ್ಲಭದೇವನೂ ಅವನ ಹೆಂಡತಿಯೂ ಬಂದರು. ಅವರು ಬಂಡಿಯಿಂದ ಇಳಿದ ಕೂಡಲೇ ಮಲಯಸಿಂಹನು ವಲ್ಲಭದೇವನ ಕೈ ಹಿಡಿದು ಒಳಕ್ಕೆ ಕರೆದುಕೊಂಡು ಹೋದನು. ವಲ್ಲಭದೇವನಿಗೆ ಆಗ ಮುಖವು ವಿವರ್ಣವಾಗೆ ಕೈ ನಡುಗಿತು. ಅವನು ಬಂದ ಕೂಡಲೇ ಭಾಮಿನಿಯು ನಾಗಮಣಿಯ ಯೋಗಕ್ಷೇಮವನ್ನು ವಿಚಾರಿಸುವ ನೆಪದಲ್ಲಿ ವಲ್ಲಭದೇವನನ್ನು ನೋಡಿ ನಗುತ್ತಾ ಇರುವುದನ್ನು ಕಂಡು, ಮಲಯಸಿಂಹನು ‘‘ಅಂತರಂಗವನ್ನು ಮರೆಮಾಡುವುದರಲ್ಲಿ ಹೆಂಗಸರನ್ನು ಮೀರಿಸಿದವರುಂಟೇ’’ ಎಂದುಕೊಂಡನು.

ಅದುವರೆಗೆ ಒಳಗೆ ಏರ್ಪಾಡುಗಳನ್ನು ಮಾಡುತ್ತಿದ್ದ ಭದ್ರಕನು ಯಜಮಾನನ ಬಳಿಗೆ ಬಂದು ‘‘ಮಹಾಸ್ವಾಮಿ, ಎಲ್ಲವೂ ಸಿದ್ಧವಾಗಿವೆ. ಅತಿಥಿಗಳೆಷ್ಟು ಮಂದಿ ಬಂದಿರುವರು ಎಂದು ತಿಳಿದರೆ ಎಲೆಗಳನ್ನು ಹಾಕಿಸುತ್ತೇನೆ’’ ಎನ್ನಲು, ಮಲಯಸಿಂಹನು

‘‘ಎಲ್ಲರೂ ಇಲ್ಲಿಯೇ ಇದ್ದಾರೆ, ನೀನೇ ಲೆಕ್ಕ ಮಾಡಿಕೋ’’ಎಂದನು.

ಭದ್ರಕನು ಲೆಕ್ಕಮಾಡುತ್ತ ಬಂದಾಗ ಭಾಮಿನಿಯು ಅವನ ದೃಷ್ಟಿಗೆ ಬಿದ್ದಳು. ಅವಳನ್ನು ನೋಡಿದ ಒಡನೆಯೇ ಅವನು ಅಯ್ಯೋ, ಎಂದು ಕೊಂಡನು. ಪಕ್ಕದಲ್ಲಿ ನಿಂತಿದ್ದ ಮಲಯಸಿಂಹನು "ಏನು, ಏನು ?"ಎಂದು ಕೇಳಲು ಅವನು

"ಆ ಹೆಂಗಸು, ಆ ಹೆಂಗಸು"

"ಯಾವ ಹೆಂಗಸು ?"

"ಅಗೋ ಬಿಳಿಯ ಸೀರೆಯನ್ನುಟ್ಟು ವಜ್ರಗಳನ್ನು ತೊಟ್ಟಿರುವ ಆ ಹೆಂಗಸು"

"ಅವಳು ಭಾಮಿನಿ, ದುರ್ಮತಿಯ ಹೆಂಡತಿ ಅವಳೇನು."

"ಮಹಾಸ್ವಾಮಿ, ಅವಳ ಹೆಸರೇನೋ ನನಗೆ ತಿಳಿಯದು, ಅವಳೇ."

"ಏನ. ಅವಳೇ ?"

"ವಲ್ಲಭದೇವನ ಉಪ ಪತ್ನಿಯಾಗಿದ್ದು ಹಿಂದಣ ತೋಟದಲ್ಲಿ-ಅಯ್ಯೋ! ಇದೇನು ಗ್ರಹಚಾರ ?"

"ಭದ್ರಕ! ನಿನಗೆ ಪುನಃ ಹುಚ್ಚು ಹಿಡಿದಂತೆ ತೋರುತ್ತದೆ."

"ಮಹಾಸ್ವಾಮಿ, ಹುಚ್ಚಲ್ಲ. ಅವನು—"

"ಯಾರು ?"

"ಅಗೋ ಅಲ್ಲಿ ನಿಂತಿರುವನು."

"ಅವನೇ ವಲ್ಲಭದೇವ."

"ಹಾಗಾದರೆ ಅವನನ್ನು ನಾನು ಕೊಲ್ಲಲಿಲ್ಲವೋ ?"

"ನಿಮ್ಮ ದೇಶದವರು ತಿವಿಯುವಂತೆ ಕಠಾರಿಯಿಂದ ಸರಿಯಾಗಿ ನೀನು ತಿವಿಯದೆ ಇರಬಹುದು. ವಲ್ಲಭದೇವನಂಥವರ ಪ್ರಾಣಗಳು ಜಾಗ್ರತೆಯಾಗಿ ಹೋಗುವುದಿಲ್ಲ. ನೀನು ಕನಸನ್ನು ಕಂಡು ನಿಜವೆಂದು ನನ್ನ ಸಂಗಡ ಏನಾದರೂ ಹೇಳಿದ್ದೀಯೋ? ಅದು ಹೇಗಾದರೂ ಆಗಲಿ, ಸಮಾಧಾನ ಮಾಡಿಕೋ ನಿಧಾನವಾಗಿ ಲೆಕ್ಕ ಮಾಡಿಕೊಂಡು ಹೋಗು. ವಲ್ಲಭದೇವ, ಅವನ ಹೆಂಡತಿ —ಎರಡು ; ದುರ್ಮತಿ ಅವನ ಹೆಂಡತಿ—ನಾಲ್ಕು ; ಚಿತ್ರಸೇನ, ದಮನಕ, ಜಯವೀರ—ಏಳು ; ಬೊಮ್ಮರಾಜು—ಎಂಟು."

"ಮಹಾಸ್ವಾಮಿ ! ಎಂಟು ಮಂದಿಗಳೇಯೋ ?"

‹‹ಅಪ್ಪಾ, ನಿನಗೆ ಬಹು ಆತುರ; ಇನ್ನೊಬ್ಬ ಅತಿಥಿಯನ್ನು ಬಿಟ್ಟು ಬಿಟ್ಟೆ. ಅಗೋ ನೋಡು, ದೂರದಲ್ಲಿ ನಿಂತಿದ್ದಾನೆ"ಎಂದು ಅನಂತರಾಜುವನ್ನು ತೋರಿಸಿದ ಕೂಡಲೇ ಭದ್ರಕನು ಕಿಟ್ಟೆಂದು ಕಿರಿಚಿಕೊಳ್ಳುವುದರಲ್ಲಿದ್ದನು. ಮಲಯಸಿಂಹನು ಅವನ ತೋಳನ್ನು ಹಿಡಿದು ಅಲ್ಲಾಡಿಸಿ ಸದ್ದು, ಎಂದು ಬಾಯಮೇಲೆ ಬೆರಳನ್ನಿಟ್ಟುಕೊಂಡನು. ಆದರೂ ಭದ್ರಕನು ‹‹ ಭದ್ರದತ್ತ! ಇದೇನು ನನ್ನ ಅದೃಷ್ಟ" ಎಂದು ಗೊಣಗುಟ್ಟುತ್ತ ನಿಲ್ಲಲು, ರಾಜನು

"ಭದ್ರಕ! ಅತಿಥಿಗಳೆಲ್ಲರೂ ಕಾದಿದಾರೆ ; ಜಾಗ್ರತೆ ಮಾಡು, ಹೋಗು"

ಎಂದು ಅವನನ್ನು ಕಳುಹಿಸಿ ಎಲ್ಲರನ್ನೂ ಕರೆದುಕೊಂಡು ಊಟದ ಮನೆಗೆ ಹೋದನು.

ಎಲ್ಲರೂ ಭೋಜನಕ್ಕೆ ಕುಳಿತರು. ಬಡಿಸಿದ ಪದಾರ್ಥಗಳು ಒಂದಕ್ಕಿಂತ ಒಂದು ಶ್ಲಾಘ್ಯತರನಾಗಿದ್ದುವು. ಅವುಗಳ ರುಚಿಯನ್ನು ಎಲ್ಲರೂ ಹೊಗಳುತ್ತ ಭೋಜನ ಮಾಡುತ್ತಲಿದ್ದಾಗ, ಚಿತ್ರಸೇನನು

"ರಾಜರೇ, ಇಷ್ಟು ಅಪರೂಪವಾದ ಪದಾರ್ಥಗಳನ್ನು ಈ ಅಲ್ಪಕಾಲದಲ್ಲಿ ಹವಣಿಸಿಕೊಂಡುದು ಆಶ್ಚರ್ಯ. ಇದು ಇತರರಿಂದ ಅಸಾಧ್ಯ"

"ಸ್ವಾಮಿ ಬಡವರಿಗೆ ಮೊದಲು ಭೋಜನಕ್ಕೆ ಅನುಕೂಲವಾದರೆ ಸಾಕೆಂದಿರುವುದು; ಅದು ಅನುಕೂಲವಾದಮೇಲೆ, ಅಪರೂಪವಾದ ಪದಾರ್ಥಗಳ ಕಡೆಗೆ ದೃಷ್ಟಿ ಹೋಗುವುದು. ಅದಕ್ಕೂ ಅನುಕೂಲವಾಗಿ ಪುಣ್ಯವಂತರಾದ ಮೇಲೆ ಆಶ್ಚರ್ಯಕರವಾದ ಪದಾರ್ಥಗಳ ಮೇಲೆ ಆಸೆಯು ಹುಟ್ಟುವುದು ; ಅವುಗಳನ್ನೂ ಸಂಪಾದಿಸಿದ ಮೇಲೆ, ಸಾಧ್ಯವಿಲ್ಲದ ಪದಾರ್ಥಗಳಮೇಲೆ ಅಭಿರುಚಿಯುಂಟಾಗುವುದು. ಈಗ ವಿಚಾರಿಸಿ ನೋಡೋಣ. ಆಶ್ಚರ್ಯಕರವಾದುದಾವುದು ? ನಮಗೆ ಗೊತ್ತಾಗದೆ ಇರುವುದು ಅಲ್ಲವೆ ? ನಮಗೆ ಅಭಿರುಚಿಯು ಹುಟ್ಟುವುದು ಯಾವುದರಲ್ಲಿ? ನಮಗೆ ಹೊಂದುವುದಕ್ಕೆ ಸಾಧ್ಯವಾಗದೆ ಇರುವುದರಲ್ಲಿ ಅಲ್ಲವೆ ? ತಿಳಿಯದೆ ಇರುವುದನ್ನು ತಿಳಿದುಕೊಳ್ಳುವುದೂ, ಸಾಧ್ಯವಾಗದೆ ಇರುವುದನ್ನು ಸಾಧಿಸಿಕೊಳ್ಳುವುದೂ ಒಂದು ಕೆಲಸ. ಇದಕ್ಕೆ ಎರಡು ಅನುಕೂಲ ಸಾಮಗ್ರಿಗಳು ಆಗಬೇಕು. ಮೊದಲನೆಯದು—ಮನಸ್ಸು; ಎರಡನೆಯದು—ದ್ರವ್ಯ. ಇವೆರಡನ್ನೂ ದೇವರು ನನಗೆ ಅನುಗ್ರಹಿಸಿರುವುದರಿಂದ, ನಾನು ಅಪೇಕ್ಷಿಸುವ ಕೆಲಸವೆಲ್ಲವೂ ಸುಲಭವಾಗಿ ಆಗುವುವು" ಎಂದು ದುರ್ಮತಿಯ ಕಡೆ ತಿರುಗಿ

''ದುರ್ಮತಿಗಳೇ, ನೀವು ಹೊಸದಾಗಿ ರೈಲ್ವೆಹಾದಿಗಳನ್ನು ಹಾಕಿ ಧನಾರ್ಜನೆಯನ್ನು ಮಾಡುವುದರಲ್ಲಿ ಶ್ರದ್ಧೆಯನ್ನು ವಹಿಸುವಂತೆಯೂ, ವಲ್ಲಭದೇವರೇ, ನೀವು ಅಪರಾಧಿಗೆ ಆ ಮರಣಾಂತ ಶಿಕ್ಷೆಯನ್ನು ವಿಧಿಸುವುದರಲ್ಲಿ ನಿರತರಾಗಿರುವಂತೆಯೂ, ದಮನಕರೇ, ನೀವು ಒಂದು ರಾಜ್ಯವನ್ನು ಶಾಂತಭಾವದಿಂದ ಇರುವ ಹಾಗೆ ಇಡುವುದರಲ್ಲಿ ಬದ್ಧಾದರರಾಗಿರುವಂತೆಯೂ, ಚಿತ್ರಸೇನರೇ, ನೀವು ರಮಣಿಯರ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದರಲ್ಲಿ ಆಸಕ್ತರಾಗಿರುವಂತೆಯೂ, ಜಯವೀರರೇ, ನೀವು ತುಂಟಕುದುರೆಯನ್ನು ಬಗ್ಗಿಸುವುದರಲ್ಲಿ ಉತ್ಸಾಹವನ್ನು ತೋರಿಸುವಂತೆಯೂ ನಾನು ನನ್ನ ಮನಸ್ಸಿಗೆ ಹೊಳೆಯುವುದನ್ನು ಈಡೇರಿಸಿಕೊಳ್ಳುವುದರಲ್ಲಿ ಅಷ್ಟು ಶ್ರದ್ಧೆಯನ್ನು ತೋರಿಸುತ್ತೇನೆ" ಎಂದನು.

ಆಗ ದುರ್ಮತಿಯು ''ರಾಜರೇ! ಐಶ್ವರ್ಯವೊಂದಿದ್ದರೆ ಯಾವ ಕೆಲಸವನ್ನಾದರೂ ಸಾಧಿಸಬಹುದು'' ಎನ್ನಲು ಅವನ ಮಡದಿಯು ''ಅದರ ಜತೆಗೆ ಸ್ವಲ್ಪ ಬುದ್ಧಿಯೂ ಇರಬೇಕು. ಬರಿಯ ದುಡ್ಡಿದ್ದು ಬುದ್ಧಿಯಿಲ್ಲದಿದ್ದರೆ ಏನು ಪ್ರಯೋಜನ" ಎಂದಳು. ಅದಕ್ಕೆ ರಾಜನು

''ಅಮ್ಮಾ, ಅದು ನಿಜ. ಹಿರಿಯರ ಅನುಭವವೇ ನಮಗೆ ದೊಡ್ಡ ಆಸ್ತಿ; ಅದನ್ನು ವೃದ್ಧಿಪಡಿಸಿಕೊಳ್ಳಲು ಬುದ್ಧಿಯು ಅತ್ಯಾವಶ್ಯಕವಾಗಿಬೇಕು''

''ಸ್ವಾಮಿ ರಾಜರೇ, ನೀವು ಏನೇ ಹೇಳಿ, ನಿಮ್ಮ ಸೇವಕರ ಕೆಲಸವನ್ನೂ ಅವರ ಜಾಗರೂಕತೆಯನ್ನೂ ನೋಡಿ ನನಗೆ ಪರಮಾಶ್ಚರ್ಯವಾಗಿದೆ. ಈ ಮನೆಯನ್ನು ನೀವು ಕೊಂಡುಕೊಂಡು ಎಷ್ಟು ದಿನಗಳಾದುವು," ಎಂದು ಚಿತ್ರಸೇನನು ಕೇಳಲು,

''ಐದು ದಿನಗಳಾದುವು'' ಎಂದನು.

''ಇಷ್ಟು ಸ್ವಲ್ಪ ಕಾಲದಲ್ಲಿ ಮನೆಯನ್ನು ಗುರುತೇ ಸಿಕ್ಕದಂತೆ ಮಾಡಿಸಿಬಿಟ್ಟಿದ್ದೀರಿ"

ಎಂದು ಚಿತ್ರಸೇನನು ಆಶ್ಚರ್ಯಪಡುತ್ತಲಿದ್ದಾಗ, ಜಯವೀರನು

''ಮನೆಗೆ ಹೇಗಾದರೂ ಅಲಂಕಾರವನ್ನು ಮಾಡಬಹುದು; ಈ ಮುಂದಲ ತೋಟದಲ್ಲಿ ಹೊಸದಾಗಿ ತಂದಿಟ್ಟಿರುವ ದೊಡ್ಡ ದೊಡ್ಡ ಮರಗಳನ್ನು ನೋಡಿದರೆ ಪರಮಾಶ್ಚರ್ಯವಾಗುತ್ತದೆ."

‘‘ಹಿಂದೆ ನಮ್ಮ ತಾಯಿಯೂ ನಾನು ವಾಸಮಾಡಬೇಕೆಂದು ಬಂದು ನೋಡಿದಾಗ ಯಾರೋ ಪಿಶಾಚಿಯಾಗಿ ಈ ಮನೆಯಲ್ಲಿ ಇರುವಂತೆ ಕೇಳಿ ಇಲ್ಲಿಗೆ ಬರುವ ಯೋಚನೆಯನ್ನೇ ಬಿಟ್ಟು ಬಿಟ್ಟೆವು. ಅದಕ್ಕೆ ತಕ್ಕ ಹಾಗೆ ಜನರು ಈ ಮನೆಗೆ ಭೂತದ ಮನೆಯೆಂದು ಹೆಸರಿಟ್ಟಿದ್ದಾರೆ” ಎಂದು ಚಿತ್ರ ಸೇನನು ಹೇಳಲು, ಮಲಯಸಿಂಹನು ‘‘ನನಗೂ ಮೊದಲು ಹಾಗೆಯೇ ತೋರಿದ್ದಿತು; ಮನೆಯನ್ನು ಕ್ರಯಕ್ಕೆ ಕೊಳ್ಳಲೋ ಬೇಡವೋ ಎಂದು ಯೋಚಿಸುತ್ತಿರುವುದರಲ್ಲಿಯೇ ನನ್ನ ಮನೆವಾರ್ತೆಯವನು ಮನೆಯನ್ನು ಕ್ರಯಕ್ಕೆ ಕೊಂಡಿದ್ದನು. ಇದು ವಲ್ಲಭದೇವರ ಅತ್ತೆಯ ಮನೆಯೆಂದು ಈಚೆಗೆ ಗೊತ್ತಾಯಿತು.”

‘‘ಇದು ನನ್ನ ಅತ್ತೆಯ ಮನೆಯಾದರೂ ನನಗೇನೂ ಸಂಬಂಧವಿಲ್ಲ. ಅವಳು ಇದನ್ನು ನನ್ನ ಮಗಳು ವಿಮಲೆಗೆ ಸ್ತ್ರೀ ಧನವಾಗಿ ಕೊಟ್ಟಿದ್ದಳು” ಎಂದು ವಲ್ಲಭದೇವನು ಹೇಳುತ್ತಲೇ ಜಯವೀರನ ಮುಖವು ಬಿಳ್ಚೇರಿತು.

‘‘ಈ ಮನೆಯ ಮಿಕ್ಕ ಭಾಗಗಳು ಹೇಗಾದರೂ ಇರಲಿ: ಮಹಡಿಯ ಲ್ಲಿರುವ ಒಂದು ಕೊಟ್ಟಡಿಯನ್ನು ನೋಡಿದರೆ ನೀವೆಲ್ಲರೂ ಏನು ಹೇಳುವಿರೋ?, ಎಂದು ಮಲಯಸಿಂಹನು ಹೇಳಲು, ಒಡನೆಯೇ ವಲ್ಲಭದೇವನೂ ಭಾಮಿನಿ ಯೂ ಒಬ್ಬರ ಮುಖವನ್ನೊಬ್ಬರು ನೋಡುತ್ತ ಬೆಪ್ಪಾದರು.

ಆಗ ದುರ್ಮತಿಯು ‘‘ಆ ಕೊಟ್ಟಡಿಯಲ್ಲಿ ಏನು ವಿಶೇಷ’’ ಎಂದು ಕೇಳಲು ಮಲಯ ಸಿಂಹನು ‘‘ಅಲ್ಲಿಗೆ ಹೋಗಿ ನಿಂತರೆ ಯಾವುದೋ ಒಂದು ಮೋಸಕೃತ್ಯವು ನಡೆದಿರುವಂತೆ ತೋರುತ್ತದೆ”ಎಂದನು.

‘‘ಕಾರಣವೇನು ?’’

‘‘ಸಹಜವಾಗಿ ತಿಳಿಯಬರುವುದಕ್ಕೆ ಕಾರಣವನ್ನು ಹೇಳಲಾದೀತೇ ? ಮೊದಲು ಭೋಜನವಾಗಲಿ ; ಅನಂತರ ಆ ಕೊಟ್ಟಡಿಯನ್ನು ತಾವೆಲ್ಲರೂ ನೋಡುವಿರಂತೆ” ಎಂದು ಮಲಯಸಿಂಹನು ಹೇಳಿ, ಬಂದಿದ್ದ ಅತಿಥಿಗಳೆಲ್ಲರೂ ಸಂಭ್ರಮವಾಗಿ ಊಟಮಾಡುವಂತೆ ವಿಚಿತ್ರವಾದ ಪದಾರ್ಥಗಳನ್ನು ಒಂದೊಂದಾಗಿ ತರಿಸಿ ಬಡಿಸಿ ಎಲ್ಲರ ಮನಸ್ಸನ್ನೂ ಸಂತೋಷಪಡಿಸಿದನು.

ಭೋಜನವು ಮುಗಿದು ಎಲ್ಲರೂ ಕೈಗಳನ್ನು ತೊಳೆದುಕೊಂಡುಬಳಿಕ ಮಲಯಸಿಂಹನು “ಗಂಧ ತಾಂಬೂಲಗಳಿಗೆ ಹಿಂದಣತೋಟದಲ್ಲಿ ಏರ್ಪಾಡು

ಮಾಡಿದ್ದೇನೆ. ಮನೆಗಿಂತ ಆ ತೋಟವು, ಪ್ರಶಸ್ತವಾಗಿದೆ. ಎಲ್ಲರೂ ದಯ ಮಾಡಿ ಅಲ್ಲಿಗೆ ಬಿಜಯಮಾಡಬೇಕು. ಹೀಗೆಯೇ ಬಿಜಯ ಮಾಡಿದರೆ ಆ ಕೊಟ್ಟಡಿಯನ್ನೂ ನೋಡಿಕೊಂಡು ಹೋಗಬಹುದು'' ಎಂದು ಮಹಡಿಯ ಹಂತವನ್ನು ತೋರಿಸಿದನು. ಎಲ್ಲರೂ ಆ ಮಾರ್ಗವನ್ನು ಹಿಡಿದರು. ಆಗ ಭಾಮಿನಿಯ ವಲ್ಲಭದೇವನನ್ನು ನೋಡಿ ''ನಾವೂ ಹೋಗಬೇಕೋ?'' ಎಂದು ಮೆಲ್ಲಗೆ ಕೇಳಲು. ಅವನು ''ಹೋಗದಿದ್ದರೆ ಇವರಿಗೆ ಅನುಮಾನವುಂಟಾಗೀತು. ಎಲ್ಲರಂತೆ ನಾವೂ ಹೋಗೋಣ'' ಎಂದನು. ಈ ಮಾತನ್ನು ದೂರದಲ್ಲಿ ನಿಂತು ಕಿವಿಗೊಟ್ಟು ಕೇಳುತ್ತಿದ್ದ ಮಲಯಸಿಂಹನು ಅವರು ಬರುವವರೆಗೂ ಕಾದಿದ್ದು ಅವರ ಹಿಂದೆ ತಾನೂ ಹೊರಟನು.

ಎಲ್ಲರೂ ಮಹಡಿಯನ್ನು ಹತ್ತಿ ಅಲ್ಲಿಯ ಅಲಂಕಾರಗಳನ್ನು ನೋಡಿ ಶ್ಲಾಘಿಸುತ್ತ ಕೊನೆಗೆ ಆ ಪ್ರಸಿದ್ಧವಾದ ಕೊಟ್ಟಡಿಯ ಬಳಿಗೆ ಬಂದರು. ಅದ ರೊಳಗೆ ಬೆಳಕಿಲ್ಲದಿದ್ದುದರಿಂದ ಮಲಯಸಿಂಹನು ಒಂದು ಸಣ್ಣ ಕೈ ದೀವಿಗೆ ಯನ್ನು ತರಿಸಿಕೊಂಡು ಒಳಗೆ ಹೋದನು; ಅವನ ಹಿಂದೆ ಎಲ್ಲರೂ ಹೋದರು. ಆ ಕೊಟ್ಟಡಿಯೂ ಇತರ ಕೊಟ್ಟಡಿಯಂತೆಯೇ ಇದ್ದರೂ ಅದರಲ್ಲಿದ್ದ ಮಂಚವೂ; ಮೆತ್ತೆಯೂ ತೆರೆಗಳೂ, ಕಟ್ಟಿದ್ದ ಪಟಗಳೂ, ಧೂಳು ಹಿಡಿದು ಇಪ್ಪತ್ತು ವರ್ಷಗಳ ಹಿಂದೆ ಹೇಗಿದ್ದುವೋ ಹಾಗೆಯೇ ಇದ್ದುವು.

ಒಳಗೆ ಹೋದ ಕೂಡಲೆ ನಾಗಮಣಿಯು ''ಈ ಕೊಟ್ಟಡಿಯನ್ನು ನೋಡಿದರೆ ಮನಸ್ಸಿಗೇನೋ ಭಯವಾಗುತ್ತದೆ'' ಎಂದಳು. ಭಾಮಿನಿಯು ಏನನ್ನೋ ಹೇಳತೊಡಗಿ, 'ಮಾತೇ ಹೊರಡದೆ ಸುಮ್ಮನಾದಳು. ಚಿತ್ರಸೇನ ಮುಂತಾದವರು ''ಇಲ್ಲಿ ಏನೋ ಕುಟಿಲವು ನಡೆದಂತಿದೆ'' ಎಂದರು.

''ಅದಕ್ಕೆ ಸಂದೇಹವೇ ಇಲ್ಲ'' ಎಂದು ಮಲಯಸಿಂನು ಹೇಳಿ ''ಇಗೋ? ಈ ಮೆತ್ತೆಯ ಮೇಲೆ ಹಾಕಿರುವ ರಕ್ತ ವಸ್ತ್ರವನ್ನೂ, ಮೇಲೆ ಕಟ್ಟಿರುವ ಪಟ ಗಳನ್ನೂ ನೋಡಿ; ಈ ಹಾಸಿಗೆಯ ಮೇಲೆ ನಡೆದ ಕೃತ್ಯವನ್ನು 'ನಾವು ಸಾಕ್ಷಾ ತ್ತಾಗಿ ಕಂಡೆವು' ಎಂದು ಹೇಳುವಂತಿವೆ'' ಎಂದನು.

ರಾಜನು ಹೀಗನ್ನುತ್ತಲೇ ವಲ್ಲಭದೇವನು ಕಳೆಗುಂದಿದನು. ಭಾಮಿ ನಿಯು ನಿಲ್ಲಲಾರದೆ ಕುಳಿತಳು. ಅವಳು ಹಾಗೆ ಕುಳಿತುಕೊಂಡುದನ್ನು ಕಂಡು ನಾಗಮಣಿಯು ನಗುತ್ತ ''ಸಖೀ! ನೀನು ಕುಳಿತಿರುವ ಆಸನದಲ್ಲಿಯೇ

ಕುಟಿಲವು ನಡೆದಿರಬಹುದು: ಅದರ ಮೇಲೆ ಕುಳಿತುಕೊಳ್ಳಲು ಹೇಗೆ ತಾನೇ ನಿನಗೆ ಮನಸ್ಸು ಬಂದಿತು,'' ಎಂದಳು. ಭಾಮಿನಿಯು ಬೆಚ್ಚಿ ತಟ್ಟನೆ ಎದ್ದು ನಿಂತಳು.

ಆಗ ಮಲಯಸಿಂಹನು ''ಇಷ್ಟೇ ಅಲ್ಲ'' ಎಂದುದಕ್ಕೆ ದಮನಕನು ''ರಾಜರೇ, ಇನ್ನೇನು'' ಎಂದು ಕೇಳಿದನು. ಅದಕ್ಕೆ ದುರ್ಮತಿಯು ''ಇದು ವರೆಗೆ ರಾಜರು ಹೇಳಿದುದರಲ್ಲಿ ನನಗೇನೂ ವಿಶೇಷ ತೋರಲಿಲ್ಲ ಅವರು ಮುಂದೆ ಹೇಳತಕ್ಕುದೂ ಹೀಗೆಯೇ ಇರಬಹುದು'' ಎಂದು ಹೇಳಿ ಬೊಮ್ಮ ರಾಜುವಿನ ಸಂಗಡ ಮಾತನಾಡುತ್ತ ತೋಟಕ್ಕೆ ಹೊರಟನು.

''ಇಗೋ! ಈ ಹಂತವನ್ನು ನೋಡಿರಿ'' ಎಂದು ಮಲಯಸಿಂಹನು ಅದರ ಬಾಗಿಲಿಗೆ ಮುಚ್ಚಿದ ತೆರೆಯನ್ನು ತಳ್ಳಿ ''ಇವುಗಳನ್ನು ನೋಡಿದರೆ ಯಾವನೋ ಒಬ್ಬ ಪಾತಕಿಯು ಕೊಂದ ಶಿಶುವನ್ನು ಯಾರಿಗೂ ತಿಳಿಯಂತೆ ಅರ್ಧ ರಾತ್ರಿಯಲ್ಲಿ ಹೊತ್ತುಕೊಂಡು ಒಂದೊಂದು ಮೆಟ್ಟಿಲಾಗಿ ಇಳಿದು ಹೋಗಿರಬಹುದೆಂದು ತೋರುತ್ತಿದೆ'' ಎಂದನು. ಇದನ್ನು ಕೇಳಿದ ಕೂಡಲೇ ಭಾಮಿನಿಗೆ ಮೂರ್ಛೆ ಬರುವಂತಾಗಿ ವಲ್ಲಭದೇವನ ತೋಳನ್ನು ಹಿಡಿದು ಕೊಂಡಳು; ಅವನ ಕಾಲುಗಳು ನಡುಗಿ ಕೆಳಗೆ ಬೀಳುವಂತಾಗಿ ಹಾಗೆಯೇ ಅವನು ಗೋಡೆಯನ್ನು ಒರಗಿನಿಂತುಕೊಂಡನು.

ಭಾಮಿನಿಯ ಅವಸ್ಥೆಯನ್ನು ನೋಡಿ ದಮನಕನು ''ನಿಮಗೆ ದೇಹ ಸ್ಥಿತಿಯು ಸರಿಯಾಗಿಲ್ಲವೆಂದು ತೋರುತ್ತದೆ, ಅದೇಕೆ?'' ಎಂದು ಕೇಳಲು, ನಾಗಮಣಿಯು ''ನಮ್ಮ ರಾಜರು ಹೇಳಿದ ಭಯಂಕರವಾದ ಕಥೆಯನ್ನು ಕೇಳಿ ಇವರು ಹೆದರಿರುವಂತೆ ತೋರುತ್ತದೆ'' ಎಂದಳು. ವಲ್ಲಭದೇವನೂ ''ಹಾಗೆಯೇ ಇರಬಹುದು'' ಎಂದನು. ದಮನಕನು ಪುನಃ ''ಏನು ಸಮಾಚಾರ'' ವೆಂದು ಗುಟ್ಟಾಗಿ ಕೇಳಲು ಭಾಮಿನಿಯು ''ಏನೂ ಇಲ್ಲ! ನನಗೆ ಸ್ವಲ್ಪ ಗಾಳಿಯು ಬೇಕು ಅಷ್ಟೇ'' ಎಂದಳು.

''ಹಾಗಾದರೆ ತೋಟಕ್ಕೆ ಹೋಗೋಣ ಬನ್ನಿ'' ಎಂದು ಹೇಳಿ ದಮನಕನು ಅವಳ ಕೈ ಹಿಡಿದು ಅಲ್ಲಿಂದ ತೋಟಕ್ಕೆ ಇಳಿದು ಹೋಗುವ ಹಂತದ ಬಾಗಿಲ ಕಡೆಗೆ ಕರೆದುಕೊಂಡುಹೋಗಲು, ಅವಳು

''ಆ ಮಾರ್ಗವಾಗಿ ಬರುವುದಿಲ್ಲ; ನಾನಿಲ್ಲಿಯೇ ಇರುತ್ತೇನೆ.''

ಇದನ್ನೆಲ್ಲಾ ನೋಡುತ್ತಲಿದ್ದ ಮಲಯಸಿಂಹನು ಭಾಮಿನಿಯ ಸಮೀಪಕ್ಕೆ ಬಂದು,

"ಅಮ್ಮಾ, ಈ ಕಥೆಯನ್ನು ಕೇಳಿ ನೀವು ನಿಶ್ಚಯವಾಗಿಯೂ ಹೆದರಿದಂತೆ ತೋರುತ್ತದೆ."

"ನೀವು ಕಥೆಗಳನ್ನು ನಿಜವಾಗಿ ನಡೆದಂತೆಯೇ ಹೇಳುತ್ತೀರಿ."

"ಅಮಾ ! ಅದು ನಿಶ್ಚಯ. ಕಥೆಯು ಸಾಧಾರಣವಾಗಿದ್ದರೂ ಯಾರ ಯಾರ ಭಾವನೆಗಳು ಹೇಗೆ ಹೇಗೆ ಇರುವುವೋ ಹಾಗೆಯೇ ಅವರವರು ಅದನ್ನು ತಿಳಿದುಕೊಳ್ಳುವರು. ಈ ಕೊಟ್ಟಡಿಯಲ್ಲಿ ನಡೆದ ಸಮಾಚಾರವು ಬೇರೆ ವಿಧವಾಗಿದ್ದರೂ ಇರಬಹುದು. ಪತಿವ್ರತಾಶಿರೋಮಣಿಯೊಬ್ಬಳು ಗರ್ಭಿಣಿಯಾಗಿದ್ದು ಈ ಮಂಚದ ಮೇಲೆ ಹೆತ್ತಾಗ ಸೂಲಗಿತ್ತಿ ವೈದ್ಯರು ಮುಂತಾದವರು ಇತರರಿಗೆ ತೊಂದರೆಯುಂಗದಂತೆ ಈ ಮಾರ್ಗಗಾಗಿ ಹೋಗುತ್ತ ಬರುತ್ತಲಿದ್ದರೆಂದೂ, ಜನನವಾದ ಕೂಡಲೇ ಮಗುವನ್ನು ತೊಳೆಯಲೋಸುಗ ಅದನ್ನೆತ್ತಿಕೊಂಡು ಈ ಮೆಟ್ಟಲುಗಳನ್ನಿಳಿದು ಬಚ್ಚಲುಮನೆಗೆ ಹೋದರೆಂದೂ ಏಕೆ ಊಹಿಸಬಾರದು" ಎಂದು ಸೌಮ್ಯವಾಗಿ ಹೇಳಿದನು. ಭಾಮಿನಿಯು ಇದರಿಂದ ಸಮಾಧಾನ ಹೊಂದದೆ ಕಿಟ್ಟೆಂದು ಕಿರಿಚಿ ಮೂರ್ಛಿತಳಾದಳು.

"ಆಹಾ ! ನನ್ನ ಔಷಧಿಯ ಸೀಸೆಯನ್ನು ಮರೆತು ಬಂದೆನಲ್ಲಾ" ಎಂದು ಮಲಯಸಿಂಹನು ಪೇಚಾಡುತ್ತಲಿದ್ದಾಗ, ನಾಗಮಣಿಯು,

"ಇಗೋ, ನಿಮ್ಮ ಔಷಧವು ಇಲ್ಲಿದೆ" ಎಂದು ತನ್ನಲ್ಲಿದ್ದ ಸೀಸೆಯನ್ನು ಅವನಿಗೆ ಕೊಟ್ಟಳು.

"ಅಮ್ಮಾ, ಇದನ್ನು ನೀವು ಮಾಡಿದಿರೋ ?"

"ಹುಂ, ನಿಮ್ಮ ಪಟ್ಟಿಯಂತೆ ಮಾಡಿದೆನು."

"ದ್ರಾವಕವು ಹದವಾಗಿಳಿಯಿತೋ ?"

"ಇಳಿದಿರುವಂತೆ ತೋರುತ್ತದೆ."

ಭಾಮಿನಿಯನ್ನು ಪಕ್ಕದ ಕೊಟ್ಟಡಿಗೆ ಸಾಗಿಸಿ, ಆ ದ್ರಾವಕದಲ್ಲಿ ಒಂದು ತೊಟ್ಟನ್ನು ಅವಳ ಬಾಯಿಗೆ ಬಿಡಲು, ಅವಳು ಕಣ್ದೆರೆದು, "ಅಪ್ಪಾ ಎಂಥ ಭಯಂಕರವಾದ ಸ್ವಪ್ನ ?" ಎಂದಳು. ಅವಳ ಮಗ್ಗುಲಲ್ಲೇ ನಿಂತಿದ್ದ ವಲ್ಲಭದೇವನು ಅದು ಸ್ವಪ್ನವಲ್ಲವೆಂದು ಅವಳಿಗೆ ಕಣ್ಣುಸನ್ನೆ ಮಾಡಿದನು.

ಆಗೆಲ್ಲರೂ ದುರ್ಮತಿಯನ್ನು ಹುಡುಕಲು ಅವನು ಬೊಮ್ಮರಾಜುವಿನ ಸಂಗಡ ಯಾವುದೋ ಒಂದು ಲಾಭಕರವಾದ ಹೊಸ ರೈಲಿನ ಪ್ರಸ್ತಾಪವನ್ನು ಮಾಡುತ್ತ ತೋಟದಲ್ಲಿದ್ದನೆಂದು ತಿಳಿಯಿತು. ಈ ವೇಳೆಯಲ್ಲಿ ಅವನಿಲ್ಲದಿದ್ದುದು ಆಶಾಭಂಗವಾದಂತೆ ಮಲಯಸಿಂಹನು ಭಾವಿಸಿದನು. ಭಾಮಿನಿಗೆ ಮೂರ್ಛೆಯು ಚೆನ್ನಾಗಿ ತಿಳಿದಮೇಲೆ ಮಲಯಸಿಂಹನು ಅವಳನ್ನು ತೋಟಕ್ಕೆ ಕರೆದುಕೊಂಡು ಹೋಗುತ್ತ, "ಅಮ್ಮಾ, ನಾನು ಹೇಳಿದ ಕಥೆಯನ್ನು ಕೇಳಿ ನಿಜವಾಗಿಯೂ ನಿಮಗೆ ಅಷ್ಟು ಗಾಬರಿಯಾಯಿತೇ ?'' ಎಂದು ಕೇಳಿದುದಕ್ಕೆ ಅವಳು "ಅಷ್ಟೇನೂ ಇಲ್ಲ. ಆದರೂ ಇಂತಹ ಕಥೆಗಳನ್ನು ಕೇಳಿದರೆ ನನಗೆ ಗಾಬರಿಯಾಗದೆ ಇರದು'' ಎಂದಳು.

ಅದಕ್ಕೆ ವಲ್ಲಭದೇವನು "ಇದೆಲ್ಲಾ ಮನಸ್ಸಿನ ಸ್ಥಿತಿಯಮೇಲೆ ಹೋಗುತ್ತದೆ" ಎಂದು ನಕ್ಕನು.

ರಾಜನು "ಸ್ವಾಮಿ ವಲ್ಲಭದೇವರೇ, ನಂಬಿದರೆ ನಂಬಿ, ಬಿಟ್ಟರೆ ಬಿಡಿ. ಈ ಮನೆಯಲ್ಲಿ ಯಾವುದೋ ಒಂದು ಪಾಪಕಾರ್ಯವು ನಡೆದಿರುವಂತೆ ನನಗೇನೋ ತೋರುತ್ತದೆ."

"ರಾಜರೇ, ನ್ಯಾಯಾಧಿಪತಿಯು ಇದಿರಿಗೆ ಇರುವರು. ಸ್ವಲ್ಪ ಎಚ್ಚರಿಕೆಯಿಂದ ಇರಿ" ಎಂದು ನಾಗಮಣಿಯು ಹೇಳಿದಳು.

"ಹಾಗಾದರೆ ಸ್ವಾಮಿ ನ್ಯಾಯಾಧಿಪತಿಗಳೇ, ನನ್ನ ಹೇಳಿಕೆಯನ್ನು ಬರೆದುಕೊಳ್ಳೋಣಾಗಲಿ''

"ನಿಮ್ಮ ಹೇಳಿಕೆಯನ್ನೇ ?''

"ಅಹುದು ; ಈ ಸಾಕ್ಷಿಗಳ ಮುಂದೆಯೇ ಆಗಲಿ'' ಎಂದು ಮಲಯಸಿಂಹನು ಹೇಳಲು, ದಮನಕನು,

"ರಾಜರೇ, ನೀವು ಹೇಳುವುದು ವಿಚಿತ್ರವಾಗಿದೆ'' ಎಂದನು.

ಅಷ್ಟು ಹೊತ್ತಿಗೆ ಎಲ್ಲರೂ ಮನೆಯ ಹಿಂದಣ ತೋಪಿಗೆ ಹೋದರು. ಆಗ ರಾಜಾಮಲಯಸಿಂಹನು "ಇಲ್ಲಿ ಕೊಲೆಯು ನಡೆದಿರುವುದೇನೋ ನಿಶ್ಚಯ; ಎಲ್ಲರೂ ಹೀಗೆ ಬಿಜಯಮಾಡಿಸಿದರೆ ನಾನು ಕುರುಹುಗಳನ್ನು ತೋರಿಸುವೆನು,' ಎಂದು ಹೇಳಿ ಬಾಳೆಯ ಗಿಡಗಳ ಬಳಿ ಹೋದನು.

"ಇದೇ ಸ್ಥಳ, ನೋಡಿ !' ಎಂದು ಮಲಯಸಿಂಹನು ನಿಂತು ಇಲ್ಲಿ

ಬಾಳೆಯ ಗಿಡಗಳನ್ನು ಹಾಕಿಸಬೇಕೆಂದು ನೆಲವನ್ನು ಅಗತೆ ಮಾಡಿಸಿದಾಗ ಸುಮಾರು ಅರ್ಧ ಗಜ ಆಳದಲ್ಲಿ ಒಂದು ಪೆಟ್ಟಿಗೆಯು ಸಿಕ್ಕಿತು. ಅದನ್ನು ಎತ್ತಿ ಬಿಚ್ಚಿ ನೋಡುವಲ್ಲಿ ಆಗ ತಾನೇ ಹುಟ್ಟಿದ ಮಗುವಿನ ಅಸ್ಥಿಪಂಜರವೊಂದಿದ್ದಿತು" ಎಂದು ಹೇಳಿ, ವಲ್ಲಭದೇವ ಭಾಮಿನಿಯರ ಮುಖಗಳನ್ನು ನೋಡಿದನು. ಭಾಮಿನಿಗೆ ಮೆಯ್ ಬೆವತುಕೊಂಡಂತಾಯಿತು. ವಲ್ಲಭದೇವನಿಗೆ ನಡುಕ ಹತ್ತಿತು.

"ಆಗ ಹುಟ್ಟಿದ ಮಗುವೇ ? ಹಾಗಾದರೆ ಇದನ್ನು ಸರಿಯಾಗಿ ವಿಚಾರಮಾಡಬೇಕು" ಎಂದು ದಮನಕನೆನ್ನಲು, ಚಿತ್ರಸೇನನು "ಮನೆಯು ಮನುಷ್ಯರಂತೆಯೇ ಅಂತರಂಗವನ್ನು ಮುಖಭಾವದಿಂದ ತೋರಿಸುತ್ತದೆ ; ದುಃಖಮಯವಾಗಿದ್ದುದರಿಂದಲೇ ಅಂಧಕಾರಮಯವಾಗಿದ್ದಿತು ; ನಡೆದ ಕೊಲೆಯನ್ನು ಮುಚ್ಚಿಟ್ಟಿದ್ದರಿಂದಲೇ ದುಃಖಮಯವಾಯಿತು" ಎಂದನು.

ಆಗ ವಲ್ಲಭದೇವನು "ಕೊಲೆಯೆಂದು ಯಾರು ಹೇಳಿದರು ?" ಎಂದು ಕೇಳಲು, ಮಲಯಸಿಂಹನು,

"ಅಹುದು ; ತಾನಾಗಿ ಸತ್ತಿದ್ದರೆ ಅದನ್ನು ಅಲ್ಲಿ ಏಕೆ ಹೂಳುತ್ತಿದ್ದರು ? ಇದು ಸ್ಮಶಾನವಲ್ಲ."

ಆಗ ಬೊಮ್ಮರಾಜುವು "ಈ ದೇಶದಲ್ಲಿ ಶಿಶುಹತ್ಯ ಮಾಡಿದವರಿಗೆ ಏನು ಶಿಕ್ಷೆ ?'' ಎಂದು ಕೇಳಿದುದಕ್ಕೆ ದಮನಕನು "ಶಿರಚ್ಛೇದನವೇ'' ಎಂದನು.

ಮಲಯಸಿಂಹನು ಯಾರಿಬ್ಬರಿಗಾಗಿ ಈ ಸನ್ನಿವೇಶಗಳನ್ನು ಏರ್ಪಡಿಸಿದ್ದನೋ ಅವರು ಇನ್ನು ಮುಂದೆ ಈ ಪ್ರಸ್ತಾಪವನ್ನು ಬೆಳೆಸಿದರೆ ಸಹಿಸಲಾರರೆಂದು ತಿಳಿದು, "ಈ ಕಥೆಯ ಅವಾಂತರದಲ್ಲಿ ಗಂಧ ತಾಂಬೂಲಗಳನ್ನೇ ಮರೆತುಬಿಟ್ಟೆನು, ಕ್ಷಮಿಸಬೇಕು'' ಎಂದು ಹೇಳಿ, ಅಲ್ಲಿ ಸಿದ್ಧಪಡಿಸಿದ್ದ ಆಸನಗಳಲ್ಲಿ ಎಲ್ಲರನ್ನೂ ಕುಳ್ಳಿರಿಸಿ ಅವರಿಗೆ ಗಂಧ ತಾಂಬೂಲಗಳನ್ನು ಕೊಟ್ಟು, "ನೀವೆಲ್ಲರೂ ನನ್ನ ಪ್ರಾರ್ಥನೆಯ ಮೇರೆ ಬಂದು ನನ್ನ ಆತಿಥ್ಯವನ್ನು ಅಂಗೀಕರಿಸಿದುದರಿಂದ ನಾನು ಕೃತಾರ್ಥನಾದೆನು'' ಎಂದು ಹೇಳಿದನು.

ಮನೆಗೆ ಹೊರಡುವುದಕ್ಕೆ ಮುಂಚೆ ವಲ್ಲಭದೇವನು ಭಾಮಿನಿಯನ್ನು ಕುರಿತು,

''ನಾಳೆ ನಾನು ನಿನ್ನ ಸಂಗಡ ಸ್ವಲ್ಪ ಮಾತಾಡಬೇಕಾಗಿದೆ'' ಎಂದು

ಗುಟ್ಟಾಗಿ ಹೇಳಲು, ಅವಳು,

"ಎಲ್ಲಿಗೆ ಬರಲಿ ? ಮನೆಗೋ ಕಚೇರಿಗೋ ?''

"ಕಚೇರಿಗೆ ಬಂದರೆ ಉತ್ತಮ''

''ಹಾಗೆಯೇ ಆಗಲಿ''

ಎಂದು ಭಾಮಿನಿಯು ಒಪ್ಪಿಕೊಂಡಳು.

---

# ನಲವತ್ತೈದನೆಯ ಅಧ್ಯಾಯ

## ಭಿಕ್ಷುಕ

ಗಂಧತಾಂಬೂಲಗಳಾದ ಮೇಲೆ ವಲ್ಲಭದೇವನು ಮೊದಲು ಮನೆಗೆ ಹೊರಡುವುದಕ್ಕೆ ಎದ್ದನು. ಕೂಡಲೇ ನಾಗಮಣಿಯೂ ಎದ್ದಳು. ಭಾಮಿನಿ ಮೈಯ್ ಸ್ವಸ್ಥವಿಲ್ಲವೆಂದು ಇವರಿಬ್ಬರೂ ಅವಳನ್ನು ಅವಳ ಮನೆಯಲ್ಲಿ ಬಿಡುವುದಕ್ಕಾಗಿ ತಮ್ಮ ಬಂಡಿಯಲ್ಲಿ ಕುಳ್ಳಿರಿಸಿಕೊಂಡು ಹೋದರು. ದುರ್ಮತಿಯು ಬೊಮ್ಮರಾಜುವಿನ ಸಂಗಡ ಮಾತಾಡುತ್ತಲಿದ್ದ ಪ್ರಸ್ತಾಪದಲ್ಲಿ ಅವನು ಬಲು ಹಣಗಾರನೆಂದು ತಿಳಿದು, ವರ್ಷವೊಂದಕ್ಕೆ ಐವತ್ತು ಸಾವಿರ ವರಹಗಳನ್ನು ಮಗನ ವೆಚ್ಚಕ್ಕಾಗಿ ಕೊಡಬೇಕಾಗಿದ್ದರೆ ತಂದೆಯ ಆಸ್ತಿಯು ಎಷ್ಟಿರಬಹುದು ಎಂದು ಗುಣಿಸುವುದರಲ್ಲಿಯೇ ಮಗ್ನನಾಗಿದ್ದುದರಿಂದ ಭಾಮಿನಿಗೆ ಉಂಟಾದ ಅವಸ್ಥೆಗಳಾವುವೂ ಅವನಿಗೆ ತಿಳಿಯಲೇ ಇಲ್ಲ. ಮಲಯಸಿಂಹನು ತನಗೆ ಕೊಟ್ಟ ಹಣವನ್ನು ಕೈಯಲ್ಲಿಟ್ಟುಕೊಂಡಿದ್ದರೆ ಮೋಸವಾದೀತೆಂಬ ಭಯದಿಂದ ಬೊಮ್ಮರಾಜುವು ಒಂದು ದೊಡ್ಡ ವಜ್ರದ ಉಂಗುರವನ್ನು ತೆಗೆದು ಬೆರಳಲ್ಲಿ ಹಾಕಿಕೊಂಡಿದ್ದನು. ಅನಂತರಾಜುವು ಬುದ್ಧಿವಂತನಾದುದರಿಂದ ದೊಡ್ಡವರ ನಡುವೆ ತಾನು ಯಾವ ಮಾತನ್ನಾಡಿದರೂ ಹೇಗೋ ಎಂದು ದಿಗಿಲಿನಿಂದ ಮೌನವಾಗಿದ್ದು ವಲ್ಲಭದೇವನನ್ನು ಮಾತ್ರ ಆಗಾಗ್ಗೆ ಬಿಟ್ಟ ಕಣ್ಣಿನಿಂದ ನೋಡುತ್ತಲಿದ್ದನು. ದುರ್ಮತಿಯು ಬೊಮ್ಮರಾಜನ ವಜ್ರದುಂಗುರವನ್ನೂ ಅನಂತರಾಜುವಿನ ಗಾಂಭೀರ್ಯವನ್ನೂ ನೋಡಿ ಮರುಳಾಗಿ, ಹೇಗಾದರೂ ಮಾಡಿ ತಂದೆಯ ಸ್ನೇಹವನ್ನು ಬೆಳೆಸಿ, ಮಗನನ್ನು ತನ್ನ ಬಲೆಯಲ್ಲಿ ಸಿಕ್ಕಿಸಿಕೊಳ್ಳಬೇಕೆಂದು ಯೋಚಿಸಿ, ತಂದೆಯನ್ನು ತನ್ನ ಬಂಡಿಯಲ್ಲಿಯೇ ಕುಳ್ಳಿರಿಸಿಕೊಂಡು

ಮಾತನಾಡುತ್ತ ಹೋದನು. ತನ್ನ ಬಂಡಿಯನ್ನು ಒಳಕ್ಕೆ ತರದೆ ಬೀದಿಯಲ್ಲಿಯೇ ನಿಲ್ಲಿಸಿಕೊಂಡಿದ್ದನಾದ ಕಾರಣ ಮೂವತ್ತು ಗಜ ನಡೆಯಬೇಕಾಗಿ ಬಂದಿತಲ್ಲಾ ಎಂದು ಅನಂತರಾಜುವು ಬಂಡಿಯೋಡಿಸುವವನ ಮೇಲೆ ಆಗ್ರಹ ಮಾಡುತ್ತ ಬಂಡಿಯನ್ನು ಹತ್ತಲು ಬೀದಿಗೆ ಹೋದನು. ಚಿತ್ರಸೇನ ದಮನಕ ಜಗುವೀರರು ರಾಜನು ಮಾಡಿಸಿದ ಭೋಜನಕ್ಕಾಗಿ ಅವನನ್ನು ಸ್ತೋತ್ರ ಮಾಡಿ ತಮ್ಮತಮ್ಮ ಕುದುರೆಗಳನ್ನು ಹತ್ತಿಕೊಂಡು ಹೊರಟರು.

ಅನಂತರಾಜುವು ಬೀದಿಗೆ ಬಂದು ಬಂಡಿಯನ್ನು ಹತ್ತಲು ಮೆಟ್ಟಲಿನ ಮೇಲೆ ಕಾಲಿಟ್ಟಾಗ ಯಾವನೋ ಒಬ್ಬನು ಅವನ ಹೆಗಲಿನ ಮೇಲೆ ಕಯ್ಯನ್ನಿಟ್ಟನು. ಅನಂತರಾಜುವು ರಾಜಾಮಲಯಸಿಂಹನೋ ಅಥವಾ ದುರ್ಮತಿಯೋ ತನ್ನ ಸಂಗಡ ಹೇಳಬೇಕೆಂದಿದ್ದುದನ್ನು ಮರೆತು ಈಗ ಹೇಳಲು ಬಂದಿರಬಹುದೆಂದು ಹಿಂದಿರುಗಿ ನೋಡಿದನು. ಅವನು ಸಿಂಗಲೀಕನಂತೆ ಗಡ್ಡವನ್ನು ಬೆಳೆಸಿದ್ದನು. ನಗುಮೊಗವು ತೋಳನಂತೆ ಮೊನೆಯಾದ ಹಲ್ಲುಗಳನ್ನು ತೋರಿತು. ಕಣ್ಣುಗಳು ಕೆಂಡವನ್ನು ಉಗುಳುತ್ತಿದ್ದುವು. ತಲೆಗೆ ಒಂದು ಕೆಂಪು ಬಟ್ಟೆಯನ್ನು ಸುತ್ತಿಕೊಂಡು, ಚಿಂದಿಯ ಬಟ್ಟೆಗಳನ್ನು ತೊಟ್ಟಿದ್ದನು. ಒಟ್ಟೇನು ರಾಕ್ಷಸನಂತೆ ಆಕಾರವುಳ್ಳವನೊಬ್ಬನು ತನ್ನ ಮೇಲೆ ಕೈ ಹಾಕಿದ್ದನು. ಅನಂತರಾಜುವು ಅವನ ಗುರುತನ್ನು ಕಂಡು ಹೆದರಿದನೋ ಅಥವಾ ಅವನ ಆಕಾರವನ್ನು ನೋಡಿ ಹೆದರಿದನೋ, ಹೇಗಾದರೂ ಆಗಲಿ ನೋಡಿದೊಡನೆಯೇ ಗಡಗಡನೆ ನಡುಗಿ ಸ್ವಲ್ಪ ಹಿಂದೆ ಸರಿದು "ನನ್ನಿಂದ ನಿನಗೇನು ಆಗಬೇಕು?'' ಎಂದು ಕೇಳಿದನು.

ಅದಕ್ಕವನು "ಸ್ವಾಮಿ, ತಮ್ಮ ಸಂಗಡ ನಾನು ಕೆಲವು ಮಾತನ್ನಾಡಬೇಕಾಗಿದೆ. ಈ ತೊಂದರೆಯನ್ನು ಕ್ಷಮಿಸಬೇಕು'' ಎಂದು ಹೇಳಲು, ಅನಂತರಾಜುವಿನ ಸಾರಥಿಯು ಅವನೊಬ್ಬ ಭಿಕ್ಷುಕನೆಂದು ತಿಳಿದು, ''ರಾತ್ರಿಯಲ್ಲಿ ಯಾರಾದರೂ ಭಿಕ್ಷ ಬೇಡುವರೇ? ಹೋಗು ಹೋಗು'' ಎಂದನು.

"ಅಯ್ಯಾ ಕುದುರೆಯವನೇ! ನಾನು ಭಿಕ್ಷುಕನಾದರೂ ಈಗ ಭಿಕ್ಷವನ್ನು ಬೇಡಲು ಬರಲಿಲ್ಲ. ನಿಮ್ಮ ಯಜಮಾನರು ಒಂದು ಕೆಲಸವನ್ನು ನೇಮಿಸಿದ್ದರು, ಅದಕ್ಕಾಗಿ ಬಂದೆನು.''

ಅನಂತರಾಜುವು ಸ್ವಲ್ಪ ಯೋಚಿಸಿ, ಕುದುರೆಯವನನ್ನು ಕುರಿತು,

''ಇವನು ಹೇಳುವುದು ನಿಶ್ಚಯ ; ನಾನು ಹೇಳಿದ ಕೆಲಸವನ್ನು ಇವನು ಏನು ಮಾಡಿದನೊ ? ಎಲೋ ಕದರ್ಥಕ ! ಹಾಗೆ ನೀನು ಯೋಚಿಸುವುದಾಗಿದ್ದರೆ ಅದು ನಡೆಯದು, ಚೆನ್ನಾಗಿ ತಿಳಿದಿರು.''

"ಆಗಲಪ್ಪ, ಆಗಲಿ. ಕೋಪಮಾಡಬೇಡ. ಅದೃಷ್ಟಹೀನನ ಅವಸ್ಥೆಯು ನಿನಗೆ ತಿಳಿಯದೇ ? ಬಂದಿಶಾಲೆಯಲ್ಲಿ ನಾನು ನಿನ್ನನ್ನು ನನ್ನ ಮಗನಂತೆ ಭಾವಿಸಿರಲಿಲ್ಲವೇ ?"

"ಈಗೇನಾಗಬೇಕು ಬೇಗನೆ ಹೇಳು"—

"ನಿಧಾನ, ನಿಧಾನ."

"ಆಗಲಪ್ಪಾ ! ನಿಧಾನವಾಗಿಯೇ ಹೇಳು."

"ಮೊದಲು ಬಂಡಿಯಲ್ಲಿ ಕುಳಿತುಕೊಂಡ ಆ ಮೇಲೆ ಮಾತನಾಡೋಣ,"

ಎನ್ನುತ್ತ ಇಬ್ಬರೂ ಬಂಡಿಯಲ್ಲಿ ಕುಳಿತರು. ಅನಂತರಾಜುವು ಕುದುರೆಯನ್ನು ನಿಧಾನವಾಗಿ ಬಿಡುವಂತೆ ಹೇಳಿದನು.

"ಅಪ್ಪಾ, ಮಗು ! ನಿನ್ನ ಸಂಪತ್ತನ್ನು ನೋಡಿ ನನಗೆ ಅತ್ಯಾನಂದವಾಯಿತು. ನಿನ್ನನ್ನು ನೋಡಿಕೊಂಡು ಹೋಗೋಣವೆಂದು ಸಮಯ ಕಾದಿದ್ದು ಈ ದಿನ ಹಿಡಿದೆನು."

"ಒಳ್ಳೆಯ ಸಮಯವನ್ನೇ ನೋಡಿಕೊಂಡು ಬಂದೆ."

"ನಾನೇನು ಮಾಡಲಿ ? ಈ ಸಮಯ ಬಿಟ್ಟರೆ ನೀನು ಸಿಕ್ಕುವುದೆಲ್ಲಿ ! ಗಾಳಿ ಬಂದಾಗ ತೂರಿಕೊಳ್ಳಬೇಕು."

"ನಾನೇನು ಅವಿತುಕೊಳ್ಳುತ್ತೇನೆಯೆ ? ಇಲ್ಲವಲ್ಲ."

"ಅಪ್ಪಾ ! ನೀನು ಅದೃಷ್ಟಶಾಲಿ ; ನಿನ್ನ ಅದೃಷ್ಟ ನನಗೆ ಇಲ್ಲ. ನೀನು ಗುರುತನ್ನು ಮರೆತೆಯೋ ಎಂದು ಯೋಚಿಸುತ್ತಿದ್ದೆನು ; ಈಗ ಇದು ನಿವೃತ್ತಿಯಾಯಿತು.''

"ಬರಿಯ ಮಾತಿನಿಂದ ಪ್ರಯೋಜನವಿಲ್ಲ. ನಿನಗೆ ಏನು ಬೇಕು ಹೇಳು"

"ನನ್ನ ವಿಷಯದಲ್ಲಿ ನೀನು ಹೀಗೆ ಅಸಮಾಧಾನವನ್ನು ತೋರಿಸುವುದು ತಕ್ಕುದಲ್ಲ. ಹಾಗೆ ಏನಾದರೂ ಮಾಡಿದರೆ ಮುಂದೆ ತೊಂದರೆಗೆ ಸಿಕ್ಕಿಕೊಳ್ಳುತ್ತೀಯೆ. ಜೋಪಾನ."

ಎಂದು ಕದರ್ಥಕನು ಹೇಳಲು, ಅನಂತರಾಜುವು ಉಕ್ಕಿ ಬಂದ ಕೋಪ

ವನ್ನು ಹಾಗೆಯೇ ಅದಗಿಸಿಕೊಂಡು ಕುದುರೆಯನ್ನು ಚೆನ್ನಾಗಿ ಪ್ರಹರಿಸಲು ಅದು ಓಡಲಾರಂಭಿಸಿತು.

"ಅಪ್ಪಾ! ಭದ್ರದತ್ತ! ನನ್ನಂಥ ಪೂರ್ವಪರಿಚಿತನ ವಿಷಯದಲ್ಲಿ ನೀನು ಕೋಪಮಾಡುವುದು ಸರಿಯಲ್ಲ.''

"ನಿನ್ನಲ್ಲಿ ಮುನಿಸಿಕೊಂಡಿರುವ ಭಾಗ್ಯಲಕ್ಷ್ಮಿಯು ನನಗೆ ಒಲಿದಿರುವ ಳಲ್ಲಾ ಎಂದು ನಿನಗೆ ಏನಾದರೂ ಹೊಟ್ಟೆಯ ಕಿಚ್ಚೋ?"

"ಭಾಗ್ಯಲಕ್ಷ್ಮಿಯು ನಿನಗೆ ಒಲಿದಿರುವಳೆಂದು ನೀನೇ ಒಪ್ಪಿಕೊಳ್ಳು ತ್ತೀಯೋ?" ಎಂದು ಕದರ್ಥಕನು ತನಗಿದ್ದ ದುರಾಸೆಯನ್ನು ಸೂಚಿಸಿದನು.

"ನಾನು ಹೇಳುವುದಕ್ಕೆ ಮೊದಲೇ ನಿನಗೆ ಅದು ಗೊತ್ತು. ಇನ್ನೂ ನಿನ್ನಂತೆ ಕೆಂಪು ಬಟ್ಟೆಯನ್ನು ತಲೆಗೆ ಸುತ್ತಿ ಚಿಂದಿಯ ಬಟ್ಟೆಗಳನ್ನು ಹೊದ್ದಿದ್ದರೆ ನನ್ನ ಗುರುತು ನಿನಗೆ ಸಿಕ್ಕುತ್ತಿರಲಿಲ್ಲ."

"ನೀನು ಹಾಗೆ ಹೇಳುವುದು ತಪ್ಪು; ನಿನ್ನನ್ನು ನಾನು ಕಂಡು ಹಿಡಿದ ಮೇಲೆ ನನಗೆ ಒಳ್ಳೆಯ ಬಟ್ಟೆಗಳು ಸಿಕ್ಕುವುದರಲ್ಲಿ ಲೇಶವೂ ಅನುಮಾನವಿಲ್ಲ. ಬಂದಿಶಾಲೆಯಲ್ಲಿ ನೀನು ಇದ್ದಾಗ ನಾನು ಹೇಗೆ ನಿನಗೆ ನನ್ನ ಆಹಾರದಲ್ಲಿ ಅರ್ಧ ಕೊಟ್ಟು ಮಿಕ್ಕುದ್ದನ್ನು ತಿನ್ನುತ್ತಿದ್ದೆನೋ ಹಾಗೆಯೇ ಈಗ ನೀನು ನಿನ್ನ ಆಹಾರ ಬಟ್ಟೆಗಳಲ್ಲಿ ನನಗೆ ಅರ್ಧ ಕೊಡಬೇಕು. ಅಪ್ಪಾ! ಆಗ ನಿನಗೆ ಎಷ್ಟು ಹಸಿವು! ಈಗಲೂ ಹಾಗೆಯೇ ಇದೆಯೋ?''

ಅನಂತರಾಜು ಹುಸಿನಗುತ್ತ ಹುಂ ಎಂದನು.

"ಆ ರಾಜನ ಮನೆಯ ಊಟಕ್ಕೆ ನೀನು ಹೇಗೆ ಬಂದೆ? ಅವನು ಬಲು ಹಣಗಾರನೋ?''

"ಅವನು ಕೆಟ್ಟವನು; ಅವನ ತಂಟೆಗೆ ನೀನು ಎಲ್ಲಾದರೂ ಹೋದೀಯೆ."

"ಆ ವಿಷಯದಲ್ಲಿ ನೀನು ಏನೂ ಯೋಚನೆ ಮಾಡಬೇಡ. ಅವನು ನಿನ್ನ ಪಾಲಿಗಿರಲಿ; ಅದಕ್ಕಾಗಿ ನೀನು ನನಗೆ ಹಣ ಕೊಡಬೇಕು.''

"ಎಷ್ಟು ಕೊಡಬೇಕು?''

"ತಿಂಗಳಿಗೆ ನೂರು ವರಹಗಳನ್ನು ಕೊಟ್ಟರೆ ಸಾಕು.''

"ನೂರು ವರಹಗಳೇ?"

"ನೂರೈವತ್ತು ವರಹಗಳನ್ನು ಕೊಟ್ಟರೆ ನೆಮ್ಮದಿಯಾಗಿರಬಹುದು.''

"ಒಳ್ಳೇದು, ಇನ್ನೂರು ವರಹಗಳನ್ನು ತೆಗೆದುಕೋ" ಎಂದು ಹೇಳಿ ಅನಂತರಾಜುವು ತನ್ನ ಚೀಲದಿಂದ ಹಣವನ್ನು ತೆಗೆದುಕೊಟ್ಟನು.

"ಹೀಗಿದ್ದರೆ ನಿನ್ನನ್ನು ನಾನು ಏತಕ್ಕೆ ಕೆಟ್ಟ ಹುಡುಗನೆಂದು ಹೇಳುತ್ತೇನೆ?"

"ಅಪ್ಪಾ ಕದರ್ಥಕ! ತಿಂಗಳಿಗೊಂದು ಸಾರಿ ನನ್ನ ಮನವಾರ್ತೆಯವನ ಬಳಿಗೆ ನೀನು ಬಾ! ಅವನು ಹಣವನ್ನು ಕೊಡುವನು."

"ಹಾಗೆ ಮಾಡುವುದು ಅವಮಾನ. ನೀನೇ ತಂದುಕೊಡು."

"ಹಾಗೆಯೇ ಅಗಲಿ."

"ಇಷ್ಟು ಐಶ್ವರ್ಯವು ನಿನಗೆ ಹೇಗೆ ಬಂದಿತು?"

"ಹೇಗೆ ಬಂದರೆ ಏನು?"

"ನೋಡಿದೆಯಾ! ನನ್ನಲ್ಲಿ ಅಷ್ಟು ನಂಬುಗೆಯಿಲ್ಲವೇ?"

"ನಂಬುಗೆಯಿಲ್ಲದೆ ಏನು?"

"ಹಾಗಾದರೆ ಹೇಳು."

"ನನ್ನ ತಂದೆಯು ಸಿಕ್ಕಿದನು."

"ನಿಜವಾದ ತಂದೆಯೋ?"

"ದುಡ್ಡು ಕೊಡುವವರೆಗೂ."

"ಅವನ ಹೆಸರೇನು?"

"ಶ್ರೀಮಂತ ಬೊಮ್ಮರಾಜು"

"ನಿನಗೆ ಯಾರು ತಂದೆಯನ್ನು ಹುಡುಕಿಕೊಟ್ಟರು?"

"ರಾಜಾಮಲಯಸಿಂಹನು."

"ಆ ರಾಜನಿಗೆ ಹೇಳಿ ನನಗಷ್ಟು ಹಣ ಕೊಡಿಸು. ನಿನಗೆ ಬೇಕಾದರೆ ನಾನು ತಾತನಾಗುತ್ತೇನೆ."

"ಒಳ್ಳೆಯದು ಅವನಲ್ಲಿ ನಾನು ಹೇಳಿನೋಡುತ್ತೇನೆ. ಅದುವರೆಗೆ ನೀನೇನು ಮಾಡುತ್ತೀಯೆ?"

"ಓಹೋ! ನಿಜ. ನಾನೆಲ್ಲಿಯಾದರೂ ಒಂದು ಸಣ್ಣ ಮನೆಯನ್ನು ಮಾಡಿಕೊಂಡು, ಅಡುಗೂಳಜ್ಜಿಯ ಮನೆಯಲ್ಲಿ ಊಟಮಾಡಿ, ಮಧ್ಯಾಹ್ನ ವರ್ತಮಾನ ಪತ್ರಿಕೆಗಳನ್ನು ಓದಿಕೊಂಡು, ರಾತ್ರಿ ನಾಟಕಗಳಿಗೆ ಹೋಗುತ್ತ

ನೆಮ್ಮದಿಯಾಗಿ ಸುಖವಾಗಿ ಜೀವನಮಾಡಿಕೊಂಡಿರುವೆನು."

"ಅದು ಸರಿ. ನಿನಗೆ ಇದಕ್ಕಿಂತ ಅನುಕೂಲವಾದುದು ಬೇರೆ ಯಾವುದೂ ಇಲ್ಲ. ಹೋಗಿ ಬಾ" ಎಂದು ಅನಂತರಾಜುವು ಹೇಳಲು, ಕದರ್ಥಕನು ಊ ಹುಂ ಎಂದನು.

"ಏಕೆ ?"

"ಇಷ್ಟು ಹಣವನ್ನು ಕಯ್ಯಲ್ಲಿಟ್ಟುಕೊಂಡು ಈ ವೇಷದೊಂದಿಗೆ ಬೀದಿಯಲ್ಲಿ ಹೋದರೆ ಪೋಲೀಸಿನವರು ನನ್ನನ್ನು ಸುಮ್ಮನೆ ಬಿಟ್ಟಾರೆಯೇ? ನಾನು ತಪ್ಪಿಸಿಕೊಳ್ಳಲು ನೀನು ಈ ಹಣವನ್ನು ಕೊಟ್ಟೆ ಎಂದು ಅವನಿಗೆ ಹೇಳಬೇಕಾಗುವುದು. ಆಮೇಲೆ ನಿನ್ನ ಗತಿಯೇನಾಗುವುದೋ ಯೋಚಿಸು."

ಹೀಗೆಂದ ಕದರ್ಥಕನ ಮಾತನ್ನು ಕೇಳಿ ಅನಂತರಾಜುವು ಸುತ್ತಲೂ ನೋಡಿ ದಾರಿಯಲ್ಲಿ ಯಾರೂ ಇಲ್ಲದುದನ್ನು ಕಂಡು ಜೇಬಿನಲ್ಲಿದ್ದ ಪಿಸ್ತೂಲಿಗೆ ಕೈ ಹಾಕಿದನು. ಮಯ್ಯೆಲ್ಲಾ ಕಣ್ಣಾಗಿದ್ದ ಕದರ್ಥಕನು ತನ್ನ ನಡುವಿನಲ್ಲಿ ಸಿಕ್ಕಿದ್ದ ಕಠಾರಿಗೆ ಕೈಹಾಕಿದನು. ಈ ಇಬ್ಬರೂ ಒಬ್ಬರನ್ನೊಬ್ಬರು ಚೆನ್ನಾಗಿ ಬಲ್ಲವರಾದುದರಿಂದ ಇಬ್ಬರ ಆಯುಧಗಳೂ ಯಥಾಸ್ಥಾನವನ್ನು ಹೊಂದಿದುವು.

ಅನಂತರಾಜುವು ಕದರ್ಥಕನನ್ನು ಅವನ ಮನೆಯ ಬಳಿ ಬಿಟ್ಟು ತಾನು ತನ್ನ ಮನೆಗೆ ಹೋಗಿ ಹಾಸಿಗೆಯ ಮೇಲೆ ಬಿದ್ದು "ಅಯ್ಯೋ, ಈ ಲೋಕದಲ್ಲಿ ದುಃಖ ಮಿಶ್ರವಲ್ಲದ ಸುಖವೇ ಇಲ್ಲ" ಎಂದುಕೊಂಡು ಹೊರಳಾಡುತ್ತಿದ್ದನು.

---

# ನಲವತ್ತಾರನೆಯ ಅಧ್ಯಾಯ

## ಸಂಸಾರಿಕ ವ್ಯಾಪಾರ.

ದಮನಕನು ಭೂತದ ಮನೆಯಿಂದ ಚಿತ್ರಸೇನ ಜಯವೀರರ ಸಂಗಡ ಹೊರಟವನು ಅವರನ್ನು ನಡುದಾರಿಯಲ್ಲಿ ಬಿಟ್ಟು ಭಾಮಿನಿಯು ಮನೆಗೆ ಹೋದನು. ಬರುವುದರೊಳಗಾಗಿಯೇ ಅವಳು ಮನೆಗೆ ಬಂದಿದ್ದಳು. ದಮನಕನಿಗೆ ಆ ಮನೆಯಲ್ಲಿ ಸರ್ವಸ್ವಾತಂತ್ರ್ಯವಿದ್ದುದರಿಂದ ಅವನು ನೆಟ್ಟಗೆ ಭಾಮಿನಿಯ ಕೊಟ್ಟಡಿಯ ಒಳಕ್ಕೆ ಹೋದನು. ಇವನನ್ನು ಕಂಡ ಕೂಡಲೇ ಅವಳು

ಜಗ್ಗನೆ ಎದ್ದು ಕೈಹಿಡಿದು ಕರೆದುಕೊಂಡು ಹೋಗಿ ಪಕ್ಕದಲ್ಲಿಯೇ ಸೋಫಾವಿನ ಮೇಲೆ ಕುಳ್ಳಿರಿಸಿಕೊಂಡಳು. ಆಗ ದಮನಕನು

"ಭಾಮಿನೀ! ಮಲಯಸಿಂಹನ ಮನೆಯಲ್ಲಿ ನಿನಗೇನಾಯಿತು?"

"ನನಗೆ ಸಾಯಂಕಾಲದಿಂದ ಮೈಯ್ಯು ಸರಿಯಾಗಿರಲಿಲ್ಲ; ಮೇಲೂ ಆ ರಾಜನ ಕಥೆ ಭಯಂಕರವಾಗಿದ್ದಿತು. ಇನ್ನೇನೂ ಇಲ್ಲ"

"ಸಾಯಂಕಾಲ ನೀನು ಸರಿಯಾಗಿದ್ದೆ; ಆ ಮಾತೆಲ್ಲಾ ಸುಳ್ಳು. ನಿನ್ನ ಗಂಡನೇನಾದರೂ ಅವಿವೇಕದ ಮಾತನ್ನಾಡಿ ನಿನ್ನನ್ನು ನೋಯಿಸಿದ್ದನೋ, ಇನ್ನಾರಾದರೂ ಹಾಗೆ ಮಾಡಿದ್ದರೋ, ಹೇಳು; ನೀನು ಸಂಕಟಪಡುವುದನ್ನು ನೋಡಿ ಸಹಿಸಲಾರೆನು."

"ಪ್ರಿಯನೆ! ಅಂತಹುದಾವುದೂ ಇಲ್ಲ; ಹಾಗಿದಿದ್ದರೆ ನಾನು ನಿನ್ನ ಸಂಗಡ ಹೇಳದೆ ಇರುತ್ತಿದ್ದೆನೇ?"

"ಅದೆಲ್ಲಾ ಇರಲಿ; ಏನೋ ಇದೆ; ನೀನು ನನ್ನೊಂದಿಗೆ ಹೇಳದೆ ಗುಟ್ಟು ಮಾಡುತ್ತೀಯೆ."

"ನನ್ನ ತನುಮನಧನಗಳೆಲ್ಲವನ್ನೂ ನಿನ್ನಲ್ಲಿ ಅರ್ಪಿಸಿರುವಾಗ ನಿನ್ನ ಸಂಗಡ ಹೇಳದಿರುವ ರಹಸ್ಯವು ನನಗೇನು ಇದೆ? ನಿಜವಾಗಿಯೂ ನನ್ನ ಶರೀರಸ್ಥಿತಿಯೂ, ಆ ರಾಜನ ಮನೆಯ ಊಟವೂ, ಅವನು ಹೇಳಿದ ಭಯಂಕರವಾದ ಕಥೆಯು ನನ್ನನ್ನು ಹಾಗೆ ಮಾಡಿದುವು" ಎಂದು ಹೇಳಿ ಎದುರಿಗಿದ್ದ ನಿಲುಗನ್ನಡಿಯ ಮುಂದೆ ನಿಂತಳು.

ಭಾಮಿನಿಯ ಮನಸ್ಸಿಗೆ ಕಳವಳವುಂಟಾದುದು ಎಲ್ಲರಿಗೂ ತಿಳಿದಿದ್ದಿತು. ಅಶಕ್ತರಾದ ಹೆಂಗುಸರಿಗೆ ಭಯಂಕರವಾದ ಕಥೆಗಳನ್ನು ಕೇಳಿದರೆ ಹಾಗೆ ಕಳವಳ ವುಂಟಾಗುವುದೇನೋ ಸ್ವಭಾವ. ಭಾಮಿನಿಯ ಮನೋಗತವನ್ನು ಚೆನ್ನಾಗಿ ಬಲ್ಲ ದಮನಕನು ಇವಳಿಗೆ ಅಂತರಂಗದಲ್ಲಿ ಏನೋ ಇದೆ; ಆ ಗುಟ್ಟನ್ನು ಇವಳು ಈಗ ಹೊರಗೆಡವಳು. ಇನ್ನಾವಾಗಲಾದರೂ ಸಂದರ್ಭ ಬಂದರೆ ನೋಡೋಣ ಎಂದು ಯೋಚಿಸಿಕೊಂಡು ಸುಮ್ಮನಾದನು.

ಆ ವೇಳೆಗೆ ದುರ್ಮತಿಯು ದಡಬಡನೆ ಬಾಗಿಲನ್ನು ತೆರೆದುಕೊಂಡು ಒಳಕ್ಕೆ ಬಂದು, ಇದಿರಿಗೆ ನಲಿದಾಡುತ್ತ ಬಂದು ಕಾಲಿನ ಬಳಿ ನಿಂತ ನಾಯಿಮರಿಯನ್ನು ಎತ್ತಿ ದೂರ ಬಿಸುಟು, ಹೆಂಡತಿಯ ಕೊಟ್ಟಡಿಯಲ್ಲಿ ದಮನಕ

ನಿರುವುದನ್ನು ಕಂಡು, "ಸ್ವಾಮಿಾ, ಮನೆಗೆ ಹೋಗುವುದಕ್ಕೆ ನಿಮಗೆ ಹೊತ್ತಾಗಲಿಲ್ಲವೇ ?"ಎಂದನು.

ಗಂಡನು ಆ ದಿನ ಬೆಳಿಗ್ಗೆ ತನ್ನೊಡನೆ ಆಡಿದ್ದ ನಿಷ್ಠುರದ ಮಾತುಗಳಿಗಾಗಿ ಸಮಾಧಾನಪಡಿಸಲು ಬಂದಿದ್ದಾನೆಂದು ಊಹಿಸಿ, ಭಾಮಿನಿಯು ಅವನ ಮಾತನ್ನು ಲಕ್ಷ್ಯಮಾಡದೆ "ದಮನಕರೇ, ಯಾವುದನ್ನಾದರೂ ಓದಿ, ಕೇಳೋಣ" ಎಂದಳು.

ಆಗ ದುರ್ಮತಿಯು "ಇಂದು ನೀನು ಆಯಾಸಪಟ್ಟರೆ ಅನಾನುಕೂಲವಾಗವುದು. ಇದಲ್ಲದೆ ದಮನಕರು ಬಹುದೂರ ಹೋಗಬೇಕು" ಎಂದನು. ಎಂದೂ ಇಷ್ಟುಮಟ್ಟಿಗೆ ಹೇಳದಿದ್ದವನು ಇಂದು ಹೀಗೆ ಹೇಳಿದನಲ್ಲಾ ಎಂದು ದಮನಕನಿಗೆ ಆಶ್ಚರ್ಯವುಂಟಾಗಿ ಸ್ತಂಭದಂತೆ ನಿಂತನು. ಸಾಧಾರಣವಾಗಿ ಕೋಪದಿಂದ ನೋಡಿದಮಾತ್ರಕ್ಕೆ ಹೆದರಿ ಯಾವ ಮಾತನ್ನು ಆಡದೆ ಹೋಗುತ್ತಿದ್ದ ಗಂಡನು ಇಂದು ಹಾಗೆ ಮಾಡದಿದ್ದುದನ್ನು ಕಂಡು ಭಾಮಿನಿಗೂ ಅಶ್ಚರ್ಯವುಂಟಾಯಿತು. ಆದರೂ ಅವಳು ಹೆದರದೆ

"ದಮನಕರೇ, ನನಗೆ ಈಗಲೇ ನಿದ್ರೆಯು ಬರುವುದಿಲ್ಲ; ಇದಲ್ಲದೆ ನಿಮ್ಮ ಸಂಗಡ ತುಂಬ ಮಾತುಗಳನ್ನಾಡಬೇಕು. ನಿಮಗೆ ನಿದ್ರೆ ಬಂದರೂ ಸರಿಯೆ; ನೀವು ಈ ರಾತ್ರಿ ಇಲ್ಲಿ ಇದ್ದೇ ತೀರಬೇಕು"

"ಹಾಗೆಯೇ ಆಗಲಿ"

ಬಳಿಕ ದುರ್ಮತಿಯು "ಸ್ವಾಮೀ ದಮನಕರೇ, ಇವಳ ಅವಿವೇಕದ ಮಾತುಗಳನ್ನು ಕೇಳುತ್ತ ಏಕೆ ನೀವು ಅನ್ಯಾಯವಾಗಿ ಈ ರಾತ್ರಿ ಪ್ರಾಣಬಿಡುವಿರಿ? ಇವಳ ಮಾತುಗಳನ್ನು ನಾಳೆ ಕೇಳಬಹುದು. ಏನಾದರೂ ಸರಿಯೆ; ಈ ರಾತ್ರಿ ನಾನು ಇವಳೊಡನೆ ಅವಶ್ಯವಾಗಿ ರಹಸ್ಯವಾದ ಕೆಲವು ಮಾತುಗಳನ್ನಾಡಬೇಕು; ಆದುದರಿಂದ ತಾವು ದಯವಿಟ್ಟು ಮನೆಗೆ ಹೋಗಿ" ಎಂದು ಹೇಳಲು, ದಮನಕನೂ ಭಾಮಿನಿಯೂ "ಈಗೇನು ಮಾಡೋಣ ?" ಎಂದು ಒಬ್ಬರ ಮುಖವನ್ನೊಬ್ಬರು ನೋಡುತ್ತ ನಿಂತರು. ಅದನ್ನು ಕಂಡು ದುರ್ಮತಿಯು

"ದಮನಕರೇ, ಈ ಮನೆಯನ್ನು ಬಿಟ್ಟು ನಿಮ್ಮನ್ನು ಓಡಿಸಬೇಕೆಂದು ನಾನು ಎಂದೂ ಅಭಿಪ್ರಾಯಪಡುವವನಲ್ಲ. ಕೆಲವು ಸಂಗತಿಗಳನ್ನು ಅವಳ

ಸಂಗಡ ವಿಚಾರಮಾಡಬೇಕಾಗಿರುವುದು. ಅದರಿಂದ ತಾವು ದಯವಿಟ್ಟು ಈ ರಾತ್ರಿ ಮಟ್ಟಿಗೆ ನನಗೆ ಅವಳಲ್ಲಿ ಮಾತನಾಡಲು ಅವಕಾಶಕೊಡಬೇಕು"

ಇನ್ನು ತಾನಿರುವುದು ಸರಿಯಲ್ಲವೆಂದು ದಮನಕನು ಎದ್ದು, ಇವನನ್ನು ನಾವು ಎಷ್ಟೇ ಹಾಸ್ಯಮಾಡಿದರೂ ಇವನು ಈ ಗೃಹಕ್ಕೆ ಯಜಮಾನನು ಎಂದು ಕೊಂಡು ಹೊರಟುಹೋದನು.

ದಮನಕನು ಹೊರಟುಹೋದ ಮೇಲೆ ಅವನು ಕುಳಿತಿದ್ದ ಸೊಫಾದಲ್ಲಿ ತನ್ನ ಗಂಡನು ಕುಳಿತುದನ್ನು ನೋಡಿ ಭಾಮಿನಿಯು

''ಬರುತ್ತ ಬರುತ್ತ ನಿಮ್ಮ ಬುದ್ಧಿಯು ಈಚೆಗೆ ಕುದುರುತ್ತಲಿದೆ. ಮೊದಲೇ ಅವಿವೇಕಿ; ಇಂದು ನಿಮ್ಮ ಅವಿವೇಕವು ಮುಂಡೆಮೀರಿತು''

"ಇಂದು ನನಗೆ ಬಲು ಸಿಟ್ಟು ಬಂದಿದೆ"

''ನಿಮಗೆ ಕೋಪಬಂದರೆ ಅದನ್ನು ಎಲ್ಲಿ ತೋರಿಸಬೇಕೋ ಅಲ್ಲಿ ತೋರಿಸಿ; ನಾನು ಅದಕ್ಕೇನೂ ಹೆದರುವಳಲ್ಲ. ನಿಮ್ಮ ಸಂಬಳ ತಿನ್ನುವ ಗುಮಾಸ್ತರ ಮೇಲೆ ಬೇಕಾದರೆ ತೋರಿಸಿ.''

''ನನ್ನ ಗುಮಾಸ್ತರುಗಳಿಂದಲೇ ನನ್ನ ಜೀವನ; ಅವರಿಂದಲೇ ನಾನು ಈ ಸ್ಥಿತಿಗೆ ಬಂದುದು. ಅವರ ಮೇಲೆ ಕೋಪಗೊಳ್ಳುವುದು ತಪ್ಪು ನಾನು ಸಂಪಾದಿಸುವುದನ್ನು ತಿಂದು ಧ್ವಂಸಮಾಡಿ ನನಗೆ ನಷ್ಟಪಡಿಸುವರೇ ನನ್ನ ಕೋಪಕ್ಕೆ ಪಾತ್ರರು.''

"ಅಂಥವರಾರು ಇಲ್ಲಿ ಇದ್ದಾರೆ ?"

"ನಿನಗೆ ಗೊತ್ತಿಲ್ಲವೇ? ನಿನ್ನ ಮಾತನ್ನು ಕೇಳಿಯಲ್ಲವೇ ನನಗೆ ಈ ಗತಿ ಆಯಿತು ?"

''ಅದು ನನ್ನ ತಪ್ಪೇ ? ತಂತಿಯ ವರ್ತಮಾನವು ಸುಳ್ಳಾದರೆ ಯಾರೇನು ಮಾಡುವುದು ? ಈ ಹಣ ಕಾಸುಗಳ ಮಾತನ್ನೂ ಈ ಹಣವೆಣಿಸುವ ಸದ್ದನ್ನೂ ಕೇಳಿ ಕೇಳಿ ನಾನು ಬೇಸತ್ತಿದ್ದೇನೆ. ಇನ್ನು ಮುಂದೆ ಇಂತಹ ಮಾತುಗಳನ್ನು ನನ್ನಿದಿರಿಗೆ ಎಂದಾದರೂ ಆಡಿಗೀಡೀರಿ. ಜೋಕೆ! ನಿಮ್ಮ ಮಾತೆಂದರೆ ನನಗೆ ಮೆಯ್ಯೆಲ್ಲ ಬೆಂಕಿಯಾಗುತ್ತಿದೆ"

''ಓಹೋ! ಇದುವರೆಗೆ ಸಿಹಿಯಾಗಿದ್ದುದು ಈಗ ಕಹಿಯಾಯಿತೋ ?"

''ನನಗೆ ಅದರಲ್ಲಿ ರುಚಿಯೇ ? ಇದನ್ನು ನಿಮಗೆ ಯಾರು ಹೇಳಿದರು ?"

"ನನಗೆ ತಿಳಿದ ವಿಷಯವನ್ನು ಬೇರೊಬ್ಬರಿಂದ ತಿಳಿಯಬೇಕೇ ? ಹೋದ ವರ್ಷ ಇದೇ ದಿನ ನೀನು ಸ್ವಪ್ನ ಕಂಡೆನೆಂದು ನನ್ನ ಸಂಗಡ ಹೇಳಿದಂತೆ ನಾನು ಪತ್ರಗಳನ್ನು ಮಾರಿಬಿಟ್ಟುದರಿಂದ ನಾಲ್ಕು ಲಕ್ಷ ವರಹಗಳ ಲಾಭವು ಬಂದಿತು. ಅದರಲ್ಲಿ ನಿನಗೆ ಒಂದು ಲಕ್ಷ ವರಹಗಳನ್ನು ಕೊಟ್ಟುಬಿಟ್ಟೆನು. ಅದನ್ನು ಏನು ಮಾಡಿದೆಯೋ ? ಬಹುಶಃ ದಮನಕನಿಗೆ ಕೊಟ್ಟಿರಬಹುದು. ಅದರಿಂದ ಈಚೆಗೆ ಎರಡು ಸಾರಿ ನಿನ್ನ ಸ್ವಪ್ನವನ್ನು ನೆಚ್ಚಿ ವ್ಯಾಪಾರಮಾಡಿದೆನು. ಏಳು ಲಕ್ಷ ವರಹಗಳ ಲಾಭವು ಬಂದಿತು. ಅದರಲ್ಲಿ ನಿನಗೆ ಕಾಲುಭಾಗವನ್ನು ಕೊಟ್ಟೆನು."

"ಈ ಕಥೆಯಿಂದ ಏನು ಪ್ರಯೋಜನ ? ಇಲ್ಲಿಗೆ ನೀವು ಬಂದ ಸಮಾಚಾರವೇನು ಹೇಳಿ."

"ಅವಸರಪಡಬೇಡ. ಈ ಕಥೆಯು ಅದಕ್ಕೆ ಬೇಕಾದುದೇ. ದಮನಕನ ಸಂಗಡ ನೀನು ಮಾತನಾಡಿ ನನಗೆ ಹೇಳಿದಂತೆ ನಾನು ವ್ಯಾಪಾರ ಮಾಡಲು ಈಗ ಏಳು ಲಕ್ಷ ವರಹಗಳು ನಷ್ಟವಾದುವು. ಈ ನಷ್ಟದ ನಾಲ್ಕರಲ್ಲಿ ಒಂದು ಭಾಗವನ್ನು ನೀನಾದರೂ ಕೊಡು, ಇಲ್ಲವೆ ದಮನಕನಿಂದಲಾದರೂ ಕೊಡಿಸು."

"ನಿಮಗೇನು ಬುದ್ಧಿಗಿದ್ಧಿಯಿದೆಯೋ ಇಲ್ಲವೋ ? ಈಗ ದಮನಕನ ಪ್ರಸ್ತಾಪವೇತಕ್ಕೆ ?"

"ನೀನೂ ಅವನೂ ಒಂದಾಗಿ ಬಂದ ಹಣವನ್ನು ಹಂಚಿಕೊಳ್ಳುತ್ತೀರಿ ; ಆದುದರಿಂದ ನೀವು ಇಬ್ಬರೂ ನನ್ನ ನಷ್ಟವನ್ನು ಕಟ್ಟಿಕೊಡಬೇಕು."

"ನಾವು ಹಂಚಿಕೊಳ್ಳುತ್ತೇವೆಂದು ನಿಮಗಾರು ಹೇಳಿದರು ?"

"ಬೆಕ್ಕು ಕಣ್ಣುಮುಚ್ಚಿಕೊಂಡು ಹಾಲು ಕುಡಿದರೆ ಯಾರಿಗೂ ಗೊತ್ತಾಗುವುದಿಲ್ಲವೇ ? ನೀನೇನೋ ಕೆಲಸಗಳನ್ನು ಬಲು ಗುಟ್ಟಾಗಿ ಮಾಡುವೆನು ಎಂದು ತಿಳಿದುಕೊಂಡು ಇದೀಯೆ ; ನಾನು ಅವೆಲ್ಲವನ್ನೂ ಬಲ್ಲೆನು."

"ಅಯ್ಯೋ! ಅಂತಹ ಕೆಲಸಗಳಾವುವನ್ನು ನಾನು ಮಾಡಿದ್ದೇನೆ" ಎಂದು ಅವಳು ಬೇಕೆಂದು ಅಳುತ್ತ ಕಣ್ಣನೊರಸಿಕೊಂಡಳು.

"ಎಲೇ ! ಇದು ನಾಟಕಶಾಲೆಯಲ್ಲ. ಈ ನಟನೆಗಳೂ, ಅಭಿನಯವೂ, ಅಳುವೂ ಇಲ್ಲಿ ಏನೂ ಪ್ರಯೋಜನವಾಗದು. ನಿನ್ನ ಪ್ರಿಯ ದಮನಕನ

ಮುಂದೆ ಈ ಆಟವನ್ನು ಹೂಡಿದರೆ ಅವನು ನಿನ್ನ ಇಷ್ಟಾಪೂರ್ತಿಯನ್ನು ಮಾಡಿಯಾನು" ಎಂದು ದುರ್ಮತಿ ಹೇಳಿದ ಕೂಡಲೆ ಅವಳಿಗೆ ಕೋಪವು ಮಿತಿಮೀರಿ

"ಎಲೆಲಾ, ಪಾಪಿ ! ಚಂಡಾಲ ! ನಿನಗೆ ಮೊದಲಿನಿಂದಲೂ ತಿಳಿದಿದ್ದ ಸಂಗತಿಗಳನ್ನು ಈಗ ನಾಚಿಕೆಯಿಲ್ಲದೆ ನನ್ನ ಮುಂದೆ ಬಗುಳಿ ಅಪಮಾನ ಮಾಡುವೆಯಾ ?"

"ನಿನಗೆ ಮಾನವೇನು, ಅಪಮಾನವೇನು ? ಅದು ಹೇಗಾದರೂ ಇರಲಿ. ನಮ್ಮ ಹಣಕಾಸಿನ ಲೆಕ್ಕಾಚಾರವು ವಿಲೆಯಾದರೆ ಸರಿ. ನಾನು ಪ್ರತಿಕಕ್ಷಿಯವನಾದುದರಿಂದ ಮಂತ್ರಿಯೂ ದಮನಕನೂ ಸೇರಿ ನನ್ನನ್ನು ಮುಳುಗಿಸುವುದಕ್ಕೆ ಈ ಕೆಲಸವನ್ನು ಮಾಡಿದ್ದರೂ ಇರಬಹುದು."

"ತಂತಿಯ ವರ್ತಮಾನವು ಸುಳ್ಳೆಂಬುದು ಲೋಕಕ್ಕೇ ಗೊತ್ತು. ಆ ಕಚೇರಿಯಲ್ಲಿದ್ದವನು ತಪ್ಪುಮಾಡಿ ಓಡಿಹೋಗಿದ್ದಾನೆ; ಅವನನ್ನು ಪೋಲೀಸಿನವರು ಹುಡುಕುತ್ತಿದ್ದಾರೆ. ಹೀಗಿರುವಲ್ಲಿ ದಮನಕನು ಆ ಕೆಲಸವನ್ನು ಮಾಡಿದನೆಂದು ಹೇಳುವುದು ಸರಿಯಲ್ಲ."

"ನೀನು ಏನು ಬೇಕಾದರೂ ಹೇಳು. ನನಗೇನೋ ಅವನ ಮೇಲೆಯೇ ಅನುಮಾನ."

"ಹಾಗೋ, ಅದನ್ನು ನನ್ನ ಮುಂದೆ ಹೇಳಿ ಏನು ಪ್ರಯೋಜನ? ಅವನ ಮುಂದೆ ಹೇಳಿದ್ದರೆ ತಕ್ಕ ಬದಲನ್ನು ಅವನು ಹೇಳುತ್ತಿದ್ದನು."

"ನಾನು ಅವನನ್ನು ಕಂಡೆನೇ ? ನನಗೂ ಅವನಿಗೂ ಸ್ನೇಹವೇ ? ಇಲ್ಲ, ಅವನನ್ನು ಚೆನ್ನಾಗಿ ಅರಿತು ಅವನ ಸ್ನೇಹವನ್ನು ಸಂಪಾದಿಸಿಕೊಂಡಿರುವೆಯಾದುದರಿಂದ ನೀನೇ ಅವನಿಂದ ಈ ನಷ್ಟವನ್ನು ಕೊಡಿಸಿಕೊಡಬೇಕು."

"ನನಗೆ ತೋರುವುದು........" ಎಂದು ಭಾಮಿನಿಯು ಹೇಳಿ ಮುಗಿಸುವುದರೊಳಗಾಗಿಯೇ ದುರ್ಮತಿಯು ತನ್ನ ಭುಜಗಳನ್ನೂ ಹುಬ್ಬುಗಳನ್ನೂ ಹಾರಿಸುತ್ತ,

"ಕಾಮಾಸಕ್ತರಾದ ಸ್ತ್ರೀಯರು ಊರಿನವರ ಬಾಯಿಗೆ ಬಾರದಂತೆ ಒಂದೆರಡು ಸಾರಿ ಕೆಟ್ಟಕೆಲಸಮಾಡಿದ ಮಾತ್ರಕ್ಕೆ ತಾವೇ ಬುದ್ಧಿವಂತರೆಂದು ತಿಳಿದುಕೊಳ್ಳುವರು. ಸಾಧಾರಣವಾಗಿ ಹೆಂಡಿರ ಕೆಟ್ಟ ನಡತೆಯನ್ನು ಗಂಡಂದಿರು ಕಂಡರೂ ಕಾಣದಂತೆ ಇರುವರು. ನಿನ್ನ ನಡತೆಯು ಗಂಡನಿಗೆ

ತಿಳಿಯದೆ ಇದ್ದಿತೆಂದು ನೀನು ತಿಳಿದುಕೊಂಡು ಇದ್ದಲ್ಲಿ, ನಿನಗೆ ಇನ್ನೂ ಸರಿಯಾದ ಲೋಕದನುಭವ ಬಂದಿಲ್ಲ. ಈ ಹದಿನಾರು ವರ್ಷಗಳಿಂದ ನಿನ್ನ ನಡತೆಯನ್ನೆಲ್ಲಾ ನಾನು ಚೆನ್ನಾಗಿ ಪರಿಶೀಲಿಸಿ ಕಂಡುಕೊಂಡಿದ್ದೇನೆ. ಆದರೂ ಏನೂ ತಿಳಿಯದವನಂತೆ ಇದ್ದುದರಿಂದ ವಲ್ಲಭದೇವನೇ ಮೊದಲಾದವರು ನನ್ನನ್ನು ಕಂಡರೆ ಹಿಂದೆ ನಗುತ್ತಾರೆ. ಅವರೆಲ್ಲರೂ ನನ್ನನ್ನು ದ್ವೇಷಿಸುವಂತೆ ಬೇಕಾದರೆ ಮಾಡು; ಅವರು ಎಂದೂ ನನ್ನನ್ನು ಮುಳುಗಿಸುವುದಕ್ಕೆ ನಿನ್ನ ಸಹಾಯವನ್ನು ಹೊಂದಗೊಡೆನು, ಚೆನ್ನಾಗಿ ತಿಳಿದಿರು."

ಅದುವರೆಗೆ ಸುಮ್ಮನೆ ಇದ್ದ ಭಾಮಿನಿಯ ಮುಖವು ವಲ್ಲಭದೇವನ ಹೆಸರನ್ನು ಕೇಳಿದ ಕೂಡಲೇ ಬಿಳುಪೇರಿ, ಹೃದಯದಲ್ಲಿ ಅಡಗಿರುವ ಗುಟ್ಟನು ಕಿತ್ತು ಹೊರಸೂಸುವಳೋ ಎಂಬಂತೆ ಎರಡು ಕೈಗಳನ್ನೂ ನೀಡಿಕೊಂಡು ತಾನು ನಿಂತಿದ್ದ ಬಳಿಯಿಂದ ಒಂದು ಹಾರು ಹಾರಿ ದುರ್ಮತಿಯ ಮುಂಗಡೆ ಬಂದು ನಿಂತು

"ಹಾ ! ವಲ್ಲಭದೇವನೇ ? ಹಾಗೆಂದರೇನು "

"ಹೋ ! ಹೋ ! ನಿಲ್ಲು, ನಿಲ್ಲು. ಈ ನಿನ್ನ ಠಕ್ಕನ್ನು ನಾನು ಬಲ್ಲೆ. ದಮನಕನಿಂದ ನನಗೆ ಏಳು ಲಕ್ಷ ವರಹಗಳು ನಷ್ಟವಾದುವು; ಅದರಲ್ಲಿ ಸ್ವಲ್ಪ ಭಾಗವನ್ನು ಕೊಟ್ಟುಬಿಟ್ಟರೆ ಅವನು ಮೊದಲಿನಂತೆ ನನ್ನ ಮನೆಗೆ ಬರುತ್ತ ಹೋಗುತ್ತ ಇರಲಿ; ಕೊಡದಿದ್ದರೆ ಅವನು ನನ್ನ ಮನೆಯ ಹೊಸ್ತಿಲನ್ನು ತುಳಿಯದಂತೆ ಮಾಡುತ್ತೇನೆ."

ಅದನ್ನು ಕೇಳಿ ಭಾಮಿನಿಯು ಏನನ್ನೋ ಹೇಳಲು ಹೋಗಿ ಮಾತು ಹೊರಡದೆ, ವಲ್ಲಭದೇವನನ್ನೂ ರಾಜಾಮಲಯಸಿಂಹನ ಮನೆಯಲ್ಲಿ ನಡೆದುದೆಲ್ಲವನ್ನೂ ಈಚೆಗೆ ತನ್ನ ಮನೆಯಲ್ಲಿ ಉಂಟಾದ ದೌರ್ಭಾಗ್ಯಗಳನ್ನೂ ನೆನಸಿಕೊಂಡು ಮೂರ್ಛಿತಳಾಗಿ ದೊಪ್ಪನೆ ನೆಲದ ಮೇಲೆ ಬಿದ್ದಳು. ಅದನ್ನು ಸಡ್ಡೆಗೈಯದೆ ದುರ್ಮತಿಯು ಕೊಟ್ಟಡಿಯ ಬಾಗಿಲನ್ನು ಎಳೆದುಕೊಂಡು ಸದ್ದಿಲ್ಲದೆ ತನ್ನ ಕೊಟ್ಟಡಿಗೆ ಹೊರಟುಹೋದನು. ಭಾಮಿನಿಯು ಮೂರ್ಛೆತಿಳಿದು ಎದ್ದಾಗ ರಾತ್ರಿಯೆಲ್ಲಾ ಹಾಗೆಯೇ ಬಿದ್ದಿದ್ದಳೋ ಹಾಸಿಗೆಯ ಮೇಲೆ ಮಲಗಿದ್ದಳೋ ತಿಳಿಯದು; ಬೆಳಿಗ್ಗೆ ಎದ್ದು ಸುಮಾರು ಅರ್ಧಗಂಟೆಯಾದ ಮೇಲೆ ಅವಳು ತನಗೆ ಏನೋ ಒಂದು ದುಸ್ಸ್ವಪ್ನವಾಯಿತೆಂದು ತಿಳಿದುಕೊಂಡಳು.

ಮೂರನೆಯ ದಿನ ಬೆಳಿಗ್ಗೆ ದುರ್ಮತಿಯು ಎಲ್ಲಿಯೂ ಹೊರಗೆ ಹೊರಡಲಿಲ್ಲ. ಭಾಮಿನಿಯು ಬಂಡಿಯನ್ನು ಕಟ್ಟಿಸಿಕೊಂಡು ಮಧ್ಯಾಹ್ನ ಎಲ್ಲಿಯೋ ಹೊರಟಳು. ಅದನ್ನು ದುರ್ಮತಿಯು ಮರೆಯಲ್ಲಿ ನಿಂತು ನೋಡುತ್ತಲಿದ್ದು ಅವಳು ಮನೆಗೆ ಬಂದ ಕೂಡಲೇ ತನಗೆ ವರ್ತಮಾನವನ್ನು ಕೊಡಬೇಕೆಂದು ಆಳುಗಳಿಗೆ ಅಪ್ಪಣೆ ಮಾಡಿ, ಎರಡು ಗಂಟೆಯವರೆಗೆ ತನಗೆ ಬಂದಿದ್ದ ಲೇಖನಗಳನ್ನು ಓದುತ್ತ ಕುಳಿತಿದ್ದನು. ಆಗ ಬೊಮ್ಮರಾಜುವು ಬಂದು ಸ್ವಲ್ಪ ಹೊತ್ತು ಮಾತನಾಡುತ್ತಲಿದ್ದು ತನಗೆ ಬರಬೇಕಾದ ಹಣವನ್ನು ತೆಗೆದುಕೊಂಡು ಹೊರಟುಹೋದನು. ಎರಡು ಗಂಟೆಯಾದರೂ ಹೆಂಡತಿಯು ಮನೆಗೆ ಬಾರದೆ ಇದ್ದುದರಿಂದ ದುರ್ಮತಿಯು ಬಂಡಿಯನ್ನು ಹೂಡಿಸಿಕೊಂಡು ರಾಜಾಮಲಯ ಸಿಂಹನ ಮನೆಗೆ ಹೊರಟನು.

ದುರ್ಮತಿಯು ಬರುವ ವೇಳೆಗೆ ಸರಿಯಾಗಿ ರಾಜನು ಒಳಗೆ ಇದ್ದನು. "ಎರಡು ನಿಮಿಷಗಳಲ್ಲಿ ಬಂದು ದರ್ಶನಮಾಡಿಕೊಳ್ಳುತ್ತೇನೆ ಎಂದು ರಾಜನು ಹೇಳಿ ಕಳುಹಿಸಿದನು. ದುರ್ಮತಿಯು ಅಲ್ಲಿ ಕುಳಿತಿರುವಾಗ ಸನ್ಯಾಸಿಯೊಬ್ಬನು ಒಳಗಿನಿಂದ ಬಂದು ದುರ್ಮತಿಗೆ ತಲೆಬಾಗಿ ಹೊರಗಡೆಯ ಕೊಟ್ಟಡಿಯ ಬಾಗಿಲನ್ನು ತೆರೆದುಕೊಂಡು ಹೋದನು.

ಅವನು ಹೋದ ಎರಡು ನಿಮಿಷಗಳಲ್ಲಿ ಅದೇ ಕೊಟ್ಟಡಿಯಿಂದ ರಾಜಾಮಲಯಸಿಂಹನು ಬಂದು

"ದುರ್ಮತಿಗಳೇ, ಈಗ ಇತ್ತ ಹೋದ ಸನ್ಯಾಸಿಗಳನ್ನು ನೀವು ಬಲ್ಲಿರಾ? ಅವರಿಗೂ ನನಗೂ ಬಾಲ್ಯಪ್ರಭೃತಿ ಬಹು ಸ್ನೇಹ. ಅವರನ್ನು ನೋಡಿ ಬಹು ದಿನಗಳಾಗಿದ್ದವು. ಅವರನ್ನು ಬಿಟ್ಟು ಬರಲಿಕ್ಕೆ ಆಗಲಿಲ್ಲ. ಹೊತ್ತಾದುದಕ್ಕಾಗಿ ಕ್ಷಮಿಸಬೇಕು."

"ಸ್ವಾಮಿ, ರಾಜರೇ ! ನಾನು ಈಗ ತಮ್ಮನ್ನು ಕಾಣಲಿಕ್ಕೆ ಬಂದುದು ಸರಿಯಲ್ಲವೆಂದು ತೋರುತ್ತದೆ. ಅಪ್ಪಣೆಯಾದರೆ ಮತ್ತೊಂದು ಸಲ ಬಂದು ಕಾಣುತ್ತೇನೆ."

"ತಾವು ಹೊರಡಕೂಡದು, ಕುಳಿತುಕೊಳ್ಳಿ; ನನಗೆ ಈಗ ಯಾವ ಕೆಲಸವೂ ಇಲ್ಲ."

ದುರ್ಮತಿಯು ಕುಳಿತ ಮೇಲೆ ಮಲಯಸಿಂಹನು ಅವನ ಮುಖವನ್ನು ನೋಡಿ

"ಶ್ರೀಮಂತರು ಏಕೋ ಚಿಂತಾಕ್ರಾಂತರಾಗಿರುವಂತೆ ಇದೆ; ಕಾರಣ ವೇನು ? ಧನಾಗಾರಪತಿಗಳು ಚಿಂತಾಕ್ರಾಂತರಾದರೆ ಧೂಮಕೇತುದರ್ಶನ ವಾದರೆ ಹೇಗೋ ಹಾಗೆ ಲೋಕಕ್ಕೆ ಕೇಡಾಗುವುದು."

"ರಾಜರೇ ! ನನಗೆ ಈಗ ಪೂರಾ ದುರದೃಷ್ಟ; ನಷ್ಟದ ಮೇಲೆ ನಷ್ಟ ವಾಗುತ್ತಲಿದೆ."

"ನೆನ್ನೆ ತಾನೇ ತಮಗೆ ಏಳು ಲಕ್ಷ ವರಹಗಳು ನಷ್ಟವಾಯಿತೆಂದು ಕೇಳಿದ್ದೆ; ಅದು ನಿಜವೊ ?"

"ಕೆಟ್ಟ ವರ್ತಮಾನವು ಎಂದೂ ಸುಳ್ಳಾಗದು."

"ಈಗೇನು ಪುನಃ ?"

"ಹದಿನೈದು ವರ್ಷಗಳಿಂದ ನನ್ನ ಸಂಗಡ ಇಪ್ಪತ್ತು ಮೂವತ್ತು ಲಕ್ಷಗಳ ಲೇವಾದೇವಿಮಾಡುತ್ತಲಿದ್ದ ದೊಡ್ಡ ವರ್ತಕನೊಬ್ಬನು ದಿವಾಳಿಯಾದನೆಂದು ಒಂದು ಲೇಖನವು ಇಂದು ಬಂದಿತು. ಅವನಿಂದ ನನಗೆ ಬರಬೇಕಾಗಿದ್ದ ಹತ್ತು ಲಕ್ಷ ವರಹಗಳು ಕೈಬಿಟ್ಟು ಹೋದಂತೆ ಕಾಣುತ್ತದೆ."

"ದಿವಾಳಿಯಾದ ಮೇಲೆ ಮುಳುಗಿ ಹೋದಂತೆ ಕಾಣುವುದೇನು ? ಮುಳುಗಿಯೇ ಹೋಯಿತು. ಅಯ್ಯೋ ಪಾಪ ! ಈ ತಿಂಗಳು ನಿಮಗೆ ಹದಿ ನೇಳು ಲಕ್ಷ ವರಹಗಳು ನಷ್ಟವಾಯಿತೇ ? ನಿಮ್ಮಂತಹ ಮೂರನೆಯ ವರ್ಗದ ಧನಾಗಾರ ಪತಿಗಳು ಈ ನಷ್ಟವನ್ನು ಹೇಗೆ ತಾನೇ ತಡೆದುಕೊಂಡಾರು ?"

"ಮೂರನೆಯ ತರಗತಿ ! ಅದು ಹೇಗೆ ?"

"ಸಂಪತ್ತಿನಲ್ಲಿ ನಾನು ಮಾಡಿಕೊಂಡಿರುವುದು ಮೂರು ತರಗತಿಗಳು. ಹತ್ತು ಕೋಟಿಗೆ ಕಡಿಮೆಯಿಲ್ಲದ ದ್ರವ್ಯವನ್ನೇ ಆಗಲಿ, ಚಿನ್ನ, ಬೆಳ್ಳಿ, ವಜ್ರ, ಕೆಂಪು ಮುಂತಾದ ಚ್ಯುತಿಯಿಲ್ಲದ ಗಣಿಗಳನ್ನೇ ಆಗಲಿ ಪಡೆದಿರುವ ಶ್ರೀಮಂತ ರುಗಳನ್ನು ಮೊದಲನೆಯ ತರಗತಿಯಲ್ಲಿಯೂ; ವ್ಯಾಪಾರಮಾಡಿಯೇ ಆಗಲಿ ಉದ್ಯೋಗ ಮಾಡಿಯೇ ಆಗಲಿ ಭೂಸ್ಥಿತಿಯಿಂದಲೇ ಆಗಲಿ ಒಂದು ಕೋಟಿ ಧನ ಸಂಪಾದನೆ ಮಾಡಿರುವವರನ್ನು ಎರಡನೆಯ ತರಗತಿಯಲ್ಲಿಯೂ; ಮಿಕ್ಕ ನಿಮ್ಮಂತಹವರನ್ನು ಮೂರನೆಯ ತರಗತಿಯಲ್ಲಿಯೂ ಇಟ್ಟಿರುವೆನು."

"ಹಾಗಾದರೆ ನನ್ನದು ಮೂರನೆಯ ತರಗತಿಯೇ ಸರಿ."

''ಇಂತಹ ನಷ್ಟಗಳು ಐದಾರು ಆದರೆ ನಿಮ್ಮ ಪರಿಣಾಮವು ತೀರಿತು- ಆದುದರಿಂದ ನೀವು ಇನ್ನು ಮುಂದೆ ಜಾಗರೂಕರಾಗಿರಬೇಕು."

''ಇದು ಹೇಗಾದರೂ ಆಗಲಿ. ಬೊಮ್ಮರಾಜುವಿಗೆ ನಾನೇನು ಹೇಳಲಿ?"

''ಯಾವ ವಿಷಯದಲ್ಲಿ ? ಓಹೋ ! ಹಣದ ವಿಷಯವೋ ? ಸರಿಯಾದ ವರು ಹೊಣೆಯಾಗುವುದಾಗಿದ್ದರೆ ಹಣವನ್ನು ಕೊಡಿ; ಇಲ್ಲವಾದರೆ ಬೇಡಿ."

''ಅವರು ಮಗನಿಗೆ ವರ್ಷಕ್ಕೆ ಎಷ್ಟು ಕೊಡುವುದಾಗಿ ಏರ್ಪಾಡು ಮಾಡಿದ್ದಾರೆ ?''

''ಅರವತ್ತು ಸಾವಿರ ವರಹಗಳು.''

''ಬೊಮ್ಮರಾಜುವು ಬಹುಲೋಭಿಯೆಂದು ಕಾಣುತ್ತದೆ. ಶ್ರೀಮಂತರ ಮಕ್ಕಳಾಗಿ ಈ ಪಟ್ಟಣದಲ್ಲಿ ವಾಸಮಾಡುವ ಅನಂತರಾಜುವಿಗೆ ತಿಂಗಳಿಗೆ ಐದು ಸಾವಿರ ವರಹಗಳು ಹೇಗೆ ತಾನೇ ಸಾಕಾದೀತು ? ಒಂದು ವೇಳೆ ಅನಂತ ರಾಜುವು ಹೆಚ್ಚು ಕೇಳಿದರೆ—"

"ಕೊಡಬೇಡಿ; ನೀವು ಕೊಟ್ಟರೆ ಅಪ್ಪನು ತೀರಿಸಲಾರನು."

"ನೀವು ಈ ರಾಜುಗಳನ್ನು ನಂಬಲಾರಿರೋ ?"

"ನನಗೆ ತಿಳಿದ ಮಟ್ಟಿಗೆ ಅವರಿಗೆ ಎಷ್ಟು ಸಾಲಕೊಟ್ಟರೂ ನಷ್ಟವಾಗುವುದಿಲ್ಲ. ಆದರೆ ನಮ್ಮ ಸಮಯಕ್ಕೆ ಸಿಕ್ಕುವುದು ಕಷ್ಟ. ಇದಲ್ಲದೆ ನೀವು ಊಹಿಸುವಂತೆ ತಂದೆಯು ಸ್ವಲ್ಪ ಲೋಭಿಯೇ."

"ಎಷ್ಟು ಐಶ್ವರ್ಯವಿದ್ದರೂ ಅವರು ಎಂಥಾ ನಿಗರ್ವಿಗಳು ? ಅವರನ್ನು ನೋಡಿದರೆ ಸಾಧಾರಣ ಮನುಷ್ಯರಂತೆಯೇ ಇದ್ದಾರೆ. ಅಪ್ಪನಿಗಿಂತ ಮಗನು ಸುಶಿಕ್ಷಿತನಾಗುವಂತೆ ತೋರುತ್ತದೆ."

"ನನಗೂ ಹಾಗೆಯೇ ತೋರಿತು; ಆದರೆ ಆಂಧ್ರದೇಶದವರ ಮನಸ್ಸಿನ ಆಳವನ್ನು ಕಂಡವರು ಯಾರು ?"

"ಬೊಮ್ಮರಾಜುವು ಮಗನನ್ನು ಇಲ್ಲಿ ಬಿಡುವುದಕ್ಕೆ ಕಾರಣವೇನು ?''

"ಮಗನಿಗೆ ಈ ದೇಶದ ಹೆಣ್ಣನ್ನು ಮದುವೆಮಾಡುವ ಯೋಚನೆಯಿಂದ."

"ಅದು ನಿಶ್ಚಯವೋ ?''

"ದುರ್ಮತಿಗಳೇ, ನೀವು ಆಡುವಮಾತನ್ನೂ ಕೇಳುವ ಪ್ರಶ್ನೆಯನ್ನೂ

ನೋಡಿದರೆ ನಿಮ್ಮ ಮಗಳನ್ನು ಅನಂತರಾಜನಿಗೆ ಕೊಟ್ಟು ಮದವೆಮಾಡಬೇಕೆಂಬ ಯೋಚನೆಯಿರುವಂತಿದೆ."

"ಏತಕ್ಕೆ ಆಗಬಾರದು ?"

"ಉದಯಸಿಂಹನಿಗೆ ಕೊಡುವುದಾಗಿ ನಿಶ್ಚಯವಾಗಿರಲಿಲ್ಲವೇ? ಅವರೂ ಶ್ರೀಮಂತರು, ನೀವೂ ಶ್ರೀಮಂತರು; ನೀವು ನೀವು ಸಂಬಂಧಮಾಡಿದರೆ ಚೆನ್ನಾಗಿರುವುದು. ಉದಯಸಿಂಹನು ಅನಂತರಾಜುವಿಗೆ ಯಾವ ರೀತಿಯಲ್ಲಿಯೂ ಕಡಿಮೆಯಾದವನಲ್ಲ."

"ಉದಯಸಿಂಹನ ತಂದೆತಾಯಿಗಳನ್ನು ನಾನು ಮೂವತ್ತು ವರ್ಷಗಳಿಂದ ಬಲ್ಲೆ. ನಾನು ಗುಮಾಸ್ತನಾಗಿದ್ದಾಗ ಅವನ ಅಪ್ಪನು ಮೀನು ಹಿಡಿಯುತ್ತಲೂ, ತಾಯಿಯು ಅದನ್ನು ಮಾರುತ್ತಲೂ ಇದ್ದರು. ಅಪ್ಪನಿಗೆ ಆಗ ಬೇರೆ ಹೆಸರಿದ್ದಿತು."

"ಯಾವ ಹೆಸರು ?"

"ವಿಷಯಲಂಪಟ."

"ನಿಶ್ಚಯವಾಗಿಯೂ ?"

"ನಿಶ್ಚಯವಾಗಿಯೂ. ನಾನೇ ಎಷ್ಟೋ ಸಾರಿ ಅವನಿಂದ ಮೀನನ್ನು ಕೊಂಡಿದ್ದೇನೆ."

"ಹಾಗಾದರೆ ಅಂಥವನ ಮಗನಿಗೆ ನಿಮ್ಮ ಮಗಳನ್ನು ಕೊಡುವುದಕ್ಕೆ ಹೇಗೆ ತಾನೇ ನಿಮಗೆ ಮನಸ್ಸು ಬಂದೀತು ?"

"ನಾವಿಬ್ಬರೂ ದರಿದ್ರರಾಗಿದ್ದು, ಇಬ್ಬರೂ ಒಳ್ಳೆಯ ಪದವಿಗೆ ಬಂದೆವು. ಆದರೆ ಅವನ ವಿಷಯದಲ್ಲಿ ಮಾತ್ರ—"

"ಏನು ?"

"ಏನೂ ಇಲ್ಲ."

"ಓಹೋ! ನೀವು ಅವನ ಹೆಸರನ್ನು ಹೇಳುತ್ತಲೇ ಯವನದೇಶದಲ್ಲಿ ಆ ಹೆಸರನ್ನು ನಾನು ಕೇಳಿದ್ದುದು ನೆನಪಿಗೆ ಬಂದಿತು."

"ಓಹೋ! ಕ್ಷಿತೀಂದ್ರನ ಸಂದರ್ಭದಲ್ಲೋ ?"

"ಅಹುದು."

"ಅಲ್ಲಿ ಏನು ನಡೆಯಿತೆಂದು ತಿಳಿಯಲೋಸುಗ ನಾನು ಎಷ್ಟೋ

ಪ್ರಯತ್ನಪಟ್ಟೆನು ; ಸಾಧ್ಯವಾಗಲಿಲ್ಲ."

"ನಿಮಗೆ ಅವಶ್ಯವಾಗಿದ್ದರೆ ಅದನ್ನು ಸುಲಭವಾಗಿ ತಿಳಿಯಬಹುದು."

"ಅದು ಹೇಗೆ ?"

"ಯವನದೇಶದಲ್ಲಿ ನಿಮ್ಮ ಕಡೆಯ ವ್ಯಾಪಾರದವರು ಯಾರೂ ಇಲ್ಲವೋ? ಅಲ್ಲಿಗೆ ಬರೆದರೆ ನಿಮಗೆ ಬೇಕಾದುದು ತಿಳಿಯುತ್ತದೆ."

"ಅಹುದು ನಿಶ್ಚಯ ; ಈಗ ಮನೆಗೆ ಹೋದ ಕೂಡಲೇ ಅಲ್ಲಿಗೆ ಬರೆಯುತ್ತೇನೆ."

"ಹಾಗೆಯೇ ಮಾಡಿ. ಅಲ್ಲಿಂದ ಬಂದ ವರ್ತಮಾನವನ್ನು ದಯವಿಟ್ಟು ನನಗೆ ಸ್ವಲ್ಪ ತಿಳಿಸಬೇಕು."

"ಅವಶ್ಯವಾಗಿ ಆಗಬಹುದು" ಎಂದು ಹೇಳಿ ದುರ್ಮತಿಯು ಮಲಯಸಿಂಹನ ಅಪ್ಪಣೆಯನ್ನು ಪಡೆದು ತನ್ನ ಮನೆಗೆ ಹೋದನು.

---

# ನಲವತ್ತೇಳನೆಯ ಅಧ್ಯಾಯ

## ಅಂತರಂಗವಿಚಾರಣೆ

ಅತಿ ವೇಗವಾಗಿ ಬಂಡಿಯನ್ನು ಓಡಿಸಿಕೊಂಡು ತಿರುಗಿ ಮನೆಗೆ ಹೋಗುತ್ತಲಿದ್ದ ದುರ್ಮತಿಯನ್ನು ಬಿಟ್ಟು, ಅವನ ಮಡದಿ ಭಾಮಿನಿಯು ಏನು ಮಾಡುತ್ತಿರುವಳೆಂಬುದನ್ನು ಸ್ವಲ್ಪ ನೋಡೋಣ. ಅವಳು ತನ್ನ ಬಂಡಿಯನ್ನು ಕಟ್ಟಿಸಿಕೊಂಡು ಮನೆಯಿಂದ ಹೊರಟವಳು ಸುಮಾರು ಒಂದು ಮೈಲಿಯ ದೂರ ಹೋಗಿ, ಅದರಿಂದಿಳಿದು "ನಾನು ಬರುವವರೆಗೆ ಬಂಡಿಯನ್ನು ಇಲ್ಲಿಯೇ ಎಲ್ಲಾದರೂ ಮರೆಯಾಗಿ ನಿಲ್ಲಿಸಿಕೊಂಡು ಇರು" ಎಂದು ಸಾರಥಿಗೆ ಹೇಳಿ, ತನ್ನ ಗುರುತು ಯಾರಿಗೂ ಸಿಕ್ಕದಂತೆ ಮುಖಕ್ಕೆ ಅವಕುಂಠನವನ್ನು ಹಾಕಿಕೊಂಡು ಸಿದ್ಧವಾಗಿದ್ದ ಬಾಡಿಗೆಯ ಬಂಡಿಯೊಂದನ್ನು ಹತ್ತಿ, ವಲ್ಲಭದೇವನ ಕಚೇರಿಯ ಮುಂದುಗಡೆ ಇಳಿದು "ನ್ಯಾಯಾಧಿಪತಿಗಳು ಇದಾರೆಯೋ ?"ಎಂದು ಆಳನ್ನು ಕೇಳಿದಳು. ಇವಳು ಬರುವ ಸಮಾಚಾರವನ್ನು ವಲ್ಲಭದೇವನಿಂದ ಮೊದಲೇ ತಿಳಿದಿದ್ದ ಕಾವಲುಗಾರನು "ತಾಯೀ,

"ಅವರನ್ನು ನೋಡುವುದಕ್ಕಾಗಿ ಬರುವೆನೆಂದು ಅವರ ಸಂಗಡ ಹೇಳಿದ್ದವರು ತಾವೇಯೋ?" ಎಂದು ಕೇಳಿದನು. ಅವಳು ಅದಕ್ಕೆ ಅಹುದು ಎಂದು ತಲೆಯನ್ನು ಅಲುಗಿಸಿದಳು. ಒಡನೆಯೇ ಅವನು ಜನರ ಸಂದಣಿಯಿಲ್ಲದಿದ್ದ ಹಾದಿಯಲ್ಲಿ ಅವಳನ್ನು ಕರೆದುಕೊಂಡು ಹೋಗಿ ವಲ್ಲಭದೇವನ ಕೊಟ್ಟಡಿಯ ಬಾಗಿಲನ್ನು ತೆರೆದು "ತಾಯೀ, ಒಳಗೆ ಬಿಜಯಮಾಡಿ" ಎಂದು ಹೇಳಿ ಪುನಃ ಬಾಗಿಲನ್ನು ಮುಚ್ಚಿಕೊಂಡು ಹೋದನು.

ಆಗ ವಲ್ಲಭದೇವನು ತಲೆಯನ್ನು ತಗ್ಗಿಸಿಕೊಂಡು ಏನನ್ನೋ ಬರೆಯುತ್ತಲಿದ್ದನು. ಆಳು ಹೊರಟುಹೋಗುವವರೆಗೂ ಸುಮ್ಮನಿದ್ದು ಬಳಿಕ ಎದ್ದು ಭಾಮಿನಿಯನ್ನು ಗೌರವದೊಡನೆ ಸಮೀಪದಲ್ಲಿದ್ದ ಆಸನದಲ್ಲಿ ಕುಳ್ಳಿರಿಸಿ

"ಪ್ರಿಯೇ, ನಾವಿಬ್ಬರೂ ಹೀಗೆ ಏಕಾಂತವಾಗಿ ಮಾತನಾಡಿ ಎಷ್ಟೋ ಯುಗಗಳಾಗಿಹೋದುವು; ಆಗ ನಮ್ಮ ಸಮಾಗಮವು ಆನಂದಕರವಾಗಿದ್ದಿತು: ಈಗ ದುಖಃಕರವಾದ ಸಂಗತಿಯನ್ನು ವಿಚಾರಮಾಡುವುದಕ್ಕಾಗಿ ಸೇರಿದ್ದೇವೆ. ಅಯ್ಯೋ, ಏನು ಮಾಡೋಣ" ಎಂದು ನೊಂದುಕೊಂಡನು.

"ಸ್ವಾಮೀ! ಈ ವಿಚಾರದಲ್ಲಿ ತಮಗಿಂತಲೂ ನನಗೆ ದುಃಖ ಹೆಚ್ಚು ಬಹುಜನ ತಪ್ಪಿತಸ್ಥರು ಗಡಗಡನೆ ನಡುಗುತ್ತ ಬಂದು ತಮ್ಮ ಮುಂದೆ ನಿಂತು ಶಿಕ್ಷೆಯನ್ನು ಪಡೆದು ಹೋಗುವ ಸ್ಥಾನವಿದು; ಇಲ್ಲಿ ಬಂದು ನ್ಯಾಯಾಸನದ ಮುಂದೆ ಕುಳಿತಿರುವ ನಾನು ತಪ್ಪುಮಾಡಿದವಳಲ್ಲವೆಂದೂ ತಾವು ನ್ಯಾಯ ರಾಶಿಯಲ್ಲವೆಂದೂ ನನಗೆ ಯೋಚಿಸಲು ಅಸಾಧ್ಯ."

ಅವಳು ಹೀಗೆನ್ನುತ್ತಲೆ ವಲ್ಲಭದೇವನು ತಲೆಯನ್ನು ತಗ್ಗಿಸಿಕೊಂಡು ನಿಟ್ಟುಸಿರನ್ನು ಬಿಡುತ್ತ

"ನಾನು ಅಪರಾಧಿಯ ಸ್ಥಾನದಲ್ಲಿರಲು ಯೋಗ್ಯನೇ ವಿನಾ ನ್ಯಾಯಾಧಿಪನಾಗಿರಲು ಸುತರಾಂ ತಕ್ಕವನಲ್ಲ."

"ಸ್ವಾಮೀ, ನಿಮ್ಮ ಸ್ಥಿತಿಯನ್ನು ನೀವು ವಿಪರೀತಮಾಡಿ ಹೇಳುತ್ತೀರಿ. ಯೌವನಾವಸ್ಥೆಯಲ್ಲಿ ನಿಮ್ಮಂತೆ ವ್ಯಭಿಚಾರಮಾಡದೆ ಇದ್ದವರಾರು? ಆದರೆ ಗಂಡಸು ವ್ಯಭಿಚಾರಮಾಡಿದರೆ ಲೋಕವು ಅವನನ್ನು ದೋಷಿಯೆಂದು ಭಾವಿಸುವುದಿಲ್ಲ; ಅದೇ ಕೆಲಸವನ್ನು ಹೆಂಗಸು ಮಾಡಿದರೆ ಅವಳಿಗೆ ಕ್ಷಮೆಯೇ ಇಲ್ಲ."

"ಭಾಮಿನೀ, ಯೌವನದಲ್ಲಿ ಹೇಗಿದ್ದೆ? ಈಗ ಹೇಗಿದ್ದೇನೆ" ಚೆನ್ನಾಗಿ ನೋಡು. ಈ ಗಂಟು ಹುಬ್ಬುಗಳೂ ಕಲ್ಲು ಮನಸ್ಸೂ ನನಗೆ ಆಗ ಇದ್ದುವೇ? ಇದಕ್ಕೆ ಕಾರಣವೇನು ಬಲ್ಲೆಯಾ? ನಾನು ಮದುವೆಯಾದಂದಿನಿಂದ ಗ್ರಹಚಾರ ಗಳು ಒಂದರಮೇಲೊಂದು ವಕ್ರಿಸಿ ಅನೇಕ ಕಷ್ಟಗಳಿಗೂ ದುಃಖಗಳಿಗೂ ನನ್ನನ್ನು ಗುರಿಮಾಡಿದುದರಿಂದ ಆ ಕಷ್ಟಗಳನ್ನೂ ದುಃಖಗಳನ್ನೂ ಧೈರ್ಯ ದಿಂದನುಭವಿಸಲು ಹೃದಯವನ್ನು ಕಲ್ಲು ಮಾಡಿಕೊಳ್ಳಬೇಕಾಯಿತು. ಅಂದಿ ನಿಂದ ನನ್ನಲ್ಲಿ ಕರುಣೆಯೆಂಬುದು ತೀರ ಆರಿಹೋಯಿತು. ನಾನು ಮಾಡ ಬೇಕೆಂದಿರುವ ಕೆಲಸಗಳಿಗೆ ತಿಳಿದೇ ಆಗಲಿ ತಿಳಿಯದೇ ಆಗಲಿ ಅಡ್ಡಿಯಾಗಿ ಬರುವವರನ್ನು ಭೂಗತಮಾಡದೆ ಬಿಡುವುದಿಲ್ಲ. ಅದು ಹೋಗಲೀ. 'ಆದೌ ನಮ್ರಃ ತಥಾ ಸ್ತಬ್ಧಃ ಕಾರ್ಯಕಾಲೇತಿ ನಿಷ್ಠುರಃ'; ಹರಯದಲ್ಲಿ ಮಾಡುವ ತಪ್ಪುಗಳಿಗೆ ಪುರುಷನೇ ಕಾರಣ: ಅವನೀಗ ಮೇಲೆ ಬಿದ್ದು ಬರುನವನು. ಕಾರ್ಯಸಾಧನೆಯಲ್ಲಿ ಅತ್ಯಾತುರನಾಗಿದ್ದು ಹಿಂದು ಮುಂದು ಒಂದನ್ನೂ ಯೋಚಿಸದೆ ಸರಿಯಾದ ಮಾರ್ಗವನ್ನು ಬಿಟ್ಟು ದುರ್ಮಾರ್ಗದಲ್ಲಿ ಅಲೆಯುತ್ತ ಕೊನೆಗೆ 'ಅಯ್ಯೋ, ನಾನು ಅನ್ಯಾಯವಾಗಿ ಈ ಮಾರ್ಗಕ್ಕೆ ಬಂದೆನಲ್ಲಾ' ಎಂದು ಪಶ್ಚಾತ್ತಾಪ ಪಡುವನು. ಹೆಂಗಸು ಪುರುಷನಂತೆ ಸಾಧಾರಣವಾಗಿ ಮೇಲೆ ಬಿದ್ದು ಬರುವವಳಲ್ಲವಾದುದರಿಂದಲೂ, 'ಮೇಲೆ ಬಿದ್ದು ಬರುವ ಸೂಳೆ ಮೂರು ಕಾಸಿಗೂ ಬೇಡ' ಎಂದು ಗಾದೆಯೇ ಇರುವುದರಿಂದಲೂ, ಅವಳಿಗೆ ಪಶ್ಚಾತ್ತಾಪಪಡುವುದಕ್ಕೆ ಕಾರಣವೇ ಇಲ್ಲ."

"ಸ್ವಾಮೀ, ತಾವು ಅಪ್ಪಣೆಕೊಡಿಸುವುದು ನಿಜ, ಆದರೂ ಹೆಂಗಸಿಗೆ ಅಪಮಾನವು ಹೆಚ್ಚು. ಹಿಂದೆ ಎಂದೋ ಮಾಡಿದ್ದ ಸ್ವಲ್ಪ ತಪ್ಪಿಗೆ ನೆನ್ನೆ ನನಗೆ ಪೂರಾ ಶಿಕ್ಷೆಯು ಆಯಿತು."

"ಅಯ್ಯೋ, ಪಾಪ! ನಿನಗಾಗಿ ನಾನು ನೆನ್ನೆ ಎಷ್ಟು ಸಂಕಟಪಟ್ಟೆನೋ, ದೇವರೇ ಬಲ್ಲ. ಈಗಿನ ಸಂಕಟ ಹೇಗಾದರೂ ಇರಲಿ. ಇನ್ನು ಮುಂದೆ ಘೋರತರವಾದ ಸಂಕಟಗಳು ಪ್ರಾಪ್ತವಾಗುವುವೆಂದು ನನಗೆ ತೋರುತ್ತಿದೆ."

ವಲ್ಲಭದೇವನು ಸಾಧಾರಣವಾಗಿ ಗಾಬರಿಪಡತಕ್ಕವನಲ್ಲವೆಂದು ಭಾಮಿ ನಿಯು ಬಲ್ಲಳು. ಈಗ ಅವನು ಬಲು ಗಾಬರಿಯಿಂದ ಮಾತನಾಡಿದುದನ್ನು ಕೇಳಿ, ಅವಳು ದಿಗಿಲು ಬಿದ್ದು "ಹಾ! ಹಾ! ಮುಂದೆ ಏನು ಗತಿ!" ಎಂದು

ಯಾತನೆ ಪಟ್ಟಳು.

‘‘ನಮ್ಮ ಹೃದಯದಲ್ಲಿ ಅಡಗಿದ್ದ ಗುಟ್ಟು ಹೇಗೆ ಬಯಲಾಯಿತು’’ ಎಂದು ವಲ್ಲಭದೇವನು ಆಶ್ಚರ್ಯಚಕಿತನಾದನು.

‘‘ಅದು ಅಕಸ್ಮಿಕ,’’

‘‘ಎಂದಿಗೂ ಅಲ್ಲ.”

‘‘ಸ್ವಾಮಿ, ರಾಜಾಮಲಯಸಿಂಹನು ಆ ಮನೆಯನ್ನು ಕೊಂಡುದೂ, ತೋಟವನ್ನು ಅಗೆಸಿದುದೂ, ಆಕಸ್ಮಿಕವೇ ಸರಿ; ಅವನು ತೋಟದಲ್ಲಿ ಮಗುವಿನ ಅಸ್ಥಿಪಂಜರವು ಸಿಕ್ಕಿತೆಂದು ಹೇಳಿದಾಗ, ‘ಅಯ್ಯೋ! ಒಂದು ಸಾರಿಯಾದರೂ ನಾನು ಆ ಮಗುವನ್ನು ಮುದ್ದಿಡದೆ ಹೋದೆನಲ್ಲ’ ಎಂದು ನನಗೆ ದುಃಖವು ಉಕ್ಕಿಬಂದಿತು” ಎಂದು ಹೇಳುತ್ತ ಭಾಮಿನಿಯು ಬಿಕ್ಕಿ ಬಿಕ್ಕಿ ಅತ್ತಳು.

‘‘ಹೂಳಿದ್ದ ಮಗುವು ಅಲ್ಲಿರಲೂ ಇಲ್ಲ; ಅವನಿಗೆ ಅದರ ಅಸ್ಥಿಪಂಜರವು ಸಿಕ್ಕಲೂ ಇಲ್ಲ. ರಾಜಾಮಲಯಸಿಂಹನು ಹೇಳಿದುದೆಲ್ಲ ಸುಳ್ಳು. ನೀನು ಏಕೆ ಹೀಗೆ ಸಂಕಟಪಡುತ್ತೀಯೆ” ಎಂದು ಹೇಳಿ, ಇವಳ ದುಃಖವನ್ನು ನೀಗಿಸಬೇಕಾದರೆ ಇಳನ್ನು ಹೆದರಿಸಬೇಕು ಎಂದು ನಿಶ್ಚಯಿಸಿಕೊಂಡು

‘‘ಮುಂದೆ ಇದರಿಂದ ಉಂಟಾಗುವ ಕಷ್ಟವನ್ನೂ ದುಃಖವನ್ನೂ ಅಪಮಾನವನ್ನೂ ಅಷ್ಟಿಷ್ಟೆಂದು ಹೇಳಲಾಗದು.”

ಅದನ್ನು ಕೇಳಿ ಭಾಮಿನಿಯು ಗಡಗಡನೆ ನಡಗುತ್ತ

‘‘ನೀವು ಮಗುವನ್ನು ಹೂಳಲಿಲ್ಲವೋ?’’

“ನಾನು ಹೇಳುವುದನ್ನು ನಿಧಾನವಾಗಿ ಕೇಳು. ಆ ಮೇಲೆ ನೀನೇ ನನಗಾಗಿ ಸಂಕಟಪಡುವೆ. ಈ ರಾತ್ರಿ ನೀನು ಹೆರುವ ವರೆಗೆ ನಿನ್ನ ಸಂಕಟಕ್ಕಿಂತ ನನ್ನ ಸಂಕಟವು ಹೆಚ್ಚಾಗಿದ್ದಿತು. ಹುಟ್ಟಿದ ಶಿಶುವು ಕೈಕಾಲುಗಳನ್ನಾಡಿಸದೆ ಉಸಿರನ್ನು ಬಿಡದೆ ಇದ್ದುದರಿಂದ ಅದು ಸತ್ತಕೂಸೆಂದು ಭಾವಿಸಿ—”

“ಏನು? ಮಗು ಸತ್ತಿರಲಿಲ್ಲವೇ? ಬದುಕಿದ್ದ ಮಗುವನ್ನು ಹೂಳಿದಿರಾ?”

ಎಂದು ಅತ್ಯಾಗ್ರಹಗೊಂಡು ಆಸನದಿಂದ ಎದ್ದಳು. ಅಷ್ಟರಲ್ಲಿಯೇ ವಲ್ಲಭದೇವನು ಎರಡು ಕೈಗಳನ್ನು ಜೋಡಿಸಿಕೊಂಡು

“ಸ್ವಲ್ಪ ನಿಧಾನಿಸು; ಆಸನದಲ್ಲಿ ಕುಳಿತುಕೋ’’ ಎಂದು ಬೇಡಿಕೊಂಡು,

ಅವಳನ್ನು ಪುನಃ ಆಸನದಲ್ಲಿ ಕುಳ್ಳಿರಿಸಿ,

"ಸತ್ತಿದ್ದಿತೆಂದು ತಿಳಿದು ನಾನು ಅವನ್ನು ಒಂದು ಪೆಟ್ಟಿಗೆಯಲ್ಲಿ ಹಾಕಿ ತೋಟದಲ್ಲಿ ಹೂಳಿಬಿಟ್ಟೆನು. ನಾನು ತೋಟದಿಂದ ಹಿಂತಿರುಗಿ ಬರುವಾಗ ಅಲ್ಲಿ ಹೊಂಚು ಹಾಕಿಕೊಂಡಿದ್ದ ನನ್ನ ಹಗೆಯೊಬ್ಬನು ಕಠಾರಿಯಿಂದ ನನ್ನನ್ನು ಎದೆಯ ಮೇಲೆ ತೀವಿದನು. ನಾನು ಜ್ಞಾನತಪ್ಪಿ ಕೆಳಗೆ ಬಿದ್ದೆನು. ಹಾಗೆ ಎಷ್ಟುಹೊತ್ತು ಬಿದ್ದಿದ್ದೆನೋ ಕಾಣೆ. ಜ್ಞಾನ ಬಂದ ಮೇಲೆ ಅಲ್ಲಿಂದ ಮೆಲ್ಲನೆ ತೆವಳಿಕೊಂಡು ಮೆಟ್ಟಿಲ ವರೆಗೆ ಬಂದೆನು. ಅಷ್ಟರಲ್ಲೇ ನೀನು ನಿನ್ನ ಕಷ್ಟವನ್ನೂ ಆಯಾಸವನ್ನೂ ಬಗೆಯದೆ ನನ್ನನ್ನು ಹುಡುಕಿಕೊಂಡು ಮಹಡಿಯಿಂದ ಇಳಿದು ಬಂದೆ; ಅದನ್ನು ನಾನೆಂದಿಗಾದರೂ ಮರೆಯುವೆನೇ? ನನ್ನನ್ನು ಕೊಲ್ಲಲೆಳಸಿದವನನ್ನ ಹಿಡಿದು ಶಿಕ್ಷಿಸಬಹುದಾಗಿತ್ತು; ಹಾಗೆ ಮಾಡುವುದರಿಂದ ನಮ್ಮ ರಹಸ್ಯವಾದ ಸಂಗಮವೂ ನಿನ್ನ ಪ್ರಸವವೂ ಹೊರಬೀಳುವುದೆಂದು ಹೆದರಿ ಸುಮ್ಮನಾದೆನು. ಆ ಗಾಯವು ಮಾಗುವುದಕ್ಕೆ ಆರು ತಿಂಗಳು ಹಿಡಿಯಿತು. ನನಗೆ ಗುಣವಾದ ಮೇಲೆ ವಿಚಾರಿಸಲು ನೀನು ದುರ್ಮತಿಯನ್ನು ಮದುವೆಯಾದೆಯೆಂದು ತಿಳಿಯಬಂದಿತು"

"ಅನಂತರ ಆ ಮಗುವು ಏನಾಯಿತು? ಅದನ್ನು ನೋಡಿದಿರಾ?"

"ನೋಡಿದೆ. ನನಗೆ ಹೇಗೋ ಅನುಮಾನಹುಟ್ಟಿ ನಾನೊಬ್ಬನೇ ಆ ಮನೆಯಲ್ಲಿ ಮೂರು ದಿನಗಳಿದ್ದು ಹಗಲೂ ಇರಳೂ ಆ ತೋಟವನ್ನೆಲ್ಲಾ ಅಗೆದು ನೋಡಿದೆನು. ಮಗವೂ ಇರಲಿಲ್ಲ ಪೆಟ್ಟಿಗೆಯು ಇರಲಿಲ್ಲ."

"ಇರಲಿಲ್ಲವೇ?"

"ಇಲ್ಲ."

"ಏನಾಯಿತು?"

"ಹೇಳುತ್ತೇನೆ ಕೇಳು. ನನ್ನ ಶತ್ರುವು ಆ ಪೆಟ್ಟಿಗೆಯಲ್ಲಿ ಹಣವಿರುವುದೆಂದು ತಿಳಿದು ಅದನ್ನು ಬಿಚ್ಚಿ ನೋಡಿ ಅದರಲ್ಲಿ ಹಣವಿಲ್ಲದೆ ಹೆಣವಿದ್ದುದನ್ನು ಕಂಡು ಅದನ್ನು ಎಲ್ಲಿಯೋ ಬಿಸುಟು ಹೋಗಿರಬಹುದೆಂದು ಅಲ್ಲೆಲ್ಲಾ ನೋಡಿದೆನು. ಎಲ್ಲಿಯೂ ಸಿಕ್ಕಲಿಲ್ಲ."

"ಪಾಪ! ಆಗ ನಿಮಗೆ ಹುಚ್ಚುಹಿಡಿದಂತಾಗಿರಬಹುದು!"

"ಹುಚ್ಚು ಹಿಡಿದಿದ್ದರೆ ಚೆನ್ನಾಗಿದ್ದಿತು. ಅವನು ಹೆಣವನ್ನು ಏತಕ್ಕೆ

ಹೊತ್ತುಕೊಂಡು ಹೋಗಿದ್ದಾನು ಎಂದು ಯೋಚಿಸಿದೆನು.''

''ಬಹುಶಃ ಅದನ್ನು ನ್ಯಾಯಾಧಿಪತಿಗೆ ತೋರಿಸಿ ನಿಮಗೆ ವಿರೋಧವಾಗಿ ಕಾರ್ಯಭಾಗವನ್ನು ಮಾಡುತ್ತಿರಬಹುದು''

"ಅದು ಹಾಗೆ ಆಗಿರಲಾರದು; ಅದಕ್ಕಿಂತ ಭಯಂಕರವಾಗಿಯೂ ನಮಗೆ ಅಪಾಯಕರವಾಗಿಯೂ ಇರುವ ಕಾರ್ಯ ನಡೆದಿರುವುದೆಂದು ತೋರಿತು.''

''ಅದೇನು ?''

''ಮಗುವು ಜೀವದೊಂದಿಗಿದ್ದು ಅವನು ಅದನ್ನು ಕಾಪಿಟ್ಟಿರಬಹುದು.''

ಹೀಗೆಂದು ವಲ್ಲಭದೇವನು ಹೇಳುತ್ತಲೇ ಭಾಮಿನಿಯು ಕಿಟ್ಟೆಂದು ಕಿರಿಚಿ ನಿಟ್ಟುಸಿರನ್ನು ಬಿಡುತ್ತ ಕೆನ್ನೆಯ ಮೇಲೆ ಕೋಡಿ ಹರಿದಿದ್ದ ಕಣ್ಣೀರನ್ನು ಒರಸಿ ಕೊಳ್ಳುತ್ತ ತೆಪ್ಪತ್ತವಳಾಗಿ ಆಸನದಲ್ಲಿ ಹಾಗೆಯೇ ಒರಗಿದಳು.

''ಆ ಮಗುವು ಒಂದು ವೇಳೆ ಬದುಕಿದ್ದರೆ ನಮ್ಮ ಪರಿಣಾಮವು ಪೂರೈಸಿತು. ಮಲಯಸಿಂಹನು ಆ ಮಗುವಿನ ಪ್ರಸ್ತಾಪಮಾಡಿದುದರಿಂದ ನಮ್ಮ ಅಂತರಂಗವು ಅವನಿಗೆ ತಿಳಿದಿರಬಹುದೆಂದು ತೋರುತ್ತದೆ" ಎಂದು ವಲ್ಲಭದೇವನು ಮತ್ತೆ ಹೇಳತೊಡಗಿದನು.

''ಈ ಸಂಗತಿಯು ಅವನಿಗೆ ತಿಳಿದಿದ್ದರೆ ಅವನು ನಮ್ಮ ಸಹವಾಸವನ್ನೇ ಮಾಡುತ್ತಿರಲಿಲ್ಲ.''

''ಮನುಷ್ಯನ ಕೆಟ್ಟ ಚಾಳಿಯನ್ನು ನೀನೇನು ಬಲ್ಲೆ, ಭಗವಂತನ ಸದ್ಗುಣಗಳಿಗಿಂತಲೂ ಮನುಷ್ಯನ ದುರ್ಗುಣಗಳು ಮಹತ್ತಾದುವು. ಆ ದಿನ ಅವನು ನಮ್ಮ ಸಂಗಡ ಮಾತನಾಡುತ್ತಿದ್ದಾಗ ಅವನ ಕಣ್ಣುಗಳನ್ನು ನೋಡಿದೆಯೋ ? ಅವನೇನೋ ದೂರಾಲೋಚನೆಗಳನ್ನು ಮಾಡಿಕೊಂಡು ಹೀಗೆ ಮಾಡುತ್ತಿದ್ದಾನೆ. ಮುಂದೆ ಇನ್ನೇನು ಮಾಡುವನೋ ? ಅದಕ್ಕಾಗಿಯೇ ನಾನು ನಿನ್ನನ್ನು ಇಂದು ಇಲ್ಲಿಗೆ ಬರಹೇಳಿದುದು. ಎಲ್ಲಾದರೂ ಮೋಸಹೋದೀಯೆ, ಜೋಕೆ, ಇನ್ನೊಂದು ಮಾತನ್ನು ಕೇಳಬೇಕೆಂದು ಇದ್ದೆನು."

"ಅದೇನು ?"

"ನಮ್ಮ ವಿಚಾರವನ್ನು ನೀನು ಇನ್ನು ಯಾರಿಗಾದರೂ ಹೇಳಿರುವೆಯೋ ?"

ಭಾಮಿನಿಯು ನಾಚಿಕೊಂಡು "ಉಹುಂ" ಎಂದು ತಲೆಯನ್ನು ಅಲುಗಿಸಿದಳು.

"ರಾತ್ರಿ ನಿದ್ದೆಯಲ್ಲಿ ನೀನು ಕನವರಿಸುವುದುಂಟೋ?"

''ನಾನು ಎಳೆಯ ಮಕ್ಕಳಂತೆ ನಿದ್ದೆ ಮಾಡುತ್ತೇನೆಂದು ನಿಮಗೆ ತಿಳಿಯದೇ?'' ಎಂದು ಅವಳು ಸ್ವಲ್ಪ ನಗಲು, ವಲ್ಲಭದೇವನು ಗಾಬರಿ ಬಿದ್ದು ''ಅದು ನಿಜ'' ಎಂದು ಗೊಣಗಿಕೊಂಡು.

''ಹಾಗಾದರೆ ಮುಂದೆ ಮಾಡಬೇಕಾದುದನ್ನು ಮಾಡುವೆನು. ಇನ್ನು ಒಂದು ವಾರದೊಳಗಾಗಿ ಈ ಮಲಯಸಿಂಹನೆಂಬುವನಾರು? ಎಲ್ಲಿಂದ ಬಂದ? ಎಲ್ಲಿಗೆ ಹೋಗುತ್ತಾನೆ? ಏತಕ್ಕೆ ನಮ್ಮ ಮುಂದೆ ಪ್ರಸ್ತಾಪ ಮಾಡಿದ? ಇವೇ ಮೊದಲಾದ ಸಮಾಚಾರಗಳನ್ನು ವಿಚಾರಿಸಿ ಅವನಿಗೆ ತಕ್ಕ ಶಿಕ್ಷೆ ಮಾಡುವೆನು'' ಎಂದು ಕರ್ಕಶ ಧ್ವನಿಯಿಂದ ಹೇಳಿದನು. ಅದನ್ನು ಮಲಯಸಿಂಹನ್ನು ಕೇಳಿದ್ದರೆ ಅವನೂ ನಡುಗಿಹೋಗುತ್ತಲಿದ್ದನು.

ಭಾಮಿನಿಯು ಅಲ್ಲಿಂದ ಹೊರಟು ತನ್ನ ಬಂಡಿಯನ್ನು ಸೇರಿ ನಿದ್ದೆ ಮಾಡುತ್ತಲಿದ್ದ ಆಳನ್ನು ಎಬ್ಬಿಸಿ ಬಂಡಿಯನ್ನು ಕಟ್ಟಿಸಿಕೊಂಡು ಮನೆಯನು ಸೇರಿದಳು.

ಅವಳು ಅತ್ತ ಹೋಗುತ್ತಲೆ ಇತ್ತ ವಲ್ಲಭದೇವನು ಪೂರ್ವದಲ್ಲಿ ಬಂದಿಶಾಲಾಧ್ಯಕ್ಷನಾಗಿದ್ದು ಈಗ ಪೋಲೀಸಿಗೆ ಮುಖ್ಯ ಯಜಮಾನನಾಗಿದ್ದ ಭಾಸ್ಕರನಿಗೆ ರಾಜಾಮಲಯಸಿಂಹನ ಸಮಾಚಾರಗಳನ್ನು ವಿಚಾರಿಸಿ ತಿಳಿಸುವಂತೆ ಒಂದು ಲೇಖನವನ್ನು ಬರೆದನು.

ಭಾಸ್ಕರನಿಗೆ ಕಾಗದ ಬರೆದ ಎರಡು ದಿವಸಗಳ ತರುವಾಯ ವಲ್ಲಭದೇವನಿಗೆ ಈ ರೀತಿ ಉತ್ತರ ಬಂದಿತು.

''ಸ್ವಾಮೀ, ಮಲಯಸಿಂಹನು ಮಂದಾರದ್ವೀಪದವನು. ಇಂದ್ರಪ್ರಸ್ಥದಿಂದ ಆಗಾಗ ಇಲ್ಲಿ ಬಂದು ದಾನಧರ್ಮಗಳನ್ನು ಮಾಡುತ್ತಿರುವ ನಿರ್ಮಲಾನಂದನಿಗೆ ಆಪ್ತಸ್ನೇಹಿತನು. ಅನ್ಯದೇಶದ ವಿಜಯಧ್ವಜನೆಂಬ ಶ್ರೀಮಂತನಿಗೂ ಇವನ ಪರಿಚಯವಿದೆಯಂತೆ.''

''ಈ ಇಬ್ಬರನ್ನೂ ವಿಚಾರಿಸಿ ಮಲಯಸಿಂಹನ ವಿಚಾರವಾಗಿ ನನಗೆ ಬೇಕಾದ ಅಂಶಗಳನ್ನು ವಿವರವಾಗಿ ಬರೆಯಬೇಕು" . ಎಂದು ವಲ್ಲಭದೇವನು

ಪುನಃ ಬರೆಯಲು, ಅವನು ಈ ಕೆಳಗೆ ಬರೆದಿರುವಂತೆ ಉತ್ತರವನ್ನು ಬರೆದನು.

‘‘ನಿರ್ಮಲಾನಂದನು ಈ ಪಟ್ಟದ ಉತ್ತರದಿಕ್ಕಿನಲ್ಲಿ ಒಂದು ಸಣ್ಣ ಮನೆಯನ್ನು ಮಾಡಿಕೊಂಡು ವಾಸಮಾಡುತ್ತಿದ್ದಾನೆ. ಅವನು ಊರಿಗೆ ಬಂದಾಗಲೆಲ್ಲಾ ಧರ್ಮಕಾರ್ಯಗಳನ್ನು ಮಾಡಿಕೊಂಡು ಗ್ರಂಥಾವಲೋಕನದಿಂದ ಕಾಲಕ್ಷೇಪಮಾಡುತ್ತಿದ್ದಾನೆ. ಈ ಸನ್ಯಾಸಿಯು ಮೂರುಪಾಲು ದಿನಗಳೆಲ್ಲಾ ಊರೂರು ಸುತ್ತುತ್ತಲೇ ಇರುವುದರಿಂದ ಮನೆಯನ್ನು ನೋಡಿಕೊಳ್ಳಲು ಒಬ್ಬ ಶಿಷ್ಯನನ್ನು ಏರ್ಪಾಡು ಮಾಡಿಕೊಂಡಿದ್ದಾನೆ. ಅವನು ಊರಲ್ಲಿರುವಾಗ ಯಾರಾದರೂ ನೋಡುವುದಕ್ಕೆ ಬಂದರೆ ಆ ಶಿಷ್ಯನು ಬಂದವರ ಮುಖವನ್ನು ಕಿಟಕಿಯಿಂದ ನೋಡಿ ಇಷ್ಟವಾದರೆ ಬಾಗಿಲನ್ನು ತೆಗೆಯುವನು; ಇಲ್ಲವಾದರೆ ಸನ್ಯಾಸಿಯು ಊರಲ್ಲಿಲ್ಲವೆಂದು ಹೇಳಿ ಕಳುಹಿಸಿಬಿಡುವನು.

‘‘ವಿಜಯಧ್ವಜನು ಒಬ್ಬಂಟಿಗನಾಗಿರುವುದರಿಂದ ಯಾವಾಗಲೂ ದೇಶಾಟನ ಮಾಡಿಕೊಂಡು ಕಾಲಹರಣಮಾಡಿಕೊಂಡಿದ್ದಾನೆ. ತಾನು ಊರಲ್ಲಿರಲಿ, ಇಲ್ಲದಿರಲಿ ಮನೆಯನ್ನು ಯಾವಾಗಲೂ ಅಲಂಕರಿಸಿರುವಂತೆ ಏರ್ಪಾಡು ಮಾಡಿದ್ದಾನೆ. ಅವನು ಯಾವಾಗಲೂ ಸಂಚಾರಮಾಡುತ್ತಲೇ ಇರುವುದರಿಂದ ಇಲ್ಲಿ ನಿಂತಿರುವುದೇ ಅಪೂರ್ವ. ಅವನಲ್ಲಿ ಒಂದು ವಿಶೇಷವುಂಟು; ಅವನಿಗೆ ನಮ್ಮ ದೇಶದ ಭಾಷೆಯು ಚೆನ್ನಾಗಿ ತಿಳಿದರೂ ತನ್ನ ದೇಶಭಾಷೆಯಲ್ಲಿಯೇ ಮಾತನಾಡುತ್ತಾನೆ.

‘‘ಈಗ ಇವರಿಬ್ಬರೂ ಇಲ್ಲಿಯೇ ಇದಾರೆ.’’

ಮೇಲೆ ಕಂಡ ವಿವರಗಳು ತಿಳಿದ ಮರುದಿನ ಬೆಳಿಗ್ಗೆ ಹತ್ತು ಗಂಟೆಗೆ ನಿರ್ಮಲಾನಂದನ ಮನೆಯ ಮುಂದೆ ಒಂದು ಬಂಡಿಯು ಬಂದು ನಿಂತಿತು. ಅದರಿಂದ ಒಬ್ಬ ದೊಡ್ಡ ಮನುಷ್ಯನು ಇಳಿದು ಬಾಗಿಲನ್ನು ತಟ್ಟಿ “ನಿರ್ಮಲಾನಂದರು ಇದ್ದಾರೆಯೋ?” ಎಂದು ಕೇಳಲು, ಒಳಗಿದ್ದ ಶಿಷ್ಯನು ಕಿಟಕಿಯಿಂದ ನೋಡಿ ‘‘ಇಲ್ಲ ಅವರು ಅಷ್ಟು ಹೊತ್ತಿಗೇ ಎದ್ದು ಹೊರಟು ಹೋದರು’’ ಎಂದನು.

“ಹಾಗಾದರೆ ಅವರು ಬರುತ್ತಲೆ ಇದನ್ನು ಕೊಡು” ಎಂದು ಕಾಗದವನ್ನು ಕೊಟ್ಟು ‘‘ರಾತ್ರಿ ಎಂಟು ಗಂಟೆಯ ವೇಳೆಯಲ್ಲಿ ಮನೆಯಲ್ಲಿರುವರೋ?’’ ಎಂದನು.

‘‘ಬಹುಶಃ ಇದ್ದಾರು. ಆದರೆ ವ್ಯಾಸಂಗಮಾಡುತ್ತಿದ್ದರೆ ಅವರು ಮನೆಯಲ್ಲಿ ಇರುವುದಕ್ಕೂ ಇಲ್ಲದಿರುವುದಕ್ಕೂ ಏನೂ ಭೇಧವಿಲ್ಲ.”

‘‘ನಾನು ಕೊಟ್ಟ ಕಾಗದವನ್ನು ಅವರಿಗೆ ಮರೆಯದೆ ಕೊಡು” ಎಂದು ಹೇಳಿ, ಅಲ್ಲಿಂದ ವಿಜಯಧ್ವಜನ ಮನೆಗೆ ಹೊರಟುಹೋಗಿ ಅವನೂ ಸಿಕ್ಕದೆ, ಅಲ್ಲಿಯೂ ಒಂದು ಕಾಗದವನ್ನು ಕೊಟ್ಟು ಹೊರಟುಹೋದನು.

ರಾತ್ರಿ ಎಂಟು ಗಂಟೆಯ ವೇಳೆಗೆ ಸರಿಯಾಗಿ ಆ ದೊಡ್ಡ ಮನುಷ್ಯನು ಪುನಃ ಒಂದು ‘‘ಆನಂದರು ಇದಾರೆಯೇ ?” ಎಂದು ಕೇಳಿದ ಒಡನೆಯೇ ಶಿಷ್ಯನು ‘‘ಸ್ವಾಮೀ, ಒಳಗಿದ್ದಾರೆ” ಎಂದು ಬಾಗಿಲನ್ನು ತೆರೆದು ಬಹು ಮರ್ಯಾದೆಮಾಡಿ ಬಿಜಯಮಾಡಬೇಕು ಎಂದನು. ಆನಂದನು ನಡುಮನೆ ಯಲ್ಲಿ ಇದಿರಿಗೂ ಎರಡು ಪಕ್ಕಗಳಲ್ಲಿಯೂ ಮೇಜುಗಳನ್ನು ಹಾಕಿಕೊಂಡು ಮೂರು ಕಡೆಯಲ್ಲಿಯೂ ಮತಸಂಬಂಧವಾದ ಪುಸ್ತಕಗಳನ್ನು ಅಡಕಿಕೊಂಡು, ತಾನು ಕೂರುವ ಕಡೆಗೆ ಮರೆಯಾಗುವಂತೆ ಸಣ್ಣ ದೀಪದ ಬೆಳಕಿನಲ್ಲಿ ಓದುತ್ತ ಕುಳಿತಿದ್ದನು. ಅವನು ತಲೆಗೆ ವಸ್ತ್ರವನ್ನು ಸುತ್ತಿಕೊಂಡು ಕಣ್ಣಿಗೆ ಸುಲೋಚ ನವನ್ನು ಹಾಕಿಕೊಂಡಿದ್ದನು. ಈ ವಸ್ತ್ರವೂ ಸುಲೋಚನವೂ ಅವನ ಮುಖ ವನ್ನು ಮುಕ್ಕಾಲು ಪಾಲು ಮರೆಸಿದ್ದವು. ಆಗಂತುಕನು ಒಳಗೆ ಹೋದ ಕೂಡಲೇ ಆನಂದನು ಎದ್ದು ಅವನಿಗೆ ಮರ್ಯಾದೆಮಾಡಿ ಆಸನವನ್ನು ಕೊಟ್ಟು ಅವನು ಕುಳಿತುಕೊಂಡ ಮೇಲೆ

“ತಾವು ಭಾಸ್ಕರರ ಕಡೆಯವರಲ್ಲವೇ ?”

‘‘ಸ್ವಾಮೀ, ಅಹುದು”.

‘‘ಈ ಪಟ್ಟಣದ ರಕ್ಷಣೆಗಾಗಿ ನಿಯಮಿತವಾಗಿರುವ ಅಧಿಕಾರಿಗಳಲ್ಲಿ ತಾವು ಒಬ್ಬರಲ್ಲವೇ ?”

ಆಗಂತುಕ ಸ್ವಲ್ಪ ಅನುಮಾನಿಸಿ, ಕೊನೆಗೆ ‘‘ಹುಂ’’ ಎಂದನು. ಆಗ ಆನಂದನು ದೀಪವನ್ನು ಪ್ರಕಾಶಮಾಡಿ ಆಗಂತುಕನ ಮುಖಕ್ಕೆ ಹಿಡಿಯಲು, ಅವನು

‘‘ಸ್ವಾಮೀ, ಬೆಳಕು ಕಣ್ಣನ್ನು ಚುಚ್ಚುತ್ತಿದೆ ; ದಯಮಾಡಿ ಬತ್ತಿ ಯನ್ನು ತಗ್ಗಿಸಿ’’

ಆನಂದನು ದೀಪವನ್ನು ಸಣ್ಣಮಾಡಿ ಕೆಳಗಿಟ್ಟು, "ಏನು ಇಷ್ಟು ದೂರ ಬಿಜಯಮಾಡೋಣಾಯಿತು" ಎಂದನು.

"ಸ್ವಾಮೀ, ನಾನು ರಾಜ್ಯಕಾರ್ಯ ನಿಮಿತ್ತವಾಗಿ ಬಂದಿದ್ದೇನೆ. ಈ ಸಂಗತಿಯು ನಾನು ತಮಗೆ ಕೊಟ್ಟ ಕಾಗದದಿಂದ ವೇದ್ಯವಾಗಿರಬಹುದು. ಈಗ ನಾವು ಮಾತನಾಡುವ ಸಮಾಚಾರಗಳನ್ನು ಬಹು ಗೋಪ್ಯವಾಗಿಟ್ಟುಕೊಂಡಿರಬೇಕು".

"ಆಗಬಹುದು."

"ತಾವು ರಾಜಾಮಲಯಸಿಂಹನನ್ನು ಬಲ್ಲಿರೋ ?"

"ಜಗನ್ನಾಥನನ್ನೇ ?"

"ಜಗನ್ನಾಥನೇ ? ಅವನ ಹೆಸರು ರಾಜಾಮಲಯಸಿಂಹನಲ್ಲವೇ ?"

" 'ಮಲಯ' ಎಂಬುವುದು ಒಂದು ದ್ವೀಪ; ಅಲ್ಲಿಗೆ ತಾನು ಸಿಂಹನೆಂಬ ಭಾವದಿಂದ 'ಮಲಯಸಿಂಹ' ಎಂಬ ಹೆಸರನ್ನು ಮಾಡಿಕೊಂಡು, ಅಷ್ಟರಲ್ಲಿಯೂ ತೃಪ್ತಿಯಾಗದೆ ಹಿಂದುಗಡೆ 'ರಾಜಾ' ಎಂಬುದನ್ನು ಸೇರಿಸಿಕೊಂಡು 'ರಾಜಾ ಮಲಯಸಿಂಹ' ಎಂದು ಮಾಡಿಕೊಂಡನು. ಅವನ ಹೆಸರು ಜಗನ್ನಾಥ."

"ಆದರೆ ಎರಡು ಹೆಸರೂ ಒಬ್ಬನದೇ ?"

"ಹುಂ"

"ಜಗನ್ನಾಥನನ್ನು ತಾವು ಬಲ್ಲಿರೋ ?"

"ಚೆನ್ನಾಗಿ ಬಲ್ಲೆ. ಅವನು ಮಂದಾರದ್ವೀಪದ ಒಬ್ಬ ಹಡಗು ಕಟ್ಟಿಸುವವನ ಮಗ."

"ಹಾಗೆಂದು ವದಂತಿ; ಆದರೆ ಅದರಿಂದ ಪೋಲೀಸಿನವರಿಗೆ ತೃಪ್ತಿಯಾಗದು."

ಆಗಂತಕನು ಹೀಗೆಂದು ಹೇಳುತ್ತಲೆ ಆನಂದನು ಸ್ವಲ್ಪ ನಕ್ಕು

"ನಿಶ್ಚಯವೂ ವದಂತಿಯೂ ಒಂದೇ ಆದರೆ, ಪೋಲೀಸಿನವರಾಗಲೀ ಯಾರೇ ಆಗಲೀ ನಂಬಬೇಕು."

"ತಾವು ಹೇಳುವುದು ನಿಜವೋ ?" ಈ ಪ್ರಶ್ನೆಗೆ ಆನಂದನು ಕುಪಿತನಾಗಿ

"ಹಾಗೆಂದರೇನು ?"

“ಸ್ವಾಮಿ, ತಮ್ಮ ಮಾತನ್ನು ನಂಬದೆ ನಾನು ಕೇಳಲಿಲ್ಲ; ತಾವು ಹೇಳುವುದು ತಮಗೆ ನಿಶ್ಚಯವಾಗಿ ತಿಳಿದಿದೆಯೇ ಎಂದು ಕೇಳಿದೆ.”

“ಅವನ ಅಪ್ಪನನ್ನೂ ಬಲ್ಲೆ. ನಾನು ಹುಡುಗನಾಗಿದ್ದಾಗ ಜಗನ್ನಾಥನೂ ನಾನೂ ಪ್ರತಿದಿನವೂ ಆಡುತ್ತಲಿದ್ದೆವು.”

“ಅವನಿಗೆ ರಾಜನೆಂಬ ಬಿರುದನ್ನು ಯಾರು ಕೊಟ್ಟರು ?”

“ಹಣ ಕೊಟ್ಟರೆ ಬಿರುದಿಗೇನು ಕಡಿಮೆ ?”

“ಇಂದ್ರಪ್ರಸ್ಥದಲ್ಲಿಯೋ ?”

“ಎಲ್ಲೆಲ್ಲಿಯೂ.”

“ಅವನಿಗಿರುವ ಅಪರಿಮಿತವಾದ ಆಸ್ತಿಯು ಎಲ್ಲಿಯದು ?”

“ಅಷ್ಟೇನೂ ಇಲ್ಲವಲ್ಲಾ ?”

“ಅವನಿಗೆ ವರ್ಷಕ್ಕೆ ಎಷ್ಟು ವರಮಾನವಿರಬಹುದು ?”

“ಎರಡು ಲಕ್ಷ.”

“ಮೂರು ನಾಲ್ಕು ಕೋಟಿ ಎಂದು ಹೇಳುತ್ತಾರಲ್ಲಾ ?”

“ಮೂಲಧನ ಅಷ್ಟಿರಬಹುದು.”

“ಅದೇನೋ ನಿಶ್ಚಯ. ನೀವು ಮಲಯದ್ವೀಪವನ್ನು ಬಲ್ಲಿರೋ ?”

“ಹುಂ.”

“ಅದು ಬಹಳ ಫಲವತ್ತಾದ ದ್ವೀಪವೋ ?”

“ಅದು ಬರಿಯ ಬಂಡೆ; ಫಲವತ್ತಾದುದೂ ಅಲ್ಲ, ಏನೂ ಅಲ್ಲ.”

“ಹಾಗಿದ್ದರೆ ರಾಜನು ಏತಕ್ಕೆ ಕೊಂಡುಕೊಂಡನು ?”

“ಇಂದ್ರಪ್ರಸ್ಥದಲ್ಲಿ ವಿಸ್ತಾರವಾದ ಭೂಸ್ಥಿತಿಯಿಲ್ಲದವರಿಗೆ ‘ರಾಜ’ ನೆಂಬ ಬಿರುದು ಸಿಕ್ಕದು. ಇತರ ಭೂಸ್ಥಿತಿಯನ್ನು ಮಾಡಲು ಅವನಿಗೆ ಚೈತನ್ಯವಿಲ್ಲದೆ ಇದು ಸುಲಭವಾಗಿ ಸಿಕ್ಕಿದುದರಿಂದ ಇದನ್ನು ಕೊಂಡುಕೊಂಡನು.”

“ಅವನ ಚರಿತ್ರೆಯನ್ನು ತಮಗೆ ತಿಳಿದಮಟ್ಟಿಗೆ ದಯವಿಟ್ಟು ತಿಳಿಸಬೇಕು.”

“ಹದಿನೆಂಟನೆಯ ವರ್ಷದವರೆಗೆ ನಾನೂ ಅವನೂ ಒಂದೇ ಕಡೆಯಲ್ಲಿದ್ದು ಅನಂತರ ನಾನು ಇಂದ್ರಪ್ರಸ್ಥಕ್ಕೆ ಹೊರಟುಹೋದೆನು. ಆದಕಾರಣ ಅಲ್ಲಿಂದ ಮುಂದೆ ಅವನ ಸಮಾಚಾರವು ನನಗೆ ತಿಳಿಯದು. ಅವನೆಲ್ಲೋ ಅನ್ಯರಾಜರ ಸೈನ್ಯದಲ್ಲಿ ಸೇರಿ ಅನೇಕ ಸಾಹಸಕಾರ್ಯಗಳನ್ನು ಮಾಡಿ ಆ ರಾಜರುಗಳಿಂದ

ಬಹುಮಾನಗಳನ್ನು ಹೊಂದಿದನು ಎಂದು ಕಿಂವದಂತಿ; ಅದು ನಿಜವೋ ಸುಳ್ಳೋ ಹೇಳಲಾರೆ. ಈಚೆಗೆ ಅವನು ಅನೇಕ ಧರ್ಮಕಾರ್ಯಗಳನ್ನು ಮಾಡಿದ್ದಾನೆ."

"ಅವನಿಗೆ ಸ್ನೇಹಿತರುಂಟೋ ?"

"ಅವನ ಸಹವಾಸ ಮಾಡಿದವರೆಲ್ಲಾ ಅವನ ಸ್ನೇಹಿತರೇ."

"ಅವನಿಗೆ ಶತ್ರುಗಳಾರಾದರೂ ಉಂಟೋ ?"

"ನನಗೆ ತಿಳಿದಹಾಗೆ ಒಬ್ಬನು ಉಂಟು."

"ಅವನ ಹೆಸರೇನು ?"

"ವಿಜಯಧ್ವಜ."

"ಅವನೂ ಅವನ ಸ್ನೇಹಿತನೇ ಎಂದು ಹೇಳುತ್ತಾರಲ್ಲ ?"

"ಅವನೊಬ್ಬ ವಿಲಕ್ಷಣ ಪುರುಷ. ಮೇಲೆ ಸ್ನೇಹಿತರಂತಿದ್ದರೂ ಅಂತರಂಗದಲ್ಲಿ ಅವರವರಿಗೆ ಆಗದು."

"ವಿಜಯಧ್ವಜನೆಲ್ಲಿದ್ದಾನೆ ?"

"ಅವನು ಯಾವಾಗಲೂ ಸುತ್ತುವುದರಲ್ಲಿಯೇ ಕಾಲಕಳೆಯುತ್ತಾನಾಗಿ ಎಲ್ಲಿದ್ದಾನೆಂದು ನಾನು ಹೇಳಲಿ ?"

"ಈಗ ಎಲ್ಲಿದ್ದಾನೋ ?"

"ನನಗೆ ತಿಳಿಯದು."

"ನಿಮಗೂ ವಿಜಯಧ್ವಜನಿಗೂ ಸ್ನೇಹವುಂಟೋ ?"

"ವಿಜಯದ್ವಜನಿಗೆ ಜಗನ್ನಾಥನಲ್ಲಿ ದ್ವೇಷವೂ ಅಸೂಯೆಯೂ ಇರುವುದರಿಂದ ಅವನಿಗೂ ನನಗೂ ಸ್ನೇಹವಿಲ್ಲ."

"ಇದಕ್ಕೆ ಮೊದಲು ಜಗನ್ನಾಥನು ಯಾವಾಗಲಾದರೂ ಅಮರದೇಶಕ್ಕೆ ಬಂದಿದ್ದನೋ ?"

"ಅವನು ಇಲ್ಲಿ ಬರುವುದಕ್ಕೆ ಒಂದು ತಿಂಗಳು ಮುಂದೆ ಇಲ್ಲಿಯ ಸಮಾಚಾರಗಳನ್ನು ನನ್ನಿಂದ ವಿಚಾರಿಸಿ ತಿಳಿದುಕೊಂಡನು. ಆದುದರಿಂದ ಅವನು ಯಾವಾಗಲೂ ಇಲ್ಲಿಗೆ ಹಿಂದೆ ಬಂದಿದ್ದಂತೆ ಕಾಣುವುದಿಲ್ಲ."

"ಸ್ವಾಮೀ, ಇನ್ನೊಂದು ಸಮಾಚಾರವನ್ನು ತಮ್ಮಿಂದ ತಿಳಿಯಬೇಕಾಗಿದೆ."

"ಅದೇನು ?"

''ರಾಜನು ಸಂಪಿಗೆಯ ವನದ ಮನೆಯನ್ನು ಏತಕ್ಕೆ ಕೊಂಡುಕೊಂಡನು"

''ಆ ಮನೆಯನ್ನು ಕೊಳ್ಳುವುದಕ್ಕೆ ಮುಂಚೆ, ನನ್ನ ಅಭಿಪ್ರಾಯವನ್ನು ಕೇಳಿದ್ದನು. ಅವನು ಧರ್ಮಿಷ್ಟನೆಂದು ಮೊದಲೇ ಹೇಳಿದ್ದೇನೆ. ಅನಾಥ ರಾದ ಹುಚ್ಚರಿಗೆ ಒಂದು ಆಲಯವನ್ನು ಮಾಡಬೇಕೆಂಬ ಅಭಿಪ್ರಾಯದಿಂದ ಆ ಮನೆಯನ್ನು ಕೊಂಡುಕೊಂಡನು."

ಇನ್ನು ಏನು ಹೇಳುವುದಕ್ಕೂ ತೋರದೆ ಆಗಂತುಕನು ಆಸನದಿಂದ ಎದ್ದು, ''ಸ್ವಾಮೀ, ತಾವು ಬಹು ಧರ್ಮಗಳನ್ನು ಮಾಡಿಕೊಂಡಿದ್ದಿರೆಂದು ಕೇಳಿದ್ದೇನೆ. ದಯೆಮಾಡಿ ಇದನ್ನು ಸ್ವೀಕರಿಸಿ ತಮ್ಮಿಷ್ಟಾನುಸಾರ ವಿನಿಯೋಗಿಸಬೇಕು.'' ಎಂದು ತನ್ನಲ್ಲಿದ್ದ ಸ್ವಲ್ಪ ಹಣವನ್ನು ನೀಡಿದನು. ಅದಕ್ಕೆ ಆನಂದನು

''ಸ್ವಾಮಿಾ, ನಾನು ಮಾಡುವ ಧರ್ಮವು ಸ್ವಯಾರ್ಜಿತದ್ದೇ ಆಗಿರ ತಕ್ಕದ್ದು. ಈ ಹಣವನ್ನು ತೆಗೆದುಕೊಳ್ಳಲಾರನು; ಕ್ಷಮಿಸಬೇಕು. ತಮ್ಮಂತಹ ಅಧಿಕಾರಿಗಳಿಗೆ ದಾನ ಮಾಡ ಬೇಕೆಂದರೆ ಪಾತ್ರಗಳು ದೊರೆಯವೇ ?"

ಅಗಂತುಕನು ಆನಂದನಿಗೆ ನಮಸ್ಕರಿಸಿ ಹೊರಟು ತನ್ನ ಬಂಡಿಯಲ್ಲಿ ಕುಳಿತುಕೊಂಡು ಮನೆಗೆ ಹೋದನು. ಒಳಗೆ ಹೋಗುತ್ತಲೇ ವಿಜಯಧ್ವಜನು ಬರೆದಿದ್ದ ಕಾಗದವನ್ನು ಕೊಟ್ಟರು. ಅದರಲ್ಲಿ ಈ ರೀತಿ ಬರೆದಿದ್ದಿತು:—

''ಸ್ವಾಮಿಾ, ರಾತ್ರಿ ಹತ್ತು ಗಂಟೆಯವರೆಗೆ ನನಗೆ ವ್ಯವಧಾನವಿಲ್ಲ. ಹತ್ತು ಗಂಟೆಗೆ ಸರಿಯಾಗಿ ತಾವು ಬಿಜಯಮಾಡಿಸಬಹುದು. ನಾನು ತಮ್ಮ ದರ್ಶನ ಮಾಡುವುದಕ್ಕೆ ಸಿದ್ಧನಾಗಿರುವೆನು."

ರಾತ್ರಿ ಸುಮಾರು ಒಂಭತ್ತು ಗಂಟೆಗೆ ವಲ್ಲಭದೇವನು ಮನೆಯಿಂದ ಹೊರಟು ಹತ್ತು ಗಂಟೆಗೆ ಹತ್ತು ನಿಮಿಷಗಳು ಮುಂದಾಗಿಯೇ ವಿಜಯಧ್ವಜನ ಮನೆಗೆ ಹೋದನು. ಯಜಮಾನರು ಒಳಗೆ ಇದಾರೆಯೇ ಎಂದು ಆಳನ್ನು ಕೇಳಲು,

"ಸ್ವಾಮಿಾ! ಅವರು ಸಮಯಸಿಷ್ಠರು. ಹತ್ತು ಗಂಟೆಗೆ ಸರಿಯಾಗಿ ತಮ್ಮನ್ನು ನೋಡುವರು. ಅದುವರೆಗೆ ತಾವು ಇಲ್ಲಿ ಕುಳ್ಳಿರಬಹುದು''ಎಂದು ಹೇಳಿ ಒಂದು ಕೋಣೆಗೆ ಕರೆದುಕೊಂಡು ಹೋದನು.

ವಿಜಯಧ್ವಜನ ಕೊಟ್ಟಡಿಯು ಬಹು ದ್ರವ್ಯವನ್ನು ವೆಚ್ಚಮಾಡಿ ಅನೇಕ ದೇಶಗಳಿಂದ ತಂದ ಪದಾರ್ಥಗಳಿಂದ ಅಲಂಕರಿಸಲ್ಪಟ್ಟಿದ್ದಿತು. ಆ ಕೊಟ್ಟಡಿ

ಯಲ್ಲಿ ಅನೇಕ ದೀಪಗಳ ಬೆಳಕು ಸುತ್ತಲೂ ನೇತುಹಾಕಿದ್ದ ಬಣ್ಣದ ಕನ್ನಡಿಗಳ ದೆಸೆಯಿಂದ ಅರುಣೋದಯದಂತೆ ಇದ್ದಿತು. ಹತ್ತು ಗಂಟೆಯು ಠಣಾರ್ ಎಂದು ಹೊಡೆಯುವುದಕ್ಕೆ ಮೊದಲಾಗುತಲೆ ಪಕ್ಕದ ಕೊಟ್ಟಡಿಯ ಬಾಗಿಲನ್ನು ತೆರೆದುಕೊಂಡು ವಿಜಯಧ್ವಜನು ಬಂದನು. ಅವನು ರಾಜಾಮಲಯಸಿಂಹ ನಷ್ಟೇ ಉದ್ದ, ಆವನಿಗಿಂತ ಸ್ವಲ್ಪ ದಪ್ಪ. ಅವನ ತಲೆಯಲ್ಲಿ ಒಂದೊಂದು ನೆರೆ ಗೂದಲು ಇದ್ದಿತು. ಬವರಿಯೂ ಮೀಸೆಯೂ ರಕ್ತಚ್ಛಾಯೆಯಾಗಿದ್ದಿತು. ಅವನ ಉಡುಪು ಕ್ರಮವಾಗಿ ಆಂಗ್ಲೇಯ ದೇಶದವರಂತೆಯೇ ಇದ್ದಿತು.

ಆತನು ಒಳಗೆ ಬಂದ ಕೂಡಲೆ ಆಗಂತುಕನನ್ನು ನೋಡಿ "ನಿಮಗೆ ಸ್ವಾಗತವೇ" ಎಂದು ಕುಶಲಪ್ರಶ್ನೆ ಮಾಡಿ,

"ಸ್ವಾಮಿ, ನಿಮ್ಮ ದೇಶದ ಭಾಷೆಯು ನನಗೆ ತಿಳಿದಿದ್ದದರೂ ನಾನು ಆ ಭಾಷೆಯಲ್ಲಿ ಮಾತನಾಡುವುದಿಲ್ಲ."

"ಅದನ್ನು ನಾನು ಬಲ್ಲೆ ; ತಮಗೆ ಇಷ್ಟವಾದ ಭಾಷೆಯಲ್ಲಿ ಮಾತನಾಡ ಬಹುದು.''

ಆಗಂತುಕನು ಆನಂದನಿಗೆ ಹಾಕಿದ್ದ ಪ್ರಶ್ನೆಗಳನ್ನೇ ಇವನಿಗೂ ಹಾಕಿ ದನು. ವಿಜಯಧ್ವಜನು ಮಲಯಸಿಂಹನ ಶತ್ರುಸ್ಥಾನದಲ್ಲಿದ್ದುದರಿಂದ ಅವನು ಆಗುಂತುಕನಿಗೆ ಈ ರೀತಿ ಹೇಳಿದನು.—

"ಮಲಯಸಿಂಹನು ತನ್ನೊಡನೆ ಅನ್ಯರಾಜ್ಯ ಸೈನ್ಯದಲ್ಲಿದ್ದಾಗ ನನ್ನ ಸ್ನೇಹಿತನ ಮಡದಿಯನ್ನು ಮರುಳುಮಾಡಿ ಅಪಹರಿಸಿಕೊಂಡು ಓಡಿಹೋದನು. ಅಂದಿನಿಂದ ಅವನಿಗೂ ನನಗೂ ದ್ವೇಷವುಂಟಾಗಿ ಇದುವರೆಗೆ ಐದಾರು ಸಾರಿ ಅವನೊಡನೆ ದ್ವಂದ್ವ ಯುದ್ಧವನ್ನು ಮಾಡಿ ಗ್ರಹಚಾರವಶಾತ್ ಪ್ರತಿಯೊಂದು ಸಾರಿಯೂ ಪರಾಜಿತನಾದೆನು. ಇಗೋ ಕೊನೆಯ ಸಾರಿ ನನಗೆ ಅವನು ತೋಳಿನಲ್ಲಿ ಈ ಗಾಯವನ್ನು ಮಾಡಿದ್ದಾನೆ ಎಂದು ಹೇಳಿ ಅಂಗಿಯನ್ನು ಮೇಲಕ್ಕೆ ಎತ್ತಿ ತೋಳಿನಲ್ಲಿ ಕೆಂಪಗಿದ್ದ ಹೊಸಗಾಯವನ್ನು ತೋರಿಸಿದನು."

''ಸ್ವಾಮಿ, ಈ ದೇಶಕ್ಕೆ ಅವನು ಏತಕ್ಕೆ ಬಂದಿದ್ದಾನೆ ; ಬಲ್ಲಿರಾ ?"

''ಅವನಿಗೆ ಹಣದ ಹುಚ್ಚು ಬಲವಾಗಿದೆ. ಈ ದೇಶದಲ್ಲಿ ಯಾವು ದಾದರೂ ಒಂದು ದೊಡ್ಡ ವ್ಯಾಪಾರ ಮಾಡಿ ಅಪ್ಪ ಸಂಪಾದಿಸಿದ ಹಣವನ್ನು

ಸ್ವಲ್ಪಕಾಲದಲ್ಲಿಯೇ ನೂರುಮಡಿಯಾಗಿ ಹೆಚ್ಚಿಸಬೇಕೆಂಬ ಯೋಚನೆಯಿಂದ ಇಲ್ಲಿರುವಂತೆ ತೋರುತ್ತದೆ.''

"ಅವನು ಸಂಪಿಗೆಯ ವನದ ಮನೆಯನ್ನು ಏತಕ್ಕೆ ಕೊಂಡುಕೊಂಡ?''

"ಅಲ್ಲಿ ಆರೋಗ್ಯಕರವಾದ ಊಟೆಯಿದೆಯೆಂದು ಅವನು ತಿಳಿದುಕೊಂಡಿದ್ದಾನೆ. ಆದಕ್ಕಾಗಿಯೇ ಅವನು ಮನೆಯನ್ನೆಲ್ಲಾ ಅಗೆಸಿ ಹಾಳುಮಾಡಿದನು. ಇನ್ನು ಸ್ವಲ್ಪ ದಿನಗಳಲ್ಲಿಯೇ ಅಪ್ಪ ಸಂಪಾದಿಸಿದ್ದ ಹಣವನ್ನೆಲ್ಲಾ ಹಾಳುಮಾಡಿಕೊಂಡು ಭಿಕ್ಷಾನ್ನಕ್ಕೆಬರಬೇಕಾಗುತ್ತದೆ. ಅಂತಹ ಕಾಲವು ಎಂದು ಬರುವುದೋ! ಅದನ್ನು ನಾನು ಎಂದು ಕಂಡೇನೋ?" ಎಂದು ಅವನ ವಿಷಯದಲ್ಲಿ ತನಗಿದ್ದ ಹಗೆತನವನ್ನು ಹೊರಸೂಸಿದನು.

ವಿಜಯಧ್ವಜನು ಹೀಗೆನ್ನುತ್ತಲೇ ಆಗಂತುಕನು ತನಗೆ ಬೇಕಾದುದೆಲ್ಲಾ ತಿಳಿಯಿತೆಂದು ಅವನ ಅಪ್ಪಣೆಯನ್ನು ಪಡೆದು ಹೊರಟನು. ಅವನು ಅತ್ತ ಹೋಗುತ್ತಲೆ, ಇತ್ತ ವಿಜಯಧ್ವಜನು ಒಳಕ್ಕೆ ಹೋಗಿ ತನ್ನ ಗರಲುಮೀಸೆಯನ್ನೂ ನರೆತಿದ್ದ ತಲೆಗೂದಲನ್ನೂ, ಗಾಯದಂತೆ ತೋರಲು ತೋಳಿಗೆ ಅಂಟಿಸಿಕೊಂಡಿದ್ದ ಬಣ್ಣದ ಬಟ್ಟೆಯನ್ನೂ ಕಿತ್ತು ಒಗೆದು, ಸಹಜವಾದ ಕಪ್ಪು ಕೂದಲೂ ಸಣ್ಣಮೀಶೆಯೂ ಉಳ್ಳ ರಾಜಾಮಲಯಸಿಂಹನಾದನು. ವಲ್ಲಭದೇವನು ಇತರರಿಂದ ವರ್ತಮಾನವು ಸರಿಯಾಗಿ ತಿಳಿಯದೆಂದು ತಾನೇ ಬಂದಿದ್ದನು. ಮಲಯಸಿಂಹನ ವಿಷಯವಾಗಿ ನಿಜವಾವುದೂ ತಿಳಿಯದಿದ್ದರೂ ಅವನ ವಿಷಯವಾಗಿ ತನಗೆ ಬೇಕಾದುದೆಲ್ಲಾ ತಿಳಿಯಿತೆಂದು ಅವನು ಇಂದು ನೆಮ್ಮದಿಯಾಗಿ ನಿದ್ದೆ ಮಾಡಿದನು.

---

# ನಲವತ್ತೆಂಟನೆಯ ಅಧ್ಯಾಯ

## ಚಂದ್ರಿಕಾ ವಿಹಾರ

ವಲ್ಲಭದೇವನು ನಿರ್ಮಲಾನಂದ ವಿಜಯಧ್ವಜರ ಮನೆಗಳಿಗೆ ಹೋದ ದಿನವೇ, ಉದಯಸಿಂಹನು ಸುಖವಾಸಕ್ಕೆ ಬಂದು ಬಂಡಿಯನಿಳಿದು ತನ್ನ ತಾಯಿಯನ್ನು ಮನೆಯಲ್ಲಿ ಬಿಟ್ಟು, ತಾನು ನೆಟ್ಟಗೆ ಮಲಯಸಿಂಹನ ಮನೆಗೆ

ಹೋದನು. ಮಲಯಸಿಂಹನು ಮನೆಯಲ್ಲಿಯೇ ಇದ್ದುದರಿಂದ ಉದಯ ಸಿಂಹನು ಕಂಡ ಕೂಡಲೇ ಝುಗ್ಗನೆ ಎದ್ದು

"ಯಾವಾಗ ಬಿಜಯಮಾಡಿಸಿದಿರಿ, ಕ್ಷೇಮವೇ ?"

"ಸ್ವಾಮಿ, ತಮ್ಮ ಆಶೀರ್ವಾದ ಬಲದಿಂದ ಕ್ಷೇಮ. ಈಗ ತಾನೇ ತಾಯಿಯನ್ನು ಮನೆಯಲ್ಲಿ ಬಿಟ್ಟು ನಿಮ್ಮನ್ನು ನೋಡಬೇಕೆಂದು ಬಂದೆನು."

"ನನ್ನಲ್ಲಿ ತಮಗೆ ಇಷ್ಟು ವಿಶ್ವಾಸ ಇದೆಯಲ್ಲಾ, ಸಾಕು."

"ರಾಜರೇ, ಈ ಊರಿನಲ್ಲಿ ಏನು ವಿಶೇಷ ?"

"ಪರಸ್ಥಳದವನಿಗೆ ವಿಶೇಷವೇನು ತಿಳಿಯುವುದು."

"ನನಗೆ ತಾವು ಏನು ಮಾಡಿದಿರಿ ?"

"ತಾವು ಯಾವುದನ್ನು ಮಾಡುವಂತೆ ನೇಮಿಸಿರಲಿಲ್ಲವಲ್ಲಾ ?"

"ಮದುವೆ."

"ಓಹೋ ! ಅದೇ ? ಅದು ತಾನಾಗಿಯೇ ಒಂದು ವಿಧವಾಗಿ ಆಗು ವಂತಿದೆ."

"ಹೇಗೆ ?"

"ನನ್ನ ಮನೆಯಲ್ಲಿ ಔತಣವಾದದಿನ ದುರ್ಮತಿಯು ಅನಂತರಾಜುವನ್ನು ಕಂಡಿದ್ದನು."

"ಆ ದಿನ ಊಟಕ್ಕೆ ಯಾರಾರು ಬಂದಿದ್ದರು ?"

"ವಲ್ಲಭದೇವ ಅವನ ಹೆಂಡತಿ, ದುರ್ಮತಿ ಅವನ ಕುಟುಂಬ, ಚಿತ್ರ ಶೇನ, ದಮನಕ, ಜಯವೀರ ಇಬ್ಬರು ರಾಜುಗಳು."

"ಅವರಾದರೂ ನನ್ನ ಪ್ರಸ್ತಾಪವನ್ನು ಎತ್ತಿದರೋ ?"

"ಇಲ್ಲ."

"ಅದೇ ನನಗೆ ಗಾಬರಿ."

"ವಿಲಾಸಿನಿಯು ಊಟಕ್ಕೆ ಬಂದಿರಲಿಲ್ಲ. ಆದುದರಿಂದ ನಿಮ್ಮ ವಿಷಯ ವಾಗಿ ಯಾರೂ ಯೋಚಿಸುವ ಕಾರಣವಿರಲಿಲ್ಲ. ಒಂದು ವೇಳೆ ಅವಳೇನಾ ದರೂ ತನ್ನ ಮನೆಯಲ್ಲಿ ಯೋಚಿಸಿರಬಹುದೋ ಏನೋ."

"ಅದೇನೂ ಭಯವಿಲ್ಲ. ಅವಳ ಯೋಚನೆಯೂ ನನ್ನ ಯೋಚನೆಯಂತೆ."

"ಹಾಗಾದರೆ ನಿಮ್ಮಿಬ್ಬರಿಗೂ ಬಹು ಅನ್ಯೋನ್ಯ."

"ರಾಜರೇ, ರೂಪದಲ್ಲಿಯೂ ಬುದ್ಧಿಯಲ್ಲಿಯೂ ಗುಣದಲ್ಲಿಯೂ ನನ್ನ ತಾಯಿಯಂತೆ ಇರುವ ಒಂದು ಹೆಣ್ಣು ಸಿಕ್ಕಿದರೆ ಈಗಲೇ ಮದುವೆಯಾದೇನು. ವಿಲಾಸಿನಿಯು ಆ ರೀತಿ ಇಲ್ಲ."

"ನಿಮ್ಮನ್ನು ಒಪ್ಪಿಸುವುದು ಯಾರಿಗೂ ಅಸಾಧ್ಯ."

"ಅಸಾಧ್ಯವಾದುದಕ್ಕೇ ನಾನು ಪ್ರಯತ್ನಪಡುವುದು. ವಿಲಾಸಿನಿಯನ್ನು ಮದುವೆಯಾಗೆಂದು ವೀರಸಿಂಹನನ್ನು ಎಷ್ಟು ಬೇಡಿಕೊಂಡರೂ ಅವನು ಒಪ್ಪದೆ ಹೋದ."

"ಇದು ಒಳ್ಳೆಯ ಕೆಲಸ. ನಿಮಗೆ ಬೇಡಿದವಳನ್ನು ಅವರ ತಲೆಗೆ ಕಟ್ಟುವ ಯೋಚನೆ ಮಾಡಿದಿರೋ?" ಎಂದು ಮಲಯಸಿಂಹನು ಹೇಳುತ್ತಲೆ ಉದಯಸಿಂಹನು ನಕ್ಕ

"ವೀರಸಿಂಹನು ಶೀಘ್ರದಲ್ಲಿಯೇ ಬರುತ್ತೇನೆಂದು ಬರೆದು ಇದ್ದಾನೆ. ಅವನನ್ನು ಕಂಡರೆ ನಿಮಗೆ ಆಗದೆಂಬುದನ್ನು ಮರೆತೆ"

"ನೀವು ಹಾಗೆ ಹೇಳುವುದು ಸರಿಯಲ್ಲ. ನನಗೆ ಯಾರನ್ನು ಕಂಡರೂ ಆಗದೆ ಇಲ್ಲ. ಎಲ್ಲರೂ ಬೇಕಾದವರೇ. ಅವರು ಯಾವಾಗ ಬರುತ್ತಾರೆ?"

"ಅವನನ್ನು ಬರಹೇಳಿ ವಲ್ಲಭದೇವನು ಕಾಗದ ಬರೆದಿದ್ದಾನಂತೆ. ಅನುಕೂಲವಾದ ಕಡೆಗೆ ಮಗಳನ್ನು ಕೊಡಬೇಕೆಂದು ಅವನಿಗೂ ಆತುರವಿರುವಂತೆ ತೋರುತ್ತದೆ."

"ಮದುವೆಗೆ ಬಂದಿರುವ ಹೆಣ್ಣು ಮಕ್ಕಳಿರುವರೆಲ್ಲರಿಗೂ ಹಾಗೆಯೇ ಚಿಂತೆ. ಮದುವೆಯಾಗುವವರೆಗೂ ನಿಮಿಷವಾದರೂ ಅವರಿಗೆ ನೆಮ್ಮದಿ ಇಲ್ಲ. ವಿಮಲೆಯನ್ನು ಮದುವೆಮಾಡಿಕೊಳ್ಳುವುದು ವೀರಸಿಂಹರಿಗೆ ಇಷ್ಟವೋ?"

"ಇಷ್ಟವಿರುವ ಹಾಗೆ ಇದೆ. ವಲ್ಲಭದೇವ ನಾಗಮಣಿಯರಲ್ಲಿ ಅವನಿಗೆ ವಿಶೇಷ ಗೌರವ."

"ನಿಮಗೋ?"

"ವಲ್ಲಭದೇವನು ಗಡುಸುಮಾತಿನವನಾದರೂ ನ್ಯಾಯಪರ. ಆದುದರಿಂದ ನನಗೂ ಅವನಲ್ಲಿ ಸ್ವಲ್ಪ ಗೌರವವುಂಟು."

"ಪಾಪ! ದುರ್ಮತಿ ಏನು ಅನ್ಯಾಯ ಮಾಡಿದ? ಉದಯಸಿಂಹರೇ, ನಾನು ಹೇಳುವುದನ್ನು ಕೇಳೋಣವಾಗಲಿ. ಆಗುವುದು ಆಗುತ್ತದೆ, ಹೋಗು

ವುದು ಹೋಗುತ್ತದೆ; ನೀವು ಏಕೆ ಸುಮ್ಮನೆ ಅವಸ್ಥೆಪಡುತ್ತೀರಿ. ನಿಮಗೆ ಅವಳನ್ನು ಮದುವೆಯಾಗುವುದು ಶುದ್ಧಾಂಗವಾಗಿ ಇಷ್ಟವಿಲ್ಲದಿದ್ದರೆ ಕಾಣೆ; ಹಾಗಿಲ್ಲದಿದ್ದರೆ ಇಷ್ಟು ದೂರ ಪ್ರಯತ್ನಮಾಡಿ ಈಗ ವಿಲಾಸಿನಿಯನ್ನು ಬಿಡುವುದು ನ್ಯಾಯವಲ್ಲ."

"ರಾಜರೇ ಈ ಮದುವೆಯು ತಪ್ಪುವುದಾದರೆ ಒಂದು ಸಾವಿರ ಹೊನ್ನ ಬೇಕಾದರೂ ಕೊಟ್ಟೇನು."

"ಹಾಗಾದರೆ ಧೈರ್ಯವಾಗಿರಿ. ದುರ್ಮತಿಗೂ ಅದೇ ಅಭಿಪ್ರಾಯ. ಅವನು ಎರಡು ಸಾವಿರ ಹೊನ್ನು ಬೇಕಾದರೂ ಕೊಡುವನು" ಎಂದು ರಾಜನು ಹೇಳಿದುದನ್ನು ಉದಯಸಿಂಹನು ಕೇಳಿ

"ದುರ್ಮತಿಗೆ ಆ ಅಭಿಪ್ರಾಯ ಉಂಟಾಗುವುದಕ್ಕೆ ಕಾರಣವೇನು?"

"ನೋಡಿದರೋ? ನಿಮ್ಮ ಸ್ವಾಭಿಮಾನವನ್ನ? ದುರ್ಮತಿಯು ಅಲ್ಪನು; ನಿಮಗಿಂತ ಹಣಗಾರನಾದ ಮತ್ತೊಬ್ಬನು ಸಿಕ್ಕಿದುದರಿಂದ ಅವನನ್ನು ಈಗ ಬಲವಾಗಿ ಹಿಡಿದು ನಿಮ್ಮನ್ನು ಕೈಬಿಟ್ಟನು. ಅವನಾರೋ ನೀವೇ ಬಲ್ಲಿರಿ"

"ಸರಿ ಸರಿ, ಗೊತ್ತಾಯಿತು. ಅದು ಹೋಗಲಿ. ನಮ್ಮ ಮನೆಯಲ್ಲಿ ಚಂದ್ರಿಕಾ ವಿಹಾರಕ್ಕೆ ಏರ್ಪಾಡಾಗಿದೆ."

"ಹಾಗೆಂದರೇನು? ಈ ದೇಶದಲ್ಲಿ ಏನುಮಾಡುತ್ತಾರೆ?"

"ಮೊದಲು ಬಂದವರೆಲ್ಲರಿಗೂ ಫಲಹಾರ, ಆಮೇಲೆ ಸಂಗೀತ."

"ಬೇಸಗೆಯಲ್ಲಿ ಈ ವಿಹಾರವು ಹಿತವಾಗಿರುತ್ತದೆಯೇ?"

"ಇದು ಉದ್ಯಾನದಲ್ಲಿ ನಡೆಯುವುದರಿಂದ ಬೇಸಗೆಯಲ್ಲಿ ಸುಖಕರವಾಗಿಯೇ ಇರುವುದು. ಬೇಕಾದವರನ್ನು ಮಾತ್ರ ಕರೆಯುತ್ತೇವೆ. ರಾಜುಗಳನ್ನು ತಾವು ಕರೆದುಕೊಂಡು ಬರಲಿಕ್ಕೆ ಆಗುವುದೋ?"

"ಯಾವಾಗ ಏರ್ಪಾಡು ಮಾಡಿದ್ದೀರಿ?"

"ಶನಿವಾರ ರಾತ್ರಿ."

"ಹಾಗಾದರೆ ತಂದೆಯು ಊರಲ್ಲಿರುವುದಿಲ್ಲ."

"ಮಗನಿರುತ್ತಾನೋ, ಇಲ್ಲವೋ?"

"ಇರಬಹುದು."

" ಅವನನ್ನು ಕರೆದುಕೊಂಡು ಬನ್ನಿ."

" ಅವನ ಪೂರ್ವೋತ್ತರಗಳು ನನಗೆ ತಿಳಿಯವು ; ಆದುದರಿಂದ ನಾನು ಅವನನ್ನು ಕರೆದುಕೊಂಡು ಬರುವುದಕ್ಕೆ ಆಗುವುದಿಲ್ಲ.''

" ಹಾಗಿದ್ದ ಪಕ್ಷದಲ್ಲಿ ಹೇಗೆ ಅವನನ್ನು ನೀವು ನಿಮ್ಮ ಮನೆಗೆ ಕರೆದಿರಿ?"

" ಅದು ಬೇರೆ ವಿಷಯ. ನಿರ್ಮಲಾನಂದರು ಅವನನ್ನು ನನ್ನ ಬಳಿಗೆ ಕಳುಹಿಸಿದುದರಿಂದ ನಾನು ಅವನನ್ನು ನಿರ್ವಾಹವಿಲ್ಲದೆ ಕರೆಯಬೇಕಾಗಿ ಬಂದಿತು. ಅವನ ಯೋಗ್ಯತೆಯನ್ನು ಚೆನ್ನಾಗಿ ಕಂಡುಕೊಂಡಹೊರತು ನಾನು ಅವನನ್ನು ಯಾರಮನೆಗೂ ಕರೆದುಕೊಂಡು ಹೋಗುವುದಿಲ್ಲ. ಬೇಕಾದರೆ ನೀವೇ ಅವನನ್ನು ಕರೆಯಿರಿ. ಒಂದು ವೇಳೆ ಅವನು ವಿಲಾಸಿನಿಯನ್ನು ಮದುವೆಯಾದರೆ ನೀವು ನನ್ನನ್ನು ಪ್ರಾಣದೊಂದಿಗೆ ಬೇರೆ ಬಿಡಿರಿ '' ಎಂದು ನಕ್ಕು '' ನಾನೂ ಬಹುಶಃ ಬರಲಾರೆ " ಎಂದನು.

" ನೀವು ಏಕೆ ಬರುವುದಿಲ್ಲ.''

" ನೀವು ನನ್ನನ್ನು ಕರೆಯಲೇ ಇಲ್ಲ."

" ನಿಮ್ಮನ್ನು ಕರೆಯುವ ಉದ್ದೇಶದಿಂದಲೇ ನಾನು ಇಲ್ಲಿಗೆ ಬಂದೆನು."

" ನೀವು ಕರೆದರೂ ನನಗೆ ಬರಲಿಕ್ಕೆ ಆಗುವುದಿಲ್ಲ.''

" ರಾಜರೇ, ಒಂದು ಸಂಗತಿಯನ್ನು ನಿಮಗೆ ಹೇಳಿದರೆ ಯಾವ ಅಭ್ಯಂತರ ವಿದ್ದರೂ ನೀವು ಬಾರದೇ ಇರುವುದಿಲ್ಲ."

" ಅದೇನು ?"

" ನೀವು ಅಗತ್ಯವಾಗಿ ಬರಬೇಕೆಂದು ನನ್ನ ತಾಯಿಯು ಪ್ರಾರ್ಥಿಸಿದಳು'

ಹಾಗೆಂದ ಒಡನೆಯೇ ಮಲಯಸಿಂಹನು ಸ್ವಲ್ಪ ಬೆಚ್ಚಿ

" ಶ್ರೀಮತಿ ರಾಧಾಬಾಯಿಯವರೇ ಹೇಳಿದರೇ ?''

" ಸ್ವಾಮೀ, ಅಹುದು. ಅವಳಿಗೆ ನಿಮ್ಮಲ್ಲಿ ವಿಶೇಷ ಗೌರವ. ನಾವು ಈ ಊರನ್ನು ಬಿಟ್ಟ ಮೊದಲು ಇಲ್ಲಿಗೆ ಬರುವವರೆಗೆ ನಿಮ್ಮ ಪ್ರಸ್ತಾಪ ವಿನಾ ಬೇರೆ ಯಾವುದೂ ಇರಲಿಲ್ಲ. ನಿಮ್ಮ ಆಳವೇ ಯಾರಿಗೂ ಗೊತ್ತಾಗುವುದಿಲ್ಲ ಎನ್ನುತ್ತಾಳೆ."

" ಬುದ್ಧಿಮತಿಯೂ ವಿವೇಕಿನಿಯೂ ಆಗಿರುವ ಅವರೂ ಹಾಗೆ ಹೇಳುತ್ತಾರೆಯೇ ?"

"ಅವಳಿಗೂ ಹಾಗೆಯೇ, ಎಲ್ಲರಿಗೂ ಹಾಗೆಯೇ. ನಿಮ್ಮ ವಿಷಯವು ಯಾರಿಗೂ ಬಗೆಹರಿದಿಲ್ಲ. ಆದರೂ ಅವಳಿಗೆ ನಿಮ್ಮ ವಿಷಯದಲ್ಲಿ ಒಳ್ಳೆಯ ಅಭಿಪ್ರಾಯವಿರುವುದರಿಂಧ ನೀವು ಅಗತ್ಯ ಬಂದು ಆ ಅಭಿಪ್ರಾಯವನ್ನು ಸ್ಥಿರಪಡಿಸಬೇಕು.''

"ಮುಂದಾಗಿ ನೀವು ಈ ಸಂಗತಿಯನ್ನು ಸೂಚಿಸಿದಿರಿ. ಆಗಲಿ, ಬರುತ್ತೇನೆ."

"ಸಂತೋಷ''

"ದುರ್ಮತಿಯೂ ಬರುತ್ತಾನೋ?''

"ನನ್ನ ತಂದೆ ಮೊದಲೇ ಅವರನ್ನು ಕರೆದಿದ್ದಾರೆ. ದಂಡಾಧಿಕಾರಿಯಾದ ವಲ್ಲಭದೇವನನ್ನೂ ಬರುವುದಕ್ಕೆ ಒಪ್ಪಿಸಬೇಕೆಂದು ಇದ್ದಾರೆ. ಆದರೆ ಬರುವುದೇನೋ ಅನುಮಾನ. ತಾವು ಅಗತ್ಯ ಬರಬೇಕು'' ಎಂದು ಹೇಳಿ ಉದಯಸಿಂಹನು ಎದ್ದನು.

"ಸ್ವಾಮೀ ಉದಯಸಿಂಹರೇ, ವೀರಸಿಂಹರು ಬಂದರೆ ಅವರನ್ನು ನಾನು ನೋಡಬೇಕೆಂದು ಇದ್ದೇನೆ. ನೀವು ಅಗತ್ಯವಾಗಿ ಅವರನ್ನು ಕರೆದುಕೊಂಡು ಬನ್ನಿರಿ''

ಅದನ್ನು ಕೇಳಿ ಉದಯಸಿಂಹನು ನಗುತ್ತ ''ಆಗಬಹುದು, ಅಪ್ಪಣೆಯಾದರೆ ಬರುತ್ತೇನೆ'' ಎಂದು ಹೇಳಿ ಹೊರಟನು.

ಮಲಯಸಿಂಹನು ಅವನನ್ನು ತಲೆಬಾಗಿಲಿನವರೆಗೆ ಬಿಟ್ಟುಬಂದನು. ಆಗ ಭದ್ರಕನು ಇದಿರಿಗೆ ಬರಲು, "ಏನು ಸಮಾಚಾರ" ಎಂದು ಅವನನ್ನು ಕೇಳಿದನು.

''ಮಹಾಸ್ವಾಮೀ, ಅವಳು ವಲ್ಲಭದೇವನ ಕಚೇರಿಗೆ ಹೋಗಿದ್ದಳು.''

"ಅಲ್ಲಿ ಎಷ್ಟು ಹೊತ್ತು ಇದ್ದಳು?''

''ಸುಮಾರು ಎರಡು ಗಂಟೆಯ ಕಾಲ.''

''ಅಲ್ಲಿಂದ ಮನೆಗೆ ಹೋದಳೋ?"

''ನೆಟ್ಟಗೆ ಮನೆಗೆ."

''ಹಾಗಾದರೆ ತೀರಪಟ್ಟಣಗಳಲ್ಲಿರುವ ನಮ್ಮ ಹಡಗುಗಳನ್ನೂ ಕುದುರೆಯ ಪ್ಪಾಲುಗಳನ್ನೂ ಯಾವಾಗಲೂ ಸಿದ್ಧವಾಗಿರುವಂತೆ ಏರ್ಪಡಿಸು"

ಎಂದು ಹೇಳುತ್ತಲೆ, ಭದ್ರಕನು ‹‹ರೋಗಿ ಬಯಸಿದುದೂ ಹಾಲೋಗರ, ವೈದ್ಯ ಹೇಳಿದುದೂ ಹಾಲೋಗರ'' ಎಂದುಕೊಂಡು ಆ ರಾತ್ರಿಯೇ ಊರನ್ನು ಬಿಟ್ಟು ಪ್ರಯಾಣಮಾಡಿದನು.

ಮಾರನೆಯ ದಿನ ಬಹುಜನ ಕುಶಲರಾದ ಶಿಲ್ಪಿಗಳು ಶ್ರೀಮಂತ ರಾಜಸಿಂಹನ ಮನೆಯನ್ನೂ ಉದ್ಯಾನವನ್ನೂ ತೋರಣಗಳಿಂದಲೂ ಪುಷ್ಪಗಳಿಂದಲೂ ಧ್ವಜಗಳಿಂದಲೂ ಅಲಂಕರಿಸಿ ಸಾಯಂಕಾಲದೊಳಗಾಗಿ ನೋಡಿದವರ ಕಣ್ಣೂ, ಮನವೂ ಅಲ್ಲೇ ನಟ್ಟಿರುವಂತೆ ಮಾಡಿದರು. ಅಲ್ಲಲ್ಲಿ ವಿಚಿತ್ರವಾದ ಉನ್ನತಾಸನಗಳೂ ಉಯ್ಯಾಲೆಗಳೂ, ಮಧ್ಯೆ ಮಧ್ಯೆ ಕಾಲುಮಣೆಗಳ ಮೇಲೆ ಸುಗಂಧದ್ರವ್ಯಗಳೂ, ತಾಂಬೂಲವೂ ಅಣಿಯಾಗಿದ್ದುವು. ಎಲ್ಲವೂ ಸರಿಯಾಗಿ ಏರ್ಪಾಡಾಗಿದೆಯೋ ಎಂದು ಒಂದು ಸಾರಿ ರಾಧಾಬಾಯಿಯು ಎಲ್ಲ ಕಡೆಯನ್ನು ಸುತ್ತಿ ನೋಡಿಕೊಂಡು ಬರುತ್ತಿದ್ದಳು. ಅತಿಥಿಗಳನ್ನು ತಕ್ಕ ಮರ್ಯಾದೆಯೊಡನೆ ಕರೆತಂದು ಉಚಿತಸ್ಥಾನಗಳಲ್ಲಿ ಕುಳ್ಳಿರಿಸುತ್ತಿದ್ದರು.

ಶ್ರೀಮತೀ ರಾಧಾಬಾಯಿಯ ಮನೆಯಲ್ಲಿ ನಡೆಯತಕ್ಕ ಉತ್ಸವಗಳಲ್ಲಿ ಯಾವುದಾದರೂ ಒಂದು ಚಮತ್ಕಾರವಾದ ಹೊಸ ಏರ್ಪಾಡು ಇಲ್ಲದೆ ಇರುತ್ತಿರಲಿಲ್ಲ. ಅವಳ ಬುದ್ಧಿಕೌಶಲ್ಯವನ್ನೂ, ವಿವೇಕವನ್ನೂ, ಜನಗಳಿಗೆ ಅವರು ತೋರುವ ಆದರವನ್ನೂ ಎಲ್ಲರೂ ಬಲ್ಲರು. ಅದಕ್ಕಾಗಿಯೇ ಅನೇಕರು ಅವರ ಮನೆಗ ಬಾರದೆ ತಪ್ಪಿಸಿಕೊಳ್ಳುತ್ತಿರಲಿಲ್ಲ. ಕೆಲವರು ಆ ಏರ್ಪಾಡನ್ನು ನೋಡುವುದಕ್ಕಾಗಿಯೇ ಬರುತ್ತಿದ್ದರು.

ಭೂತದ ಮನೆಯಲ್ಲಿ ನಡೆದ ಸಂಗತಿಯನ್ನು ನೆನೆನೆನೆದು ಭಾಮಿನಿಯು ರಾಧಾಬಾಯಿಯು ಮನೆಗೆ ಹೋಗಲೋ ಬೇಡವೋ ಎಂದು ಯೋಚಿಸುತ್ತಲಿದ್ದಾಗ ವಲ್ಲಭದೇವನನ್ನು ಅಕಸ್ಮಾತ್ತಾಗಿ ಸಂಧಿಸಿದಳು. ಅವನು ರಾಧಾಬಾಯಿಯ ಮನೆಗೆ "ಚಂದ್ರಿಕಾವಿಹಾರಕ್ಕೆ ಹೋಗುವುದುಂಟೋ'' ಎಂದು ಕೇಳಲು ‹‹ನನಗೆ ಮೆಯ್ ಸರಿಯಾಗಿಲ್ಲ; ನಾನು ಹೋಗಲಾರೆ'' ಎಂದಳು. "ನೀನು ಅಗತ್ಯವಾಗಿ ಹೋಗಬೇಕು; ಹೋಗದಿದ್ದರೆ ಆಭಾಸವಾಗುವುದು" ಎಂದು ಅವನು ಸೂಚಿಸಲು, ''ಹಾಗಾದರೆ ಹೋಗುತ್ತೇನೆ" ಎಂದಳು. ಆ ರಾತ್ರಿ ಅವಳು ಸರ್ವಾಭರಣಭೂಷಿತೆಯಾಗಿ ಮಗಳಿಗೂ ಅಲಂಕಾರಮಾಡಿ ಅವಳನ್ನು ಸಂಗಡ ಕರೆದುಕೊಂಡು ರಾಧಾಬಾಯಿಯ ಮನೆಗೆ ಹೋದಳು.

ಉದಯಸಿಂಹನು ಅವಳನ್ನು ಮರ್ಯಾದೆಯಿಂದ ಕರೆದುಕೊಂಡು ಹೋಗಿ ಕುಳ್ಳಿರಿಸಿ ಹಿಂತಿರುಗಿ ನೋಡಲು,

"ಅವಳು ವಿಲಾಸಿನಿಯನ್ನು ನೋಡುತ್ತೀರೋ?''

''ಅಹುದು. ಅವಳನ್ನು ಕರೆದುಕೊಂಡು ಬರದೇ ಇರುವುದು ಯಾವ ಧರ್ಮ?''

"ಅವಳು ವಿಮಲೆಯ ಜತೆಯಲ್ಲಿ ಮಾತನಾಡುತ್ತಿದ್ದಾಳೆ; ಇನ್ನೇನು ಬರುತ್ತಾಳೆ, ಧೈರ್ಯವಾಗಿರಿ. ರಾಜಾಮಲಯಸಿಂಹರು ಬರುವುದಿಲ್ಲವೋ?''

''ಹದಿನೇಳು!''

''ಹಾಗೆಂದರೇನು?"

"ಎಲ್ಲರಿಗೂ ರಾಜರ ಹುಚ್ಚು ಹಿಡಿದಂತೆ ಇದೆ. ನಿಮಗೆ ಮುಂದೆ ಹದಿನಾರು ಜನರು ಹೀಗೆಯೇ ಕೇಳಿದ್ದರು. ನೀವು ಹದಿನೇಳನೆಯವರು."

"ನೀವು ಅವರಿಗೆಲ್ಲಾ ಇದೇ ರೀತಿ ಬದಲು ಹೇಳಿದಿರೋ?"

"ರಾಜರು ಬಂದೇ ಬರುತ್ತಾರೆ"

ಅಷ್ಟು ಹೊತ್ತಿಗೆ ನಾಗಮಣಿಯು ಬಂದಳು. ಉದಯಸಿಂಹನು ಅವಳನ್ನು ಮಾತನಾಡಿಸಲು ಹೋದನು. ಅವಳು ಉದಯಸಿಂಹನನ್ನು ಕುರಿತು ಸ್ವಾಮೀ, ಎಂದು ಏನನ್ನೋ ಕೇಳತೊಡಗಿದಾಗ ಅವನು,

''ಸರಿ ಸರಿ; ನೀವೂ ಕೇಳುವುದನ್ನು ನಾನು ಬಲ್ಲೆ.''

''ಹಾಗಾದರೆ ಹೇಳಿ, ನೋಡೋಣ?"

''ಮಲಯಸಿಂಹರು ಬರುವರೋ ಇಲ್ಲವೋ ಎಂದು."

"ಅಲ್ಲ, ಅಲ್ಲ. ವೀರಸಿಂಹರು ಯಾವಾಗ ಬರುತ್ತಾರೆ?"

''ಜಾಗ್ರತೆಯಾಗಿಯೇ ಬರುತ್ತಾನೆ."

''ರಾಜನೂ ಇಲ್ಲಿಗೆ ಬರುತ್ತಾನೋ?"

''ಬರುತ್ತಾರೆ."

''ಅವನಿಗೆ ಬೇರೆ ಒಂದು ಹೆಸರಿದೆಯಂತೆ.''

"ಅದು ನನಗೆ ತಿಳಿಯದು; ಇದ್ದರೂ ಇರಬಹುದು."

"ಹಾಗಾದರೆ, ಹೆಂಗಸಾದರೂ ನಿಮಗಿಂತ ನಾನೇ ವಾಸಿ. ಅವನ ಸರಿಯಾದ ಹೆಸರು ಜಗನ್ನಾಥನಂತೆ. ಅವನು ಸಂಪಿಗೆಯ ವನದ ಮನೆಯನ್ನು ಹುಚ್ಚರಿಗೆ ಆಲಯವನ್ನಾಗಿ ಮಾಡುತ್ತಾನಂತೆ."

"ಅಮ್ಮಾ, ಇವು ಎಲ್ಲರಿಗೂ ತಿಳಿದಿರಬೇಕಾದ ವಿಷಯಗಳು. ಇವುಗಳನ್ನು ಇತರರಿಗೆ ಹೇಳಬಹುದೋ ?"

"ನಾನು ಹೇಳಿದೆ ಎಂದು ಯಾರಿಗೂ ಹೇಳಬೇಡಿ ; ಎಲ್ಲವನ್ನೂ ಒಂದೇ ಸಲ ಹೇಳಬೇಡಿ."

"ಅದು ಏಕೆ ?''

"ಇದು ಪೋಲೀಸಿನವರು ವಿಚಾರಿಸಿ ತಿಳಿದುಕೊಂಡಿರುವ ಗುಟ್ಟು. ಹೀಗೆ ದುಂದುವೆಚ್ಚಮಾಡುವವನ ಸಮಾಚಾರವನ್ನು ಪೋಲೀಸಿನವರು ವಿಚಾರಿಸದೆ ಬಿಟ್ಟಾರೆ ?''

"ಹಾಗಾದರೆ ಇವರನ್ನು ಹಿಡಿದು ಪೋಲೀಸಿನವರು ಏತಕ್ಕೆ ಸೆರೆಯಲ್ಲಿ ಹಾಕಲಿಲ್ಲ ?''

"ನಮ್ಮ ರಾಜನಿಗೆ ಇವನ ವಿಷಯವಾಗಿ ಬಲವಾದ ಶಿಫಾರಸು ಬಂದಿದೆ. ಇಲ್ಲದಿದ್ದರೆ ಪೋಲೀಸಿನವರು ಹಾಗೆಯೇ ಮಾಡುತ್ತಲಿದ್ದರು."

"ಅಯ್ಯೋ ಪಾಪ! ಈ ವಿಚಾರವು ಮಲಯಸಿಂಹರಿಗೆ ತಿಳಿದಿದೆಯೋ?''

''ತಿಳಿದಿರಲಾರದು.''

"ಹಾಗಾದರೆ ಅವರಿಗೆ ಇದನ್ನು ತಿಳಿಸಿಬೇಕು'' ಎಂದು ಉದಯಸಿಂಹನು ಹೇಳುತ್ತಿದ್ದಾಗ, ಜಯವೀರನು ಬಂದನು. ಉದಯಸಿಂಹನು ಅವನನ್ನು ನಾಗಮಣಿಗೆ ತೋರಿಸಿ ''ಅಮ್ಮಾ, ಇವರು ಜಯವೀರರು, ನಮ್ಮ ಸೈನ್ಯಾಧಿಪರು, ಧೈರ್ಯಶಾಲಿಗಳು. ಒಳ್ಳೆಯ ಸ್ನೇಹಪರರು'' ಎಂದು ಹೇಳಲು ಅವಳು ''ನನಗೆಲ್ಲಾ ಗೊತ್ತು'' ಎಂದು ಉದಾಸೀನದಿಂದ ಅತ್ತಕಡೆಗೆ ಮುಖವನ್ನು ತಿರುಗಿಸಿಕೊಂಡಳು. ಇದರಿಂದ ಜಯವೀರನು ಖಿನ್ನನಾಗಿ ಬೀದಿಯ ಕಡೆಗೆ ತಿರುಗಿದನು. ಆಗತಾನೇ ವಿಮಲೆಯೂ ವಿಲಾಸಿನಿಯೂ ಒಳಕ್ಕೆ ಬಂದರು. ವಿಮಲೆಯು ಜಯವೀರನನ್ನು ನೋಡಿ ಕಣ್ಣಿನಿಂದಲೇ ತನ್ನ ಸಂತೋಷವನ್ನು ಸೂಚಿಸಿದಳು. ಜಯವೀರನು ಅದನ್ನು ಅರಿತು ತಾನೂ ಹಾಗೆಯೇ ಸಂತೋಷವನ್ನು ಸೂಚಿಸಿದನು. ಪರಸ್ಪರ ಸಮಾಲೋಕನದಿಂದ ಉಂಟಾದ ಆನಂದದಿಂದ ಇಬ್ಬರೂ ಕ್ಷಣಕಾಲ ಸ್ತಂಭೀಭೂತರಾಗಿ ಈ ಲೋಕವನ್ನೇ ಮರೆತು ನಿಂತಿದ್ದರು. ರಾಜಾಮಲಯಸಿಂಹನು ಆ ವೇಳೆಗೆ ಅಲ್ಲಿಗೆ ಬಾರದೆ ಇದ್ದಿದ್ದರೆ ಅವರಿಬ್ಬರೂ ಇನ್ನೂ ಹಾಗೆಯೇ ಇರುತ್ತಿದ್ದರು.

ನಮ್ಮ ರಾಜನಲ್ಲಿ ಸಕಲರ ಚಿತ್ತವೃತ್ತಿಯನ್ನೂ ಸೆಳೆಯಬಲ್ಲ ಒಂದು ವಿಧವಾದ ಶಕ್ತಿಯು ಇದ್ದಿತು. ಅದನ್ನು ಎಲ್ಲರೂ ಬಲ್ಲರೂ. ಈ ಶಕ್ತಿಯು ಅವನಿಗೆ ಏತರಿಂದುಂಟಾದುದು ? ಅವನ ಉಡಿಗೆ ತೊಡಿಗೆಗಳಿಂದಲೇ ? ಅಲ್ಲ. ಅವನ ಗುಣಗಳೂ ನಡತೆಗಳೂ ಇದಕ್ಕೆ ಕಾರಣಗಳೇ ? ಅಲ್ಲ. ಅವನ ಕೊಡುಗೆಯ್ಗಾಗಿ ಜನರು ಅವನನ್ನು ಮೆಚ್ಚುತ್ತಿದ್ದರೇ ? ಇಲ್ಲ, ಇಲ್ಲ. ಅವನು ತನ್ನ ವಿಷಯವಾಗಿ ಯಾರಿಗೂ ಏನನ್ನೂ ತಿಳಿಸದೆ ಅಭೇದ್ಯನಾಗಿಯೂ ಅತುಳೈಶ್ವರ್ಯವಂತನಾಗಿಯೂ ಇದ್ದುದರಿಂದ ಆ ಪಟ್ಟಣದವರ ಮನಸ್ಸನ್ನು ಸೆಳೆಯುತ್ತಲಿದ್ದನು.

ಮಲಯಸಿಂಹನು ಒಳಗೆ ಬಂದಾಗ ರಾಧಾಬಾಯಿಯು ಬಾಗಿಲ ಇದುರಿಗಿದ್ದ ನಿಲುಗನ್ನಡಿಯ ಮುಂದೆ ನಿಂತಿದ್ದಳು. ಅವನು ಬರುವುದನ್ನು ಕನ್ನಡಿಯಲ್ಲಿ ಕಂಡು ಅವನ ಕಡೆಗೆ ತಿರುಗಿ ನಸುನಗುತ್ತ ನಮಸ್ಕರಿಸಿದಳು. ಅವನು ಮೊದಲು ಮಾತನಾಡಿಸಲಿ ಎಂದು ಅವಳೂ, ಅವಳು ಮೊದಲು ಮಾತನಾಡಿಸಲಿ ಎಂದು ಅವನೂ ಇದ್ದುದರಿಂದ ಇಬ್ಬರೂ ಮಾತನಾಡಲಾರದೆ ಸುಮ್ಮನೆ ಇದ್ದರು. ಅನಂತರ ಮಲಯಸಿಂಹನು ಉದಯಸಿಂಹನ ಸಮೀಪಕ್ಕೆ ಹೋದನು. ಅವನು ಮಲಯಸಿಂಹನನ್ನು ನೋಡಿ,

‘‘ರಾಜರೇ, ನನ್ನ ತಾಯಿಯನ್ನು ನೋಡಿದಿರೋ ?”

‘‘ಈಗ ತಾನೇ ನೋಡಿಬಂದೆ. ನಿಮ್ಮ ತಂದೆಯವರೆಲ್ಲಿ ?’’

‘‘ಅವರು ಉದ್ಯಾನವನದಲ್ಲಿ ಯಾರೊಂದಿಗೋ ಮಾತನಾಡುತ್ತ ಕುಳಿತಿದ್ದಾರೆ.’’

ಅಷ್ಟರಲ್ಲಿಯೇ ದುರ್ಮತಿಯು ಹಿಂದುಗಡೆಯಿಂದ ಒಳಗೆ ಬಂದು ರಾಜನ ತೋಳನ್ನು ಹಿಡಿದು ಅಲುಗಿಸಲು, ಮಲಯಸಿಂಹನು ಹಿಂತಿರುಗಿ ನೋಡಿ,

‘‘ಓಹೋ ! ಶ್ರೀಮಂತರೇ ! ಯಾವಾಗ ಬರೋಣವಾಯಿತು ? ನಾನು ಕಾಣಲಿಲ್ಲ. ಕ್ಷಮಿಸಬೇಕು.”

‘‘ಸ್ವಾಮಿ, ರಾಜರೇ, ಈ ಒಣಬಿರುದುಗಳಲ್ಲಿ ನನಗೆ ಅಭಿಮಾನವಿಲ್ಲವೆಂದು ತಿಳಿದೂ ತಾವು ಶ್ರೀಮಂತರರೆಂದು ನನ್ನನ್ನು ಏತಕ್ಕೆ ಕರೆಯುತ್ತೀರಿ ? ಉದಯಸಿಂಹರನ್ನು ಹಾಗೆ ಸಂಬೋಧಿಸುವುದು ನ್ಯಾಯ” ಎಂದು ಹೇಳಲು, ಉದಯಸಿಂಹನು,

‘‘ಅದು ನಿಜ ; ಈ ಬಿರುದುಗಳನ್ನು ಬಿಟ್ಟರೆ ನಮ್ಮನ್ನು ಕೇಳುವವರೇ ಇಲ್ಲ. ತಮಗಾದರೋ ಬಿರುದಿಲ್ಲದಿದ್ದರೂ ಬೇಕಾದಷ್ಟು ಐಶ್ವರ್ಯವಿದೆ.”

‘‘ಸ್ವಾಮಿಾ ಉದಯಸಿಂಹರೇ ! ಹಾಗೆ ಹೇಳಬೇಡಿ. ಐಶ್ವರ್ಯವು ಸ್ಥಿರ ವಲ್ಲ. ಇಂದು ಲಕ್ಷಾಧಿಪತಿಯಾದವನು ನಾಳೆ ಭಿಕ್ಷಾಧಿಕಾರಿಯಾಗಬಹುದು. ಈಗ ನೋಡಿ, ಕೋಟ್ಯಾಧೀಶನಾದ ಪರಾಂಕುಶದಾಸನು ದಿವಾಳಿಯಾದನಂತೆ’’ ಎಂದು ಮಲಯಸಿಂಹನು ಹೇಳುತ್ತಲೇ ಉದಯಸಿಂಹನು ನಗುತ್ತ ತನ್ನ ತಾಯಿಯ ಬಳಿಗೆ ಹೋದನು. ದೀವಾಳಿಯ ವಾರ್ತೆಯನ್ನು ಕೇಳಿದ ದುರ್ಮತಿಯು ದಿಗಿಲು ಬಿದ್ದು,

‘‘ರಾಜರೇ, ತಾವು ಹೇಳಿದ ಮಾತು ನಿಶ್ಚಯವೋ ?’’

‘‘ಸ್ವಾಮಿಾ, ಈ ದಿನ ಸಾಯಂಕಾಲತಾನೇ ಸಮಾಚಾರ ಬಂದಿತು. ಆದರೆ ಮೊದಲೇ ನನಗೆ ಸೂಚನೆಯು ತಿಳಿದಿದುರಿಂದ ಅವನಲ್ಲಿದ್ದ ನನ್ನ ಹಣ ವನ್ನು ತೆಗೆದುಕೊಂಡುಬಿಟ್ಟೆನು. ನಿಮ್ಮ ಹಣ ಅವನಲ್ಲಿ ಏನಾದರೂ ಇದೆಯೋ ?”

‘‘ಅಯ್ಯೋ ದೇವರೇ, ಎರಡು ಲಕ್ಷ ವರಹಗಳ ಹುಂಡಿಯ ಹಣವನ್ನು ಕೊಟ್ಟೆನಲ್ಲಾ !”

‘‘ಹಾಗಾದರೆ ಅದು ಹೋಯಿತು.”

‘‘ಸ್ವಾಮಿಾ ರಾಜರೇ, ಈವರ್ತಮಾನವನ್ನು ಯಾರಿಗೂ ಹೇಳಬೇಡಿ. ತತ್ರಾಪಿ ಅನಂತರಾಜುವಿನ ಮುಂದೆಯಂತೂ ಈ ಮಾತನ್ನು ಎತ್ತಲೇ ಕೂಡದು” ಎಂದು ದುರ್ಮತಿಯು ಅತಿದೈನ್ಯದಿಂದ ಬೇಡಿಕೊಂಡು ಅನಂತರಾಜುವಿದ್ದೆಡೆಗೆ ಹುಸಿನಗೆಯನ್ನು ಸೂಸುತ್ತ ಹೋದನು.

ಪರಿಚಾರಕರು ತಟ್ಟೆಗಳಲ್ಲಿ ಹಣ್ಣುಹಂಪಲುಗಳು ತುಂಬಿಕೊಂಡು ಅತಿಥಿ ಗಳಿಗೆ ಕೊಡುತ್ತಿರಲು ಅವರವರು ಇಷ್ಟವಾದುದನ್ನು ತೆಗೆದು ಭುಜಿಸುತ್ತಲಿದ್ದರು. ಮಲಯಸಿಂಹನು ಯಾವುದನ್ನೂ ಮುಟ್ಟದೆ ಸುಮ್ಮನೆ ನಿಂತಿದ್ದನು. ಇವ ನನ್ನೇ ನೋಡುತ್ತಲಿದ್ದ ರಾಧಾಬಾಯಿಯು ಮಗನನ್ನು ಕುರಿತು

‘‘ಅಪ್ಪಾ ಮಗೂ, ಅವರನ್ನು ನೋಡಿದೆಯಾ” ಎಂದಳು.

‘‘ಅಮ್ಮಾ, ಯಾರನ್ನು ?”

‘‘ಮಲಯಸಿಂಹರನ್ನು ನೋಡು. ಅವರು ನಮ್ಮ ಮನೆಯಲ್ಲಿ ಯಾವುದನ್ನೂ ಮುಟ್ಟುವುದಿಲ್ಲ.”

‘‘ಅವರು ಊರಿಗೆ ಬಂದ ದಿನವೇ ನಮ್ಮ ಮನೆಯಲ್ಲಿ ಫಲಾಹಾರ ಮಾಡಲಿಲ್ಲವೇ ?”

‘‘ಅದು ಬೇರೆ ಸಮಾಚಾರ. ನಿನ್ನ ಮನೆ ನಿಮ್ಮ ತಂದೆಯ ಮನೆಯಲ್ಲ.”

‘‘ಅಮ್ಮಾ ಅವರು ಬಹು ಮಿತಭೋಜಿ.”

‘‘ನನಗೆ ಹಾಗೆ ತೋರುವುದಿಲ್ಲ. ನೀನು ಇನ್ನೊಂದು ಸಾರಿ ಅವರನ್ನು ಬಲಾತ್ಕರಿಸಿ ನೋಡು ” ಎಂದಳು.

ತಾಯಿಯ ಮಾತಿನಂತೆ ಉದಯಸಿಂಹನು ಬಲಾತ್ಕಾರ ಮಾಡಿದರೂ ರಾಜನು ಯಾವುದನ್ನೂ ಮುಟ್ಟದೆ ಇದ್ದುದನ್ನು ಕಂಡು ರಾಧಾಬಾಯಿಯ ಮುಖವು ಬಿಳುಪೇರಿತು. ಮಗನು ಸಮೀಪಕ್ಕೆ ಬಂದು ‘‘ಅಮ್ಮಾ, ಏನು ಸಂಕಟ ?” ಎಂದನು.

‘‘ನೋಡಿದೆಯೋ ಅವರು ಯಾವುದನ್ನೂ ಮುಟ್ಟುವುದಿಲ್ಲ.”

‘‘ಅದಕ್ಕಾಗಿ ನೀನೇಕೆ ದುಃಖಪಡುತ್ತೀಯೆ ?”

‘‘ಮಗೂ ! ಹೆಂಗಸರಿಗೆ ಹಾಗೆ ತೋರುವುದಿಲ್ಲ. ರಾಜರು ಯಾವುದಾದರೂ ಒಂದನ್ನು ತೆಗೆದು ತಿಂದಿದ್ದರೆ ನನ್ನ ಮನಸ್ಸು ನೆಮದಿಯಾಗುತ್ತಲಿದ್ದಿತು”

ಇಷ್ಟು ಹೊತ್ತಿಗೆ ಮನೆಯಲ್ಲಿ ವಿಪರೀತವಾಗಿ ಸೆಕೆಯುಂಟಾಯಿತು. ಫಲಾಹಾರವು ಮುಗಿದು ಇದ್ದುದರಿಂದ ಎಲ್ಲರೂ ಉದ್ಯಾನವನಕ್ಕೆ ಹೊರಟರು. ಆಗ ರಾಧಾಬಾಯಿಯು ಮಲಯಸಿಂಹನನ್ನು ನೋಡಿ ‘‘ತಾವೂ ಉದ್ಯಾನ ವನಕ್ಕೆ ಬಿಜಯಮಾಡಿಸಬೇಕು” ಎಂದು ಹೇಳಲು, ಅವನು ಅವಳನ್ನು ದೃಷ್ಟಿಸಿ ನೋಡಿದನು. ಅವಳು ತಲೆಯನ್ನು ತಗ್ಗಿಸಿಕೊಂಡು ಅವನ ಕೂಡ ಸ್ವಲ್ಪ ದೂರ ಹೋಗಿ

‘‘ನಾನು ನಿಮ್ಮನ್ನು ಎಲ್ಲಿಗೆ ಕರೆದೊಯ್ಯುತ್ತೇನೆ ಬಲ್ಲಿರಾ ?”

‘‘ಅಮ್ಮಾ ! ಅದನ್ನು ನಾನು ಕಾಣೆ; ತಾವು ಎಲ್ಲಿಗೆ ಕರೆದೊಯ್ದರೂ ಚಿಂತೆಯಿಲ್ಲ, ನಿಮ್ಮ ಹಿಂದೆ ಬರುತ್ತೇನೆ.”

‘‘ರಾಜರೇ, ಅಗೋ ನೋಡಿ; ಆ ಲತಾಗೃಹದ ಬಳಿಗೆ ನಿಮ್ಮನ್ನು ಕರೆದುಕೊಂಡು ಹೋಗುತ್ತೇನೆ” ಎಂದು ರಾಧಾಬಾಯಿಯು ತಲೆಬಾಗಿ ಮುಂದೆ

ಹೋಗುತ್ತ ಇದ್ದಳು. ಇಬ್ಬರೂ ಲತಾಗೃಹದ ಬಳಿ ಹೋದಮೇಲೆ ರಾಧಾಬಾಯಿಯು ಅಲ್ಲಿ ಕುಳಿತಿದ್ದ ಚಪ್ಪರದ್ರಾಕ್ಷಿ ಹಣ್ಣಿನ ಗೊಂಚಲೊಂದನ್ನು ಕಿತ್ತು

"ರಾಜರೇ, ಇದು ಅರಬ್ಬೀದೇಶದ ಹಣ್ಣು, ಇದರ ರುಚಿಯನ್ನು ನೋಡಿ" ಎಂದು ನೀಡಿದಳು.

ರಾಜನು ಸ್ವಲ್ಪ ಹಿಮ್ಮೆಟ್ಟಿ "ಅಮ್ಮಾ, ದ್ರಾಕ್ಷಿ ಹಣ್ಣನ್ನು ನಾನು ತಿನ್ನುವುದೇ ಇಲ್ಲ" ಎಂದನು.

ಆಗವಳು ಸಂಕಟಪಡುತ್ತ ಆ ಗೊಂಚಲನ್ನು ನೆಲದಮೇಲೆ ಬಿಸುಟು ಮರಳಿ ಅಲ್ಲಿದ್ದ ಬಾಳೆಯ ಗೊನೆಯಿಂದ ಬಿರಿದಿದ್ದ ಒಂದು ಹಣ್ಣನ್ನು ಕಿತ್ತು ರಾಜನ ಮುಂದೆ ನೀಡಿ "ಇದನ್ನಾದರೂ ಸ್ವೀಕರಿಸಬೇಕು" ಎಂದು ಬಹುವಾಗಿ ಬೇಡಿಕೊಂಡಳು. ಅವನು ಅದನ್ನೂ ಅಂಗೀಕರಿಸಲಿಲ್ಲ. ಅವಳು ಅದನ್ನೂ ಬಿಸುಟು

"ರಾಜರೇ, ಯಾವನಾದರೂ ಒಬ್ಬನು ಮತ್ತೊಬ್ಬನ ಮನೆಯಲ್ಲಿ ಹಾಲು ಕುಡಿದರೂ ಅಥವಾ ಹಾಲು ಅನ್ನ ತಿಂದರೂ ಅವರವರಿಗೆ ಇದ್ದ ದ್ವೇಷವು ಹೋಗುವುದೆಂದು ಹೇಳುವುದುಂಟು. ಇದು ನಿಮಗೆ ತಿಳಿಯದೋ ?"

"ಅಮ್ಮಾ, ಅದನ್ನು ನಾನು ಬಲ್ಲೆ" ಎಂದು ಅವನು ಹೇಳುತ್ತಲೆ ಅವಳು ತನ್ನ ಎರಡು ಕೈಗಳನ್ನೂ ಜೋಡಿಸಿಕೊಂಡು

"ರಾಜರೇ, ನಾವಿಬ್ಬರೂ ಒಡನಾಡಿಗಳಲ್ಲವೇ" ಎಂದಳು.

ಅದನ್ನು ಕೇಳುತ್ತಲೇ ರಾಜನಿಗೆ ಮೂರ್ಛೆಬರುವಂತಾಗಿ ಸ್ವಲ್ಪಕಾಲ ಸುಮ್ಮನಿದ್ದು ಚೇತರಿಸಿಕೊಂಡು "ಅಮ್ಮಾ, ದೈವಚಿತ್ತವು ಹಾಗಿದ್ದರೆ ಏಕೆ ಆಗಬಾರದು" ಎಂದನು. ಈ ಮಾತು ಅವಳ ಮನಸ್ಸಿಗೆ ಸರಿಬೀಳದೆಹೋದುದರಿಂದ ಅವಳು ಖಿನ್ನಳಾದಳು. ಸ್ವಲ್ಪಕಾಲ ಇಬ್ಬರೂ ಸುಮ್ಮನಿದ್ದರು. ರಾಧಾಬಾಯಿಯು

"ಸ್ವಾಮಿ, ಶಾವು ಬಹುಕಷ್ಟಗಳನ್ನು ಅನುಭವಿಸಿದ್ದಿರಂತೆ; ಅದು ನಿಜವೋ ?"

"ಅಮ್ಮಾ ! ನಿಜ."

"ಈಗ ಸುಖವಾಗಿದ್ದೀರೋ ?"

"ಈಗಿನ ಸುಖಕ್ಕೂ ಪೂರ್ವದ ದುಃಖಕ್ಕೂ ಭೇದವೇನೂ ಇಲ್ಲ."

"ನಿಮಗೆ ಮದುವೆಯಾಗಿದೆಯೋ ?"

"ಮದುವೆಯೇ ? ನನಗೆ ಮದುವೆಯೇ ? ನಿಮಗಾರು ಹೇಳಿದರು ?"

"ಯಾರೂ ಹೇಳಲಿಲ್ಲ. ನೀವು ರೂಪವತಿಯಾದ ಯವನಸ್ತ್ರೀಯ ಸಂಗಡ ನಾಟಕಶಾಲೆಗೆ ಹೋಗುತ್ತೀರೆಂದು ಕೇಳಿ ಮದುವೆಯಾಗಿರಬಹುದೋ ಏನೋ ಎಂದು ಊಹಿಸಿದೆ."

"ಅವಳು ಒಬ್ಬ ರಾಜನ ಮಗಳು. ಗ್ರಹಚಾರವಶಾತ್ ಅವಳು ಬಂದಿಯಾಳಾಗಿದ್ದಾಗ ನಾನು ಅವಳನ್ನು ಕ್ರಯಕ್ಕೆ ಕೊಂಡು ನನ್ನ ಮಗಳಂತೆ ಪೋಷಿಸಿಕೊಂಡಿದ್ದೇನೆ."

"ನಿಮಗೆ ಅಕ್ಕತಂಗಿಯರಾಗಲೀ ತಂದೆತಾಯಿಗಳಾಗಲೀ ಯಾರೂ ಇಲ್ಲವೊ ?"

"ಅಮ್ಮಾ, ನಾನು ಹುಟ್ಟಿದವನೇ ಒಬ್ಬ. ತಾಯಿಯು ನನ್ನ ಬಾಲ್ಯದಲ್ಲೇ ತೀರಿಹೋದಳು. ನನ್ನ ಇಪ್ಪತ್ತೈದನೆಯ ವಯಸ್ಸಿನಲ್ಲಿ ತಂದೆಯೂ ಕಾಲವಾದನು."

"ಮದುವೆಯಿಲ್ಲದೆ ಹೀಗಿರುವುದು ಕಷ್ಟವಲ್ಲವೇ ?"

"ಅದಕ್ಕೆ ನಾನೇನು ಮಾಡಲಿ ? ನಾನು ಒಬ್ಬಳನ್ನು ಬಹುವಾಗಿ ಮೋಹಿಸಿ ಅವಳುಂಟಾದರೆ ಸಕಲವೂ ಎಂದು ತಿಳಿದುಕೊಂಡು, ಮದುವೆಗೆ ಬೇಕಾದ ಏರ್ಪಾಡುಗಳನ್ನೆಲ್ಲಾ ಮಾಡಿಕೊಂಡಿದ್ದೆ. ಆಗ ಅಕಸ್ಮಾತ್ ನನಗೆ ಊರು ಬಿಟ್ಟು ಹೋಗಬೇಕಾಗಿ ಬಂದಿತು. ಅವಳು ನನ್ನನ್ನು ಬಿಟ್ಟು ಬೇರೆ ಒಬ್ಬನನ್ನು ಮದುವೆಯಾಗಲಾರಳು ಎಂದು ನಂಬಿ ಮರಳಿ ಊರಿಗೆ ಬಂದು ನೋಡಿದಾಗ ಅವಳು ಬೇರೆ ಒಬ್ಬನನ್ನು ಮದುವೆಯಾಗಿ ಬಾಳುತ್ತಲಿದ್ದಳು. ಇನ್ನಾರಾದರೂ ಆಗಿದ್ದರೆ ಬೇರೆ ಒಬ್ಬ ಯುವತಿಯನ್ನು ಮದುವೆಮಾಡಿಕೊಂಡು ನೆಮ್ಮದಿಯಾಗಿರುತ್ತಿದ್ದರು. ನನ್ನ ಸ್ವಭಾವವು ಹಾಗಲ್ಲ. ಆದುದರಿಂದಲೇ ನಾನು ವ್ಯಥೆಪಡುತ್ತಲಿದ್ದೇನೆ."

"ಅವಳ ತಪ್ಪನ್ನು ನೀವು ಕ್ಷಮಿಸಿದಿರೋ ?"

"ಅವಳ ತಪ್ಪನ್ನೇ ? ಆಹಾ ! ಕ್ಷಮಿಸಿದೆ."

"ಹಾಗಾದಪಕ್ಷದಲ್ಲಿ ನಿಮ್ಮ ಮದುವೆಗೆ ಮೊದಲಂತೆ ಅಡ್ಡಿಯಾಗಿ ಬಂಡವರ ಮೇಲೆ ನಿಮಗೆ ದ್ವೇಷವಿದ್ದೇ ಇರಬೇಕು" ಎನ್ನಲು ರಾಜನು

ಏನನ್ನೋ ಹೇಳಲು ಹೋದನು. ಅಷ್ಟರೊಳಗಾಗಿ ಉದಯಸಿಂಹನು ತಾಯಿಯ ಬಳಿಗೆ ಓಡಿಬಂದು

“ ಅಮ್ಮಾ, ಶ್ರೀಮಂತ ಶಾಂತವೀರರು ತೀರಿಹೋದರಂತೆ, ಈ ವರ್ತಮಾನವನ್ನು ವಲ್ಲಭದೇವನು ಬಂದು ತನ್ನ ಹೆಂಡತಿಗೆ ತಿಳಿಸಿದ ಕೂಡಲೇ ಅವಳ ಪಕ್ಕದಲ್ಲಿದ್ದ ವಿಮಲೆಯು ಮೂರ್ಛಾಕ್ರಾಂತಳಾಗಿ ಕೆಳಗೆ ಬಿದ್ದಳು. ಅವರೆಲ್ಲರೂ ಮನೆಗೆ ಹೊರಡುವುದರಲ್ಲಿದ್ದಾರೆ ” ಎಂದನು.

ಆ ಸಮಯದಲ್ಲಿ ರಾಧಾಬಾಯಿಯು ತನ್ನ ಮಗನ ಕೈಯನ್ನು ರಾಜನ ಕೈಯ್ಯಲ್ಲಿ ಇಟ್ಟು “ ರಾಜರೇ, ನಾವೆಲ್ಲರೂ ತಮಗೆ ಬೇಕಾದವರೋ ಅಲ್ಲವೋ ಹೇಳಿ” ಎಂದು ಪುನಃ ಕೇಳಲು ಅವನು

“ ಅಮ್ಮಾ, ತಮ್ಮಲ್ಲಿ ಸ್ನೇಹವನ್ನು ಬೆಳಸುವಷ್ಟು ಯೋಗ್ಯತೆಯು ನನಗಿಲ್ಲ. ಯಾವಾಗಲೂ ನಾನು ತಮ್ಮ ಭೃತ್ಯನಾಗಿರುತ್ತೇನೆ” ಎಂದನು. ಇದನ್ನು ಕೇಳಿದ ರಾಧಾಬಾಯಿಯು ಅಲ್ಲಿಂದ ತಟ್ಟನೆ ಹೊರಟು ಉಕ್ಕಿಬರುವ ಕಣ್ಣೀರನ್ನು ಒರಸಿಕೊಳ್ಳುತ್ತಿದ್ದಳು. ಆದನ್ನು ಉದಯಸಿಂಹನು ಕಂಡು ರಾಜನನ್ನು ಕುರಿತು

“ರಾಜರೇ, ನಿಮ್ಮಿಬ್ಬರಿಗೂ ದ್ವೇಷವೋ ?” ಎನ್ನಲು, ಅವನು

“ಹಾಗೇನೂ ದ್ವೇಷವಿಲ್ಲವಲ್ಲಾ ನಾವು ನಾವು ಸ್ನೇಹಿತರಲ್ಲವೆ?”ಎಂದನು.

---

# ನಲವತ್ತೊಂಭತ್ತನೆಯ ಅಧ್ಯಾಯ

## ಶಾಂತವೀರನ ಕುಟುಂಬ

ರಾಜಸಿಂಹನ ಮನೆಯಲ್ಲಿ ನಡೆಯುವ ಚಂದ್ರಿಕಾವಿಹಾರಕ್ಕೆ ಹೋಗುವುದಕ್ಕೆ ವಲ್ಲಭದೇವನಿಗೆ ಇಷ್ಟವಿರಲಿಲ್ಲ. ತನ್ನ ಹೆಂಡತಿ ಮಕ್ಕಳನ್ನು ಅಲ್ಲಿಗೆ ಕಳಹಿಸಿ ತಾನು ತನ್ನ ಕೊಠಡಿಯಲ್ಲಿ ಏಕಾಂತವಾಗಿ ಕುಳಿತುಕೊಂಡು ಸಂಪಿಗೆಯ ವನದ ಸಮಾಚಾರವು ಇಷ್ಟು ದಿವಸಗಳವರೆಗೂ ಯಾರಿಗೂ ತಿಳಿಯದೆ ಇದ್ದು ಈಗ ಹೇಗೆ ಹೊರಗೆ ಬಂದಿತು ? ಏನು ವಿಧವಿಲಾಸವೋ, ಎಂದು ಸ್ವಲ್ಪ ಕಾಲ ಯೋಚಿಸಿ, ತನ್ನ ಶತ್ರುಗಳ ಪಟ್ಟಿಯನ್ನು ಪೆಟ್ಟಿಗೆಯಿಂದ ತೆಗೆದು ಓದಿ ನೋಡಿಕೊಂಡನು. ಅದರಲ್ಲಿ ತನಗೆ ರಾಜಕೀಯ ವಿಚಾರಗಳಲ್ಲಿಯಾಗಲಿ ಹಣಕಾಸಿನ ವಿಷಯದಲ್ಲೇ ಆಗಲಿ, ಸ್ತ್ರೀ ವಿಷಯದಲ್ಲೇ ಆಗಲಿ, ವಿರೋಧಿಯಾದ ಒಬ್ಬೊ

ಬ್ಬನ ಹೆಸರೂ ಅವನ ಪೂರ್ವೋತ್ತರಗಳೂ ವಿಶದವಾಗಿ ಸಂಕೇತಾಕ್ಷರಗಳಿಂದ ಬರೆಯಲ್ಪಟ್ಟಿದ್ದಿತು. ಹೆಸರುಗಳನ್ನೆಲ್ಲಾ ಓದಿ ತಲೆಯನ್ನು ಅಲುಗಿಸುತ್ತ "ಇವರೆಲ್ಲರೂ ನನ್ನ ಮೇಲೆ ಕೈಮಾಡಿ ಕೇಡನ್ನು ಹೊಂದಿದ್ದರು. ಇವರಾರಿಗೂ ಈ ಗುಟ್ಟು ತಿಳಿಯದು; ಹಾಗೆ ತಿಳಿದಿದ್ದರೆ ಇಷ್ಟುಕಾಲ ಸುಮ್ಮನೆ ಇರುತ್ತಿದ್ದರೆ? ಭೂಮಧ್ಯದಲ್ಲಿ ಬಚ್ಚಿಟ್ಟಿದ್ದರೂ ಕೆಟ್ಟ ಕಾರ್ಯಗಳು ಎಂದಾದರೂ ಮೇಲೆ ಬಂದೇ ಬರುವುವು ಎನ್ನುವ ಮಾತು ಎಂದೂ ಸುಳ್ಳಲ್ಲ. ಅಂದು ನನ್ನನ್ನು ಕೊಲ್ಲುವುದಕ್ಕೆ ಬಂದಿದ್ದ ಭದ್ರಕನು ನನ್ನ ಕೃತ್ಯವನ್ನು ಕಂಡಿದ್ದನು. ಅವನು ಬಹುಶಃ ಅದನ್ನು ಯಾರಿಗೋ ಹೇಳಿರಬೇಕು. ಕ್ರಮೇಣ ಅದು ಮಲಯ ಸಿಂಹನ ಕಿವಿಗೆ ಬಿದ್ದಿರಬಹುದು. ಮಲಯಸಿಂಹನಿಗೂ ನನಗೂ ಯಾವ ವಿಧವಾದ ಸಂಬಂಧವೂ ಇಲ್ಲ. ಈ ಗುಟ್ಟು ಹೊರಗಾಯಿತಲ್ಲ ಎಂದು ನನ ಗೇನೂ ಯೋಚನೆಯಿಲ್ಲ; ಇದನ್ನು ಹೊರಪಡಿಸಿದವನು ಮುಂದೆ ಏನು ಮಾಡುವನೋ'' ಎಂದು ನಾನಾವಿಧವಾಗಿ ಚಿಂತಿಸುತಿದ್ದನು.

ಆಗ ಅಯ್ಯೋ, ಇನ್ನೇನುಗತಿ ಎಂದು ಯಾರೋ ಅಳುತ್ತ ಮಹಡಿಯನ್ನು ಹತ್ತಿ ಬರುತ್ತಲಿದ್ದ ಸದ್ದು ವಲ್ಲಭದೇವನಿಗೆ ಕೇಳಿಸಿತು. ಯಾರು ಹೀಗೆ ಅಳುತ್ತಿದ್ದಾರೆ, ನೋಡೋಣವೆಂದು ಅವನು ಬಾಗಿಲನ್ನು ತೆರೆಯಲು ಒಬ್ಬ ಮುದುಕಿಯು "ಅಪ್ಪಾ, ಇನ್ನೇನು ಗತಿ" ಎಂದು ಬಿಕ್ಕಿಬಿಕ್ಕಿ ಅಳುತ್ತಾ ಬಂದಳು.

''ಏನಮ್ಮಾ, ಏನಾಯಿತು? ನಿಮ್ಮ ಯಜಮಾನರೆಲ್ಲಿ? ಇದೇಕೆ ಅಳುತ್ತೀರಿ?''

''ಅಯ್ಯೋ, ಅವರು ತೀರಿಹೋದರು".

''ಹಾ! ತೀರಿಹೋದರೆ? ಯಾವಾಗ? ಏನಾಗಿದ್ದಿತು?''

''ಅವರಿಗೆ ಸ್ವಲ್ಪ ದಿನಗಳಿಂದ ಮೈಯ್ ಸರಿಯಾಗಿರಲಿಲ್ಲ. ವಿಮಲೆಯನ್ನು ನೋಡಬೇಕೆಂದು ನನ್ನ ಜತೆಯಲ್ಲಿ ಅವರೂ ಹೊರಟರು. ಮಧ್ಯೆ ಧನುರ್ವಾಯು ಬಂದು ಪ್ರಾಣಬಿಟ್ಟರು. ನನಗೂ ಹಾಗೆ ವಾಯು ಬರುವಂತೆ ತೋರುತ್ತಲಿದೆ. ವಿಮಲೆಯು ಎಲ್ಲಿ? ನಾನು ಅವಳನ್ನು ಈಕ್ಷಣ ನೋಡಬೇಕು, ಬೇಗ ಕರೆಸಿ" ಎಂದಳು. ಅವಳು ಚಂದ್ರಿಕಾವಿಹಾರಕ್ಕೆ ಹೋಗಿದ್ದಾಳೆಂದು ಹೇಳುವುದು ಸರಿಯಲ್ಲವೆಂದು ತಿಳಿದು, ವಲ್ಲಭದೇವನು

‘‘ಅಮ್ಮಾ, ಅವಳು ಮಲತಾಯಿಯ ಜತೆಯಲ್ಲಿ ಎಲ್ಲಿಗೋ ಹೋಗಿದ್ದಾಳೆ. ಇಗೋ ಇನ್ನೊಂದು ಗಳಿಗೆಯಲ್ಲಿ ಅವಳನ್ನು ಕರೆಸುತ್ತೇನೆ. ನೀವು ಇಲ್ಲಿಯೇ ಇರಿ’’ ಎಂದು ಹೇಳಿ ರಾಜಸಿಂಹನ ಮನೆಗೆ ಹೋಗಿ ಅವಳನ್ನು ಕರೆದುಕೊಂಡು ಬಂದನು.

ವಿಮಲೆಯು ಬಂದಾಗ ಮುದುಕಿಯು ಪ್ರಜ್ಞೆಯಿಲ್ಲದೆ ಬಿದ್ದಿದ್ದಳು. ಅವಳು ಅಜ್ಜಿಯ ಮಗ್ಗಲಲ್ಲಿ ಅಳುತ್ತ ಕುಳಿತುಕೊಂಡಳು. ಆಗ ಹರಿದಾಸನು ಬಂದು ‘‘ವಿಮಲೇ, ತಾತಂದಿರು ನಿನ್ನನ್ನು ಕರೆದುಕೊಂಡು ಬರಹೇಳಿದರು’’ ಎಂದನು. ಅಜ್ಜಿಯು ನಿದ್ದೆಮಾಡುತ್ತಿರುವಂತಿದೆ, ಅವಳಿಗೆ ಎಚ್ಚರವಾಗುವುದರಲ್ಲಿ ತಾತನಿಗೆ ಏನು ಬೇಕೋ ಕೇಳಿಬರೋಣವೆಂದು ಹೋದಳು. ಆ ವೃದ್ಧನು ಮೊಮ್ಮಗಳನ್ನು ಅತಿಶಯವಾದ ಪ್ರೀತಿಯಿಂದ ನೋಡುತ್ತಿರಲು, ಅವಳು ಅವನ ಅಭಿಪ್ರಾಯವನ್ನು ಗ್ರಹಿಸಿ ‘‘ನನ್ನ ಮಾತಾಮಹನು ಹೋದುದರಿಂದ ನನ್ನ ವಿಷಯದಲ್ಲಿ ನಿನ್ನ ಪ್ರಿತಿಯು ದ್ವಿಗುಣವಾಯಿತೆಂದು ಹೇಳುತ್ತೀಯೋ ತಾತ’’ ಎನ್ನಲು, ಅವನು ಅಹುದು ಎಂದನು.

‘‘ಅಜ್ಜಿಯೂ ಸಾಯುವಂತಿದ್ದಾಳೆ. ನಿನ್ನ ಪ್ರೀತಿಯಿಲ್ಲದಿದ್ದರೆ ನನ್ನ ಗತಿ ಏನು?” ಎಂದು ಕಂಬನಿದುಂಬಿ ಅಜ್ಜಿಯ ಕೊಟ್ಟಡಿಗೆ ಹೋಗಿ ಅವಳು ನಿದ್ದೆ ಮಾಡುತ್ತಿದ್ದುದನ್ನು ಕಂಡು ತಾನು ತನ್ನ ಕೋಣೆಗೆ ಹೋಗಿ ಮಲಗಿಕೊಂಡಳು.

ಅಷ್ಟು ಹೊತ್ತಿಗೆ ಅರ್ಧರಾತ್ರಿಯಾಯಿತು. ಎಲ್ಲರೂ ನಿದ್ದೆ ಹೋದರು. ಬೆಳಗಾಗುತ್ತಲೆ ವಿಮಲೆಯು ಅಜ್ಜಿಯನ್ನು ನೋಡ ಹೋದಳು. ಜ್ವರವು ಹೆಚ್ಚಾಗಿ ಅವಳು ನರಳುತ್ತಿದ್ದಳು. ವಿಮಲೆಯು ಅವಳ ಮೈಯನ್ನು ಮುಟ್ಟಿ ನೋಡಿ ‘‘ಅಜ್ಜೀ ನಿನಗೆ ಜ್ವರವು ಹೆಚ್ಚಾಗಿದೆ. ವೈದ್ಯನನ್ನು ಕರೆತರಲೇ?” ಎಂದು ಕೇಳಲು, ಅವಳು “ಅಮ್ಮಾ, ನೀನು ವೈದ್ಯನನ್ನು ಕರೆತರಬೇಡ. ನಿಮ್ಮ ಅಯ್ಯನನ್ನು ಮೊದಲು ಕರೆಸು; ನಾನು ಅವರ ಸಂಗಡ ಕೆಲವು ಮಾತುಗಳನ್ನು ಆಡಬೇಕು’’ ಎಂದಳು. ವಿಮಲೆಯು ಅಪ್ಪನನ್ನು ಕರೆದು ಅಜ್ಜಿಯ ಬಳಿಗೆ ಕರೆತಂದು ಬಿಟ್ಟ ಮೇಲೆ ಮುದುಕಿಯು ವಲ್ಲಭದೇವನನ್ನು ಕುರಿತು

“ಸ್ವಾಮೀ, ನೀವು ನಮ್ಮ ಮಗಳನ್ನು ವೀರಸಿಂಹನಿಗೆಕೊಟ್ಟು ಅವಶ್ಯವಾಗಿ ಮದುವೆಮಾಡಬಹುದು, ವಿಮಲೆಯನ್ನು ಅವನಿಗೆ ಕೊಡುವುದು ನನಗೂ ಇಷ್ಟ.

ನನಗೆ ಅಂತ್ಯಕಾಲವು ಸಮೀಪಿಸಿರುವಂತೆ ಇದೆ. ನೀವು ಜಾಗ್ರತೆ ಅವಳಿಗೆ ಮದುವೆಯನ್ನು ಮಾಡಿದರೆ ನಾನು ಕಣ್ಣು ತುಂಬ ನೋಡಿ ಸಂತೋಷದಿಂದ ಸಾಯುವೆನು. ನನ್ನ ಮಗು ರೇಣುಕೆಯನ್ನು ಆಗಲೇ ಮರೆತು ಬಿಟ್ಟಿರಿ. ಅವಳು ತೀರಿಹೋದ ಮೇಲೆ ವಿಮಲೆಗೆ ತೌರುವನೆಯ ಕಡೆಯವಳು ನಾನೊಬ್ಬಳೇ"

"ಅಮ್ಮಾ, ಅವಳಿಗೆ ಯಾರೂ ದಿಕ್ಕಿಲ್ಲವೆಂದೇ ನಾನು ಬೇರೆ ಮದುವೆ ಮಾಡಿ ಕೊಳ್ಳಬೇಕಾಯಿತು.''

"ಮಲತಾಯಿಯು ತಾಯಿಯಾದಾಳೇ ? ಅದು ಹೇಗಾದರೂ ಇರಲಿ, ಮದುವೆಯ ಮಾತನ್ನು ಆಡೋಣ."

''ಅಮ್ಮಾ, ನಿಮ್ಮಿಷ್ಟದಂತೆಯೇ ಆಗಲಿ ವಿಮಲೆಗೆ ಶೀಘ್ರವಾಗಿಯೇ ಮದುವೆಮಾಡುತ್ತೇನೆ" ಎಂದನು. ಆಗ ವಿಮಲೆಯು

''ಅಜ್ಜೀ, ಅಜ್ಜನು ಸತ್ತು ಇನ್ನೂ ತೀರ ಮೂರು ವಾರಗಳು ತುಂಬ ಲಿಲ್ಲ; ಈಗಾಗಲೇ ಮದುವೆಯ ಮಾತು ಏತಕ್ಕೆ ?''

"ಮಗು, ನೆನ್ನೆಯ ರಾತ್ರಿ ನಾನು ಜ್ವರದ ತಾಪದಿಂದ ಮತ್ತಾಗಿ ಬಿದ್ದಿದ್ದಾಗ ನಿನ್ನ ಮಲತಾಯಿಯ ಕೊಟ್ಟಡಿಯ ಕಡೆಯಿಂದ ಅರ್ಧರಾತ್ರಿ ಸಮಯದಲ್ಲಿ ಬಿಳಿಯ ವಸ್ತ್ರವನ್ನುಟ್ಟು ಒಂದು ವ್ಯಕ್ತಿಯು ನನ್ನ ಸಮೀಪಕ್ಕೆ ಬಂದಿತು. ಚೆನ್ನಾಗಿ ಕಣ್ಣು ತೆರೆದು ನೋಡುವುದರಲ್ಲೇ ಅದು ಪಲಾಯನವಾಯಿತು. ಜಾಗ್ರತೆಯಾಗಿಯೇ ನಾನೂ ನನ್ನ ಯಜಮಾನರನ್ನು ಸೇರುತ್ತೇನೆ. ಹೀಗಿರುವಾಗ ಮದುವೆಯನ್ನು ನಿಲ್ಲಿಸಬಹುದೇ ?''

''ಅಮ್ಮಾ, ಜ್ವರದ ತಾಪದಿಂದ ನಿಮಗೆ ಹಾಗೆ ಸ್ವಪ್ನವಾಗಿರಬಹುದು.''

''ನೀವೇನೋ ಹಾಗೆ ತಿಳಿದುಕೊಂಡಿರಬಹುದು. ಆ ವ್ಯಕ್ತಿಯು ನನ್ನ ಔಷಧದ ಬಟ್ಟಲನ್ನು ಎತ್ತಿ ಕೆಳಗೆ ಇಟ್ಟ ಸದ್ದು ಕೂಡ ಕೇಳಿಸಿತು."

''ಅದು ಸ್ವಪ್ನ.''

''ಅಲ್ಲವೇ ಅಲ್ಲ. ಹಾಗೆ ಸ್ವಪ್ನವಾಗಿದ್ದರೆ ನಾನು ಗಂಟೆಯನ್ನು ತೆಗೆದು ಸದ್ದಮಾಡಬೇಕೆಂದು ಕೈನೀಡಿದಾಗ ಆ ವ್ಯಕ್ತಿಯು ಓಡಿಹೋಗುತ್ತಿದ್ದಿತೇ ? ನಾನು ಶೀಘ್ರದಲ್ಲಿಯೇ ಸಾಯುವೆನು. ಮೊದಲು ಒಬ್ಬ ವಕೀಲನನ್ನು ಕರೆಸಿ, ನನ್ನ ಮರಣ ಶಾಸನವನ್ನು ಬರೆಸಬೇಕು"

ಆಗ ವಿಮಲೆಯು "ಅಜ್ಜೀ, ಈಗ ವೈದ್ಯನು ಬೇಕೇ ಹೊರತು ವಕೀಲನು ಏತಕ್ಕೆ? ಮೊದಲು ವೈದ್ಯನನ್ನು ಕರೆಸೋಣ ಅಜ್ಜೀ, ನಿನಗೆ ಕುಡಿಯುವುದಕ್ಕೆ ಏನುಬೇಕು ?"

"ವಿಮಲೆ, ಏನೂ ಬೇಡ. ನಾನು ಮಾಡಿಕೊಂಡಿರುವ ಪಾನಕವೇ ಸಾಕು. ಅದು ಕೂಡ ಈಚೆಗೆ ಏಕೋ ರುಚಿಯಾಗಿಲ್ಲ."

ಎಂದು ಹೇಳುತ್ತ ಬಟ್ಟಲಲ್ಲಿದ್ದ ಪಾನಕವನ್ನು ಒಂದೇ ಗುಟುಕಿನಲ್ಲಿ ಕುಡಿದು "ವಕೀಲನೆಲ್ಲಿ, ವಕೀಲನೆಲ್ಲಿ" ಎಂದು ಕೂಗಿಕೊಂಡಳು.

ಆಗ ವಲ್ಲಭದೇವನು ವಕೀಲನನ್ನು ಕರೆಯಲು ಹೋದನು. ವಿಮಲೆಯು ಮಾತ್ರ ರೋಗಿಯ ಹಾಸಿಗೆಯ ಮಗ್ಗುಲಲ್ಲಿ ಕುಳಿತು, "ಅಯ್ಯೋ ! ನನ್ನ ಅದೃಷ್ಟವೇ, ಅಜ್ಜಿಯೂ, ಜ್ಞಾನವಿಲ್ಲದೆ ನನಗೆ ವಿರೋಧವನ್ನು ಯೋಚಿಸುತ್ತಾಳೆ. ಜಯವೀರನಿಗೆ ಈ ಸಮಾಚಾರವು ತಿಳಿದರೆ ಅವನು ಎಷ್ಟು ಸಂಕಟಪಡುವನೋ ?" ಎಂದು ಯೋಚಿಸುತ್ತಲಿದ್ದಳು. ಆ ವೇಳೆಗೆ ವಕೀಲನು ಬಂದನು.

ಆಗ ಮುದುಕಿಯು ವಿಮಲೆಯನ್ನು ಹೊರಗೆ ಕಳುಹಿಸಿ ತನ್ನ ಮರಣ ಶಾಸನವನ್ನು ಬರೆಸಲು ಪ್ರಾರಂಭಿಸಿದಳು. ವಿಮಲೆಯು ಮಹಡಿಯನ್ನಿಳಿದು ಕೆಳಗೆ ಬಂದಾಗ ಅಶ್ವಿನೀಕುಮಾರನು ಬಂದಿದ್ದನು. ಈ ಪಂಡಿತನ ಬುದ್ಧಿಯು ಸೂಕ್ಷ್ಮವಾಗಿದ್ದಿತು. ವೈದ್ಯಶಾಸ್ತ್ರದ ಪರಿಚಯವೂ, ಹಸ್ತ ಶುದ್ಧಿಯೂ ಚೆನ್ನಾಗಿದ್ದುವು. ಆದುದರಿಂದಲೇ ವಲ್ಲಭದೇವನು ಇವನನ್ನೇ ಕರೆಯುತ್ತಲಿದ್ದನು. ಇವನಿಗೆ ವಿಮಲೆಯನ್ನು ಕಂಡರೆ ತುಂಬ ಅಭಿಮಾನ. ಇವನನ್ನು ಕಂಡಕೂಡಲೇ ಅವಳು,

"ಪಂಡಿತರೇ, ತಾವು ಒಳ್ಳೆಯ ಸಮಯಕ್ಕೆ ಬಂದಿರಿ."

"ಏಕಮ್ಮ? ಎಲ್ಲರೂ ಕ್ಷೇಮವಾಗಿದಾರೆಯೋ ಇಲ್ಲವೋ ?"

"ಪಂಡಿತರೇ, ನಮಗುಟಾಂದ ವಿಪತ್ತನ್ನು ಅರಿಯಿರಾ ?"

"ಅಮ್ಮಾ, ಅದೇನು ? ನನಗಾವುದೂ ತಿಳಿಯದು."

"ಶಾಂತವೀರರು ಇದ್ದಕ್ಕಿದ್ದ ಹಾಗೆಯೇ ಸತ್ತುಹೋದರು."

"ಹಾಗೆಯೇ ? ಅಯ್ಯೋ ಪಾಪ ! ಅವರಿಗೆ ಏನಾಗಿದ್ದಿತಮ್ಮಾ ?"

"ಧನುರ್ವಾಯು ಬಂದಿದ್ದಿತಂತೆ."

"ಪಾಪ ! ಪಾಪ ! ಬಲು ಒಳ್ಳೆಯವರು."

"ಈಗ ನನ್ನಜ್ಜಿಗೂ ಹಾಗೆಯೇ ಆಗುತ್ತಿದೆ. 'ಯಜಮಾನರು ನನ್ನನ್ನು ಕರೆಯುತ್ತಾರೆ, ನಾನೂ ಜಾಗ್ರತೆಯಾಗಿಯೇ ಅವರನ್ನು ಸೇರುತ್ತೇನೆ' ಎಂದುಕೊಳ್ಳುತ್ತಾಳೆ. ತಾವು ಅವಳಿಗೆ ಏನಾದರೂ ಮದ್ದನ್ನು ಕೊಟ್ಟು ಬದುಕಿಸಬೇಕು "

"ಅವರೆಲ್ಲಿದ್ದಾರೆ ಹೇಳಮ್ಮಾ, ನೋಡೋಣ''

"ಮಹಡಿಯ ಮೇಲೆ. ವಕೀಲರೂ ಬಂಧಿದ್ದಾರೆ."

''ನಿನ್ನ ತಾತಂದಿರು ಹೇಗಿದ್ದಾರೆ ?"

''ಒಂದೇ ರೀತಿಯಾಗಿದ್ದಾರೆ."

''ಅವರಿಗೆ ಎಂದಿನಂತೆ ನಿನ್ನ ಮೇಲೆ ಅಭಿಮಾನವು ಇದೆಯೋ ?"

''ಹುಂ."

''ಅಮ್ಮಾ, ನಿನ್ನಜ್ಜಿಯ ರೋಗದ ಚಿಹ್ನೆಗಳಾವುವು ? ಹೇಳು ನೋಡೋಣ."

''ಆಗಾಗ ಬೆಚ್ಚುತ್ತಾಳೆ; ಸರಿಯಾಗಿ ನಿದ್ದೆ ಮಾಡಳು; ಬಲು ಬಾಯಾರಿಕೆ; ಜೀವ ಹೋದಂತೆ ಕನಸಿನಲ್ಲಿ ಹೇಳುತ್ತಾಳೆ.''

''ಚಿಹ್ನೆಗಳೇನೋ ಪ್ರಬಲವಾದುವೇ. ರೋಗವು ಇಂತಹುದೆಂದು ಗೊತ್ತಾಗಲಿಲ್ಲ. ಆದರೂ ಅವಳನ್ನು ಒಂದು ತಡವೆ ಹೋಗಿ ನೋಡೋಣ ಬಾ" ಎಂದು ಪಂಡಿತನು ಹೇಳಲು, ವಿಮಲೆಯು

''ಪಂಡಿತರೇ, ಅಜ್ಜಿಯು ವೈದ್ಯರನ್ನು ಕರೆಸಬೇಡವೆಂದು ಹೇಳಿದ್ದಳು. ಅಲ್ಲದೆ, ಈಗ ಅವಳು ವಕೀಲನ ಬಳಿ ತನ್ನ ಮರಣಶಾಸನವನ್ನು ಬರೆಸುತ್ತಾ ಇದ್ದಾಳೆ. ವಕೀಲನು ಹೋಗುವವರೆಗೆ ನನ್ನನ್ನು ಬರಬೇಡವೆಂದು ಹೇಳಿದ್ದಾಳೆ. ತಾವೇ ಬಿಜಯಮಾಡಿರಿ. ನನಗೂ ಮನಸ್ಸಿಗೆ ಕಳವಳವಾಗಿರುವುದರಿಂದ ಹಾಗೆಯೇ ತೋಟದಲ್ಲಿ ಸುತ್ತಿಕೊಂಡು ಬರುತ್ತೇನೆ" ಎಂದಳು.

ವೈದ್ಯನು ಮಹಡಿಯ ಮೇಲೆ ಹತ್ತಿ ಹೋದಾಗ ವಿಮಲೆಯು ಅತ್ತಿತ್ತ ನೋಡುತ್ತ ಕೆಲವು ಹೂಗಳನ್ನು ಬಿಡಿಸುತ್ತ ತೋಟಕ್ಕೆ ಹೋದಳು. ಅವಳಿಗೆ ತೋಟದಲ್ಲಿ ಯಾವ ಸ್ಥಳವು ಪ್ರಿಯವಾದುದೆನ್ನುವುದನ್ನು ನಮ್ಮ ಪಾಠಕರಿಗೆ ಹೇಳಬೇಕಾದುದಿಲ್ಲ. ಅಲ್ಲಿ ತನ್ನನ್ನು ಯಾರೋ ಕೂಗುವ ಧ್ವನಿಯು ಕೇಳಿಸಲು ಆಶ್ಚರ್ಯಪಟ್ಟು ಸ್ವಲ್ಪ ಮುಂದಕ್ಕೆ ಹೋದಳು. ಅದು ಜಯವೀರನ

ಧ್ವನಿಯೆಂದು ಗೊತ್ತಾಯಿತು. ಬಾಗಿಲ ಸಂದಿನಲ್ಲಿ ಇಣಕಿನೋಡಿ ಅವನನ್ನು ಕಂಡು ಹರ್ಷ ಮನಸ್ಕಳಾದಳು.

---

# ಐವತ್ತನೆಯ ಅಧ್ಯಾಯ

## ನಿಶ್ಚಿತಾರ್ಥ

ಶಾಂತವೀರನು ಸತ್ತುಹೋಗಿ ಅವನ ಹೆಂಡತಿಯೂ ಸಾಯುವ ಹಾಗೆ ಇದ್ದುದರಿಂದ ವಿಮಲೆಯ ಮದುವೆಯು ಇನ್ನೂ ಸಾವಕಾಶವಾಗಬಹುದೆಂದು ಯೋಚಿಸಿ, ಜಯವೀರನು ಆ ವಿಷಯವನ್ನು ಅವಳ ಮುಖದಿಂದಲೇ ತಿಳಿಯಬೇಕೆಂದು ಬಂದಿದ್ದನು. ವಿಮಲೆಯು ಅವನನ್ನು ಕಂಡು ಆಶ್ಚರ್ಯಯುಕ್ತಳಾಗಿ,

"ಓಹೋ ! ಜಯವೀರ ! ಇದೇನು ಈಗ ಬಂದೆ ?" ಎಂದಳು.

"ಪ್ರಿಯೇ ! ನನ್ನ ಹಣೆಯಬರಹವನ್ನು ನಿನ್ನಿಂದ ತಿಳಿದುಕೊಂಡು ಹೋಗಬೇಕೆಂದು ಬಂದೆ. ಮದುವೆಯ ವಿಚಾರವೇನು ?"

"ಪ್ರಾಣನಾಥ ! ನಿನ್ನೊಡನೆ ಮುಚ್ಚುಮರೆ ಏಕೆ ? ನನ್ನ ಅಜ್ಜಿಯೂ ವೀರಸಿಂಹನ ಆಗಮನವನ್ನೇ ಇದುರುನೋಡುತ್ತಿದ್ದಾಳೆ. ಅವನು ಬಂದ ಮಾರನೆಯ ದಿನವೇ ಮದುವೆಯಾಗುವಂತೆ ಏರ್ಪಾಡು ಮಾಡಿಕೊಂಡಿದ್ದಾರೆ. ನಾನೇನು ಮಾಡಲಿ ? ಅಜ್ಜಿಗೆ ನನ್ನ ಇಷ್ಟವನ್ನು ತಿಳಿಸಿ ಅವಳ ಸಹಾಯವನ್ನು ಕೋರೋಣವೆಂದರೆ ಅವಳು ಜ್ವರದ ತಾಪದಿಂದ ಸಂಕಟಪಡುತ್ತಿದ್ದಾಳೆ. ಇದೂ ಅಲ್ಲದೆ ಅವಳ ಸಮೀಪದಲ್ಲಿ ಯಾರಾದರೂ ಇದ್ದೇ ಇರುತ್ತಾರೆ."

"ವಿಮಲೇ ! ವೀರಸಿಂಹನು ಈ ದಿನ ಬೆಳಿಗ್ಗೆ ಊರಿಗೆ ಬಂದನು."

"ಬಂದುಬಿಟ್ಟನೇ !"

"ನಾನು ರಾಜಾಮಲಯಸಿಂಹನ ಮನೆಯಲ್ಲಿದ್ದಾಗ ಉದಯಸಿಂಹನು ಅವನನ್ನು ಕರೆದುಕೊಂಡು ಬಂದಿದ್ದನು. ಅವನನ್ನು ನೋಡಿದಾಗಲೇ ನನಗೆ ಧಿಗೀರೆಂದು ಆಯಿತು. ಆದರೂ ಮೇಲೆ ನಗುತ್ತ ಸ್ವಲ್ಪ ಹೊತ್ತು ಹಾಗೆಯೇ ಇದ್ದು ಅಲ್ಲಿಂದ ನೆಟ್ಟಗೆ ಇಲ್ಲಿಗೆ ಬಂದೆನು."

"ಅಯ್ಯೋ ಪಾಪ !"

''ವಿಮಲೇ, ನನ್ನ ಪ್ರಾಣವು ಈಗ ನಿನ್ನ ಕಯ್ಯಲ್ಲಿದೆ. ಅದನ್ನು ಅಳಿಸುವೆಯೋ ? ಉಳಿಸುವೆಯೋ ?" ಎಂದು ಜಯವೀರನು ಕೇಳಲು, ಅವಳು ತಲೆಯನ್ನು ತಗ್ಗಿಸಿಕೊಂಡು ಸುಮ್ಮನಿದ್ದಳು.

"ಪ್ರಿಯೆ ! ಇದುವರೆಗೂ ಇದ್ದಹಾಗೆ ಇನ್ನು ಮೇಲೆ ಸುಮ್ಮನೆ ಇರುವುದಕ್ಕೆ ಆಗುವುದಿಲ್ಲ. ತುತ್ತುಗಟ್ಟಿಗೆ ಬಂದಿರುವುದರಿಂದ ನಾವು ಈ ರೀತಿಯಾಗಿಯೇ ನಡೆಯತಕ್ಕುದೆಂದು ನಿಶ್ಚಯಿಸಿಕೊಂಡು ಅದರಂತೆ ಮಾಡಬೇಕು. ಈಗ ನಮ್ಮನ್ನು ಬೆನ್ನಟ್ಟುವ ದುರದೃಷ್ಟಕ್ಕೆ ಸಿಕ್ಕದೆ ತಪ್ಪಿಸಿಕೊಳ್ಳುವ ಯೋಚನೆಯು ನಿನಗೆ ಉಂಟೋ ಇಲ್ಲವೋ ಅದನ್ನು ಮೊದಲು ಹೇಳು."

ತಂದೆ ಮತ್ತು ಅಜ್ಜಿಯವರ ಅಭಿಪ್ರಾಯಕ್ಕೆ ವಿರೋಧವಾಗಿ ನಡೆಯುವ ಯೋಚನೆಯು ವಿಮಲೆಗೆ ಇರಲಿಲ್ಲ. ಅವಳು ಜಯವೀರನು ಹೇಳಿದ ಮಾತನ್ನು ಕೇಳಿ ಸ್ವಲ್ಪ ನಡುಗಿ ಚಕಿತಳಾಗಿ ಅವನ ಮುಖವನ್ನು ನೋಡಿ "ಏನು ಹೇಳಿನೆ ? ತಂದೆಯ ಮಾತು, ಸಾಯುವ ಅಜ್ಜಿಯ ಮಾತು, ಮಿಕ್ಕ ಹಿರಿಯರ ಮಾತು ಇವುಗಳನ್ನೆಲ್ಲಾ ನಾನು ಎಂದಿಗೂ ತಿರಸ್ಕರಿಸುವಳಲ್ಲ. ಗುಟ್ಟಾಗಿ ಕೊರಗಿ ಪ್ರಾಣವನ್ನಾದರೂ ಬಿಡುತ್ತೇನೆ, ಆ ಕೆಲಸವನ್ನು ಮಾತ್ರ ಮಾಡಲಾರೆ" ಎಂದು ನುಡಿದಳು.

ಅದನು ಕೇಳಿ ಜಯವೀರನು ಬಹು ಸಂಕಟದಿಂದ ಶಾಂತನಾಗಿ

"ನೀನು ಹೇಳುವುದು ಸರಿಯೇ ?" ಎನ್ನಲು, ವಿಮಲೆಯು

"ನೀನು ಮಾತನಾಡುವ ರೀತಿಯನ್ನು ನೋಡಿದರೆ ನನಗೆ ಏಕೋ ದಿಗಿಲಾಗುತ್ತದೆ."

"ಅಮ್ಮ. ನಿನಗೇಕೆ ದಿಗಿಲು ?"

"ಅಮ್ಮ! ಅಮ್ಮ! ಎಂಥ ಸಂಬೋಧನೆ! ಅಹಹಾ! ನನಗೇಕೆ ದಿಗಿಲು ? ಲೋಕದಲ್ಲಿ ಇದಕ್ಕಿಂತ ಸ್ವಾರ್ಥಬುದ್ಧಿಯುಂಟೇ ? ನನ್ನ ಕಷ್ಟವನ್ನೆಲ್ಲಾ ತಿಳಿದೂ ತಿಳಿಯದವನಂತೆ ಹೀಗೆ ಹೇಳುತ್ತಾನಲ್ಲಾ ದೇವರೇ!" ಎಂದು ವಿಮಲೆಯು ಗೋಳಿಟ್ಟಳು.

"ನನಗೆ ತಿಳಿಯದೆ ? ನಿನ್ನ ತಂದೆಗೆ ವಿರೋಧವಾಗದಂತೆ ನಿನ್ನ ಅಜ್ಜಿಯ ಇಷ್ಟದಂತೆ ನಾಳೆ ನಿನಗೆ ಮದುವೆಯಾಗುವುದು. ಆಮೇಲೆ ನೀನು ವೀರ

ಸಿಂಹನ ಕುಟುಂಬವೆನಿಸಿಕೊಂಡು ಸು ಖ ವಾ ಗಿ ಬಾಳುವೆ. ಇದು ನನಗೆ ತಿಳಿಯದೇ"

"ಹಾಗಾದರೆ ಏನು ಮಾಡಲಿ ?"

"ಸ್ವಾರ್ಥಬುದ್ಧಿಯುಳ್ಳವರು ನಿಷ್ಪಕ್ಷಪಾತವಾಗಿ ಎಂದಿಗೂ ಹೇಳರು. ನನ್ನನ್ನು ಕೇಳಿ ಏನು ಪ್ರಯೋಜನ ?"

''ಜ ಯ ವಿ ೀ ರ ! ನೀನು ಹಾಗೆ ಹೇಳಬಾರದು. ಈ ಸಂದರ್ಭದಲ್ಲಿ ನಾನೇನು ಮಾಡಬೇಕೋ, ನೀನು ಹೇಳು."

''ನಿಜವಾಗಿ ಕೇಳುತ್ತೀಯೋ ?"

"ಪ್ರಿಯನೇ, ನಿಶ್ಚಯವಾಗಿಯೂ ಹೇಳು. ನೀನು ಹೇಳುವ ಮಾತು ನ್ಯಾಯವಾಗಿದ್ದರೆ ನಾನು ಅದರಂತೆ ನಡೆಯುವೆನೋ ಇಲ್ಲವೋ ನಿನಗೆ ಗೊತ್ತಾಗುವುದು.''

"ವಿಮಲೇ ! ಬುದ್ಧಿಗೆಟ್ಟು ಕೋಪಗೊಂಡೆನು ; ಕ್ಷಮಿಸು. ನನಗೆ ಈಗ ವಿಪರೀತ ಚಿಂತೆ ಹುಟ್ಟಿದೆ; ಆದುದರಿಂದ ನಾನು ಹೇಳುವುದು ಯಾವುದೂ ನಿನ್ನ ಮನಸ್ಸಿಗೆ ಸರಿಬೀಳದು. ಒಂದುವೇಳೆ ನಾನು ಹೇಳುವುದಕ್ಕೆ ನೀನು ಒಪ್ಪದಿದ್ದರೋ ?''

''ಏನು ಹೇಳುತ್ತೀಯೋ ಹೇಳು, ನೋಡೋಣ.''

"ನನಗೆ ಯಾರ ಆತಂಕವೂ ಇಲ್ಲ ; ದೇವರು ನನಗೆ ಏನೂ ಕಡಿಮೆ ಮಾಡಿಲ್ಲ. ನಿನ್ನನ್ನು ಸುಖವಾಗಿ ಇರಿಸಿಕೊಳ್ಳಬಲ್ಲೆ ; ಏನು ಹೇಳುತ್ತೀಯೇ?''

"ನಿನ್ನ ಮಾತನ್ನು ಕೇಳಿದರೆ ನನಗೆ ಮೈ ನಡುಗುತ್ತದೆ.''

''ನನ್ನ ಜತೆಯಲ್ಲಿ ಬಂದುಬಿಡು. ನನ್ನ ತಂಗಿಯ ಮನೆಯಲ್ಲಿ ನಿನ್ನನ್ನು ಇರಿಸುವೆನು. ಅವಳು ನಿನ್ನನ್ನು ತನ್ನ ತಂಗಿಯಂತೆ ನೋಡಿಕೊಳ್ಳುವಳು. ಮದುವೆ ಮಾಡಿಕೊಂಡ ಮೇಲೆ ಕೆಲವು ಕಾಲ ಬೇರೆ ದೇಶಗಳಲ್ಲಿದ್ದು, ನಿನ್ನ ತಂದೆ ಮುಂತಾದವರ ಮನಸ್ಸು ಸ್ವಲ್ಪ ಸಮಾಧಾನಸ್ಥಿತಿಗೆ ಬಂದಮೇಲೆ, ನಾವು ಮರಳಿ ಇಲ್ಲಿಗೆ ಬರಬಹುದು'' ಎನ್ನಲು, ವಿಮಲೆಯು ಗಾಬರಿಬಿದ್ದು ತಲೆಯನ್ನು ಅಲುಗಿಸುತ್ತ

"ನೀನು ಹೇಳುವುದು ಹುಚ್ಚುಕೆಲಸ ; ಆ ರೀತಿ ಮಾಡಿದರೆ ನಾನೂ ನಿನ್ನಂತೆಯೇ ಹುಚ್ಚಳಾಗುವೆನು."

"ಹಾಗಾದರೆ ಯಾವ ಪ್ರಯತ್ನವನ್ನೂ ಮಾಡದೆ ಸುಮ್ಮನೆ ಇದ್ದು ಬಿಡುವೆಯಾ ?"

"ನಾನು ಸತ್ತರೂ ಸರಿಯೇ, ನೀನು ಹೇಳುವಂತೆ ಮಾಡಲಾರೆನು."

"ನೀನು ಹೇಳುವಂತೆ ನ್ಯಾಯ; ನಾನೇ ಹುಚ್ಚ. 'ಕಾಮುಕ್ಕೆ ಕಣ್ಣಿಲ್ಲ' ಎಂದು ಕೇಳಿದ್ದೆನು. ಅದನ್ನು ನನಗೆ ಈಗ ನೀನು ಹೇಳಿಕೊಟ್ಟಂತಾಯಿತು. ನಿನ್ನ ಇಷ್ಟಪ್ರಕಾರವೇ ನಡೆಯಬಹುದು."

"ಜಯವೀರ, ನೀನು ಹೀಗೆಲ್ಲ ಹೇಳಿದರೆ ಗಾಯಕ್ಕೆ ಉಪ್ಪು ಹಚ್ಚಿ ದಂತಾಗುತ್ತದೆ. ನಿನ್ನ ತಂಗಿಗೆ ಯಾರಾದರೂ ಹೀಗೆ ಹೇಳಿದ್ದರೆ ನೀನು ಆಗ ಏನು ಮಾಡುತ್ತಲಿದ್ದೆ ಹೇಳು ?"

"ವಿಮಲೇ, ನಾನು ಸ್ವಾರ್ಥಪರನೆಂದು ನೀನು ಮೊದಲೇ ಹೇಳಿದ್ದೀಯೆ. ಸ್ವಾರ್ಥಪರರು ತಮಗೆ ಅನುಕೂಲವಾಗಿ ಹೇಳುವರೇ ಹೊರತು ಬೇರೆ ಹೇಳರು. ಆದುದರಿಂದ ಈ ಸಂದರ್ಭದಲ್ಲಿ ಇನ್ನೊಬ್ಬರು ಏನು ಮಾಡುತ್ತಲಿದ್ದರು ಎಂದು ಹೇಳಲಾರೆ. ನಾನು ಏನು ಮಾಡತಕ್ಕುದೋ ಅದನ್ನು ಯೋಚಿಸುತ್ತೇನೆ. ನಿನ್ನನ್ನು ನೋಡಿದಾರಭ್ಯ ನನ್ನ ಪ್ರಾಣವನ್ನೇ ನಿನಗೆ ಒಪ್ಪಿಸಿದ್ದೇನೆ. ಈಗ ನನ್ನ ದುರದೃಷ್ಟಕ್ಕೆ ನೀನು ಇನ್ನೊಬ್ಬನ ಕೈ ಹಿಡಿಯುವಂತಿದೆ. ಆನಂದವು ಮಾಯವಾಯಿತು. ಜೂದಾಳಿಗಳು ಕೈಯಲ್ಲಿರುವುದನ್ನು ಸೋಲುವುದಲ್ಲದೆ ಇಲ್ಲದಿರುವುದನ್ನೂ ಸೋಲುವರು; ನನ್ನ ಹಣೆಯ ಬರಹವು ಹಾಗಾಯಿತು" ಎಂದು ಜಯವೀರನು ತಲೆಯನ್ನು ತಗ್ಗಿಸಿಕೊಂಡು ಕೇವಲ ಶಾಂತಭಾವದಿಂದ ಹೇಳುತ್ತಿದ್ದಾಗ ವಿಮಲೆಯು ತನ್ನ ಹೊಟ್ಟೆಯಲ್ಲಿದ್ದ ಸಂಕಟವನ್ನು ಜಯವೀರ ನಿಗೆ ತೋರಿಸದೆ ಕಣ್ಣುಗಳನ್ನು ದೊಡ್ಡದಾಗಿ ಬಿಟ್ಟುಕೊಂಡು ನೋಡುತ್ತ, ಅವನ ಮಾತು ಮುಗಿದ ಮೇಲೆ,

"ಈಗ ಏನು ಮಾಡಬೇಕೆಂದಿದ್ದೀಯೆ, ಹೇಳು" ಎಂದಳು.

"ನಿನ್ನ ಮನಸ್ಸಿಗೆ ಶಾಂತಿಯೂ ಸೌಖ್ಯವೂ ಉಂಟಾಗಿ ನನ್ನ ಜ್ಞಾಪಕವು ನಿನಗೆ ಲೇಶವೂ ಇಲ್ಲದಂತೆ ಮಾಡಬೇಕೆಂದಿದ್ದೇನೆ. ನಿನಗೆ ಒಳ್ಳೆಯದಾಗಲಿ, ಹೊರಡುತ್ತೇನೆ" ಎಂದು ಜಯವೀರನು ಹೊರಡಲು ಅದು ಅವನ ನಿಜಾಭಿ ಪ್ರಾಯವಲ್ಲವೆಂದು ತಿಳಿದು, ವಿಮಲೆಯು ಬಾಗಿಲಸಂದಿನಲ್ಲಿ ಕೈಯನ್ನು ನೀಡಿ ಅವನ ಅಂಗಿಯನ್ನು ಹಿಡಿದು

‘‘ನಿಜವಾಗಿಯೂ ಹೇಳು, ಏನು ಮಾಡಬೇಕೆಂದಿದ್ದೀಯೋ ?’’ ಎಂದು ಕೇಳಿದಳು.

‘‘ನನ್ನಿಂದ ನಿಮಗೆ ಯಾವ ವಿಧವಾದ ತೊಂದರೆಯೂ ಮುಂದೆ ಇಲ್ಲದಂತೆ ಮಾಡುತ್ತೇನೆ. ಅಂಗಿಯನ್ನು ಬಿಡು.’’

‘‘ಅದೇನು ? ಹೇಳಿದ ಹೊರತು ನಾನು ಬಿಡೆನು.’’

‘‘ವಿಮಲೇ ! ಸುಮ್ಮನೆ ಸಾವಿರ ಮಾತು ಏತಕ್ಕೆ. ನೀನು ನಿರ್ಧರ ಮಾಡಿಕೊಂಡಿರುವುದನ್ನು ಬದಲಾಯಿಸುವ ಯೋಚನೆಯು ನಿನಗುಂಟೋ ? ಅದನ್ನು ಮೊದಲು ಹೇಳು.’’

‘‘ಅದನ್ನು ಹೇಗೆ ಬದಲಾಯಿಸುವುದು, ನೀನು ಹೇಳು.’’

“ಹಾಗಾದರೆ ನನ್ನನ್ನು ಬಿಟ್ಟುಬಿಡು, ನಾನು ಹೋಗಿಬರುತ್ತೇನೆ” ಎಂದು ಜಯವೀರನು ಅಂಗಿಯನ್ನು ಬಿಡಿಸಿಕೊಂಡು ಮೆಲ್ಲಗೆ ಹೊರಟನು. ಆಗ ಅವಳು ತನ್ನ ಎರಡು ಕೈಗಳನ್ನೂ ಜೋಡಿಸಿಕೊಂಡು

“ನೀನು ಬಹುದೂರ ಆಲೋಚನೆ ಮಾಡಿಕೊಂಡಿರುವಂತಿದೆ, ನನಗೆ ಏಕೋ ಗಾಬರಿಯಾಗುತ್ತದೆ; ಹೋಗಬೇಡ, ಬಾ ಬಾ” ಎಂದು ಮೊರೆಯಿಟ್ಟಳು.

“ನೀನು ಗಾಬರಿ ಪಡುವುದಕ್ಕೆ ಏನೂ ಕಾರಣವಿಲ್ಲ; ನನ್ನ ದುರಾದೃಷ್ಟಕ್ಕೆ ಇನ್ನೊಬ್ಬನನ್ನು ಗುರಿಮಾಡಿ ಅವನಿಗೆ ತೊಂದರೆ ಮಾಡುವೆನೆಂದು ತಿಳಿಯಬೇಡ. ಇಂತಹ ಸಂದರ್ಭದಲ್ಲಿ ಇನ್ನಾರಾದರೂ ಆಗಿದ್ದರೆ ವೀರಸಿಂಹನನ್ನು ಕೆಣಕಿ ಅವನನ್ನು ಬಲಿ ಹಾಕುತ್ತಿದ್ದನು. ಅದು ಹುಚ್ಚು ಕೆಲಸ. ವೀರಸಿಂಹನ ಮೇಲೆ ನನಗೆ ಯಾವ ವಿಧವಾದ ದ್ವೇಷವೂ ಇಲ್ಲ; ಆದುದರಿಂದ ಅವನ ಗೋಜಿಗೆ ನಾನು ಹೋಗುವುದಿಲ್ಲ. ನೀನು ಧೈರ್ಯವಾಗಿರು.”

“ಹಾಗಾದರೆ ನಿನಗೆ ಯಾರಮೇಲೆ ದ್ವೇಷ ? ನನ್ನ ಮೇಲೋ ?”

“ಹೆಂಗಸರು ಗೌರವಕ್ಕೆ ಪಾತ್ರರು; ಅದರಲ್ಲಿಯೂ ನೀನು ನನ್ನ ಭಾಗದ ದೇವತೆ. ನಿನ್ನ ಮೆಲೆ ನನಗೆ ಹೇಗೆ ದ್ವೇಷವುಂಟಾದೀತು ?”

“ನೀನು ಹೇಳುವುದನ್ನು ನೋಡಿದರೆ ನಿನ್ನನ್ನೇ ನೀನು ದ್ವೇಷಿಸಿಕೊಳ್ಳುವಂತೆ ತೋರುತ್ತಲಿದೆ.”

"ಇದಲ್ಲೆಲ್ಲಾ ನನ್ನದೇ ತಪ್ಪು. ಆದುದರಿಂದ ತಪ್ಪಿತಸ್ಥನನ್ನ ದಂಡಿಸುವುದು ನ್ಯಾಯ."

"ಜಯವೀರ, ಇಲ್ಲಿ ಬಾ, ಒಂದು ಮಾತನ್ನು ಕೇಳು'' ಎಂದು ವಿಮಲೆಯು ಅತಿ ದೈನ್ಯದಿಂದ ಬೇಡಲು, ಅವನು ನಗುತ್ತ

"ವಿಮಲೇ! ಕೇಳು. ಅವಿವೇಕವಾದ ಯೋಚನೆಯನ್ನಾಗಲೀ ಅಥವಾ ಕಾರ್ಯವನ್ನಾಗಲೀ ಮಾಡದ ನಮ್ಮಂಥವರು ಒಬ್ಬರ ಮನಸ್ಸಿನಲ್ಲಿರುವುದನ್ನು ಮತ್ತೊಬ್ಬರು ಗ್ರಹಿಸಬಹುದು. ನಿನ್ನ ವಿಷಯದಲ್ಲಿ ನಾನು ಹೇಗಿದ್ದೇನೆಂದು ನೀನೇ ಬಲ್ಲೆ. ನೀನು ಇಷ್ಟಬಂದವರನ್ನು ಮದುವೆಯಾಗಬಹುದು; ಆದರೆ ನನ್ನ ಪ್ರಾಣವು ನಿನ್ನಲ್ಲಿ ಐಕ್ಯವಾಗಿರುವುದರಿಂದ ನಾನು ನಿನ್ನನ್ನು ಕಳೆದುಕೊಂಡ ಕ್ಷಣವೇ ಪ್ರಾಣವನ್ನು ಕಳೆದುಕೊಂಡಹಾಗೆ. ನನ್ನ ತಂಗಿಯು ತನ್ನ ಗಂಡನೊಂದಿಗೆ ಸುಖವಾಗಿ ಬಾಳುತ್ತಿರುವುದರಿಂದ ಅವಳಿಗೆ ನಾನಿಲ್ಲದಿದ್ದರೆ ಯಾವ ಕೊರತೆಯೂ ಇಲ್ಲ. ನಿನಗೂ ವೀರಸಿಂಹನಿಗೂ ಮದುವೆಯಾಗುವವರೆಗೂ ಕಾದಿರುವೆನು. ನನ್ನ ಅದೃಷ್ಟಕ್ಕೆ ಸರಿಯಾಗಿ ಮದುವೆಗೆ ಏನಾದರೂ ವಿಘ್ನಗಳು ಬರಬಹುದು. ಅಂತೂ ಕೊನೆಯವರೆಗೂ ಕಾದಿರುತ್ತೇನೆ. ಒಂದು ವೇಳೆ ವಿಘ್ನಗಳು ಬಾರದೆ ಮದುವೆಯಾಗಿಬಿಟ್ಟರೆ ನನ್ನ ಅದೃಷ್ಟವು ಇಷ್ಟೇ ಸರಿಯೆಂದು ತಿಳಿದು ನನ್ನ ತಂಗಿಯ ಗಂಡನಿಗೂ ಪೋಲೀಸು ಅಧಿಕಾರಿಗಳಿಗೂ ಲೇಖನಗಳನ್ನು ಬರೆದು, ಯಾವುದಾದರೂ ಒಂದು ಏಕಾಂತಸ್ಥಳದಲ್ಲಿ ಯಾರಿಗೂ ಉಪಯೋಗವಿಲ್ಲದ ಈ ನನ್ನ ದೇಹವನ್ನು ತ್ಯಜಿಸುವೆನು. ಪಾಪಿಯಾದ ನಾನು ಸತ್ತರೆ ವೀರಸಿಂಹನೂ ನೀನೂ ನೆಮ್ಮದಿಯಾಗಿರಬಹುದು'' ಎಂದನು.

ಜಯವೀರನು ಹೀಗೆನ್ನುತ್ತಲೇ ವಿಮಲೆಗೆ ಸರ್ವಾಂಗವೂ ಗಡಗಡನೆ ನಡುಗಿ, ಜೋಡಿಸಿಕೊಂಡಿದ್ದ ಕೈಗಳು ಜೋಲುಬಿದ್ದು, ಕಣ್ಣೀರು ಧಾರೆಧಾರೆಯಾಗಿ ಗಲ್ಲದಮೇಲೆ ಹರಿಯಿತು. ಆಗ ಅವಳು ಜಯವೀರನನ್ನು ಕುರಿತು

"ಪ್ರಾಣನಾಥ, ನನಗಾಗಿ ನೀನು ಜೀವವನ್ನು ಬಿಡಲಾಗದು. ಕುಲೀನರ ಮನೆಯ ಹೆಣ್ಣುಮಕ್ಕಳು ತಮಗೆ ಇಷ್ಟಬಂದಂತೆ ನಡೆಯಲಾದೀತೇ? ಇದನ್ನು ನೀನು ಅರಿಯದವನೇ? ನಿನ್ನ ಕಷ್ಟವು ಮಹತ್ತರವಾದುದು ನಿಜ; ಆದರೂ ನೀನು ದೇಹತ್ಯಾಗಮಾಡಿದರೆ ನಾನು ಒಂದು ನಿಮಿಷಮಾತ್ರವೂ ಈ ದೇಹವನ್ನು ನಿಲ್ಲಿಸೆನು'' ಎಂದಳು.

''ಸಲ್ಲದ ಕೆಲಸವನ್ನು ಮಾಡೆಂದರೆ ಹೇಗೆತಾನೇ ಆದೀತು ? ನಾನು ಮಾಡಿರುವ ಯೋಜನೆಯೇ ಸರಿ ; ಅದರಿಂದ ನನ್ನ ಕಷ್ಟವು ನೀಗಿ ಹೋಗುವುದು, ನಿಮ್ಮ ಸುಖಕ್ಕೂ ಕುಂದಕವಾಗದು'' ಎಂದು ಜಯವೀರನು ಹೇಳಲು, ಅವಳು

"ಅಯ್ಯೋ ದೇವರೇ ! ಇದುವರೆಗೂ ತಂದೆಯ ಮಾತನ್ನು ಮೀರಬಾರದೆಂದು ಸಂಕಲ್ಪಿಸಿ ನನ್ನ ಹಂಬಲನ್ನು ಬಿಡುವಂತೆ ಪ್ರಾಣಪ್ರಿಯನನ್ನು ಎಷ್ಟೋ ಬಗೆಯಿಂದ ಬೇಡಿಕೊಂಡೆನು ; ಅವನು ಕೇಳಲಿಲ್ಲ. ಇನ್ನು ಆಲೋಚನೆಯನ್ನು ಬಿಟ್ಟೆನು. ಜಯವೀರ, ನನ್ನ ಪ್ರಾಣನಾಥ ! ತಂದೆಯ ಮಾತನ್ನು ಬಿಟ್ಟೆ. ಇಗೋ ನಾನು ನಿನ್ನವಳು. ನಿನ್ನ ಅಪ್ಪಣೆಯೇನು ? ನಿನ್ನನ್ನು ಸಂಕಟಪಡಿಸಿ ಬದಕುವುದಕ್ಕಿಂತಲೂ ಅಪಮಾನದಿಂದಲಾದರೂ ಸಾಯುವುದೇ ಮೇಲು. ಜಯವೀರ, ಬಾ ನನ್ನನ್ನು ನಿನಗೆ ಅರ್ಪಣೆ ಮಾಡಿದ್ದೇನೆ. ನಿನ್ನ ಇಷ್ಟದಂತೆಯೇ ಆಗಲಿ ; ಹೋಗಬೇಡ ಬಾ, ಬಾ'' ಎಂದು ದೈನ್ಯದಿಂದ ಕೂಗಿಕೊಂಡಳು.

ಅಷ್ಟುದೂರ ಹೋಗಿದ್ದ ಜಯವೀರನು ಹಿಂತಿರುಗಿ ಬಂದು

"ವಿಮಲೇ, ನೀನು ಅಪಮಾನಪಟ್ಟರೆ ನಾನೂ ಅಪಮಾನಪಟ್ಟಂತೆಯೇ ಹಾಗೆ ಹೇಳಬೇಡ. ಬಲಾತ್ಕಾರದಿಂದ ನಿನ್ನನ್ನು ಮದುವೆಯಾಗಲು ನನಗೆ ತಾತ್ಪರ್ಯವಿಲ್ಲ. ನನ್ನ ಗತಿ ನನಗೆ''

ಆಗ ವಿಮಲೆಯು 'ಜಯವೀರನಲ್ಲದೆ ಈ ಲೋಕದಲ್ಲಿ ನನ್ನನ್ನು ಪ್ರೀತಿಯಿಂದ ಕಾಣುವವರಾರು ? ಅವನೇ ನನ್ನ ಸುಖಕ್ಕೆ ಕಾರಣನು. ಅವನೇ ನನ್ನ ಪ್ರಾಣ. ಅವನನ್ನು ಬಿಟ್ಟರೆ ಮುಂದೆ ನನಗಾರು ದಿಕ್ಕು ? ಅವನೇ ಗತಿ ; ಅವನೇ ಮತಿ. ಅವನೇ ನನ್ನ ಸರ್ವಸ್ವವೂ' ಎಂದು ಮನದಲ್ಲಿ ಭಾವಿಸಿ,

"ಜಯವೀರ, ನೀನು ಹೇಳುವಂತೆಯೇ ಆಗಲಿ. ಇಗೋ ! ಇಂದಿನಿಂದ ನಾನು ನಿನ್ನವಳೆಂದು ಪ್ರತಿಜ್ಞೆ ಮಾಡಿದ್ದೇನೆ. ನೀನು ಎಲ್ಲಿಗೆ ಬಾ ಎಂದರೂ ಅಲ್ಲಿಗೆ ಬರಲು ಸಿದ್ಧಳಾಗಿದ್ದೇನೆ. ಇನ್ನು ನನ್ನ ತಾತನನ್ನೂ ಬಿಟ್ಟುಬಿಟ್ಟೆನು.''

"ನಿನ್ನ ತಾತನನ್ನು ಬಿಟ್ಟು ಬರುವುದು ನ್ಯಾಯವಲ್ಲ. ತನ್ನ ವಿಚಾರದಲ್ಲಿ ಅವನಿಗೆ ಅಭಿಮಾನ ವಿದೆಯೆಂದ ನೀನು ಮೊದಲೇ ಹೇಳಿದ್ದೀಯೆ. ನೀನು ಈ ಸಮಾಚಾರಗಳನ್ನೆಲ್ಲಾ ತಿಳಿಸಿ ಅವನ ಅನುಮತಿಯನ್ನು ಪಡೆಯುವುದು

ಧರ್ಮ. ಅವನು ಒಪ್ಪಿ ನಮ್ಮ ಮದುವೆಯಾದ ಕ್ಷಣವೇ ನೀನು ಅವನ ಸಂಗಡ ಮಾತನಾಡುವ ಉಪಾಯಗಳನ್ನು ನನಗೆ ಚೆನ್ನಾಗಿ ಕಲಿಸಿಕೊಡು. ನಾವಿಬ್ಬರೂ ಸೇರಿ ಅವನ ಸೇವೆಯನ್ನು ಮಾಡೋಣ."

"ಜಯವೀರ, ವೀರರ ತಮ್ಮ ಅಸ್ತ್ರಗಳಿಂದಲೂ ಶಕ್ತಿಯುಕ್ತಿಗಳಿಂದಲೂ ಜಯಿಸಲಾರದವರನ್ನು ಹೆಂಗಸರು ತಮ್ಮ ಕಡೆಗಣ್ಣ ನೋಟದಿಂದ ನಿಮಿಷ ಮಾತ್ರದಲ್ಲಿ ಜಯಿಸಿ ಸ್ವಾಧೀನಮಾಡಿಕೊಳ್ಳುವರು. ಅಂತಹ ಹೆಂಗಸನ್ನು ವಶಪಡಿಸಿಕೊಂಡ ನಿನ್ನ ಚಾತುರ್ಯವು ಸಾಮಾನ್ಯವೇ! ತಂದೆಯ ಮಾತಿಗೆ ವಿರೋಧವಾಗಿ ನಡೆಯಕೂಡದೆಂದು ಮಾಡಿಕೊಂಡಿದ್ದ ನನ್ನ ಮನಸ್ಸನ್ನು ಒಂದು ನಿಮಿಷದಲ್ಲಿ ನಿನ್ನ ಇಷ್ಟ ಪ್ರಕಾರ ಬಗ್ಗಿಸಿಕೊಂಡೆ. ಆದರೂ ಈಗ ನಾವು ಯೋಚಿಸಿರುವಂತೆ ಮಾಡುವುದು ತಪ್ಪು. ನನ್ನ ತಂದೆಯು ಬಲು ಹಟಗಾರ: ನಾವು ಅವನಿಗೆ ವಿರೋಧವಾಗಿ ನಡೆದರೆ ಅವನು ನನ್ನನ್ನು ಎಂದಿಗೂ ಕ್ಷಮಿಸನು. ಆದುದರಿಂದ ನಾನು ಹೇಳುವುದನ್ನು ಕೇಳು. ಉಪಾಯ್ನ ಗಳಿಂದಲೋ, ಮೊರೆಯಿಡುವುದರಿಂದಲೋ, ಅಕಸ್ಮಾತ್ಸಂಭವಿಸುವ ವಿಘ್ನ ಗಳಿಂದಲೋ, ಒಂದು ವೇಳೆ ಈ ಮದುವೆಯು ನಿಧಾನವಾಗುವುದಾದರೆ ಅಲ್ಲಿಯ ವರೆಗೆ ನೀನು ಸುಮ್ಮನಿರುವೆಯೋ ?''

''ಆಗಲಿ; ಇರುತ್ತೇನೆ.''

''ನಮ್ಮಂತಹ ಅಶಕ್ತರಿಗೆ ದೈವಸಹಾಯವಿಲ್ಲದೆ ಇಲ್ಲ. ನನ್ನ ಪ್ರಯತ್ನ ಗಳು ಸಾಗದೆ ಮದುವೆಯು ನಡೆಯುವುದಾದರೆ ನಾನು ನಿನಗೆ ತಿಳಿಸುತ್ತೇನೆ. ಆಗ ನೀನು ಬಾ, ನಿನ್ನ ಜತೆಯಲ್ಲಿ ನಾನು ಬಂದುಬಿಡುತ್ತೇನೆ.''

"ಲಗ್ನವು ಎಷ್ಟುಹೊತ್ತಿಗೆ ಎಂಬುದನ್ನು ನೀನು ಬರೆದರೆ ಆ ವೇಳೆಗೆ ಸರಿಯಾಗಿ ಒಂದು ಬಂಡಿಯನ್ನು ಸಿದ್ಧಮಾಡಿಕೊಂಡು ನಾನು ಸೊಪ್ಪಿನ ತೋಟದ ಬಳಿ ಕಾದಿರುವೆನು. ನೀನು ಅಲ್ಲಿಗೆ ಬಂದಕೂಡಲೇ ನಿನ್ನನ್ನು ಕರೆದುಕೊಂಡು ನನ್ನ ತಂಗಿಯ ಮನೆಯಲ್ಲಿ ಬಿಡುವೆನು. ಅನುಕೂಲವಾದಾಗ ಮದುವೆಮಾಡಿಕೊಳ್ಳೋಣ."

"ಪ್ರಿಯನೇ, ಇದೇ ನಮ್ಮ ನಿಶ್ಚಿತಾರ್ಥ. ಈಗ ನಿನಗೆ ತೃಪ್ತಿಯಾಯಿತಷ್ಟೆ? ಇನ್ನು ನಾನು ಹೋಗಿಬರುತ್ತೇನೆ'' ಎಂದು ಹೊರಟಳು. ಕಣ್ಣಿಗೆ

ಕಾಣಿಸುವವರೆಗೂ ಜಯವೀರನು ಅವಳನ್ನು ನೋಡುತ್ತಲಿದ್ದು, ಬಳಿಕ ತನ್ನ ಮನೆಗೆ ಹೊರಟನು.

ಮೂರನೆಯ ದಿನ ಹಗಲು ಸುಮಾರು ಹತ್ತು ಗಂಟೆಯ ವೇಳೆಗೆ ಜಯವೀರನಿಗೆ ಒಂದು ಲೇಖನವು ಬಂದಿತು. ಅದನ್ನು ನೋಡಿ ವಿಮಲೆಯಿಂದಲೇ ಬಂದಿದೆಯೆಂದು ತಿಳಿದು ಏನು ಸಮಾಚಾರವೋ ಎಂದು ಅತ್ಯಾತುರದಿಂದ ಅದನ್ನು ಒಡೆದು ನೋಡಿದನು. ಅದರಲ್ಲಿ ಈ ರೀತಿ ಬರೆದಿದ್ದಿತು ;—

"ಪ್ರಿಯನೆ, ನನ್ನ ಮೊರೆ, ಪ್ರಾರ್ಥನೆ, ಕಣ್ಣೀರು, ಯಾವುದೂ ಪ್ರಯೋಜನವಾಗಲಿಲ್ಲ. ಭಗವಂತನನ್ನು ಬಗೆಬಗೆಯಾಗಿ ಬೇಡಿಕೊಂಡೆನು. ಅವನಿಗೂ ಕಣ್ಣಿಲ್ಲದೆ ಹೋಯಿತು. ಈ ರಾತ್ರಿ ಒಂಭತ್ತು ಗಂಟೆಗೆ ಲಗ್ನವು ಗೊತ್ತಾಗಿದೆ. ಈ ಸಂಗತಿಯನ್ನು ನನ್ನ ತಾತನಿಗೂ ತಿಳಿಸಕೂಡದೆಂದು ಏರ್ಪಾಡು ಮಾಡಿಕೊಂಡಿದ್ದಾರೆ. ನನ್ನ ಅಜ್ಜಿಗೆ ರೋಗವು ಹೆಚ್ಚುತ್ತಲಿದೆ. ಗುಣವಾಗುವಂತೆ ತೋರುವುದಿಲ್ಲ. ಹೀಗಿರುವಲ್ಲಿ ನಾನು ಇಲ್ಲಿಂದ ಹೊರಡುವುದು ಅನುಚಿತ; ಆದರೂ ಮಾತು ಕೊಟ್ಟಮೇಲೆ ತಪ್ಪಕೂಡದು. ರಾತ್ರಿ ಎಂಟೂ ಮುಕ್ಕಾಲು ಗಂಟೆಗೆ ಸರಿಯಾಗಿ ಸಂಕೇತಸ್ಥಾನದಲ್ಲಿ ಸಿದ್ಧವಾಗಿರು.''

ಕಾಗದವನ್ನು ಓದಿನೋಡಿದ ಒಡನೆಯೇ ಜಯವೀರನು ರಾಜಾಮಲಯಸಿಂಹನ ಸಹಾಯವನ್ನು ಹೊಂದಬೇಕೆಂದು ಯೋಚಿಸಿದನು. ಈ ವಿಚಾರವನ್ನು ಯಾರೊಡನೆಯೂ ಹೇಳುವುದಿಲ್ಲವೆಂದು ವಿಮಲೆಗೆ ಮಾತು ಕೊಟ್ಟದ್ದರಿಂದ ಹಾಗೆ ಮಾಡುವುದು ಅನುಚಿತವೆಂದು ತಿಳಿದು ಸುಮ್ಮನಾದನು. ಕಾಗದವನ್ನು ಓದಿ ಓದಿ ನೋಡಿದನು. ಎಷ್ಟು ಸಾರಿ ಓದಿದರೂ ಅವನಿಗೆ ತೃಪ್ತಿಯಾಗಲಿಲ್ಲ. ಒಂದೊಂದು ಸಾರಿಯೂ ತನಗಾಗಿ ಅವಳು ಮಾಡಿದ ಆತ್ಮಸಮರ್ಪಣೆಯನ್ನೂ, ಅದಕ್ಕಾಗಿ ಅವಳಿಗೆ ಆದ ಕಷ್ಟವನ್ನೂ ನೆನೆನೆನೆದು ಇಂಥ ಸುಗುಣೆಯಾದ ಅವಳನ್ನು ಸಕಲವಿಧದಲ್ಲಿಯೂ ಸುಖವಾಗಿ ಇರಿಸಬೇಕೆಂದು ಸಂಕಲ್ಪ ಮಾಡಿಕೊಂಡನು.

ಸಾಯಂಕಾಲ ಎಂಟೂವರೆ ಗಂಟೆಯೊಳಗಾಗಿಯೇ ಜಯವೀರನು ಎರಡು ನೂಲೇಣಿಗಳನ್ನು ಸೊಪ್ಪಿನ ತೋಟದಲ್ಲಿ ಬಚ್ಚಿಟ್ಟು ದಿಡ್ಡಿಯ ಬಾಗಿಲ ಬಳಿ ಒಂದು ಸೊಗಸಾದ ಕುದುರೆಯ ಬಂಡಿಯನ್ನು ತಂದು ನಿಲ್ಲಿಸಿ, ತಾನು ಕಬ್ಬಿಣದ ಬಾಗಿಲ ಬಳಿ ಕಾದಿದ್ದನು. ಅಂದು ಸಾಯಂಕಾಲದಿಂದ ಮೋಡವು

ಬಲವಾಗಿ ಕವಿದುಕೊಂಡಿದ್ದಿತು. 'ಮಳೆಯು ಬಾರದೆ ಹೀಗೆಯೇ ಇದ್ದರೆ ನಮಗೆ ಬಹು ಅನುಕೂಲ. ಇದರಿಂದ ನಮ್ಮ ಕೆಲಸಕ್ಕೆ ದೈವಸಹಾಯವಿದೆ ಎಂದು ತೋರುತ್ತದೆ. ವಿಮಲೆಯನ್ನು ನಾನು ಮದುವೆಯಾದರೆ ಈ ಲೋಕ ದಲ್ಲಿ ನನಗಿಂತಲೂ ಸುಖಿಯಾದವನು ಉಂಟೇ' ಎಂದು ಜಯವೀರನು ಯೋಚಿ ಸುತ್ತ ಇದ್ದನು.

ಆಗ ಶುಕ್ಲಪಕ್ಷವಾದರೂ ಮೋಡವು ಮುಚ್ಚಿಕೊಂಡು ತೋಟದಲ್ಲಿ ಕತ್ತ ಲೆಯು ಕವಿದಿದ್ದಿತು. ಆ ಕತ್ತಲೆಯಲ್ಲಿ ಅವನು ವಿಮಲೆಯ ಹೆಜ್ಜೆಯ ಸದ್ದನ್ನು ನಿರೀಕ್ಷಿಸುತ್ತ ನಿಂತಿದ್ದಾಗ ವಲ್ಲಭದೇವನ ಮನೆಯ ದೊಡ್ಡ ಗಡಿಯಾರದಲ್ಲಿ ಒಂಭತ್ತು ಗಂಟೆಯು ಬಡಿಯಿತು. 'ಇಷ್ಟು ಹೊತ್ತಿಗೆ ಅವಳು ಬಂದಿರಬೇಕು ; ಇನ್ನೂ ಏತಕ್ಕೆ ಬರಲಿಲ್ಲ? ಇನ್ನೂ ಸ್ವಲ್ಪ ಹೊತ್ತು ನೋಡೋಣ' ಎಂದು ಯೋಚಿಸುತ್ತಲಿದ್ದ ಹಾಗೆಯೇ ಒಂಭತ್ತೂವರೆ ಗಂಟೆಯೂ ಬಡಿಯಿತು. ಆಗ ಜಯವೀರನು ಬೆಬ್ಬರಬಿದ್ದು 'ಅವಳು ಇನ್ನೂ ಬಾರದಿರಲು ಕಾರಣವೇನು? ಬರುತ್ತ ದಾರಿಯಲ್ಲಿ ಏನಾದರೂ ಮೂರ್ಛಿತಳಾಗಿ ಬಿದ್ದಿರುವಳೋ? ಯಾರಾ ದರೂ ಅವಳನ್ನು ಕಂಡು ತಡೆದುಬಿಟ್ಟರೋ? ನೋಡಿ ಬರೋಣ, ಎಂದು ಅವನು ಕಬ್ಬಿಣದ ಬಾಗಿಲನ್ನು ಏರಿ ತೋಟದೊಳಗೆ ಇಳಿದು ಸ್ವಲ್ಪ ದೂರ ನಡೆದು ಮನೆಯಲ್ಲಿ ಯಾವ ಬೆಳಕೂ ಇಲ್ಲದೆ ನಿಶ್ಶಬ್ದವಾಗಿರುವುದನ್ನು ಕಂಡು ಆಶ್ಚರ್ಯದಿಂದ ಅಲ್ಲಿಯೇ ಸ್ತಂಭೀಭೂತನಾಗಿ ನಿಂತನು.

ಆಗಾಗ ಆ ಮನೆಯ ಒಳಗಣ ಸನ್ನಿವೇಶವನ್ನೆಲ್ಲಾ ವಿಮಲೆಯಿಂದ ತಿಳಿದಿದ್ದುದರಿಂದ, ಜಯವೀರನು ಮನೆಯೊಳಗೆ ಹೋಗಬೇಕೆಂದು ನಿಶ್ಚಯಿಸಿ ಮೆಲ್ಲ ಮೆಲ್ಲಗೆ ಹೋಗುತ್ತಿದ್ದಾಗ, ಹತ್ತಿರ ಯಾರೋ ಮಾತನಾಡಿಕೊಂಡು ತಾನಿರುವ ಕಡೆಗೆ ಬರುತ್ತಲಿರುವಂತೆ ತೋರಿತು. ಆಗವನು ಯಾರೋ ಇಬ್ಬರು ಮಾತನಾಡುತ್ತ ಬರುವಂತಿದೆ; ವಿಮಲೆಯು ಬರುತ್ತಾಳೆಯೋ ಏನೋ? ಅವಳ ಮಾತಿನಿಂದ ಅವಳು ಬಾರದೆ ಇದ್ದ ಕಾರಣವನ್ನು ತಿಳಿಯುವೆನು ಎಂದು ಯೋಚಿಸಿ ಪಕ್ಕದಲ್ಲಿದ್ದ ಒಂದು ಪೊದರಿನಲ್ಲಿ ಮರೆಯಾಗಿ ಕುಳಿತುಕೊಂಡನು.

ಅಷ್ಟು ಹೊತ್ತಿಗೆ ಕವಿದಿದ್ದ ಮೋಡವು ಹರೆದು ತೋಟದಲ್ಲಿ ಹಾಲನ್ನು ಚೆಲ್ಲಿದಂತೆ ಬೆಳುದಿಂಗಳು ಬಿದ್ದಿತು. ವಲ್ಲಭದೇವನೂ ಅಶ್ವಿನೀಕುಮಾರನೂ

ಮಾತನಾಡುತ್ತ ಜಯವೀರನು ಅಡಗಿಕೊಂಡಿದ್ದ ಪೊದರಿನ ಮುಂದೆ ಇದ್ದ ಆಸನದಲ್ಲಿ ಕುಳಿತು ಈ ರೀತಿಯಾಗಿ ಮಾತುಗಳನ್ನು ಆಡತೊಡಗಿದರು.

"ಪಂಡೀತರೇ! ಏನು ಅನಿಷ್ಟ! ನಮ್ಮ ಮನೆಗೇ ಬರಬೇಕೆ? ಎಂಥ ಮರಣ. ಇಷ್ಟು ಜಾಗ್ರತೆಯಾಗಿ ಹೀಗಾಗುದೆಂದು ನಾನು ಎಂದಿಗೂ ಯೋಚಿಸಿರಲಿಲ್ಲ. ನನಗೇನೂ ಸಮಾಧಾನ ಮಾಡಬೇಡಿ" ಎಂದು ವಲ್ಲಭದೇವನು ಹೇಳಿದುದನ್ನು ಜಯವೀರನು ಕೇಳಿ ಗಾಬರಿಬಿದ್ದನು.

"ವಲ್ಲಭದೇವರೇ! ನಿಮ್ಮ ದುಃಖವನ್ನು ಸಮಾಧಾನಪಡಿಸುವುದಕ್ಕಾಗಿ ನಾನು ನಿಮ್ಮನ್ನು ಇಲ್ಲಿಗೆ ಕರೆದುಕೊಂಡು ಬರಲಿಲ್ಲ. ಆದರೆ—"ಎಂದು ಪಂಡಿತನು ಪ್ರಾರಂಭಿಸಲು ವಲ್ಲಭದೇವನು ಹೆದರಿ

"ಹಾಗೆಂದರೇನು?"

"ಇದು ಒಂದೇ ಅಲ್ಲ; ಇನ್ನು ಮುಂದೆ ಏನು ಅನಾಹುತವು ನಡೆಯಬಹುದೋ?"

ಏನು! ಅನಾಹುತವೇ?" ಎಂದು ವಲ್ಲಭದೇವನು ಬೆಚ್ಚಲು ಪಂಡಿತನು ಸುತ್ತಲೂ ನೋಡಿ

"ನಾವಿಬ್ಬರು ಹೊರತು ಇಲ್ಲಿ ಮತ್ತಾರೂ ಇಲ್ಲವಷ್ಟೆ"ಎಂದು ಕೇಳಿದನು.

"ಇಷ್ಟು ಹೊತ್ತಿನಲ್ಲಿ ಇಲ್ಲಿ ಯಾರು ಇದ್ದಾರೆ? ಇದೇಕೆ ಇಷ್ಟುಎಚ್ಚರಿಕೆ?"

"ನಿಮ್ಮ ಅತ್ತೆಗೆ ವಯಸ್ಸಾಗಿದ್ದರೂ ದೃಢಾಂಗಳಾಗಿ ಆರೋಗ್ಯಸ್ಥಿತಿಯಲ್ಲಿ ಇದ್ದಳು"

ಹೀಗೆ ಹೇಳಿದುದನ್ನು ಕೇಳಿ ಜಯವಿರನಿಗೆ ಧೈರ್ಯವುಂಟಾಯಿತು.

"ಪಂಡಿತರೇ, ಅವಳು ಪತಿವಿಯೋಗದುಃಖದಿಂದ ಸತ್ತಳು."

"ಅವಳು ದುಃಖದಿಂದ ಸಾಯಲಿಲ್ಲ. ಅವಳ ಕಡೆಗಾಲದ ಅವಸ್ಥೆಯನ್ನು ನೀವು ನೋಡಿದಿರೋ ಇಲ್ಲವೋ? ಆ ರೀತಿಯಾಗಬೇಕಾದರೆ ವಿಷಪ್ರಯೋಗದಿಂದಲೇ ಆಗಿರಬೇಕು. ಬೇರೆ ಯಾವ ರೋಗ ಬಂದರೂ ಹಾಗೆ ಆಗುವುದಿಲ್ಲ."

ವಲ್ಲಭದೇವನು ಬೆಚ್ಚಿ ಬಿದ್ದು ನಿಂತು, ಪುನಃ ಕುಳಿತು ಸ್ವಲ್ಪ ಯೋಚಿಸಿ

"ವೈದ್ಯರೇ, ನನ್ನಲ್ಲಿ ಸ್ನೇಹಭಾವದಿಂದ ಹೀಗೆ ಹೇಳುತ್ತೀರೋ? ಇಲ್ಲ ದಂಡಾಧಿಕಾರಿಭಾವದಿಂದ ಹೇಳುತ್ತೀರೋ?"

''ಈಗ ಸ್ನೇಹಭಾವದಿಂದಲೇ ಹೇಳುತ್ತೇನೇ.''

''ಪಂಡಿತರೇ! ಈ ವಿಷಯದಲ್ಲಿ ಒಂದು ವೇಳೆ ನೀವು ಮೋಸಹೋಗಿದ್ದರೋ?''

"ನಾನು ಮೋಸಹೋಗುವುದಿಲ್ಲವೆಂದು ಹೇಳಲಾರೆ. ಆದರೆ ಈ ಸಂದರ್ಭದಲ್ಲಿ ನನಗೆ ಯಾವ ಅನುಮಾನವೂ ಇಲ್ಲ."

"ಏನು ವಿಪತ್ತು ಒದಗಿತು?"

"ನಿಮ್ಮ ಅತ್ತೆಯನ್ನು ಬೇರೆ ಯಾವ ವೈದ್ಯರಿಗಾದರೂ ತೋರಿಸಿದ್ದಿರೋ?''

"ಇಲ್ಲ.''

"ಅವಳಿಗೆ ಶತ್ರುಗಳಾರಾದರೂ ಉಂಟೋ?''

"ನನಗೆ ತಿಳಿದಂತೆ ಯಾರೂ ಇಲ್ಲ.''

"ಅವಳ ಮರಣದಿಂದ ಯಾರಿಗಾದರೂ ಪ್ರಯೋಜನವುಂಟೋ?''

"ವಿಮಲೆಗೆ ವಿನಾ ಮತ್ತಾರಿಗೂ ಪ್ರಯೋಜನವಿಲ್ಲ. ಅಯ್ಯೋ! ಅವಳ ವಿಷಯದಲ್ಲಿ ಅನುಮಾನಪಡಬೇಕಾದ ಸಂದರ್ಭ ಬಂದರೆ ನಾನು ಆ ಕ್ಷಣವೇ ಪ್ರಾಣವನ್ನು ಬಿಡುವೆನು.''

"ವಲ್ಲಭದೇವರೇ, ವಿಷಹಾಕಿದವರು ಇಂಥವರೆಂದು ನಾನು ಹೇಳಲಿಲ್ಲ. ಅದು ಒಂದುವೇಳೆ ಕೈತಪ್ಪಿ ನಡೆದಿರಬಹುದು. ಈ ಸಂಗತಿ ತಿಳಿದೂ ಸುಮ್ಮನಿರಲು ಮನಸ್ಸು ಒಡಂಬಡದೆ ಅದನ್ನು ನಾನು ನಿಮಗೆ ತಿಳಿಸಿದೆನು. ವಿಚಾರಿಸಿ ನೋಡಿ.''

''ಯಾರನ್ನು, ಹೇಗೆ, ಏನೆಂದು ವಿಚಾರಿಸಲಿ?''

''ನಿಮ್ಮ ಯಜಮಾನರಿಗಾಗಿ ನಾನು ಮಾಡಿಕೊಟ್ಟಿದ್ದ ಪಾನಕವನ್ನು ಹರಿದಾಸನೇನಾದರೂ ಕೈತಪ್ಪಿ ನಿಮ್ಮತ್ತೆಗೆ ಕೊಟ್ಟನೋ ಏನೋ?''

''ಆ ಪಾನಕವು ವಿಷವೆ?''

''ಕೆಲವು ರೋಗಗಳಿಗೆ ವಿಷಪ್ರಯೋಗವು ಅವಶ್ಯಕ. ಈಗ ಸುಮಾರು ಮೂರು ತಿಂಗಳಿಂದ ನಿಮ್ಮ ಯಜಮಾನರಿಗೆ ಹಾಗೆ ಪ್ರಯೋಗಮಾಡುತ್ತಲಿದ್ದೇನೆ. ಕ್ರಮಕ್ರಮವಾಗಿ ಆ ವಿಷವನ್ನು ಹೆಚ್ಚುಮಾಡುತ್ತ ಬಂದಿದ್ದೇನೆ. ಅವರ ಪಾನಕದಲ್ಲಿ ಮತ್ತಾರಾದರೂ ಒಂದು ಗುಟುಕನ್ನು ಕುಡಿದರೂ ಒಡನೆಯೇ ಸಾಯುವರು.''

"ಪಂಡಿತರೇ, ನನ್ನ ಅಪ್ಪನ ಕೊಟ್ಟಡಿಗೂ ನನ್ನ ಅತ್ತೆಯಿದ್ದ ಕೊಟ್ಟಡಿಗೂ ಸಂಬಂಧವೇ ಇಲ್ಲ. ಇದೊಂದು ಮೂಲೆ, ಅದೊಂದು ಮೂಲೆ. ನಿಮ್ಮಲ್ಲೇನೋ ನನಗೆ ಸಂಪೂರ್ಣವಾದ ನಂಬುಗೆಯಿದೆ; ಈ ವಿಷಯದಲ್ಲಿ ನಿಮ್ಮ ಅಭಿಪ್ರಾಯವು ಒಂದುವೇಳೆ ತಪ್ಪಾಗಿರಬಹುದು."

"ಹಾಗಾದರೆ ಒಂದು ಕೆಲಸ ಮಾಡೋಣಾಗಲಿ. ತಮಗೆ ನನಗಿಂತಲೂ ಹೆಚ್ಚು ನಂಬುಗೆಯಿರುವ ಬೇರೆ ವೈದ್ಯನನ್ನು ಕರೆಸಿ ನೋಡಿಸಿರಿ. ಆಗ ನಿಜಾಂಶವು ಗೊತ್ತಾಗುತ್ತದೆ. ಈ ಕೆಲಸವೇನಾದರೂ ಪ್ರಮಾದವಶದಿಂದ ಆಗಿದ್ದರೆ ಮುಂದೆ ಆಗದಂತೆ ಎಚ್ಚರಿಕೆಯಿಂದ ನೋಡಿಕೊಳ್ಳಿರಿ; ಹಾಗಿಲ್ಲದೆ ಒಂದು ವೇಳೆ ಶತ್ರುಗಳೇನಾದರೂ ಈ ರೀತಿ ಮಾಡಿದ್ದರೆ ಕೂಡಲೇ ಅವರನ್ನು ಕಂಡುಹಿಡಿದು ತಕ್ಕ ಕಟ್ಟುಪಾಡು ಮಾಡಿರಿ."

"ಸ್ವಾಮಿ, ತಾವು ಹೇಳುವುದೇನೋ ಸರಿಯೆ. ಆದರೂ ಇನ್ನೊಬ್ಬ ವೈದ್ಯನನ್ನು ಕರೆದುತಂದರೆ ಒಂದುವೇಳೆ ವಿಷಯಪ್ರಯೋಗವಾಗಿದ್ದಲ್ಲಿ ಅವನು ಇಲ್ಲದ ರಗಳೆ ಹಚ್ಚುವನು. ಆ ಮೇಲೆ ಇದು ನ್ಯಾಯಾಸ್ಥಾನದಲ್ಲಿ ವಿಚಾರಣೆಗೆ ಬರುವುದು. ನನ್ನ ಮನೆಯ ಸಂಗತಿಯು ಹೀಗೆ ಬಯಲಿಗೆ ಬಂದರೆ ನನಗೆ ಎಷ್ಟು ಅಪಮಾನ ! ನಾನು ಈ ಪದವಿಗೆ ಬಂದು ಬಹುಕಾಲವಾಯಿತು. ನನಗೆ ಶತ್ರುಗಳು ಸಹಜವಾಗಿ ಅನೇಕರು ಇದಾರೆ. ನೀವು ಹೇಳುವ ಸಂಗತಿಯು ಜನರ ಕಿವಿಗೆ ಬಿದ್ದರೆ ನನ್ನ ಶತ್ರುಗಳಿಗೆ ಹಾಲು ಅನ್ನ ಉಂಡಷ್ಟು ಸಂತೋಷ. ಪಂಡಿತರೇ. ಈಗ ನೀವು ಹೇಳಿದುದನ್ನು ಇಲ್ಲೇ ಮರೆತುಬಿಡಿ."

"ವಲ್ಲಭದೇವರೇ, ಮನುಷ್ಯಸಾಮಾನ್ಯದ ಯೋಗಕ್ಷೇಮವನ್ನು ನೋಡಿಕೊಳ್ಳುವುದು ನನ್ನ ಮೊದಲ ಕೆಲಸ ; ಆ ಮೇಲೆ ನನ್ನ ವಿಕ್ಕ ಕೆಲಸ. ಇದನ್ನೇನೋ ಮರೆತುಬಿಡುತ್ತೇನೆ ಬಿಡಿ; ಮುಂದೆ ಇಂತಹುದಾವುದಾದೂ ನಡೆಯದಂತೆ ನೀವು ನಡೆದುಕೊಳ್ಳಬೇಕು. ಹಾಗೆ ಮಾಡದೆ ಮುಂದೆ ಇಂತಹ ಕೃತ್ಯವೇನಾದರೂ ನಡೆದರೆ ಆಗ 'ಸ್ವಾಮಿ, ದಂಡಾಧಿಕಾರಿಗಳೇ ಇಗೋ ನಿಮ್ಮ ಮನೆಯಲ್ಲಿ ಕೊಲೆ ನಡೆದಿದೆ, ನ್ಯಾಯರೀತ್ಯಾ ಕೆಲಸವನ್ನು ನಡೆಸಬೇಕು' ಎಂದು ನಿಮ್ಮನ್ನು ನಾನೇ ಬಲಾತ್ಕರಿಸುತ್ತೇನೆ."

ವೈದ್ಯನು ಹೀಗೆನ್ನುತ್ತಲೇ ವಲ್ಲಭದೇವನು ಹಿಗ್ಗಿ "ಸ್ವಾಮಿ, ತಮ್ಮಂಥ ಸ್ನೇಹಿತರು ನನಗಾರು ಇರುವರು" ಎಂದು ಉಪಚಾರ ಹೇಳಿ, ಇನ್ನು ಅವನ

ಜತೆಯಲ್ಲಿದ್ದರೆ ತನ್ನ ಮನಸ್ಸನ್ನು ಬದಲಾಯಿಸಿ ಎಲ್ಲಿ ಏನು ಹೇಳುವನೋ ಎಂದು ಅಲ್ಲಿ ನಿಲ್ಲದೆ ಮನೆಯ ಕಡೆಗೆ ಹೊರಟನು. ಅವರಿಬ್ಬರೂ ಅಲ್ಲಿಂದ ಸ್ವಲ್ಪದೂರ ಹೋದಮೇಲೆ ಜಯವೀರನು ಪೊದರಿನಿಂದೆದ್ದು ಕಿವಿಗೆ ಬಿದ್ದ ಸಂಗತಿಯು ನನ್ನಂಥಾ ಧೀರನಿಗೇ ಧೈರ್ಯಗುಂದಿಸುವಷ್ಟು ಭಯಂಕರವಾಗಿರುವಾಗ ಇದನ್ನೆಲ್ಲಾ ಕಣ್ಣಾರೆ ನೋಡುತ್ತಲಿದ್ದ ವಿಮಲೆಗೆ ಹೇಗಾಗಿರಬೇಕು ಎಂದು ಕೊಂಡನು. ವಲ್ಲಭದೇವನೂ ವೈದ್ಯನೂ ಮನೆಯ ಸಮೀಪವನ್ನು ಸೇರಿದರು.

ಮಹಡಿಯ ಒಂದು ಮೂಲೆಯಲ್ಲಿದ್ದ ಸಣ್ಣ ಕೊಟಡಿಯಲ್ಲಿ ಮಾತ್ರ ಒಂದು ಸಣ್ಣ ದೀಪವು ಮಿನುಗುತ್ತಿತ್ತು. ಅದೇ ಹೆಣವನ್ನು ಮಲಗಿಸಿರುವ ಕೊಟಡಿಯೆಂದು ಊಹಿಸಿ, ಬಹುಶಃ ವಿಮಲೆಯು ಅಲ್ಲಿರಬಹುವೆಂದು ಜಯವೀರನು ನೋಡುತ್ತಿದ್ದಾಗ ಒಳಗೆ ಯಾರೋ ನಿಟ್ಟುಸಿರು ಬಿಟ್ಟು ಓಡಾಡುತ್ತಲಿರುವಂತೆ ತೋರಿತು. ಮೂಢಭಯವುಳ್ಳವನು ಸತ್ತಮನೆಗೆ ಹೋಗುವುದಕ್ಕೆ ಅಂಜಿಕೊಳ್ಳುವ ಹಾಗೆ, ಜಯವೀರನು ಧೈರ್ಯಶಾಲಿಯಾಗಿದ್ದರೂ ಭಯಾನುರಾಗಮಿಳಿತವಾದ ಮನೋವಿಕಾರದಿಂದ ಬುದ್ಧಿಗೆಟ್ಟವನಾಗಿದ್ದನು. ಯಾರಾದರೂ ಎಲ್ಲಿ ತನ್ನನ್ನು ಕಂಡರೋ, ಎಲ್ಲಿ ವಿಮಲೆಗೆ ದಿಗಿಲುಂಟಾಗುತ್ತದೆಯೋ ಎಂಬುದನ್ನೂ ಲೆಕ್ಕಿಸದೆ, ಅವನು ವಯೋಧರ್ಮದ ಉತ್ಸಾಹದಿಂದ ಬೆಳದಿಂಗಳಲ್ಲಿ ಹಾಲಿನ ಕೊಳದಂತೆ ಕಾಣುತ್ತಿದ್ದ ಆ ಪುಷ್ಪವಾಟಿಕೆಯನ್ನು ಹಾದು ಸತ್ತಮನೆಯನ್ನು ಹೊಕ್ಕು ಮೆಲ್ಲಮೆಲ್ಲಗೆ ವಿಮಲೆಯಿದ್ದ ಕೊಟ್ಟಡಿಯನ್ನು ಸೇರಿದನು.

ಹೆಣದ ಮಗ್ಗುಲಲ್ಲಿ ಕುಳಿತು ಕಣ್ಣೀರನ್ನು ಸುರುಸುತ್ತಿದ್ದ ವಿಮಲೆಗೆ ಜಯವೀರನು ಒಳಕ್ಕೆ ಬಂದುದೇ ತಿಳಿಯದು. ಅವಳ ಅವಸ್ಥೆಯನ್ನು ನೋಡಿ ಅವನೂ ಸ್ವಲ್ಪಕಾಲ ಸ್ತಬ್ಧನಾಗಿ ನಿಂತಿದ್ದನು. ಕೊನೆಗೆ "ವಿಮಲೆ, ವಿಮಲೆ" ಎಂದು ಮೆಲ್ಲಗೆ ಕೂಗಲು ಅವಳು ತಲೆಯೆತ್ತಿ ನೋಡಿದಳು. ಆಗ ಅವಳಿಗೆ ಭಯವಾಗಲಿ ಆಶ್ಚರ್ಯವಾಗಲಿ ಆಗಲಿಲ್ಲ. ಮಹತ್ತರವಾದ ದುಃಖದಲ್ಲಿರುವವರಿಗೆ ಮಿಕ್ಕ ಚಿತ್ತವಿಕಾರಗಳು ಯಾವುವೂ ತೋರುವುದಿಲ್ಲ. ಅವನನ್ನು ನೋಡಿದ ಕೂಡಲೇ ವಿಮಲೆಯು ತಾನು ಬಾರದೇ ಇದ್ದುದಕ್ಕೆ ಕಾರಣವನ್ನು ಹೇಳುವಂತೆ ಹೆಣವನ್ನು ಅವನಿಗೆ ತೋಸಿ ಬಿಕ್ಕಿಬಿಕ್ಕಿ ಅತ್ತಳು. ಸ್ವಲ್ಪ ಹೊತ್ತು ಇಬ್ಬರಿಗೂ ಮಾತೇ ಹೊರಡಲಿಲ್ಲ. ಕೊನೆಗೆ ಜಯವೀರನು,

"ನಿನಗಾಗಿ ನಾನು ಬಲುಹೊತ್ತು ಕಾದು ಬೇಸತ್ತು ನೀನು ಬಾರದಿದ್ದುದರಿಂದ ಗಾಬರಿಯಾಗಿ ತೋಟವನ್ನು ಹಾದು ಬರುತ್ತಿದ್ದಾಗ ಈ ಸಾವಿನ ಸಂಗತಿಯು ನನ್ನ ಕಿವಿಗೆ ಬಿದ್ದಿತು."

"ಯಾರು ಮಾತನಾಡುತ್ತ ಲಿದ್ದರು?"

ಜಯವೀರನು ವಲ್ಲಭದೇವನಿಗೂ ವೈದ್ಯನಿಗೂ ನಡೆದ ಸಂವಾದವನ್ನು ನೆನಸಿಕೊಂಡು ಇದಿರಿಗಿದ್ದ ಹೆಣದ ನೀಡಿದ ಕೈಯ್ಯನ್ನೂ, ಬೆರತಿದ್ದ ಕುತ್ತಿಗೆಯನ್ನೂ ತೆರೆದು ವಿಕಾರವಾಗಿದ್ದ ಕಣ್ಣುಗಳನ್ನೂ ನೋಡಿ ನಡುಗಿ

"ನಿಮ್ಮ ಆಳುಗಳಿಂದ ಎಲ್ಲವೂ ತಿಳಿಯಲಾಯಿತು."

"ನೀನು ಈ ರೀತಿ ಬಂದುದು ನಾವು ಮಾಡಿಕೊಂಡಿದ್ದ **ಏರ್ಪಾಡಿಗೆ ವಿರೋಧವಲ್ಲವೇ** ?"

"ಅಹುದು, ಅಹುದು; ಕ್ಷಮಿಸು. ಇಗೋ ಹೊರಟುಹೋಗುತ್ತೇನೆ."

"ಸ್ವಲ್ಪ ತಾಳು ; ದಾರಿಯಲ್ಲಿ ನಿನ್ನನ್ನು ಯಾರಾದರೂ ಕಾಣಬಹುದು."

"ನಾನಿಲ್ಲಿರುವಾಗ ಯಾರಾದರೂ ಬಂದುಬಿಟ್ಟರೋ" ಎಂದು ಜಯವೀರನು ಕೇಳಲು ಅವಳು ಹೆಣವನ್ನು ತೋರಿಸುತ್ತ

"ಇದು ಇರುವವರೆಗೂ ಇಲ್ಲಿಗೆ ಯಾರೂಬರುವುದಿಲ್ಲ."

"ವೀರಸಿಂಹನ ಸಮಾಚಾರವೇನು ?"

"ಅವನು ಬರುವುದಕ್ಕೆ ಮುಂಚೆಯೇ ನನ್ನ ಅಜ್ಜಿಯು ತೀರಿಹೋದಳು. ನನಗೆ ಅನುಕೂಲವಾಗುತ್ತದೆಂದು ಅವಳು ಸಾಯುವಾಗ ಕೂಡ ನನ್ನನ್ನು ಅವನಿಗೆ ಮದುವೆಮಾಡಬೇಕೆಂದು ನಮ್ಮಪ್ಪನ ಸಂಗಡ ಹೇಳಿದರು."

"ಉಷ್. ಸ್ವಲ್ಪ ತಾಳು. ಯಾರೋ ಬರುವಂತಿದೆ."

"ಯಾರೂ ಇಲ್ಲ. ನಮ್ಮಪ್ಪ ತನ್ನ ಕೊಟಡಿಯಿಂದ ಹೊರಟನು."

"ವೈದ್ಯನನ್ನು ಕಳುಹಿಸಿ ಬರುವುದಕ್ಕೇ?"

"ಹಾ! ಅದು ನಿನಗೆ ಹೇಗೆ ತಿಳಿಯಿತು?"

"ಸುಮ್ಮನೆ ಊಹಿಸಿದೆ"

ವಲ್ಲಭದೇವನು ವೈದ್ಯನನ್ನು ಮನೆಗೆ ಕಳುಹಿಸಿ ತಲೆಬಾಗಿಲನ್ನೂ ಹಿಂಬಾಗಿಲನ್ನೂ ಹಾಕಿಕೊಂಡು ತನ್ನ ಕೊಟಡಿಗೆ ಹೋದನು. ವಿಮಲೆಯು ಅದನ್ನು ತಿಳಿದು

‘‘ಈಗ ನೀನು ಬೀದಿಯ ಬಾಗಿಲಿಂದಲೇ ಆಗಲಿ ಹಿತ್ತಿಲ ಬಾಗಿಲಿಂದಲೇ ಆಗಲಿ ಹೊರಗೆ ಹೋಗುವುದಕ್ಕಾಗುವುದಿಲ್ಲ. ನನ್ನ ತಾತನ ಕೊಟ್ಟಡಿಯನ್ನು ಹಾದುಕೊಂಡೇ ಹೋಗಬೇಕು. ನನ್ನ ಜತೆಯಲ್ಲಿ ಬಾ” ಎಂದು ಎದ್ದಳು.

‘‘ಈ ವೇಳೆಯಲ್ಲಿ ನಿನ್ನ ಸಂಗಡ ನಾನು ನಿನ್ನ ತಾತನ ಕೊಟ್ಟಡಿಗೆ ಬರಬಹುದೋ ?”

‘‘ಬಂದರೇನು ? ಬಹುದಿನಗಳಿಂದ ನಿನಗೆ ನನ್ನ ತಾತನ ಪರಿಚಯವನ್ನು ಮಾಡಿಕೊಡಬೇಕೆಂದಿದ್ದೆನು. ನನಗೆ ಆಪ್ತನು ಅವನೊಬ್ಬನೇ. ಅವನ ಸಹಾಯವು ನಮ್ಮಿಬ್ಬರಿಗೂ ಅತ್ಯವಶ್ಯಕ. ಹೋಗೋಣ ಬಾ” ಎಂದು ಆ ತರಳೆಯು ಮುಂದೆ ಮುಂದೆ ಹೋದಳು. ಅವಳ ಹಿಂದೆ ಜಯವೀರನೂ ಹೊರಟನು.

. ಇಬ್ಬರೂ ಆ ವೃದ್ಧನ ಕೊಟ್ಟಡಿಗೆ ಹೋದ ಮೇಲೆ ವಿಮಲೆಯು ತಾತನನ್ನು ಕುರಿತು

“ತಾತ, ನನ್ನ ಅಜ್ಜಿಯೂ ತೀರಿಹೋದಳು. ಈಗ ನೀನಲ್ಲದೆ ನನಗೆ ಮತ್ತೆ ಯಾರೂ ದಿಕ್ಕಿಲ್ಲ’’ ಎನ್ನಲು, ಅವನು ನೋಟದಿಂದಲೇ ತನಗೆ ಅವಳಲ್ಲಿರುವ ಅತಿಶಯ ಪ್ರೀತಿಯನ್ನು ಸೂಚಿಸಿದನು.

ನನ್ನ ಸಂಕಟವನ್ನೂ ಆಸೆಯನ್ನೂ ನಿನಗೆ ತಿಳಿಸಲೋಸುಗ ಈಗ ಇಲ್ಲಿ ಬಂದೆನು, ಅವುಗಳನ್ನು ತಿಳಿಸಲೋ ?’’ ಎಂದಳು. ಅವನು ಆಗಬಹುದು ಎಂದು ಸೂಚಿಸಿದಾಗ ಜಯವೀರನನ್ನು ತೋರಿಸಿ

“ಈತನನ್ನು ನೋಡು. ಇವನು ಯಜಮಾನ ಧನಕೋಟಿಯ ಕುಮಾರನು ; ಸತ್ಕುಲಪ್ರಸೂತನು ; ಮೇಲೆಯೂ ಸೈನ್ಯದಲ್ಲಿ ದೊಡ್ಡ ಅಧಿಕಾರಿ.’’

ವೃದ್ಧನು “ಬಲ್ಲೆ” ಎಂದು ಸೂಚಿಸಿದನು.

“ಅಜ್ಜಾ, ನಾನು ಇವನನ್ನು ಬಹುಕಾಲದಿಂದ ಪ್ರೀತಿಸುತ್ತಿದ್ದೇನೆ ಆದುದರಿಂದ ಇವನನ್ನೇ ಮದುವೆಯಾಗಬೇಕೆಂದು ಆಸೆ. ನನ್ನ ಪ್ರಾಣವನ್ನಾದರೂ ಕಳೆದುಕೊಳ್ಳುವೆನಲ್ಲದೆ ಇವನಲ್ಲದೆ ಮತ್ತೊಬ್ಬನನ್ನು ಮದುವೆಯಾಗಲೊಲ್ಲೆನು.”

ವೃದ್ಧನು ತನಗದರಿಂದುಂಟಾದ ಹಲವು ಬಗೆಯ ಅಭಿಪ್ರಾಯಗಳನ್ನು ಕಣ್ಣಿನಿಂದ ಸೂಚಿಸಿದನು. ಸ್ವಲ್ಪಕಾಲ ಸುಮ್ಮನಿದ್ದು ವಿಮಲೆಯು

"ತಾತ, ಇವನನ್ನು ಒಪ್ಪಿದೆಯೋ ?"

ವೃದ್ಧನು ಹೂಂ ಎಂದನು.

"ಹಾಗಾದರೆ ನಮ್ಮಪ್ಪನೇನಾದರೂ ಬಲಾತ್ಕರಿಸಿ ನನ್ನನ್ನು ವೀರಸಿಂಹನಿಗೆ ಮದುವೆಮಾಡುವುದಾದರೆ ನೀನು ನನ್ನ ಕೈಬಿಡಕೂಡದು."

ವೃದ್ಧನು ಹುಂ ಎಂದು ಸೂಚಿಸಿ ಜಯವೀರನನ್ನು ನೋಡಿದನು. ಆಗ ಜಯವೀರನಿಗೆ ವಿಮಲೆಯನ್ನು ನೋಡಿ "ಅಜ್ಜಿಯನ್ನು ಬಿಟ್ಟುಬರುವುದು ಸರಿಯಲ್ಲ. ಅಲ್ಲಿಗೆ ಹೋಗು, ನಾನು ಇವರೊಂದಿಗೆ ಸ್ವಲ್ಪ ಮಾತನಾಡಬೇಕು" ಎಂದನು.

ವೃದ್ಧನು ವಿಮಲೆಯನ್ನು ನೋಡಲು, ಅವಳು ಅಜ್ಜನನ್ನು ನೋಡಿ "ಅಜ್ಜಾ, ನಿನ್ನ ಅಭಿಪ್ರಾಯವನ್ನು ಅವನು ಗ್ರಹಿಸಲಾರನೆಂದು ಅನುಮಾನಪಡಬೇಡ. ನಿನ್ನ ವಿಷಯವಾಗಿ ನಾವಿಬ್ಬರೂ ಅಡಿಗಡಿಗೆ ಪ್ರಸ್ತಾಪಮಾಡುತ್ತಿರುವುದರಿಂದ ಜಯವೀರನು ನಿನ್ನೊಂದಿಗೆ ಮಾತನಾಡಿ ನಿನ್ನ ಅಭಿಪ್ರಾಯವನ್ನು ತಿಳಿಯಬಲ್ಲನು. ನೀನು ಅವನೊಂದಿಗೆ ಮಾತನಾಡಬೇಕೆಂದಿದ್ದರೆ ಮಾತನಾಡಬಹುದು" ಎಂದು ಹೇಳಿ ಯಾರನ್ನೂ ಒಳಕ್ಕೆ ಬಿಡಬೇಡವೆಂದು ಹರಿದಾಸನಿಗೆ ಕಟ್ಟುಮಾಡಿ ಬಾಗಿಲನ್ನು ಮುಚ್ಚಿಕೊಂಡು ಹೊರಟುಹೋದಳು.

ಅನಂತರ ಜಯವೀರನು ದೀನನಾಥನನ್ನು ಕುರಿತು "ಸ್ವಾಮೀ ! ನಾನಾರೆಂಬುದನ್ನೂ, ವಿಮಲೆಯಲ್ಲಿ ನನಗೆ ಇರುವ ಅನುರಾಗವನ್ನೂ, ನಮ್ಮ ಮದುವೆಯ ವಿಷಯವಾಗಿ ನಾನು ಏನು ಮಾಡಬೇಕೆಂದಿದ್ದೇನೆ ಎಂಬುದನ್ನೂ ಮೊದಲು ತಮಗೆ ತಿಳಿಸಬೇಕೆಂದಿದ್ದೇನೆ. ಅಪ್ಪಣೆಯಾದರೆ ಅವುಗಳನ್ನು ತಮಗೆ ತಿಳಿಸಿ, ನಾನು ಹೇಳುವ ಏರ್ಪಾಡು ತಮಗೆ ಒಪ್ಪಿಗೆಯಾದಲ್ಲಿ ತಾವು ಸಹಾಯ ಮಾಡಬೇಕು ಎಂದು ಪ್ರಾರ್ಥಿಸುತ್ತೇನೆ" ಎಂದನು.

ದೃಢಾಂಗರಾದ ಯುವಕಯುವತಿಯರಿಬ್ಬರೂ ಕೈಕಾಲು ಸ್ವಾಧೀನತಪ್ಪಿ ಬಾಯಿಕೂಡ ಇಲ್ಲದೆ ಜೀವಚ್ಛವದಂತಿರುವ ಈ ವೃದ್ಧನನ್ನು ತಮಗೆ ರಕ್ಷಕನಾಗಿದ್ದು ಬೇಕಾದ ಒತ್ತಾಸೆಯನ್ನು ಮಾಡಿಕೊಡಬೇಕೆಂದು ಪ್ರಾರ್ಥಿಸಿದುದು ಆಶ್ಚರ್ಯವೇ ಸರಿ.

ಜಯವೀರನು ತನ್ನ ಕುಲಸ್ಥಿತಿಗಳನ್ನೂ ತನಗೂ ವಿಮಲೆಗೂ ಪರಿಚಯವಾದ ರೀತಿಯನ್ನೂ, ಅಂದಿನಿಂದ ಇದುವರೆಗೆ ತನಗೆ ಅವಳಲ್ಲಿರುವ ಅನುರಾಗ

ವನ್ನೂ ವೃದ್ಧನೊಡನೆ ಹೇಳುತ್ತಿದ್ದಾಗ, ಅವನು ಅದು ಸರಿ, ಅದು ಸರಿ, ಅದು ಸರಿ ಎಂದು ಸೂಚಿಸುತ್ತಲಿದ್ದನು. ತಾನು ಮುಂದೆ ಮಾಡಬೇಕೆಂದಿರುವ ಸಂಗತಿಯನ್ನು ತಿಳಿಸಿದಾಗ ಮಾತ್ರ ವೃದ್ಧನು ಬೇಡ ಎಂದು ಸನ್ನೆ ಮಾಡಿದನು.

''ಹಾಗಾದರೆ ನಾನೇನು ಮಾಡಲಿ" ಎಂದು ಜಯವೀರನು ಕೇಳಲು ವೃದ್ಧನ ಕಣ್ಣುಗಳು ಚಲಿಸದೆ ಸುಮ್ಮನಿದ್ದವು.

"ನಾನು ಸುಮ್ಮನಿರಬೇಕೋ?"

''ಹುಂ''

"ಸುಮ್ಮನಿದ್ದರೆ ಕೆಲಸ ಕೆಟ್ಟುಹೋದರೋ?"

"ಇಲ್ಲ."

"ನಿಮ್ಮ ಮಕ್ಕಳು ವಿಮಲೆಗೆ ಮದುವೆಯನ್ನು ಜಾಗ್ರತೆಯಲ್ಲಿ ಮಾಡುವಂತಿದೆ. ಅದನ್ನು ತಪ್ಪಿಸಲು ನಿಮ್ಮಿಂದ ಆಗುತ್ತದೆಯೋ?"

"ಹುಂ."

"ಸ್ವಾಮೀ, ಈ ವಿಷಯದಲ್ಲಿ ನಿಮ್ಮ ಮೇಲೆ ಭಾರಹಾಕಿ ನಾವು ಸುಮ್ಮನೆ ಇರಬೇಕೆಂಬುದಲ್ಲವೇ ನಿಮ್ಮ ಅಭಿಪ್ರಾಯ?"

ವೃದ್ಧನು ಅಹುದು ಎಂದು ಬಾಗಿಲನ್ನು ನೋಡಿದನು.

''ತಮ್ಮ ಚಿತ್ತದಂತೆ ಆಗಲಿ, ಅಪ್ಪಣೆಯಾದರೆ ಹೋಗಿಬರುತ್ತೇನೆ" ಎಂದು ಜಯವೀರನು ಅಲ್ಲಿಂದ ಹೊರಟು ಸೊಪ್ಪಿನ ತೋಟದ ಬಳಿ ಇದ್ದ ಬಂಡಿಯಲ್ಲಿ ಕುಳಿತು ತನ್ನ ಮನೆಯನ್ನು ಸೇರಿ ಸುಖವಾಗಿ ನಿದ್ದೆಮಾಡಿದನು.

---

# ಐವತ್ತೊಂದನೆಯ ಅಧ್ಯಾಯ

## ದ್ವಂದ್ವಯುದ್ಧದ ವೃತ್ತಾಂತ.

ಶಾಂತವೀರನ ಹೆಂಡತಿಯು ಸತ್ತುದರಿಂದ ವಿಮಲೆಯ ಮದುವೆಯು ಸದ್ಯಕ್ಕೆ ನಿಲ್ಲಬೇಕಾಯಿತು. ಆ ಮುದುಕಿಯ ಉತ್ತರಕ್ರಿಯೆಗಳೆಲ್ಲವೂ ಮುಗಿದ ಮೇಲೆ ವಲ್ಲಭದೇವನು ಒಂದು ಶುಭದಿನವನ್ನು ಗೊತ್ತುಮಾಡಿ ಮದುವೆಯನ್ನು

ನಡೆಸಬೇಕೆಂದು ಏರ್ಪಾಡು ಮಾಡಿಕೊಂಡನು. ಅದನ್ನು ಮನೆಯಲ್ಲಿ ಒಬ್ಬರಿಗೂ ತಿಳಿಸಲಿಲ್ಲ. ತನ್ನನ್ನು ಕೇಳದೆ ಗಂಡನು ಯಾವ ಕೆಲಸವನ್ನೂ ಮಾಡುತ್ತಿರಲಿಲ್ಲವಾದುದರಿಂದ ಮದುವೆಯು ಈಗಲೇ ನಡೆಯಲಾರದೆಂದು ನಾಗಮಣಿಯು ತಿಳಿದು ಕೊಂಡಿದ್ದಳು. ಅಜ್ಜನೂ ಅಜ್ಜಿಯೂ ಸತ್ತು ಸ್ವಲ್ಪ ದಿನಗಳಾದವು. ಇಷ್ಟರಲ್ಲಿಯೇ ಅಪ್ಪನು ತನಗೆ ಮದುವೆಮಾಡಲಾರನೆಂದು ವಿಮಲೆಯು ತಿಳಿದಿದ್ದಳು. ವಲ್ಲಭದೇವನು ಲಗ್ನದ ಹೊತ್ತಿಗೆ ಸ್ವಲ್ಪ ಮುಂಚೆ ಹೆಂಡತಿಗೂ ಮಗಳಿಗೂ ತಾನು ಮಾಡಿಕೊಂಡಿದ್ದ ಏರ್ಪಾಡನ್ನು ತಿಳಿಸಿದನು. ಅದನ್ನು ಕೇಳಿ ನಾಗಮಣಿಯು ಆಶ್ಚರ್ಯಪಟ್ಟು ತನ್ನ ಮಗನ ಸಂಗಡ ಒಂದು ಕಡೆ ಕುಳಿತು, ಅವನ ಮುಖವನ್ನು ನೋಡಿ ದುಃಖಪಡುತ್ತಲಿದ್ದಳು. ಮದುವೆಯ ಕಾಲದಲ್ಲಿ ಮಗನನ್ನು ನೋಡಿ ಅವಳು ಏತಕ್ಕೆ ದುಃಖಪಟ್ಟಳೆಂಬುದನ್ನು ನಮ್ಮ ಪಾಠಕರು ಊಹಿಸಬಹುದು.

ಆ ದಿನ ಬೆಳಿಗ್ಗೆ ವಲ್ಲಭದೇವನೂ ವೀರಸಿಂಹನೂ ಮಾತನಾಡುತ್ತಲಿದ್ದುದನ್ನು ಜಯವೀರನು ತಿಳಿದು "ಅಂದು ನಿಂತುಹೋದ ಮದುವೆಯು ಇಂದು ನಡೆಯುವಂತಿದೆ. ವಿಮಲೆಯು ಏನು ಮಾಡುವಳೋ? ತನಗೆ ಸಹಾಯ ಮಾಡುತ್ತೇನೆಂದು ಮಾತುಕೊಟ್ಟಿದ್ದ ವೃದ್ಧನು ಏನುಮಾಡುತ್ತಾನೋ?"ಎಂದು ಹಲುಬುತ್ತಲಿದ್ದನು.

ವಲ್ಲಭದೇವನು ಮಗಳನ್ನು ಕೂಗಿ "ಅಮ್ಮಾ, ವರನು ಬರುವಹೊತ್ತಾಯಿತು. ಆವೇಳೆಗೆ ನೀನು ಸಿದ್ಧವಾಗಿರು"ಎಂದು ಹೇಳಿದನು. ಅದನ್ನು ಕೇಳಿದೊಡನೆಯೇ ಅವಳು ಸಿಡಿಲು ಬಡಿದಂತೆ ನಿಂತಿದ್ದು ಹಾಗೆಯೇ ಸುತ್ತಮುತ್ತ ನೋಡಿ ತನಗೆ ಆಪ್ತರಾರನ್ನೂ ಕಾಣದೆ ತಾತನಬಳಿಗೆ ಹೊರಟಳು. ಆಗ ವಲ್ಲಭದೇವನು "ಅಮ್ಮಾ, ಎಲ್ಲಿಗೆ ಹೋಗುತ್ತೀಯೆ, ಬಾ"ಎಂದು ಕೈ ಹಿಡಿದು ಅವಳನ್ನು ಕರೆದುಕೊಂಡುಹೋಗುತ್ತಿದ್ದಾಗ ಇದಿರಿಗೆ ಹರಿದಾಸನು ಬರುತ್ತಿದ್ದನು. ಅವನನ್ನು ನೋಡಿ ವಿಮಲೆಯು ತನ್ನ ನಿರಾಶೆಯನ್ನು ಸೂಚಿಸಿದಳು.

ಅತ್ತೆಮಾವಂದಿರು ತೀರಿಹೋದ ತರುಣವಾದುದರಿಂದ ವಲ್ಲಭದೇವನು ಮದುವೆಗೆ ಆಪ್ತರಾದ ಕೆಲವರನ್ನು ಮಾತ್ರ ಕರೆದಿದ್ದನು. ವೀರಸಿಂಹನು ತನ್ನ ಸ್ನೇಹಿತರಾದ ಚಿತ್ರಸೇನ ಉದಯಸಿಂಹರನ್ನು ಮಾತ್ರ ಸಂಗಡ ಕರೆದುಕೊಂಡು ಬಂದಿದ್ದನು. ಮಂಗಳವಾದ್ಯಗಳು ಬಾಜಿಸುತ್ತಿದ್ದುವು. ಜನಗಳೂ ಸುಮಾ

ರಾಗಿ ಸೇರಿದ್ದರು. ಆ ಸಮಯದಲ್ಲಿ ಯಾರಿಗೂ ಸಂಭ್ರಮವೂ ಸಂತೋಷವೂ ಇರಲಿಲ್ಲ. ಮನೆಯ ಯಜಮಾನಿಯೂ ಮದುವೆಯ ಹೆಣ್ಣೂ ಚಿಂತಾಕ್ರಾಂತ ರಾಗಿದ್ದುದನ್ನು ಕಂಡು ಅಲ್ಲಿದ್ದ ಕೆಲವರು ಒಬ್ಬರ ಮುಖವನ್ನೊಬ್ಬರುನೋಡುತ್ತ ಇದೇನು ಎಂದು ಪ್ರಶ್ನೆ ಮಾಡುತ್ತಲೂ, ಕೆಲವರು ಮುದುಕಿಯ ಸಾವಿನಿಂದ ಅವರು ಹಾಗೆ ಇರುವರೆಂದೂ, ಮತ್ತೆ ಕೆಲವರು ಏನೋ ಅಪ್ಪಾ, ಹೇಳಲಾಗದು ಎಂದೂ ಮಾತನಾಡಿಕೊಳ್ಳುತ್ತಿಲಿದ್ದರು.

ಮದುವೆಗೆ ಎಲ್ಲವೂ ಸಿದ್ಧವಾಗಿ ಪುರೋಹಿತನೂ ಬಂದು ಕಾರ್ಯಪ್ರಾರಂಭ ವಾಗುವ ಸಮಯಕ್ಕೆ ಸರಿಯಾಗಿ ಹರಿದಾಸನು ಬಂದು "ಸ್ವಾಮೀ, ಶ್ರೀಮಂತ ವೀರಪ್ರಚಂಡರ ಕುಮಾರರಾದ ವೀರಸಿಂಹರೇ, ನಮ್ಮ ಯಜಮಾನರು ಧೀನ ನಾಥರು ತಮ್ಮೊಂದಿಗೆ ಅತ್ಯವಶ್ಯಕವಾಗಿ ಒಂದೆರಡು ಮಾತುಗಳನ್ನು ಆಡಬೇಕಾ ಗಿದೆ; ಅದಕ್ಕಾಗಿ ತಾವು ಈಗಲೇ ಅವರ ಕೊಟ್ಟಡಿಗೆ ಬಿಜಯಮಾಡಿಸಬೇಕು" ಎಂದನು. ಅದನ್ನು ಕೇಳಿ ವಲ್ಲಭದೇವನು ಬೆಚ್ಚಿದನು; ನಾಗಮಣಿಯ ಮುಖ ದಲ್ಲಿ ಒಂದು ವಿಧವಾದ ಕಳೆಯೇರಿತು; ವಿಮಲೆಯು ಬೆರಗಾಗಿ ಪ್ರತಿಮೆಯಂತೆ ನಿಂತಳು. ಉದಯಸಿಂಹನು ಚಿತ್ರಸೇನನನ್ನು ನೋಡಿ ಈ ಮದುವೆಯ ವಿಷಯದಲ್ಲಿ ನನಗೇಕೋ ಮೊದಲಿನಿಂದಲೂ ಅನುಮಾನ; ಅದಕ್ಕೆ ತಕ್ಕಂತೆ ಯಾವುದಾದರೂ ಒಂದು ವಿಘವಾದ ತಡೆಯು ಆಗುತ್ತಲೇ ಇದೆ ಎಂದನು.

"ಅಪ್ಪನು ಈ ವೇಳೆಯಲ್ಲಿ ಏನು ಅಭಾಸ ಮಾಡಿಬಿಡುವನೋ?" ಎಂದು ಕೊಂಡು ವಲ್ಲಭದೇವನು ಹರಿದಾಸನನ್ನು ಕುರಿತು "ಮದುವೆಯು ಪ್ರಾರಂಭ ವಾಗುವುದರಲ್ಲಿದೆ, ಆದುದರಿಂದ ವೀರಸಿಂಹರು ಈಗ ಬರುವುದಕ್ಕೆ ಆಗುವುದಿಲ್ಲ ಎಂದು ಯಜಮಾನರಿಗೆ ಹೇಳು ಹೋಗು" ಎಂದನು.

"ಸ್ವಾಮಿಾ, ಅವರು ಹೇಳಬೇಕೆಂದಿರುವುದು ಬಹು ಗುರುತರವಾದು ದಾಗಿಯೂ ಅತ್ಯವಶ್ಯವಾಗಿಯೂ ಇದೆಯಂತೆ; ಆದುದರಿಂದ ಈಗಲೇ ಕರೆದು ಕೊಂಡು ಬರುವಂತೆ ಅಪ್ಪಣೆಯಾಗಿದೆ. ಸ್ವಾಮಿಾ, ದಯವಿಟ್ಟು ತಾವು ಈಗಲೇ ಬಿಜಯಮಾಡಿಸಬೇಕು" ಎಂದು ಹರಿದಾಸನು ವೀರಸಿಂಹನಿಗೆ ಹೇಳಿದನು.

ಸೇವಕನು ಹೀಗೆನ್ನಲು ಎಲ್ಲರಿಗೂ ಆಶ್ಚರ್ಯವಾಯಿತು. ನಾಗ ಮಣಿಯ ಮುಖದಲ್ಲಿ ಮುಗುಳುನಗೆಯು ತಲೆದೋರಿತು. ಅದನ್ನು ಕಂಡು ವಲ್ಲಭದೇವನು ಕೋಪಕೊಂಡು ಮಗಳನ್ನು ನೋಡಿ" ಅಮ್ಮಾ, ಇದೇನು

ನಿಮ್ಮಜ್ಜನಿಗೆ ದಿನದಿನಕ್ಕೆ ಅರುಳುಮರುಳು ಹೆಚ್ಚುತ್ತಲಿದೆ; ಅವನಿಗೇನುಬೇಕು, ಕೇಳಿ ಬಾ" ಎಂದು ಹೇಳಿ, ಕೂಡಲೇ "ತಾಳು, ತಾಳು, ನಾನೂ ನಿನ್ನ ಸಂಗಡ ಬರುತ್ತೇನೆ" ಎಂದು ಅವಳ ಜೊತೆಯಲ್ಲಿಯೇ ಹೊರಟನು. ಅದುವರೆಗೂ ಸುಮ್ಮನಿದ್ದ ವೀರಸಿಂಹನು ಎದ್ದು .

"ಸ್ವಾಮಿ ವಲ್ಲಭದೇವರೇ! ಯಜಮಾನರು ನನ್ನನ್ನು ಬರಹೇಳಿದರೇ ಹೊರತು ತಮ್ಮನ್ನು ಬರಹೇಳಲಿಲ್ಲ. ಇದೂ ಅಲ್ಲದೆ ನನಗೆ ಅವರ ದರ್ಶನ ಲಾಭವಾಗಬೇಕೆಂದು ಬಹಳ ಕುತೂಹಲವಿದೆ. ನಾನೇ ಹೋಗಿ ಅವರ ಅಭಿಪ್ರಾಯನನ್ನು ತಿಳಿದುಬರುತ್ತೇನೆ" ಎಂದನು. ವೀರಸಿಂಹನು ಹೀಗೆನ್ನುತ್ತಲೆ ವಲ್ಲಭದೇವನಿಗೆ ಕಳವಳವುಂಟಾಗಿ,

"ವೀರಸಿಂಹರೇ, ತಮಗೇಕೆ ತೊಂದರೆ; ಇದಲ್ಲದೆ ನಮ್ಮಪ್ಪನ ಸಂಗಡ ಮಾತನಾಡುವುದಕ್ಕೆ ತಮ್ಮಿಂದಾಗದು. ತಾವು ಇಲ್ಲಿಯೇ ಇರಿ; ನಾನು ವಿಚಾರಿಸಿಕೊಂಡು ಬರುತ್ತೇನೆ."

"ಯಜಮಾನರಿಗೆ ನನ್ನ ವಿಷಯದಲ್ಲಿ ಒಳ್ಳೆಯ ಅಭಿಪ್ರಾಯವಿರುವುದೋ ಇಲ್ಲವೋ ಕಾಣೆ; ಒಂದುವೇಳೆ ದುರಭಿಪ್ರಾಯವಿದ್ದರೆ ನಾನೇಹೋಗಿ ಅವರೊಡನೆ ಮಾತನಾಡುವುದರಲ್ಲಿ ಗುಣವುಂಟು" ಎಂದು ಹೇಳಿ ವಲ್ಲಭದೇವನು ಬೇಡವೆಂದು ಎಷ್ಟು ಬಗೆಯಿಂದ ಹೇಳಿದರೂ ಕೇಳದೆ ವೀರಸಿಂಹನು ಹರಿದಾಸನ ಹಿಂದೆ ಹೋದನು. ಅವನ ಹಿಂದೆ ವಲ್ಲಭದೇವನೂ ಹೊರಟನು. ಈ ವೇಳೆಯಲ್ಲಿ ತಾನು ತಾತನ ಸಮೀಪದಲ್ಲಿದ್ದರೆ ಅನುಕೂಲವೆಂದು ವಿಮಲೆಯೂ ಹೊರಟಳು. ಮುದುಕನು ಏನು ತಾನೇ ಹೇಳಾನು ಎಂದು ವೀರಸಿಂಹನಿಗೂ, ಮುದುಕನು ಏನು ಅಭಾಸ ಮಾಡಿಬಿಡುತ್ತಾನೋ ಎಂದು ವಲ್ಲಭದೇವನಿಗೂ, ತಾತನು ಯಾವ ವಿಧದಿಂದ ತನಗೆ ಸಹಾಯಮಾಡುತ್ತಾನೋ ಎಂದು ವಿಮಲೆಗೂ ಯೋಚನೆಗಳುಂಟಾದುವು.

ಎಲ್ಲರೂ ಒಳಗೆ ಬಂದಮೇಲೆ ಮುದುಕನು ಬಾಗಿಲನ್ನು ನೋಡಲು ಹರಿದಾಸನು ಅದನ್ನು ಮುಚ್ಚಿದನು. ಆಗ ವಲ್ಲಭದೇವನು ಮಗಳನ್ನು ಕೂಗಿ ಅವಳ ಕಿವಿಯಲ್ಲಿ "ತಾತನು ಈ ಮದುವೆಯು ನಡೆಯಕೂಡದೆಂದು ಏನಾದರೂ ಹೇಳಿದರೆ ಅದನ್ನು ನೀನು ಕೇಳಕೂಡದು ಜೋಕೆ" ಎಂದು ಹೇಳಲು ಅವಳು ನಾಚಿಕೊಂಡು ಸುಮ್ಮನಿದ್ದಳು.

ಎಲ್ಲರೂ ಸುಮ್ಮನಿರುವುದನ್ನು ಕಂಡು, ವಲ್ಲಭದೇವನು ತಂದೆಯನ್ನು ಕುರಿತು "ಅಪ್ಪಾ ನಿನ್ನ ಇಷ್ಟಪ್ರಕಾರ ವೀರಸಿಂಹರು ಬಂದಿದ್ದಾರೆ; ಅವರ ವಿಷಯದಲ್ಲಿ ನಿಮಗೆ ಅನ್ಯಥಾಭಾವವಿರುವಂತಿದೆ. ಆ ಭಾವವಿಲ್ಲವೆಂದು ನೀವು ಅವರಿಗೆ ತಿಳಿಸಬೇಕು''ಎಂದನು. ಮಗನು ಈ ಮಾತನ್ನಾಡಿದಕೂಡಲೇ ವೃದ್ಧನಿಗೆ ಕೋಪಬಂದು ಅವನನ್ನು ದುರದುರನೆ ನೋಡಿ, ಅನಂತರ ಮೊಮ್ಮಗಳನ್ನೂ ಅಲ್ಲಿ ಗೋಡೆಯಲ್ಲಿ ಒಂದು ಕಡೆ ಸಿಕ್ಕಿಸಿದ್ದ ಬೀಗದಕೈಯನ್ನೂ ನೋಡಿದನು. ಚತುರೆಯಾದ ವಿಮಲೆಯು ಅವನ ಇಂಗಿತವನ್ನು ಅರಿತು ಬೀಗದಕೈಯನ್ನು ತೆಗೆದುಕೊಂಡು ತಾತನ ಮುಖವನ್ನು ನೋಡಲು, ಅವನ ದೃಷ್ಟಿಯು ಮೇಜಿನಮೇಲೆ ಇದ್ದ ಕೈಪೆಟ್ಟಿಗೆಯ ಮೇಲೆ ಬಿದ್ದಿತು. ಆ ಪೆಟ್ಟಿಗೆಯನ್ನು ತೆಗೆಯಲೋ ಎಂದು ಅವಳು ಕೇಳಲು, ಅವನು ''ಹುಂ''ಎಂದನು.

ಬೀಗವನ್ನು ಬಿಚ್ಚಿ ನೋಡಲು ಪೆಟ್ಟಿಗೆಯಲ್ಲಿ ಕೆಲವು ಕಾಗದದ ಕಟ್ಟುಗಳು ಇದ್ದುವು. ಅವುಗಳನ್ನು ಒಂದೊಂದಾಗಿ ಮುದುಕನಿಗೆ ತೋರಿಸಿದಾಗ ಅವನು ತನಗೆ ಬೇಕಾದುದು ಅವುಗಳಲ್ಲಿಲ್ಲವೆಂದು ಸೂಚಿಸಿದನು.

"ಅಜ್ಜಾ, ಈ ಪೆಟ್ಟಿಗೆಯಲ್ಲಿ ಇನ್ನಾವುದೂ ಇಲ್ಲ" ಎಂದು ಅವಳು ಹೇಳಲು ವೃದ್ಧನು ನಿಘಂಟನ್ನು ನೋಡಿದನು. ಆ ಪುಸ್ತಕವನ್ನು ತೆಗೆದು ಒಂದೊಂದು ಅಕ್ಷರವನ್ನು ಹೇಳುತ್ತ ಹ ಎಂಬ ಅಕ್ಷರವನ್ನು ಹೇಳಿದ ಕೂಡಲೇ ತಾತನಿಗೆ ಬೇಕಾದುದು ಅದೇ ಎಂದು ತಿಳಿದು ಪೂರ್ವದಲ್ಲಿ ಹೇಳಿದ ಕ್ರಮದಲ್ಲಿಯೇ ನಿಘಂಟನ್ನು ಬಿಚ್ಚಿ ವೃದ್ಧನ ಮುಂದೆ ಇಡಲು, ಅವನ ದೃಷ್ಟಿಯು ಹರಿದಾಸ ಎಂಬ ಪದದ ಮೇಲೆ ಸ್ಥಿರವಾಗಿ ನಿಂತಿತು. ಆಗ ವಿಮಲೆಯು "ಓಹೋ! ಹರಿದಾಸನನ್ನು ಕರೆಯಬೇಕೋ" ಎಂದು ಹೇಳಿ, ಅವನನ್ನು ಕರೆದು ಆ ಪೆಟ್ಟಿಗೆಯನ್ನು ಅವನ ಕೈಯಲ್ಲಿ ಕೊಟ್ಟು "ಇದರಲ್ಲಿ ಯಾವುದೂ ಇಲ್ಲ, ಆದರೂ ತಾತನು ಅದನ್ನೇ ನೋಡುತ್ತಿದ್ದಾನೆ; ಇದರಲ್ಲಿ ಇನ್ನೇನಿದೆ, ನೋಡು" ಎಂದಳು.

ಹರಿದಾಸನು ಅನೇಕ ಸಾರಿ ಅದರಲ್ಲಿದ್ದ ಅಂತರಂಗದ ಅರೆಯನ್ನು ತನ್ನ ಯಜಮಾನನು ತೆಗೆದುಹಾಕುತ್ತಿದ್ದುದನ್ನು ನೋಡಿದ್ದನಾದುದರಿಂದ, ಅದರಲ್ಲಿರುವುದು ಬೇಕೋ ಎಂದು ವೃದ್ಧನನ್ನು ಕೇಳಲು, ಅವನು "ಹುಂ" ಎಂದನು. ಪೆಟ್ಟಿಗೆಯ ಒಂದು ಮೂಲೆಯಲ್ಲಿಟ್ಟಿದ್ದ ಕಮಾನನ್ನು ಒತ್ತಲು ತಳದ ಹಲಗೆ

ಯಂತಿದ್ದುದು ಮೇಲಕ್ಕೆ ಎದ್ದಿತು. ಅದರ ಅಡಿಯಲ್ಲಿ ನಾಲ್ಕೈದು ಕಾಗದಗಳ ಒಂದು ಸಣ್ಣ ಕಟ್ಟು ಇದ್ದಿತು. ಅವನ್ನು ತೆಗೆದು "ಇದನ್ನು ಯಾರಿಗೆ ಕೊಡಲಿ? ವಲ್ಲಭದೇವರಿಗೋ" ಎಂದನು.

"ಬೇಡ"

"ವಿಮಲೆಗೆ ಕೊಡಲೋ?"

"ಬೇಡ."

"ವೀರಸಿಂಹನಿಗೆ ಕೊಡಲೋ?"

"ಹುಂ."

ಅದನ್ನು ಕೇಳಿ ವೀರಸಿಂಹನು ಆಶ್ಚರ್ಯಯುಕ್ತನಾಗಿ

"ನನಗೆ!"

"ಅಹುದು" ಎಂದು ವೃದ್ಧನು ಹೇಳಲು, ಅದನ್ನು ವೀರಸಿಂಹನು ತೆಗೆದುಕೊಂಡು

"ಏನು ಮಾಡಲಿ? ಓದಲೋ?" ಎಂದು ಕೇಳಿದನು.

"ಹುಂ"

ವೀರಸಿಂಹನು ಆ ಕಟ್ಟನ್ನು ಬಿಚ್ಚಿ ಓದಲಾರಂಭಿಸಿದನು.

"ಒಂದಾನೊಂದು ದಿನ ಏಲಾದ್ವೀಪದಿಂದ ರಾಜ್ಯಪರಿವರ್ತನೆಗಾಗಿ ನಾವು ಮಾಡಿಕೊಂಡಿದ್ದ ಸಮಾಜದ ಅಧ್ಯಕ್ಷರಿಗೆ ಒಂದು ಲೇಖನವು ಬಂದಿತು. ಅದರಲ್ಲಿ ಹಿಂದೆ ಹತ್ತು ವರ್ಷಗಳು ಚಕ್ರವರ್ತಿಯ ಸೇವೆಯನ್ನು ಮಾಡುತ್ತಿದ್ದು ಈಗ ರಾಜನ ಸೇನಾನಾಯಕರಾದ ವೀರಪ್ರಚಂಡರೆಂಬುವರು ರಾಜನಿಂದ ಅನೇಕ ಬಿರುದುಗಳನ್ನೂ ಜಹಗೀರಿಗಳನ್ನೂ ಪಡೆದಿದ್ದರೂ ಚಕ್ರವರ್ತಿಯ ಪಕ್ಷವನ್ನು ಅವಲಂಬಿಸುವುದರಲ್ಲಿ ತುಂಬ ಆಸಕ್ತರಾಗಿದ್ದಾರೆಂದು ಬರೆದಿದ್ದಿತು. ಅವರು ನಮ್ಮ ಸಮಾಜಕ್ಕೆ ಸೇರಿದರೆ ಬಹು ಅನುಕೂಲವೆಂದು ಸಾಮಾಜಿಕರೆಲ್ಲರೂ ಯೋಚಿಸಿ, ವೈಶಾಖ ಶುದ್ಧ ಪಂಚಮೀ ರಾತ್ರಿ ಹತ್ತು ಗಂಟೆಗೆ ಎಲ್ಲರೂ ಸೇರುವುದಾಗಿ ಏರ್ಪಾಡುಮಾಡಿ, ಅಂದು ಅವರನ್ನೂ ಕರೆದುಕೊಂಡು ಬರುವಂತೆ ಅಧ್ಯಕ್ಷರನ್ನು ಪ್ರಾರ್ಥಿಸಿದರು. ಅಧ್ಯಕ್ಷರು ಚೌತಿಯ ದಿನವೇ ವೀರಪ್ರಚಂಡರಿಗೆ ಒಂದು ಲೇಖನವನ್ನು ಬರೆದರು. ಆ ಲೇಖನದಲ್ಲಿ ಈ ರೀತಿ ಬರೆದಿದ್ದಿತು :—

“ ಸ್ವಾಮೀ, ತಾವು ನಮ್ಮ ಸಮಾಜಕ್ಕೆ ಸೇರಲು ಆಸಕ್ತರಾಗಿದ್ದೀರೆಂದು ನಮಗೆ ಏಲಾದ್ವೀಪದಿಂದ ಪತ್ರವು ಬಂದಿದೆ. ನಾಳೆ ರಾತ್ರಿ ಒಂಭತ್ತು ಗಂಟೆಗೆ ತಾವು ಸಿದ್ಧವಾಗಿದ್ದರೆ ನಮ್ಮಲ್ಲಿ ಕೆಲವರು ಬಂದು ತಮ್ಮನ್ನು ಸಮಾಜಕ್ಕೆ ಕರೆದುಕೊಂಡು ಹೋಗುತ್ತಾರೆ. ನಮ್ಮ ಸಮಾಜವು ಯಾವಾಗಲೂ ರಾತ್ರಿ ಹತ್ತು ಗಂಟೆಯಿಂದ ಹನ್ನೆರಡು ಗಂಟೆಯವರೆಗೆ ಸೇರುತ್ತದೆ. ಅದು ಸೇರುವ ಸ್ಥಳ ಸಾಮಾಜಿಕರಿಗೆ ವಿನಾ ಮತ್ತಾರಿಗೂ ಗೊತ್ತಿಲ್ಲ. ಇದರಲ್ಲಿ ಊರು, ತಾರೀಖು, 'ಹೆಸರು ಯಾವುದೂ ಬರೆದಿಲ್ಲ. ಅದಕ್ಕೆ ಕಾರಣವನ್ನು ತಾವು ಊಹಿಸಬಹುದು.'

“ ಪಂಚಮಿಯದಿನ ರಾತ್ರಿ ಒಂಭತ್ತು ಗಂಟೆಗೆ ಸರಿಯಾಗಿ ಸಮಾಜದ ಅಧ್ಯಕ್ಷರೂ ಅವರ ಜತೆಯಲ್ಲಿ ಇಬ್ಬರು ಸಾಮಾಜಿಕರೂ ಒಂದು ಬಂಡಿಯಲ್ಲಿ ಕುಳಿತು ವೀರಪ್ರಚಂಡರ ಮನೆಗೆ ಹೋಗಿ, ಅವರನ್ನು ಕಂಡು ‘ ಸ್ವಾಮೀ, ತಾವು ನಮ್ಮ ಸಮಾಜಕ್ಕೆ ಅಭಿಮಾನಿಗಳೆಂದು ತಿಳಿದು, ಇಂದು ಸಾಮಾಜಿಕರೆಲ್ಲರೂ ಸೇರುವುದರಿಂದ ತಮ್ಮನ್ನು ಕರೆದುಕೊಂಡು ಹೋಗಬೇಕೆಂದು ಬಂದಿದ್ದೇವೆ. ತಮಗೆ ಇಷ್ಟವಾದರೆ ಬಿಜಯಮಾಡಿಸಿ. ನಾವು ಸೇರುವ ಸ್ಥಳ ಯಾರಿಗೂ ತಿಳಿಯದೆ ಇರಬೇಕೆಂದು ಹೊಸದಾಗಿ ಸೇರುವವರ ಕಣ್ಣು ಕಟ್ಟಿ ನಾವು ಹೇಳುವವರೆಗೆ ಆ ಕಟ್ಟನ್ನು ಬಿಚ್ಚುವುದಿಲ್ಲವೆಂದು ಪ್ರಮಾಣ ಮಾಡಿಸಿಕೊಳ್ಳುವ ನೇಮವುಂಟು. ಆ ನೇಮದಂತೆ ನಡೆಯಲು ತಾವು ಒಪ್ಪುವಿರೋ?’ ಎಂದು ಅಧ್ಯಕ್ಷರು ಕೇಳಲು, ಅವರು ‘ ಹಾಗೆಯೇ ಆಗಲಿ ’ ಎಂದು ಒಪ್ಪಿದರು.

“ ಹೊರಡುವ ಮುಂದೆ ವೀರಪ್ರಚಂಡರು ತಮ್ಮ ಬಂಡಿಯನ್ನು ಹೂಡುವಂತೆ ಹೇಳಿದರು. ಆಗ ಅಧ್ಯಕ್ಷರು ‘ ಸ್ವಾಮೀ, ನಿಮ್ಮ ಬಂಡಿಯಲ್ಲಿ ನೀವು ಬರುವುದಾದರೆ ನಿಮ್ಮ ಕಣ್ಣು ಕಟ್ಟಿ ಏನು ಪ್ರಯೋಜನ ? ಅದು ಕೂಡದು. ನಮ್ಮ ಬಂಡಿಯಲ್ಲಿಯೇ ತಾವು ಬಿಜಯಮಾಡಿಸಬೇಕು ’ ಎಂದರು. ಅದಕ್ಕವರು ‘ ನನ್ನ ಸಾರಥಿಯನ್ನು ನಂಬದಿದ್ದರೆ ನಿಮ್ಮ ಸಾರಥಿಯನ್ನು ಹೇಗೆ ನಂಬುತ್ತೀರಿ ’ ಎಂದು ಕೇಳಲು, ಅಧ್ಯಕ್ಷರು ‘ ನಮ್ಮ ಸಾರಥಿಯು ಒಬ್ಬ ಸಾಮಾಜಿಕರು ’ ಎಂದರು. ‘ ಹಾಗಾದರೆ ಇಂದು ನಮ್ಮ ಬಂಡಿಯು ತಲೆ ಕೆಳಗಾಗುವ ಪ್ರಾಪ್ತಿಯಿದೆ ’ ಎಂದು ವೀರಪ್ರಚಂಡರು ಹಾಸ್ಯಮಾಡುತ್ತ ಅಧ್ಯಕ್ಷರ ಜತೆಯಲ್ಲಿ ಬಂಡಿಯಲ್ಲಿ ಕುಳಿತರು. ಅವರು ಮನಃಪೂರ್ವಕ

ವಾಗಿಯೇ ನಮ್ಮ ಜ್ಞಾತಿಯಲ್ಲಿ ಬಂದರೆಂಬುದನ್ನು ಸೂಚಿಸಲು ಈ ವಿನೋದದ ಮಾತನ್ನು ಇಲ್ಲಿ ಬರೆದಿದ್ದೇವೆ. ಬಂಡಿಯಲ್ಲಿ ಕುಳಿತ ಕೂಡಲೇ ಅವರ ಅನುಮತಿಯನ್ನು ಪಡೆದು ಅಧ್ಯಕ್ಷರು ಅವರ ಕಣ್ಣು ಕಟ್ಟಿದರು. ಮಧ್ಯೆ ಮಧ್ಯೆ ಕಟ್ಟನ್ನು ಕೀಳಲು ವೀರಪ್ರಚಂಡರು ಪ್ರಯತ್ನಪಟ್ಟಾಗ, ಅವರು ಮಾಡಿದ ಪ್ರಮಾಣವನ್ನು ಅಧ್ಯಕ್ಷರು ಜ್ಞಾಪಿಸಿದುದಕ್ಕೆ ಅವರು 'ನಿಶ್ಚಯ, ನಿಶ್ಚಯ' ಎಂದು ಸುಮ್ಮನಾಗುತ್ತಿದ್ದರು.

"ಬಂಡಿಯು ಸಂಕೇತಸ್ಥಾನವನ್ನು ಸೇರುವ ಹೊತ್ತಿಗೆ ಮಿಕ್ಕ ಸಾಮಾಜಿಕರೆಲ್ಲರೂ ಸೇರಿದ್ದರು. ವೀರಪ್ರಚಂಡರನ್ನು ಆ ಸಭೆಯ ಮಧ್ಯೆ ಕರೆದು ಕೊಂಡು ಹೋಗಿ ನಿಲ್ಲಿಸಿ 'ಸ್ವಾಮೀ, ಈಗ ತಾವು ಕಣ್ಣು ಕಟ್ಟನ್ನು ತೆಗೆಯಬಹುದು' ಎಂದು ಅಧ್ಯಕ್ಷರು ಹೇಳಿದ ಒಡನೆಯೇ ಅವರು ಅದನ್ನು ತೆಗೆದು ಸುತ್ತ ನೋಡಿ, ತಮಗೆ ಪರಿಚಯವಿದ್ದವರು ಅನೇಕರು ಅಲ್ಲಿದ್ದುದನ್ನು ಕಂಡು ಆಶ್ಚರ್ಯಪಟ್ಟು ನಗುತ್ತ ನಿಂತರು.

"ಆಗ ಸಾಮಾಜಿಕರೆಲ್ಲರೂ ಎದ್ದು ನಿಂತು 'ಸ್ವಾಮೀ ವೀರಪ್ರಚಂಡರೇ, ನಿಮ್ಮ ಅಭಿಪ್ರಾಯವೇನು ?' ಎಂದು ಕೇಳಲು, ಅವರು ,ಏಲಾದ್ವೀಪದಿಂದ ನಿಮಗೆ ಬಂದಿರುವ ಲೇಖನದಿಂದಲೇ ಅದು ನಿಮಗೆ ವ್ಯಕ್ತವಾಗಿದೆ' ಎಂದರು. ಆಗ ಅಧ್ಯಕ್ಷರು 'ನಿಮ್ಮ ಅಭಿಪ್ರಾಯವನ್ನು ಸಾಮಾಜಿಕರಿಗೆ ನೀವೇ ತಿಳಿಸಿ' ಎನ್ನಲು, ಅವರು 'ಈ ಸಮಾಜಕ್ಕೆ ಸೇರಿದರೆ ನಾನು ಏನು ಮಾಡಬೇಕು ?' ಎಂದರು. ಆಗ ಏಲಾದ್ವೀಪದಿಂದ ಬಂದಿದ್ದ ಲೇಖನದಲ್ಲಿದ್ದ ಸಂಗತಿಗಳನ್ನು ಅವರಿಗೆ ಓದಿ ಹೇಳಲು, 'ನಾನು ಪಕ್ಷಕ್ಕೆ ಸೇರಿದುದರಿಂದ, ರಾಜ್ಯಭ್ರಷ್ಟನಾದ ಆ ರಾಕ್ಷಸನ ಪಕ್ಷಕ್ಕೆ ಎಂದಿಗೂ ಸೇರುವುದಿಲ್ಲ' ಎಂದು ಅವರು ಅಂದರು. 'ಹಾಗಾದರೆ, ಏಲಾದ್ವೀಪದವರು ನಿಮ್ಮ ವಿಷಯದಲ್ಲಿ ಮೋಸಹೋದರೆಂದು ಭಾವಿಸಬೇಕಾಗುತ್ತದೆ. ನಿಮ್ಮಲ್ಲಿ ನಂಬುಗೆಯನ್ನಿಟ್ಟು ನಿಮ್ಮನ್ನು ಇಲ್ಲಿಗೆ ಕರೆದುಕೊಂಡು ಬಂದೆವು. ಈ ಸಮಾಜಕ್ಕೆ ಸೇರಬೇಕೆಂದು ನಿಮ್ಮನ್ನು ನಾವು ಎಂದಿಗೂ ಬಲಾತ್ಕರಿಸುವುದಿಲ್ಲ; ಆದರೆ ಸೇರುತ್ತೇವೆಂದು ಹೇಳಿ ನಮ್ಮ ಗುಟ್ಟನ್ನು ತಿಳಿದುಕೊಂಡು ಸೇರದೆ ಇರುವವರನ್ನು ಉದಾರ ಮನಸ್ಸುಳ್ಳವರಾಗಿರಬೇಕೆಂದು ಬಲಾತ್ಕರಿಸುತ್ತೇವೆ.' 'ಹಾಗೆಂದರೇನು ? ಈ ಒಳಸಂಚನ್ನು ತಿಳಿದು ಸರ್ಕಾರಕ್ಕೆ ತಿಳಿಯಪಡಿಸದೆ ಇರುವುದೋ ಉದಾರಮನಸ್ಸು?

"ವೀರಪ್ರಚಂಡರು ಹೀಗೆನ್ನುತ್ತಲೆ ಸಾಮಾಜಿಕರಿಗೆ ಅಸಮಾಧಾನ ಗೊಣಗುಟ್ಟಲಾರಂಭಿಸಿದರು. ಅಧ್ಯಕ್ಷರು ಅವರನ್ನು ಸುಮ್ಮನಿರುವಂತೆ ಹೇಳಿ ವೀರಪ್ರಚಂಡರನ್ನು ಕುರಿತು 'ಸ್ವಾಮೀ, ತಾವು ಈ ಸಮಾಜಕ್ಕೆ ಸೇರಲು ಇಷ್ಟವಿಲ್ಲದಿದ್ದರೆ ಇಲ್ಲಿಗೆ ಬರಬಾರದಾಗಿದ್ದಿತು. ಸೇರುವ ಅಭಿಪ್ರಾಯವನ್ನು ತೋರಿಸಿ, ಇಲ್ಲಿ ಬಂದು ನಮ್ಮ ಗುಟ್ಟನ್ನು ತಿಳಿದು, ಅದರ ಮೇಲೆ ನಮಗೆ ಅವಮಾನಪಡಿಸಿದಿರಲ್ಲ. ಇದಕ್ಕೆ ಪ್ರತೀಕಾರವೇನು ಬಲ್ಲಿರಾ' ಎಂದರು. ಅದನ್ನು ಕೇಳಿ ವೀರಪ್ರಚಂಡರು ತಮ್ಮ ಸೊಂಟಕ್ಕೆ ಕಟ್ಟಿದ್ದ ಕತ್ತಿಗೆ ಕೈಹಾಕಿದರು. ಒಡನೆಯೇ ಸಾಮಾಜಿಕರೆಲ್ಲರೂ ತಮ್ಮ ತಮ್ಮ ಆಯುಧಗಳಿಗೆ ಕೈಹಾಕಿದರು. ಸುಮ್ಮನಿದ್ದರೆ ವಿಪರೀತಕ್ಕಿಡುವುದೆಂದು ಅಧ್ಯಕ್ಷರು ಸಾಮಾಜಿಕರೆಲ್ಲರನ್ನೂ ಸಮಾಧಾನಪಡಿಸಿ, ವೀರಪ್ರಚಂಡರನ್ನು ಕುರಿತು 'ಸ್ವಾಮೀ, ಆಯುಧಕ್ಕೆ ಕೈಹಾಕಬೇಡಿರಿ, ಪ್ರಯೋಜನವಿಲ್ಲ; ನಮ್ಮ ಗುಟ್ಟನ್ನು ತಿಳಿದ ಮೇಲೆ ಅದನ್ನು ಹೊರಗೆ ಯಾರಿಗೂ ಹೇಳುವುದಿಲ್ಲವೆಂದು ಪ್ರಮಾಣಮಾಡಿದರೆ ನೀವು ಇಲ್ಲಿಂದ ಆಚೆಗೆ ಹೋಗಬಹುದು' ಎಂದರು."

ವೀರಸಿಂಹನು ಉಕ್ಕಿಬಂದ ದುಃಖವನ್ನು ತಡೆಯಲಾರದೆ "ಹಾ! ತಂದೆಯೇ! ಏತಕ್ಕೆ ನಿನ್ನನ್ನು ಕೊಂದರೆಂದು ನನಗೆ ಈಗ ಗೊತ್ತಾಯಿತು" ಎಂದು ಸಂಕಟಪಟ್ಟನು. ವಿಮಲೆಯು ಕನಿಕರದಿಂದ ಅವನನ್ನು ನೋಡುತ್ತಿದ್ದಳು; ವಲ್ಲಭದೇವನು ಎದ್ದು ಶತಪಥವನ್ನು ಮಾಡತೊಡಗಿದನು. ವೀರಸಿಂಹನು ಪುನಃ ಓದಲಾರಂಭಿಸಿದನು :—

"'ನಾನು ಎಂದಿಗೂ ಪ್ರಮಾಣ ಮಾಡುವುದಿಲ್ಲ'ವೆಂದು ವೀರಪ್ರಚಂಡರು ಹೇಳಲು, ಅಧ್ಯಕ್ಷರು 'ನೀವು ಪ್ರಮಾಣ ಮಾಡದಿದ್ದರೆ ನಿಮ್ಮನ್ನು ಹೊರಗೆ ಬಿಡುವುದಿಲ್ಲ' ಎಂದು ಹೇಳಿ ದ್ವಾರಪಾಲಕರಾಗಿದ್ದ ಸಾಮಾಜಿಕರನ್ನು ಕುರಿತು 'ಬಾಗಿಲುಗಳನ್ನು ಭದ್ರಪಡಿಸಿರಿ' ಎಂದರು. ಆಗ ವೀರಪ್ರಚಂಡರು 'ನೀವು ಗೌರವಸ್ಥರಂತೆ ತೋರುವುದಿಲ್ಲ; ಕೊಲೆಗಾರರೆಂದು ಕಾಣುತ್ತದೆ. ನನಗೆ ಒಬ್ಬ ಮಗನಿದ್ದಾನೆ; ಅವನಿಗಾಗಿ ಸ್ವಲ್ಪ ಯೋಚನೆ ಮಾಡುತ್ತೇನೆ. ಇಲ್ಲದಿದ್ದರೆ—' ಎಂದು ಹೇಳಿ ಮುಗಿಸುವುದರೊಳಗಾಗಿಯೇ ಅಧ್ಯಕ್ಷರು ಕುಪಿತರಾಗಿ 'ಸ್ವಾಮೀ, ಇಷ್ಟುಜನ ದೊಡ್ಡಮನುಷ್ಯರನ್ನು ನಿಂದಿಸಿ ಅಪಮಾನ ಮಾಡುವುದು ತಮಗೆ ತಕ್ಕುದಲ್ಲ. "ದುರ್ಬಲಸ್ಯ ಬಲಂ ನಿಂದಾ" ಎಂಬಂತೆ

ದುರ್ಬಲರಿಗೆ ಬಯ್ಗುಳೇ ಬಲ. ಹೀಗೆಲ್ಲ ಬಯ್ದರೆ ಮುಂದೆ ನಿಮ್ಮ ಗತಿ ಏನಾಗುವುದೋ ಯೋಚಿಸಿ. ನೀವು ವಿವೇಕಶಾಲಿಗಳಾದರೆ ನಾನು ಹೇಳು ವಂತೆ ಪ್ರಮಾಣ ಮಾಡಿ ನೆಮ್ಮದಿಯಾಗಿ ಮನೆಗೆ ಹೋಗಿ' ಎಂದರು. ವೀರಪ್ರಚಂಡರು ಅನುಮಾನಿಸಿ ಕೊನೆಗೆ 'ಏನು ಪ್ರಮಾಣಮಾಡಬೇಕು' ಎಂದು ಕೇಳಲು, ಅಧ್ಯಕ್ಷರು 'ಈ ದಿನ ರಾತ್ರಿ ಒಂಬತ್ತು ಗಂಟೆಯಿಂದ ಹತ್ತು ಗಂಟೆಯವರೆಗೆ ನಾನು ಇಲ್ಲಿ ಬಂದು ನೋಡಿದುದನ್ನೆ ಆಗಲಿ, ಕೇಳಿದುದನ್ನೇ ಆಗಲಿ ದೇವರಾಣೆಗೂ ಯಾರೊಂದಿಗೂ ಹೇಳುವುದಿಲ್ಲ. ಇದಕ್ಕೆ ನನ್ನ ಪ್ರಾಣವೇ ಹೊಣೆ ಎಂದು ಪ್ರಮಾಣ ಮಾಡಿದರೆ ಸಾಕು' ಎಂದು ತಿಳಿಸಿದರು.

"ಆ ರೀತಿಯೇ ಪ್ರಮಾಣ ಮಾಡಿ ವೀರಪ್ರಚಂಡರು 'ಇನ್ನು ನಾನು ಹೋಗಬಹುದೋ' ಎಂದು ಕೇಳಲು, ಅಧಕ್ಷರು ಪೂರ್ವದಂತೆಯೇ ಕಣ್ಣುಕಟ್ಟಿ ಅವರನ್ನು ಕರೆದುಕೊಂಡು ಬಂದಿದ್ದ ಬಂಡಿಯಲ್ಲಿಯೇ ತಮ್ಮ ಜತೆಯಲ್ಲಿ ಕುಳ್ಳಿರಿಸಿಕೊಂಡು ಹೊರಟರು. ನದಿಯ ದಡದ ಬಯಲಿಗೆ ಬಂದಾಗ ಅಧ್ಯಕ್ಷರು 'ಸ್ವಾಮೀ, ತಮ್ಮನ್ನು ಎಲ್ಲಿ ಬಿಡಬೇಕು' ಎಂದು ಕೇಳಿದುದಕ್ಕೆ ಅವರು 'ನೀವು ಇಲ್ಲದ ಕಡೆ ಎಲ್ಲಿ ಬಿಟ್ಟರೂ ಸರಿ' ಎಂದರು.

"'ಸ್ವಾಮೀ, ಇದು ಸಮಾಜವಲ್ಲ; ಅಲ್ಲಿ ನಾವು ಐವತ್ತು ಜನಗಳಿದ್ದು ತಾವು ಒಬ್ಬರಾಗಿದ್ದುದರಿಂದ ತಾವು ಬೈದರೂ ಸುಮ್ಮನಿದ್ದೆವು, ಈಗ ನಮ್ಮಿಬ್ಬರ ಮಾತು. ತಾವು ಮರ್ಯಾದೆ ಮೀರಿ ಮಾತನಾಡಿ ಅಪಮಾನಪಡಿಸಿದರೆ ಅದರ ಫಲವನ್ನು ಈಗಲೇ ಅನುಭವಿಸಬೇಕಾದೀತು'. ಎಂದರು.

'ನೀವು ನಾಲ್ವರು ಇರುವುದರಿಂದ ನಿಮಗೆ ಇಷ್ಟು ಗರ್ವ; ಇಲ್ಲದಿದ್ದರೆ–' ಎಂದು ವೀರಪ್ರಚಂಡರು ಹೇಳುತ್ತಲೆ, ಅಧ್ಯಕ್ಷರು 'ಏನೆಂದಿರಿ ?' ಎಂದು ಬಂಡಿಯನ್ನು ನಿಲ್ಲಿಸುವಂತೆ ಹೇಳಿದರು.

"'ಬಂಡಿಯನ್ನು ಏಕೆ ನಿಲ್ಲಿಸಿದಿರಿ' ಎಂದು ವೀರಪ್ರಚಂಡರು ಕೇಳಲು,

'ನನಗೆ ಈಗ ನೀವು ಮಾಡಿದ ಅಪಮಾನಕ್ಕೆ ತಕ್ಕ ಶಿಕ್ಷೆಮಾಡದೆ ಮುಂದೆ ಒಂದು ಹೆಜ್ಜೆಯನ್ನೂ ಇಡೆನು. ನಾವು ನಾಲ್ವರೆಂದಲ್ಲವೇ ತಾವು ಹೇಳಿದುದು? ಇಗೋ! ಅವರು ದೂರ ನಿಂತು ನೋಡುತ್ತಿರಲಿ; ತಮ್ಮ ಇದಿರಿಗೆ ನಾನೊಬ್ಬನೇ ನಿಲ್ಲುತ್ತೇನೆ. ಆ ಮೂವರೂ ನಿಂತು ನಮ್ಮ ದ್ವಂದ್ವಯುದ್ಧವನ್ನು ನೋಡುತ್ತಾರೆ. ಬನ್ನಿರಿ,'

" 'ಇದೊಂದು ವಿಧವಾದ ಕೋಲೆಯೋ' 'ಈ ಪುಡಿಮಾತುಗಳಿಂದ ಏನು ಪ್ರಯೋಜನ ? ನಿಮ್ಮ ಹೆಸರಿಗೆ ತಕ್ಕ ಶೌರ್ಯವಿದ್ದರೆ ನನ್ನ ಇದಿರಿಗೆ ನಿಲ್ಲಿ, ನಿಮ್ಮ ಬಳಿ ಒಂದು ಕತ್ತಿ ಇದೆ, ನನ್ನ ಜೆತ್ತದಲ್ಲಿ ಒಂದು ಸಣ್ಣ ಕತ್ತಿಯಿದೆ; ಅದು ಸಣ್ಣ ದಾದರೂ ಚಿಂತೆಯಿಲ್ಲ. ಈಗ ಕಣ್ಣುಕಟ್ಟನ್ನು ಬಿಚ್ಚಿರಿ' ಎಂದು ಹೇಳಿದ ಕೂಡಲೇ ವೀರಪ್ರಚಂಡರು ಅದನ್ನು ಕಿತ್ತು

" 'ನನ್ನ ಶತ್ರುವು ಯಾರೆಂಬುದನ್ನಾದರೂ ನೋಡುತ್ತೇನೆ' ಎಂದು ಅಧ್ಯಕ್ಷ ರನ್ನು ನೋಡಿ ಬಂಡಿಯಿಂದ ಇಳಿದರು."

ಇಲ್ಲಿಯವರೆಗೆ ಓದಲು ವೀರಸಿಂಹನಿಗೆ ಉಸಿರು ಹಿಡಿದಂತಾಗಿ ಮುಂದಕ್ಕೆ ಓದಲು ಸಾಗದೆ ಮುಖದ ಬೆವರನ್ನು ಒರಸಿಕೊಳ್ಳುವ ನೆಪದಿಂದ ಸ್ವಲ್ಪ ಸುಧಾ ರಿಸಿಕೊಂಡನು. ವಿಮಲೆಯು ತಾತನ ಮುಖವನ್ನು ನೋಡುತ್ತ ದುಃಖಮಿಶ್ರ ವಾದ ಆನಂದದಿಂದಿದ್ದಳು. ವಲ್ಲಭದೇವನು ಕುಳಿತಿದ್ದ ಕಡೆ ಇರಲಾರದೆ ಪುನಃ ಎದ್ದು ಶತಪಥಮಾಡತೊಡಗಿದನು. ದೀನನಾಥನು ಮಗನ ಸ್ಥಿತಿ ಯನ್ನು ನೋಡಿ ತಿರಸ್ಕಾರ ಭಾವದಿಂದ ಹಿಗ್ಗುತ್ತಿದ್ದರು. ವೀರಸಿಂಹನು ಮುಂದೆ ಓದತೊಡಗಿದನು:—

"ಎಲ್ಲರೂ ಬಂಡಿಯಿಂದ ಕೆಳಗೆ ಇಳಿದ ಬಳಿಕ ವೀರಪ್ರಚಂಡರೂ ಅಧ್ಯ ಕ್ಷರೂ ತಮ್ಮ ತಮ್ಮ ಆಯುಧಗಳನ್ನು ಹಿರಿದರು. ಜತೆಯಲ್ಲಿದ್ದ ಮೂವರು ಬಂಡಿಯಲ್ಲಿದ್ದ ದೀಪವನ್ನು ತೆಗೆದು ಆಯುಧಗಳನ್ನು ಪರೀಕ್ಷಿಸಿ ಅಧ್ಯಕ್ಷರ ಕತ್ತಿಯು ವೀರಪ್ರಚಂಡರ ಕತ್ತಿಗಿಂತ ಆರು ಅಂಗುಲಗಳು ಚಿಕ್ಕದಾಗಿರುವುದ ರಿಂದ ವೀರಪ್ರಚಂಡರಿಗೆ ಹೆಚ್ಚು ಅನುಕೂಲವೆಂದು ತಿಳಿಸಿದರು. ಅಧ್ಯಕ್ಷರು ತಮಗೆ ಅನನುಕೂಲವಾದರೂ ಚಿಂತೆಯಿಲ್ಲ ಎಂದು ಯುದ್ಧಕ್ಕೆ ಸಿದ್ಧವಾದರು.

"ಯುದ್ಧವು ಪ್ರಾರಂಭವಾಯಿತು. ಇಬ್ಬರೂ ಶೂರರಾಗಿ ಕತ್ತಿಯ ಸಾಧನೆಯಲ್ಲಿ ಸಮರ್ಥರಾಗಿ ಇದ್ದುದರಿಂದ ಬಹುಕಾಲದವರೆಗೆ ಹೆಣಗಿದರು. ದೀಪದ ಬೆಳಕಿನಲ್ಲಿ ಕತ್ತಿಗಳ ಹೊಳಪು ಮಿಂಚಿನಂತೆ ಒಂದು ಕಡೆಯಿಂದ ಮತ್ತೊಂದು ಕಡೆಗೂ, ಕೆಲವು ವೇಳೆ ಚಕ್ರಾಕಾರವಾಗಿಯೂ, ಕೆಲವು ವೇಳೆ ಸರ್ರೆಂದು ಮುಂದಕ್ಕೆ ಹೋಗಿ ಹಿಂದಕ್ಕೆ ಬರುವಂತೆಯೂ ತೋರಿತು. ವೀರ ಪ್ರಚಂಡರು ಯುದ್ಧಮಧ್ಯದಲ್ಲಿ ಕಾಲು ಜಾರಿ ನೆಲದ ಮೇಲೆ ಬಿದ್ದರು. ಆಗ ಅಧ್ಯಕ್ಷರು ಕೈಕೊಟ್ಟು ಅವರನ್ನು ನಿಲ್ಲಿಸಿ, ಐದು ನಿಮಿಷಗಳ ಅವಕಾಶ ಕೊಟ್ಟು,

ಪುನಃ ಪ್ರಾರಂಭಿಸಿದರು. ಬರಬರುತ್ತ ಯುದ್ಧವು ಘೋರವಾಯಿತು. ಇಬ್ಬರು ವೀರರಿಗೂ ಹಟವು ಹೆಚ್ಚಿ ಕೊನೆಗೆ ಇಬ್ಬರೂ ಕೆಳಗೆ ಬಿದ್ದರು. ಆಗ ಸಾಕ್ಷಿಗಳು ಬಂದು ಅವರನ್ನು ಪರೀಕ್ಷಿಸಿ ನೋಡಲು ಅಧ್ಯಕ್ಷರ ಕತ್ತಿಯು ವೀರಪ್ರಚಂಡರ ಹೃದಯವನ್ನೂ, ವೀರಪ್ರಚಂಡರ ಕತ್ತಿಯು ಅಧ್ಯಕ್ಷರ ತೋಳನ್ನೂ ಭೇದಿಸಿದ್ದುವು. ಕತ್ತಿಗಳನ್ನು ಹಿರಿದ ಕೂಡಲೇ ವೀರಪ್ರಚಂಡರ ಪ್ರಾಣವು ಹೋಯಿತು; ಅಧ್ಯಕ್ಷರಿಗೆ ಪ್ರಜ್ಞೆ ತಪ್ಪಿತು. ಐದು ನಿಮಿಷಗಳೊಳಗಾಗಿಯೇ ಅಧ್ಯಕ್ಷರು ಮೂರ್ಛೆತಿಳಿದು ಎದ್ದು ತೋಳಿಗೆ ಒಂದು ದೆಬ್ಬೆಯನ್ನು ಕಟ್ಟಿಕೊಂಡರು.

"ಇದು ಸತ್ಯವಾಗಿ ನಡೆದುದು. ಇದಕ್ಕೆ ನಾವು ಮೂವರೂ ನಮ್ಮ ಕೈಬರಹಗಳನ್ನು ಹಾಕಿದ್ದೇವೆ.

ಉಗ್ರಸೇನ.
ವೀರಸೇನ.
ಭದ್ರಸೇನ."

ಇದನ್ನೆಲ್ಲಾ ಓದಿದಮೇಲೆ, ವೀರಸಿಂಹನು ದೀನನಾಥನನ್ನು ಕುರಿತು

"ಸ್ವಾಮಿಾ, ಈ ದೊಡ್ಡ ಮನುಷ್ಯರ ಕೈಬರಹದಲ್ಲಿರುವ ವೃತ್ತಾಂತವೆಲ್ಲವೂ ತಿಳಿಯಲಾಯಿತು. ತಾವು ಈ ಕಾಗದಗಳನ್ನು ಸಂರಕ್ಷಿಸಿರುವುದನ್ನು ನೋಡಿದರೆ ಈ ಸಮಾಚಾರಗಳೆಲ್ಲವೂ ತಮಗೆ ಚೆನ್ನಾಗಿ ತಿಳಿದಿರುವಂತೆ ತೋರುತ್ತದೆ. ತಾವು ನನಗೆ ಒಂದು ಉಪಕಾರವನ್ನು ಮಾಡಿಕೊಡಬೇಕೆಂದು ಪ್ರಾರ್ಥಿಸುತ್ತೇನೆ."

"ಅದೇನು ?" ಎಂದು ವೃದ್ಧನು ಸೂಚಿಸಲು,

"ನನ್ನ ತಂದೆಯನ್ನು ಕೊಂದ ಆ ಅಧ್ಯಕ್ಷರು ಯಾರು ? ಅವರ ಹೆಸರು ತಿಳಿದರೆ ನನ್ನ ಮನಸ್ಸು ತೃಪ್ತಿಯನ್ನು ಹೊಂದುವುದು."

ವೀರಸಿಂಹನು ಈ ಮಾತನ್ನು ಕೇಳುತ್ತಲೇ ವಲ್ಲಭದೇವನು ಮುಚ್ಚಿದ ಬಾಗಿಲ ಸಮಿಾಪವನ್ನು ಸೇರಿದನು. ತಾತನ ತೋಳಿನಲ್ಲಿದ್ದ ಕತ್ತಿಯ ಗಾಯದ ಗುರುತನ್ನು ನೋಡಿದ್ದ ವಿಮಲೆಯು ಏನನ್ನೋ ಹುಡುಕುವಳಂತೆ ನಟಿಸುತ್ತಲಿದ್ದಳು. ಹೊರಗೆ ಹೋಗಬೇಕೆಂದು ಹೊರಟಿದ್ದ ವಲ್ಲಭದೇವನು ವೀರಸಿಂಹನನ್ನು ಕುರಿತು

"ಸ್ವಾಮಿ, ಆ ಹೆಸರನ್ನು ಹೇಳಬಾರದೆಂದೇ ಈ ವೃತ್ತಾಂತದಲ್ಲಿ ಅದನ್ನು ಬಿಟ್ಟು ಇದೆ; ಬಹುಶಃ ನಮ್ಮಪ್ಪನಿಗೂ ಅದು ತಿಳಿದಿರಲಾರದು. ಅದನ್ನು ಕೇಳಿ ಏನು ಪ್ರಯೋಜನ ?"

"ಏನು ಸ್ವಾಮಿ ದೀನನಾಥರೇ, ಆ ಹೆಸರು ತಮಗೆ ಗೊತ್ತಿಲ್ಲವೇ ?"

"ಹುಂ" ಎಂದು ವೃದ್ಧನು ಹೇಳಲು, ವೀರಸಿಂಹನು ವಿಮಲೆಯನ್ನು ಕುರಿತು

"ಅಮ್ಮಾ, ನೀನು ದಯೆಮಾಡಿ ಸಹಾಯಮಾಡು" ಎಂದು ಬೇಡಿದನು. ವೃದ್ಧನು ನಿಘಂಟನ್ನು ನೋಡಲು ವೀರಸಿಂಹನು ಅತ್ಯಾತುರದಿಂದ ತಾನೇ ಅದನ್ನು ತಂದು ಕ್ರಮಪ್ರಕಾರ ಅಕ್ಷರಗಳನ್ನು ಹೇಳಿ ನಿಘಂಟನ್ನು ಬಿಚ್ಚಿ ವೃದ್ಧನ ಮುಂದೆ ಇಟ್ಟು ಅವನ ದೃಷ್ಟಿಯು "ನಾನು" ಎಂಬ ಪದದ ಮೇಲೆ ನಿಲ್ಲಲು "ತಾವೆಯೋ ?" ಎಂದು ಕೇಳಿದನು. ವೃದ್ಧನು ಅಹುದೆಂದು ಸೂಚಿಸಿದನು.

ವೀರಸಿಂಹನಿಗೆ ಅದುವರೆಗೆ ಇದ್ದ ಪ್ರಾಣವು ತಪ್ಪಿ ಕುರ್ಚಿಯ ಮೇಲೆ ದೊಪ್ಪೆಂದು ಬಿದ್ದನು. ವಲ್ಲಭದೇವನಿಗೆ ಅಪ್ಪನ ಕುತ್ತಿಗೆಯನ್ನು ಕಿವಿಚಿ ಅವನಿಗಿದ್ದ ಅರ್ಧಜೀವವನ್ನೂ ತೆಗೆಯಬೇಕೆಂಬಷ್ಟು ಕೋಪಬಂದು, ಅಲ್ಲಿ ನಿಂತರೆ ಅಭಾಸವಾದೀತೆಂದು ಬಾಗಿಲನ್ನು ತೆರೆದುಕೊಂಡು ಆಚೆಗೆ ಓಡಿ ಹೋದನು. ವಿಮಲೆಯು ತನ್ನ ಕೋಣೆಯನ್ನು ಸೇರಿ ತಾತನಿಂದ ತನಗುಂಟಾದ ಸಹಾಯಕ್ಕಾಗಿ ದೇವರನ್ನು ಸ್ತೋತ್ರಮಾಡಿದಳು.

★

............ಮುಂದಿನ ಕಥೆಯು ಮೂರನೆಯ ಭಾಗದಲ್ಲಿ ಮುಕ್ತಾಯವಾಗುವುದು.

# ಅಶೋಕ ಸಾಹಿತ್ಯ—ಬೆಂಗಳೂರು

## ನಮ್ಮ ಇತರ ಪುಸ್ತಕಗಳು

---

**ಕೆ. ಎಸ್. ನರಸಿಂಹಸ್ವಾಮಿಯವರ**

| | | | |
|---|---|---|---|
| ಮೈಸೂರ ಮಲ್ಲಿಗೆ ...... ...... | 1 | 8 | 0 |
| ಮೈಸೂರ ಮಲ್ಲಿಗೆ ಉತ್ತಮ ಪ್ರತಿ ...... | 2 | 4 | 0 |

**ಅ. ನ. ಕೃಷ್ಣರಾಯರ**

| | | | |
|---|---|---|---|
| ಅರುಳು ಮರುಳು ...... ... | 2 | 0 | 0 |
| ಚಿತ್ರವಿಚಿತ್ರ ...... ...... | 2 | 8 | 0 |
| ಶ್ರೀಮತಿ ...... ...... | 2 | 12 | 0 |
| ಅಮರ ಆಗಸ್ಟ್ ...... ...... | 1 | 4 | 0 |
| ಜೀವನ ಯಾತ್ರೆ ...... ...... | 1 | 4 | 0 |
| ಅಗ್ನಿ ಕನ್ಯೆ ...... ...... | 1 | 4 | 0 |
| ಮಿಂಚು ...... ...... | 1 | 0 | 0 |
| ಕಿಡಿ ...... ...... | 1 | 0 | 0 |
| ಶಿಲ್ಪಿ ...... ...... | 1 | 0 | 0 |
| ರಜಪೂತಲಕ್ಷ್ಮಿ ...... ...... | 1 | 4 | 0 |
| ಮದುವೆಯೋ ಮನೆಹಾಳೋ ...... | 1 | 0 | 0 |
| ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ...... | 1 | 8 | 0 |
| ಸಾಹಿತ್ಯ ಮತ್ತು ಯುಗಧರ್ಮ ...... | 2 | 0 | 0 |
| ಕನ್ನಡ ಕುಲ ರಸಿಕರು ...... ...... | 2 | 8 | 0 |
| ಕರ್ನಾಟಕದ ಕಲಾವಿದರು ...... | 3 | 0 | 0 |

**ತ. ರಾ. ಸು. ರವರ**

| | | | |
|---|---|---|---|
| ರಕ್ತ ತರ್ಪಣ ...... ...... | 0 | 12 | 0 |
| ಪುರುಷಾವತಾರ ...... ...... | 1 | 0 | 0 |
| ಜ್ವಾಲಾ ...... ...... | 0 | 12 | 0 |

**ದೇವುಡುರವರ**

| | | |
|---|---|---|
| ಸಂಗ್ರಹ ರಾಮಾಯಣ | .... | .... 3 0 0 |
| ಮಹಾಬ್ರಾಹ್ಮಣ | .... | .... 3 0 0 |
| ಕಾಲಿದಾಸ | .... | .... 1 4 0 |

**ವಿ. ಎಮ್. ಇನಾಂದಾರರ**

| | | |
|---|---|---|
| ಎರಡು ಧ್ರುವ | .... | .... 2 12 0 |

**ದ. ಕೃ. ಭಾರದ್ವಾಜರ**

| | | |
|---|---|---|
| ಜನನ ನಿಯಂತ್ರಣ | .... | .... 2 4 0 |
| ಕಮಲಾಕಾಂತನ ಕಡತ | .... | .... 2 4 0 |
| ಜೀವನ ಚಿತ್ರ | .... | .... 1 0 0 |

**ದ. ರಾ. ಬೇಂದ್ರೆಯವರ**

| | | |
|---|---|---|
| ಹುಚ್ಚಾಟಗಳು | .... | .... 1 0 0 |

**ಟಿ. ಪಿ. ಕೈಲಾಸಂರವರ**

| | | |
|---|---|---|
| ಬಂಡ್ವಾಳ್ವಿಲ್ಲದ ಬಡಾಯಿ | .... | .... 0 12 0 |
| ತಾಳಿಕಟ್ಟೋಕ್ಕೂಲೀನೇ | .... | .... 1 0 0 |
| ನಮ್ ಬ್ರಾಹ್ಮಣ್ಕೆ | .... | .... 0 12 0 |
| ಟೊಳ್ಳು ಗಟ್ಟಿ | .... | .... 0 9 0 |
| ಹುತ್ತದಲ್ಲಿ ಹುತ್ತ | .... | .... 1 8 0 |
| ಪೋಲೀಕಿಟ್ಟಿ | .... | .... 1 4 0 |
| ಸೂಳೆ | .... | .... 1 4 0 |

ಮಾರಾಟದ ಪೂರ್ಣ ಹಕ್ಕುದಾರರು :

**ಸ್ಟ್ಯಾಂಡರ್ಡ್ ಬುಕ್ ಡಿಪೋ**

**ಅವೆನ್ಯೂರೋಡ್, ಬೆಂಗಳೂರು–2**